ಆಧುನಿಕ ಪೂರ್ವ ಕನ್ನಡ ಸಾಹಿತ್ಯದಲ್ಲಿ ಸತಿಪದ್ಧತಿ

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು
ಬಂಡಿ ವಿನೋದಾ ಮಾರುತಿ

ಮಾರ್ಗದರ್ಶಕರು
ಡಾ. ಎಸ್.ಆರ್.ಚನ್ನವೀರಪ್ಪ
ಪ್ರಾಧ್ಯಾಪಕರು
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

1062

8KO
VEN a

ಹಸ್ತಪ್ರತಿಶಾಸ್ತ್ರ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೨೦

ಪರಾಮರ್ಶೆಗೆ ಮಾತ್ರ

“ಸಿರಿಗನ್ನಡ” ಗ್ರಂಥಾಲಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬.

Shri Mahantesh
BOOK BINDING
Digital Colour Print
Laser Prints & Xerox
1st Fllor Stadiaum Compelex KCD Road DWD
Cell 9632011325

1062

[illegible] ಗ್ರಂಥಾಲಯ
[illegible] ವಿಶ್ವವಿದ್ಯಾಲಯ. [illegible]

[illegible] ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ. ಹಂಪಿ.

ಆಧುನಿಕ ಪೂರ್ವ
ಕನ್ನಡ ಸಾಹಿತ್ಯದಲ್ಲಿ ಸತಿಪದ್ಧತಿ

(ಪಿಎಚ್.ಡಿ.ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು
ಬಂಡಿ ವಿನೋದಾ ಮಾರುತಿ

ಮಾರ್ಗದರ್ಶಕರು
ಡಾ. ಎಸ್.ಆರ್.ಚನ್ನವೀರಪ್ಪ
ಪ್ರಾಧ್ಯಾಪಕರು
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಹಸ್ತಪ್ರತಿಶಾಸ್ತ್ರ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೨೦

ಕನ್ನಡ ವಿಶ್ವವಿದ್ಯಾಲಯ

141641

8KO
VEN 9

ಡಾ. ಎಸ್.ಆರ್.ಚನ್ನವೀರಪ್ಪ
ಪ್ರಾಧ್ಯಾಪಕರು
ಹಸ್ತಪ್ರತಿಶಾಸ್ತ್ರ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ದೃಢೀಕರಣ ಪತ್ರ

ಆಧುನಿಕ ಪೂರ್ವ ಕನ್ನಡ ಸಾಹಿತ್ಯದಲ್ಲಿ ಸತಿಪದ್ಧತಿ ಎಂಬ ಈ ಶೀರ್ಷಿಕೆಯ ಮಹಾಪ್ರಬಂಧವನ್ನು **ಬಂಡಿ ವಿನೋದಾ ಮಾರುತಿ** ಅವರು ನನ್ನ ಮಾರ್ಗದರ್ಶನದಲ್ಲಿ ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸಲಾಗಿದೆ.

ಮಾರ್ಗದರ್ಶಕರು

(ಡಾ. ಎಸ್.ಆರ್.ಚನ್ನವೀರಪ್ಪ)

ಸ್ಥಳ: ವಿದ್ಯಾರಣ್ಯ
ದಿನಾಂಕ: ೧೨/೨/೨೦೨೦

ಪ್ರಮಾಣ ಪತ್ರ

ಆಧುನಿಕ ಪೂರ್ವ ಕನ್ನಡ ಸಾಹಿತ್ಯದಲ್ಲಿ ಸತಿಪದ್ಧತಿ ಎಂಬ ಈ ಮಹಾಪ್ರಬಂಧ ವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ **ಡಾ. ಎಸ್.ಆರ್.ಚನ್ನವೀರಪ್ಪ** ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸ ಲಾಗಿದೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರೆ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ಪ್ರಮಾಣೀಕರಿ ಸುತ್ತೇನೆ.

ಸಂಶೋಧಕರು

ಬಿ.ವಿನೋದಾ

ಬಂಡಿ ವಿನೋದಾ ಮಾರುತಿ
ಸಂಶೋಧನ ವಿದ್ಯಾರ್ಥಿನಿ
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ: ವಿದ್ಯಾರಣ್ಯ
ದಿನಾಂಕ: ೧೭/೦೭/೨೦೦೦

ಪರಿವಿಡಿ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ಮಹತ್ವ, ಸ್ವರೂಪ ಮತ್ತು ವೈಧಾನಿಕತೆ

೧.೧. ಅಧ್ಯಯನದ ಉದ್ದೇಶ

೧.೨. ಅಧ್ಯಯನದ ವ್ಯಾಪ್ತಿ

೧.೩. ಅಧ್ಯಯನದ ಸ್ವರೂಪ

೧.೪. ಅಧ್ಯಯನದ ಮಹತ್ವ

೧.೫. ಅಧ್ಯಯನದ ವೈಧಾನಿಕತೆ

೧.೬. ಇದುವರೆಗಿನ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ ಮತ್ತು ವೈಧಾನಿಕತೆ

ಭಾರತವು ಶ್ರೀಮಂತ ಸಂಸ್ಕೃತಿಯ ಮೂಲಕ ವಿಶ್ವದಲ್ಲಿ ತನ್ನದೆಯಾದ ಮಹತ್ವವನ್ನು ಹೊಂದಿದೆ. ಇಲ್ಲಿ ಮಾನವ ಅತ್ಯಂತ ಅಚ್ಚುಕಟ್ಟು ಹಾಗೂ ಸುವ್ಯವಸ್ಥಿತ ರೀತಿಯಲ್ಲಿ ಜೀವಿಸಿದ್ದಾನೆ. ಅವನ ಪ್ರತಿಯೊಂದು ಅನುಭವಕ್ಕೂ ಒಂದು ಇತಿಹಾಸವಿರುವಂತೆ; ಆತನ ನಿರ್ಮಿತ ಸಾಹಿತ್ಯಕ್ಕೂ ಒಂದು ಇತಿಹಾಸವಿದೆ. ಸಮಕಾಲೀನ ಸಾಹಿತ್ಯವನ್ನು ಅರಿತರೆ ಮಾತ್ರ ಸಾಲದು. ಆ ಸಾಹಿತ್ಯಕ್ಕಿರುವ ಚರಿತ್ರೆಯನ್ನು ಅರಿಯಬೇಕು. ಇದನ್ನು ಅರಿಯಲು ಆಧಾರಗಳು ಅವಶ್ಯಕ. ಕೆಲವೊಮ್ಮೆ ಆಧಾರಗಳು ಸಿಗದೇ ಹೋಗಬಹುದು. ಇದರಿಂದ ಆ ಭಾಷೆಯ ಸಾಹಿತ್ಯ ಚರಿತ್ರೆಯನ್ನು ಕ್ರಮವಾಗಿ ನಿರೂಪಿಸಲು ಅಸಾಧ್ಯವಾಗುತ್ತದೆ. ಆದ್ದರಿಂದ ಸಾಹಿತ್ಯ ಚರಿತ್ರೆಗೆ ಮುಖ್ಯ ಆಧಾರವೆಂದರೆ, ಆ ಭಾಷೆಯಲ್ಲಿರುವ ಗ್ರಂಥ ಸಮುದಾಯ. ಹೀಗೆ ಒಂದು ಗ್ರಂಥ ಸಮುದಾಯದ ವ್ಯವಸ್ಥಿತ ಅಧ್ಯಯನವೇ ಸಾಹಿತ್ಯ ಚರಿತ್ರೆ.[೧]

ಸಾಹಿತ್ಯ ಚರಿತ್ರೆಯು ಒಂದು ಜನಾಂಗ, ಒಂದು ದೇಶದ ಜನತೆ, ಸಾಮಾಜಿಕ ಜೀವನ ಮೌಲ್ಯಗಳನ್ನು ತಿಳಿಸಿಕೊಡುತ್ತದೆ. ಅಂತಹ ಜೀವನ ಮೌಲ್ಯಗಳನ್ನು ಸಮಾಜದಲ್ಲಿರುವ ಜನರು ನಂಬಿಕೊಂಡು ಬಂದಿರುತ್ತಾರೆ. ಆ ಮೌಲ್ಯಗಳಿಗೆ ಕಾಲ, ದೇಶ, ಜನಾಂಗ ಬದ್ಧವಾಗಿರುತ್ತದೆ. ಕೆಲವು ಮೌಲ್ಯಗಳು ಸರ್ವಕಾಲಿಕ ಆದರ್ಶಗಳಾಗಿವೆ. ಉದಾಹರಣೆಗೆ ಸತ್ಯ ಮತ್ತು ಅಹಿಂಸೆ ಇವುಗಳನ್ನು ಸರ್ವ ಜನಾಂಗಗಳು ಒಪ್ಪಿಕೊಂಡಿವೆ. ಆದರೆ ಎಲ್ಲ ಮೌಲ್ಯಗಳು ಆದರ್ಶಗಳಲ್ಲ. ಮೌಲ್ಯಗಳು ಒಂದು ನಿರ್ದಿಷ್ಟ ಕಾಲಕ್ಕೆ, ನಿರ್ದಿಷ್ಟ ಪ್ರದೇಶಕ್ಕೆ, ನಿರ್ದಿಷ್ಟ ಜನಾಂಗಗಳಿಗೆ ಸೀಮಿತವಾಗಿರುತ್ತವೆ. ಅಂತಹ ಮೌಲ್ಯಗಳಲ್ಲಿ 'ಮಹಾಸತಿ' ಆಚರಣೆಯು ಒಂದಾಗಿತ್ತು. ಆದರೆ ಅದು ಇಂದು ಮೌಲ್ಯವಾಗಿಲ್ಲ. ಅದನ್ನು ಇಂದು ಯಾರಾದರೂ ಆಚರಿಸಿದರೆ ಅದು ಶಿಕ್ಷಾರ್ಹ ಅಪರಾಧವಾಗುತ್ತದೆ. ಹೀಗೆ ಮೌಲ್ಯಗಳು ಕಾಲಕಾಲಕ್ಕೆ ಬದಲಾಗುತ್ತಿರುತ್ತವೆ. ಆದರೆ ಆದರ್ಶಗಳು

ಮಾತ್ರ ಬದಲಾಗದೆ ಸರ್ವಕಾಲಿಕವಾಗಿರುತ್ತವೆ. ಡಾ.ಎಂ.ಎಂ.ಕಲಬುರ್ಗಿಯವರು "ಸರ್ವದೇಶ, ಸರ್ವಕಾಲ, ವ್ಯಾಪ್ತವಾದ ಆದರ್ಶಗಳು ಒಂದು ದೇಶ, ಒಂದು ಕಾಲ ಪರಿಮಿತವಾದ ಮೌಲ್ಯಗಳು ಆ ದೇಶ ಆ ಕಾಲದ ಮೌಲ್ಯಗಳೆನಿಸುವ ನಂಬಿಕೆಗಳು ಇಂಥ ಜನಾಂಗವನ್ನು ಮುನ್ನಡೆಸುವ ಸೂತ್ರಗಳಾಗಿರುತ್ತವೆ"[೨] ಎಂದು ಹೇಳಿದ್ದಾರೆ.

ಮಾನವ ಜನಾಂಗದಲ್ಲಿ ಗಂಡು ಹೆಣ್ಣಿನ ಸಂಬಂಧ ವಿಶಿಷ್ಟತೆಯನ್ನು ಪಡೆದು, ಹಲವು ಸಾಮಾಜಿಕ ನೀತಿ ನಿಯಮಗಳು, ವಿಧಿ–ವಿಧಾನಗಳು ವಿಶ್ವಾಸಕ್ಕೆ ಹೊಂದಿಕೊಂಡ ಆಚಾರ – ವಿಚಾರಗಳು, ಆಚರಣೆಗಳು ಹಾಗೂ ವಿವಿಧ ಸಂಪ್ರದಾಯ ಪದ್ಧತಿಗಳು ಹುಟ್ಟಿಕೊಂಡವು. ಇವು ಮಾನವ ಬದುಕನ್ನು ಋತುಮಾನಕ್ಕೆ ತಕ್ಕಂತೆ ಅನೇಕ ಕಟ್ಟಳೆಗಳಿಂದ ನಿಯಂತ್ರಿಸುತ್ತ ಬಂದವು. ತದನಂತರದ ಸಂದರ್ಭದಲ್ಲಿ ಪುರುಷ ಪ್ರಧಾನ ಸಮಾಜದ ಪರಿಕಲ್ಪನೆಯನ್ನು ಹೊಂದಿದ ಮಾನವ ಮಹಿಳೆಯ ಮೇಲೆ ಅನೇಕ ಕಟ್ಟಳೆ ಹಾಗೂ ಪುರುಷ ಸಮಾಜಕ್ಕೆ ಅನೂಕೂಲವಾಗುವ ರೀತಿಯಲ್ಲಿ ಮಹಿಳೆಯನ್ನು ರಕ್ಷಿಸುವ ನೆಪದೊಂದಿಗೆ ಬಂಧನದಲ್ಲಿಡುವಂತಹ ಮನೋಭಾವನೆಯನ್ನು ಹೊಂದಿದ. ಮುಂದೆ ತನ್ನ ವಿಕೃತ ಮನಸ್ಸಿನಿಂದ ಸ್ತ್ರೀ ಸಮುದಾಯವನ್ನು ಸಾಂಪ್ರದಾಯಿಕ ಚೌಕಟ್ಟಿನಲ್ಲಿ ಕಟ್ಟಿ ಹಾಕಿ ಸತಿಪದ್ಧತಿಯಂತಹ ಕ್ರೂರ ಪದ್ಧತಿಯನ್ನು ಹುಟ್ಟು ಹಾಕಿದ. ಈ ರೀತಿ ಹುಟ್ಟಿದಂತಹ ವಿಚಿತ್ರ ಹಾಗೂ ಅನಿಷ್ಟ ಪದ್ಧತಿಯೇ ಸತಿಪದ್ಧತಿಯಾಗಿದೆ.

'ಸತಿ' ಪದ ವಿಶಾಲಾರ್ಥದಲ್ಲಿ 'ಸ್ತ್ರೀ' ಎಂಬುವುದನ್ನು ಸೂಚಿಸುವುದಾಗಿದ್ದರೂ, ಸಾಂಸ್ಕೃತಿಕ ಪರಿಭಾಷೆಯಲ್ಲಿ ಸತಿಯ ಅರ್ಥವನ್ನು ಸಾಂಪ್ರದಾಯಿಕ ವಿಧಿ ವಿಧಾನಗಳ ಪ್ರಕಾರ 'ಗಂಡನ ಮರಣದ ತಕ್ಷಣ ನಿಧನ ಹೊಂದುವ ಪತ್ನಿಯನ್ನು ಸೂಚಿಸುವುದಾಗಿದೆ. ಇನ್ನೊಂದು ಅರ್ಥದಲ್ಲಿ 'ಸತ್ತ ಪತಿಯ ಜೊತೆ ವಿಧವಾ ಪತ್ನಿಯನ್ನು ಸ್ವಯಂ ಅಥವಾ ಬಲವಂತವಾಗಿ ಅಗ್ನಿಯಲ್ಲಿ ದಹಿಸುವುದು'[೩] ಎಂದಾಗಿದೆ.

'ಸತಿಪದ್ಧತಿ' ಮರಣವನ್ನು ಸಹಗಮನ ಮರಣ, ಅನುಗಮನ ಮರಣ, ಸಮಾಧಿ ಮರಣ, ಮಹಾಸತಿಯಾಗುವುದು, ಕೂಡಿ ಸಾಯುವುದು, ಕೂಡಿ ಹೋಗುವುದು, ಸಹಸಂಗತಿ ಮರಣ, ಸಹಾನುಭೂತಿ ಮರಣ, ಮಹಾಸತಿ ಮರಣ ಎಂದು ಬೇರೆ ಬೇರೆ ಹೆಸರುಗಳಲ್ಲಿ ಕರೆಯುವುದರೊಂದಿಗೆ ಆಚರಿಸುವ ಆಚರಣೆಯಲ್ಲಿಯೂ ವಿಭಿನ್ನತೆ ಇರುವುದನ್ನು ಐತಿಹಾಸಿಕ ಆಧಾರಗಳಿಂದ ತಿಳಿಯಬಹುದು.[೪] "ಒಂದು ದೇಶದ ನಿಜವಾದ ಇತಿಹಾಸವೆಂದರೆ, ಆ ಜನತೆಯ ಇತಿಹಾಸ, ಜನತೆ ಬದುಕಿದ ರೀತಿ, ಅನುಸರಿಸಿದ ಧರ್ಮ, ಕಟ್ಟಿದ ಕಲೆ, ಅವರ ಜೀವನ ಸಮಸ್ಯೆಗಳು, ಅವರ ಜೀವನ ಮೌಲ್ಯಗಳು ಇತ್ಯಾದಿಗಳ ವಿವರಣೆಯೇ ಆ ದೇಶದ ಇತಿಹಾಸ"[೫] ಈ ಹಿನ್ನೆಲೆಯಲ್ಲಿ ಸಾಮಾಜಿಕ ಜೀವನದಲ್ಲಿ ಮಹತ್ತರವಾದ ಹಾಗೂ ಆಯಾ

ಕಾಲಘಟ್ಟದ ಜ್ವಲಂತ ವಿಷಯವಾಗಿರುವ ಈ ಪದ್ಧತಿಯ ಆಚರಣೆಯನ್ನು ಸಮಾಜದಲ್ಲಿರುವ ಸಮುದಾಯಗಳು ಒಪ್ಪಿಕೊಂಡು ಅದು ಮೌಲ್ಯವಾಗಿ ಬೆಳೆದು ನಿಲ್ಲಲು ಸಹಕಾರಿಯಾದವು. ಯಾರೋ ಒಬ್ಬ ಮಹಾಸತಿ ಉದಾರ ಮನಸ್ಸಿನಿಂದ ತನ್ನ ಒಡೆಯನಿಗಾಗಿಯೋ, ಪ್ರೀತಿಯ ಸಮರ್ಪಣೆಗಾಗಿಯೋ, ತನ್ನ ಮನೆತನದ ಗೌರವಕ್ಕೋ, ಸಮಾಜದ ಹಿತಕ್ಕಾಗಿಯೋ, ತನ್ನನ್ನೇ ತಾನು ಅರ್ಪಿಸಿಕೊಂಡು ಪ್ರಾಣವನ್ನು ಕೊಟ್ಟಿರಬೇಕು. ಇದು ಇತರರ ಮೇಲೆ ಪ್ರಭಾವ ಬೀರಿ ಅವರು ಇದೇ ರೀತಿ ಆಚರಿಸುತ್ತ ಪ್ರಾಣ ಬಿಟ್ಟಿರಬೇಕು. ಆಗಲೇ 'ಮಹಾಸತಿ' ಆಚರಣೆಯು ಒಂದು ಮೌಲ್ಯವಾಗಿ ಗುರುತಿಸಿಕೊಂಡಿತು. ಇಂತಹ ಮೌಲ್ಯಗಳನ್ನು ಆಚರಿಸುತ್ತಿರುವವರ ಪರಮೋಚ್ಛ ಗುರಿ ಶ್ರೇಷ್ಠ ಸದ್ಗತಿಯ ಸಂಪಾದನೆ, ಮೋಕ್ಷ ಮತ್ತು ಸ್ವರ್ಗದ ಪರಿಕಲ್ಪನೆಯಾಗಿದ್ದಿತು. ಇದನ್ನೇ ಮುಂದಿಟ್ಟುಕೊಂಡು ನಮ್ಮ ಪೂರ್ವಜರು ಬಾಳಿದರು. ಈ ಮೌಲ್ಯಗಳಿಗಾಗಿಯೇ ಕೆಲವರು ತಮ್ಮ ಪ್ರಾಣ ತ್ಯಜಿಸಿದರು.[೬]

ಇಂತಹ ಮೌಲ್ಯಗಳಿಗಾಗಿ ಬದುಕುವವನು ಆ ಮೂಲಕ ತನ್ನ ಆತ್ಮವನ್ನು ಬಲಿಕೊಟ್ಟು ಕೊಳ್ಳುವವನು ಮೋಕ್ಷ ಪಡೆದುಕೊಳ್ಳುತ್ತಾನೆಂಬ ನಂಬಿಕೆಯೂ ಬೇರೂರಿ, ಇವುಗಳ ಆಚರಣೆಗೆ ಹೆಚ್ಚು ಒತ್ತು ಕೊಡಲಾಯಿತು. ಆಯಾ ಕಾಲದಲ್ಲಿ ಹುಟ್ಟಿಕೊಂಡ ಇಂತಹ ಮೌಲ್ಯಗಳು ಸಾಹಿತ್ಯದಲ್ಲಿ ಸೇರ್ಪಡೆಗೊಂಡವು. ಇವುಗಳನ್ನು ಹಿಡಿದು ಆಚರಿಸುವವರು ಕಾವ್ಯದ ಪಾತ್ರಗಳಾದರು, ಕಥಾನಾಯಕರಾದರು, ದೇವತೆಗಳಾದರು. ಇದಕ್ಕೆ ಪೂರಕವೆಂಬಂತೆ ಆತ್ಮ ಬಲಿಯಾದವರ ನೆನಪಿಗಾಗಿ ಮಾಸ್ತಿಕಲ್ಲುಗಳನ್ನು ನೆಡಿಸುವ ಸಂಪ್ರದಾಯವೂ ಬೆಳೆದು ಬಂದಿತು. ಅದರಲ್ಲಿ ಶಾಸನವನ್ನು ಬರೆಸಲಾಯಿತು. ಇದಕ್ಕೆ ಪ್ರಭುಸತ್ತೆ, ಪುರೋಹಿತ ಸತ್ತೆಗಳ ಬೆಂಬಲ ಸಿಕ್ಕಾಗ ಈ ಮೌಲ್ಯಗಳು ಸಮಾಜದಲ್ಲಿ ಹೆಚ್ಚು ಪ್ರಸಾರವಾಗುತ್ತ ಬಂದವು. ಈ ದೃಷ್ಟಿಯಿಂದಲೇ ಆಧುನಿಕ ಪೂರ್ವ ಕನ್ನಡ ಸಾಹಿತ್ಯದಲ್ಲಿ ಪ್ರಾಚೀನ ಸಾಮಾಜಿಕ ಜೀವನದ ಒಂದು ಮಹತ್ವದ ಭಾಗವಾಗಿರುವ ಮತ್ತು ಪ್ರಾಚೀನ ಮೌಲ್ಯವಾಗಿ ಗುರುತಿಸಿಕೊಂಡ ಸತಿಪದ್ಧತಿಯನ್ನು ಕುರಿತು ಇಲ್ಲಿ ಅಧ್ಯಯನ ಮಾಡಲಾಗಿದೆ.

೧.೧. ಅಧ್ಯಯನದ ಉದ್ದೇಶ

ಪ್ರಸ್ತುತ ಸಂಶೋಧನ ಪ್ರಬಂಧದಲ್ಲಿ ಅತ್ಯಂತ ಕ್ರೂರವೆನಿಸುವುದರ ಜೊತೆಗೆ ಸೋಜಿಗವೂ, ವೈಭವಪೂರ್ಣವೂ, ಪೂಜ್ಯನೀಯವೂ ಎನಿಸಿರುವ 'ಸತಿಪದ್ಧತಿ'ಯ ಕುರಿತು ಅಧ್ಯಯನ ಮಾಡಲಾಗಿದೆ. ಇದು ವಿಶ್ವದ ಹಲವೆಡೆಗಳಲ್ಲಿ ಕಂಡು ಬಂದು ಇನ್ನೂ ಅಪರೂಪವಾಗಿ ಕೆಲವೆಡೆ ಕಾಣಿಸಿಕೊಳ್ಳುತ್ತ ಮಾನವ ಜನಾಂಗವನ್ನು ಬೆರಗುಗೊಳಿಸುತ್ತಲೇ ಇದೆ. ಇದು ಯಾವಾಗ?

ಎಲ್ಲಿ? ಹೇಗೆ? ರೂಪಗೊಂಡಿತೆಂದು ನಿಖರವಾಗಿ ಹೇಳಲಾಗದಿದ್ದರೂ, ಅದು ನಡೆದು ಬಂದ ದಾರಿಯನ್ನು ಅದರ ಆಚರಣೆಯ ಸ್ವರೂಪವನ್ನು ಸಮಗ್ರವಾಗಿ ಅಧ್ಯಯನ ಮಾಡುವ ಉದ್ದೇಶ ಹೊಂದಲಾಗಿದೆ.

ಸ್ತ್ರೀ ಸಮುದಾಯದ ಮೇಲೆ ಇಂತಹ ಕ್ರೂರ ಆಚರಣೆ ಸ್ಥಾಪಿತಗೊಂಡಿರುವುದರ ಮುಖ್ಯ ಉದ್ದೇಶವೇನು? ಉದ್ದೇಶಗಳ ಪೂರೈಕೆಗಾಗಿ ಯಾವ ರೀತಿಯ ಸಾಂಪ್ರದಾಯಿಕ ಚೌಕಟ್ಟನ್ನು ರೂಪಿಸಲಾಗಿದೆ. ಈ ಪದ್ಧತಿಯ ಆಚರಣೆಯ ಸಂದರ್ಭದಲ್ಲಿ ಸ್ತ್ರೀಯರಿಗೆ ನೀಡುತ್ತಿರುವ ಹಿಂಸೆ ಯಾವ ಸ್ವರೂಪದ್ದಾಗಿದೆ. ಯಾವ ರೀತಿಯ ಕೃತ್ಯಗಳು ಜರುಗಿವೆ. ಅವುಗಳ ಭೀಕರತೆ ಹೇಗಿತ್ತು ಎಂಬುವುದನ್ನು ತಿಳಿದುಕೊಳ್ಳುವುದು ಅಧ್ಯಯನದ ಪ್ರಮುಖ ಉದ್ದೇಶವಾಗಿದೆ.

ಸಾಮಾಜಿಕವಾಗಿ, ಧಾರ್ಮಿಕವಾಗಿ ಹಿಂದೂಗಳು, ಜೈನರು, ವೀರಶೈವರು ಸಹಗಮನ, ಅನುಗಮನ, ಸಮಾಧಿ ಮರಣದಂತಹ ವಿಭಿನ್ನ ಆಚಾರ ವಿಚಾರಗಳಿಂದ ಸತಿಪದ್ಧತಿಯ ಆಚರಣೆಯ ಸಂಸ್ಕೃತಿಯನ್ನು ನಿರ್ಮಾಣ ಮಾಡಿಕೊಂಡಿದ್ದಾರೆ. ಇಂತಹ ಸಂಸ್ಕೃತಿಯ ಹಿಂದಿರುವ ನಂಬಿಕೆ, ತಿಳುವಳಿಕೆ ಏನು? ಎಂಬುವುದನ್ನು ತಿಳಿಯಲು ಉದ್ದೇಶಿಸಲಾಗಿದೆ.

ಪ್ರಾಚೀನ ಹಲವು ಜನಾಂಗಗಳಲ್ಲಿ ಪ್ರಚಲಿತದಲ್ಲಿರುವ ಈ ಪದ್ಧತಿ ಅತ್ಯಂತ ಕುತೂಹಲಕರವೆನಿಸಿದ್ದು, ರೋಮಾಂಚಕ ಹಾಗೂ ವಿಸ್ಮಯದ ವಿಷಯವಾಗಿದೆ. ಇಂತಹ ಆತ್ಮಬಲಿದಾನ ಪರಂಪರೆಯ ಕುರಿತು ಪ್ರಾಚೀನ ಮಧ್ಯಕಾಲೀನ ಕವಿಗಳು, ಲೇಖಕರು, ಜನಪದರು, ವಿದೇಶಿ ಪ್ರವಾಸಿಗರು ಸತಿಪದ್ಧತಿಯ ಕುರಿತು ದಾಖಲಿಸಿರುವ ವಿವರಗಳು ಹಾಗೂ ಅವುಗಳ ಕುರಿತು ಹೊಂದಿರುವ ನಿಲುವುಗಳೇನು? ಎಂಬುವುದನ್ನು ಅಧ್ಯಯನ ಮಾಡುವ ಉದ್ದೇಶ ಹೊಂದಲಾಗಿದೆ.

'ಹತ್ಯೆ' ಎಂಬ ವಿಕೃತ ಕೃತ್ಯಕ್ಕೆ ಧಾರ್ಮಿಕ ಹಾಗೂ ಸಾಮಾಜಿಕ ಮಾನ್ಯತೆ ನೀಡಿ ಈ ಪದ್ಧತಿಯನ್ನು ಆಚರಣೆ ಮಾಡುತ್ತ ಬಂದಿರುವುದರ ಆಳ ಹಾಗೂ ವಿಸ್ತಾರವನ್ನು ಪ್ರಾಚೀನ ಕನ್ನಡ ಕಾವ್ಯಗಳು, ಮಧ್ಯಕಾಲೀನ ಸಾಹಿತ್ಯ ಕೃತಿಗಳು, ವಿದೇಶಿ ಪ್ರವಾಸಿಗರ ವರದಿಗಳು, ಲಿಖಿತ ಹಾಗೂ ಮೌಖಿಕ ಸಾಹಿತ್ಯದಲ್ಲಿರುವ ಜನಪದ ಗೀತೆಗಳು, ಕಥೆಗಳು, ಕಥನಕಾವ್ಯಗಳಲ್ಲಿ ಉಲ್ಲೇಖವಾಗಿರುವ ಅನೇಕ ಸತ್ಯಾಸತ್ಯತೆಗಳನ್ನು ಶೋಧಿಸಿ ಸಮಾಜದ ಸಮ್ಮುಖದಲ್ಲಿಡುವಂತಹ ಉದ್ದೇಶ ಪ್ರಸ್ತುತ ಅಧ್ಯಯನದ್ದಾಗಿದೆ.

ಸತಿ ವಿಷಯವನ್ನು ತಿಳಿಸುವ ಮಾಸ್ತಿಕಲ್ಲುಗಳ ಜೊತೆಗೆ ಸಂಬಂಧಿಸಿದ ಕಥೆಗಳು, ಗೀತೆಗಳು, ಗಾದೆಮಾತು, ಜಾತ್ರೆ ಉತ್ಸವಗಳ ಕುರಿತು ಅಭ್ಯಸಿಸಿದಾಗ ಪ್ರಸ್ತುತ ಸಂದರ್ಭದಲ್ಲಿ ಸತಿಯರು ಕೊಂಡಕ್ಕೆ ಬೀಳುವ ಪ್ರಸಂಗಗಳನ್ನು ಆಡಿ ತೋರಿಸುತ್ತಾರೆ. ಅಂಥ ಪ್ರಸಂಗಗಳು

ಸತಿಪದ್ಧತಿಯ ವಿಷಯಕ್ಕೆ ನೆರವಾಗುವುದರಿಂದ ಅವುಗಳ ಪ್ರತ್ಯಕ್ಷ ಅಧ್ಯಯನಕ್ಕೆ ಸಹಕಾರಿಯಾಗಿದೆ. ಹೀಗೆ ಆಡಿ ತೋರಿಸುವ ಪ್ರಸಂಗಗಳು ಜನಪದ ಜೀವನದಲ್ಲಿ ಇನ್ನು ಮುಂದಿನ ಕೆಲವು ದಿನಗಳಲ್ಲಿ ಮಾಯಾವಾಗುವ ಸೂಚನೆಗಳು ಈಗಾಗಲೇ ಕಂಡುಕೊಳ್ಳುತ್ತಿವೆ. ಈ ದೃಷ್ಟಿಯಿಂದ ಮಹಾಸತಿ ಗುಡಿಗಳನ್ನು ಸುತ್ತಿ ಅಲ್ಲಿ ಇಂದಿಗೂ ಆಚರಿಸುತ್ತಿರುವ ಆಚರಣೆಗಳನ್ನು ವ್ಯವಸ್ಥಿತವಾಗಿ ಅಧ್ಯಯನ ಮಾಡಿ ದಾಖಲಿಸುವ ಮತ್ತೊಂದು ಪ್ರಮುಖ ಉದ್ದೇಶ ಪ್ರಸ್ತುತ ಅಧ್ಯಯನದ್ದಾಗಿದೆ.

ಜನಾಂಗವೊಂದರಲ್ಲಿ ಕಾರಣಾಂತರಗಳಿಂದ ಹುಟ್ಟಿಕೊಂಡು ದೀರ್ಘ ಬದುಕನ್ನು ಮಾಡಿ ಮರೆಯಾದ ಸತಿಪದ್ಧತಿಯಂತಹ ಕ್ರೂರ ಅಚರಣೆಯನ್ನು ತಡೆಯಲು ರೂಪುಗೊಂಡ ಕಾನೂನು ಗಳು ಸಾಮಾಜಿಕ ಸಂದರ್ಭದಲ್ಲಿ ಹೇಗೆ ಕಾರ್ಯನಿರ್ವಹಿಸಿವೆ. ಈ ಪದ್ಧತಿಯ ವಿರುದ್ಧ ನಡೆದ ಸಾಮಾಜಿಕ ಹೋರಾಟಗಳು ಹಾಗೂ ಇದರ ನಿಷೇಧಕ್ಕೆ ಜಾರಿಯಾದ ಕಾನೂನು ಕ್ರಮಗಳು ಏನು? ಎಂಬುವುದನ್ನು ಅಧ್ಯಯನ ಮಾಡುವ ಉದ್ದೇಶ ಹೊಂದಲಾಗಿದೆ.

ಹಿಂದೆ ಈ ರೀತಿಯ ಆತ್ಮ ಬಲಿದಾನಗಳು ಅಭಿಮಾನ, ಸತ್ಯ, ಧರ್ಮ, ತ್ಯಾಗದಂತಹ ಗುಣಗಳ ಕಾರಣದಿಂದ ನಡೆದುಕೊಂಡು ಬಂದಿವೆ. ಆದರೆ ಈ ಮೌಲ್ಯಗಳನ್ನೇ ಅನುಸರಿಸಿರುವ ಸತಿಪದ್ಧತಿಯನ್ನು ಆಧುನಿಕ ಸಂದರ್ಭದಲ್ಲಿ ಪರಿಷ್ಕೃತಗೊಳಿಸಿ, ಕಾನೂನಿನ ಮೂಲಕ ನಿರ್ಬಂಧಿ ಸಲ್ಪಟ್ಟಿದೆ. ಆದ್ದರಿಂದ ಆಧುನಿಕ ಜನತೆ ಇಂದು ಮೌಢ್ಯತೆಯಿಂದ ಕೂಡಿದ ಆತ್ಮಬಲಿದಾನಗಳನ್ನು ಅನುಸರಿಸುತ್ತಿಲ್ಲವಾದರೂ, ಅಲ್ಲೊಂದು ಇಲ್ಲೊಂದು ಆಚರಣೆಗಳು ಧರ್ಮ, ಪಾತಿವ್ರತ್ಯ, ಸಾಮಾಜಿಕ ಆದರ್ಶ, ಸಾಂಪ್ರದಾಯಿಕ ನಂಬಿಕೆಯಂತವುಗಳ ಪ್ರೇರಣೆ ಪಡೆದು ಜರಗುತ್ತವೆ. ಅಂತಹ ಘಟನೆಗಳು ನಡೆದರೆ ಅವುಗಳನ್ನು ತಡೆಯುವುದು ನಾಗರಿಕ ಪ್ರಜಾಪ್ರಭುತ್ವ ಸಮಾಜದ ಜವಾಬ್ದಾರಿಯಾಗಿರುತ್ತದೆ ಈ ಹಿನ್ನೆಲೆಯಲ್ಲಿ ವಿಷಯದ ಕುರಿತು ವಿಶ್ಲೇಷಿಸುವುದು ಈ ಅಧ್ಯಯನದ ಮಹತ್ವದ ಉದ್ದೇಶವಾಗಿದೆ.

೧.೨. ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಅಧ್ಯಯನದ ದೃಷ್ಟಿಯಿಂದ ಭಾರತೀಯ ನೆಲೆಗಟ್ಟಿನ ಸಂದರ್ಭಕ್ಕೆ ಮಾತ್ರ ಸೀಮಿತಗೊಳಿಸಿ ಅಧ್ಯಯನ ನಡೆಸಲಾಗಿದೆ. ಸಂಶೋಧನೆಯಿಂದ ಬಂದ ಫಲಿತಾಂಶವನ್ನು ಇಡೀ ಸ್ತ್ರೀ ಸಮುದಾಯಕ್ಕೆ ಅನ್ವಯಿಸಿಕೊಂಡು ಪ್ರಸ್ತುತ ಅಧ್ಯಯನವನ್ನು ಚರ್ಚೆಗೆ ಒಳಪಡಿಸಲಾಗಿದೆ.

ಪ್ರಸ್ತುತ ಅಧ್ಯಯನದ ವ್ಯಾಪ್ತಿಯನ್ನು ಮುಖ್ಯವಾಗಿ ಪ್ರಾಚೀನ ಕನ್ನಡ ಕಾವ್ಯಗಳು, ಮಧ್ಯಕಾಲೀನ ಸಾಹಿತ್ಯ, ದಾಖಲು ಸಾಹಿತ್ಯ, ಮೌಖಿಕ ಸಾಹಿತ್ಯವನ್ನು ಆಧರಿಸಿ ಅಧ್ಯಯನ ನಡೆಸಲಾಗಿದೆ. ಪೂರಕವಾಗಿ ಪ್ರವಾಸಿ ವರದಿಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ದಾಖಲು ಸಾಹಿತ್ಯದಲ್ಲಿ

ಪ್ರಮುಖವಾಗಿ ಶಾಸನಗಳು, ಸ್ಮಾರಕಗಳು, ಕೈಫಿಯತ್ತುಗಳು ವಿದೇಶಿ ಪ್ರವಾಸಿಗರ ವರದಿಗಳನ್ನು ಆಕರಗಳನ್ನಾಗಿ ಬಳಸಿಕೊಳ್ಳಲಾಗಿದೆ.

ಸಾಹಿತ್ಯ ಕೃತಿಗಳಲ್ಲಿ ಪ್ರಾಚೀನ ಕಾವ್ಯಗಳು, ಮಧ್ಯಕಾಲೀನ ಸಾಹಿತ್ಯ ಕೃತಿಗಳು, ಜನಪದ ಗೀತೆಗಳು, ಕಥೆಗಳು ಹಾಗೂ ಕಥನ ಕಾವ್ಯಗಳನ್ನು ಆಕರಗಳನ್ನಾಗಿ ಬಳಸಿಕೊಳ್ಳಲಾಗಿದೆ. ಕಾರಣ ಆಧುನಿಕ ಕಾಲಕ್ಕೆ ಈ ಪ್ರಕ್ರಿಯೆ ಇರದಿದ್ದರೂ ವಸಾಹತು ಕಾಲಘಟ್ಟದಲ್ಲಿ ಸತಿ ನಿಷೇಧ ಕಾನೂನು ಬಂದಿದ್ದರಿಂದ ಇದರ ಹಿನ್ನಲೆಯಲ್ಲಿ ನಡೆದ ಚಳುವಳಿ ಕಾನೂನು ಹೋರಾಟಗಳನ್ನು ಅಧ್ಯಯನದ ವ್ಯಾಪ್ತಿಯಲ್ಲಿ ತರಲಾಗಿದೆ. ಒಟ್ಟಾರೆ ಸತಿ ಕುರಿತ ಮಾಹಿತಿಯನ್ನು ಈ ಅಧ್ಯಯನದ ವ್ಯಾಪ್ತಿಯಲ್ಲಿ ತರಲಾಗಿದೆ.

೧.೩. ಅಧ್ಯಯನದ ಸ್ವರೂಪ

ಪ್ರಸ್ತುತ ಸಂಶೋಧನ ವಿಷಯದ ಅಧ್ಯಯನಕ್ಕೆ ಸಂಬಂಧಿಸಿದಂತೆ ಸಾಹಿತ್ಯ ಆಕರಗಳನ್ನು ಪ್ರಧಾನವಾಗಿ ಬಳಸಿ ಸಂಶೋಧನೆಯನ್ನು ಕೈಗೊಳ್ಳಲಾಗಿದೆ. ಇಲ್ಲಿ ಮುಖ್ಯವಾಗಿ ಆಯಾ ಕಾಲಘಟ್ಟದಲ್ಲಿ ರಚನೆಯಾದ ಸಾಹಿತ್ಯದ ಹಿನ್ನೆಲೆಯಲ್ಲಿ ಉಲ್ಲೇಖಗೊಂಡ ಸತಿಪದ್ಧತಿ ಆಚರಣೆಗಳ ಕುರಿತು ಚಿಂತನೆ ಮಾಡಲಾಗಿದೆ. 'ಆಧುನಿಕ ಪೂರ್ವ ಕನ್ನಡ ಸಾಹಿತ್ಯದಲ್ಲಿ ಸತಿಪದ್ಧತಿ' ಎಂಬ ಸಂಶೋಧನ ಅಧ್ಯಯನಕ್ಕೆ ಸಂಬಂಧಿಸಿದಂತೆ ಸಂಶೋಧನ ಅಧ್ಯಯನವು ಒಟ್ಟು ಏಳು ಅಧ್ಯಾಯಗಳಲ್ಲಿ ತನ್ನ ಹರವನ್ನು ಪಡೆದುಕೊಳ್ಳುತ್ತದೆ. ಮೊದಲನೆಯ ಅಧ್ಯಾಯವು ಅಧ್ಯಯನದ ಉದ್ದೇಶ ಸ್ವರೂಪ, ವ್ಯಾಪ್ತಿ, ಮಹತ್ವ, ವೈಧಾನಿಕತೆ ಮತ್ತು ಅಧ್ಯಯನದ ಸಮೀಕ್ಷೆಯನ್ನು ಒಳಗೊಳ್ಳುತ್ತದೆ.

ಎರಡನೆಯ ಅಧ್ಯಾಯದಲ್ಲಿ ಆಧುನಿಕ ಪೂರ್ವ ಕನ್ನಡ ಸಾಹಿತ್ಯದಲ್ಲಿ ಸತಿ ಘಟನೆಗಳ ವಿಧಿ ವಿಧಾನಗಳನ್ನು ಸಂಗ್ರಹಿಸಿ ವಿವೇಚಿಸಲಾಗಿದೆ. ಸತಿಪದ್ಧತಿಯ ಅರ್ಥ, ವ್ಯಾಖ್ಯಾನಗಳು ಸತಿಪದ್ಧತಿಗೆ ಸಂಬಂಧಿಸಿದ ಜನಾಂಗೀಯ ಹಾಗೂ ಪ್ರಾಪಂಚಿಕ ಕಾರಣಗಳೊಂದಿಗೆ ವೈಯಕ್ತಿಕ, ಸಾಮಾಜಿಕ, ಪರಲೋಕ ಕಲ್ಪನೆ, ಪುನರ್ಜನ್ಮಕಲ್ಪನೆಯಂತಹ ಕಾರಣಗಳನ್ನು ವಿವರಿಸಲಾಗಿದೆ. ತದನಂತರ ಸತಿ ಘಟನೆಯು ಜರುಗುತ್ತಿದ್ದ ಸಮಯದಲ್ಲಿ ಸತಿ ಹೋಗುವವಳು ಹಾಗೂ ಅವಳ ಬಂಧು ವರ್ಗದವರು ಸಹಗಮನದ ಸಂದರ್ಭದಲ್ಲಿ ಆಚರಿಸುವ ಆಚರಣೆಗಳು, ಸತಿ ಸಹಗಮನಗೊಂಡ ನಂತರ ಆಚರಿಸುವ ಆಚರಣೆಗಳನ್ನು ಕುರಿತು ವಿವರಿಸಲಾಗಿದೆ. ಜೊತೆಗೆ ಕ್ರಿ.ಶ.ಪೂರ್ವದಿಂದ ಇಂದಿನ ಆಧುನಿಕ ಸಾಮಾಜಿಕ ಸಂದರ್ಭದಲ್ಲೂ ಸತಿ ಹೋದವಳ ಕುರುಹುಗಳಿಗಾಗಿ ಗುಡಿಯನ್ನು ಅಭಿವೃದ್ಧಿಗೊಳಿಸುವ, ಜಾತ್ರೆ ಉತ್ಸವಗಳನ್ನು ನಡೆಸುವ ಮಹತ್ವವನ್ನು ತಿಳಿಯುವುದರೊಂದಿಗೆ ಚಾರಿತ್ರಿಕ ವಿಶ್ಲೇಷಣೆಯಲ್ಲಿ ಈ ಪದ್ಧತಿಯ ಕುರಿತು ವಿವರಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಪ್ರಾಚೀನ ಕನ್ನಡ ಕಾವ್ಯಗಳಾದ ವಿಕ್ರಮಾರ್ಜುನ ವಿಜಯ, ಕರ್ನಾಟಕ ಕಾದಂಬರಿ, ಅಜಿತನಾಥ ಪುರಾಣ, ಅನಂತನಾಥ ಪುರಾಣ, ಕರ್ನಾಟಕ ಭಾರತ ಕಥಾ ಮಂಜರಿಯಂತಹ ಕಾವ್ಯಗಳಲ್ಲಿರುವ ಸತಿ ಸಂಗತಿಗಳು ಹಾಗೂ ಮಧ್ಯಕಾಲೀನ ಸಾಹಿತ್ಯದಲ್ಲಿನ ವಚನ, ರಗಳೆ, ಷಟ್ಪದಿ, ಸಾಂಗತ್ಯ ಮೊದಲಾದ ಸಾಹಿತ್ಯ ಅಂಶಗಳಲ್ಲಿ ಉಲ್ಲೇಖಗೊಂಡ ಸತಿ ಪದ್ಧತಿಯ ಸಂಗತಿಗಳನ್ನು ವಿವರಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ದಾಖಲು ಸಾಹಿತ್ಯದ ದೃಷ್ಟಿಯಿಂದ ಸತಿ ಸಂಗತಿಗಳ ಕುರಿತು ನಿರ್ವಚಿಸಲಾಗಿದೆ. ದಾಖಲು ಸಾಹಿತ್ಯದಲ್ಲಿ ಈ ಪದ್ಧತಿಯ ಕುರಿತು ಉಲ್ಲೇಖಗೊಂಡ ಮಾಹಿತಿಗಳನ್ನು ಕುರುಹುಗಳನ್ನು ಶಾಸನಗಳು, ಸ್ಮಾರಕಗಳು, ವಿದೇಶಿ ಪ್ರವಾಸಿಗರ ವರದಿಗಳು ಹಾಗೂ ಕೈಫಿಯತ್ತುಗಳಂತಹ ಪೂರಕ ಆಕರಗಳ ಮೂಲಕ ಗುರುತಿಸಿ ವಿವರಿಸುವ ಪ್ರಯತ್ನ ಮಾಡಲಾಗಿದೆ.

ಐದನೆಯ ಅಧ್ಯಾಯದಲ್ಲಿ ಜನಪದ ಸಾಹಿತ್ಯದ ಆಕರಗಳ ಸ್ವರೂಪ ವಿಷಯ ವೈವಿಧ್ಯಕ್ಕೆ ಅವು ನೆರವಾಗುವ ಬಗೆ ಅವುಗಳ ಪ್ರಾಮುಖ್ಯತೆ ಇತಿ–ಮಿತಿಗಳ ಜೊತೆಗೆ ಜನಪದ ಗೀತೆಗಳ ಹಾಗೂ ಜನಪದ ಕಥೆಗಳ ಮೂಲಕ ಮುಗ್ಧ ಜನತೆ ಹೇಗೆ ವ್ಯವಸ್ಥೆಯ ಒತ್ತಾಸೆಗಳಿಗೆ ಒಳಗಾಗಿ ತಮ್ಮ ಪ್ರಾಣಗಳನ್ನು ಅರ್ಪಣೆಮಾಡಿಕೊಂಡಿದ್ದಾರೆ ಎಂಬುವುದನ್ನು ಕುರಿತು ಜನಪದ ಸಾಹಿತ್ಯದ ಮೂಲಕ ಪ್ರೇರಣೆ ಪಡೆದು ಇಂದಿಗೂ ತನ್ನ ಅಂತಸತ್ವವನ್ನು ಚಾರಿತ್ರಿಕ ಹಿನ್ನೆಲೆಯಲ್ಲಿ ಗುರುತಿಸಿಕೊಂಡಿರುವುದನ್ನು ವಿವರಿಸುವ ಪ್ರಯತ್ನ ಮಾಡಲಾಗಿದೆ.

ಆರನೆಯ ಅಧ್ಯಾಯವು ಮಾನವ ಇತಿಹಾಸದಲ್ಲಿ ಅತ್ಯಂತ ಕ್ರೂರವೆನಿಸುವುದರ ಜೊತೆಗೆ ಸೋಜಿಗವೂ ವೈಭವಪೂರ್ಣವೂ, ಪೂಜ್ಯನೀಯವೂ ಆದ ಸತಿಪದ್ಧತಿಯ ಪ್ರಸ್ತುತ ಸಾಮಾಜಿಕ ಸಂದರ್ಭ ಅದರ ವಿರುದ್ಧ ನಡೆದ ಸಾಮಾಜಿಕ ಹೋರಾಟಗಳು ಹಾಗೂ ಸತಿಪದ್ಧತಿ ನಿಷೇಧ ಮತ್ತು ಕಾನೂನು ಪ್ರಕ್ರಿಯೆಗಳನ್ನು ಕುರಿತು ಇಲ್ಲಿ ನಿರೂಪಿಸಲಾಗಿದೆ.

ಕೊನೆಯ ಅಧ್ಯಾಯದಲ್ಲಿ ಸಮಾರೋಪದೊಂದಿಗೆ ಸಂಶೋಧನೆಯ ಫಲಿತಗಳನ್ನು ಹಾಗೂ ಸಂಶೋಧನೆಯ ಹೊಸ ಸಾಧ್ಯತೆಗಳನ್ನು ಕುರಿತು ಚಿಂತನೆ ಮಾಡಲಾಗಿದೆ. ಒಟ್ಟಾರೆ ಸತಿಪದ್ಧತಿಯ ಕುರಿತು ವಿಭಿನ್ನ ದೃಷ್ಟಿಕೋನದ ಹಿನ್ನೆಲೆಯಲ್ಲಿ ಅಧ್ಯಯನಗಳು ನಡೆದಿದ್ದರೂ ಸಾಹಿತ್ಯದ ದೃಷ್ಟಿಕೋನದಿಂದ ಇದುವರೆಗೂ ಸಂಶೋಧನ ಅಧ್ಯಯನ ನಡೆದಿಲ್ಲ. ಈ ಒಂದು ಕೊರತೆಯನ್ನು ಮನಗಂಡು ಈ ವರೆಗಿನ ಅಧ್ಯಯನಗಳನ್ನು ಗಮನದಲ್ಲಿಟ್ಟುಕೊಂಡು ಅದರಲ್ಲೂ ವಿಶೇಷವಾಗಿ ಸಾಹಿತ್ಯಿಕ ಅಂಶಗಳಿಗೆ ಹೆಚ್ಚು ಒತ್ತುಕೊಟ್ಟು ಈ ನನ್ನ ಸಂಶೋಧನಾ ಅಧ್ಯಯನವನ್ನು ಕೈಗೆತ್ತಿಕೊಳ್ಳಲಾಗಿದೆ.

೧.೪. ಅಧ್ಯಯನದ ಮಹತ್ವ

ಆಧುನಿಕ ಕಾಲದಲ್ಲಿ ನಿಂತು ಆಧುನಿಕ ಪೂರ್ವ ಕನ್ನಡ ಸಾಹಿತ್ಯದಲ್ಲಿಯ ಆದರ್ಶ ಸ್ತ್ರೀ ಸಾವಿನ ಪರಿಕಲ್ಪನೆಗಳನ್ನು ಸಾಹಿತ್ಯಿಕ ಅಂಶಗಳಲ್ಲಿ ಅಧ್ಯಯನ ಮಾಡಲು ಅವಕಾಶವಿರುವುದರಿಂದ ಈ ಮೌಲ್ಯ ಆದರ್ಶ ಮರಣ ಪರಿಕಲ್ಪನೆಗಳು ಆಧುನಿಕ ಸಂದರ್ಭದಲ್ಲಿ ಹೇಗೆ ಪ್ರಸ್ತುತ ಮಾಡಿ ಸಂಶೋಧನೆಯನ್ನು ಕೈಗೊಳ್ಳಲು ಸಾಧ್ಯವಾಗುತ್ತದೆ. ಎಂಬ ರೀತಿಯಲ್ಲಿ ಪ್ರಶ್ನೆಗಳು ಏಳುತ್ತವೆ. ಇಂತಹ ಪ್ರಶ್ನೆಗಳನ್ನು ಗಮನದಲ್ಲಿಟ್ಟುಕೊಂಡು ಸಂಶೋಧನೆ ಮಾಡಲಾಗಿದೆ. ಕಾರಣ ಒಂದು ಕಾಲದಲ್ಲಿಯ ಮೌಲ್ಯಗಳು ಇನ್ನೊಂದು ಕಾಲಕ್ಕೆ ಪರಿಷ್ಕೃತಗೊಂಡಿರುತ್ತವೆ. ಅಲ್ಲದೇ ಒಂದು ಕಾಲದ ಮೌಲ್ಯಗಳು ಇನ್ನೊಂದು ಕಾಲಕ್ಕೆ ಅಪಮೌಲ್ಯಗಳಾಗಿರುತ್ತವೆ. ಈ ಕಾರಣಕ್ಕೆ ಮೌಲ್ಯಗಳು ಶಾಶ್ವತಗಳಲ್ಲ. ಇಂತಹ ಹಲವಾರು ವಿಷಯಗಳನ್ನು ಪ್ರಶ್ನೆಗಳನ್ನು ಕೇಂದ್ರವಾಗಿಟ್ಟುಕೊಂಡು ಜಾಗರೂಕತೆಯಿಂದ ಸಂಶೋಧನೆ ಮಾಡಲಾಗಿದೆ.

ಪ್ರಾಚೀನ ಮತ್ತು ಮಧ್ಯಕಾಲೀನ ಸಂದರ್ಭದಲ್ಲಿ ಧಾರ್ಮಿಕ, ಸಾಮಾಜಿಕ, ರಾಜಕೀಯ ಕಾರಣಗಳಿಂದಾಗಿ ಪತಿ ಪತ್ನಿಯರ ಆದರ್ಶದ ಮರಣಗಳು ನಡೆಯುತ್ತಿದ್ದವು. ಇವು ಸ್ವಾಭಿಮಾನ, ಅಭಿಮಾನ, ಪಾತಿವ್ರತ್ಯ, ಸದ್ಗತಿಯಂತಹ ಪರಿಕಲ್ಪನೆಯಲ್ಲಿ ಸಹ ಮರಣವಾಗಿ ಸಹಗಮನವಾಗಿ ಸಾಕಷ್ಟು ಮರಣಗಳು ಸಂಭವಿಸಿದವು. ಆದರೆ ಇಂದು ಭಾರತ ಸರ್ಕಾರ ಸಂವಿಧಾನದ ಕಾನೂನಿನ ಮೂಲಕ ಸತಿಪದ್ಧತಿಯಂತಹ ಮರಣ ಆಚರಣೆಗಳನ್ನು ನಿಷೇದ ಮಾಡಿದೆ. ಆದರೂ ಇಪ್ಪತ್ತನೆಯ ಶತಮಾನದಲ್ಲಿಯೂ ಇಂತಹ ನಂಬಿಕೆಯಲ್ಲಿ ಜನರು ಆಸಕ್ತಿವಹಿಸಿ ಮರಣ ಪಡೆಯುತ್ತಿರುವುದು ವಿಪರ್ಯಾಸದ ಸಂಗತಿ.

ಉತ್ತರ ಪ್ರದೇಶ, ರಾಜಸ್ಥಾನ, ಬಿಹಾರ, ಮಧ್ಯಪ್ರದೇಶ, ಕರ್ಣಾಟಕ ಮೊದಲಾದ ರಾಜ್ಯಗಳಲ್ಲಿ ಇಂದಿಗೂ ಕೆಲವು ಘಟನೆಗಳು ಈ ಪದ್ಧತಿಯ ಆಚರಣೆಗಳನ್ನು ಪರಿಪಾಲಿಸು ತ್ತಿರುವುದನ್ನು ಈ ಕೆಳಗಿನ ಪ್ರಕರಣಗಳ ಮೂಲಕ ಚರ್ಚೆ ಮಾಡಬಹುದು. "ರಾಜಸ್ಥಾನಕ್ಕೆ ಸೇರಿದ ಸೀಕರ್ ಜಿಲ್ಲೆಯ ದಿಯೋರಲಾಹಳ್ಳಿಯ ರಜಪೂತ ಮನೆತನಕ್ಕೆ ಸೇರಿದ ಹೆಣ್ಣು ಮಗಳಾದ ರೂಪಾಕನ್ವರಳು ೧೯೮೭ರಲ್ಲಿ ಮದುವೆಯಾದ ಎಂಟು ತಿಂಗಳಲ್ಲಿ ಗಂಡ ಮಡಿದಿದ್ದಾ ನೆಂದು ತಿಳಿದು ಅಗ್ನಿಪ್ರವೇಶ ಮಾಡಿ ಮರಣವನ್ನು ಪಡೆಯುತ್ತಾಳೆ. ಆಗ ಅವಳಿಗೆ ೧೮ ವರ್ಷವಾಗಿರುತ್ತವೆ. ಇದೇ ಜಿಲ್ಲೆಯ ೬೦ ವರ್ಷದ ಶಾರ್ಬತಿಬಾಯಿ ಗಂಡ ಸಾವನ್ನಪ್ಪಿದ್ದಾನೆಂದು ಆಗಸ್ಟ್ ೧೬, ೨೦೦೯ ರಂದು ಸಹಗಮನ ಮರಣ ಪಡೆಯುತ್ತಾಳೆ.

ಹೀಗೆ ಕರ್ನಾಟಕದಲ್ಲಿಯೂ ಸತಿಪದ್ಧತಿಗೆ ಪೂರಕವೆಂಬಂತೆ "ಕನಕಗಿರಿಯಲ್ಲಿ ಅಲೆಮಾರಿ ಜನಾಂಗದ ದೊಂಬರ ಸಮುದಾಯದ ೨೨ ವರ್ಷದ ಸಂಗೀತಾ ಎಂಬುವವಳು ಆಧುನಿಕ

ಸಂದರ್ಭದಲ್ಲಿ ಸಹಗಮನಗೊಂಡಳು. ಇದನ್ನು ೧.೪.೨೦೧೦ ರ ಸಂಯುಕ್ತ ಕರ್ನಾಟಕ ಪತ್ರಿಕೆಯು ವರದಿ ಮಾಡಿದೆ. ಸಂಗೀತಾ ಎಂಬುವವಳು ೨೮ ವರ್ಷದ ಯಮನಪ್ಪ ಎಂಬ ತನ್ನ ಗಂಡನ ಆಕಸ್ಮಿಕ ಮರಣದಿಂದಾಗಿ ನೊಂದು, ಶಿಲ್ಪಾ ಮತ್ತು ರೇಖಾ ಎಂಬ ತನ್ನ ಇಬ್ಬರೂ ಮಕ್ಕಳನ್ನು ನೋಡಿಕೊಳ್ಳಿ ನಾನು ನನ್ನ ಪ್ರೀತಿಯ ಗಂಡನೊಂದಿಗೆ ಸ್ವರ್ಗ ಸೇರುತ್ತೇನೆ"[೭] ಎಂದು ಸೀಮೆ ಎಣ್ಣೆ ಸುರಿದುಕೊಂಡು ಪ್ರಾಣ ಬಿಡುವ ಮೂಲಕ ಆಧುನಿಕ ಸತಿಪದ್ಧತಿಯನ್ನು ಅನುಸರಿಸಿರುವುದನ್ನು ತಿಳಿಯಲಾಗಿದೆ.

ಇಂತಹದೇ ಪ್ರಕರಣವೊಂದು ೨೧ ನವೆಂಬರ ೨೦೧೮ರ ಪ್ರಜಾವಾಣಿ ಪತ್ರಿಕೆಯು ವರದಿ ಮಾಡಿರುವಂತೆ ಉತ್ತರ ಪ್ರದೇಶದ ಮೈನಪುರಿಯಲ್ಲಿ ನಡೆದಿದೆ. "ಅಂಗಾವುತಾ ಗ್ರಾಮದ ೮೦ ವರ್ಷದ ಗೋರೆಲಾಲ್ ಶಕ್ಯಾ ಎಂಬುವವರು ಅನಾರೋಗ್ಯದಿಂದ ಭಾನುವಾರ ಮಡಿದರು. ಸೋಮವಾರ ಅಂತ್ಯಸಂಸ್ಕಾರ ನಿಗಧಿಯಾಗಿತ್ತು. ಈ ವೇಳೆ ೭೫ ವರ್ಷದ ಲೌಂಗ್‌ಶ್ರೀದೇವಿ ಎಂಬುವವಳು ಸತಿಪದ್ಧತಿಯಂತೆಯೇ ಪತಿಯ ಮೃತ ದೇಹವಿಟ್ಟಿದ್ದ ಚಿತೆ ಏರಿ ಕೂತಿದ್ದರು. ಇದಕ್ಕೂ ಮುನ್ನ ಕೆಲವು ಮಹಿಳೆಯರು ಸತಿ ಹೋಗುವವಳ ಹಣೆಗೆ ತಿಲಕವನ್ನಿಟ್ಟು ಆಶೀರ್ವದಿಸಿ ಕೊಂಡಿದ್ದರು. ಇಷ್ಟೆಲ್ಲಾ ಬೆಳವಣಿಗೆ ನಡೆದಿದ್ದರೂ ಗ್ರಾಮಸ್ಥರು, ಮಕ್ಕಳು ತಡೆಯಲು ಮುಂದಾಗಲಿಲ್ಲ. ಈ ವಿಷಯ ತಿಳಿದ ಸ್ಥಳೀಯ ಪೋಲಿಸರು ಸ್ಥಳಕ್ಕೆ ಆಗಮಿಸಿ ಸತಿಹೋಗುತ್ತಿರುವ ಲೌಂಗ್ ಶ್ರೀದೇವಿಯನ್ನು ಚಿತೆಯಿಂದ ರಕ್ಷಿಸಿದ್ದಾರೆ.[೮] ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸ್ ತನಿಖೆ ನಡೆದು ಮುಂದೆ ಇಂತಹ ಘಟನೆಗಳು ನಡೆದರೆ, ತಪ್ಪಿತಸ್ಥರನ್ನು ಬಂಧಿಸಲಾಗುವುದು ಎಂದು ಹಿರಿಯ ಅಧಿಕಾರಿಗಳು ಮಾಹಿತಿ ನೀಡಿರುವುದನ್ನು ಆಧುನಿಕ ಸಂದರ್ಭದಲ್ಲೂ ಗಮನಿಸಬಹುದಾಗಿದೆ.

ಹೀಗೆ ಹಳ್ಳಿ ನಗರಗಳಲ್ಲಿ ಪತಿ ಪತ್ನಿಯರಾಗಿ ಕುಟುಂಬದಲ್ಲಿ ಸಾರ್ಥಕ ಜೀವನ ನಡೆಸಿದ ಸ್ತ್ರೀ ಪುರುಷರಲ್ಲಿ ಯಾರೊಬ್ಬರು ಸಾವನ್ನಪ್ಪಿದರೂ ಪರಸ್ಪರ ಇನ್ನೊಬ್ಬರು ಮರಣ ಪಡೆಯುವ ಸಂಗತಿಗಳನ್ನು ಕಾಣುತ್ತೇವೆ. ಇಂತಹ ಸಹಮರಣಕ್ಕೆ ಅವರ ತುಂಬು ಬಾಳಿನ ಪ್ರೀತಿ, ಸ್ನೇಹ, ಆದರ್ಶದಂತಹ ಮೌಲ್ಯಗಳು ಕಾರಣವಾಗಿವೆ. ಇಂತಹ ಸಂಗತಿಗಳನ್ನು ಕುರಿತು ಚಿಂತನೆ ಮಾಡಿದಾಗ ಪ್ರಾಚೀನ ಜನಾಂಗವು ಕೆಲವು ಆದರ್ಶ ಮೌಲ್ಯಗಳಿಗೆ ಬದ್ಧವಾಗಿ ಸತಿಪದ್ಧತಿಯನ್ನು ಆಚರಿಸಿವೆಯಾದರೂ, ಈ ರೀತಿಯ ಮರಣ ಆಚರಣೆಗಳು ಇಂದಿನ ಆಧುನಿಕ ಸಂದರ್ಭದಲ್ಲಿಯೂ ನಡೆದುಕೊಂಡು ಬಂದಿರುವುದನ್ನು ಗಮನಿಸಿದರೆ, ಪ್ರಸ್ತುತ ಸಂದರ್ಭದಲ್ಲಿ ಇಂತಹ ಪರಂಪರೆಗಳನ್ನು ಗುರುತಿಸಿ ದಾಖಲು ಮಾಡುವ ಪ್ರಯತ್ನದಲ್ಲಿ ಸಂಶೋಧನೆಯು ಕಾರ್ಯನಿರ್ವಹಿಸಿರುವುದು ಅತ್ಯಂತ ಮಹತ್ವದ್ದಾಗಿದೆ.

೧.೫. ಅಧ್ಯಯನದ ವೈಧಾನಿಕತೆ

ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಸಾಹಿತ್ಯಿಕ ಹಾಗೂ ದಾಖಲಾತ್ಮಕ ಆಕರಗಳ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಮಹಿಳೆಯರ ಜೈವಿಕ ಹಕ್ಕನ್ನು ಉಲ್ಲಂಘಿಸುವ ಅಮಾನವೀಯತೆಯಿಂದ ಕೂಡಿದ ಈ ಪದ್ಧತಿಯ ಆಚರಣೆಯ ಉಲ್ಲೇಖಗಳಿಗೆ ಸಂಬಂಧಿಸಿದಂತೆ ದೊರೆತ ಆಕರಗಳ ಮಾಹಿತಿಯ ಆಧಾರದ ಅಡಿಯಲ್ಲಿ ಪ್ರಸ್ತುತ ಮಹಾಪ್ರಬಂಧವನ್ನು ಸಿದ್ಧಪಡಿಸಲಾಗಿದೆ. ಜೊತೆಗೆ ಕ್ಷೇತ್ರಕಾರ್ಯವನ್ನು ಅಧ್ಯಯನದ ಒಂದು ಭಾಗವಾಗಿಸಿಕೊಂಡು ವಿದ್ವಾಂಸರೊಂದಿಗೆ ಚರ್ಚೆ ಮಾಡುವುದರ ಮೂಲಕ ಮಾಹಿತಿಯನ್ನು ಪಡೆಯಲಾಗಿದೆ.

ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿ ವಿಷಯ ಮಂಡನೆ ಮಾಡುವುದರ ಮೂಲಕ ಸೂಕ್ತ ಸಲಹೆ ಸೂಚನೆಗಳನ್ನು ಪಡೆದು ಮಾಹಿತಿಯನ್ನು ಕಲೆ ಹಾಕಲಾಗಿದೆ. ಇದರ ಜೊತೆಗೆ ಸಂಶೋಧನೆಯ ವಿಷಯಕ್ಕೆ ಸಂಬಂಧಿಸಿದಂತೆ ಲಿಖಿತ ಮತ್ತು ಮೌಖಿಕ ಆಕರಗಳನ್ನು ಬಳಸಿಕೊಳ್ಳಲಾಗಿದೆ. ಹಾಗೆಯೇ ಅಧ್ಯಯನಕ್ಕೆ ಪೂರಕವಾದ ಆಕರಗಳನ್ನು ಬಳಸಿಕೊಂಡು ನಾಡಿನ ಹಲವಾರು ಸತಿ ದೇವಾಲಯಗಳಿಗೆ ಬೇಟಿಕೊಟ್ಟು ಛಾಯಾಚಿತ್ರಗಳನ್ನು ಸಂಗ್ರಹಿಸಿಕೊಂಡು ಅಲ್ಲಿಯ ಜನರಿಂದ ಸತಿ ಕುರಿತು ಮಾಹಿತಿಯನ್ನು ಪಡೆಯುವುದರ ಮೂಲಕ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಮಹಿಳೆಯರ ಮೇಲೆ ನಡೆಯುವ ಎಲ್ಲ ಬಗೆಯ ದೌರ್ಜನ್ಯಗಳು ಪಾವಿತ್ರ್ಯದ ಹೆಸರಿನಲ್ಲಿದ್ದರೂ ಅವುಗಳನ್ನು ಹೊರ ತೆಗೆದು ವಿಶ್ಲೇಷಣೆ ಮಾಡುವ ವಿಧಾನಗಳನ್ನು ಸ್ತ್ರೀವಾದಿ ಸಂಶೋಧನಾ ವಿಧಾನವು ಹೊಂದಿದೆ. ಈ ವೈಧಾನಿಕತೆಯನ್ನು ಇಡೀ ಅಧ್ಯಯನದುದ್ದಕ್ಕೂ ಬಳಸಿಕೊಳ್ಳಲಾಗಿದೆ. ಪೂರಕವಾಗಿ ಸಾಹಿತ್ಯಿಕ ಹಾಗೂ ದಾಖಲಾತ್ಮಕ ಆಕರಗಳನ್ನು ಗಮನಿಸಿರುವುದರೊಂದಿಗೆ ಸಾಹಿತ್ಯ ಅಧ್ಯಯನದ ವಿಶ್ಲೇಷಣಾತ್ಮಕ ಹಾಗೂ ಸಾಂಸ್ಕೃತಿಕ ಅಧ್ಯಯನದ ವಿಧಾನಗಳನ್ನು ಅನುಸರಿಸಲಾಗಿದೆ.

ಸತಿಪದ್ಧತಿಯಂತಹ ಆಚರಣೆಯಿಂದಾಗಿ ಸ್ತ್ರೀ ಸಮುದಾಯ ಎದುರಿಸಿದ ಸವಾಲು ಮತ್ತು ಸಾಧ್ಯತೆಗಳನ್ನು ತಿಳಿಯಲು ಕಾವ್ಯ ಸಾಹಿತ್ಯ, ದಾಖಲು ಸಾಹಿತ್ಯ ಮತ್ತು ಮೌಖಿಕ ಸಾಹಿತ್ಯದ ಅಧ್ಯಯನವನ್ನು ಸಂಶೋಧನಾ ಅಧ್ಯಯನದ ಮುಖ್ಯ ಭಾಗವಾಗಿಸಿ ಕೊಳ್ಳಲಾಗಿದೆ.

ಪ್ರಸ್ತುತ ಅಧ್ಯಯನದಲ್ಲಿ ದೊರೆತ ಸಹಗಮನದ ಪ್ರಕರಣಗಳನ್ನು ದಾಖಲಿಸುವದರ ಜೊತೆಗೆ ವಿದೇಶಿ ಪ್ರವಾಸಿಗರ ಅನುಭವಗಳನ್ನು ಅವರು ದಾಖಲಿಸಿದ ಪ್ರಕರಣಗಳನ್ನು ಆಯ್ದುಕೊಳ್ಳಲಾಗಿದೆ. ಕಾರಣ ಸಂಶೋಧನಾ ಅಧ್ಯಯನದ ಉದ್ದೇಶಗಳಲ್ಲಿ ಸ್ತ್ರೀ ಸಮುದಾಯದ ಮೇಲಿನ ದೌರ್ಜನ್ಯವನ್ನು ಹೋಗಲಾಡಿಸಲು ರೂಪಿಸಿದ ಕಾನೂನಗಳ ಕಾರ್ಯವೈಖರಿಯನ್ನು ಒಂದು ಅಂಶವಾಗಿಸಿಕೊಂಡಿದ್ದರಿಂದ ಸತಿ ಆಚರಣೆಯ ಘಟನೆಗಳನ್ನು ದಾಖಲಿಸಲು

ಸಹಾಯಕವಾಗಿದೆ. ಈ ಎಲ್ಲ ವಿಧಾನಗಳ ಜೊತೆಗೆ ಸ್ತ್ರೀ ಸಮುದಾಯದ ಸಮಸ್ಯೆಗಳನ್ನು ಅಭ್ಯಸಿಸುವ ಸಂದರ್ಭಗಳಲ್ಲಿ ಅನುಸರಿಸಬೇಕಾದ ಗುಣಾತ್ಮಕ ಸಂಶೋಧನಾ ವಿನ್ಯಾಸ ವ್ಯಕ್ತಿ ನಿಷ್ಠತೆಯಂತಹ ಸಂಶೋಧನೆಗಳು ಅಧ್ಯಯನದುದ್ದಕ್ಕೂ ಹಾಸುಹೊಕ್ಕಾಗಿವೆ.

ಸಂಶೋಧನೆಯನ್ನು ಸೀಮಿತ ಕ್ಷೇತ್ರಕ್ಕೆ ಒಳಪಡಿಸಿ ದೊರೆತ ಮಾಹಿತಿಯ ಆಧಾರದ ಮೇಲೆ ನಿರ್ಣಯಗಳನ್ನು ತೆಗೆದುಕೊಳ್ಳಲಾಗಿದೆ. ನಂತರ ಇದನ್ನು ಇಡೀ ಮಾನವ ಜನಾಂಗಕ್ಕೆ ಅನ್ವಯಿಸಲಾಗಿದೆ. ಇಂತಹ ಕಾರ್ಯ ಕೇವಲ ಸಂಭವನೀಯ ಮಾದರಿಯಿಂದ ಮಾತ್ರ ಸಾಧ್ಯವಾಗುತ್ತದೆ. ಪ್ರಸ್ತುತ ಅಧ್ಯಯನದಲ್ಲಿ ಸತಿಪದ್ಧತಿಗೆ ಸಂಬಂಧಿಸಿದ ಅಂಶಗಳನ್ನು ಕಥೆಗಳು ಗೀತೆಗಳು ಹಾಗೂ ಕಥನ ಕಾವ್ಯಗಳ ಮಾದರಿಯಲ್ಲಿ ದಾಖಲಿಸಲಾಗಿದೆ ಮತ್ತು ವಿದೇಶಿ ಪ್ರವಾಸಿಗರ ಅನುಭವಗಳನ್ನು ವಿವರಿಸುವ ಮೂಲಕ ಗುಣಾತ್ಮಕ ಸಂಶೋಧನಾ ವಿನ್ಯಾಸವನ್ನು ಬಳಸಿಕೊಂಡು ಅವುಗಳಲ್ಲಿನ ವಿಷಯಕ್ಕನುಸಾರವಾಗಿ ದಾಖಲಿಸಲಾಗಿದೆ.

೧.೬. ಇದುವರೆಗಿನ ಅಧ್ಯಯನಗಳ ಸಮೀಕ್ಷೆ

ಕನ್ನಡ ನಾಡಿನಲ್ಲಿರುವ ಹಲವಾರು ಶಾಸನಗಳು, ಸಾಹಿತ್ಯ ಕೃತಿಗಳು 'ಸತಿಪದ್ಧತಿ' ಎಂಬ ಪರಿಕಲ್ಪನೆಯ ಕುರಿತು ಚಿಂತನೆ ಮಾಡಿವೆ. ಹಾಗೆಯೇ ಚಿಂತನೆ ಮಾಡಿದ ಸಾಹಿತ್ಯ ಕೃತಿಗಳಲ್ಲಿ ಪ್ರಾಚೀನ ಕನ್ನಡ ಕಾವ್ಯಗಳು, ಮಧ್ಯಕಾಲೀನ ಸಾಹಿತ್ಯ ಕೃತಿಗಳು, ಲಿಖಿತ ಮತ್ತು ಮೌಖಿಕ ಜನಪದ ಸಾಹಿತ್ಯ ಪ್ರಧಾನ ಪಾತ್ರವಹಿಸಿವೆ. ವಿಕ್ರಮಾರ್ಜುನ ವಿಜಯ, ಅಜಿತ ತೀರ್ಥಂಕರ ಪುರಾಣ, ಅನಂತನಾಥ ಪುರಾಣ, ಕರ್ನಾಟಕ ಕಾದಂಬರಿ, ಧರ್ಮಾಮೃತ, ಸಮಯ ಪರೀಕ್ಷೆ, ರಾಮನಾಥ ಚರಿತೆ, ಕರ್ಣಾಟ ಭಾರತ ಕಥಾಮಂಜರಿ, ಶ್ರೀ ಸಿದ್ಧೇಶ್ವರ ಮಹಾಪುರಾಣ, ತೊರವೆ ರಾಮಾಯಣ, ಮೋಹನ ತರಂಗಿಣಿ, ಭರತೇಶ ವೈಭವ, ಸಿಂಗಿರಾಜ ಪುರಾಣ, ಇಮ್ಮಡಿ ಚಿಕ್ಕ ಭೂಪಾಲನ ಸಾಂಗತ್ಯ, ಸಿರುಮಣನಾಯಕನ ಸಾಂಗತ್ಯ, ವಚನಕಾರರ ವಚನಗಳು, ಮೊದಲಾದ ಜೈನ, ವೀರಶೈವ, ವೈದಿಕ ಧರ್ಮದ ಮಹಾಕಾವ್ಯಗಳು ಸತಿ ಹೋಗಿರುವುದನ್ನು ಉಲ್ಲೇಖಿಸುವ ಮೂಲಕ ಸತಿಪದ್ಧತಿಯನ್ನು ಸೂಚಿಸುವಲ್ಲಿ ಪ್ರಮುಖವಾಗಿವೆ.

ಈ ಕೃತಿಗಳಲ್ಲಿ ಸತಿಪದ್ಧತಿಗೆ ಸಂಬಂಧಿಸಿದ ಉಲ್ಲೇಖಗಳಿದ್ದು ಅವುಗಳನ್ನು ಅನೇಕ ವಿದ್ವಾಂಸರು ಅಧ್ಯಯನ ಮಾಡಿ ತಮ್ಮ ಸಂಶೋಧನೆಯ ಮೂಲಕ ಸತಿಪದ್ಧತಿ ಎಂಬ ಪರಿಕಲ್ಪನೆಗೆ ಸಂಬಂಧಿಸಿದಂತೆ ಹಲವು ರೀತಿಯಲ್ಲಿ ಚರ್ಚೆ ಮಾಡಿದ್ದಾರೆ. ಇಲ್ಲಿ ಕೆಲವು ಸಂಶೋಧಕರು ಶಾಸನ ಶಿಲ್ಪಗಳನ್ನು ಅಧ್ಯಯನ ಮಾಡಿ ಸತಿಪದ್ಧತಿ ಪರಿಕಲ್ಪನೆಯನ್ನು ಚರ್ಚೆ ಮಾಡಿದರೆ, ಇನ್ನೂ ಕೆಲವರು ಸಾಹಿತ್ಯ ಕೃತಿಗಳನ್ನು ಅದರಲ್ಲಿ ಶಿಷ್ಟ ಮತ್ತು ಜನಪದ ಸಾಹಿತ್ಯ ಕೃತಿಗಳನ್ನು ಅಧ್ಯಯನ ಮಾಡುವುದರ ಮೂಲಕ ಸಂಶೋಧನೆ ಮಾಡಿದ್ದಾರೆ. ಹೀಗೆ ಸಂಶೋಧನೆ ಮಾಡಿದ ಹಿರಿಯ ತಲೆಮಾರಿನ ವಿದ್ವಾಂಸರುಗಳಲ್ಲಿ ಡಾ.ಎಂ.ಚಿದಾನಂದಮೂರ್ತಿ, ಡಾ.ಎಂ.ಎಂ.

ಕಲಬುರ್ಗಿ, ಬುದ್ದಣ್ಣ ಹಿಂಗಮಿರೆ, ಜೀ.ಶಂ.ಪರಮಶಿವಯ್ಯ, ಆರ್. ಶೇಷಶಾಸ್ತ್ರಿ, ಎಸ್. ಶೆಟ್ಟರ್, ಕೃಷ್ಣಮೂರ್ತಿ ಹನೂರ, ಬಿ.ಎಸ್.ಶೇಠ, ಜೋತ್ಸನಾ ಕಾಮತ್, ಬಸವರಾಜ ಕಲ್ಗುಡಿ, ದೇವರಕೊಂಡಾರೆಡ್ಡಿ, ಡಿ.ವಿ.ಪರಮಶಿವಮೂರ್ತಿ ಜೆ.ಎಂ.ನಾಗಯ್ಯ, ಮೊದಲಾದವರು ಪ್ರಮುಖರಾಗಿದ್ದಾರೆ. ಈ ಎಲ್ಲ ವಿದ್ವಾಂಸರುಗಳು ಸತಿಪದ್ಧತಿಯ ಕುರಿತು ಮಾಡಿದ ಚಿಂತನೆಗಳನ್ನು ಅಧ್ಯಯನಗಳು, ಕೃತಿಗಳು, ಲೇಖನಗಳು ಎಂದು ವಿಭಾಗಿಸಿಕೊಂಡು ಈ ಕೆಳಗಿನಂತೆ ಸಮೀಕ್ಷೆ ಮಾಡಲಾಗಿದೆ.

೧. ಅಧ್ಯಯನಗಳು

ಎಂ. ಚಿದಾನಂದಮೂರ್ತಿ ಅವರ ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನವು (೧೯೬೬) ಒಂದು ಸಂಶೋಧನಾ ಗ್ರಂಥವಾಗಿದ್ದು, ಇವರು ಶಾಸನ ಶಿಲ್ಪ ಮತ್ತು ಸಾಹಿತ್ಯ ಆಕರಗಳ ಮೂಲಕ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಮಾಡಿದ್ದಾರೆ.[೯] ಈ ಗ್ರಂಥದಲ್ಲಿ ಆತ್ಮಬಲಿಯ ಪ್ರಕಾರಗಳನ್ನು ವಿವರಿಸುವಾಗ 'ಸಹಗಮನ'ದ ಕುರಿತು ಸಂಕ್ಷಿಪ್ತವಾಗಿಯಾದರೂ ಬೆಲೆಯುಳ್ಳ ಚಿಂತನೆ ಮಾಡಿದ್ದಾರೆ. ಪ್ರಾಚೀನ ಕಾಲದಲ್ಲಿ ಆತ್ಮಹತ್ಯೆಯನ್ನು ಮಹಾಪಾಪವೆಂದು ಕರೆದಿರುವುದನ್ನು ಹೇಳುವ ಇವರು ಸ್ಮೃತಿ ಪುರಾಣಗಳು ಹೇಳುವ ದೇಹ ತ್ಯಾಗಗಳನ್ನು ಆತ್ಮಹತ್ಯೆ ಎನ್ನುತ್ತಾರೆ. ಈ ರೀತಿ ನಡೆದುಕೊಂಡು ಬಂದ ಧಾರ್ಮಿಕ ದೇಹತ್ಯಾಗ, ಆತ್ಮಹತ್ಯೆಗಳನ್ನು ಕುರಿತು ಹೇಳುತ್ತ, ಗಂಡ ಸತ್ತಮೇಲೆ ಹೆಂಡತಿಯ ದೇಹ ತ್ಯಾಗವು ಒಂದು ರೀತಿಯ ಆತ್ಮ ತ್ಯಾಗ ಎಂದು ತಿಳಿಸುತ್ತಾರೆ. ಸಹಗಮನದ ವಿಷಯದಲ್ಲಿ ಮುಂದೆ ಅಧ್ಯಯನ ಮಾಡುವವರಿಗೆ ಇದು ತುಂಬಾ ಸಹಕಾರಿಯಾಗಿದೆ. ಅವರ ಇನ್ನೊಂದು ಗ್ರಂಥ 'ವೀರಗಲ್ಲುಗಳು ಮತ್ತು ಮಾಸ್ತಿಕಲ್ಲುಗಳು' ಎಂಬ ಗ್ರಂಥದಲ್ಲಿ ಮಾಸ್ತಿಕಲ್ಲುಗಳ ಪಾಠ ಮತ್ತು ಶಿಲ್ಪಗಳ ಕುರಿತು ಅಚ್ಚುಕಟ್ಟಾಗಿ ವಿವರಿಸಿದ್ದಾರೆ.[೧೦] ಇದರಲ್ಲಿ ಸತಿಪದ್ಧತಿಗೆ ಸಂಬಂಧಿಸಿದ ಅಂಶಗಳನ್ನು ಉದಾಹರಣೆಗಳ ಮೂಲಕ ವಿಶ್ಲೇಷಣಾತ್ಮಕವಾಗಿ ವಿವರಿಸಿದ್ದಾರೆ.

ಬುದ್ದಣ್ಣ ಹಂಗಮಿರೆ ಅವರು 'ಕನ್ನಡದಲ್ಲಿ ಶೋಕಕಾವ್ಯ' ಎಂಬ ಸಂಶೋಧನ ಮಹಾಪ್ರಬಂಧವನ್ನು ಪುಣೆ ವಿಶ್ವವಿದ್ಯಾಲಯದ ಪಿಎಚ್.ಡಿ.ಪದವಿಗಾಗಿ ಸಿದ್ಧಪಡಿಸಿ ಸಲ್ಲಿಸಿದ್ದಾರೆ. ಈ ಸಂಶೋಧನಾ ಗ್ರಂಥದಲ್ಲಿ ಏಳು ಅಧ್ಯಾಯಗಳಿದ್ದು, ಅಧ್ಯಾಯ ಮೂರು ಮತ್ತು ನಾಲ್ಕರಲ್ಲಿ ಶಾಸನ ಪದ್ಯಗಳು ಹಳೆಯ ಕಾವ್ಯಗಳಿಗೆ ಸಂಬಂಧಿಸಿದ ಮರಣ ವಿಚಾರಗಳನ್ನು ಚರ್ಚೆ ಮಾಡಿದ್ದಾರೆ. ಇವರು ಶಾಸನ ಕವಿ ಮಲ್ಲನಿಂದ ಚಿತ್ರಿತವಾದ ದೇಖಬ್ಬೆ ಮಹಾಸತಿ ಶಾಸನದ ಮೂಲಕ ದೇಖಬ್ಬೆಯು ಮಹಾಸತಿಯಾಗಿ ಆತ್ಮಾರ್ಪಣೆ ಮಾಡಿಕೊಳ್ಳುವ ಕುರಿತು ಚಿಂತನೆ

ಮಾಡುತ್ತಾರೆ.[೧೧] ಈ ಮೂಲಕ ಮಹಾಸತಿ ಮರಣ ಕುರಿತಂತೆ "ಸತಿಹೋಗುವುದು ಬಿಡುವುದು ಸತಿಯರ ಇಚ್ಚೆಯನ್ನು ಅವಲಂಬಿಸಿದಂತೆ ತೋರುತ್ತದೆ. ಸತಿಹೋಗದೇ ಬದುಕುವುದಕ್ಕಿಂತ ಪತಿಯೊಡನೆ ಅಳಿಯುವುದು ಆ ಕಾಲದ ಪತಿವ್ರತೆಯರಿಗೆ ಹೆಚ್ಚು ಪ್ರಿಯವಾಗಿದ್ದಿತು."[೧೨] ಎನ್ನುತ್ತಾರೆ. ಅಧ್ಯಾಯ ನಾಲ್ಕರಲ್ಲಿ ಮರಣ ಶೋಕಕ್ಕೆ ಕಾರಣವಾದ ವಿಷಯಗಳನ್ನು ಶಾಸನ, ಹಳಗನ್ನಡ ಕಾವ್ಯಗಳಲ್ಲಿ ಉಲ್ಲೇಖಗೊಂಡ ಅಂಶಗಳನ್ನು ವಿವರಿಸಿದ್ದಾರೆ. ಜೊತೆಗೆ ಮಾದ್ರಿಯ ವಿಲಾಪ, ಗದಾಯುದ್ಧದಲ್ಲಿನ ಶೋಕ, ಮೋಹನ ತರಂಗಿಣಿಯ ರತಿಪ್ರಲಾಪ ಕುರಿತು ಚಿಂತನೆ ಮಾಡಿದ್ದಾರೆ.[೧೩]

ಚೆನ್ನಕ್ಕ ಎಲಿಗಾರ ಅವರ 'ಶಾಸನಗಳಲ್ಲಿ ಸ್ತ್ರೀ ಸಮಾಜ' ಎಂಬ ಮಹಾಪ್ರಬಂಧವು ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣ ವಿಭಾಗದಿಂದ ಪ್ರಕಟವಾಯಿತು. ಕ್ರಿ.ಶ.೧೯೭೭ರಲ್ಲಿ ಮಾಸ್ತಿಕಲ್ಲುಗಳ ವಿಷಯವನ್ನು ಗ್ರಂಥಸಾಹಿತ್ಯ, ಜನಪದಸಾಹಿತ್ಯ, ಪ್ರವಾಸಸಾಹಿತ್ಯದ ಹಿನ್ನೆಲೆಯಲ್ಲಿ ಮಾಸ್ತಿಕಲ್ಲು ಪುಸ್ತಕದಲ್ಲಿ ಸಂಕ್ಷಿಪ್ತವಾಗಿ ವಿವರಿಸಿದ್ದಾರೆ.[೧೪] ಇದೇ ವಿಷಯವನ್ನು ಕುರಿತು ಅವರು 'ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ' ಎಂಬ ಮಹಾಪ್ರಬಂಧದ ಒಂದು ಅಧ್ಯಾಯದಲ್ಲಿ ವಿವರಿಸಿದ್ದಾರೆ. ಈ ಮಹಾಪ್ರಬಂಧವು ೧೯೮೦ರಲ್ಲಿ ಚೆನ್ನಕ್ಕ ಎಲಿಗಾರ ಅವರು ಕರ್ನಾಟಕ ವಿಶ್ವವಿದ್ಯಾಲಯದ ಆರ್.ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠಕ್ಕೆ ಸಲ್ಲಿಸಿದ ಪಿಎಚ್.ಡಿ. ಸಂಶೋಧನಾ ಮಹಾಪ್ರಬಂಧ. ಇದರಲ್ಲಿ ಅವರು ಹಿಂದೂ ಧಾರ್ಮಿಕ ಮರಣವನ್ನು ಕುರಿತು "ಮನುಷ್ಯ ಜೀವನದ ಕೊನೆಯ ಗುರಿ ಮುಕ್ತಿ. ಇದು ಮರಣೋತ್ತರದಲ್ಲಿ ಕೈ ಸೇರುವ ಅಮೃತಫಲ. ಇದು ದೈವ ಸಂಪ್ರೀತವಾಗಿದ್ದು ಇದನ್ನು ಧಾರ್ಮಿಕ ಆಚರಣೆಗಳಿಂದ ಪಡೆಯಬಹುದು. ಅಲ್ಲದೇ ಸ್ವರ್ಗವನ್ನು ದೇವರ ಪಿತೃರ್ಥ ಪ್ರಾಣವನ್ನು ಉತ್ಕ್ರಮಣಗೊಳಿಸಿಕೊಳ್ಳುವುದರಿಂದಲೂ ಪಡೆಯಬಹುದೆಂಬ ಭಾವನೆ ಭಾರತೀಯರಲ್ಲಿ ಬೆಳೆದು ಧಾರ್ಮಿಕ ಆತ್ಮಬಲಿದಾನ ಅಸ್ತಿತ್ವಕ್ಕೆ ಬಂತು"[೧೫] ಎಂದು ಹೇಳುತ್ತಾರೆ.

ಮುಕ್ತಿಗೋಸ್ಕರ ದೇವರ ಹೆಸರಿನಲ್ಲಿ ಒಡೆಯನ ಹೆಸರಿನಲ್ಲಿ ದೇಹತ್ಯಾಗ ಮಾಡಿಕೊಳ್ಳುವುದೇ ಆತ್ಮಬಲಿದಾನವಾಗಿದೆ. ಹೀಗೆ ಹೇಳಿದ ಇವರು ಹಿಂದೂ ಧಾರ್ಮಿಕ ಆತ್ಮಬಲಿದಾನವನ್ನು ಪುಣ್ಯ ಸಂಪಾದನೆಯ ಮಹಾಭಿಲಾಷೆಯಿಂದ ಪ್ರಾರಂಭವಾದ ಈ ಮರಣ ಮುಂದೆ ಪ್ರಪಂಚವೇ ಗುಣಪಡಿಸಲಾರದ ಸಾಮಾಜಿಕ ಪಿಡುಗಾಗಿ ಸ್ತ್ರೀಯರ ಜೈವಿಕ ಹಕ್ಕನ್ನೇ ಕಿತ್ತುಕೊಳ್ಳುವ ಸಾಂಪ್ರದಾಯಿಕ ಪದ್ಧತಿಯಾಯಿತು ಎನ್ನುತ್ತಾರೆ.

ಕ್ರಿ.ಶ.೧೯೮೨ರಲ್ಲಿ ಪ್ರಕಟಗೊಂಡ ಆರ್. ಶೇಷಶಾಸ್ತ್ರಿ ಅವರ 'ಕರ್ನಾಟಕದ ವೀರಗಲ್ಲುಗಳು' ಎಂಬ ಮಹಾಪ್ರಬಂಧದಲ್ಲಿ ವೀರಗಲ್ಲುಗಳನ್ನು ಮುಖ್ಯವಾಗಿಟ್ಟುಕೊಂಡು ಅಧ್ಯಯನ ಮಾಡಲಾಗಿದೆ.[೧೬] ಈ ಗ್ರಂಥದಲ್ಲಿ ವೀರಗಲ್ಲುಗಳಲ್ಲಿಯ ಮಾಸ್ತಿಪಾಠ ಮತ್ತು ಮಾಸ್ತಿಶಿಲ್ಪಗಳನ್ನು

ವಿಶ್ಲೇಷಿಸುವಾಗ ಸತಿ ವಿಷಯವನ್ನು ಉಪಯುಕ್ತವಾದ ರೀತಿಯಲ್ಲಿ ವಿವರಿಸಲಾಗಿದೆ.

ಬಿ.ಎಸ್.ಶೇಠೆ ಅವರು 'ಕರ್ನಾಟಕದಲ್ಲಿ ಸತಿಪದ್ಧತಿ' ಎಂಬ ಸಂಶೋಧನಾ ಗ್ರಂಥದಲ್ಲಿ ಕರ್ನಾಟಕದಲ್ಲಿ ನಡೆದ ಸತಿಘಟನೆಗಳ ಕುರಿತು ವಿವರಿಸಿದ್ದಾರೆ.[೧೭] ಸತಿ ಪದ್ಧತಿಯ ಉಗಮ ವಿಕಾಸವನ್ನು ಪ್ರಪಂಚ, ಭಾರತದಲ್ಲಿ ಕಂಡು ಬಂದಂತೆ ಅನ್ಯ ದೇಶಿಯ ಆಕರಗಳನ್ನು ಬಳಸಿ ಗುರುತಿಸುತ್ತಾರೆ. ಭಾರತದಲ್ಲಿರುವ ವೇದ ಪೂರ್ವ ಕಾಲದ ಆಕರಗಳನ್ನು ಸಂಗ್ರಹಿಸಿ ವಿಶ್ಲೇಸಿಸುವ ಮೂಲಕ ಮಹಾಸತಿ ಆಚರಣೆಯ ವಿಕಾಸವನ್ನು ಗುರುತಿಸುತ್ತಾರೆ. ಸತಿಪದ್ಧತಿಗೆ ಸಂಬಂಧಿಸಿದ ಕಾರಣಗಳು, ಆಚರಣೆಗಳು, ಸತಿ ಸಂದರ್ಭದ ಚಿತಾಪ್ರವೇಶ, ಸಮಾಧಿ ಪ್ರವೇಶದ ವಿಧಿ-ವಿಧಾನಗಳನ್ನು ಕುರಿತು ವಿವರಿಸಿದ್ದಾರೆ.[೧೮] ಐತಿಹಾಸಿಕವಾಗಿ ಕರ್ನಾಟಕದಲ್ಲಿ ನಡೆದ ಸತಿಘಟನೆಗಳನ್ನು ಕುರಿತಂತೆ ಶಾಸನ ಸಾಹಿತ್ಯ ಆಕರಗಳನ್ನು ಬಳಸಿ ಒಂಬತ್ತು, ಹತ್ತು, ಹನ್ನೊಂದು, ಹನ್ನೆರಡು, ಹದಿಮೂರು, ಹದಿನಾಲ್ಕು, ಹದಿನೈದು, ಹದಿನಾರನೇ ಶತಮಾನದಲ್ಲಿ ನಡೆದ ಸತಿಘಟನೆಗಳನ್ನು ಕುರಿತು ಚಿಂತನೆ ಮಾಡುತ್ತಾರೆ. ಹಾಗೆಯೇ ಅಂದಿನ ಕಾಲದಲ್ಲಿ ಸತಿಗಿರುವ ಸಾಮಾಜಿಕ ಸ್ಥಾನಮಾನಗಳನ್ನು ಕುರಿತು ಚರ್ಚೆ ಮಾಡುತ್ತಾರೆ. ಸ್ತ್ರೀ ಸತಿಹೋಗುವಾಗ ಆಚರಿಸುತ್ತಿದ್ದ ಕೆಲವು ವಿಧಿ ವಿಧಾನಗಳನ್ನು ಕುರಿತು ಹೇಳುವ ಇವರು ಸತಿ ಅಲಂಕಾರ, ಸತಿ ಮೆರವಣಿಗೆ, ಸತಿಯ ದಾನ, ಕಾಯಕ ನಿಷ್ಠೆ, ಹರಕೆ ಮತ್ತು ಶಾಪದ ವಿಚಾರಗಳನ್ನು ತಮ್ಮ ಸಂಶೋಧನೆಯಿಂದ ಚರ್ಚೆ ಮಾಡಿದ್ದಾರೆ.[೧೯] ಮಹಾಸತಿ ಆಚರಣೆಯನ್ನು ವ್ಯಾಪಕವಾಗಿ ಅರ್ಥೈಸಲು ಗ್ರಂಥಸಾಹಿತ್ಯ, ಜನಪದ ಗೀತೆಗಳು, ಕಥೆಗಳು, ಸ್ಮಾರಕಗಳು, ಶಾಸನಶಿಲ್ಪಗಳನ್ನು ಪೂರಕವಾಗಿ ಬಳಸಿಕೊಂಡಿದ್ದಾರೆ. ಜನಪದ ಸಾಹಿತ್ಯದಲ್ಲಿ ಅಡಗನಹಳ್ಳಿ ಹಾಡು, ಕಲ್ಲೂರು ಮಾಸ್ತಿಪದ, ತವರು ಹಂಗ ಹರಿದು ಬರತೇವಿ, ದೋಂಡಜಿವಾಗ, ಜಗುಣೆಯ ಜಕ್ಕಣ್ಣ ಮಗುನೆಯ ಬ್ಯಾಟೀಕಾರ ಮಾಸ್ತ್ಯೆಮ್ಮ, ಹೊನ್ನಮ್ಮ ಮಾಸ್ತಿ ಎಂಬ ಮೊದಲಾದ ಗೀತೆಗಳ ಮೂಲಕ ಸತಿ ಘಟನೆಗಳನ್ನು ಕುರಿತು ಚರ್ಚೆ ಮಾಡುತ್ತಾರೆ. ಅದು ಮಾನವನ ಇತಿಹಾಸದಲ್ಲಿ ಉಗಮಗೊಂಡು ಬೆಳೆದು ಇಂದು ಮರೆಯಾದ ಬಗ್ಗೆ ವಿಸ್ಮಯವೆನಿಸುತ್ತದೆ. ಮಾನವ ಕುಲಕ್ಕೆ ಅವಹೇಳನಕರವೆನಿಸಿದ ಈ ಪದ್ಧತಿ ಮರೆಯಾಗಿ ಹೋದುದರ ಕುರಿತಾಗಿ ನೆಮ್ಮದಿಯೇ ಇದೆ ಎನ್ನುತ್ತಾರೆ.

ಡಿ.ವಿ.ಪರಮಶಿವಮೂರ್ತಿ ಅವರ 'ಕನ್ನಡ ಶಾಸನ ಶಿಲ್ಪ'(೧೯೯೯)ಎಂಬುವುದು ಸಂಶೋಧನಾ ಮಹಾಪ್ರಬಂಧವಾಗಿದ್ದು, ಈ ಮಹಾಪ್ರಬಂಧದಲ್ಲಿ ವೀರಶಾಸನ ಶಿಲ್ಪಗಳನ್ನು ಕೇಂದ್ರವಾಗಿಟ್ಟುಕೊಂಡು ವ್ಯಕ್ತಿ ವ್ಯಕ್ತಿಗಳ ಹೋರಾಟಗಳ ಮರಣ, ವ್ಯಕ್ತಿ ಪ್ರಾಣಿ ಹೋರಾಟಗಳ ಮರಣ, ವೀರ ಮರಣ ಎಂಬ ವಿವಿಧ ಮಾದರಿಯ ಶಿಲ್ಪಗಳಲ್ಲಿ ಪ್ರಸ್ತಾಪವಾದ ಮಹಾಮರಣದ

ವಿವರಗಳನ್ನು ಸಂಶೋಧನೆಯ ಮೂಲಕ ಶೋಧಿಸಿದ್ದಾರೆ.[೨೦] ಲೌಖಿಕ ಬಲಿದಾನದಲ್ಲಿ ಶಾಸನ ಶಿಲ್ಪಗಳನ್ನು ವ್ಯಾಖ್ಯಾನಿಸಿದ ಇವರು ಮಹಾಸತಿ ಮರಣ, ಸಹಗಮನ ಮರಣ, ಅನುಗಮನ ಮರಣ, ವೇಳೇವಾಳಿ ಮರಣ, ಕೀಲ್ಗುಂಟೆ ಮರಣ, ಬೆಂಕಿಬಲಿ ಮರಣ, ತಲೆಕಡಿಸಿಕೊಳ್ಳುವ ಮರಣಗಳನ್ನು ಕುರಿತಂತೆ ಚರ್ಚೆ ಮಾಡಿದ್ದಾರೆ.

ವೀರರು ಕೈಬಿಲ್ಲು, ಚೂರಿ, ಹಿಡಿದು ಹೋರಾಟ ಮಾಡಿ ಮಡಿದಾಗ ಅಂತಹ ವೀರರನ್ನು ಅಪ್ಸರೆಯರು ಸ್ವರ್ಗಕ್ಕೆ ಕೈ ಹಿಡಿದುಕೊಂಡು ಹೋಗುವ ಸಂದರ್ಭದ ಚಿತ್ರಗಳ ಹಿನ್ನೆಲೆಯಲ್ಲಿ ಚರ್ಚೆ ಮಾಡುತ್ತಾರೆ. ಅಲ್ಲದೇ ಲೌಖಿಕ ಬಲಿದಾನ ಮರಣವನ್ನು ಕುರಿತು ಶಾಸನ ಶಿಲ್ಪಗಳ ಮಾದರಿಯ ಮೂಲಕ ಚರ್ಚೆ ಮಾಡಿದ ಡಿ.ವಿ.ಪರಮಶಿವಮೂರ್ತಿ ಅವರು ಮಹಾಸತಿ ಮರಣ. ಸಹಗಮನ ಮರಣ ಕುರಿತಾಗಿ ತಿಳಿಸಿ ಅದು ಪ್ರಿಯ ವ್ಯಕ್ತಿಯ ಹೆಸರಿನಲ್ಲಿ ಪ್ರಾಣೋತ್ಕ್ರಮಣ ಮರಣ ಮಾಡಿಕೊಳ್ಳುವ ಲೌಖಿಕ ಬಲಿದಾನವೆಂದು ಹೇಳುತ್ತಾರೆ. ಪತಿಮರಣದ ನಂತರ ಸತಿ ಹೋಗುವುದು, ಪ್ರಿಯ ಪತಿಗೆ ತನ್ನ ಪ್ರಿಯ ಸತಿಯ ತ್ಯಾಗದ ಮರಣವಾಗಿದೆ. ಹೀಗೆ ಮರಣ ಹೊಂದುವುದನ್ನು 'ಪ್ರಿಯ ವ್ಯಕ್ತಿಗೆ ಒಳಿತಾಗಲಿ' ಎಂಬ ಕಾರಣದಿಂದ ನಡೆದುಕೊಂಡು ಬಂದಿವೆ. ಇದಕ್ಕೆ ನಿದರ್ಶನವೆಂಬಂತೆ ಸಪ್ತಾಪೂರ ಭಾವಿಯ ಬಳಿಯಿರುವ ಮಹಾಸತಿಶಿಲ್ಪ, ಹೀರೆ ಕೋಗಳೂರು, ಭದ್ರಾವತಿ, ಶಿವಮೊಗ್ಗ, ದೇವಗಿರಿ ಮೊದಲಾದ ಕಡೆ ದೊರೆತ ಮಹಾಸತಿ ಶಾಸನ ಶಿಲ್ಪಗಳ ಕುರಿತು ಅಧ್ಯಯನ ಮಾಡಿ ಮಹಾಸತಿ ಮರಣ ಶಿಲ್ಪದ ಕುರಿತಾಗಿ ವಿಶಿಷ್ಟವಾದ ರೀತಿಯಲ್ಲಿ ಸಂಶೋಧನೆ ಮಾಡಿದ್ದಾರೆ.

೨. ಕೃತಿಗಳು

ಎಂ.ಎಂ. ಕಲಬುರ್ಗಿ ಇವರ ಸಮಾಧಿ–ಬಲಿದಾನ–ವೀರಮರಣ ಸ್ಮಾರಕಗಳು (೧೯೮೦) ಎಂಬ ಗ್ರಂಥದಲ್ಲಿ ಸತಿಪದ್ಧತಿಯ ವಿಷಯ ನಿರೂಪಣೆ ತುಂಬ ಬೆಲೆಯುಳ್ಳ ಪಾತ್ರವಹಿಸುತ್ತದೆ. ಶಾಸನಶಿಲ್ಪ, ಸ್ಮಾರಕಗಳು, ಕಾವ್ಯ, ಜನಪದ ಸಾಹಿತ್ಯ, ಪ್ರವಾಸ ಸಾಹಿತ್ಯ ಈ ಮೊದಲಾದವುಗಳಿಂದ ದೊರಕುವ ಸತಿ ಸಂಗತಿಗಳನ್ನು ಸಂಗ್ರಹಿಸಿ ಈ ಗ್ರಂಥದಲ್ಲಿ ವಿಶ್ಲೇಷಿಸಲಾಗಿದೆ.[೨೧] ಅಲ್ಲದೆ ಅಪೂರ್ವವಾದ ಕೆಲವು ಶಿಲ್ಪಗಳ ಚಿತ್ರಗಳನ್ನು ಕೊಡಲಾಗಿದೆ. ಸತಿ ಪದ್ಧತಿಯನ್ನು ಕುರಿತು ಮಾತನಾಡುವ ಇವರು 'ಸದ್ಗತಿ ಸಂಪಾದನೆಯೇ ಭಾರತೀಯರ ಪರಮಗುರಿ' ಎನ್ನುತ್ತಾರೆ. ಸದ್ಗತಿಯನ್ನು ಪಡೆಯಲು ಇರುವ ಮಾರ್ಗಗಳಲ್ಲಿ ಆತ್ಮಾನುಸಂಧಾನ, (ವ್ಯಕ್ತಿಜೀವನದ ಪರಿಶುದ್ಧತೆ) ಆದರ್ಶನುಸಂಧಾನ(ಸಮಾಜ ಜೀವನ ಪರಿಶುದ್ಧಿಯ ಸಾಧನ)ಮೌಲ್ಯಾನು ಸಂಧಾನ(ಮೌಲ್ಯ ಗಳಾಧಾರಿತ ಜೀವನ) ಎಂದು ಗುರುತಿಸುತ್ತಾ ಸತಿ ಸಹಗಮನ ಸಂಸ್ಕೃತಿಯ ತಾತ್ವಿಕತೆಯನ್ನು

ತಮ್ಮ ಸಂಶೋಧನೆಯ ಮೂಲಕ ತಿಳಿಸಿದ್ದಾರೆ.[೨೨]

ಕರ್ನಾಟಕದಲ್ಲಿ ಮಾಸ್ತಿ ಮರಣದ ವಿಷಯವನ್ನು ಪ್ರಸ್ತಾಪಿಸುತ್ತ ಅವರು ಈ ಮೌಲ್ಯಕ್ಕೆ ಕಾರಣಗಳನ್ನು ಸೂಚಿಸಿದ್ದಾರೆ.[೨೩] ಅವುಗಳೆಂದರೆ ಪತಿಯ ಮರಣದ ನಂತರ 'ಸತಿ ಮನಸಾ ಇಲ್ಲವೆ ಮನಸ್ಸಿಲ್ಲದೆ ಅನ್ಯರಿಗೆ ವಶವಾಗಬಹುದೆಂಬ ಪುರುಷನ ಪ್ರತಿಷ್ಠೆ' ಈ ಸಂಪ್ರದಾಯವನ್ನು ಪುರುಷ ಪ್ರಧಾನ ವ್ಯವಸ್ಥೆಯು ಸ್ತ್ರೀಯರಿಗಾಗಿ ರೂಪಿಸಿರುವುದು. ಪತಿಯ ಮರಣದ ತರುವಾಯ ತನ್ನ ಬದುಕುವಿಕೆ ಮತ್ತು ಪವಿತ್ರತೆಗಳ ಅನಿಶ್ಚಿತತೆಯ ಕಾರಣವಾಗಿ ಸ್ತ್ರೀ ವರ್ಗವೇ ರೂಪಿಸಿ ಕೊಂಡಿರಬಹುದು. ಇಲ್ಲವೇ ಪತಿಯ ಮರಣದ ನಂತರ ಸತಿಯನ್ನು ಮರಣ ಕೂಪಕ್ಕೆ ತಳ್ಳಿ ಅವಳ ಆಸ್ತಿಯನ್ನು ಪಡೆಯಲು ಪ್ರಭುವರ್ಗ ಇಲ್ಲವೇ ಪುರೋಹಿತ ವರ್ಗ ಈ ಯೋಜನೆ ಯನ್ನು ರೂಪಿಸಿರಬಹುದು ಎಂದು ಬ್ರಹ್ಮಶಿವನ ಮಾತುಗಳ ಮೂಲಕ ವಿವರಿಸುತ್ತಾರೆ.[೨೪]

ಸತಿಪದ್ಧತಿಯ ಕುರಿತು ಹೇಳುವ ಇವರು ದ್ರಾಕ್ಷಾಯಿಣಿ ಅಥವಾ ಸತಿದೇವಿಯು ಶಿವನ ಪರವಾಗಿ ನಿಂತು ದಕ್ಷಬ್ರಹ್ಮನ ಯಜ್ಞದಲ್ಲಿ ಪ್ರಾಣಾರ್ಪಣೆ ಮಾಡಿದ ಘಟನೆಯು ಗಂಡನಿಗಾಗಿ ಹೆಂಡತಿ ಚಿತಾಪ್ರವೇಶ ಮಾಡುವುದು ಸತಿಪದ್ಧತಿಗೆ ಮೂಲವಾಗಿರಬೇಕು ಎನ್ನುತ್ತಾರೆ.[೨೫] ಮಹಾಸತಿ ಮರಣವನ್ನು ಸಹಗಮನ ಮರಣ, ಅನುಗಮನ ಮರಣ, ಸಮಾಧಿ ಸತಿ ಎಂದು ವಿಭಾಗಿಸುವ ಮೂಲಕ ಪಂಪಭಾರತ, ಅಜಿತನಾಥ ಪುರಾಣ, ಅನಂತನಾಥ ಪುರಾಣಗಳಲ್ಲಿ ಕಂಡು ಬರುವ ಸತಿ ಮರಣದ ಉಲ್ಲೇಖಗಳನ್ನು ಮಾಡುತ್ತಾರೆ. ಮಹಾಸತಿ ಆಚರಣೆಯು ಲೌಖಿಕ ಬಲಿದಾನವಾಗಿ ಪತಿಗಾಗಿ ಪ್ರಿಯ ಸತಿಯ ಮರಣವಾದರೆ ವ್ಯಕ್ತಿಗಾಗಿ ಪ್ರಿಯ ವ್ಯಕ್ತಿಯ ಮರಣ ವೇಳೆವಾಳಿ ಮರಣ ಎನ್ನುತ್ತಾರೆ. 'ಕೀಲ್ಗುಂಟೆ ಮರಣ' ಕುರಿತು ಹೇಳುವ ಅವರು ಒಡೆಯನ ಸಮಾಧಿಯ ಚಿತೆಯ ಕೆಳಗೆ ಆಳು ಹೂಳಿಸಿಕೊಳ್ಳುವುದನ್ನು ಸೂಚಿಸುವುದೆಂದು ತಿಳಿಸುತ್ತಾರೆ.[೨೬] ಹೀಗೆ ಕೆಲವು ಆಚರಣಾತ್ಮಕ ಮನೋಭಾವದ ಮರಣ ಸಂಸ್ಕೃತಿಯ ರೂಪಗಳನ್ನು ತಮ್ಮ ಸಂಶೋಧನೆಯಲ್ಲಿ ತಿಳಿಸಿದ್ದಾರೆ.

ಕ್ರಿ.ಶ.೧೯೮೫ರಲ್ಲಿ ಪ್ರಕಟಗೊಂಡ ಬಸವರಾಜ ಕಲ್ಗುಡಿ, ಅವರ 'ಮಹಾಸತಿ ಆಚರಣೆ: ಒಂದು ಅಧ್ಯಯನ' ಎಂಬ ಗ್ರಂಥದಲ್ಲಿ ಸತಿ ವಿಷಯವಾಗಿ ಮಾಹಿತಿಗಳನ್ನು ಒದಗಿ ಸುವ ಶಾಸನ, ಜನಪದ ಗೀತೆ, ಪ್ರವಾಸಿಗರ ವರದಿ ಇತ್ಯಾದಿಗಳನ್ನು ಒಂದೆಡೆಗೆ ಸಂಗ್ರಹಿಸುವ ಪ್ರಯತ್ನ ಮಾಡಿದೆ. ಬಸವರಾಜ ಕಲ್ಗುಡಿ ಅವರು ತಮ್ಮ ಇತಿ ಮಿತಿಯಲ್ಲಿ ಕ್ಷೇತ್ರಕಾರ್ಯಗಳನ್ನು ಕೈಕೊಂಡು ಕೆಲವು ಹೊಸ ವಿಷಯವನ್ನು ಈ ಗ್ರಂಥದಲ್ಲಿ ತಿಳಿಸಿದ್ದಾರೆ.[೨೭] ಜಗತ್ತಿನ ವಿವಿಧ ಭಾಗಗಳಲ್ಲಿ ನಡೆದ ಸತಿಪದ್ಧತಿಯ ಆಚರಣೆ ಅದರ ಉಗಮ ವಿಕಾಸದ ಕುರಿತು ವಿವಿಧ

ವಿದ್ವಾಂಸರ ಅಭಿಪ್ರಾಯದೊಂದಿಗೆ ವಿವರಿಸಿದ್ದಾರೆ. ಸಹಗಮನದ ವಿವಿಧ ರೂಪಗಳು, ಮಾಸ್ತಿಕಲ್ಲಿನ ಪಟ್ಟಿಕೆಗಳು ಮತ್ತು ಚಿತ್ರಗಳು, ಸಹಗಮನಕ್ಕೆ ಕಾರಣವಾದ ಅಂಶಗಳು, ಮಾಸ್ತಿಯ ಕುರಿತು ಜನರಲ್ಲಿರುವ ನಂಬಿಕೆಗಳ ಕುರಿತು ವಿವರಿಸಿದ್ದಾರೆ.[೨೬] ಇದರೊಂದಿಗೆ ವಿದೇಶಿ ಪ್ರವಾಸಿಗರು ವರದಿ ಮಾಡಿರುವ ವಿವರಗಳನ್ನು ನೀಡಿದ್ದಾರೆ. ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿದ ಮಹಾಸತಿಯ ವಿವರಗಳೊಂದಿಗೆ ಜನಪದ ಗೀತೆಗಳು, ಕಥೆಗಳ ಕುರಿತು ಪೂರಕ ವಿಶ್ಲೇಷಣೆಯನ್ನು ಮಾಡಿರುವುದನ್ನು ಗಮನಿಸಬಹುದು.

ಕನ್ನಡ ಸಂಶೋಧನಾ ಕ್ಷೇತ್ರದಲ್ಲಿ ಅತ್ಯಂತ ವಿಶಿಷ್ಟ ಸಂಶೋಧನಾ ಕೃತಿಯಾದ 'ಆತ್ಮ ಬಲಿದಾನ'ವು ಜೆ.ಎಂ.ನಾಗಯ್ಯ ಅವರ ಕ್ಷೇತ್ರಕಾರ್ಯದ ಸುಮಾರು ೭೫೫ ಪುಟಗಳ ಕೃತಿಯಾಗಿದ್ದು, ಇದು ಪ್ರಾಚೀನ ಸಾಹಿತ್ಯ, ಮಧ್ಯಕಾಲೀನ ಸಾಹಿತ್ಯ, ಶಾಸನ ಸಾಹಿತ್ಯ, ಜನಪದ ಸಾಹಿತ್ಯ, ವಿದೇಶಿ ಪ್ರವಾಸಿಗರ ವರದಿಗಳು ಎಂಬ ಮೊದಲಾದ ಆಕರಗಳನ್ನು ಸಂಗ್ರಹಿಸಿಕೊಂಡು ಸಿದ್ಧಗೊಂಡಿದೆ.[೨೭] ಮೊದಲನೆಯ ಅಧ್ಯಾಯದಲ್ಲಿ ಕರ್ನಾಟಕದ ವೀರಮರಣ ಪರಂಪರೆಗೆ ಸಂಬಂಧಿಸಿದಂತೆ ತಿಳಿಸುತ್ತ, ಜನತೆಯ ಬದುಕಿನಲ್ಲಿ ಕಂಡ ಜೀವನ ಮೌಲ್ಯಗಳನ್ನು ಗುರುತಿಸುತ್ತ ಅವುಗಳನ್ನು ಶರಣಾಗತ ರಕ್ಷಣೆ, ಸ್ವಾಭಿಮಾನ, ನುಡಿದಂತೆ ನಡೆಮೌಲ್ಯ, ವೀರಮೌಲ್ಯ, ದಾನಗುಣ, ಆತ್ಮ ಬಲಿದಾನ ಒಂದು ಮೌಲ್ಯ ಮಹಾಸತಿ ಆಚರಣೆ ಒಂದು ಮೌಲ್ಯವೆಂದು ಚಿಂತನೆ ಮಾಡುತ್ತಾರೆ.[೨೮]

ಲೌಖಿಕ ಆತ್ಮಬಲಿದಾನವನ್ನು ತಿಳಿಸುತ್ತ ಸ್ತ್ರೀಯರ ಉದಾತ್ತ ಆತ್ಮಬಲಿದಾನದಲ್ಲಿ ಸಹಗಮನ ಅನುಗಮನ, ಸಮಾಧಿಸತಿ, ಜೋಹರ್‌ಪದ್ಧತಿ, ಮರಣವನ್ನು ಗುರುತಿಸುತ್ತಾರೆ. ಇವರು ವಿವಿಧ ಮರಣಗಳನ್ನು ಕುರಿತು ನವೀನ ಮಾದರಿಯಲ್ಲಿ ಚಿಂತನೆ ಮಾಡಿದ್ದಾರೆ. ಈ ಸಂಶೋಧಕರ ಕೃತಿ ಲೇಖನಗಳಲ್ಲದೇ ಮತ್ತಷ್ಟು ವಿದ್ವಾಂಸರ ಬೇರೆ ಬೇರೆ ಚರ್ಚೆಗಳನ್ನು ಗಮನಿಸಬಹುದು.[೨೯] ಹೀಗೆ ಇಲ್ಲಿ ಸತಿಪದ್ಧತಿಯ ಕುರಿತು ಸಂಶೋಧನಾ ವಿಷಯಕ್ಕೆ ಸಂಬಂಧಿಸಿದಂತೆ ಈ ವರೆಗೂ ನಡೆದ ಸಂಶೋಧಕರ ಸಂಶೋಧನಾಕೃತಿ ವಿಚಾರಗಳನ್ನು ಕೃತಿ ಸಮೀಕ್ಷೆಗಳ ಹಿನ್ನೆಲೆಯಲ್ಲಿ ಚರ್ಚೆ ಮಾಡಲಾಗಿದೆ. ಈ ದೃಷ್ಟಿಯಿಂದಲೇ ಆಧುನಿಕ ಪೂರ್ವ ಸಾಮಾಜಿಕ ಜೀವನದ ಒಂದು ಮಹತ್ವದ ಭಾಗವಾಗಿರುವ ಸತಿಪದ್ಧತಿಯನ್ನು ಕುರಿತು ಇಲ್ಲಿ ಅಧ್ಯಯನ ನಡೆಸಲಾಗಿದೆ.

ಈ ಗ್ರಂಥಗಳಷ್ಟೆ ಅಲ್ಲದೇ ಸತಿ ಪದ್ಧತಿಗೆ ಸಂಬಂಧಿಸಿದ ಉಪಯುಕ್ತ ಲೇಖನಗಳನ್ನು ಬಳಸಿಕೊಳ್ಳಲಾಗಿದೆ. ಅವುಗಳೆಂದರೆ ಎಡ್ವರ್ಡ್ ಥಾಮ್ಸನ್‌ರ ಸತಿ, ಪಿ.ವಿ.ಕಾಣೆ ಅವರ ಹಿಸ್ಟ್ರಿ ಆಫ್ ಧರ್ಮಶಾಸ್ತ್ರ, ಎ.ಎಸ್. ಅಲ್ತೇಕರ್ ಅವರ ದಿ ಪೊಜಿಶನ್ ಆಫ್ ವುಮೆನ್ ಇನ್ ಹಿಂದೂ ಸಿವಿಲೈಜೇಶನ್, ಬಿ.ಎ. ಸಾಲೆತೊರೆ ಅವರ ಸೋಸಿಯಲ್ ಆ್ಯಂಡ್ ಪೊಲಿಟಿಕಲ್

ಲೈಫ್ ಇನ್ ವಿಜಯನಗರ ಎಂಪಾಯರ್ ಈ ಮೊದಲಾದ ಗ್ರಂಥಗಳು ಸತಿಪದ್ಧತಿಯ ಕುರಿತಾಗಿ ವಿವರವಾದ ವಿಷಯ ನಿರೂಪಣೆ ಮಾಡುತ್ತವೆ. ದಿ ಇಲುಸ್ಟ್ರೇಟೆಡ್ ವೀಕ್ಲಿ ಆಫ್ ಇಂಡಿಯಾ, ಸಂಡೇ ಸ್ಟ್ಯಾಂಡರ್ಡ್, ಮಿರರ್, ಉತ್ಥಾನ್, ಸಾಧನೆ, ತರಂಗ, ಸಂಯುಕ್ತ ಕರ್ನಾಟಕ, ಪ್ರಜಾವಾಣಿ, ಮೊದಲಾದ ಪತ್ರಿಕೆಗಳಲ್ಲಿ ಕೆಲವು ಮಹತ್ವದ ಸತಿ ಲೇಖನಗಳು ಸುದ್ದಿಗಳು ಪ್ರಕಟಗೊಂಡಿರುವುದನ್ನು ಇಲ್ಲಿ ಸ್ಮರಿಸಲಾಗಿದೆ. ಇವುಗಳನ್ನು ಈ ಮಹಾಪ್ರಬಂಧದಲ್ಲಿ ಅವಶ್ಯಕತೆಗೆ ಅನುಗುಣವಾಗಿ ಬಳಸಿಕೊಳ್ಳಲಾಗಿದೆ. ಈ ಎಲ್ಲ ಸಾಮಗ್ರಿಗಳನ್ನು ಎದುರಿಗಿಟ್ಟುಕೊಂಡು, "ಆಧುನಿಕ ಪೂರ್ವ ಕನ್ನಡ ಸಾಹಿತ್ಯದಲ್ಲಿ ಸತಿಪದ್ಧತಿ" ಎಂಬ ಮಹಾಪ್ರಬಂಧದ ಮೂಲಕ ಸ್ತ್ರೀ ಸಮುದಾಯದ ಬದುಕಿನ ಸಾಂಸ್ಕೃತಿಕ ಇತಿಹಾಸವನ್ನು ಕಟ್ಟಿಕೊಡಲಾಗಿದೆ.

೩. ಲೇಖನ

ಜ್ಯೋತ್ಸ್ನಾ ಕಾಮತ್ ಅವರ 'ಸತಿಯ ಸಿಂಗಾರ' ಎಂಬ ಲೇಖನವು ಎಂ. ಚಿದಾನಂದ ಮೂರ್ತಿ ಅವರ 'ಸಂಶೋಧನ' ಎಂಬ ಅಭಿನಂದನ ಗ್ರಂಥದಲ್ಲಿ ಪ್ರಕಟವಾಗಿದೆ. ಈ ಲೇಖನದಲ್ಲಿ ಮೂವತ್ತೊಂದು ಬಗೆಯ ಶಾಸನ ಶಿಲ್ಪಗಳನ್ನು ಸಂಗ್ರಹಿಸಿ ಅವುಗಳ ಚಿತ್ರ ರಚನೆಯ ಸ್ವರೂಪಗಳನ್ನು ಕೇಂದ್ರವಾಗಿಟ್ಟುಕೊಂಡು ಮಹಾಸತಿ ಹೋಗುವ ಸಂದರ್ಭದಲ್ಲಿ ಅವಳು ಮಾಡಿಕೊಳ್ಳುತ್ತಿದ್ದ ಅಲಂಕಾರ, ಸತಿ ಸಿಂಗಾರದ ಸ್ವರೂಪಗಳನ್ನು ವಿವಿಧ ರೀತಿಯಲ್ಲಿ ಸಂಶೋಧನೆ ಮಾಡಿದ್ದಾರೆ.[೨೦] ಮಹಾಸತಿ ಕಲ್ಲುಗಳನ್ನು ಅಭ್ಯಸಿಸಿದ ಇವರು "ಮಹಾಸತಿ ಹೋಗುವಾಗ ಮಂಗಳ ವಾದ್ಯಗಳು ಮೊಳಗುತ್ತಿರುವ, ಪರಿವಾರದವರು ಅಗ್ನಿಕುಂಡಕ್ಕೆ ಕೊರಡು, ಕರ್ಪೂರ, ಎಣ್ಣೆ ಸೇರಿಸಿ ಪ್ರಜ್ವಲಿಸುವಂತೆ ಮಾಡುತ್ತಿರುವ ಹಾಗೂ ಸತಿ ಹೋಗಲಿರುವ ಸ್ತ್ರೀ ಸರ್ವಾಂಗ ಭೂಷಿತೆಯಾಗಿ ಗೆಲುವಾಗಿಯೇ ಅಗ್ನಿಪ್ರವೇಶ ಮಾಡುತ್ತಿರುವ ಚಿತ್ರಣವಿದೆ"[೨೧] ಎನ್ನುತ್ತಾರೆ.

'ಸೂರ್ಯಲೋಕದಲ್ಲಿ ತನಗಾಗಿ ಕಾಯುತ್ತಿರುವ ಪತಿಯನ್ನು ಎದುರುಗೊಳ್ಳಲು ಹೊರಟ ಸತಿಯು ತಾನು ಸರ್ವಾಂಗ ಭೂಷಿತೆಯಾಗಿ ಸ್ವರ್ಗದಲ್ಲಿರುವ ತನ್ನ ಪತಿಯನ್ನು ಎದುರುಗೊಳ್ಳ ಬೇಕೆಂದು ಶೃಂಗರಿಸಿಕೊಳ್ಳುತ್ತಿದ್ದರು ಎಂದು ಶೃಂಗರಿಸಿಕೊಳ್ಳುವುದರ ಕಾರಣ ತಿಳಿಸುತ್ತಾರೆ.[೨೨] ಮಹಾಸತಿ ಕಲ್ಲುಗಳನ್ನು ಸೂಕ್ಷ್ಮವಾಗಿ ಅಭ್ಯಸಿಸಿದ ಅವರು 'ಮಹಾಸತಿ' ಶಾಸನ, ಶಿಲ್ಪ, ಸ್ಮಾರಕ ಗಳಲ್ಲಿ ಕೆತ್ತಲ್ಪಟ್ಟ ಸತಿ ಸಿಂಗಾರದ ಚಿತ್ರಣವನ್ನು ಕುರಿತು ಹೀಗೆ ವಿವರಿಸಿದ್ದಾರೆ. ಸತಿಯು ಎಡೆಮುಡಿ, ಬಲಮುಡಿಯಲ್ಲಿ ಹಾಕಿಕೊಂಡ ಗೊಂಡೆ, ಹೂಹಾರ, ಕೇದಿಗೆ, ಕಮಲದ ದಳಗಳು ಸುಂದರ ಚಿತ್ರಣವನ್ನು ನೀಡುವುದರೊಂದಿಗೆ ಹೆಣ್ಣಿನ ಸೌಂದರ್ಯದ ಮಹತ್ವವನ್ನು ತೋರಿಸಿವೆ ಎಂದಿದ್ದಾರೆ.[೨೩] ಸತಿ ಹೋಗುವವಳು ಭವ್ಯ ಬೆಂಡೋಲೆಗಳು, ತೋಳ್ಬಂದಿ, ಮುತ್ತಿನಸರ,

ಮಾಂಗಳಸೂತ್ರ ಕಸೂತಿಯುಕ್ತ ಕುಚ್ಚ ವಸ್ತ್ರಗಳನ್ನು ಧರಿಸಿಕೊಂಡು ಹೋಗುತ್ತಿದ್ದಳೆಂದು ವಿವರಿಸಿದ್ದಾರೆ.[೧೧] ಸ್ಮಾರಕಗಳಲ್ಲಿ ಸತಿಯರ ಹಸ್ತಗಳ ಭಂಗಿಗಳಿಗೆ ಹೆಚ್ಚಿನ ಮಹತ್ವ ಕೊಡಲಾಗಿದೆ. ಸ್ಮಾರಕದಲ್ಲಿ ಸತಿಯು ಆಶೀರ್ವಾದ ಮಾಡುವ, ಪ್ರಿಯ ಪತಿಯನ್ನು ಹಿಂಬಾಲಿಸುತ್ತಿದ್ದೇನೆಂದು ಬಲಗೈಯನ್ನು ಎತ್ತಿ ತೋರಿಸುವ, ಉದ್ದವಾದ ಉಗುರುಗಳನ್ನು ಬೆಳೆಸಿಕೊಂಡು ಹೆಬ್ಬೆರಳುಗಳಿಗೆ ಉಂಗುರಗಳನ್ನು ತೊಟ್ಟುಕೊಂಡು, ಹಸ್ತದಲ್ಲಿ ಪದ್ಮ ಪುಷ್ಪ ಹಿಡಿಸಿಕೊಂಡು, ತೋರ ಬೆರಳ ನಡುವೆ ಹೊಂಬಣ್ಣದ ಗಜನಿಂಬೆ, ಕಂಚಿಹಣ್ಣು, ಮಾದಳಫಲಗಳನ್ನು ಹಿಡಿದುಕೊಂಡು ಹೋಗುತ್ತಿರುವುದನ್ನು ಕುರಿತು ವಿವರಿಸುತ್ತಾರೆ.[೧೨]

ಸತಿಹೋಗುವ ಹೆಣ್ಣು ಕಲಾಪತ್ತಿನಸೀರೆ, ಸೊಂಟದಪಟ್ಟಿ, ಸರಗಳ ತೂಗು, ಅಂಗವಸ್ತ್ರ, ಜಲಪಾತದಂತೆ ಹರಿಯಬಿಟ್ಟ ನಿರಿಗೆ, ಕಾಲಗೆಜ್ಜೆ, ಕಾಲ್ಬೆರಳಿಗೆ ಹಾಕಿದ ಸುತ್ತುಂಗುರ, ಕೇದಿಗೆಯ ಶಿರೋಲಂಕಾರ, ಮೂಗು, ಕಿವಿ, ಕೊರಳ ಅಲಂಕಾರ, ಬಲಗೈಯಲ್ಲಿ ಹಿಡಿದ ಲಿಂಬೆಹಣ್ಣು, ಇನ್ನೊಂದು ಕೈಯಲ್ಲಿ ಎಣ್ಣೆ ಪಾತ್ರೆ ಹಿಡಿದಿರುವ ರಹಸ್ಯಗಳು ಸತಿ ಸ್ಮಾರಕಗಳಲ್ಲಿ ಇರುವುದನ್ನು ತಮ್ಮ ಸಂಶೋಧನ ದೃಷ್ಟಿಯಿಂದ ಪರಿಚಯಿಸಿದ್ದಾರೆ.[೧೩]

ದೇವರಕೊಂಡಾರೆಡ್ಡಿ ಅವರು ಮಾಸ್ತಿಕಲ್ಲುಗಳಲ್ಲಿ ವ್ಯಕ್ತವಾದ ಮಹಾಸತಿ ಆಚರಣೆಯ ವಿಶಿಷ್ಟತೆಯನ್ನು 'ಕರ್ನಾಟಕದಲ್ಲಿ ಮಾಸ್ತಿ' ಎಂಬ ಲೇಖನದಲ್ಲಿ ಚರ್ಚಿಸಿದ್ದಾರೆ.[೧೪] ಮಾಸ್ತಿಕಲ್ಲುಗಳಲ್ಲಿ ಸ್ವತಂತ್ರ ಮನೋಧರ್ಮದವರು ಸತಿಘಟನೆಗಳನ್ನು ಕಂಡಂತೆ ಕಲ್ಲಿನಲ್ಲಿ ಕಂಡರಿಸಲು ಪ್ರಯತ್ನಿಸಿದ್ದಾರೆ. ಮೃತನ ಪತ್ನಿ ಸತಿ ಹೋದ ಬಗೆ, ಅವಳ ಗಂಡ ಮಡಿದ ಕಾರಣ, ಸತಿ ಹೋಗುವಾಗ ಬಳಸುವ ಆಭರಣಗಳು, ಆಚರಿಸಿರುವ ಆಚರಣೆಗಳು ಶಿಲ್ಪದಲ್ಲಿ ಒಡಮೂಡಿವೆ ಎಂದಿದ್ದಾರೆ. ಮಾಸ್ತಿಕಲ್ಲುಗಳಲ್ಲಿ ಕೆತ್ತಿದ ಸ್ತ್ರೀಯರ ಚಿತ್ರವನ್ನು ಕುರಿತು ಮಾತನಾಡುವ ಇವರು ಮಾಸ್ತಿಕಲ್ಲಿನಲ್ಲಿ ಹೆಂಗಸಿನ ಚಿತ್ರದ ಕೆತ್ತನೆ ಇದ್ದು, ಇಲ್ಲಿ ಕೈಯನ್ನು ಮೇಲಕ್ಕೆತ್ತಿ ಅಂಗೈಯಲ್ಲಿ ಯಾವುದೋ ವಸ್ತುವನ್ನು ಹಿಡಿದುಕೊಂಡು ನಿಂತಿರುವ ಚಿತ್ರಣವಿದೆ ಎನ್ನುತ್ತಾರೆ. ಇನ್ನು ಕೆಲವು ಶಿಲ್ಪಗಳಲ್ಲಿ ಅಗ್ನಿ ಜ್ವಾಲೆಯ ಚಿತ್ರಣವಿದ್ದು ಬಲಗೈಯನ್ನು ಮೇಲಕ್ಕೆತ್ತಿರುವ ಹಾಗೂ ಪದ್ಮಾಸನ ಹಾಕಿರುವ ಹೆಂಗಸರನ್ನು ಕೆತ್ತಲಾಗಿದೆ. ಹೀಗೆ ಕೆತ್ತಲಾದ ಮಾಸ್ತಿ ಶಿಲ್ಪಗಳು ಪತಿಯ ಮರಣದ ಕಾರಣವನ್ನು ಅಭಿವ್ಯಕ್ತಿಸುವ ಮೂಲಕ ಸೌಭಾಗ್ಯ ಚಿಹ್ನೆಗಳನ್ನು ಸೂಚಿಸುತ್ತವೆ. ಎಂದು ಹೇಳುವ ಮೂಲಕ ಸತಿಘಟನೆಯ ಕೆಲವು ನೈಜ ಚಿತ್ರಗಳು ನಮ್ಮ ಬದುಕಿಗೆ ತೀರ ಹತ್ತಿರವಾದವುಗಳು ಎಂದಿದ್ದಾರೆ.

ಅಡಿ ಟಿಪ್ಪಣಿಗಳು

೧. ನಿಂಗಣ್ಣ ಚಿ.ಸಿ.(ಸಂ) ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ, ೨೦೧೦, ಪು.೧

೨. ಕಲಬುರ್ಗಿ ಎಂ.ಎಂ., ಮಾರ್ಗ ಸಂಪುಟ-೧, ೧೯೯೫, ಪು.೬೭

೩. ಬಸವರಾಜ ಕಲ್ಗುಡಿ, ಮಹಾಸತಿ ಆಚರಣೆ ಒಂದು ಅಧ್ಯಯನ, ಪು.೩

೪. ಅದೇ, ಪು.೪೬

೫. ಶರ್ಮಾ ತೀ.ತಾ., ಸಂಭಾವನೆ, ವೀರಗಲ್ಲು-ಮಾಸ್ತಿಗಲ್ಲು, ಪು.೧೫೪

೬. ನಾಗಯ್ಯ ಜೆ.ಎಂ., ಆತ್ಮಬಲಿದಾನ, ೨೦೧೭, ಪು.ಸಂ.೫

೭. ಅದೇ, ಪು.೪೦೧-೪೦೨

೮. ಪ್ರಜಾವಾಣಿ ಪತ್ರಿಕೆಯು ವರದಿ ನವೆಂಬರ ೨೧-೨೦೧೮, ಪು.೭

೯. ಚಿದಾನಂದಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ೧೯೭೯, ಪು.೩೪೬

೧೦. ಅದೇ. ಪು.೩೫೦

೧೧. ಶ್ರೀಕಂಠಯ್ಯ ತೀ.ನಂ.(ಸಂ), ರನ್ನನ ಗದಾಯುದ್ಧ ಸಂಗ್ರಹ, ೧೯೯೯, ಪು.೩೭೫

೧೨. ಅನಂತರಂಗಾಚಾರ್ ಎನ್. (ಸಂ) ಪಂಪಭಾರತಂ, ೨೦೧೧, ಪು.೬೧೯. ೧೨-೧೬೮

೧೩. ಅದೇ. ಪು.೬೧೯, ೧೩-೧೯

೧೪. ಚೆನ್ನಕ್ಕ ಎಲಿಗಾರ, ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ, ೧೯೮೦, ಪು.೪೧೭-೪೫೯

೧೫. ದೇವೀರಪ್ಪ ಎಚ್. ಪದ್ಮನಾಭಶರ್ಮ ಎಂ.ಸಿ.(ಸಂ), ಅನಂತನಾಥ ಪುರಾಣಂ, ೧೯೭೨, ಪು.೨೯೨, ೧೪-೫೩

೧೬. ಶೇಷಶಾಸ್ತ್ರಿ ಆರ್., ಕರ್ನಾಟಕದ ವೀರಗಲ್ಲುಗಳು, ೨೦೦೪, ಪು.೪೨

೧೭. ಶೇಠ ಜಿ.ಎಸ್., ಕರ್ನಾಟಕದಲ್ಲಿ ಸತಿ ಪದ್ಧತಿ, ೧೯೯೧, ಪು.೧೬೭-೨೦೨

೧೮. ಅದೇ, ಪು.೨೨೭-೨೪೪

೧೯. ಅದೇ, ಪು.೧೬೭-೧೮೦

೨೦. ಪರಮಶಿವಮೂರ್ತಿ ಡಿ.ವಿ., ಕನ್ನಡ ಶಾಸನ ಶಿಲ್ಪ, ೧೯೯೯, ಪು.೩೨

೨೧. ಕಲಬುರ್ಗಿ ಎಂ.ಎಂ., ಸಮಾಧಿ–ಬಲಿದಾನ–ವೀರಮರಣ ಸ್ಮಾರಕಗಳು, ೨೦೧೧, ಪು.೮೪–೮೫

೨೨. ಶ್ರೀಕಂಠಯ್ಯ ತೀ.ನಂ., ರನ್ನನ ಗದಾಯುದ್ಧ ಸಂಗ್ರಹ, ೧೯೯೯, ಪು.೫–೧೬

೨೩. ಅನಂತರಂಗಾಚಾರ್ ಎನ್.(ಸಂ), ಪಂಪ ಭಾರತಂ, ೨೦೧೧, ಪು.೬೧೯

೨೪. ಕಲಬುರ್ಗಿ ಎಂ.ಎಂ., ಆತ್ಮಬಲಿದಾನ: ಬ್ರಹ್ಮಶಿವನ ವಿಚಾರಗಳು, ಸಂ.೧, ೧೯೭೪, ಪು.೭೦

೨೫. ಶಿವಮೂರ್ತಿಶಾಸ್ತ್ರಿ ಬಿ.(ಸಂ), ವಿರೇಶ ಚರಿತೆ, ೨೦೦೪, ಪು.೨೩ ೧–೬೮

೨೬. ನಾಗಯ್ಯ ಜೆ.ಎಂ. ಹಿರೇಮಠ ಕೆ.ಎಸ್.(ಸಂ), ಮಹಾಮರಣ, ೨೦೧೧, ಪು.೧೪–೧೫

೨೭. ಬಸವರಾಜ ಕಲ್ಗುಡಿ, ಮಹಾಸತಿ ಆಚರಣೆ: ಒಂದು ಅಧ್ಯಯನ ಪು.೪೫–೬೭

೨೮. ಅದೇ ಪು.೮೮

೨೯. ಕಾಮತ್ ಜ್ಯೋತ್ಸ್ನಾ, ಸತಿಯ ಸಿಂಗಾರ, ಸಂಶೋಧನ(ಎಂ.ಚಿದಾನಂದಮೂರ್ತಿ, ಗೌರವ ಅಭಿನಂದನ ಗ್ರಂಥ) ಸಂ,ಲಕ್ಷ್ಮಣ ತೆಲಗಾವಿ, ೧೯೯೧, ಪು.೮೦೪

೩೦. ಅದೇ, ಪು.೮೦೬

೩೧. ಅದೇ, ಪು.೮೦೭

೩೨. ಅದೇ, ಪು.೮೦೮

೩೩. ಅದೇ, ಪು.೮೦೯–೮೧೦

೩೪. ಅದೇ, ಪು.೮೧೧

೩೫. ದೇವರಕೊಂಡಾರೆಡ್ಡಿ, ಕರ್ನಾಟಕದಲ್ಲಿ ಮಾಸ್ತಿ, ಸಾಧನೆ, ಸಂಪುಟ–೪, ಭಾಗ–೨, ೧೯೭೫, ಪು.೨೧೮

೩೬ ನಾಗಯ್ಯ, ಜೆ.ಎಂ., ಆತ್ಮಬಲಿದಾನ, ೨೦೧೭, ಪು.೩೫೨–೪೬೬

೩೭ ಅದೇ, ಪು.೧–೨

೩೮ ಅದೇ, ಪು.೮೩

ಅಧ್ಯಾಯ : ಎರಡು

ಸತಿಪದ್ಧತಿಯ ನಿರ್ವಚನ ಹಾಗೂ ಚಾರಿತ್ರಿಕ ಸಮೀಕ್ಷೆ

೨.೧. ಸತಿಪದ್ಧತಿ ಅರ್ಥ

೨.೨. ಸತಿಪದ್ಧತಿ ಕಾರಣಗಳು

೨.೩. ಸತಿಪದ್ಧತಿ ಆಚರಣೆಗಳು

೨.೪. ಸತಿಪದ್ಧತಿ ಚಾರಿತ್ರಿಕ ವಿಶ್ಲೇಷಣೆ

ಅಧ್ಯಾಯ : ಎರಡು

ಸತಿಪದ್ಧತಿ ನಿರ್ವಚನ ಮತ್ತು ಚಾರಿತ್ರಿಕ ಸಮೀಕ್ಷೆ

ಪ್ರಾಚೀನ ಕಾಲದ ಆತ್ಮ ಬಲಿದಾನ ಪ್ರಕ್ರಿಯೆಯಲ್ಲಿ ಸ್ತ್ರೀಯರು ಪುರುಷರಿಗಿಂತ ಹೆಚ್ಚು ಭಾಗವಹಿಸಿ, ಲೌಕಿಕ ಮತ್ತು ಧಾರ್ಮಿಕ ಪ್ರಕಾರಗಳಲ್ಲಿ ಆತ್ಮಬಲಿದಾನದ ಮೂಲಕ ಬಲಿಯಾಗಿದ್ದಾರೆ. ಅದರಲ್ಲೂ ಸ್ತ್ರೀ ಶೋಷಣೆಯ ಗರಿಷ್ಠ ಮಟ್ಟ ತಲುಪಿದ್ದು ಸತಿ ಸಹಗಮನದಂತಹ ಮೌಲ್ಯಗಳ ಆಚರಣೆಯ ಸಂದರ್ಭದಲ್ಲಿ. ಮಹಾಸತಿ ಸಂಪ್ರದಾಯ ಉತ್ತರ ಭಾರತದಲ್ಲಿ ಸಾಕಷ್ಟು ಪ್ರಚಾರದಲ್ಲಿದ್ದು ಉಗ್ರರೂಪದಲ್ಲಿ ಆಚರಿಸಲ್ಪಟ್ಟರೆ, ದಕ್ಷಿಣ ಭಾರತದಲ್ಲಿ ಅದು ಸೌಮ್ಯ ಸ್ವರೂಪದಲ್ಲಿ ಆಚರಿಸಲ್ಪಟ್ಟಿದ್ದು ಕಂಡುಬರುತ್ತದೆ. ಈ ಸಂಪ್ರದಾಯ ಪ್ರಾಚೀನ ಕಾಲದಿಂದಲೇ ಅಸ್ತಿತ್ವದಲ್ಲಿದ್ದುದನ್ನು ಜನಪದ ಸಾಹಿತ್ಯ ಕೃತಿಗಳು, ಪ್ರಾಚೀನ ಕಾವ್ಯಗಳು, ಶಾಸನಗಳು, ಸ್ಮಾರಕಗಳು, ವಿದೇಶಿ ಬರಹಗಳು ತಿಳಿಸುತ್ತವೆ.

೨.೧. ಸತಿಪದ್ಧತಿ ಅರ್ಥ

ಸತಿ ಪದ್ಧತಿಯ ಅರ್ಥ ಉಗಮದ ಕುರಿತು ವಿವಿಧ ವಿದ್ವಾಂಸರಲ್ಲಿ ವಾದ–ವಿವಾದಗಳಿವೆ. ಜಗತ್ತಿನ ವಿವಿಧ ಭಾಗಗಳಲ್ಲಿ ವಿವಿಧ ಜನಾಂಗಗಳಲ್ಲಿ ಇದು ಆಚರಣೆಯಲ್ಲಿರುವುದೇ ಇದಕ್ಕೆ ಕಾರಣವಾಗಿದೆ. 'ಸತಿ' ಪದ ವಿಶಾಲಾರ್ಥದಲ್ಲಿ 'ಸ್ತ್ರೀ' ಎಂಬುವುದನ್ನು ಸೂಚಿಸುವುದಾಗಿದ್ದರೂ, ಸಾಂಸ್ಕೃತಿಕ ಪರಿಭಾಷೆಯಲ್ಲಿ ಅದು ಗಂಡನ ಮರಣದ ನಂತರ ನಿಧನ ಹೊಂದುವ ಪತ್ನಿಯನ್ನು ಸೂಚಿಸುವುದಾಗಿದೆ. 'ಸಹಗಮನ' ಎನ್ನುವ ಪದ ಒಂದು ಅರ್ಥದಲ್ಲಿ ಸತಿಯಾದುದನ್ನು ಹೇಳಿದರೂ, ಇನ್ನೊಂದು ಅರ್ಥದಲ್ಲಿ 'ಗಂಡನ ಜೊತೆಗೆ ಸಹಧರ್ಮಿಣಿಯಾಗಿ ಹೋದ ಅರ್ಥವನ್ನು ಹೇಳುತ್ತದೆ. ಗಂಡನನ್ನು ಹೆಂಡತಿ ಅನುಸರಿಸಬೇಕೆನ್ನುವ ಸಂಪ್ರದಾಯಸ್ಥ ನಂಬಿಕೆಯನ್ನು ಪುಷ್ಠಿಗೊಳಿಸುವ ಅರ್ಥವನ್ನು ಹೊಂದಿದೆ. "ಸ್ವಸ್ತಿ ಶ್ರೀಮತು ಶಕವರುಷ ೧೩೭೭ನೆಯ ಯಿವಸಂ ಅಶ್ವಯಿಜ ಸುದ ಹತ್ತು ಆಲ ಮಾರುವ ತೂರಗಣಪ ಗವುಡರ ಮಗ ಬೊಂಮ ಗವುಡರು

ಸ್ವರ್ಗಸ್ತನಾದಂ. ಆತನ ಮದವಳಿಗಿ ಬೊಂಮಿಗಉಡಿ ಸಹಗಮನವ ಮಾಡಿದಳು ಮಂಗಳ ಮಹಾಶ್ರೀ”[೧] ಎಂಬ ಉಲ್ಲೇಖವಿದೆ.

ಇಲ್ಲಿ ಉಲ್ಲೇಖಗೊಂಡ ಕೂಡಿಹೋಗು, ಕೂಡಿಸಾಯಿ, ಎಂಬ ಪದಗಳು ಸಹಗಮನದ ಸಮಾನ ರೂಪಗಳೆನ್ನುವುದರಲ್ಲಿ ಸಂದೇಹವಿಲ್ಲ. ಸಹ, ಜೊತೆ, ಕೂಡಿ ಎನ್ನುವ ಪದಗಳನ್ನು ಸಹಗಮನದ ಸಂದರ್ಭದಲ್ಲಿ ಬಳಸಲಾಗಿದೆ. ಬಹುಪಾಲು ಶಾಸನಗಳಲ್ಲಿ ಅಗ್ನಿ ಪ್ರವೇಶ ಮಾಡದೆ ಬೇರೆ ರೀತಿಯಲ್ಲಿ ಗಂಡನ ಜೊತೆಗೆ ಸಾವನ್ನುಹೊಂದಿದ ವಿವರಗಳಿವೆ. ಇವೆಲ್ಲವೂ ಸಹಗಮನವೆಂದು ಗುರುತಿಸಿಕೊಳ್ಳಲಾಗುವುದಿಲ್ಲ. ವಿಶೇಷವಾಗಿ ಇದು ಅಗ್ನಿ ಪ್ರವೇಶವನ್ನೇ ಈ ಪದ ಸೂಚಿಸುತ್ತದೆ. ಆದರೂ ಸಹಗಮನ ಮಾಡಿದಳು, ಸಹಸಂಗತಿಯಿಡಿದಳು, ಸಹಾನೂಭೂತಿಯನ್ನು ಹೊಂದಿ ಸ್ವರ್ಗಕ್ಕೆ ಹೋದಳು ಎಂಬ ವಿಭಿನ್ನ ಪದಗಳನ್ನು ಇಲ್ಲಿ ಬಳಸಲಾಗಿದೆ. “ವಿಜಯನಗರದ ಮಲ್ಲಿಕಾರ್ಜುನರಾಯರು ವೇಂಟಿಯದ ಚಂದ್ರಗುತ್ತಿಯ ವೇಂಟೆಯದ ಹರಲೂರ ಅಮಂಗ ಉಡನಬಯಿರಗುಡಿ ತಂದು ಸ್ತ್ರೀಯರು ಸಹ ಸಂಗತಿಯಿಡಿದರು.”[೨]

‘ಮಹಾಸತಿ’ ಎಂಬುದರ ತದ್ಭವ ರೂಪ ‘ಮಾಸ್ತಿ’ ಎಂದಾಗಿದೆ. ಮಹಾಸತಿಯಾಗು, ಮಾಸತಿಯಾಗು, ಮಾಸ್ತಿಯಾಗು ಎನ್ನುವ ಕ್ರಿಯಾಪದಗಳು ಕೂಡ ‘ಸಹಗಮನ ಮಾಡು’ ಎನ್ನುವ ಅರ್ಥದಲ್ಲೇ ಬಳಕೆಯಾಗುತ್ತವೆ. “ಸ್ವಸ್ತಿ ಶ್ರೀ ವೀರಬಲ್ಲಾಳ ದೇವರ ರಾಜ್ಯದಲು ಮಲೆಊರ ವೀರಪದೇವರು ಊರ ತುರುವಂ ಸೂರೆ ಕೊಳ್ವಾಗ ಪಲರನದಿಚ್ಚಿಕೊಂಡು ಸುರಲೋಕಕೆ ಸಂದೊಡೆ ಆತನ ಸತಿ ಮಂಚಾಯಿ ಮಾಸತಿಯಾದಳು.”[೩] “ದುಂಮಸ್ತಲದ ಕಾರಬ್ಬೆಗಳು ಸಕಾಬ್ದ ೧೧೫೮ನೇ ವಿಳಂಬ ಆಷಾಢಸುದ ೧೦ ಮಂಗಳವಾರದಂದು ಸತಿ.”[೪] “ಶ್ರೀಮತು ಹನುವಳಿಯ ವಿದರ ಕರಿಯ ಬೊಂಮಮ ನಾಯ್ಕನು ಸ್ವರ್ಗಾಸ್ತನಾದಲ್ಲಿ ಕಾಮೆಯ ನಾಕಿತ್ತಿ ಮಹಾಸತಿಯಾದಳು ಶ್ರೀ”[೫] ಎಂದು ತಿಳಿದು ಬರುತ್ತವೆ.

ಮಾಸ್ತಿ ಕಲ್ಲುಗಳನ್ನು ಹುಡುಕುತ್ತಾ ಹೋದಾಗ, ಚಿತ್ರಗಳಿರುವ ಮಾಸ್ತಿಕಲ್ಲುಗಳೆ ಹೆಚ್ಚು ಕಂಡು ಬರುತ್ತವೆ ಹೊರತೂ ಬರವಣಿಗೆಗಳಿರುವ ಮಾಸ್ತಿಕಲ್ಲುಗಳಿರುವುದು ತುಂಬಾ ಕಡಿಮೆ. ಆದ್ದರಿಂದ ಮಾಸ್ತಿ ಘಟನೆಯ ಬಗ್ಗೆ ಹೆಚ್ಚು ವಿವರಗಳನ್ನು ಗ್ರಹಿಸಲಾಗುವುದಿಲ್ಲ ಎನ್ನುವುದು ನಿಜ. ಆದರೂ ಘಟನೆಗಳ ಮಾಹಿತಿಗೆ ಮಾಸ್ತಿಯ ಬಗ್ಗೆ ಪ್ರಚಲಿತದಲ್ಲಿರುವ ಪುರಾಣಗಳು, ಜನಪದ ಗೀತೆಗಳು, ಕಥೆಗಳು, ಹಬ್ಬದ ಆಚರಣೆಗಳು, ಜಾತ್ರೆ, ವರ್ಧಂತಿ ಉತ್ಸವಗಳು ಸಹಾಯ ಮಾಡುತ್ತವೆ. ಕೆಲವೊಂದು ಪ್ರದೇಶದಲ್ಲಿ ಬರಹ ಇರುವ ಮಾಸ್ತಿ ಶಾಸನಗಳಿದ್ದು, ಇವು ರಾಜರ ಆಳ್ವಿಕೆ, ಸಹಗಮನದ ಕಾರಣ, ಸಹಗಮನ ಮಾಡಿದವರ ಹೆಸರನ್ನು ಸ್ಥೂಲವಾಗಿ

ಸೂಚಿಸುತ್ತವೆ. "ಸ್ವಸ್ತಿ ಶ್ರೀ ಮನ್ಮಹಾಮಂಡಳೇಶ್ವರಂ ಅರಿರಾಯ ವಿಭಾಡ ಹಿಂದುವರಾಯ ಸುರತಾಳು ಶ್ರೀವೀರ ಹರಿಯಪ್ಪವೊಡೆಯರ ರಾಜ್ಯೋದಯದಂದು ಶಕ ವರುಷ ೧೨೭೬ ವಿಜಯ ಸಂವತ್ಸರದ ಪುಸ್ಯ ಬಹುಳ ತದಿಗೆ ಆ ಶ್ರೀಮಣಳುವ ಪ್ರಭು ಆವಲಿಯ ಕಾಂನಗೌಡ ಮಗ ಸಿರಿಯಗೌಡ ಪಿರಿಯಗವುಡನ ಸುಪುತ್ರಮಲಗವುಡನು ಸಂನ್ಯಾಸನ ಸಮಾಧಿಯಂ ಮುಡಿವೆ ಸ್ವರ್ಗಾಸ್ತನಾದನು. ಆತನ ಅರ್ಧಾಂಗಿ ಚೆಂನಕ್ಕನು ಸಹಗಮನದಿಂ ಸ್ವರ್ಗಾಪ್ರಾಪ್ತಳಾದಳು ಮಂಗಳ ಮಹಾಶ್ರೀ"[೬]

ಸತಿಸಹಗಮನ ಪದ್ಧತಿಯಲ್ಲಿ ಸಹಗಮನ, ಅನುಗಮನ, ಸಮಾಧಿಸತಿ ಎಂಬ ಮೂರು ಪ್ರಕಾರಗಳಿದ್ದು ಪತಿಯ ಮರಣದ ತರುವಾಯ ಆತನ ಶವದೊಂದಿಗೆ ಪತ್ನಿಯು ಚಿತೆಯಲ್ಲಿ ಜೀವಂತವಾಗಿ ದಹನಗೊಂಡರೆ, ಅದು 'ಸಹಗಮನ ಮರಣ' ಎನಿಸಿಕೊಳ್ಳುತ್ತದೆ. ಪತಿಯು ಯಾವುದೋ ದೂರದ ಸ್ಥಳದಲ್ಲಿ ಮರಣ ಹೊಂದಿ ಅವನ ಪಾರ್ಥೀವ ಶರೀರವನ್ನು ಸ್ವಗ್ರಾಮಕ್ಕೆ ತರಲು ಸಾಧ್ಯವಾಗದೇ ಇದ್ದಲ್ಲಿ, ಮರಣದ ಸುದ್ದಿ ತಲುಪಿದೊಡನೆ ಸತಿಯಾದವಳು ತನ್ನ ಪತಿಗೆ ಸಂಬಂಧಿಸಿದ ಯಾವುದೋ ಒಂದು ವಸ್ತುವನ್ನು ಹಿಡಿದುಕೊಂಡು ಚಿತೆಯನ್ನು ಪ್ರವೇಶಿಸಿ ಆತ್ಮಬಲಿದಾನ ಮಾಡಿಕೊಳ್ಳುವುದು 'ಅನುಗಮನ ಮರಣ' ಎನಿಸಿಕೊಳ್ಳುತ್ತದೆ. ಈ ಪದ್ಧತಿಗಳು ಶವ ಸುಡುವ ಸಂಪ್ರದಾಯಸ್ಥರಿಗೆ ಅನ್ವಯಿಸುತ್ತವೆ. ಇನ್ನೂ ಕೆಲವು ಸಮುದಾಯಗಳು ಶವವನ್ನು ಸುಡದೆ ಭೂಮಿಯಲ್ಲಿ ಪತಿಯ ಶವದ ಜೊತೆಗೆ ಇಲ್ಲವೆ ಪತಿಗೆ ಸಂಬಂಧಿಸಿದ ಯಾವುದೋ ಒಂದು ವಸ್ತುವಿನ ಜೊತೆಗೆ ಜೀವಂತವಾಗಿ ಹುಗಿಯುವುದು 'ಸಮಾಧಿಸತಿ' ಎನಿಸಿಕೊಳ್ಳುತ್ತದೆ. ಹೀಗೆ ಆತ್ಮಬಲಿದಾನಕ್ಕೆ ಒಳಗಾದವರನ್ನೇ ಮಹಾಸತಿ, ಮಾಸ್ತಿ ಎಂದು ಆಚರಣೆಯನ್ನು 'ಮಹಾಸತಿ ಸಂಪ್ರದಾಯ'ವೆಂದು ಕರೆಯಲಾಯಿತು.

ಆಧುನಿಕ ಪೂರ್ವ ಕನ್ನಡ ಸಾಹಿತ್ಯವನ್ನು ಅವಲೋಕಿಸಿದಾಗ ಸತಿಪದ್ಧತಿಯನ್ನು ಕುರಿತು ಅನೇಕ ವಿದ್ವಾಂಸರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಅವು ಹೆಚ್ಚಾಗಿ ವಿಷಯ ನಿರೂಪಣೆಯಲ್ಲಿಯ ಸಾಂದರ್ಭಿಕ ಅಭಿಪ್ರಾಯಗಳೇ ಆಗಿವೆ. ವಿ.ಎ.ಸ್ಮಿತ್, ಎಡ್ವರ್ಡ್ ಥಾಮಸ್ಸ್, ಎಸ್.ಆರ್.ರಾವ್, ಎ.ಎಸ್.ಅಲ್ತೇಕರ, ಎಂ. ಚಿದಾನಂದಾಮೂರ್ತಿ, ಬಸವರಾಜ ಕಲ್ಗುಡಿ, ಎಂ.ಎಂ.ಕಲ್ಬುರ್ಗಿ, ಬಿ.ಎಸ್.ಶೇಠೆ ಮೊದಲಾದ ವಿದ್ವಾಂಸರು ಸತಿಪದ್ಧತಿಯ ಕುರಿತು ತಮ್ಮ ಅಭಿಪ್ರಾಯವನ್ನು ನೀಡಿದ್ದಾರೆ. ಆ ಅಭಿಪ್ರಾಯಗಳನ್ನು ಇಲ್ಲಿ ಅವಲೋಕಿಸಲಾಗಿದೆ.

ವ್ಹಿ.ಎ.ಸ್ಮಿತ್ ಅವರು ಸತಿಪದ್ಧತಿ ಬಹುಶಃ ಸಿಥಿಯನ್ ಮೂಲದ್ದಿರಬೇಕೆಂದು ಅಭಿಪ್ರಾಯ ಪಡುತ್ತಾರೆ. ಇದು ಮಧ್ಯ ಎಷ್ಯಾದಿಂದ ಬಂದಿದ್ದು, ತಕ್ಷಶಿಲೆಯ ಜನರ ನಾಗರಿಕತೆಯಲ್ಲಿಯ ಆಚರಣೆಗಳ ಮೇಲೆ ಬ್ಯಾಬಿಲೋನಿಯನ್, ಇರಾನಿಯನ್, ಸಿಥಿಯನ್ ಮುಂತಾದ ನಾಗರಿಕತೆಗಳ

ಪ್ರಭಾವವಿದೆ. ನಾಲ್ಕನೇ ಶತಮಾನದಲ್ಲಿ ಅಲೆಕ್ಸಾಂಡರ್ ಇಲ್ಲಿಗೆ ಬಂದಾಗ ಪಂಜಾಬ್ ತಕ್ಷಶಿಲೆ, ಹಾಗೂ ರಾವಿನದಿಯ ದಂಡೆಯ ಕಥೈ ಜನರಲ್ಲಿ ಈ ಆಚರಣೆ ಇರುವುದನ್ನು ಗಮನಿಸಿದ್ದೇನೆ ಎಂದಿದ್ದಾರೆ. ಇವರ ಪ್ರಕಾರ ಸಿಥಿಯನ್ನರಲ್ಲಿ ಇದು ಮೊದಲು ಕಂಡು ಬಂದಿದೆ. ಕ್ರಿ. ಪೂ. ಹಾಗೂ ಕ್ರಿ.ಶ. ಪ್ರಾರಂಭದಲ್ಲಿ ಸಿಥಿಯನ್ನರ ರಾಜರು ಈ ಸಹಗಮನ ಪದ್ಧತಿಯನ್ನು ಅನುಸರಿಸುತ್ತಿದ್ದರು. ಆದ್ದರಿಂದ ಅವರ ಪ್ರಭಾವವಿರುವ ಭಾರತದ ಕೆಲವು ಭಾಗಗಳಲ್ಲೂ ಸತಿ ಆಚರಣೆ ಪ್ರಾರಂಭವಾಗಿರಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ಇವರ ಮತ್ತೊಂದು ಉದಾಹರಣೆಯೆಂದರೆ, ಸಿಥಿಯನ್ ಜನರಲ್ಲಿ "ಪ್ರತಿಯೊಬ್ಬ ಥ್ರೇಸಿಯನ್‌ನಿಗೂ ಅನೇಕ ಪತ್ನಿಯರಿರುತ್ತಾರೆ. ಪತಿ ಮೃತನಾದಾಗ ಅವನು ಯಾರನ್ನು ಹೆಚ್ಚು ಪ್ರೀತಿಸುತ್ತಿದ್ದ ಎನ್ನುವುದರ ಕುರಿತಾಗಿ ಇವರಲ್ಲಿ ಸ್ಪರ್ಧೆ ಉಂಟಾಗುತ್ತದೆ. ಕೊನೆಗೆ ಗೆದ್ದವಳೊಬ್ಬಳನ್ನು ಎಲ್ಲರೂ ಹೊಗಳಿ ಪತಿಯ ಗೋರಿಯ ಮೇಲೆ ಅವಳನ್ನು ಹತ್ಯೆ ಮಾಡಿ ಹುಗಿಯುತ್ತಾರೆ."[೭]

ಹೀಗೆಯೇ ಭಾರತದಲ್ಲೂ ಸತಿಪದ್ಧತಿ ಆಚರಣೆಯಲ್ಲಿದ್ದು, ಸತಿಹೋಗಲು ರಾಣಿಯರು ಸ್ಪರ್ಧೆಗಿಳಿದು ಮೃತ ಗಂಡನೊಡನೆ ಸ್ವರ್ಗಸ್ಥರಾಗಲು ಪೈಪೋಟಿ ಮಾಡುತ್ತಿದ್ದರೆಂದು ಹೇಳುತ್ತಾರೆ. ಹೀಗೆ ಭಾರತದ ಸತಿ ಆಚರಣೆ ಸಿಥಿಯನ್ ಮೂಲವೆಂದು ಸಾಧಿಸಲು ಪ್ರಯತ್ನಿಸುತ್ತಾರೆ. ಭಾರತ ಹಾಗೂ ಸಿಥಿಯನ್ನರ ಸತಿ ಆಚರಣೆಯ ಲಕ್ಷಣಗಳು ಒಂದೇ ರೀತಿಯಾಗಿದ್ದು ಸತಿ ಪದ್ಧತಿ ಸಿಥಿಯನ್ ಮೂಲವೆನ್ನುತ್ತಾರೆ. ಸಿಥಿಯನ್ ಹಾಗೂ ಥ್ರೇಸಿಯನ್ ರಾಜರಲ್ಲಿದ್ದ ಸತಿ ಪದ್ಧತಿಯಲ್ಲಿ ಸಾಮ್ಯವಿದೆ. ಹೀಗೆ ಕನ್ನಡ ಸಾಹಿತ್ಯದಲ್ಲಿ ಉಲ್ಲೇಖಗೊಂಡಂತೆ ಸತಿಪದ್ಧತಿಯ ಮುಖ್ಯ ಲಕ್ಷಣವೂ ರಾಣಿಯರ ಸ್ಪರ್ಧೆ ಹಾಗೂ ಮೃತ ಗಂಡನ ಹಿಂದೆ ಸಾಯುವುದೇ ಆಗಿದೆ ಎಂದು ಹೇಳುತ್ತಾರೆ. ಈ ಕಾರಣದಿಂದಾಗಿ ಸ್ಮಿತ್ ಅವರು ಭಾರತದ ಸತಿ ಆಚರಣೆ ಸಿಥಿಯನ್ ಮೂಲವೆಂದು ಸಾಧಿಸಲು ಪ್ರಯತ್ನಿಸುತ್ತಾರೆ.

ಎಸ್.ಆರ್.ರಾವ್ ಅವರು ತಮ್ಮ ಲೋಥಾಲ್ ಮತ್ತು ಇಂಡಸ್ ಸಿವಿಲೈಜೇಶನ್ ಪುಸ್ತಕದಲ್ಲಿ ಆರ್ಯ ಪೂರ್ವ ಜನಾಂಗದಲ್ಲಿರುವ ಹುಗಿಯುವ ಆಚರಣೆಯನ್ನು ಕುರಿತು ಅತ್ಯಂತ ಕುತೂಹಲಕರವಾದ ದಾಖಲೆಗಳನ್ನು ಕೊಡುತ್ತಾರೆ.[೮] ಹರಪ್ಪ ಹಾಗೂ ಲೋಥಲ್ ಜನರು ಸಿಂಧೂ ನದಿಯ ಜನರಂತೆಯೇ ಸತ್ತವರನ್ನು ಹೂಳುತ್ತಿದ್ದರು. ಅಥರ್ವಣವೇದ ಕಾಲದಲ್ಲಿ ಬರುವ ಅಂತ್ಯಕ್ರಿಯೆಯಲ್ಲಿ ಸತ್ತವನನ್ನು ಬಿಲ್ಲು ಬಾಣಗಳೊಂದಿಗೆ ಮಲಗಿಸಲಾಗುತ್ತಿತ್ತು. ಅವನ ಹೆಂಡತಿಯೂ ಅವನ ಪಕ್ಕದಲ್ಲಿ ಮಲಗುತ್ತಿದ್ದಳು. ಆದರೆ ಅವಳನ್ನು ಪುನಃ ವಾಪಸ್ಸು ಈ ಭೂಮಿಗೆ ಮರಳಿ ಕರೆತರುತ್ತಿದ್ದರು. ಅವಳ ಹತ್ತಿರದ ಬಂಧು ಅಥವಾ ಮೈದುನ ಅವಳನ್ನು ಕರೆದೊಯ್ಯುತ್ತಿದ್ದ. ಇದು ಈ ಆಚರಣೆಯ ಒಂದು ಸಂಕೇತವಿರಬಹುದು. ಸತಿಪದ್ಧತಿಯ

ಮೂಲ ಕ್ಷತ್ರಿಯರಲ್ಲಿ ಇತ್ತು ಎನ್ನುವುದರಲ್ಲಂತೂ ಯಾವುದೇ ಅನುಮಾನವಿಲ್ಲ. ವೇದಕಾಲದಲ್ಲಿ ಸತಿಯ ಉದಾಹರಣೆಗಳು ಸಿಗುವುದಿಲ್ಲ. ಅಥರ್ವಣ ವೇದದ ಶ್ಲೋಕ ಸತಿಯ ಪೂರ್ವಾಚರಣೆಯ ಸಂಕೇತವಾಗಿದ್ದರೂ, ರಾವ್ ಅವರು ಗುರುತಿಸುವ ಆರ್ಯಪೂರ್ವ ಸತಿಯ ನಿದರ್ಶನಗಳೆಂದು ಗುರುತಿಸಲಾಗುವ ಹೂಳುವ ವಿಧಾನಗಳ ದಾಖಲೆಗಳಿದ್ದರೂ ಈ ಪದ್ಧತಿ ಯಾವ ಸ್ವರೂಪದಿತ್ತು ಎಂದು ಹೇಳುವುದು ಕಷ್ಟ ಎಂದಿದ್ದಾರೆ.

ಎಡ್ವರ್ಡ್ ಥಾಮ್ಸನ್ ಇವರ ಪ್ರಕಾರ ಪತಿಯು ಮರಣ ಹೊಂದಿದಾಗ ಸತಿಯು ಆತನೊಂದಿಗೆ ಸಹಗಮನಗೊಳ್ಳುವುದೇ ಸತಿಪದ್ಧತಿಯಾಗಿದೆ. "ಭಾರತದ ಪ್ರಾಚೀನ ಬುಡಕಟ್ಟು ಜನಾಂಗಗಳಲ್ಲಿ ಜಾರಿಯಲ್ಲಿದ್ದು ಈ ಬಣಗಳು ಹಿಂದೂ ಧರ್ಮದಲ್ಲಿ ಕೂಡಿಕೊಂಡಾಗ ಅವರ ಆಚರಣೆಗಳು ಹಿಂದೂಗಳಲ್ಲಿಯೂ ಜಾರಿಗೆ ಬಂದವೆಂದು ಅಭಿಪ್ರಾಯ ಪಡುತ್ತಾರೆ."[೯] ಇಂತಹ ಊಹೆಗಳಿಗೆ ಆಧಾರಗಳನ್ನು ನೀಡುವುದು ಕಷ್ಟ. ಸದ್ಯಕ್ಕೆ ಸತಿ ಆಚರಣೆ ಹೊರಗಿನಿಂದ ಬಂದದ್ದೊ ಭಾರತದಲ್ಲೆ ಉಗಮಗೊಂಡಿದ್ದೊ ಅಥವಾ ಪ್ರಾಚೀನ ಕಾಲದ ಜಗತ್ತಿನ ಅನೇಕ ಭಾಗಗಳ ಧಾರ್ಮಿಕ ನಂಬಿಕೆಯ ಅಂಗವಾಗಿ ಒಂದೇ ಕಾಲಕ್ಕೆ ಬೇರೆ ಬೇರೆ ಕಡೆಗಳಲ್ಲಿ ಹುಟ್ಟಿಕೊಂಡದ್ದೊ ಎಂದು ಹೇಳುವುದು ಕಷ್ಟ. ಆದರೆ ಭಾರತದಲ್ಲಿ ಸತಿಪದ್ಧತಿ ಸುಮಾರು ಆರರಿಂದ ಎಂಟನೆಯ ಶತಮಾನದೊಳಗೆ ಪುನಃ ಪ್ರಾರಂಭವಾಯಿತ್ತಲ್ಲ ಅದು ಮಾತ್ರ ಹೊರಗಿನ ಯಾವ ಪ್ರಭಾವಗಳಿಂದಲೂ ಆಗಿರದೆ, ಭಾರತದ ಸಾಮಾಜಿಕ ಧಾರ್ಮಿಕ ಬೆಳವಣಿಗೆಯ ಪರಿಣಾಮವೇ ಆಗಿದೆ ಎನ್ನುವುದರಲ್ಲಿ ಅನುಮಾನವಿಲ್ಲ ಎಂದಿದ್ದಾರೆ.

ಬಿ.ಎ. ಸಾಲೆತೊರೆ ಅವರು ವಿದೇಶಿ ಪ್ರವಾಸಿಗನ ನ್ಯೂನಿಜನ್ ವರದಿಯಲ್ಲಿ ಪ್ರಕಟಗೊಂಡ ವಿಜಯನಗರದಲ್ಲಿದ್ದ ಸತಿಪದ್ಧತಿಯ ಕುರಿತು ವಿವರಿಸುತ್ತ ಹೀಗೆ ಹೇಳುತ್ತಾರೆ. "ಸಂಘಟಿತ ಕಾರ್ಯಾಚರಣೆ ಯಶಸ್ಸು ಹೊಂದದೇ ಇದ್ದಾಗ ರಾಣಿಯರು ಮತ್ತು ಸಂಬಂಧಿತ ಇತರೆ ಸ್ತ್ರೀ ಜನರು ಮಹಮ್ಮದೀಯರ ಕೈಯಲ್ಲಿ ಅಪಮಾನವಾಗುವುದನ್ನು ತಪ್ಪಿಸಿಕೊಳ್ಳುವುದಕ್ಕೆ ಸಹಗಮನವನ್ನು ಆಚರಿಸಲೇಬೇಕಿತ್ತು"[೧೦] ಇದನ್ನು ಬಿಟ್ಟು ಅವರಿಗೆ ಮತ್ತೊಂದು ಮಾರ್ಗ ಇರಲಿಲ್ಲ ಎಂದು ಬಿ.ಎ.ಸಾಲೆತೊರೆ ಅವರು ಕಾಲವೊಂದಕ್ಕೆ ಬದ್ಧರಾಗಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಇಲ್ಲಿ ಪತ್ನಿಯರು ತಮ್ಮ ಗಂಡಂದಿರು ಯುದ್ಧದಲ್ಲಿ ಸಾವಿಗೀಡಾದಾಗ ವೈರಿಗಳ ಕೈಯಲ್ಲಿ ಅಗೌರವ ಅಪಮಾನ ಹೊಂದುವುದಕ್ಕಿಂತ ಸಹಗಮನದ ಮೂಲಕ ಪಾತಿವ್ರತ್ಯ ಪರಿಕಲ್ಪನೆಯಲ್ಲಿ ಸಾವನ್ನು ಹೊಂದುತ್ತಿದ್ದರು ಎಂದು ಹೇಳಿದ್ದಾರೆ.

ಎ.ಎಸ್.ಅಲ್ತೇಕರ್ ಅವರು ಪರಲೋಕ ಕಲ್ಪನೆಯ ಹಿನ್ನೆಲೆಯೇ ಪತ್ನಿ ಸತಿಹೋಗಲು ಕಾರಣವಾಗಿರಬೇಕೆಂದು ವಿವರಿಸುತ್ತ ಇವರು ಹೀಗೆ ಹೇಳುತ್ತಾರೆ. "ಇತಿಹಾಸ ಪೂರ್ವಕಾಲದಲ್ಲಿ

ಸತ್ತವನ ಜೀವನ ಹಾಗೂ ಅವನ ಅವಶ್ಯಕತೆಗಳು ಪರಲೋಕದಲ್ಲಿಯೂ ಹೆಚ್ಚು ಕಡಿಮೆ ಹೀಗೆ ಇರುತ್ತವೆ ಎಂಬ ಸಾಮಾನ್ಯ ನಂಬಿಕೆ ಹಲವು ಜನಾಂಗಗಳಲ್ಲಿದ್ದಿತು. ಇದರಿಂದಾಗಿ ಸಾವನ್ನಪ್ಪಿದ ವ್ಯಕ್ತಿಯೊಂದಿಗೆ ಆತ ಜೀವಂತವಿದ್ದಾಗ ಬಳಸುತ್ತಿದ್ದ ಅವಶ್ಯಕ ವಸ್ತುಗಳನ್ನು ಕಳುಹಿಸುವುದು ಅವನ ಉಳಿದ ಸಂಬಂಧಿಕರ ಪವಿತ್ರ ಕರ್ತವ್ಯವಾಯಿತು. ವಿಶೇಷವಾಗಿ ರಾಜರು, ಶ್ರೀಮಂತ ವರ್ಗದವರು ಮತ್ತು ಯೋಧರಂತಹ ಪ್ರಮುಖ ವ್ಯಕ್ತಿಗಳು ಸಾವನ್ನಪ್ಪಿದಾಗ ಆತನ ಹೆಂಡತಿಯರನ್ನು, ಕುದುರೆಗಳನ್ನು ಹಾಗೂ ಸೇವಕರನ್ನು ಅವನೊಂದಿಗೆ ಸಮಾಧಿಗೊಳಿಸುವುದು ಇಲ್ಲವೇ ಸುಡುವುದು ಅಪೇಕ್ಷಣೀಯವಾಗಿತ್ತು. ಇಂತಹ ಒಂದು ನಂಬಿಕೆಯೇ ಗಂಡನೊಡನೆ ಹೆಂಡತಿಯರನ್ನು ಸಹಗಮನಗೊಳಿಸುವ ಪದ್ಧತಿಗೆ ಮೂಲವಿರಬಹುದು”[೧೧] ಎಂದು ತಿಳಿಸಿದ್ದಾರೆ.

ಎಂ.ಚಿದಾನಂದಮೂರ್ತಿ ಅವರು ಎ.ಎಸ್.ಅಲ್ತೇಕರ ಅವರ ಅಭಿಪ್ರಾಯವನ್ನು ಒಪ್ಪಿಕೊಳ್ಳುವ ಮೂಲಕ ಪರಲೋಕ ಕಲ್ಪನೆ ಮತ್ತು ತನ್ನ ಪತ್ನಿ ಪರಪುರುಷನ ವಶವಾಗಬಾರದೆನ್ನುವ ಕಲ್ಪನೆಯ ಕುರಿತು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಪ್ರಾಚೀನ ಈಜಿಪ್ಪನಲ್ಲಿ ದೊರೆ ಮಡಿದಾಗ ಅವನಿಗೆ ಮುಂದಿನ ಜನ್ಮದಲ್ಲಿ ಉಪಯೋಗಕ್ಕೆ ಬರಬೇಕೆಂಬ ಕಾರಣದಿಂದ ಆಯುಧಗಳು, ಆಭರಣಗಳು, ಆಹಾರ ಸಾಮಗ್ರಿಗಳು, ಇತರ ವಸ್ತುಗಳನ್ನು ಅವನೊಂದಿಗೆ ಹೂಳುತ್ತಿದ್ದರು. ನಮ್ಮ ದೇಶದಲ್ಲಿಯೂ ಪ್ರಾಚೀನ ಸಮಾಧಿಗಳನ್ನು ತೆರೆದಾಗ ಅಲ್ಲಿ ಹೂತ್ತಿದ್ದ ವ್ಯಕ್ತಿಯ ಅಸ್ಥಿಪಂಜರದ ಜತೆಯಲ್ಲಿ ಅನೇಕ ಕುಡಿಕೆಗಳು, ಆಭರಣಗಳು ದೊರಕುವುದನ್ನು ನೆನೆಯಬಹುದು. “ಸಿಥಿಯನ್ನರಲ್ಲಿ ರಾಜನು ಸಾವನ್ನಪ್ಪಿದಾಗ ಅವನೊಡನೆ ಅವನ ಅಡಿಗೆಯವರನ್ನು, ಆಳುಗಳನ್ನು, ಕುದುರೆಗಳನ್ನು ಹೂಳುತ್ತಿದ್ದ ಪದ್ಧತಿಯನ್ನು ಹೆರೊಡೋಟಸ್ ಹೇಳುತ್ತಾನೆ.”[೧೨] ಎಂದು ತಿಳಿಸುತ್ತಾ ಮತ್ತೊಂದು ಕಾರಣವನ್ನು ಹೀಗೆ ಹೇಳುತ್ತಾರೆ. ತಾನು ಸತ್ತ ಮೇಲೆ ತನ್ನ ಪ್ರೇಯಸಿಯನ್ನು ಇನ್ನೊಬ್ಬರ ವಶವಾಗುವ ಸಾಧ್ಯತೆಯನ್ನು ಕಲ್ಪಿಸಿಕೊಂಡ ಪುರುಷನ ಅಸೂಯೆಯೂ ಇದಕ್ಕೆ ಕಾರಣವಿರಬಹುದು ಎಂದು ತಿಳಿಸುವ ಮೂಲಕ ಸತಿಪದ್ಧತಿಯ ಇನ್ನೊಂದು ಕಾರಣದೆಡೆಗೆ ಎಂ. ಚಿದಾನಂದಮೂರ್ತಿ ಅವರು ಗಮನವನ್ನು ಸೆಳೆಯುತ್ತಾರೆ.

ವಿದ್ವಾಂಸರಾದ ಎಂ.ಎಂ.ಕಲಬುರ್ಗಿ ಅವರು “ಸರ್ವದೇಶ, ಸರ್ವಕಾಲ, ವ್ಯಾಪ್ತವಾದ ಆದರ್ಶಗಳು ಒಂದು ದೇಶ ಒಂದು ಕಾಲ ಪರಿಮಿತವಾದ ಮೌಲ್ಯಗಳು ಆ ದೇಶ ಆ ಕಾಲಗಳ ಮೌಲ್ಯಗಳೆನಿಸುವ ನಂಬಿಕೆಗಳು ಇಂಥ ಜನಾಂಗವನ್ನು ಮುನ್ನಡೆಸುವ ಸೂತ್ರಗಳಾಗಿರುತ್ತವೆ.”[೧೩] ಎಂದು ಹೇಳಿದ್ದಾರೆ. ಸಮಾಜದಲ್ಲಿರುವ ಜನರು ಕೆಲವು ಜೀವನ ಮೌಲ್ಯಗಳನ್ನು ನಂಬಿಕೊಂಡು ಬಂದಿರುತ್ತಾರೆ. ಆ ಮೌಲ್ಯಗಳಿಗೆ ಕಾಲ, ದೇಶ, ಜನಾಂಗ ಬದ್ಧವಾಗಿರುತ್ತದೆ. ಕೆಲವು ಮೌಲ್ಯಗಳು ಸರ್ವಕಾಲಿಕ ಆದರ್ಶಗಳಾಗಿವೆ. ಉದಾಹರಣೆಗೆ ಸತ್ಯ ಮತ್ತು ಅಹಿಂಸೆ.

ಇದನ್ನು ಸರ್ವಕಾಲಿಕ ಸರ್ವಪ್ರದೇಶ, ಸರ್ವ ಜನಾಂಗಗಳು ಒಪ್ಪಿಕೊಂಡಿವೆ. ಎಲ್ಲ ಮೌಲ್ಯಗಳು ಆದರ್ಶಗಳಲ್ಲ. ಇವು ಒಂದು ನಿರ್ದಿಷ್ಟ ಕಾಲಕ್ಕೆ, ನಿರ್ದಿಷ್ಟ ಪ್ರದೇಶಕ್ಕೆ, ನಿರ್ದಿಷ್ಟ ಜನಾಂಗಗಳಿಗೆ ಸೀಮಿತವಾಗಿರುತ್ತವೆ. 'ಮಹಾಸತಿ' ಆಚರಣೆಯು ಒಂದು ಕಾಲದಲ್ಲಿ ಮೌಲ್ಯವಾಗಿತ್ತು. ಆದರೆ ಅದು ಇಂದು ಮೌಲ್ಯವಾಗಿಲ್ಲ. ಇದನ್ನ ಇಂದು ಯಾರಾದರೂ ಆಚರಿಸಿದರೆ ಅದು ಶಿಕ್ಷಾರ್ಹ ಅಪರಾಧವಾಗುತ್ತದೆ. ಹೀಗೆ ಮೌಲ್ಯಗಳು ಕಾಲಕಾಲಕ್ಕೆ ಬದಲಾಗುತ್ತಿರುತ್ತವೆ. ಆದರೆ ಆದರ್ಶಗಳು ಮಾತ್ರ ಬದಲಾಗದೆ ಸರ್ವಕಾಲಿಕವಾಗಿರುತ್ತವೆ. ಇದಕ್ಕೆ ಎಂ. ಎಂ. ಕಲ್ಬುರ್ಗಿಯವರ ಮೇಲಿನ ವ್ಯಾಖ್ಯೆಗಳೆ ಸಾಕ್ಷಿಯಾಗಿವೆ. ಈ ರೀತಿಯ ಆದರ್ಶ ಮತ್ತು ಮೌಲ್ಯಗಳನ್ನು ಹಿಡಿದು ಆಚರಿಸುತ್ತಿರುವ ಜನರ ಮನದ ಹಿಂದಿರುವ ಗುರಿ, ಶ್ರೇಷ್ಠ ಸದ್ಗತಿ ಸಂಪಾದನೆ, ಮೋಕ್ಷ, ಸ್ವರ್ಗದ ಪರಿಕಲ್ಪನೆಯಾಗಿದೆ ಎಂದಿದ್ದಾರೆ.

ಬಸವರಾಜ ಕಲ್ಗುಡಿ ಅವರ ಅಭಿಪ್ರಾಯವು ಸತಿಪದ್ಧತಿಯ ಉಗಮದ ಹೊಸ ನೆಲೆಗಳನ್ನು ಪರಿಚಯಿಸುತ್ತದೆ. "ಧರ್ಮ ನೀತಿಗಳ ಪ್ರಭಾವ, ಸ್ತ್ರೀಯರಲ್ಲಿ ಕಂಡರಿಯದ ಅಲೌಖಿಕ ಶಕ್ತಿಯ ಕುರಿತು ಇರುವ ಭಯ, ಸ್ತ್ರೀಯರು ಒಂಟಿಯಾಗಿ ಎದುರಿಸಬೇಕಾದ ಆರ್ಥಿಕ ಸಾಮಾಜಿಕ ಪರಿಸ್ಥಿತಿಗಳ ಒತ್ತಡ ಮತ್ತು ಸೂಕ್ಷ್ಮ ಸಂಬಂಧಗಳ ಹಿನ್ನೆಲೆಯಲ್ಲಿ ಸತಿ ಆಚರಣೆ ರೂಪುಗೊಂಡಿರ ಬಹುದು ಅಲ್ಲದೇ ಇದು ಮಾನವನೊಂದಿಗಿರುವ ವಿಶಿಷ್ಟ ಪರಿಸ್ಥಿತಿಗಳ ಸಂಬಂಧದ ಸೃಷ್ಟಿಯೆ ಆಗಿದೆ"[೧೪] ಎಂದು ಹೇಳುತ್ತಾರೆ. ಸಹಗಮನ ಎಂದರೆ ಹೆಂಡತಿಯೊಬ್ಬಳು ಸತ್ತ ಗಂಡನ ಜೊತೆಗೆ ಸಾಯುವುದನ್ನ ತಿಳಿಸುವ ಪದವಾಗಿದ್ದು, ಶಾಸನಗಳಲ್ಲಿ ಇದೇ ಅರ್ಥದಲ್ಲಿ ಪ್ರಯೋಗಿಸಲ್ಪಟ್ಟಿದೆ. 'ಸಹಗಮನ' ಎನ್ನುವ ಪದ ಒಂದು ಅರ್ಥದಲ್ಲಿ ಸತಿಯಾದುದನ್ನು ಹೇಳಿದರೂ ಇನ್ನೊಂದು ಅರ್ಥದಲ್ಲಿ ಗಂಡನ ಜೊತೆಗೆ ಸಹಧರ್ಮಿಣಿಯಾಗಿ ಹೋದ ಅರ್ಥವನ್ನು ಹೇಳುತ್ತದೆ. ಗಂಡನನ್ನು ಹೆಂಡತಿ ಅನುಸರಿಸಬೇಕು. ಎನ್ನುವ ಸಂಪ್ರದಾಯಸ್ಥ ನಂಬಿಕೆಯನ್ನು ಪುಷ್ಟಿಗೊಳಿಸುವ ಅರ್ಥವನ್ನು ಹೊಂದಿದೆ. ಮಾನವ ಬದುಕನ್ನು ವ್ಯವಸ್ಥಿತಗೊಳಿಸುತ್ತ ನಿಯಂತ್ರಿಸುತ್ತ ಬರುವಲ್ಲಿ ಹಲವು ವಿಧಿ–ವಿಧಾನಗಳು, ಆಚಾರ–ವಿಚಾರಗಳು, ಸಂಪ್ರದಾಯ–ಪದ್ಧತಿಗಳು ಪ್ರಮುಖವಾಗಿವೆ. ಇವುಗಳಲ್ಲಿ ಸತಿಪದ್ಧತಿಯು ಒಂದಾಗಿದೆ ಎಂದಿದ್ದಾರೆ.

ಕರ್ನಾಟಕದಲ್ಲಿ ಸತಿಪದ್ಧತಿ ಕುರಿತು ಅಧ್ಯಯನ ಮಾಡಿದ ಬಿ.ಎಸ್.ಶೇಠೆ ಅವರ ಅಭಿಪ್ರಾಯದ ಪ್ರಕಾರ ಇದು ಜಾಗತಿಕ ವ್ಯಾಪ್ತಿಯ ಒಂದು ಪ್ರಾಚೀನ ಜೀವನ ಮೌಲ್ಯ. ಇದಕ್ಕೆ ಭಾರತದಲ್ಲಿ ಹಾಗೂ ಕರ್ನಾಟಕದಲ್ಲಿ ಸುದೀರ್ಘ ಪರಂಪರೆಯಿದೆ. ಇದು ಸಾಮಾಜಿಕ ಕಾರಣಗಳಿಂದಾಗಿ ಅಸ್ತಿತ್ವಕ್ಕೆ ಬಂದು ಸಂಪ್ರದಾಯದ ಪರಿವೇಷ ಕಟ್ಟಿಕೊಂಡು ಬೆಳೆದಿದೆ. ಯಾವುದೋ ಆದರ್ಶಕ್ಕಾಗಿ ತಮ್ಮನ್ನು ತಾವು ಬಲಿಕೊಟ್ಟುಕೊಂಡು ಪೂಜ್ಯನೀಯರಾಗಿದ್ದಾರೆ. "ಸಹಗಮನ ಎಂದರೆ ಸತ್ತ

ಪತಿಯ ಜೊತೆಗೆ ಸಹಧರ್ಮಿಣಿಯಾಗಿ ಸತಿಯು ಹೋದ ಅರ್ಥವನ್ನು ಹೇಳುತ್ತದೆ. ಅವರು ನಿಜವಾಗಿಯೂ ತ್ಯಾಗದ ಸಂಕೇತಗಳು”[೧೫] ಎಂದಿದ್ದಾರೆ. ಗ್ರಂಥ ಸಾಹಿತ್ಯ, ಶಾಸನ ಸಾಹಿತ್ಯ, ಜನಪದ ಸಾಹಿತ್ಯ, ವಿದೇಶಿ ಪ್ರವಾಸಿಗರ ವರದಿಗಳಲ್ಲಿ ಇದೇ ಅರ್ಥದಲ್ಲಿ ಪ್ರಯೋಗಿಸಲ್ಪಟ್ಟಿದೆ. ‘ಸಹಗಮನ’ ಎನ್ನುವ ಪದ ಒಂದು ಅರ್ಥದಲ್ಲಿ ಸತಿಯಾದುದನ್ನು ಹೇಳಿದರೂ ಇನ್ನೊಂದು ಅರ್ಥದಲ್ಲಿ ಪ್ರತಿವ್ರತೆಯಾದ ಹೆಂಡತಿ ಗಂಡನನ್ನು ಅನುಸರಿಸಬೇಕು. ಜೊತೆಗೆ ಸಹಧರ್ಮಿಣಿಯಾಗಿ ಸಹಗಮನಗೊಳ್ಳಬೇಕೆಂಬ ಸಂಪ್ರದಾಯಸ್ಥ ನಂಬಿಕೆಯನ್ನು ಪುಷ್ಟಿಗೊಳಿಸುವ ಅರ್ಥವನ್ನು ಹೊಂದಿದೆ ಎಂದಿದ್ದಾರೆ. ಇದು ಮಾನವ ಕುಲಕ್ಕೇ ಅವಹೇಳನಕರ ವೆಂದು ಆಧುನಿಕರಾದ ನಮಗೆ ತೋರುವ ಅದು ಮರೆಯಾಗಿ ಹೋದದ್ದರ ಕುರಿತಾಗಿ ನೆಮ್ಮದಿಯಿದೆ. ಈ ಪದ್ಧತಿ ಕ್ರೂರ ಅಸಹ್ಯವೆಂದು ಹೇಳಿದರೂ ಸತಿಹೋದ ಹೆಣ್ಣುಮಕ್ಕಳ ಕುರಿತು ಗೌರವ ಅನುಕಂಪಗಳು ಮೂಡದೇ ಇರುವುದಿಲ್ಲ ಎಂದಿದ್ದಾರೆ.

ಹೀಗೆ ದೊರೆತ ಆಕರಗಳ ಮಾಹಿತಿಯಿಂದ ಒಂದು ಖಚಿತವಾದ ಊಹೆ ಮಾಡಬಹುದು. ಅದೇನೆಂದರೆ ಸತಿಪದ್ಧತಿಯ ಮೂಲ ಉಗಮವೆಲ್ಲ ಕ್ಷತ್ರಿಯರಲ್ಲಿ ಇರುವುದಂತೂ ನಿಜ. ವೇದಕಾಲದ ಭಾರತದಲ್ಲಿ ಸತಿಯ ಉದಾಹರಣೆಗಳು ಸಿಗುವುದಿಲ್ಲ. ಅಥರ್ವಣ ವೇದದ ಶ್ಲೋಕ ಸತಿಯ ಪೂರ್ವಾಚರಣೆಯ ಸಂಕೇತವಾಗಿದ್ದರೂ, ರಾವ್ ಅವರು ಗುರುತಿಸುವ ‘ಆರ್ಯಪೂರ್ವ’ ಸತಿಯ ನಿದರ್ಶನಗಳೆಂದು ಗುರುತಿಸಲಾಗುವ ಹೂಳುವ ವಿಧಾನಗಳ ದಾಖಲೆಗಳಿದ್ದರೂ ಈ ಪದ್ಧತಿಯು ಯಾವ ಸ್ವರೂಪದ್ದಿತ್ತು ಎಂದು ಹೇಳವುದು ಕಷ್ಟ ಎಂಬುವುದು ಗಮನಾರ್ಹ ಸಂಗತಿಯಾಗಿದೆ.

೨.೨. ಸತಿಪದ್ಧತಿಯ ಕಾರಣಗಳು

ಆಧುನಿಕಪೂರ್ವ ಇತಿಹಾಸದಲ್ಲಿ ಸತಿಪದ್ಧತಿಯ ಆಚರಣೆಯು ಕೆಲವು ಭಾಗದಲ್ಲಿ ತೀವ್ರ ಸ್ವರೂಪದಲ್ಲಿಯೂ ಕೆಲವು ಭಾಗದಲ್ಲಿ ಸೌಮ್ಯ ಸ್ವರೂಪದಲ್ಲಿಯೂ ಕಾಣಿಸಿಕೊಂಡಿದೆ. ಈ ಪದ್ಧತಿಯ ಉಗಮ ಮತ್ತು ಬೆಳವಣಿಗೆಯ ಕಾರಣಗಳು ಒಂದೇ ರೂಪ ಹೊಂದಿದ್ದು, ಇವುಗಳ ಪ್ರಭಾವದಲ್ಲಿಯ ಬದಲಾವಣೆಯಿಂದಾಗಿ ಇದರ ಸ್ವರೂಪವು ಹೆಚ್ಚು ಕಡಿಮೆಯಾಯಿತೆಂದು ಹೇಳಬಹುದು. ಈ ಪದ್ಧತಿ ಉಗಮಗೊಂಡು ಪ್ರಚಲಿತವಾಗಲು ಮೂಲ ಕಾರಣ ಪುರುಷನ ಸ್ವಾರ್ಥ, ಪತ್ನಿಯ ಪಾತಿವ್ರತ್ಯ ಕಲ್ಪನೆ, ಸಮಾಜದ ಉದ್ದೇಶ ಆಶಯಗಳು ಹಾಗೂ ಸಾಮಾಜಿಕ ಸ್ಥಿತಿಗತಿಗಳು ಕಾರಣವಾಗಿವೆ. ಇದರ ಆಧಾರದ ಮೇಲೆ ಆಧುನಿಕ ಪೂರ್ವ ಕನ್ನಡ ಸಾಹಿತ್ಯದಲ್ಲಿ ಗುರುತಿಸಿರುವಂತೆ ಸತಿ ಪದ್ಧತಿಯ ಕಾರಣಗಳನ್ನು ಜನಾಂಗೀಯ ಹಾಗೂ ಪ್ರಾಪಂಚಿಕ ಕಾರಣಗಳೆಂದು ಅಧ್ಯಯನದ ಅನುಕೂಲಕ್ಕಾಗಿ ವಿಭಜಿಸಿಕೊಂಡು ಭಾರತದ ಸತಿಪದ್ಧತಿಯನ್ನು

ಸತಿಪದ್ಧತಿಯ ಕಾರಣಗಳು

ಜನಾಂಗೀಯ ಕಾರಣಗಳು

೧. ವೈಯಕ್ತಿಕ ಕಾರಣಗಳು

i. ದಾಂಪತ್ಯ ಬದುಕಿನ ಭಾವನಾತ್ಮಕ ನಂಬಿಕೆ

ii. ಪಾತಿವ್ರತ್ಯದ ಪರಿಕಲ್ಪನೆ

iii. ವಿಧವೆಯ ನಿಕೃಷ್ಟ ಜೀವನ

iv. ಮಾನರಕ್ಷಣೆಯ ವ್ಯವಸ್ಥೆ

೨. ಸಾಮಾಜಿಕ ಕಾರಣಗಳು

i. ಪತ್ನಿ ಬಗೆಗೆ ಇರುವ ಪುರುಷನ ಸ್ವಾರ್ಥ

ii. ಮನೆತನದ ಹಾಗೂ ಸಮಾಜದ ಪ್ರತಿಷ್ಠೆ

iii. ಸಂಪತ್ತು ಪಡೆಯುವ ಸಂಚು

ಪ್ರಾಪಂಚಿಕ ಕಾರಣಗಳು

೧. ಪರಲೋಕ ಕಲ್ಪನೆ

i. ಸತ್ತವನೊಂದಿಗೆ ಪ್ರಿಯವಸ್ತುಗಳನ್ನು ಕಳಿಸುವ ನಂಬಿಕೆ

ii. ಸತಿ–ಪತಿಗಳಿಬ್ಬರೂ ಸ್ವರ್ಗಪಡೆಯುವ ನಂಬಿಕೆ

೨. ಪುನರ್ಜನ್ಮ ಕಲ್ಪನೆ

ಹಿನ್ನೆಲೆಯಾಗಿಟ್ಟುಕೊಂಡು ಈ ಕೆಳಕಂಡಂತೆ ವಿವರಿಸಲಾಗಿದೆ.

೨.೨.೧. ಜನಾಂಗೀಯ ಕಾರಣಗಳು

ಸತಿಪದ್ಧತಿ ಉಗಮಗೊಂಡು ಬೆಳೆದು ಬರಲು ಪತ್ನಿಯ ಹಾಗೂ ಸಮಾಜದ ಉದ್ದೇಶ, ಆಶಯಗಳು, ಸ್ಥಿತಿ–ಗತಿಗಳು ಮುಖ್ಯ ಕಾರಣಗಳಾಗಿವೆ. ಇದರ ಪ್ರಕಾರ ಜನಾಂಗೀಯ ಕಾರಣ ಗಳಲ್ಲಿ ವೈಯಕ್ತಿಕ ಹಾಗೂ ಸಾಮಾಜಿಕ ಕಾರಣಗಳೆಂದು ವಿಂಗಡಿಸಬಹುದಾಗಿದೆ. ದಾಂಪತ್ಯ ಬದುಕಿನ ಭಾವನಾತ್ಮಕ ನಂಬಿಕೆ, ಪಾತಿವ್ರತ್ಯದ ವೈಭವೀಕರಣ, ವೈಯಕ್ತಿಕ ಪ್ರತಿಷ್ಠೆ, ವಿಧವೆಯ ನಿಕೃಷ್ಟ ಜೀವನವನ್ನು ವೈಯಕ್ತಿಕ ಕಾರಣಗಳೆಂದು ಗುರುತಿಸಬಹುದಾಗಿದೆ. ಪುರುಷನ ಸ್ವಾರ್ಥ ಮನೋಭಾವ, ಸಂಪತ್ತು ಪಡೆಯುವ ಸಂಚು, ಮನೆತನದ ಹಾಗೂ ಸಮಾಜದ ಪ್ರತಿಷ್ಠೆಗಳನ್ನು ಸಾಮಾಜಿಕ ಕಾರಣಗಳೆಂದು ಕರೆಯಬಹುದಾಗಿದೆ.

೧. ವೈಯಕ್ತಿಕ ಕಾರಣಗಳು

ವೈಯಕ್ತಿಕ ಕಾರಣವು ಮರಣ ಹೊಂದಿದ ಪತಿಗೆ ಸಂಬಂಧಿಸಿದ್ದು, ಇದು ದಾಂಪತ್ಯದ ಬಗೆಗಿನ ಭಾವನಾತ್ಮಕ ನಂಬಿಕೆ, ಮಾನರಕ್ಷಣೆಯ ವ್ಯವಸ್ಥೆ, ವೈಯಕ್ತಿಕ ಪ್ರತಿಷ್ಠೆಗಳು, ಸ್ವ ನಿರ್ಧಾರಕ್ಕೆ ಸಂಬಂಧಿಸಿದವುಗಳಾಗಿವೆ. ಇವೆಲ್ಲವೂ ಸಾಮಾಜಿಕ ತಳಹದಿಯ ಮೇಲೆ ರೂಪ ಗೊಂಡಿವೆ.

I. ದಾಂಪತ್ಯ ಬದುಕಿನ ಭಾವನಾತ್ಮಕ ನಂಬಿಕೆ

ಸಮಾಜದಲ್ಲಿ ಗಂಡು ಹೆಣ್ಣಿನ ನಡುವೆ ಪತಿ–ಪತ್ನಿಯರೆಂಬ ಭಾವನೆ ಬೆಳೆದಾಗಿನಿಂದಲೂ ಅವರಿಬ್ಬರ ನಡುವಿನ ಗಾಢ ಸಂಬಂಧ, ಸುಖ–ದುಃಖ ನೋವು ಸಂಕಟಗಳು ಅವರಿಬ್ಬರ ಸಂಬಂಧದಲ್ಲಿ ಒಂದಾಗಿ ಪರಿಣಾಮ ಬೀರಿದವು. ಒಂದನ್ನು ಬಿಟ್ಟು ಇನ್ನೊಂದರ ಅಸ್ತಿತ್ವವೇ ಇಲ್ಲ ಎನ್ನುವಷ್ಟರ ಮಟ್ಟಿಗೆ ಅವೆರಡೂ ಜೀವಿಗಳು ಒಂದಾಗಿ ಕೊನೆಗೆ ಸಾವಿನಲ್ಲೂ ಒಂದಾದವು. ಈ ಭಾವನಾತ್ಮಕ ನೆಲೆಯು ಸತಿಪದ್ಧತಿಯ ಹುಟ್ಟಿಗೆ ಕಾರಣವಾಗಿರಬೇಕು. ಈ ಹಿನ್ನೆಲೆಯನ್ನಾಧರಿಸಿ ಮರಣ ಹೊಂದಿದ ವ್ಯಕ್ತಿಯ ಹೆಂಡತಿಯ ದುಃಖವನ್ನು ಎರಡು ರೀತಿಯಲ್ಲಿ ಗುರುತಿಸಲು ಸಾಧ್ಯವಿದೆ. ಒಂದು ಪತ್ನಿಯು ಪತಿ ಮರಣ ಹೊಂದಿದ್ದನ್ನು ಕಂಡಾಕ್ಷಣ ಅಥವಾ ಕೇಳಿದಾಕ್ಷಣ ಮರಣ ಹೊಂದುವುದು. ಇಲ್ಲವೇ ಪತಿ ಮರಣ ಹೊಂದಿದ್ದನ್ನು ಪತ್ನಿ ಕಂಡು ಅಥವಾ ಕೇಳಿ ತಾನೂ ಬದುಕಲು ಇಚ್ಚಿಸದೇ ಮರಣ ಹೊಂದಲು ನಿಶ್ಚಯಿಸಿ ಸಾಯುವುದು.

ಜನ್ನನ' ಅನಂತನಾಥ ಪುರಾಣ'ದಲ್ಲಿ ಸುನಂದೆಯ ಮರಣ ಮೊದಲಿನ ಕಾರಣಕ್ಕೆ ಸಂಬಂಧಿಸಿದರೆ, ರನ್ನನ 'ಅಜಿತನಾಥ ಪುರಾಣ'ದಲ್ಲಿಯ ಗುಂಡಮಬ್ಬೆಯ ಮರಣವನ್ನು ಎರಡನೆಯ ಕಾರಣಕ್ಕೆ ಅನ್ವಯಿಸಿಕೊಳ್ಳಬಹುದು. ವಸುಷೇಣನ ಶಿರವನ್ನು ಕಂಡ ಸುನಂದೆಯು ಮರಣ ಹೊಂದಿದ ಸಂದರ್ಭವನ್ನು ಜನ್ನ ಹೀಗೆ ಚಿತ್ರಿಸುತ್ತಾನೆ.

"ಹೃದಯದೊಳಿರ್ದ ವಲ್ಲಭನನಾಕ್ಷಣ ಭೀತಿಯನೀಕ್ಷಿಪಂತೆ ಮು
ಚ್ಚಿದುವಲರ್ಗಣ್ಬೊಣರ್ತಡವಿ ನೋಡುವವೋಲ್ಕುಚ ಮಧ್ಯದಲ್ಲಿಗಾ
ದುದುಕರಪಲ್ಲವಂ ಸರಮಾಲಿಸುವಂತೆ ವೊಗಂ ಮಲಗಿತಂ
ಗದೊಳಿರ್ದ ಶೂನ್ಯಮಾಗರಸುವಂತಸುಪೋಯ್ತುಸಿತಾಬ್ಜ ನೇತ್ರಯಾ"[೧೬]

ಇಲ್ಲಿ ಗಂಡನ ಶಿರವನ್ನು ಕಂಡ ಪತ್ನಿ ಸುನಂದೆಗೆ ಯಾವ ಮಾತು ಬಾರದೇ ದುಃಖ ತಪ್ತಳಾಗಿ ಮರಣ ಸಂಭವಿಸಿತು ಎಂಬಲ್ಲಿ ಅವರೀರ್ವರ ನಡುವಿನ ಭಾವನಾತ್ಮಕ ಸಂಬಂಧದ ಚಿತ್ರಣವಿದೆ. ಜೈನಧರ್ಮದಲ್ಲಿ ಪತಿ ಮರಣದ ನಂತರ ಪತ್ನಿಯು ಜಿನದೀಕ್ಷಾಚರಣ ಕೈಗೊಳ್ಳುವ ಅಥವಾ ಶುಭಚರಿತದಿಂದ ಮರಣ ಹೊಂದುವ ಮಾರ್ಗಗಳಿವೆ. ಪತಿ ನಾಗದೇವ ಯುದ್ದದಲ್ಲಿ ಮರಣ ಹೊಂದಿದಾಗ ಸತಿ ಗುಂಡಮಬ್ಬೆ ಪತಿಯನ್ನು ಅಗಲಿರಬಾರದೆಂಬ ಪ್ರೀತಿಯ ಕುಲವಧುವಿನ ಆಚರಣೆಯ ನೆಲೆಯಿಂದಾಗಿ ಗುಂಡಮಬ್ಬೆಯಲ್ಲಿಗೆ ಬಂದು 'ನಾಗದೇವನೊಡನಾಂ ಬೆಸವೇಳ್ದಪೆ ನೆಂದು ಬೇಡಿಕೊಂಡಿನಿಯನನಪ್ಪಿಕೊಂಡು ಚಿತಮಾಗೆ ಚಿತಾಗ್ನಿಯೊಳಣ್ಮಿ ಸತ್ತಳು'[೧೭] ಎಂಬುದು 'ಅಜಿತನಾಥ ತೀರ್ಥಂಕರ ಪುರಾಣ'ದಲ್ಲಿ ಉಲ್ಲೇಖಿತವಾಗಿದೆ. ಈ ರೀತಿಯ ಶೋಕ ಸ್ಥಾಯಿಗಳು ಆಧುನಿಕ ಪೂರ್ವ ಕನ್ನಡ ಸಾಹಿತ್ಯದಲ್ಲಿ ಉಲ್ಲೇಖಗೊಂಡಿವೆ."ಪ್ರಾಣ ಪ್ರಿಯರ್ಗಾ ಪ್ರಾಣಮನೊಲಿ ದೀವುದೆಂಬುದೊಂದಚ್ಚರಿಯೇ ನಲ್ಲರನಗಲ್ದಾರು ಸೈರಿಪರು ಮೋಕ್ಷಕ್ಕೆಯ್ದಿದ ನುಡಿಯಾದರೆ ಹರವನಾಕ್ಷಣದೊಳೆಬಿಸುಡುವರು"[೧೮] ಎಂಬಂತಹ ಮಾತುಗಳು ಪತಿಯನ್ನು ಅಗಲಿದ ಪತ್ನಿಗೆ ತಕ್ಷಣ ಉಂಟಾಗುವ ದುಃಖದ ಪರಿಣಾಮವನ್ನು ಸೂಚಿಸುತ್ತವೆ.

ಇದೇ ರೀತಿ 'ಗಿರಿಜಾ ಕಲ್ಯಾಣ' ಮತ್ತು 'ಮೋಹನ ತರಂಗಿಣಿ'ಯಲ್ಲಿ ಕಾಮದಹಿಸಿ ಹೋದಾಗ ಆದ ರತಿವಿಲಾಪ, ಗದಾಯುದ್ಧ ಕಾವ್ಯದಲ್ಲಿ ಹೋರಾಡಿ ಮಡಿದ ವೀರ ಪತ್ನಿಯರ ದುಃಖ, ಕರ್ಣಾಟಕ ಭಾರತ ಕಥಾಮಂಜರಿಯಲ್ಲಿ ಧುರ್ಯೋಧನ ಹಾಗೂ ನೃಪ ಪತ್ನಿಯರ ಅಳಲು ಈ ಮೊದಲಾದ ಪ್ರಸಂಗಗಳು ಪತ್ನಿಯರ ಅಮರ ಪ್ರೇಮವನ್ನು ಮತ್ತು ದು:ಖವನ್ನು ಸೂಚಿಸುತ್ತವೆ.[೧೯] ಹೀಗೆ ವೀರತ್ವದ ಮನೋಭಾವ ಹೊಂದಿರುವ ಸ್ತ್ರೀಯರಲ್ಲಿ ಪತ್ನಿಯರೆನಿಸಿಕೊಳ್ಳದ ಸ್ಥಿತಿಯನ್ನು ಹಾಗೂ ಪ್ರೀತಿಯ ಪತಿಯನ್ನು ಅಗಲಿ ದುಃಖವನ್ನು ಅನುಭವಿಸುವ ಸ್ಥಿತಿಯನ್ನು ಸಾಮಾನ್ಯವಾಗಿ ಬಯಸುವುದಿಲ್ಲ ಎಂಬುದನ್ನು ದಾಂಪತ್ಯದ ಭಾವನಾತ್ಮಕ ನಂಬಿಕೆ ಅಭಿವ್ಯಕ್ತಿಸುತ್ತದೆ.

ಜನಪದ ಸಾಹಿತ್ಯದಲ್ಲೂ ಈ ರೀತಿಯ ಅಮರ ಪತ್ನಿಯರ ಉಲ್ಲೇಖಗಳು ಕಂಡು ಬರುತ್ತವೆ. ಕೊಂಡದ ಚೆನ್ನಮ್ಮ, ಮಾಣಿಕ್ಯಶೆಟ್ಟಿ, ಉರುಳೂರಮ್ಮ, ನಾಗವ್ವ, ಈರೋಬಿ ಕಥೆಗಳಲ್ಲಿ ಪತಿ ಮರಣ ಹೊಂದಿದಾಗ ಸತಿ ಅದನ್ನು ಸಹಿಸದೇ ತಾನು ಮರಣ ಸ್ವೀಕರಿಸುವುದನ್ನು ಕಾಣಬಹುದಾಗಿದೆ. ಈರೋಬಿಯ ಪತಿ ಶೆಟ್ಟಿ ಶಂಕರರಾಯ ಬಾಣಂತಿ ಈರೋಬಿ ಬಟ್ಟಲಲ್ಲಿ ಉಣ್ಣುತ್ತಿದ್ದಾಳೆಂದು ಹರಿವಾಣ ತರುವುದಕ್ಕೆ ಘಟ್ಟ ಇಳಿದು ಕೆಳಕ್ಕೆ ಹೋಗಿ ಅಲ್ಲಿ ಮರಣ ಹೊಂದುತ್ತಾನೆ. ಈರೋಬಿ ಕೆಟ್ಟ ಸ್ವಪ್ನ ಕಾಣುತ್ತಾಳೆ. ಅಲ್ಲದೇ ದನ ಮೇಯಿಸಲು ಹೋದ ಈರೋಬಿಗೆ ದಾರಿಯಲ್ಲಿ ಹೋಗುವವರು ನಿನ್ನ ಗಂಡ ರಣದಲ್ಲಿ ಮಡಿದಿದ್ದಾನೆಂದು ಅವನ ತಲೆಗೆ ಹೊಡೆಯಲಾಗಿದೆ ಎಂದು ಹೇಳುತ್ತಾರೆ. ಆಗ ಈರೋಬಿ ಹೀಗೆ ಹೇಳುತ್ತಾಳೆ.

ಸತ್ತ ಸುದ್ದಿ ಬರಲಿ ನೆತ್ತರದರಬಿ ಬರಲಿ
ಕಿತ್ತುಳಿ ಬರಲಿ ಗುರುತಿಗೆ ಸೋಮವಾರದ
ಹೋತನಂತೆ ಕೊಂಡ ಹೋಗತೀನಿ
ಗಂಡ ಸಾಯೋಕಿಂತ ಮುಂಡ್ಯಾಗೋಕಿಂತ
ಕಂಡರ ಮನೆಯ ಕಸನ್ಹಾಕೆ ಸಾಯೋಕಿಂತ
ಕೊಂಡವನ್ನೋದೆ ಕಡುಲೇಸು[೨೦]

ಎಂದ ಈರೋಬಿಗೆ ಅಪ್ಪ, ಅಣ್ಣ, ಸತಿ ಹೋಗಬೇಡವೆಂದರೂ ಅವಳು ಸೀರೆ ಕುಪ್ಪಸಬೇಡ ನನಗೆ 'ಒಡೆಗಿಚ್ಚು ಕೊಡಿ' ಎಂದು ಹೇಳಿ ಸಹಗಮನ ಹೋಗುತ್ತಾಳೆ. ಇದೇ ರೀತಿ ಜನಪದ ಖಂಡಕಾವ್ಯದಲ್ಲಿ ಬರುವ 'ನಾಗವ್ವ' ಎಂಬುವವಳು ಮರಣ ಹೊಂದಿದ ಪತಿಯೊಂದಿಗೆ ಚಿತೆಯೇರುವುದನ್ನು ಗುರುತಿಸಲಾಗಿದೆ.[೨೧] 'ಅತ್ತೆಯ ಮಗನೆ ಚಿಂದಯ್ಯ(ನಾ)ಕುಟ್ಟೆ ನಾ ಹತ್ತೋದೆಲೇಸು ಒಡಗಿಚ್ಚು' ಎಂಬಂಥ ಸತಿಯಾಗಲಿರುವ ನಾಗವ್ವಳ ಮಾತುಗಳನ್ನು ಕೇಳಿ ತಂದೆ ತಾಯಿ 'ಸತಿ' ಹೋಗಬೇಡವೆಂದು ಹೇಳಿದರೂ ಕೇಳದೆ ಕಿಚ್ಚನ್ನು ಹತ್ತುವುದೇ ಲೇಸೆಂದು ಹೇಳುತ್ತಾಳೆ. ಇವು ಸತಿಯಾಗಲಿರುವವಳ ಪತಿಯ ಮೇಲಿನ ಅಮರ ಪ್ರೇಮವನ್ನು ಸಾರುವವುಗಳೇ ಆಗಿವೆ.[೨೨] ಸತಿಯಾದವಳಿಗೆ ಪ್ರಾಣ ಪತಿಯೇ ಮರಣ ಹೊಂದಿ ಪ್ರೀತಿಯ ಬದುಕು ಶೂನ್ಯವಾದಾಗ ಸಾವು ಬೇಕೆನಿಸುವುದು ವಾಸ್ತವ ಸತ್ಯ. ಗಂಡನ ಮೇಲಿನ ನೈಜ ಪ್ರೇಮವನ್ನು ತಿಳಿಸುವುದು ಅವಳಿಗೆ ಇರುವ ಒಂದೇ ಮಾರ್ಗ ಎಂಬುದು ಪತಿಯ ಮೇಲಿನ ಅಮರ ಪ್ರೇಮವನ್ನು ಸಾರುತ್ತವೆ.

ಶಾಸನಗಳಲ್ಲೂ ಈ ರೀತಿಯ ಉಲ್ಲೇಖಗಳಿವೆ. ಇಲ್ಲಿ ಕೂಡ, ಸಹಿತ, ಸಂಗಡ ಎಂಬ ಮೊದಲಾದ ಪದಗಳು ಬಳಕೆಗೊಂಡಿವೆ. "ಹರಲೂರ ಅಂಮಗ ಉಡನಬಯಿರವಗಉಡಿತಂಮ

ಸ್ತ್ರೀಯರು ಸಹಸಂಗತಿಯಿಡಿದರು ಶ್ರೀ”[೨೩] “ಆವವಲಿಯ ಗೋಪಗವಡನ ಬೆಸಮಗಂ ಬೈಚಿನಾಯ್ಕನ ಮಗ ರಾಯ ಸ್ವರ್ಗಸ್ಥನಾದಲ್ಲಿ ಆತನ ಮದವಳಿಗೆ ಆತನ ಕೂಡೆ ಸಗಮನಸ್ಥಳಾದಳು”. ಎಂಬುದು ಶಾಸನ ಪಾಠದಲ್ಲಿ ಉಲ್ಲೇಖಗೊಂಡಿದೆ. ಪತಿ ಪತ್ನಿಯರು ದೈನಂದಿನ ಬದುಕಿನಲ್ಲಿ ಅಷ್ಟೇ ಅಲ್ಲದೇ ಸಹಗಮನದಲ್ಲಿಯೂ ಒಂದಾಗುವ ಭಾವನಾತ್ಮಕ ನಂಬಿಕೆಯುಳ್ಳವರು ಎನ್ನುವ ಅಭಿಪ್ರಾಯ ಕಂಡು ಶಾಸನಗಳು ಪತ್ನಿಯನ್ನು ‘ಅರ್ಧಾಂಗಿ’ ಎಂದು ಉಲ್ಲೇಖಿಸಿವೆ. ಹಲವು ಸತಿ ಶಿಲ್ಪಗಳು ಪತಿಯ ಮೇಲಿನ ಪ್ರೀತಿಯನ್ನು ಅಭಿವ್ಯಕ್ತಿಗೊಳಿಸುವುದನ್ನು ಕಾಣಬಹುದು. ಉದಾಹರಣೆಗೆ ಶ್ರೀರಂಗ ಪಟ್ಟಣದ ಅರಕೇರಿ, ಗುಂಡ್ಲಪೇಟೆ, ಕಿತ್ತೂರು ಮೊದಲಾದವುಗಳಲ್ಲಿ ಸತಿ ಕೈ ಎತ್ತಿ ನಿಂತಿರುವುದು, ಅವಳನ್ನು ತನ್ನ ಕೈಯಿಂದ ಬಳಸಿಕೊಂಡು ಪತಿ ತೀರ ಹತ್ತಿರ ನಿಂತಿರುವುದು, ಸತಿ–ಪತಿಯ ಅಮರ ಪ್ರೇಮವನ್ನು ಸಾರುತ್ತವೆ. ಅಲ್ಲದೇ ಅದೇ ರೀತಿ ಇನ್ನೊಂದು ಶಾಸನದಲ್ಲಿ “ಆತನ ಅರ್ಧಾಂಗಿ ಚೆಂನಕ್ಕನು ಸಹಗಮನದಿ ಸ್ವರ್ಗಸ್ತೆಯಾದಳು. ಆತನ ಅರ್ಧಾಂಗಿ ಮಲಿದೇವಿ ನಡಸಮಾಧಿಯನು ಹೊಕ್ಕು ದೇವರೊಳಗಾಗಿ ಹೋದಳು.”[೨೪] ಎಂಬ ಇತ್ಯಾದಿ ಶಾಸನ ಪಾಠಗಳು ಪತಿ ಪತ್ನಿಯರು ಅಭೇದವೆಂದೂ, ಸಹಗಮನದಲ್ಲೂ ಅವರು ಅಮರರಾದರೆಂದೂ, ಶಾಸನಕವಿ ಹೇಳಲಿಚ್ಚಿಸಿರುವುದು ಅವರ ಅಮರ ಪ್ರೇಮಕ್ಕೆ ನಾಂದಿಯಾಗಿವೆ.[೨೫]

ವಿದೇಶಿ ಪ್ರವಾಸಿಗರು ತಮ್ಮ ಪ್ರವಾಸಿ ಬರವಣಿಗೆಯಲ್ಲಿ ದಾಂಪತ್ಯದ ಬಗೆಗಿನ ಭಾವನಾತ್ಮಕ ನಂಬಿಕೆಯ ಮೇಲಿನ ಪ್ರೇಮದಿಂದ ಪತ್ನಿಯು ಸತಿ ಹೋಗುತ್ತಿದ್ದುದನ್ನು ಹೀಗೆ ಉಲ್ಲೇಖಿಸಿದ್ದಾರೆ. “ಗಂಡ ತೀರಿ ಹೋದರೆ ಹೆಂಡತಿಯು ಗಂಡನ ಜೊತೆಯಲ್ಲಿ ಬಿದ್ದು ಸಾಯುವುದು ಇಲ್ಲಿಯ ಪದ್ಧತಿ. ಗಂಡನಿಗೆ ಅತ್ಯಂತ ಪ್ರೀತಿ ಪಾತ್ರಳಾದ ಹೆಂಡತಿಯು ಸತ್ತ ಗಂಡನನ್ನು ಆಲಂಗಿಸಿಕೊಂಡು ಚಿತೆಯಲ್ಲಿ ಭಸ್ಮವಾಗುತ್ತಾಳೆ. ಉಳಿದ ಹೆಂಡತಿಯರು ಸರ್ವಾಲಂಕೃತರಾಗಿ ತದನಂತರ ಚಿತೆಯಲ್ಲಿ ಬೀಳುತ್ತಾರೆ.”[೨೬] ಈ ಪದ್ಧತಿ ಮಧ್ಯ ಇಂಡಿಯಾದಲ್ಲಿ ಜಾರಿಯಲ್ಲಿದೆ ಎಂದು ನಿಕೊಲೊ–ದೆ–ಕೊಂತಿ ಉಲ್ಲೇಖಿಸಿದ್ದಾನೆ.

ಪೋರ್ಚುಗೀಸ್ ಪ್ರವಾಸಿಗನಾದ ದು–ಆರ್ತೆ–ಬಾರ್ಬೋಸಾ ಕ್ರಿ.ಶ.೧೫೧೫ ರಲ್ಲಿ ವಿಜಯ ನಗರ ರಾಜ್ಯದಲ್ಲಿ ನಡೆಯುತ್ತಿದ್ದ ಸಹಗಮನವನ್ನು ಹೀಗೆ ದಾಖಲಿಸಿದ್ದಾನೆ. “ರಾಜನು ಸತ್ತರೆ ಅವನ ಅಂತಃಪುರದ ನಾನೂರು, ಐನೂರು ಸ್ತ್ರೀಯರು ಅವನೊಡನೆ ಚಿತೆಯಲ್ಲಿ ಬೀಳುತ್ತಾರೆ. ಅವರೆಲ್ಲರ ಅನುಕೂಲಕ್ಕಾಗಿ ಗುಂಡಿಯಲ್ಲಿ ಚಿತಾಗ್ನಿಯನ್ನು ಸಿದ್ಧಪಡಿಸಿರುತ್ತಾರೆ. ಶ್ರೀಗಂಧದ ಮರಗಳನ್ನು, ಎಣ್ಣೆ, ತುಪ್ಪ, ಪಚ್ಚ ಕರ್ಪೂರವನ್ನು ಹೇರಳವಾಗಿ ಶೇಖರಿಸಿರುತ್ತಾರೆ. ಈ ಚಿತೆಯಲ್ಲಿ ಬೀಳುವುದಕ್ಕೆ ಪತ್ನಿಯರು ನಾಮುಂದು, ತಾಮುಂದು ಎಂದು ನುಗ್ಗುತ್ತಾರೆ. ಇಲ್ಲಿ

ರಾಜನ ಅನುಚರರೂ ಇದೇ ರೀತಿ ರಾಜ ಮರಣ ಹೊಂದಿದಾಗ ಚಿತೆಯಲ್ಲಿ ಬೀಳುತ್ತಾರೆ."[೨೭] ಎಂದಿದ್ದಾನೆ. ಇಲ್ಲಿ ಪ್ರಿಯರಾಜನ ಮರಣವನ್ನು ಸಹಿಸದೇ ಸತಿಯರು ತಮ್ಮ ಅಮರ ಪ್ರೇಮವನ್ನು ಸಾರಿರುವುದು ಕಂಡುಬರುತ್ತದೆ. ವೆನೀಸ್ ನಗರದವನಾದ ಗಾಸ್ಪಾರೊ ಬಾಲ್ಬಿ ಕ್ರಿ. ಶ.೧೫೮೩ ರಿಂದ ಕ್ರಿ.ಶ.೧೫೮೬ರ ವರೆಗೆ ಭಾರತದಲ್ಲಿ ಸಂಚರಿಸಿ ಸಹಗಮನವನ್ನು ಹೀಗೆ ದಾಖಲಿಸುತ್ತಾನೆ. "ಇಲ್ಲಿ ಚಿತೆಯನ್ನೇರುವುದು ಸತ್ತ ಗಂಡನ ಮೇಲಿನ ಪ್ರೇಮ ಅಮರವಾದುದೆಂದು ತೋರಿಸಲು ರಾಜನೋ ಅಥವಾ ಆಸ್ಥಾನದ ಅಧಿಕಾರಿಯೋ ಸತ್ತರೆ ಅವನ ಮನೆಯ ಹೆಂಗಸರೆಲ್ಲ ಕೆಂಡಕೊಂಡವಾಗುತ್ತಾರೆ."[೨೮] ಎಂದು ಉಲ್ಲೇಖಿಸುತ್ತಾನೆ.

ಡಚ್‌ನೌಕರ, ಹಾಲೆಂಡಿನ ಡೈರೆಕ್ಟರುಗಳಿಗೆ ಬರೆದ ಪತ್ರದಲ್ಲಿ ಸತಿಯ ಅಮರ ಪ್ರೇಮದ ಕುರಿತು ಹೀಗೆ ದಾಖಲಿಸಿದ್ದಾನೆ. "ಕುತುಬ್‌ಷಾನ ರಾಜ್ಯದಲ್ಲಿ ಸಹಗಮನ ಮಾಡುತ್ತಿದ್ದ ಸ್ತ್ರೀಯನ್ನು ತಡೆಯಲೆತ್ನಿಸಿದಾಗ ಅದನ್ನು ಅವಳು ಒಪ್ಪದೇ ತನ್ನನ್ನು ಯಾರು ಅಷ್ಟೊಂದು ಪ್ರೀತಿಸಿದ್ದನೋ ಆ ಗಂಡನನ್ನು ತಾನೂ ಹಿಂಬಾಲಿಸದಿದ್ದರೆ ಆತನಿಗೆ ಅನ್ಯಾಯ ಮಾಡಿದಂತಾಗುತ್ತದೆಂದು, ಪ್ರಾಣಸಮಾನ ಪತಿಯೇ ಮರಣ ಹೊಂದಿ ಪ್ರೀತಿ ಭಗ್ನವಾದಾಗ ತಾನೂ ಜೀವಿಸುವುದಾದರೂ ಹೇಗೆ ಎಂದು ನುಡಿದಳು"[೨೯] ಎಂದಿದ್ದಾನೆ.

ಮೊಗಲ್ ದೊರೆ ಜಹಂಗೀರನ ಆಳ್ವಿಕೆಯ ಕಾಲದಲ್ಲಿ ಭಾರತಕ್ಕೆ ಬಂದಿದ್ದ ಫ್ರಾನ್ಸಿಸ್ಕೋ ಪೆಲ್ಸಾರ್ಟ್ ಆಗ್ರಾದಲ್ಲಿ ಗಂಡನ ಮೇಲಿನ ಅಗಾಧ ಪ್ರೀತಿ, ಹೆಂಡತಿಯು ಸಹಗಮನ ಹೋಗಲು ಪ್ರೇರೇಪಿಸಿರುವುದನ್ನು ಹೀಗೆ ದಾಖಲಿಸಿದ್ದಾನೆ. "೧೮ ವರ್ಷದ ಸುಂದರ ಯುವತಿ ಸಹಗಮನ ಹೊಂದುವುದನ್ನು ಸ್ಥಳದ ರಾಜ್ಯಪಾಲ ತಪ್ಪಿಸಲು ಪ್ರಯತ್ನಿಸಿದ. ಜೊತೆಗೆ ಆಕೆ ಬದುಕಿರುವವರೆಗೆ ೫೦೦ ರೂಪಾಯಿ ಜೀವನಾಂಶ ಕೊಡುವುದಾಗಿಯೂ ಹೇಳಿದ. ಆದರೆ ಅವಳು ತಾನು ಬಡತನದಿಂದ ಸಾಯುತ್ತಿಲ್ಲ. ತನ್ನ ಗಂಡನ ಮೇಲಿನ ಅಗಾಧ ಪ್ರೀತಿಯಿಂದ ನಾನು ಸತಿ ಹೋಗುತ್ತಿದ್ದೇನೆ. ರಾಜನ ಭಂಡಾರವನ್ನೇ ನನಗೆ ಕೊಟ್ಟರೂ ನಾನು ಮಾಡಿದ ನಿರ್ಧಾರವನ್ನು ಬದಲಿಸಲಾರೆ, ಎಂದು ಒಂದು ವರ್ಷದ ತನ್ನ ಮಗುವನ್ನು ಮುದ್ದಿಸಿ ಸತ್ತ ಗಂಡನೊಡನೆ ಮಲಗಿ ತಾನೇ ತನ್ನ ಕೈಯಿಂದಲೇ ಬೆಂಕಿ ಹತ್ತಿಸಿಕೊಂಡು ಸಹಗಮನವಾದಳು."[೩೦] ಎಂದು ಉಲ್ಲೇಖಿಸಿದ್ದಾನೆ.

ಸಂತ ಜಾನ್ ಬ್ರಿಟ್ಟೋ ಎಂಬಾತನು ಜಿಂಜಿನಾಡಿನ ಕುತ್ತೂರಿನ ಪಟೇಲನಾದ ಮೀನಾಕ್ಷಿ ಅಯ್ಯರನ ಹೆಂಡತಿಯ ಅಮರ ಪ್ರೇಮವನ್ನು ಹೀಗೆ ದಾಖಲಿಸುತ್ತಾನೆ. "ಕುತ್ತೂರಿನ ಪಟೇಲ ಮೀನಾಕ್ಷಿ ಅಯ್ಯರ್ ಕಾಲವಾದ ಇದನ್ನು ಸಹಿಸಲಾರದೇ ಆತನ ಪತ್ನಿ ಶವದ ಚಿತೆಯಲ್ಲಿಯೇ

ಸಹಗಮನ ಮಾಡಿದಳು".[೩೧] ಇಕ್ಕೇರಿಯಲ್ಲಿ ಗಿಯಕ್ಕಮನ ಸಹಗಮನವನ್ನು ವಿವರಿಸುವಾಗ ಪಿಯಾತ್ರೊ ದೆಲ್ಲಾವಲ್ಲೆ ಪತಿಯ ಮೇಲಿನ ಅವಳ ಅಮರ ಪ್ರೇಮವನ್ನು ಹೀಗೆ ಸ್ಮರಿಸುತ್ತಾನೆ. "ಸತಿ ಹೋಗುವಾಗ ಇಲ್ಲವೆ ನಡೆಯುವಾಗ ಗೊತ್ತಾದರೆ ಅಲ್ಲಿಗೆ ಹೋಗಿ ಇದ್ದು ಅವಳನ್ನು ನೋಡದೆ ಬರುವುದಿಲ್ಲ ಅವಳ ಅಮರ ಪ್ರೇಮಕ್ಕೆ ನನ್ನ ಗೌರವವನ್ನು ಅರ್ಪಿಸಿ ಬರುವೆ"[೩೨] ಎಂದು ದಾಖಲಿಸಿದ್ದಾನೆ. ಈ ರೀತಿಯಾಗಿ ವಿದೇಶಿ ಪ್ರವಾಸಿಗರು ಸತಿಪದ್ಧತಿಯ ಕಾರಣಗಳಲ್ಲಿ ಒಂದಾಗಿರುವ ದಾಂಪತ್ಯದ ಬಗೆಗಿನ ಭಾವನಾತ್ಮಕ ನಂಬಿಕೆ ಅಥವಾ ಪತಿಯ ಮೇಲಿನ ಅಮರ ಪ್ರೇಮವನ್ನು ಉಲ್ಲೇಖಿಸುತ್ತಾರೆ. ಹೀಗೆ ದಾಂಪತ್ಯ ಜೀವನಕ್ಕೆ ಅಡಿಪಾಯವಾಗಿರುವ ಪ್ರೀತಿ ಸತಿಪದ್ಧತಿಗೆ ಕಾರಣವಾಗಿರಬೇಕೆಂದು ಇದರಿಂದ ತಿಳಿದು ಬರುತ್ತದೆ.

II. ಪಾತಿವ್ರತ್ಯ ಪರಿಕಲ್ಪನೆ

ಪಾತಿವ್ರತ್ಯ ಪರಿಕಲ್ಪನೆಯು ತುಂಬಾ ವಿಸ್ತಾರವಾದ ಪತಿವ್ರತಾಧರ್ಮದ ಸೂತ್ರಿಕೆಗಳನ್ನು ಹೊಂದಿ ಹೆಣ್ಣಿನ ನಿಯಂತ್ರಣದ ಪರಮಾಧಿಕಾರ ಪಡೆಯಿತು. ಮನುಸ್ಮೃತಿಯ ಸೂತ್ರಿಕೆಗಳು ಪಾತಿವ್ರತ್ಯ ಪರಿಕಲ್ಪನೆಯನ್ನು ಪ್ರತಿಪಾದಿಸಿದವು. ಮುಂದೆ ಬಂಧುವರ್ಮನು 'ಸತಿಧರ್ಮಸಾರ'ವನ್ನು, ಸಂಚಿಹೊನ್ನಮ್ಮಳು 'ಹದಿಬದೆಯ ಧರ್ಮ'ಎಂಬ ಕೃತಿಗಳನ್ನು ಬರೆದಿರುವುದು ಪಾತಿವ್ರತ್ಯ ತತ್ವದ ಜನಪ್ರೀಯತೆಯನ್ನು ಹೇಳುತ್ತವೆ. ಧರ್ಮಗಳು ಪ್ರತಿಪಾದಿಸುವ ಹಾಗೆ ವಿವಾಹದ ನಂತರದಲ್ಲಿ ಸ್ತ್ರೀ ಅನುಸರಿಸಬೇಕಾದ ಮೌಲ್ಯವೇ ಪಾತಿವ್ರತ್ಯ ಪರಿಕಲ್ಪನೆಯಾಗಿದೆ. ಸತಿಯಾದವಳು ಸದಾ ಪತಿ ನಿಷ್ಠೆಯನ್ನು ವ್ರತವಾಗಿ ಆಚರಿಸಬೇಕೆಂಬ ನಿಯಮವನ್ನು ಒಳಗೊಂಡಿದೆ. ಗಂಡನ ಪಾಲಿಗೆ ಹೆಣ್ಣು ಒಂದು ಒಡವೆಯಾಗಿರುವುದರಿಂದ 'ಒಡೆಯನಿರಿಸಿಂತಿರ್ಪದಲ್ಲಿದೆ ಪೇಳೊಡವೆಗೆ ಬೇರುಂಟೆ' ಎಂದು ಹೊನ್ನಮ್ಮ 'ಹದಿಬದೆಯ ಧರ್ಮ'ದಲ್ಲಿ ಹೇಳಿರುತ್ತಾಳೆ.

ಈ ಮಾತು ಪುರುಷ ಜಗತ್ತಿನಲ್ಲಿ ಹೆಣ್ಣಿನ ಸ್ಥಾನವನ್ನು ಹೇಳುತ್ತದೆ. ಇಲ್ಲಿ ಸ್ತ್ರೀಯ ಒಳ್ಳೆಯ ನಡತೆ, ಶೀಲ, ಸೇವೆ, ಭಕ್ತಿ ಮೊದಲಾದವುಗಳನ್ನು ಪುರುಷ ಅಪೇಕ್ಷಿಸುವಂತಾಯಿತು. ಅಲ್ಲದೇ ಪುರುಷ ಸೋತು ಸ್ತ್ರೀ ಎಂಬ ಕಲ್ಪನೆಯೊಂದಿಗೆ 'ಪಾತಿವ್ರತ್ಯ' ಕಲ್ಪನೆಯೂ ಬೆಳೆದು ಬಂದಿತು. ಸ್ತ್ರೀಯನ್ನು ಮುತ್ತೈದೆ ಎಂಬ ಕಲ್ಪನೆಯಲ್ಲಿ ಕಂಡುಕೊಂಡು ಮುತ್ತೈದೆ ಮಂಗಳವೆನಿಸಿದರೆ, ಮುತ್ತೈದೆಯಲ್ಲದವಳು ಅಮಂಗಳವೆನಿಸಿದಳು. 'ದೀರ್ಘಸುಮಂಗಲೀಭವ','ಅಖಂಡ ಸೌಭಾಗ್ಯ ವತೀಭವ' ಎಂಬ ಮಾತುಗಳು ಪತಿಯ ಶ್ರೇಷ್ಠತೆಯನ್ನು, ಪತಿಯ ಮಂಗಲತೆಯನ್ನು, ಪಾತಿವ್ರತ್ಯಗಳನ್ನು ಸೂಚಿಸಿವೆ. ಪಾತಿವ್ರತ್ಯವನ್ನು ವೈಭವೀಕರಿಸಿದ್ದರ ಫಲವಾಗಿ ವಿಧವೆಗೆ ಮರು ಮದುವೆಯ ಅವಕಾಶ ತಪ್ಪಿತು. ಅಲ್ಲದೇ ವಿಧವೆಗೆ ಕಠಿಣ ಜೀವನವನ್ನು ವಿಧಿಸಿದ್ದರಿಂದ

ಸೌಭಾಗ್ಯಕ್ಕೆ ಎಲ್ಲಿಲ್ಲದ ಪ್ರಾಮುಖ್ಯತೆ ಬಂದಿತು. ಮದುವೆಯಾದ ಹೆಣ್ಣು ಗಂಡನಿಗಿಂತ ಮೊದಲು ತಾನು ಸಾವನ್ನಪ್ಪಿದರೆ ದೀರ್ಘ ಸುಮಂಗಲಿಯರಾಗುವೆವು ಎಂಬ ಆದರ್ಶ ಮೂಡಿಸಿಕೊಳ್ಳು ವಂತಾಯಿತು.[೩೩] ಪತಿವ್ರತೆಯು ಗಂಡನ ಮರಣದ ನಂತರ ಬದುಕದೇ ಸತಿ ಹೋಗಲು ಇಚ್ಛಿಸಿದಳು. ಅದು ಅವಳಿಗೆ ಪವಿತ್ರ ಹಾಗೂ ಅವಶ್ಯಕ ಕರ್ತವ್ಯವೆನಿಸಿತು. ಅಲ್ಲದೇ ಸತಿಗೆ ಪಾತಿವ್ರತ್ಯವೇ ಅಂತಿಮ ಕಾರ್ಯವೆನಿಸಿತು.

"ಪತಿಯನುಳಿದರೆ ಬೆಂದ ಕೊರಡಿನ
ಗತಿಯಲಿಹುದು ಕನಿಷ್ಟ ಸತಿಗಾ
ಪತಿಯೆ ಗುರುಪತಿದೈವ ಪತಿಯಿಹಪರಕೆ ಸಾಧನವೂ
ಪತಿಯೆ ಭಾಗ್ಯ ನಿಧಾನ ಪರಿಕಿಸೆ
ಪತಿಯ ದಾನ ತಪೋವ್ರತಂಗಳು
ಪತಿಯನುಳಿದಿನಿತರಲಿ ಫಲಸತಿಗಿಲ್ಲವಿದು ಸಿದ್ದಾ"[೩೪]

ಗಂಡನೇ ಹೆಂಡತಿಯ ಪಾಲಿಗೆ ಸಾಕ್ಷಾತ್ ದೇವರೆಂಬುದೇ ಈ ನಿಲುವಿನ ಕೇಂದ್ರ ಆಶಯವಾಗಿತ್ತು. "ಮುಳದಲ್ಲಿ ಮುಳಿದು ಎಳೆಸಿದುದನೆಳಸಿ ಅಲ್ಲಗಳೆದುದೆಲ್ಲವನಲ್ಲಗಳೆದು"[೩೫] ತನಗೆ ಇಷ್ಟವೊ ಕಷ್ಟವೊ ಅವನು ಸರಿ ಎಂದದ್ದನ್ನು ಸರಿ ಎಂದು ಇಲ್ಲವೆಂದದ್ದನ್ನು ಇಲ್ಲ ಎಂದು ಬದುಕು ಸಾಗಿಸಬೇಕಿತ್ತು. ಆದ್ದರಿಂದ ಗಂಡನ ಸಾವಿನ ನಂತರ ತಾವು ಸಾಯುವುದು ಕೆಲವರಿಗೆ ಸುಲಭ ಮಾರ್ಗವಾಯಿತು.

ಜೀವಿಸುತ್ತಿರಿ ಪತಿಗೆ ಮಾಳ್ಪದು
ಸೇವೆಯನ್ನು ವಿನಯದಲಿ ಮನದಲಿಸಸ
ಭಾವಶುದ್ಧಿಯಲಾನುಕೂಲಾಜಿ ಪ್ರವೃತ್ತಿಯಲಿ
ಸಾವುದೂಡನೆಯ ಸತ್ತಡೆಂತುಡೊ
ದೇವ ಸುವ್ರತ ಸತಿಗೆ ಪತಿಯೇ
ದ್ವವವಲ್ಲದೆ ಬೇರದಾರನ್ಯುತ್ರ ಗತಿಯೆಂದಾ[೩೬]

ಇಲ್ಲಿ ಗಂಡ ಇರುವವರೆಗೆ ಅವನಿಗಾಗಿ ಸೇವೆ ಮಾಡುವುದು. ಅವನ ಸಾವಿನ ನಂತರ ತಾವು ಸಾಯುವುದು, ಗಂಡ ಸತ್ತನೆಂದು ತಿಳಿದೊಡನೆ ಹೆಂಡತಿಯರು "ಕೊಡಿಸು ನಮಗೆ ಕಿಚ್ಚು ನಿಮ್ಮ ಮಗನ ಬೆನ್ನುಬಿಡದಿರಬೇಕು"[೩೭] ಎಂದು ಅತ್ತೆಯನ್ನು ಕೇಳುವ ಸೊಸೆಯರು ಇದ್ದರು. ಕೆಲವು ಸಲ ಗಂಡ ಸಾಯುವ ಮೊದಲೇ ಸಾಯುವ ಹೆಂಡತಿಯರು ಇದ್ದರು. ಒಂದು ವೇಳೆ ಗಂಡ ಸತ್ತಾಗ ಅವನೊಂದಿಗೆ ಸಾಯದೆ ಉಳಿದವರನ್ನು "ಇಳೆಯೊಳಗ

ಸಮಬಲ ಪತಿಯಳಿದ ಸತಿಗೊಪ್ಪುವುದೇ ಬದುಕುವುದು”[೩೮] ಎಂದು ಪ್ರಶ್ನಿಸುತ್ತಿದ್ದರು.

ದೃಢ ಪತಿವ್ರತೆ ಹರಸಿ ತಾನುಗ್ಗಡದ ಭಕ್ತಿಯೊಳಗಗ್ನಿ ಪುರುಷನಿಗೆ ಝಡಿತೆಯಲಿ ಬಲ ಬಂದು ಬಿದ್ದಳು. ಎಂದು ದೃಢ ಮನಸ್ಸು ಮಾಡಿ ಸಾಯುವುದೇ ಸರಿಯಾದ ತೀರ್ಮಾನವೆಂದು ಸೂಚಿಸಲಾಗುತ್ತಿತ್ತು. ಜನಪದರು ಪತಿವ್ರತಾ ಧರ್ಮದಲಿ ಜಗದೊಳು ಬಾಳಿ, ನೀವು ಗತಿಸಿ ಹೋದರೂ, ನಿಮ್ಮ ನಾಮವು ಇರಲಿ. ಎಂದು ಪತಿವ್ರತೆಯರಿಗೆ ಸಹಗಮನ ಆಚರಣೆಯ ಕುರಿತು ಎಚ್ಚರಿಸುತ್ತಾರೆ.[೩೯] ಸೌಭಾಗ್ಯವತಿಯರಾಗಿ ಬದುಕಲು ಜನಪದರು ಆಸೆಪಟ್ಟಿರುವುದನ್ನು ಹಲವು ಕಥೆಗಳು, ಗೀತೆಗಳು, ಗಾದೆ ಮಾತುಗಳು, ನಂಬಿಕೆಗಳು ಹೇಳುತ್ತವೆ ಎಂಬುವುದನ್ನು ಇಲ್ಲಿ ಸ್ಮರಿಸಬಹುದು.

ದೇವ ಕಾಯೋ ಮುತ್ತೈದಿತನ
ಮೂಗ್ತಿ ಹ್ವಾದ ಬಳ್ಕ ಕಡಗಿ ಭವಹೀನ
ದೇವ ಕಾಯೋ ಮುತ್ತೈದಿತನ

ಎಂದು ಜನಪದರು ಬಯಸುತ್ತಾರೆ. ಹೀಗೆ ಸೌಭಾಗ್ಯ ಸಂಕೇತಗಳಾದ ತಾಳಿ, ಮೂಗುತಿ, ಕುಂಕುಮ, ಓಲೆ, ಕಾಲುಂಗರ ಸ್ತ್ರೀಯ ಜೊತೆ ಸ್ಥಿರವಾಗಿರಲೆಂದು ಆಶಿಸುತ್ತಾರೆ. ಇವು ಪಾತಿವ್ರತ್ಯ ರಕ್ಷಣೆಯ ಕುರುಹುಗಳಾಗಿವೆ.[೪೦] ಗಂಡನ ಸಾವಿನ ನಂತರ ಇವುಗಳನ್ನು ಭಗ್ನಗೊಳಿಸಿ ವಿಧವೆಯಾದವಳು ಯಾವ ಪವಿತ್ರ ಕಾರ್ಯದಲ್ಲಿಯೂ ಭಾಗವಹಿಸುವಂತಿಲ್ಲ ಎಂದು ಕಟ್ಟಪ್ಪಣೆ ಮಾಡುತ್ತಿದ್ದರು. ಸ್ತ್ರೀ ವಿಧವೆಯಾದಲ್ಲಿ ಅವಳು ಸಮಾಜದಿಂದ ಬಹಿಷ್ಕೃತಳಾದವಳೆಂದೆ ಲೆಕ್ಕ ಎಂಬ ನಂಬಿಕೆ ಜನಪದರಲ್ಲಿತ್ತು. ‘ಮುತ್ತೈದೆ ಕೈಲಿ ಗಾಜಿನ ಬಳೆ ಇಲ್ಲದೆ ಇರಬಾರದು’, ‘ಮುತ್ತೈದೆಯರು ಕಾಲುಂಗುರ ಇಲ್ಲದೆ ಹೊಸಲು ದಾಟಬಾರದು’, ‘ಹತ್ತಿ ನೂಲಬೇಕು ಮುತ್ತೈದೆ ಹಾಡಬೇಕು’ ಎಂಬ ಪ್ರಸಿದ್ಧ ಗಾದೆಗಳು ನಂಬಿಕೆಗಳು ತುಂಬಾ ಪ್ರಚಲಿತವಾಗಿವೆ.[೪೧]

ಕಾವ್ಯಗಳು ಪತಿವ್ರತಾ ಧರ್ಮವನ್ನು ಅದರ ಸೌಭಾಗ್ಯವನ್ನು ಪ್ರಕಟಪಡಿಸುವುದನ್ನು ಇಲ್ಲಿ ಉಲ್ಲೇಖಿಸಬಹುದು. ರನ್ನನ ‘ಅಜಿತನಾಥ ಪುರಾಣ’ದಲ್ಲಿ ನಾಗದೇವನೊಡನೆ “ಒಡಸತ್ತು ಪತಿವ್ರತೆ ಗುಂಡಮಬ್ಬೆ”[೪೨] ಎಂಬ ಮಾತು ಬರುತ್ತದೆ. ಯುದ್ಧದಲ್ಲಿ ಮಡಿದ ನಾಗದೇವನೊಡನೆ ಮರಣ ಹೊಂದಿದ ಗುಂಡಮಬ್ಬೆಯನ್ನು ಪತಿವ್ರತೆ ಎಂದು ರನ್ನ ಗುರುತಿಸುವಲ್ಲಿ ೧೦ನೇ ಶತಮಾನದಲ್ಲಿದ್ದ ಪತಿವ್ರತಾಕಲ್ಪನೆಯು ಅವನಿಗೆ ‘ಒತ್ತಾಸೆ ಕೊಟ್ಟಿರಬೇಕು’ ಎಂಬುದು ತಿಳಿದು ಬರುತ್ತದೆ. ಕುಮಾರ ವಾಲ್ಮೀಕಿಯು ರಾಮನ ಶಿರವನ್ನು ಕಂಡ ಸೀತೆಯನ್ನು ಚಿತ್ರಿಸುವಾಗ “ಸಾಯ ಬಗೆದಳಲಾ ಪತಿವ್ರತೆ ತಾಯಿ ತಾನಿಹುದುಚಿತವೆಲ್ಲೆನುತ”[೪೩] ಎಂದು ವರ್ಣಿಸುತ್ತಾನೆ.

ವಚನಕಾರರು ಪತಿವ್ರತಾ ಧರ್ಮದ ಕುರಿತು ವ್ಯಕ್ತ ಮಾಡಿರುವ ಅಭಿಪ್ರಾಯಗಳು ಸಂಪ್ರದಾಯಕ್ಕೆ ಅಂಟಿಕೊಂಡೇ ಇವೆ. 'ಐದೆ ಅಣಚಿ ಇಲ್ಲದವಳಂಗೆ ಸೌಭಾಗ್ಯದ ಹೂವಿನ ಬೊಟ್ಟೇಕೆ ಬಾಳಿಲ್ಲದವಳ ಜಾತಿಯಂತಾಯಿತ್ತೆನಗೆ' ಎಂಬ ಮಾತುಗಳಲ್ಲಿ ಬಸವಣ್ಣನವರು ಎಲೆ, ಹೂವು, ಬೊಟ್ಟುಗಳ ಕುರಿತು 'ಪತಿವ್ರತ' ಧರ್ಮದ ಪರಿಕಲ್ಪನೆ ನೀಡಿದ್ದಾರೆ.[೪೪] ಹೀಗೆ ಷಣ್ಮುಖ ಶಿವಯೋಗಿಗಳ ವಚನವೊಂದರಲ್ಲಿ 'ಪತಿವ್ರತಾಭಾಷೆ' ಎಂಬ ಪದವನ್ನು ವಿಶಿಷ್ಟ ಸಂದರ್ಭದಲ್ಲಿ ಕೊಡುತ್ತಾರೆ.

> ಗಂಡ ಸತ್ತನೆಂದು ಗಂಡನೊಡನೆ ಕೆಂಡವ ಬೀಳುವೆನೆಂದು
> ಪುಂಡ ವೀರಸ್ತ್ರೀ ತಾನು ದಂಡೆಯ ಕಟ್ಟಿಕೊಂಡು
> ಖಂಡೆಯವ ಪಿಡಿದು ತಂಡ ತಂಡದ ಜನರ ಮುಂದೆ
> ಮೆರೆದುಕೊಂಡು ಬಂದು
> ಕಿಚ್ಚಿನ ಹೊಂಡವ ಕಂಡು ಹಿಮ್ಮೆಟ್ಟಿದಡೆ
> ಅವಳಿಗದೇ ಭಂಗವಲ್ಲದೆ
> ಶೃಂಗಾರ ಮೆರೆವುದೇ ಅಯ್ಯ?
> ಪತಿ ಲಿಂಗ ಸತಿ ಶರಣ
> ತನ್ನ ಪತಿವ್ರತಾ ಭಾಷೆಯ ನುಡಿದು
> ನಡೆವಲ್ಲಿ ತಪ್ಪಿದಡೆ
> ಅವನ ಭಂಗಕ್ಕೆ ತುದಿ ಮೊದಲಿಲ್ಲ ನೋಡಾ ಅಖಂಡೇಶ್ವರಾ!

'ಪತಿವ್ರತಾಧರ್ಮ' ಗಂಡನ ಸಾವಿನ ಮರುಕ್ಷಣವೇ ಕೊಂಡಕ್ಕೆ ಬೀಳುವುದಾಗಿದೆ. ಎಂಬಲ್ಲಿ ಷಣ್ಮುಖ ಶಿವಯೋಗಿಗಳು 'ಗಂಡ ಸತ್ತ ನಂತರ ಹೆಂಡತಿಯಾದವಳು ಗಂಡನೊಡನೆ ಕೆಂಡವ ಬೀಳುವೆನೆಂದು ಭಾಷೆ' ಕೊಡುತ್ತಿದ್ದಾಳೆಂದು ತಿಳಿದುಬರುತ್ತದೆ ಎಂದಿದ್ದಾರೆ. ಇಂತಹ ಭಾಷೆ ತೊಟ್ಟ ಸ್ತ್ರೀ ಅಗ್ನಿಗೆ ಅಂಜಿ ಹಿಂದೆಗೆಯುವುದು ಅಪಮಾನಕರವಾಗಿತ್ತು. ಲಿಂಗವನ್ನು ಪತಿಯೆಂದು ಭಾವಿಸಿದ ಶರಣ ಸತಿಯು ತನ್ನ 'ಪತಿವ್ರತಾಭಾಷೆ'ಯ ನಡೆಯಲ್ಲಿ ತಪ್ಪಿದರೆ ಅವನ ಭಂಗಕ್ಕೆ ತುದಿಮೊದಲು ಇಲ್ಲದಾಗುತ್ತದೆ. ಸತಿಪದ್ಧತಿಗೆ 'ಪತಿವ್ರತಾಕಲ್ಪನೆ' ಒಂದು ಮುಖ್ಯ ಪ್ರೇರಕ ಶಕ್ತಿಯಾಗಿತ್ತು ಎಂದು ಹೇಳಬಹುದು. ಇಂದು ಕೂಡಾ ಭಾರತದ ಜನಜೀವನದಲ್ಲಿ ಪತಿವ್ರತಾಭಾವಕ್ಕೆ ಶ್ರೇಷ್ಠ ಮಾನ್ಯತೆಯಿದೆ. ಹೀಗೆ ವಿಶಿಷ್ಟ ರೀತಿಯಲ್ಲಿ ಬೆಳೆದು ಅದು ಸತಿಪದ್ಧತಿಯ ಕಾರಣಗಳಲ್ಲಿ ಒಂದಾಗಿ ಪರಿಣಮಿಸಿರುವುದು ಇತಿಹಾಸದ ಸತ್ಯ ಸಂಗತಿಯಾಗಿದೆ.

III. ವಿಧವೆಯ ನಿಕೃಷ್ಟ ಜೀವನ

ಹೆಣ್ಣಿನ ಜೀವನದಲ್ಲಿ ವೈಧವ್ಯ ಎಂಬುದು ಕರಾಳ ಘಟ್ಟವಾಗಿದೆ. ಭಾರತದಲ್ಲಿ ವೇದಗಳ ಕಾಲದಲ್ಲಿದ್ದ ಸ್ತ್ರೀ–ಪುರುಷ ಸಮಾನತೆ ಬರುಬರುತ್ತ ಇಲ್ಲವಾಗಿ ಪುರುಷನಿಗೆ ಪ್ರಾಮುಖ್ಯತೆ ದೊರಕಿ ಸ್ತ್ರೀಗೆ ಅವನು ಅದರಲ್ಲಿಯೂ ಪತ್ನಿಗೆ ಪತಿ ಆರಾಧ್ಯ ದೈವವಾಗಿ ಪರಿಣಮಿಸಿದುದು ಇತಿಹಾಸದ ವ್ಯಂಗ್ಯವಾಗಿದೆ. ಇಲ್ಲಿ ಪತಿ ಪ್ರಧಾನನೆನಿಸಿ ಪತಿ ಇದ್ದರೆ ಮಾತ್ರ ಸ್ತ್ರೀಗೆ 'ಸೌಭಾಗ್ಯವತಿ' ಎಂದು ಗೌರವಿಸಲಾಯಿತು. ಈ ನೆಪದಲ್ಲಿ ತಾಳಿ, ಮೂಗುತಿ, ಓಲೆ, ಕಾಲುಂಗರ, ಬಳೆ, ಕುಂಕುಮ, ಅರಿಷಿಣ ಈ ಮೊದಲಾದವು ಅವಳಿಗೆ ಸೌಭಾಗ್ಯದ ಸಂಕೇತಗಳಾದವು.

ಕನ್ನಡ ಗ್ರಂಥ, ಶಾಸನ, ಜನಪದ ಸಾಹಿತ್ಯಗಳು ವಿಧವಾವಸ್ಥೆಯನ್ನು ಅಸಹ್ಯವಾಗಿ ಸೌಭಾಗ್ಯವಸ್ಥೆಯನ್ನು ಉನ್ನತವಾಗಿ ಕಂಡಿವೆ. "ನೀನೆನ್ನೋಲೆಯ ಕಡಗಳಿವನೇಂ ನೋಡಿದಪಾ" (ಪಂಪ) "ಸರಸ್ವತಿದೇವಿ ರಂಡೆಯಾದೌ ಸತ್ಯಂ"(ನಾಗವರ್ಮ),"ರಿಪುವನಿತೆಗಿತ್ತು ವೈಧವ್ಯ ದೀಕ್ಷೆಯಂ (ನಾಗಚಂದ್ರ)"ರಿಪುರಮಣಿಯರ ಸೀಮಂತಮಣೀಗಳ ನಿಮಿಷದಲಿ ತರಿಸುವೆನು"(ಕುಮಾರವ್ಯಾಸ), "ಭೂಪನಸತಿಯ ಕಿವಿಯೊಳಗೋಲೆಯಸ್ಥಿರವರಿಗೆ ತಾನೆಂದ"–(ಕುಮಾರವ್ಯಾಸ), "ಮಾಂಗಲ್ಯಸೂತೆವ ಹರಿಯ ಬೇಡಲೆತಂದೆ"–(ಕುಮಾರವಾಲ್ಮೀಕಿ) "ಜವ್ವನಜಾಣವನಿತೆಯ ತುರುಬಬೋಳಿಸ ಬೇಡವಕಟ"–(ಕುಮಾರವಾಲ್ಮೀಕಿ), ಪತಿಯ ಮರಣದಲಗಲಿ ಬದುಕಿನ ಸತಿಯು ಶಿರದವೊಲ ಗಲದಲಿ ರಂಜಿಸಿತು ರಮ್ಯೋದ್ಯಾನ ರಾವಣನ"(ಕುಮಾರವಾಲ್ಮೀಕಿ) "ವರನಳಿಯಲು ವಿಧವಾವಸ್ಥೆ ಯದೊಂದು ಪರಿಯನದೇನ ಪೇಳುವೆನು" ದೇವಪ್ಪ ಕವಿ ಈ ಮೊದಲಾದ ಕಾವ್ಯಗಳ ಉಲ್ಲೇಖಗಳು ವಿಧವಾವಸ್ಥೆಯನ್ನು ಅಸಹ್ಯ ಎನ್ನುವಂತೆ ವರ್ಣಿಸಿವೆ.[೪೫] ಮಹಾಕವಿ ಪಂಪ ತನ್ನ ಆದಿಪುರಾಣದಲ್ಲಿ ಲಲಿತಾಂಗನ ಸಾವಿನಿಂದ ಸ್ವಯಂಪ್ರಭೆಗೆ ಉಂಟಾದ ಸ್ಥಿತಿಯನ್ನು ವರ್ಣಿಸಿದಾಗ ವಿಧವಾವಸ್ಥೆಯ ನೈಜ ಚಿತ್ರಣವನ್ನು ಹೀಗೆ ಕೊಡುತ್ತಾನೆ.

> "ಆಲಕಂ ಮಂದಾರಶೂನ್ಯಂ ಕದಪುಮಕರಿಕಾಪತ್ರ ಶೂನ್ಯಂ ಲಲಾಟಂ
> ತಿಲಕಾಳಂಕಾರಶೂನ್ಯಂ ಘನಕುಚಯುಗಳಂಹಾರಶೂನ್ಯಂ ನಿತಂಬಂ
> ಕಲಕಾಂಚೀದಾಮಶೂನ್ಯಂಚರಣಯುಗಳಮುಂನೂಪುರಾಳಪಶೂನ್ಯಂ
> ಲಲಿತಾಂಗಂಪೋದೊಡಾಯ್ತಾಕೆಗೆದಿವಮನಿತುಂನಿರ್ಜ(ನಾ)ರಣ್ಯ"[೪೬]

'ಕಂಡಕಂಡವರಿಗೆಲ್ಲಾ ಕೈಮುಗಿದರೂ ಗಂಡಸತ್ತ ಮುಂಡೆಗೆ ತಲೆ ಬೋಳಿಸದೆ ಬಿಡರು' 'ದುಗ್ಗಾಣಿ ಮುಂಡೆಗೆ ದುಡ್ಡು ಕೊಟ್ಟು ತಲೆ ಬೋಳಿಸಿದ ಹಾಗೆ', 'ಬೋಳಿ ತನ್ನ ತುರಬ ನೆನಸಿಕೊಂಡು ಅತ್ತಳಂತೆ', 'ರಂಡಿಗ್ಯಾಕ ಹೂವಿನದಂಡಿ' ಇತ್ಯಾದಿ ಗಾದೆಮಾತುಗಳು ವಿಧವೆಯ

ಜೀವನದ ಕ್ರೂರತೆಯನ್ನು ಚಿತ್ರಿಸುತ್ತವೆ.[೭೭] ಈ ರೀತಿಯ ಅಸಹ್ಯ ಬದುಕಿಗಿಂತ ಮುತ್ತೈದಿತನ ಅಖಂಡವಾಗಿ ಉಳಿಯಲೆಂದು ಆಶಿಸಿ, ವಿಧವೆಯ ಜೀವನದ ದುರಂತತೆಯನ್ನು ಮನಗಂಡು, ಪತಿಯ ಮರಣದೊಂದಿಗೆ ಸತಿಯು ಸಾಯಲಿಚ್ಚಿಸಿರಬೇಕೆಂದು ಹೇಳುವುದರಲ್ಲಿ ಅನುಮಾನವಿಲ್ಲ. ಈ ಮಾತಿಗೆ ಗ್ರಂಥಸಾಹಿತ್ಯ, ಜನಪದ ಸಾಹಿತ್ಯ, ಶಾಸನಗಳು, ಪ್ರವಾಸಿಗರ ವರದಿಗಳು ಬೆಂಬಲಿಸುತ್ತದೆ.

ಬಪತೀಸ್ಟ್ ಟಾವರ್‌ನ್ಯೇಯು "ಇಂಡಿಯಾದ ವಿಗ್ರಹ ಆರಾಧಕರಲ್ಲಿ ಗಂಡಸತ್ತರೆ ಹೆಂಡತಿ ಮತ್ತೆ ಮದುವೆಯಾಗುವಂತಿಲ್ಲ. ಈ ಕಾರಣ ಗಂಡ ಸತ್ತ ಕೆಲವು ದಿನಗಳ ತರುವಾಯ ಆತನ ಹೆಂಡತಿ ತಲೆ ಬೋಳಿಸಿಕೊಂಡು ವಡವೆ-ವಸ್ತ್ರಗಳನ್ನೆಲ್ಲ ತೆಗೆದುಹಾಕಿ ಎಲ್ಲಾ ಸುಖ ಸಂತೋಷಗಳಿಂದ ದೂರವಾಗಿ ಇದ್ದು ಬಿಡುತ್ತಾಳೆ. ಮನೆಯಲ್ಲಿ ಜೀತದ ಆಳಿಗಿಂತ ಕಡೆಯಾಗಿ ದುಡಿಯಬೇಕಾಗುತ್ತದೆ. ಇಂಥ ಬಾಳಿಗಿಂತ ಸತ್ತಗಂಡನ ಚಿತೆಯೇರುವುದೇ ಮೇಲು ಎಂದು ಭಾವಿಸುತ್ತಾಳೆ"[೭೮] ಎಂದು ಬರೆಯುತ್ತಾನೆ.

ಗಂಡಸಾಯೋಕಿಂತ ಮುಂಡ್ಯಾಗೋಕಿಂತ
ಕಂಡೋರ ಮನೆಯ ಕಸನಾಗಿ। ಸಾಯೋಕಿಂತ
ಕೊಂಡವನ್ನೋದೆ ಕಡುಲೇಸು

ಗಂಡಸತ್ತ ಮುಂಡೆಯ ಬದುಕು ಅವಹೇಳನಕರವಾದುದು. ಅವಳು ತನ್ನ ಜೀವನೋಪಾಯಕ್ಕೆ ಪರಾವಲಂಬಿಯಾಗಬೇಕು. ಪರರ ಮನೆಯ ಕಸಗೂಡಿಸಬೇಕು. ಹೀಗೆ ಸತ್ತು ಬದುಕುವ ಬಾಳಿಗಿಂತ ಕೊಂಡದಲ್ಲಿ ಬಿದ್ದು ಸತಿಹೋಗುವುದೇ ಒಳ್ಳೆಯದೆಂದು ಈರೋಬಿ ನಿರ್ಧರಿಸುತ್ತಾಳೆ ಎಂದು ತಿಳಿದು ಬರುತ್ತದೆ.[೭೯] 'ಮುತ್ತೈದಿ ಚೆನ್ನಮ್ಮ' ಜನಪದ ಗೀತೆಯು ವಿಧವೆಯ ಬದುಕಿನ ಕರಾಳತೆಯನ್ನೂ ಅದು ಬೇಡವೆನಿಸಿ ಸತಿಹೋಗವ ಸ್ತ್ರೀಯರ ಮನಸ್ಥಿತಿಯನ್ನೂ ತೆರೆದಿಡುತ್ತದೆ.

ಹರಿಹೊತ್ತ ಏಳಲಾರೆ ಜಲದಿ ಮುಳುಗಲಾರೆ
ಬರಿದುಗೊರಳಲಿ ನಾನು ಇರಲಾರೆ॥ಸೋ॥
ಬರಿದುಗೊರಳಲಿ ನಾನು ಇರಲಾರೆ ಅತ್ತೆವ್ವ
ನನ್ನ ರಾಯರ ಕೂಡ ಕಳುವವ್ವ ॥ಸೋ॥
ಒಪ್ಪತ್ತ ಉಣಲಾರೆ ನೆತ್ತಿ ಬೋಳಿಸಲಾರೆ

ಬಕ್ಕ ಮುಂಡ್ಯಾಗಿ ಇರಲಾರೆ॥ಸೋ॥
ಬಕ್ಕ ಮುಂಡ್ಯಾಗಿ ಇರಲಾರೆ ಅತ್ತೆವ್ವ
ನನ್ನ ಶೆಟ್ಟರ ಕೂಡ ಕಳುವವ್ವ ॥ಸೋ॥
ಅರಸಿಲ್ಲದ ಅವ್ವನ ಅರಿಷಿಣಕ ಕರದಾರ
ಅರಸಿಲ್ಲದೊಂದು ಬಡವೀನ ॥ಸೋ॥
ಅರಸಿಲ್ಲದೊಂದು ಬಡವೀನ ಕಂಡರ
ತಂಬಿಗೆ ತಾಬಂಡಿ ಬೆಳಗೂಸೆ ॥ಸೋ॥

ವಿಧವೆಯನ್ನು ಸುತ್ತಮುತ್ತಲಿನವರು ಕೀಳಾಗಿ ಕಾಣುವರು. ಸತಿಹೋಗದಿದ್ದರೆ ವಾರಗಿತ್ತಿರು ಆಡಿಕೊಳ್ಳುತ್ತಾರೆ, ಅತ್ಯಮ್ಮ, ಮೈದನಯ್ಯ, ಭಾವದೀರು ನಗುತ್ತಾರೆ ಎಂದು ಪತಿಯನ್ನು ಕಳೆದುಕೊಂಡ ವಿಧವೆ ಹೇಳುತ್ತಾಳೆ. ಹೀಗೆ ಸತಿಹೋಗದ ವಿಧವೆ ಹಲವರಿಂದ ನಿಂದೆ, ಅಪಹಾಸ್ಯಕ್ಕೆ ಈಡಾಗುತ್ತಿದ್ದಳೆಂಬುದು ಇದರಿಂದ ಸ್ಪಷ್ಟವಾಗುತ್ತದೆ.[೨೦] ವೈಧವ್ಯ ಎಂಬುದು ಅಮಂಗಳವಾದದ್ದು, ಅದು ಹೆಣ್ಣಿನ ಜೀವನದಲ್ಲಿ ಭಯಂಕರ ದುಃಖ, ಸಂಕಟದ ಪರಂಪರೆಗೆ ನಾಂದಿ ಹಾಡುವಂಥದ್ದು ಎಂದು ಹರಿಹರ ಕವಿ ವೈಧವ್ಯ ಹೆಣ್ಣಿನ ಸ್ಥಿತಿಗತಿಯನ್ನು 'ರತಿ ವಿಲಾಪ'ದಲ್ಲಿ ಹೀಗೆ ಚಿತ್ರಿಸುತ್ತಾನೆ.

ಲಾವಣ್ಯಂಲಯಮಾಯ್ತು ವಿಭ್ರಮವಿಲಾಸ ಮಾಯವಾಯ್ತಕಟಾ
ಜೀವಂ ಬೆಂದುದು ಚೆಲ್ವು ಸತ್ತುದು ಸುಖಂಹಾಳಾಯ್ತು ಕಂದರ್ಪಸದ್
ಭಾವಂಭಸ್ಮಮದಾಯ್ತು ಮೆಯ್ಮೆಮಡಿಯಿತುತ್ಸಾಹವಿಂಗಿತ್ತು.[೨೧]

ಸಮಾಜದಲ್ಲಿ ವಿಧವೆಗೆ ಬೇಕು ಬೇಡವೆಂಬುದಿಲ್ಲ. ಆಕೆಯ ರೂಪ ವಿರೂಪಗೊಳಿಸುವುದು, ಆಕೆ ಸಮಾಜದಲ್ಲಿ ಅಮಂಗಳೆ, ಸುತ್ತಲಿನ ಪರಿಸರ ಆಕೆಯನ್ನು ಕಂಡು ಅಪಹಾಸ್ಯಮಾಡಿ ನಗುವ ಸ್ಥಿತಿ ಇನ್ನೂ ಭಯಂಕರವಾದುದು. ಇಂಥ ಅಸಹ್ಯ, ಕ್ರೂರ, ಅಶಕ್ತ ಬದುಕಿಗಿಂತ ಸಾವೇ ಉತ್ತಮ ಮಾರ್ಗವಾಗಿ ಸ್ತ್ರೀಯರಿಗೆ ಕಂಡಿರುವುದರಲ್ಲಿ ಯಾವ ಆಶ್ಚರ್ಯವೂ ಇಲ್ಲ ಎಂದು ಹೇಳುತ್ತಾನೆ.

ವಿಧವಾವಸ್ಥೆಯ ಆಚರಣೆಯನ್ನು ಇಂದಿಗೂ ಮಾಸ್ತಿ ಜಾತ್ರೆಗಳಲ್ಲಿ ಆಡಿ ತೋರಿಸುವಾಗ, ಸುತ್ತಲಿನವರು ತೀವ್ರವಾಗಿ ಅವಹೇಳನದ ಮಾತುಗಳನ್ನು ಆಡುತ್ತಿದ್ದುದನ್ನು ನೋಡಬಹುದಾಗಿದೆ. ಅಂಕೋಲೆಯ ಆಡುಕಟ್ಟೆಯಲ್ಲಿ ಬಂಡಿ ಹಬ್ಬದಂದು ಪ್ರತಿವರ್ಷ ವೀರನ ಪತ್ನಿ ಸತಿಹೋಗುವುದನ್ನು ಆಡಿ ತೋರಿಸುತ್ತಾರೆ. ವೀರ ಹೋರಾಡಿ ಮಡಿಯುತ್ತಾನೆ. ಅವನ ಪತ್ನಿಯನ್ನು ಸುತ್ತಮುತ್ತಲಿನವರು ಅಪಹಾಸ್ಯ, ವ್ಯಂಗ್ಯಮಾಡಿ ನಗುತ್ತಾರೆ. ನೀನು ಯಾರು? ಏನನ್ನು ಅರಸುತ್ತಿರುವಿ? ನಿನ್ನ ಗಂಡ

ಯುದ್ಧದಲ್ಲಿ ಮಡಿದಿದ್ದಾನೆ. ನಿನಗ್ಯಾಕೆ ಕುಂಕುಮ, ಬಳೆಗಳ ಸೌಭಾಗ್ಯ? ಇತ್ಯಾದಿಯಾಗಿ ಅವಳನ್ನು ಕುರಿತು ಸುತ್ತಲಿನವರು ಆಡಿಕೊಳ್ಳುತ್ತಾರೆ. ಆಗ 'ಮಡಿದ ವೀರನ ಪತ್ನಿ ಎನಿಸಿಕೊಂಡವಳು ಇನ್ನು ಮುಂದೆ ನಾನು ಕುಂಕುಮ ಇಟ್ಟುಕೊಳ್ಳುವಂತಿಲ್ಲ, ಬಳೆ ತೊಡುವಂತಿಲ್ಲ, ಓಲೆ ಹಾಕುವಂತಿಲ್ಲ, ಇನ್ನೇಕೆ ಇರಬೇಕು, ಸತಿಯರೇ ನಾನು ಕೊಂಡಕ್ಕೆ ಬೀಳುತ್ತೇನೆ' ಎಂದು ನುಡಿಯುತ್ತಾಳೆ. ಈ ಪ್ರಸಂಗದ ನಿರೂಪಣೆಯಿಂದ ವಿಧವಾವಸ್ಥೆಯ ಕಾಠಿಣ್ಯವೂ ಅದರ ಪರಿಣಾಮದಿಂದ ಸತಿಹೋಗಲು ಸಿದ್ಧರಿರುವ ಸ್ತ್ರೀಯರು ವಿಚಾರಗಳು ಗಮನ ಸೆಳೆಯುತ್ತವೆ.

IV. ಮಾನರಕ್ಷಣೆಯ ವ್ಯವಸ್ಥೆ

ಪತ್ನಿಯು ಪತಿಯ ಮರಣದ ನಂತರ ತನ್ನ ರಕ್ಷಣೆಗೆ ಯಾರು ಇರದೇ ಪರ ಪುರುಷರಿಂದ ತಾನು ಮಾನಹರಣವಾಗಬಹುದೆಂದು ಸ್ತ್ರೀ ಸತಿ ಹೋಗಲು ಇಚ್ಚಿಸಿದಳೆಂದು ಹೇಳಬಹುದು. 'ಮಾನಭಂಗಮೆ ಮರಣಂ' 'ಮಾನನಿಗೆ ತಾನಿದು ಮರಣಕ್ಕೆ ಮಧಿಕಂ' 'ಮಡೆದಪಮಾನದಿಂ ಮರಣಮಿನ್ನುಂಟೇ' 'ಮಾನನಿಯು ಇಲ್ಲದವನ ಬದುಕು ಯಾತಕೆ' ಇತ್ಯಾದಿ ಗಾದೆ ಮಾತುಗಳು ಪ್ರಾಚೀನ ಕಾಲದಿಂದಲೂ ಭಾರತದಲ್ಲಿ ಪ್ರಚಲಿತದಲ್ಲಿರುವುದನ್ನು ಇಲ್ಲಿ ಸ್ಮರಿಸಬಹುದು.[೫೨] ಮಹಾಭಾರತದಲ್ಲಿ ಮಾದ್ರಿ ತಾನು ಪಾಂಡುವಿನೊಡನೆ ಸಹಗಮನ ಮಾಡುವುದಕ್ಕೆ ಮೂರು ಕಾರಣಗಳಿವೆ ಎಂದು ಹೇಳುತ್ತಾಳೆ.[೫೩] ಒಂದು, ಪಾಂಡುವಿನ ಮರಣಕ್ಕೆ ತಾನೂ ಕಾರಣ. ಎರಡು ತನಗೆ ಕಾಮ ವಿಕಾರ ನಿಗ್ರಹಿಸಲು ಸಾಧ್ಯವಿಲ್ಲದಿರುವುದು. ಮೂರು ತನ್ನ ಮತ್ತು ಸವತಿಯ ಮಕ್ಕಳನ್ನು ಸಮಾನವಾಗಿ ನೋಡಲು ತನಗೆ ಸಾಧ್ಯವಾಗದಿರುವುದು. ಈ ಮೂರು ಕಾರಣಗಳಿಂದಾಗಿ ನಾನು ಪತಿಯೊಂದಿಗೆ ಸತಿಹೋಗಲು ನಿರ್ಧರಿಸಿದೆ ಎಂದು ಹೇಳುತ್ತಾಳೆ. ಇಲ್ಲಿ ಎರಡನೆಯ ಕಾರಣ ಪ್ರಸ್ತುತ ವಿಷಯದೆಡೆಗೆ ಗಮನ ಸೆಳೆಯುತ್ತದೆ. ಮಾದ್ರಿಗೆ ತನ್ನ ಕಾಮನೆಗಳ ಮೇಲೆ ನಿಗ್ರಹವಿಲ್ಲ. ಅವಳಿಗೆ ಪತಿಮರಣದ ನಂತರ ತಾನೂ ಕಾಮವಿಕಾರಕ್ಕೆ ಗುರಿಯಾಗಿ ಅಪಮಾನಕ್ಕೀಡಾಗುವ ಭಯ ಕಾಡುತ್ತಿದೆ ಎಂಬ ಕಾರಣ ನೀಡಿ ಅವಳು ತನ್ನ ಮಾನರಕ್ಷಣೆಗಾಗಿ ಸತಿಹೋಗಲು ಮನಸ್ಸು ಮಾಡುತ್ತಾಳೆ ಎಂದು ತಿಳಿದು ಬರುತ್ತದೆ.

ವಿದೇಶಿ ಪ್ರವಾಸಿಗನಾದ ಬಪತೀಸ್ಟ್ ಟಾವರ್‌ನೈಯು ಮಾನ ರಕ್ಷಣೆಗಾಗಿ ಇಂಡಿಯಾದಲ್ಲಿ ಸ್ತ್ರೀಯರು ಹೀಗೆ ನಿರ್ಧರಿಸುತ್ತಿದ್ದರು ಎಂದು ಉಲ್ಲೇಖಿಸುತ್ತಾನೆ. "ಇಂಡಿಯಾದಲ್ಲಿ ಗಂಡಸತ್ತರೆ ಹೆಂಡತಿ ಮತ್ತೆ ಮದುವೆಯಾಗುವಂತಿಲ್ಲ. ಈ ಕಾರಣ ಗಂಡ ಸತ್ತ ಕೆಲವು ದಿನಗಳ ತರುವಾಯ ಆತನ ಹೆಂಡತಿ ತಲೆ ಬೋಳಿಸಿಕೊಂಡು ಒಡವೆ, ವಸ್ತ್ರಗಳನ್ನೆಲ್ಲ ತೆಗೆದುಹಾಕಿ ಎಲ್ಲ ಸುಖ ಸಂತೋಷಗಳಿಂದ ದೂರವಾಗಿ ಇದ್ದು ಬಿಡಬೇಕು ಜೊತೆಗೆ ಮನೆಯಲ್ಲಿ ಜೀತದ ಆಳಿಗಿಂತ

ಕಡೆಯಾಗಿ ದುಡಿದುಕೊಂಡು ಕಾಲ ಹಾಕಬೇಕಾಗುತ್ತದೆ. ಇಂಥ ಬಾಳಿಗಿಂತ ಸತ್ತ ಗಂಡನ ಚಿತೆಯೇರುವುದೇ ಮೇಲು ಎಂದು ಬಾವಿಸುತ್ತಾರೆ"[೫೪] ಎಂದು ಬರೆಯುತ್ತಾನೆ.

ಚನ್ನಕ್ಕ ಎಲಿಗಾರ ಅವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೀಗೆ ಹೇಳುತ್ತಾರೆ. "ಸಹಜ ಮರಣವನ್ನಪ್ಪಿದವನು ಮಡದಿಯರಿಗಿಂತ ಸಂಗ್ರಾಮ, ಗೋಗ್ರಹಣ, ತುರುಗೋಳ್, ಪೆಣ್ಬುಯಲ್ ಪ್ರಸಂಗಗಳಲ್ಲಿ ವೀರವ್ಯಕ್ತಿಯ ಮಡದಿಯರಿಗೆ ವೈರಿಗಳ ಬಲತ್ಕಾರದ ಭಯ ಅಧಿಕವಾಗಿರುವುದರಿಂದ ಅವರು ಅತ್ಯಧಿಕ ಸಂಖ್ಯೆಯಲ್ಲಿ ಸಹಗಮನ ಕೈಗೊಳ್ಳುತ್ತಿರಬೇಕು. ಹೀಗಾಗಿ ವೀರಗಲ್ಲುಗಳು ಮತ್ತು ಮಾಸ್ತಿಕಲ್ಲುಗಳು ಏಕಕಾಲಕ್ಕೆ ಅದರಲ್ಲಿಯೂ, ಯುದ್ಧದಂಥ ಮಾರಣ ಹೋಮದ ಕಾಲಕ್ಕೆ ತಲೆಯೆತ್ತುತ್ತಿದ್ದವು ಎಂದಿದ್ದಾರೆ."[೫೫] ಸ್ತ್ರೀಯರು ತಮ್ಮ ಮಾನ ರಕ್ಷಣೆಗೆ ಯಾರೂ ಇಲ್ಲದ ಕಾರಣ ಅವರು ಸತಿಹೋಗಲು ನಿರ್ಧರಿಸುತ್ತಿದ್ದರು. ಇಲ್ಲಿ ಅವರಿಗಿದ್ದ ಆಕ್ರಮಣದ ಭಯವೂ ಒಂದು ಕಾರಣವಾಗಿತ್ತು ಜೊತೆಗೆ ಮಾನ ರಕ್ಷಣೆಯ ಅಗತ್ಯತೆಯು ಇತ್ತು ಎಂಬುವುದನ್ನು ಇದರಿಂದ ತಿಳಿಯಬಹುದು.

೨. ಸಾಮಾಜಿಕ ಕಾರಣಗಳು

ಸಮಾಜವು ಕುಟುಂಬ, ಸಮೂಹ, ಸಮುದಾಯವನ್ನು ಒಳಗೊಂಡಿದ್ದು ಇಲ್ಲಿ ನಿಯಮಗಳು ಕಟ್ಟುಪಾಡುಗಳು ಸಾರ್ವತ್ರಿಕವಾಗಿರುತ್ತವೆ. ಕೆಲವು ಕಾರಣಗಳನ್ನಿಟ್ಟುಕೊಂಡು ಹೆಣ್ಣನ್ನು ಶೋಷಣೆಗೆ ಒಳಪಡಿಸಿದಾಗ ಪುರುಷ ತನ್ನ ಅಡಿಯಾಳನ್ನಾಗಿಸಿಕೊಂಡು ಸಮಾಜದ ಹೆಸರಿನಲ್ಲಿ ಹಲವು ನೀತಿ ನಿಯಮಗಳನ್ನು ರೂಪಿಸಿ, ಅವುಗಳಿಗೆ ಸ್ತ್ರೀಯರನ್ನು ಬದ್ದರಾಗಿ ಮಾಡಿರುವುದು ಇತಿಹಾಸದ ಸತ್ಯ ಸಂಗತಿಯಾಗಿದೆ. ಈ ಪರಿಧಿಯಲ್ಲಿ ಕುಟುಂಬ ಮತ್ತು ಸಮಾಜ ಸ್ತ್ರೀ ಬಲಿದಾನದಲ್ಲೂ ಪಾಲುದಾರರಾದವು. ಈ ಹಿನ್ನೆಲೆಯುಳ್ಳ ಸತಿಪದ್ಧತಿಯ ಕಾರಣಗಳು ಸಾಮಾಜಿಕ ಕಾರಣ ಗಳೆನಿಸಿದವು. ಪತ್ನಿಯ ಕುರಿತು ಇರುವ ಪುರುಷನ ಸ್ವಾರ್ಥ, ಪತ್ನಿ ಇನ್ನೊಬ್ಬರ ವಶವಾಗಬಾರದು ಎನ್ನುವ ಪುರುಷನ ಮನೋಭಾವ, ಸಂಪತ್ತು ಪಡೆಯುವ ಸಂಚು, ಮನೆತನಗಳ ಹಾಗೂ ಸಮಾಜದ ಪ್ರತಿಷ್ಠೆಗಳನ್ನು ಸತಿಪದ್ಧತಿಯ ಸಾಮಾಜಿಕ ಕಾರಣಗಳೆಂದು ಗುರುತಿಸಬಹುದಾಗಿದೆ.

I. ಪತ್ನಿಯ ಬಗೆಗೆ ಇರುವ ಪುರುಷನ ಸ್ವಾರ್ಥ

ಪುರುಷನು ಪತ್ನಿಯನ್ನು ತನ್ನ ಆಸ್ತಿ ಎಂದು ಪರಿಗಣಿಸಿ ತಾನು ಮರಣ ಹೊಂದಿದಾಗ ಅವಳು ತನ್ನೊಡನೆ ಬರಬೇಕೆಂದು ಇಚ್ಛೆಪಟ್ಟಿರಬೇಕು. ಈ ಕಾರಣದಿಂದಾಗಿ ಪತಿ ಮರಣ ಹೊಂದಿದಾಗ ಪತ್ನಿಯನ್ನೂ ಅವನೊಡನೆ ಕಳುಹಿಸುವ ಯೋಜನೆ ಮಾಡಿರಬೇಕು. "ಮನೆಮನೆಯ ವಿಠರಕನು ಸತ್ತಲಿ ಆತನ ಅರ್ಧಾಂಗಿ ಆಮಿಗ ಉಡಿ ಕೂಡೆ ಸ್ವರ್ಗಸ್ಥೆಯಾದಳು."[೫೬]

“ನಾಗೆನಾಯಕನು ಸ್ವರ್ಗಸ್ಥನಾದರೆ ಹೆಂಡತಿ ಕೂಡೆ ಹೋದಳು.”[೫೭] “ದೇವನಾಯಕ ಅವನ ಮದವಳಿಗೆ ನಾಗಾಯಿ ದೇಮಾಯಿಗಳು ಮಹಾಸತಿಯರಾಗಿ ಆತನ ಸಂಘಾತ ಸ್ವರ್ಗಸ್ಥರಾದರು.”[೫೮] ಇತ್ಯಾದಿಯಾಗಿ ಶಾಸನಗಳು ಸಹಗಮನ ಘಟನೆಗಳನ್ನು ವರ್ಣಿಸುವಲ್ಲಿ ಬಳಸುವ ‘ಕೂಡೆ, ಸಂಘಾತ’ ಈ ಪದಗಳು ಪತಿಯ ಮೇಲಿನ ಪ್ರೀತಿಯಿಂದ ಪತ್ನಿ ತಾನಾಗಿಯೇ ಸತಿಹೋದದ್ದನ್ನು ಸೂಚಿಸುವವುಗಳಾಗಿವೆ. ಅದೇ ರೀತಿ ಪತಿಯು ಪತ್ನಿಯನ್ನು ಅಗಲದೇ ಅವಳನ್ನು ತನ್ನೊಡನೆ ತೆಗೆದುಕೊಂಡು ಹೋದುದನ್ನು ಕೆಲವು ಶಾಸನಗಳು ಸೂಚಿಸುತ್ತವೆ.

“ಹೆಗ್ಗೋಡೆಯ ತಂಮಸೆಟ್ಟಿಯರು ಅವರ ಸತಿ ಬ್ಮೊಂಗೌಡಿಯರು ಸಹಿತ ದೇವಲೋಕಕ್ಕೆ ಪ್ರಾಪಿತರಾದರು’ ನಡೆ..ದ ಮಲ್ಲಹರುಮನಕಡುಭುಜ ಬಳನೆನಿಸಿ ಮರೆವತಂಮುಗರಣದೊಳು ಪೊಡವೀರಶರಮಡಿಹಿಯೆತಾನಡಗಿದ ಸತಿಗೂಡಿ ಶಿವನಪದ ಪಂಕಜದೊಳು, ‘ಬಯಿರಗಉಡರು ಆತನ ಸತಿಸಂಗಡ ಸಹಿತ ವಯಿಕುಂಟ ಪ್ರಪಿತರಾದರು.’ ಆಬೊಮಗ ಉಡನು ತಂನಮದವೊಳಿಗೆ ಜಬಿಗಉಡಿ ಸಹಿತ ಸ್ವರ್ಗ...”[೫೯] ಈ ಶಾಸನಗಳು ಪತಿಯು ಪತ್ನಿಯನ್ನು ಉದ್ದೇಶ ಪೂರ್ವಕವಾಗಿ ತನ್ನೊಡನೆ ಸ್ವರ್ಗಕ್ಕೆ ಕರೆದುಕೊಂಡು ಹೋಗುವುದನ್ನು ಸೂಚಿಸುವವುಗಳಾಗಿವೆ.ಚಟಯನಾಯಕನು ಬೊಮಿದೇವ ಜಂಗುಳಿಮಂನೆಯರಗಂಡಗೆ ಕೊಟ್ಟಭಾಷೆಗೆ ತಲೆಕೊಡುವಾಗ ತನ್ನ ಹೆಂಡತಿಯನ್ನು ತಲೆಕೊಡಿಸುವಂತೆ ಮಾಡುವ ಸನ್ನಿವೇಶದ ವಿವರಣೆ ಮಾಸ್ತಿಕಲ್ಲಿನ ಅಪರೂಪದ ಪಾಠಗಳಲ್ಲಿ ಒಂದಾಗಿದೆ.[೬೦] ಆ ನಾಯಕನು ತನ್ನ ಒಡೆಯನಿಗೆ ಕೊಟ್ಟ ಭಾಷೆಯನ್ನು ಪೂರ್ಣಗೊಳಿಸುವಲ್ಲಿ ಹೆಂಡತಿ ಸಹಿತ ತಲೆಕೊಡಬೇಕೆಂದು ಇಚ್ಛಿಸಿ, ಆ ರೀತಿ ನಡೆದುಕೊಂಡಿರುವುದು, ಪತಿಯು ಪತ್ನಿಯನ್ನು ಅಗಲಬಾರದೆಂಬ ಭಾವವನ್ನೇ ತೋರಿಸುವುದಾಗಿದೆ.

ಪುರುಷರು ತಮ್ಮ ಮರಣವಾದಾಗ ತಮ್ಮೊಡನೆ ಸಹಮರಣ ಹೊಂದುತ್ತೇವೆ ಎಂದು ಮಾತು ಕೊಟ್ಟವರನ್ನು ಪತ್ನಿಯರನ್ನಾಗಿ ಸ್ವೀಕರಿಸಲು ಇಚ್ಛಿಸುತ್ತಿದ್ದರೆನ್ನಿಸುತ್ತದೆ. ವಾತ್ಸಾಯನನು ತನ್ನ ಕಾಮಸೂತ್ರದಲ್ಲಿ “ನರ್ತನ ಮಾಡುವ ಹೆಣ್ಣು ಮಕ್ಕಳು ತಮ್ಮ ಪ್ರಿಯಕರನನ್ನು ಒಲಿಸಿಕೊಳ್ಳುವ ಸಲುವಾಗಿ ಸಹಗಮನದ ಮಾತುಗಳನ್ನು ಹೇಳುತ್ತಿದ್ದರು.”[೬೧] ಎಂದು ಹೇಳುವ ಮಾತುಗಳನ್ನು ಇಲ್ಲಿ ಸ್ಮರಿಸಬಹುದು. ಅಂದರೆ ಸಹಗಮನ ಮಾಡುವ ಸ್ತ್ರೀಯರನ್ನು ಅಂದಿನ ಪುರುಷರು ಮೆಚ್ಚಿಕೊಳ್ಳುತ್ತಿದ್ದರೆಂಬುದು ಸ್ಪಷ್ಟವಾಗುತ್ತದೆ.

ಅದೇ ರೀತಿ ವಿಜಯನಗರಕ್ಕೆ ಭೇಟಿಕೊಟ್ಟ ‘ನಿಕೊಲೊ-ದೆ-ಕೊಂತಿ ಹೇಳುವ ಮಾತುಗಳನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ. ವಿಜಯನಗರದಲ್ಲಿ “ರಾಜನ ಹನ್ನೆರಡು ಸಾವಿರ ಹೆಂಡತಿಯರಲ್ಲಿ ಎರಡು ಮೂರು ಸಾವಿರ ಹೆಂಡತಿಯರು ರಾಜನು ಸತ್ತಾಗ ತಮ್ಮ ಆತ್ಮ ಸಂತೋಷದಿಂದ

ಚಿತೆಯೊಳಗೆ ಬಿದ್ದು ಪ್ರಾಣತ್ಯಾಗ ಮಾಡುತ್ತೇವೆ ಎಂಬ ವಾಗ್ದಾನ ಮಾಡಿ ರಾಜನ ಕೈ ಹಿಡಿದಿರುತ್ತಾರೆ”[೬೨] ಎಂಬ ಉಲ್ಲೇಖವು ವಿದೇಶಿ ಪ್ರವಾಸಿಗರ ವರದಿಯಲ್ಲಿ ಪತ್ನಿಯರನ್ನು ತಮ್ಮ ಮರಣದೊಂದಿಗೆ ತೆಗೆದುಕೊಂಡು ಹೋಗಬೇಕೆಂಬ ಪುರುಷನ ಸ್ವಾರ್ಥಭಾವವನ್ನು ಪ್ರಕಟಿಸುತ್ತದೆ.

II. ಮನೆತನದ ಹಾಗೂ ಸಮಾಜದ ಪ್ರತಿಷ್ಠೆ

ಸಮಾಜದಲ್ಲಿ ತಮ್ಮ ತಮ್ಮ ಮನೆತನಗಳು ಗೌರವಯುತವಾಗಿ ಇರಬೇಕೆಂದು ಅಂದಿನ ಜನರು ಆಶಿಸುತ್ತಿದ್ದರು. ಇವರು ನಂಬಿಕೊಂಡಂತಹ ಜೀವನ ಮೌಲ್ಯಗಳು ವೈಯಕ್ತಿಕ ಬದುಕಿಗೆ ಅಹಿತಕರವಾಗಿದ್ದರೂ, ಸಾಮಾಜಿಕ ಮೌಲ್ಯಗಳನ್ನು ಪ್ರತಿಭಟಿಸದೇ ಒಪ್ಪಿಕೊಳ್ಳುತ್ತಿದ್ದರು. ಇವರು ಸತಿ ಹೋಗುವುದನ್ನು ಜೀವನ ಮೌಲ್ಯವೆಂದು ನಂಬಿಕೊಂಡಿದ್ದರಿಂದ ಸ್ತ್ರೀಯೊಬ್ಬಳು ಅದನ್ನು ಎದುರಿಸುವ ಪ್ರಶ್ನೆಯೇ ಇರಲಿಲ್ಲ. ಒಂದು ವೇಳೆ ಎದುರಿಸಿದರೂ ಅದಕ್ಕೆ ಅರ್ಥವಿಲ್ಲದೆಯೇ ಒತ್ತಾಯ ಪೂರ್ವಕವಾಗಿಯೂ ಸಹಗಮನಗೊಳಿಸುತ್ತಿದ್ದರು. ಹೀಗೆ ಕುಟುಂಬದ ಸಮಾಜದ ಒತ್ತಾಸೆಗಳು, ಪ್ರತಿಷ್ಠೆಗಳು ಸತಿಪದ್ಧತಿಗೆ ಕಾರಣಗಳಾಗಿವೆ ಎಂದು ಹೇಳಬಹುದಾಗಿದೆ. ಬೆಳತೂರು ಶಾಸನದಲ್ಲಿ ದೇಕಬ್ಬೆಯನ್ನು ತಂದೆ, ತಾಯಿ, ಬಂಧುಗಳು ಬಂದು ಸತಿಯಾಗದಂತೆ ಕೇಳಿಕೊಳ್ಳಲು “ನಗುನಾಡಧಿಪತಿ ರವಿಗನ ಮಗಳಾಗಿಯುಮನ್ತೆನವಿಲೆ ನಾಡಧಿಪತಿಗಾಂ ನೆಗಳೆ ಸತಿಯಾಗಿ ಬಾಳ್ವುದು ಬಗೆದರ್ಪನೆ ಕೊಟ್ಟಕೊಣ ಮನೆಯೆಸಮಳಿಯಲ್”[೬೩] ದೇಕಬ್ಬೆಯ ಈ ಮಾತು ಸತಿಯಾಗದೆ ಉಳಿಯುವುದೆಂದರೆ ಹೆಣ್ಣನ್ನು ಕೊಟ್ಟು, ಕೊಂಡ ಮನೆಗಳ ಅಂದರೆ ತವರು ಮತ್ತು ಗಂಡನ ಮನೆಗಳ ಯಶಸ್ಸನ್ನು ನಾಶಮಾಡಿದಂತೆಯೇ ಎಂಬುವುದನ್ನು ಸೂಚಿಸುತ್ತದೆ. ರನ್ನನ ‘ಅಜಿತನಾಥ ಪುರಾಣ’ದಲ್ಲಿ ಗುಂಡಮಬ್ಬೆ ಸತಿ ಹೋಗುವ ಸಂದರ್ಭದಲ್ಲಿ ಸತಿ ಹೋಗುವುದನ್ನು ‘ಶುಭಚರಿತದೆ ಮರಣಂ’ ಎಂದು ಕರೆದಿರುವುದನ್ನು ಇಲ್ಲಿ ಸ್ಮರಿಸಬಹುದು.[೬೪] ಈ ಹಿನ್ನೆಲೆಯಲ್ಲಿಯೇ ಸತಿಹೋದವಳ ಸ್ಮಾರಕವಾಗಿ ಅವಳ ಮನೆತನದವರು, ಸಮಾಜದವರು ಗೌರವದ ಪ್ರತೀಕವಾಗಿ ಮಾಸ್ತಿಕಲ್ಲುಗಳನ್ನು ನಿಲ್ಲಿಸುತ್ತಿದ್ದರೆಂದು ಹೇಳಬಹುದಾಗಿದೆ. ಅಂತಹ ಕಲ್ಲುಗಳನ್ನು ನಿಲ್ಲಿಸುವುದೆಂದರೆ ತಮ್ಮ ಮನೆತನದ ಸಮಾಜದ ಪ್ರತಿಷ್ಠೆಗಳನ್ನು ಕೀರ್ತಿಸಿದಂತೆಯೇ, ಹಾಗಾಗಿಯೇ ಸತಿ ಹೋದವಳ ಮಗ, ನಾದಿನಿ, ತಂದೆ ಬಂಧುಗಳು ಮಾಸ್ತಿಕಲ್ಲುಗಳನ್ನು ನೆಟ್ಟ ಉದಾಹರಣೆಗಳಿವೆ. “ಬೆನಊರ ಕುಂಬಾರ ಮಹುಬಳದೇವನ ಮಗ ಬೊಂಮಂದಿರ ಆತನ ಸೊಸೆ ಚಂಡವೆಯಿಬರಿಬ್ಬರು ಸ್ವರ್ಗವನೆಯದಿದರು.”[೬೫] “ಸಿರಿಊರ ಬೊಂಮಣನ ಮಗಳು ವೀರ ಸ್ವರ್ಗಾಲೋಕಪ್ರಾಪ್ತೆಯಾದಳು”[೬೬] ಎಂಬಂತಹ ಶಾಸನ ಪಾಠಗಳನ್ನು ನೋಡಬಹುದು. ಕೆಲವು ಶಾಸನಗಳಲ್ಲಿ ಸತಿಹೋದವಳ ಗೌರವಾರ್ಥವಾಗಿ ಅವಳಿಗೆ ಸಂಬಂಧಿಸಿದ ವಸ್ತುಗಳನ್ನು ಉಳಿಸಿಕೊಂಡು ಬಂದ ಕುರುಹುಗಳಿವೆ. ಉದಾ. “ಶ್ರೀರಂಗಪಟ್ಟಣದ

ಶ್ರೀವೀರಮಾಸ್ತಯ್ಯನವರ ಮನೆತನದಲ್ಲಿ ತಮ್ಮ ಹೆಣ್ಣು ಮಗಳು ಪೂರ್ವಕಾಲದಲ್ಲಿ ಬಿಟ್ಟು ಹೋದ 'ಕಂಕಣದ ಕೈಯನ್ನು ಅವಳ ಮನೆತನದವರು ಇನ್ನೂ ಸ್ಮಾರಕವಾಗಿ ಉಳಿಸಿಕೊಂಡು ಬಂದುದನ್ನು ಈಗಲೂ ಕುಂಚನೂರಿನಲ್ಲಿ ಕಾಣಬಹುದು."[೬೭] ಈ ಮನೆತನದವರನ್ನು ಇಂದಿಗೂ ಮಾಸ್ತಿ ಮನೆತನದವರೆಂದು ಕರೆಯುತ್ತಾರೆ.

ಹದಿನಾಲ್ಕನೆಯ ಶತಮಾನದಲ್ಲಿ ಭಾರತಕ್ಕೆ ಬಂದ ಇಬ್–ನೆ–ಬತುತಾ ಸಹಗಮನದ ಕುರಿತು ಹೀಗೆ ಹೇಳುತ್ತಾನೆ. "ಗಂಡ ಸತ್ತ ಮೇಲೆ ಹೆಂಡತಿಯು ಚಿತೆಯಲ್ಲಿ ಬೀಳುವುದು ಬಹಳ ಮೆಚ್ಚಿದ ಕೆಲಸವೆಂದು ಭಾವಿಸುತ್ತಾರೆ, ಆದರೆ ಬಲತ್ಕಾರವಿಲ್ಲ. ವಿಧವೆಯಾದವಳು ಈ ರೀತಿ ದಹನ ಮಾಡಿಕೊಂಡರೆ ಆಕೆಯ ಮನೆತನದ ಹೆಸರು ಹೆಚ್ಚುತ್ತದೆ ಮತ್ತು ಆಕೆ ಪತಿವ್ರತೆ ಎಂಬ ಹೆಸರನ್ನು ಪಡೆಯುತ್ತಾಳೆ"[೬೮] ಎಂದು ಬರೆಯುತ್ತಾನೆ. ಹದಿನೇಳನೆ ಶತಮಾನದ ಪೂರ್ವಾರ್ಧದಲ್ಲಿ ಇಕ್ಕೇರಿಯಲ್ಲಿ ಜರುಗಿದ ಗಿಯಕ್ಕಮ್ಮನ ಸಹಗಮನದ ಕಾಲಕ್ಕೆ ಅವಳ ಸೋದರ ಮಾವನನ್ನು 'ಪಿಯೊತ್ರೊದೆಲ್ಲಾವೆಲ್ಲೆ' ಸಂದರ್ಶಿಸಿದಾಗ "ತನ್ನ ಸೊಸೆ ಮಾಡುತ್ತಿರುವುದು ತನಗೆ ಬಹಳ ಸಂತೋಷವಾದ ವಿಚಾರವೆಂದು ಆತ ಖುಷಿಯಾಗಿ ಮಾತನಾಡಿದ"[೬೯] ಎಂದು ಉಲ್ಲೇಖಿಸುತ್ತಾನೆ. ಈ ರೀತಿಯ ಪ್ರವಾಸಿ ವರದಿಗಳಿಂದ ಸ್ತ್ರೀ ಸತಿಹೋಗುವುದು ಅವಳ ಮನೆತನದ ಪ್ರತಿಷ್ಠೆಯ ದ್ಯೋತಕವಾಗಿತ್ತೆಂದು ಸ್ಪಷ್ಟವಾಗುತ್ತದೆ.

III. ಸಂಪತ್ತು ಪಡೆಯುವ ಸಂಚು

ಸತಿಪದ್ಧತಿಯ ಹಿಂದಿರುವ ಆಶಯ ಪುರುಷ ವರ್ಗ ಇಲ್ಲವೇ ಪುರೋಹಿತ ವರ್ಗ ಪತ್ನಿಯನ್ನು ಗಂಡನೊಡನೆ ಮರಣ ಹೊಂದುವಂತೆ ಮಾಡಿ ಅವಳ ಸಂಪತ್ತನ್ನು ಪಡೆಯುವದಾಗಿದೆ. ಪತ್ನಿ ಸತಿಹೋಗುವಾಗ ತನ್ನ ಬೆಲೆಯುಳ್ಳ ಆಭರಣಗಳನ್ನೆಲ್ಲ ಹಂಚುವಂತೆ ಮಾಡಿ ಅವಳ ಸಂಪತ್ತನ್ನು ಪಡೆಯುವುದು ಮತ್ತು ಮಕ್ಕಳಿಲ್ಲದ ಪತ್ನಿ ಸತಿಹೋದಾಗ ಅವಳ ಗಂಡನ ಪರಂಪರಾಗತ ಆಸ್ತಿಯನ್ನು ಪಡೆಯಲು ಹೊಂಚು ರೂಪಿಸುವುದು ಸಂಪತ್ತು ಪಡೆಯುವ ಸಂಚಾಗಿದೆ. ಇದರಿಂದಾಗಿ ಪುರುಷವರ್ಗ ಮತ್ತು ಪುರೋಹಿತ ವರ್ಗ ಸತಿ ಆಚರಣೆ ನಡೆಯಲು ಹೆಚ್ಚು ಪ್ರೋತ್ಸಾಹಿಸುತ್ತಿದ್ದರು. ಪುರುಷನು ಮಕ್ಕಳಿಲ್ಲದೇ ಮರಣ ಹೊಂದಿದಾಗ ವಿಧವೆ ಪತ್ನಿಯನ್ನು ಮರಣ ಕೂಪಕ್ಕೆ ತಳ್ಳಿ ಅವಳ ಆಸ್ತಿಯನ್ನು ಪಡೆಯಲು ಪ್ರಭುವರ್ಗ ಇಲ್ಲವೆ ಪುರೋಹಿತ ವರ್ಗ ಸಂಚು ರೂಪಿಸುತ್ತಿರುವುದನ್ನು ಬ್ರಹ್ಮಶಿವ ಹೀಗೆ ತಿಳಿಸುತ್ತಾನೆ.

ಪುರುಷಂ ಸತ್ತಡೆ ಪುತ್ರನುಳ್ಳವರು ಸಾಯಲ್ವಲ್ಲದೆಂಬರ್ಥರಾ
ಮರರೇಕಾಗಮ ನಿಯಮಮಾಗಿ ಧನಮಂ ನಿಃ ಪುತ್ರನಾವಾಗಳಾ

ದರದಿಂದಂ ತವಗಿತ್ತು ಸಾವಡೆನತುಂ ಸಾಯಲ್ಕೆ ಪೇಳ್ವರ್ಮಹಾ
ಪುರುಷರ್ಸತ್ತಡೆ ಬದ್ದರೊಂದೊಡಮೆಯಂ ಕೊಳುವೊಂದು ಪಾಯಮ್ಮಿಗಲ್॥[20]

ಪದ್ಯದ ಮೂಲಕ ಅನುಮೋದಿಸುತ್ತಾನೆ. ಇದರಿಂದ ಆ ಕಾಲದಲ್ಲಿ ಮಕ್ಕಳಿರುವವರಿಗೆ ಮಹಾಸತಿಯಾಗಲು ಅವಕಾಶ ಇಲ್ಲದಿರುವುದು ತಿಳಿದು ಬರುತ್ತದೆ. ಈ ವಿಷಯದತ್ತ ಗಮನಹರಿಸಿದ ಎಂ.ಎಂ ಕಲಬುರ್ಗಿ ಅವರು ಬ್ರಹ್ಮ ಶಿವನು ಸತಿ ಅಗ್ನಿಪ್ರವೇಶ ಮಾಡಬೇಕೆಂದು ಹೇಳುವವರ ಮನದಲ್ಲಿ ತುಂಬಿರುವ ಸ್ವಾರ್ಥವನ್ನು ಈ ಪದ್ಯದ ಮೂಲಕ ಬಯಲಿಗೆಳೆಯುತ್ತಾನೆ ಎಂದು ಹೇಳುತ್ತಾರೆ. ಅಷ್ಟೇ ಅಲ್ಲದೇ ಅವರು ಮುಂದುವರೆದು ಸಪುತ್ರಕ ವಿಧವೆಗೆ ಅಗ್ನಿ ಪ್ರವೇಶ ಸಲ್ಲದು, ಅಪುತ್ರಕ ವಿಧವೆಗೆ ಅಗ್ನಿ ಪ್ರವೇಶ ನಿಯತ ಎಂದು ಹೇಳುವವರನ್ನು ಆಸ್ತಿಯನ್ನು ಸೆಳೆದುಕೊಳ್ಳುವ ಹೊಂಚುಗಾರರೆಂದು ನಿಂದಿಸಿ ಈ ಆಚರಣೆಯನ್ನು ವಾಸ್ತವಿಕ ಹಿನ್ನೆಲೆಯಲ್ಲಿ ವಿಶ್ಲೇಷಿಸಿದ್ದಾರೆಂದು ಬರೆಯುತ್ತಾರೆ.

ವಿಧವೆಯಾದವಳಿಗೆ ಮಕ್ಕಳು ಇಲ್ಲದಿದ್ದರೆ ಅವಳು ಸತಿ ಹೋಗಬೇಕೆಂಬ ವಿವರವನ್ನು ಶಾಸನಗಳು, ಕಾವ್ಯಗಳು, ವಿದೇಶಿ ಪ್ರವಾಸಿಗರ ವರದಿಗಳು ಒದಗಿಸುತ್ತವೆ. ಬಪ್‌ತೀಸ್ಟ ಟಾವರ್ನ್ಯೇಯು ಬ್ರಾಹ್ಮಣರು ಸತಿಹೋಗುವವಳ ಸಂಪತ್ತನ್ನು ಪಡೆಯುವ ಸಂಚನ್ನು ಹೀಗೆ ಉಲ್ಲೇಖಿಸುತ್ತಾನೆ. "ಸತಿಯಾಗುವವಳು ಮದುವೆ ಹೆಣ್ಣಿನಂತೆ ಅಲಂಕಾರ ಮಾಡಿಕೊಂಡು ದಹನವಾಗುವ ಸ್ಥಳಕ್ಕೆ ಮೆರವಣಿಗೆಯಲ್ಲಿ ಹೋಗುತ್ತಾಳೆ. ಪುರೋಹಿತರು 'ಧೈರ್ಯವಾಗಿರಬೇಕು ಮನಸ್ಸು ಬದಲಿಸಬಾರದೆಂದು' ಕೂಗುತ್ತಲೇ ಇರುತ್ತಾರೆ. ಇದರಿಂದ ಬ್ರಾಹ್ಮಣರಿಗೆ ಅನುಕೂಲ. ಕಾರಣ ಸತಿಹೋಗುವವಳ ಮೈಮೇಲಿನ ಆಭರಣಗಳೆಲ್ಲ ಅವರಿಗೆ ಸೇರುತ್ತವೆ. ಇದು ಅವರ ಹಕ್ಕು ವಿಧವೆಯನ್ನು ಸುಟ್ಟು ಬೂದಿಯನ್ನು ಹುಡುಕಿ ಸಿಕ್ಕ ಚೂರೂಪಾರುಗಳನ್ನು ಆರಿಸಿಕೊಳ್ಳುತ್ತಾರೆ."[21] ಎಂದು ಬರೆಯುತ್ತಾನೆ. ಹೀಗೆ ಮಕ್ಕಳಿಲ್ಲದವರು ಸತಿ ಹೋಗಬೇಕೆಂಬ ವಿವರವನ್ನು ವಿದೇಶಿ ಪ್ರವಾಸಿಗರ ವರದಿಗಳು ಒದಗಿಸುತ್ತವೆ. ಈ ಒಂದು ಸ್ವಾರ್ಥ ಭಾವನೆ ಸತಿ ಆಚರಣೆಯ ಉಗಮ ಹಾಗೂ ಬೆಳವಣಿಗೆಯ ಕಾರಣಗಳಿಗೆ ಮುಖ್ಯ ಶಕ್ತಿಯಾಗಿ ನಿಂತಿರಬೇಕು ಎಂದು ತಿಳಿದು ಬರುತ್ತದೆ.

೨.೨.೨ ಪ್ರಾಪಂಚಿಕ ಕಾರಣಗಳು

ಮಾನವನಿಗೆ ಸಾವಿನ ಕುರಿತು ಇರುವ ಭಯ, ವಿಸ್ಮಯಗಳು, ಅದರ ರಹಸ್ಯ ಭೇದಿಸಲಾಗದ ಅವನ ಕೌತುಕ, ಅಸಹಾಯಕತೆಗಳು ಅವನ ಹಲವು ನಂಬಿಕೆ-ಕಲ್ಪನೆಗಳಿಗೆ ಜನ್ಮಕೊಟ್ಟವು. ಸಾವಿನ ನಂತರವೂ ಅವನು ಚಿಂತಿಸಿದ ಫಲವಾಗಿ ಪರಲೋಕ, ಪುನರ್ಜನ್ಮ ಕಲ್ಪನೆಗಳು

ವಿಶ್ವವಿದ್ಯಾಲಯ ಗ್ರಂಥಾಲಯ
ವಿಶ್ವವಿದ್ಯಾಲಯ

ಹುಟ್ಟಿಕೊಂಡವು. ಪರಲೋಕ ಕಲ್ಪನೆಯಲ್ಲಿ ಸ್ವರ್ಗ–ನರಕಗಳು ಮುಖ್ಯಭಾಗವೆನಿಸಿದವು. ಸತ್ತವ್ಯಕ್ತಿ ಸ್ವರ್ಗಕ್ಕೋ ನರಕಕ್ಕೋ ಪುನರ್ಜನ್ಮಕ್ಕೋ ಹೋಗುತ್ತಾನೆಂಬ ಸಿದ್ಧಾಂತದ ಹಿನ್ನೆಲೆಯಲ್ಲಿ ಸಾವಿನ ಆಚೆಯೂ ಜೀವನದ ಮುಂದುವರಿಕೆಯನ್ನು ಒಪ್ಪಿಕೊಂಡಂಥಹ ಸಮಾಜ ಸತ್ತವರೊಡನೆ ಅವರ ಉಪಯುಕ್ತ ವಸ್ತುಗಳನ್ನು ಕಳುಹಿಸುವ ಯೋಜನೆಯನ್ನು ರೂಪಿಸಿಕೊಂಡಿರಬೇಕು. ಈ ನೆಲೆಯಲ್ಲಿಯೇ ಸತ್ತ ಪತಿಯೊಡನೆ ಪತ್ನಿ ಸತಿ ಹೋಗುವಂತಾಯಿತು. ಹೀಗೆ ಈ ಪರಲೋಕ ಕಲ್ಪನೆ, ಪುನರ್ಜನ್ಮ ಕಲ್ಪನೆಗಳು ಸತಿಪದ್ಧತಿಯ ಪ್ರಾಪಂಚಿಕ ಕಾರಣಗಳೆನಿಸಿದವು.

141641

೧. ಪರಲೋಕ ಕಲ್ಪನೆ

ಈ ಲೋಕವಲ್ಲದೇ ಇನ್ನೊಂದು ಲೋಕ ಇದೆ ಎಂಬ ಭಾವನೆ ಪೂರ್ವಕಾಲದ ಮಾನವರಲ್ಲಿ ನೆಲೆಯೂರಿತ್ತು ಎಂಬ ವಿಷಯ ಇಂದು ಸಾಮಾನ್ಯ ಸಂಗತಿ ಎನಿಸಿದೆ. ಇದರ ಜೊತೆ ಈ ಲೋಕದಲ್ಲಿ ಕೆಟ್ಟದ್ದನ್ನು ಮಾಡಿದ ವ್ಯಕ್ತಿ ನರಕಕ್ಕೂ ಒಳ್ಳೆಯದನ್ನು ಮಾಡಿದ ವ್ಯಕ್ತಿ ಸ್ವರ್ಗಕ್ಕೂ ಹೋಗುತ್ತಾನೆ ಎನ್ನುವ ಕಲ್ಪನೆಯೂ ಸಮೃದ್ಧವಾಗಿ ಬೆಳೆದು ಬಂದಿತು. ಹೀಗೆ ಸ್ವರ್ಗ–ನರಕಗಳ ಕಲ್ಪನೆಯುಳ್ಳ ಸಮಾಜ ಸತ್ತವನೊಡನೆ ಅವನ ಪ್ರಿಯವಸ್ತುಗಳನ್ನು ಕಳುಹಿಸುವ ಯೋಚನೆಗೆ ಮನಸ್ಸು ಮಾಡಿತು. ಸ್ತ್ರೀಯು ಈ ಒಂದು ನಂಬಿಕೆಗೆ ಬದ್ಧವಾದ ಕಾರಣದಿಂದಾಗಿ ಗಂಡನ ಮರಣದೊಡನೆ ಅವಳು ತನ್ನ ಆತ್ಮಬಲಿದಾನಕ್ಕೂ ಸಿದ್ಧವಾಗಬೇಕಾಯಿತು. ಸತ್ತ ಗಂಡನೊಡನೆ ಪತ್ನಿಯನ್ನು ಕಳುಹಿಸುವ ಯೋಜನೆಯನ್ನು ರೂಪಿಸಿದ ಸಮಾಜದಲ್ಲಿ ಸ್ತ್ರೀ ಸತಿಹೋಗವುದರಿಂದ ಮೃತ ಪತಿಗೆ ಸ್ವರ್ಗದೊರಕುವುದೆಂಬ ನಂಬಿಕೆಯನ್ನು ಹುಟ್ಟುಹಾಕಿತು. ಸತಿಪದ್ಧತಿಗೆ ಕಾರಣವಾದ ಪರಲೋಕ ಕಲ್ಪನೆಯಲ್ಲಿಯ ಎರಡು ವಿಧಗಳನ್ನು ಹೀಗೆ ಗುರುತಿಸಬಹುದಾಗಿದೆ.

೧. ಸತ್ತವನೊಂದಿಗೆ ಪ್ರಿಯವಸ್ತುಗಳನ್ನು ಕಳಿಸುವ ನಂಬಿಕೆ.

೨. ಸತಿ–ಪತಿಗಳಿಬ್ಬರೂ ಸ್ವರ್ಗ ಪಡೆಯುವ ನಂಬಿಕೆ

I. ಸತ್ತವನೊಂದಿಗೆ ಪ್ರಿಯವಸ್ತುಗಳನ್ನು ಕಳಿಸುವ ನಂಬಿಕೆ

ಸಾವಿನ ಅನಂತರವೂ ಜೀವದ ಅಸ್ತಿತ್ವವನ್ನು ಗುರುತಿಸಿಕೊಂಡ ಮಾನವ ಸತ್ತ ವ್ಯಕ್ತಿಯೊಡನೆ ಅವನ ಪ್ರಿಯವಾದ ವಸ್ತುಗಳನ್ನು ಕಳುಹಿಸಲು ಯೋಚಿಸಿದ್ದು ಸಹಜವೇ ಆಗಿದೆ. ಪುರುಷ ಪ್ರಧಾನ ಸಮಾಜವು ಪುರುಷನ ಇಷ್ಟವಾದ ವಸ್ತುಗಳಲ್ಲಿ ಸ್ತ್ರೀಯನ್ನು ಕಲ್ಪಿಸಿಕೊಂಡ ಕಾರಣದಿಂದ ಅವನ ಮರಣದೊಂದಿಗೆ ಅವಳ ಮರಣವನ್ನೂ ಇಚ್ಚಿಸಿರುವುದನ್ನು ಕಾಣುತ್ತೇವೆ. ಈ ಕುರಿತು ಪೂರ್ವ ಕಾಲದ ನಡುವಳಿಕೆಯಲ್ಲಿ ಕೆಲವು ಉದಾಹರಣೆಗಳನ್ನು ಜ್ಞಾಪಿಸಿಕೊಂಡರೆ ಈ

ವಿಷಯ ಮನದಟ್ಟಾಗುತ್ತದೆ. ಸುಮೇರಿಯನ್ನರ ‘ಉರ್’ ನಗರದಲ್ಲಿ ಭೂ ಶೋಧನೆಯ ಕಾಲದಲ್ಲಿ ಕ್ರಿ.ಶ.ಪೂರ್ವ ೪೦೦೦ವರ್ಷಗಳ ಕಾಲದ ರಾಜರ ಸಮಾಧಿಯಲ್ಲಿ ಸಾರಥಿಗಳು, ಸೈನಿಕರು, ಆಸ್ಥಾನಿಕರು, ಗಾಯಕರು, ಅಂತಃಪುರದ ಸ್ತ್ರೀಯರು ಇದ್ದಿರುವುದು ಗಮನಕ್ಕೆ ಬಂದಿದೆ.[೨೨] ಕ್ರಿ. ಶ. ಪೂರ್ವ ೩೦೦೦ ವರ್ಷಗಳ ಕಾಲ ಪ್ರಸಿದ್ಧವಾದ ಚೆವೂಪ್ಸ್ ಪಿರಾಮಿಡ್ಡವು ರಾಣಿಯರಿಗಾಗಿ ಬೇರೆ ಕೋಣೆಯನ್ನು ಹೊಂದಿರುವುದನ್ನು ಇಲ್ಲಿ ಸ್ಮರಿಸಬಹುದು.[೨೩] ಈಜಿಪ್ಟನ ‘ಝುರ್’ನ ಸಮಾಧಿಗೆ ಹೊಂದಿದಂತೆ ಇರುವ ಸಮಾಧಿಯಲ್ಲಿ ೨೭೫ ಅಂತಃಪುರದ ರಾಣಿಯರೂ, ರಾಜಮನೆತನದ ೪೩ ಜನರೂ ಹಾಗೂ ಒಂದು ಮೈಲು ಅಂತರದಲ್ಲಿ ೨೬೯ ಜನರೂ ಹುಗಿಯಲ್ಪಟ್ಟಿರುವುದು ಕಂಡು ಬಂದಿದೆ.[೨೪] ನಮ್ಮ ದೇಶದಲ್ಲಿಯೂ ಪ್ರಾಚೀನ ಸಮಾಧಿಗಳನ್ನು ತೆಗೆದಾಗ ಅಲ್ಲಿ ಹೂತಿದ್ದ ವ್ಯಕ್ತಿಯ ಅಸ್ಥಿಪಂಜರದ ಜೊತೆಯಲ್ಲಿ ಅನೇಕ ಕುಡಿಕೆಗಳು, ಆಭರಣಗಳು ಉತ್ಖನನದ ಸಂದರ್ಭದಲ್ಲಿ ದೊರೆಕಿರುವುದನ್ನು ಇಲ್ಲಿ ನೆನೆಯಬಹುದು.

ಸಿಥಿಯನ್ನರಲ್ಲಿ[೨೫] ರಾಜನು ಸತ್ತಾಗ ಅವನೊಡನೆ ಅವನ ಅಡಿಗೆಯವರನ್ನು ಆಳುಗಳನ್ನು, ಕುದುರೆಗಳನ್ನು ಹೂಳುತ್ತಿದ್ದ ಪದ್ಧತಿಯನ್ನು ‘ಹೆರೊಡೋಟಸ್’ ಹೇಳುತ್ತಾನೆ. ಕ್ರಿ. ಶ. ೧೨೨೦ರ ಟ್ಯುಟಾನಿಕ್ ಐತಿಹ್ಯ ಕಾವ್ಯ ‘ಎಡ್ಡಾ’ ದಲ್ಲಿ ಜರ್ಮನ್ ದೇವತೆ ‘ಓಡಿನ್’ ತನ್ನ ಆರಾಧಕರಿಗೆ ನೀಡುವ ಆದೇಶವನ್ನು ಇಲ್ಲಿ ಸ್ಮರಿಸಿದರೆ ಈ ವಿಷಯ ಇನ್ನೂ ಸ್ಪಷ್ಟಗೊಳ್ಳುತ್ತದೆ.[೨೬] ಪುರುಷನೊಬ್ಬನು ಮಡಿದಾಗ ಅವನ ಜೊತೆಯಲ್ಲಿ ಅವನ ಹೆಂಡತಿಯಲ್ಲದೆ ಅವನ ತಾಯಿ, ಸಹೋದರಿಯರು, ಮಂತ್ರಿಗಳು ದಾಸದಾಸಿಯರು ಪ್ರಾಣತ್ಯಾಗ ಮಾಡಿಕೊಳ್ಳುತ್ತಿದ್ದರು ಎಂಬ ವಿಷಯವನ್ನು ಕಲ್ಹಣನು ತನ್ನ ಕೃತಿಯಾದ ರಾಜತರಂಗಿಣಿಯಲ್ಲಿ ವಿವರಿಸುತ್ತಾನೆ.[೨೭]

ಕರ್ನಾಟಕದ ಗುಲ್ಬುರ್ಗಾ ಜಿಲ್ಲೆಯ ಸುರುಪುರ ತಾಲೂಕಿನ ಶಿವದುರ್ಗದ ನೆಲದಲ್ಲಿ ಹೂಳಿದ ಮಾಸ್ತಿಕಲ್ಲಿನ ಕೆಳಗೆ ಬೆಳ್ಳಿ ನಾಣ್ಯಗಳಿಂದ ತುಂಬಿದ ತಾಮ್ರದ ಬಿಂದಿಗೆ ಸಂಶೋಧನೆಯ ಕಾಲದಲ್ಲಿ ದೊರೆಕಿರುವುದನ್ನು ಕೂಡಾ ಇಲ್ಲಿ ಜ್ಞಾಪಿಸಿಕೊಳ್ಳಬಹುದು.[೨೮] ಈ ಎಲ್ಲ ಉದಾಹರಣೆಗಳು ಸಾವಿನಾಚೆಯ ಜೀವನದ ಮುಂದುವರಿಕೆಯಲ್ಲಿಯ ನಂಬಿಕೆಯನ್ನೂ, ಅದಕ್ಕಾಗಿ ಸತ್ತ ವ್ಯಕ್ತಿಗಾಗಿ ಅವನ ಇಷ್ಟದ ವಸ್ತುಗಳನ್ನು ಕಳುಹಿಸಿಕೊಡುತ್ತಿದ್ದುದ್ದನ್ನು ತಿಳಿಸುತ್ತವೆ. ಈ ನಂಬಿಕೆಯ ಅನುಸರಣೆಯ ಹಿನ್ನೆಲೆಯಲ್ಲಿ ಪತ್ನಿ ಪತಿಯೊಡನೆ ಸತಿಹೋಗುವ ಪರಿಪಾಠ ಬೆಳೆದುಬಂದಿದೆ ಎಂದು ತಿಳಿಯ ಬಹುದು.

ಸಾವಿನ ಅನಂತರವೂ ಜೀವದ ಅಸ್ತಿತ್ವವನ್ನು ಗುರುತಿಸುವಲ್ಲಿ ಶಾಸನ ಪಾಠಗಳು ಈ ರೀತಿಯ ಉಲ್ಲೇಖಗಳನ್ನು ನೀಡುತ್ತವೆ. “ಬೀರೂರು ಬೊಂಮಗಉಡನ ಮಗನು ಮಾದಪ್ಪನು

ಸ್ವರ್ಗಸ್ಥನಾದನು ಆತನ ಮದುವಳಿಗೆ ಮಸಣಕ್ಕನು ಸಹಗಮನವಾದಳು"[೭೯] "ಗಣಪಗಉಡಗ ಮಗ ಬೊಂಮಗಉಡರು ಸ್ವರ್ಗಸ್ಥನಾದ ಆತನ ಮದವಳಿಗೆ ಬೊಂಮಿಗಉಡಿ ಸಹಗಮನ ಮಾಡಿದಳು. ಆತನ ಮದವಳಿಗೆ ಭೈರಾಯಿ ಸಹಗಮನಮಾಡಿದಳು"[೮೦] ಇಲ್ಲಿ ಪತಿಯ ಸಾವಿನ ನಂತರ ವಿಧವಾ ಸತಿಯರು ಸತಿಹೋದುದು ಮರಣವಲ್ಲ, ಅದು ಗಂಡನ ಜೀವನದೊಂದಿಗೆ ಸ್ವರ್ಗಕ್ಕೆ ಅವರ ಗಮನವಾಗಿದೆಯಷ್ಟೇ ಎಂದಿದ್ದಾರೆ. ಇನ್ನೂ ಕೆಲವು ಪಾಠಗಳಲ್ಲಿ ಸತಿಹೋದದ್ದು ಹೀಗಿದೆ. "ಮನೆಮನೆಯ ವಿಠರಕನು ಸತ್ತರೆ ಆತನವದ್ರ್ಧಾಂಗಿ ಆಮಿಗಉಡಿ ಕೊಡೆ ಸ್ವರ್ಗಸ್ಥಳಾದಳು."[೮೧] ಗುಂಜನೂರು ವಿಚಾರಜ ಊಡಿನಂ..ಕನ ಮಾಗಡಿವರದನ ಮಲಿನಾಗೆ ನಾಯಕನು ಸ್ವರ್ಗಸ್ಥನಾದರೆ ಹೆಂಡತಿ ಕೊಡೆ ಹೋದಳು. ಇವುಗಳಲ್ಲಿಯ 'ಕೂಡೆ'ಎಂಬ ಪದ ಪತ್ನಿಯರು ಗಂಡಂದಿರೊಡನೆ ಇನ್ನೊಂದು ಲೋಕಕ್ಕೆ ಹೋದದ್ದನ್ನು ಸ್ಪಷ್ಟಪಡಿಸುವುದೇ ಆಗಿದೆ.

"ದೇವೆನಾಯಕ ಅವನ ಮದವಳಿಗೆ ನಾಗಾಯಿ ದೇಮಾಯಿಗಳು ಮಹಾಸತಿಯರಾಗಿ ಆತನ ಸಂಘಾತ ಸ್ವರ್ಗಸ್ಥರಾದರು."[೮೨] ಹರಊರ ಆಂಮಗುಡನ ಬಯಿರವಗಉಡಿ ತಂಮ ಸ್ತ್ರೀಯರು ಸಹಸಂಗತಿಯಿಡಿದರು. ಹೆಗ್ಗೋಡೆಯ ಗ್ರಾಮದ ಮಹಾಪ್ರಭು ಬೀರಗಉಡರಮಗ ಬಯಿರಗಉಡರು ಆತನ ಸತಿ ಸಂಗಡ ಸಹಿತ ವಯಿಕುಂಟ ಪ್ರಾಪಿತರಾದರು. ಇತ್ಯಾದಿ ಅಪರೂಪದ ಪಾಠಗಳು ಮಾಸ್ತಿಕಲ್ಲಿನಲ್ಲಿ ದೊರಕುತ್ತವೆ. ಇವುಗಳಲ್ಲಿಯ ಸಂಘಾತ, ಸಹಸಂಗತಿ, ಸಹಿತ, ಸಂಗಡ ಈ ಪದಗಳು ಪತಿಯೊಂದಿಗೆ ಪತ್ನಿಯ ಗಮನವನ್ನು ಒತ್ತಿಹೇಳಿದವುಗಳೇ ಆಗಿವೆ.[೮೩] ಅಂದಿನ ಸಮಾಜ ಗಂಡನ ಮರಣವನ್ನೂ ಮತ್ತೊಂದು ಲೋಕದ ಪಯಣವೆಂದು ಭಾವಿಸಿರುವುದು ಈ ವಿವರಣೆಯಿಂದ ಸ್ಪಷ್ಟಗೊಳ್ಳುತ್ತದೆ. ಮಾಸ್ತಿಕಲ್ಲಿನ ಶಿಲ್ಪಗಳು ಪತಿಯೊಂದಿಗೆ ಸತಿಯ ಪರಲೋಕದ ಪಯಣವನ್ನು ಒಳಗೊಂಡಿರುವುದನ್ನು ಇಲ್ಲಿ ಸ್ಮರಿಸಬಹುದು.

ಜನಪದ ಸಾಹಿತ್ಯದಲ್ಲಿ ಗಂಡನ ಮರಣದ ನಂತರ ಪತ್ನಿಯು ಸತಿಹೋಗುವುದನ್ನು ಗಂಡನಮನೆಗೆ, ಅತ್ತೆಯ ಮನೆಗೆ ಹೋಗುವ ಕ್ರಿಯೆಗೆ ಹೋಲಿಸಲಾಗುತ್ತದೆ. 'ನಾಗವ್ವ' ಜನಪದ ಖಂಡಕಾವ್ಯದಲ್ಲಿ ಚಿಂದಯ್ಯನನ್ನು ಹಾಳು ಬೇಡರು ಕಡಿಯುತ್ತಾರೆ. ಅವನ ಪತ್ನಿ[೮೪] 'ನಾಗವ್ವ' ಸತಿಹೋಗುವ ಸಂದರ್ಭದಲ್ಲಿಯ ಸಂಗತಿಗಳನ್ನು ತಿಳಿಸುವ ಪದ್ಯವೊಂದು ಹೀಗಿದೆ.

ಕೊಂಡದಲ್ಲಿರುವ ಕೆಂಡದ ಚವಲೀಯ
ತಕೊಂಡು ಬಾರ್ಹೆಣ್ಣೆ ಇದುರೀಗೆ। ನಾಗವ್ವನ
ಗಂಡನ ಮನೆಗೆ ಕೆಳುವೋನ

ಕಿಚ್ಚಿನಾಗಿರುವ ಕುಚ್ಚಿನ ಚವರೀಯ
ತಕ್ಕೊಂಡು ಬಾರ್ವೆಣ್ಣೆ ಇದುರೀಗೆ। ನಾಗವ್ವನ
ಅತ್ತೆಯ ಮನೆಗೆ ಕಳುವೋನೆ

ಗಂಡನಾಗಿರುವ ಚಿಂದಯ್ಯ ಸತ್ತು ಪರಲೋಕದಲ್ಲಿ ಇದ್ದಾನೆ. ಅವನಿರುವ ಆ ಸ್ಥಾನವೇ ಪತ್ನಿ ನಾಗವ್ವಳ ಗಂಡನ ಮನೆ ಅತ್ತೆಯ ಮನೆಯಾಗಿದೆ.[೨೫] 'ಗಂಡನಿದ್ದಲ್ಲಿಗೆ ಪತ್ನಿಯೂ ಸೇರಲಿ' ಎಂಬ ಬಯಕೆ ಇಲ್ಲಿ ಎದ್ದು ಕಾಣುತ್ತದೆ. ಅದರ ಜೊತೆಗೆ ವಿವಾಹದ ಸಂದರ್ಭದಲ್ಲಿಯ ಸಂಪ್ರದಾಯಗಳಂತೆ ಅವಳನ್ನು ಶೃಂಗರಿಸಿ ಅಗ್ನಿಕುಂಡಕ್ಕೆ ಆಹುತಿಕೊಡುವ ಸಂದರ್ಭವನ್ನು ಜನಪದ ಕವಿ ಇನ್ನೂ ಅರ್ಥಪೂರ್ಣವಾಗಿ ವಿವರಿಸುತ್ತಾನೆ.

ಕಿಚ್ಚಿನ ಸುತ್ತ ನುಚ್ಚಕ್ಕಿ ಹಸೆಹುಯ್ದು
ಮುತ್ತಿನ ಕಳಸ ನಡುವಿರಿಸಿ। ನಾಗವ್ವನ
ಕೊಂಡಕೆ ಧಾರೆ ಎರೆದಾರು

ಮದುವೆಯ ಸಮಯದಲ್ಲಿ ಹೆಣ್ಣನ್ನು ಧಾರೆ ಎರೆದು ಕೊಡುವ ಸಂಪ್ರದಾಯವಿರುವಂತೆ ಸತಿಹೋಗಲಿರುವ ನಾಗವ್ವಳು ಕೊಂಡದಲ್ಲಿ ಬೀಳುವಾಗ ಅದನ್ನು 'ಧಾರೆ' ಎರೆಯುವ ಕ್ರಿಯೆಗೆ ಹೋಲಿಸಿರುವುದು ತುಂಬ ಔಚಿತ್ಯ ಪೂರ್ಣವಾಗಿದೆ. ಗಂಡನ ಸಾವು ಸಾವಲ್ಲ. ಅವನು ಇನ್ನೊಂದು ಲೋಕದಲ್ಲಿ ಬದುಕಿದ್ದಾನೆ. ಅಲ್ಲಿಗೆ ಅವನ ಸತಿಯೂ ಹೋಗಲಿದ್ದಾಳೆ ಎನ್ನುವ ನಂಬಿಕೆಯನ್ನು ಜನಪದರು ಹುಟ್ಟು ಹಾಕಿದರು. ಅದಕ್ಕಾಗಿಯೇ ಇಂಥ ಪ್ರಸಂಗಗಳಲ್ಲಿ ಜನಪದ ಕವಿಗಳು, ವಿದೇಶಿ ಪ್ರವಾಸಿಗರು ಸತಿ ಹೋಗಲಿರುವವಳನ್ನು ಮುತ್ತೈದೆಯಂತೆ ವರ್ಣಿಸುವುದನ್ನು ಇಲ್ಲಿ ಸ್ಮರಿಸಬಹುದು. ಮಾಸ್ತಿಕಲ್ಲಿನ ಶಿಲ್ಪಗಳಲ್ಲಿಯೂ ಸತಿಯರನ್ನು ಮುತ್ತೈದೆಯರಂತೆಯೇ ಕಂಡರಿಸಲಾಗಿರುವುದು. ಇವೆಲ್ಲವು ಇಂತಹ ಸಂಪ್ರದಾಯಗಳಿಗೆ ಇನ್ನೂ ಅರ್ಥವಂತಿಕೆಯನ್ನು ನೀಡಿವೆ. ಈ ವಿವರಣೆಗಳೆಲ್ಲ ಪತಿ ಸತ್ತು ಇನ್ನೊಂದು ಲೋಕದಲ್ಲಿ ಇರುವನೆಂದೂ ಅವನಲ್ಲಿಗೆ ಅವನ ಸತಿಯಾದವಳು ಹೋಗಬೇಕಾಗಿರುವ ಅನಿವಾರ್ಯತೆಯನ್ನೂ ಸೂಚಿಸುವಲ್ಲಿ ಪ್ರಮುಖ ಕಾರಣಗಳೆನಿಸಿರುವುದನ್ನು ತಿಳಿಸುತ್ತವೆ.

II. ಸತಿ–ಪತಿಗಳಿಬ್ಬರೂ ಸ್ವರ್ಗಪಡೆಯುವ ನಂಬಿಕೆ

ಸ್ವರ್ಗದ ಕಲ್ಪನೆ ಮತ್ತು ಅದರ ಸುತ್ತಲಿರುವ ನಂಬಿಕೆಗಳು ಕೇವಲ ಭಾರತದಲ್ಲಿ ಮಾತ್ರ ಇರದೇ ಪ್ರಪಂಚದಲ್ಲೆಲ್ಲ ಪ್ರಚಲಿತದಲ್ಲಿರುವುದನ್ನು ಕಾಣುತ್ತೇವೆ. ಭಾರತದಲ್ಲಿ ವೀರ ಮಹಾಸತಿಗೆ ಇಂತಹ ಜೀವನ ಮೌಲ್ಯದ ಸ್ಥಾನ ದೊರೆಕಿದ್ದರಿಂದ ಮರಣ ಹೊಂದಿದ ಸತಿ ಪತಿಗಳಿಬ್ಬರೂ

ಸ್ವರ್ಗಕ್ಕೆ ಹೋಗುತ್ತಾರೆ ಎಂದು ತಿಳಿಯಲಾಯಿತು. ಹೋರಾಟ ಮಾಡುವಾಗ ವೀರನಿಗೆ ಹಾಗೂ ಗಂಡನ ಮರಣದ ನಂತರ ಸತಿಹೋಗಲಿರುವ ಪತ್ನಿಗೆ ಸಾವಿನ ಕುರಿತಾಗಿ ಮೂಡಬಹುದಾದ ಭಯವನ್ನು ಹೋಗಲಾಡಿಸಲು ಮುಂದೆ ದೊರಕಲಿರುವ ಸ್ವರ್ಗದ ಚಿತ್ರಣವನ್ನು ಇಲ್ಲಿ ನೀಡಲಾಯಿತು. ಇದು ಸಾವನ್ನು ಒಂದು ಬಗೆಯಲ್ಲಿ ಸಹ್ಯಗೊಳಿಸುವ ಪ್ರಯತ್ನವಾಗಿದೆ ಎಂದು ಹೇಳಬಹುದು.

ಮಹಾಭಾರತದಲ್ಲಿ ಹೆಣ್ಣು ಪಾರಿವಾಳವೊಂದು ಗಂಡು ಪಾರಿವಾಳದ ಮರಣದ ನಂತರ ತಾನು ಮರಣ ಹೊಂದಿ ಸ್ವರ್ಗದಲ್ಲಿ ಗಂಡು ಪಾರಿವಾಳದ ಜೊತೆಗೆ ಸುಖವನ್ನು ಅನುಭವಿಸುತ್ತದೆ. ಎಂಬ ಕಥೆಯೊಂದು ಬರುತ್ತದೆ. ಈ ದೃಷ್ಟಾಂತದ ಕಥೆಯ ನಂತರ ಸಮಾಜದಲ್ಲಿ ಇದೇ ನಂಬಿಕೆ ಬೇರೂರಿ ಸ್ತ್ರೀಯೂ ಸಹ ಹೀಗೆಯೆ ಪತಿಯೊಂದಿಗೆ ಸಹಗಮನಗೊಂಡರೆ, ಪಾರಿವಾಳದಂತೆ ಅವಳು ಸ್ವರ್ಗಸುಖವನ್ನು ಅನುಭವಿಸುತ್ತಾಳೆ ಎನ್ನುವ ವಿವರಗಳು ಕಂಡುಬಂದವು.[೮೬] ಕಥೆಯ ನಂತರದ ವಿವರಣೆಗಳು ಪತ್ನಿ ಸತಿಹೋದರೆ ಸ್ವರ್ಗಸುಖವನ್ನು ಹೊಂದುತ್ತಾಳೆ ಎಂಬ ವಿಷಯದೆಡೆಗೆ ಒತ್ತುಕೊಟ್ಟವು.

ಅದೇ ರೀತಿ ಅಗ್ನಿಪುರಾಣವೂ ಕೂಡ "ಮಡಿದ ಗಂಡನ ಜೊತೆಯಲ್ಲಿ ಅಗ್ನಿ ಪ್ರವೇಶ ಮಾಡಿದ ವಿಧವೆ ಸತಿ ಸಹಿತ ಸ್ವರ್ಗಕ್ಕೆ ಹೋಗುತ್ತಾಳೆ"[೮೭] ಎಂದು ತಿಳಿಸುತ್ತದೆ. ಇದು ಪತ್ನಿ ಸತಿ ಹೋಗುವಿಕೆಯನ್ನು ಪ್ರೋತ್ಸಾಹಿಸುವುದೇ ಆಗಿದೆ. ಈ ರೀತಿಯ ಸ್ವರ್ಗಪರಿಕಲ್ಪನೆಯನ್ನಿಟ್ಟು ಕೊಂಡ ಸ್ತ್ರೀ ಸಮುದಾಯ ಸತಿ ಹೋಗಲು ಮನಸ್ಸು ಮಾಡಿರಬಹುದಾಗಿದೆ. ಪತ್ನಿ ಸತಿಹೋದರೆ ಸ್ವರ್ಗಸೇರುತ್ತಾಳೆ ಹಾಗೂ ಅವಳ ಪತಿಗೆ ಸ್ವರ್ಗ ದೊರಕುತ್ತದೆ ಎಂಬ ನಂಬಿಕೆಗಳೆ ಸತಿ ಸಹಗಮನ ಪದ್ಧತಿಗೆ ಪ್ರೇರಣೆಗಳಾಗಿವೆ.

ಕ್ರಿ.ಶ.೭೦೦ರ ನಂತರ ಬಂದ ಸ್ಮೃತಿ-ಧರ್ಮಶಾಸ್ತ್ರಗಳು ಸತಿಹೋಗುವುದರಿಂದ ಸ್ವರ್ಗ ದೊರಕುವುದೆಂಬ ಕಲ್ಪನೆಯನ್ನು ಬೆಂಬಲಿಸುತ್ತವೆ.[೮೮] ಹಾರೀತನ ಪ್ರಕಾರ "ಪತ್ನಿ ತನ್ನ ಗಂಡನ ಹಿಂದೆಯೇ ಸುಟ್ಟು ಸಹಗಮನ ಮಾಡಿಕೊಂಡರೆ, ಅವಳು ತನ್ನ ಗಂಡನ ಭಯಂಕರ ಘೋರ ಪಾಪ ಕರ್ಮಗಳನ್ನು ಪರಿಶುದ್ಧ ಮಾಡಬಲ್ಲವಳಾಗುತ್ತಾಳೆ. ಮತ್ತು ಇವರಿಬ್ಬರೂ ಮೂರುವರೇ ಕೋಟಿ ವರ್ಷಗಳ ಕಾಲ ಸ್ವರ್ಗದಲ್ಲಿ ಸುಖವನ್ನು ಅನುಭವಿಸುತ್ತಾರೆ."[೮೯] ಎಂದು ಹೇಳುತ್ತಾನೆ. ಪರಾಶರನ ಸ್ಮೃತಿಯಲ್ಲಿ "ಹುತ್ತದಿಂದ ಹಾವನ್ನು ಹಾವಾಡಿಗ ಹಿಡಿದು ಎಳೆಯುವಂತೆ, ನರಕದಿಂದ ಗಂಡನನ್ನು ಸತಿಯಾದವಳು ಎಳೆದುಕೊಂಡು ಬಂದು ಸ್ವರ್ಗದಲ್ಲಿ ಇಬ್ಬರೂ ಮೂರುವರೆ ಕೋಟಿ ವರ್ಷಗಳವರೆಗೆ ಸುಖವಾಗಿರುತ್ತಾರೆ. ಅಲ್ಲದೆ ಅವಳು ಸತಿಯಾಗುವ ಇಚ್ಛೇ ಇಲ್ಲದೇ ಸಹಗಮನ ಮಾಡಿದರೂ ಕೂಡ ಅವರಿಬ್ಬರಿಗೆ ಸ್ವರ್ಗದಲ್ಲಿ ಸ್ಥಳ ಕಾದಿರಿಸಿದ್ದೇ ಆಗಿದೆ." ಎಂದು ಹೇಳಲಾಗಿದೆ. ಈ ವಿವರಣೆಗಳು ಸತಿಹೋಗುವದರಿಂದ ಪತಿ-ಪತ್ನಿಯರಿಬ್ಬರೂ ಪಡೆಯುವ

ಸ್ವರ್ಗಫಲವನ್ನು ಚಿತ್ರಿಸುತ್ತವೆ. ಈ ಕಾರಣದಿಂದಾಗಿಯೇ ೭ನೇ ಶತಮಾನದ ನಂತರ ಭಾರತದಲ್ಲಿ ಸತಿಘಟನೆಗಳು ಹೆಚ್ಚು ಜರುಗಿದಂತೆ ತೋರುತ್ತವೆ.

ಹಲವು ಶಾಸನಗಳಲ್ಲಿ ಸತಿಹೋದವರನ್ನು ಈ ರೀತಿ ವರ್ಣಿಸಲಾಗಿದೆ."ಚಿಂಮಾಯಿ ಸಹಗಮನವ ಮಾಡಿ ಸ್ವರ್ಗಪ್ರಾಪ್ತಿಯಾದಳು."[೯೦] "ಚುಡನಾಯಕಿ ಸಹಗಮನವನೆಯ್ದಿದರು ದೇವಲೋಕ ಪ್ರಾಪ್ತರಾದರು."[೯೧] "ಸಿರಿಉರಬೊಂಮಣನ ಮಗಳು ವೀರಕ್ಕನು ವೀರಸ್ವರ್ಗಲೋಕ ಪ್ರಾಪ್ತೆಯಾದಳು."[೯೨] ಇಂಥ ವಿವರಣೆಗಳು ಪತ್ನಿಯು ಸತಿಹೋಗಿ ಸ್ವರ್ಗಪಡೆದಳೆಂದು ತಿಳಿಸುವವುಳೆ ಆಗಿವೆ. ಇನ್ನೂ ಕೆಲವು ಶಾಸನಗಳಲ್ಲಿ ಗಂಡ- ಹೆಂಡತಿಯರಿಬ್ಬರೂ ಕೂಡಿ ಸ್ವರ್ಗ ಸೇರಿದರೆಂಬ ಅಪರೂಪದ ವಿವರಣೆಗಳು ದೊರಕುತ್ತವೆ.[೯೩] ಇಂಡುವಳ್ಳಿ ಮಾಸ್ತಿಕಲ್ಲಿನ ಶಿಲ್ಪಗಳ ಮೇಲ್ಭಾಗದಲ್ಲಿ ಶಿವಲಿಂಗದೊಡನೆ ಇಲ್ಲವೆ ತೀರ್ಥಂಕರರೊಡನೆ ಬಹುತರವಾಗಿ ಗಂಡ-ಹೆಂಡತಿಯರನ್ನು ಕಂಡರಿಸಿರುವುದನ್ನು ಇಲ್ಲಿ ಸ್ಮರಿಸಬಹುದು.

ಮಹಾಕವಿ ಪಂಪನು 'ವಿಕ್ರಮಾರ್ಜುನ ವಿಜಯ'ದಲ್ಲಿ ಮಡಿದ ಯೋಧನನ್ನು ದೇವಕನ್ನಿಕೆಯರು ಪಡೆಯುವರೆಂಬ ಕಲ್ಪನೆಯ ಹಿನ್ನೆಲೆಯಲ್ಲಿ ಪತ್ನಿಯರು ಸತಿಯಾಗುತ್ತಿದ್ದುದನ್ನು ಪ್ರಸಂಗವೊಂದರಲ್ಲಿ ಹೀಗೆ ತಿಳಿಸಿದ್ದಾನೆ.

> "ತಾಂ ಗಿಡ ನಾಳೆ ಪೋಗಿ ದಿವಿಜಾಂಗನೆಯೊಳ್ ತೊಡರ್ದಿರ್ಪನಿಲ್ಲಿ ಮಾ
> ಣ್ಣಾಂ ಗಡಮಿರ್ಪೆನಂತನಿತು ಬೆಳ್ಳೆನೆ ಮುನ್ನಮೆ ಪೋಗಿ ನಲ್ಮೆಗೆ
> ಲ್ಲಂಗೊಳೆ ದೇವಲೋಕದೊಳಧೀಶನನಾನಿದಿರ್ಗೊಳ್ವೆನೋ ವೋ ಸ
> ಗ್ಗಂ ಗಳೊಳಿರ್ಪ ದೇವಡಿತಿ ತೊಳ್ತಿರೊಳಳ್ತಿಯನಾಗಲೀವೆ"[೯೪]

ರನ್ನ ಕವಿ ನಾಗದೇವನ ಪತ್ನಿ ಗುಂಡಮಬ್ಬೆ ಸತಿ ಹೋಗಿ ಗಂಡನೊಡನೆ ಸ್ವರ್ಗಲೋಕದಲ್ಲಿ ಇದ್ದುದ್ದನ್ನು ಇನ್ನೂ ಕಲಾತ್ಮಕವಾಗಿ ಚಿತ್ರಿಸುತ್ತಾನೆ. "ಒಡಸತ್ತು ಪತಿವ್ರತೆ ಗುಂಡಮಬ್ಬೆ ಸೌಂದರ ಸುಭಟಂಗೆ ಸಗ್ಗದೊಳಮಿಲ್ಲಿ ಮನಃಪ್ರಿಯೆಯಾದಳೆಂದು ಮಚ್ಚರಿಸುವರಿಂದ್ರ ಸೌಂದರಿಯರೇಂ ಸೊಬಗೋ ಸುಭಟ ತ್ರಿಣೇತ್ರನಾ"[೯೫] ಗುಂಡಮಬ್ಬೆಯು ನಾಗದೇವನೊಡನೆ ಸಹಗಮನಗೊಂಡಿದ್ದರಿಂದ ದೇವಕನ್ನಿಕೆಯರು ವೀರನಾದ ನಾಗದೇವನು ತಮ್ಮವನಾಗದೇ ಸತಿಹೋದ ಗುಂಡಮಬ್ಬೆಯ ಇನಿಯನಾಗಿಯೇ ಉಳಿದುದನ್ನು ಕಂಡು ಮತ್ಸರಪಡುತ್ತಿದ್ದರು ಎಂಬ ಕಲ್ಪನೆ ಮನಮೋಹಕವಾಗಿದೆ. ಹೀಗೆ ಗಂಡನ ಮರಣದ ನಂತರ ಪತ್ನಿ ಸತಿ ಹೋದರೆ ಸ್ವರ್ಗ ಪಡೆಯುತ್ತಾಳೆಂಬ ನಂಬಿಕೆಯನ್ನು ಹೇಳುವ ಬೋಧಕರನ್ನು ಬ್ರಹ್ಮಶಿವ ವಿಡಂಬಿಸುವುದನ್ನು ಪದ್ಯವೊಂದರಲ್ಲಿ ಹೀಗೆ ಸ್ಮರಿಸಬಹುದು.

"ಪುರುಷನ ಪರೋಕ್ಷದೊಳ್ ಪೆರ
ಗಿರದಾಗಡೆ ಸತ್ತಳಪ್ಪೊಡಾಕೆಗೆ ಸಗ್ಗಂ
ದೊರಕೊಳ್ಗುಮೆಂಬ ದುರ್ಬೋ
ಧರಮಾತಂ ಕೇಳ್ದು ನಂಬಿ ಕಿಚ್ಚಂ ಪುಗುವರ್"[೯೬]

ಬ್ರಹ್ಮಶಿವನ ಕಾಲದಲ್ಲಿ ಸತಿಹೋಗಿ ಸ್ವರ್ಗ ಪಡೆಯುವ ಕಲ್ಪನೆ ದಟ್ಟವಾಗಿರುವುದು ಈ ಪದ್ಯದ ಹಿನ್ನೆಲೆಯಲ್ಲಿ ಕಂಡು ಬರುತ್ತದೆ. ನಯಸೇನನು ಯುದ್ಧಭೂಮಿ, ಬೆಂಕಿ, ಜಲ ಮುಂತಾದವುಗಳಲ್ಲಿ ಬಿದ್ದು ಸ್ವರ್ಗ ಸೇರುತ್ತಾನೆ ಎಂಬ ವಿಷಯ ನಂಬುವವರು ಲೋಕ ಮೂಢರು ಎಂದಿರುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.[೯೭] ಮಹಾಕವಿ ಕುಮಾರವ್ಯಾಸನ 'ಕರ್ಣಾಟ ಭಾರತ ಕಥಾಮಂಜರಿ'ಯಲ್ಲಿ ಸತಿ ಪತಿಗಳಿಬ್ಬರೂ ಸ್ವರ್ಗ ಪಡೆಯುವ ನಂಬಿಕೆಯನ್ನು ಅತ್ಯಂತ ವಿಶಿಷ್ಟವಾಗಿ ವರ್ಣಿಸಲಾಗಿದೆ. ಈ ಸಾಂಪ್ರದಾಯಿಕ ನಂಬಿಕೆಗೆ ಅನುಗುಣವಾಗಿ ರಚಿಸಿದ ಪದ್ಯವೊಂದು ಹೀಗಿದೆ.

ಮೂರು ಕೋಟಿಯ ಕೋಟಿ ಧರ್ಮವ
ಮಿರದಿಹ ರೋಮಾಳಿ ಸಂಖ್ಯೆಯೊ
ಳಾರೆನೆನ್ನದೆ ನಿಜಪತಿಯ ಸಹಗಮನದಲಿ ತನುವ
ಮಾರಿದಬಲೆಯರುಗಳ ದೆಸೆಯಿಂ
ದಾರುಮಡಿ ಸ್ವರ್ಗಾದಿ ಭೋಗವ
ಸೂರೆಗೊಂಬುದು ತಪ್ಪದವನೀಪಾಲ ಕೇಳೆಂದ

ಎಂದು ಹೇಳುವ ಮೂಲಕ ಪತಿಯೊಡನೆ ಸಹಗಮನಗೊಂಡ ಪತ್ನಿ ಸ್ವರ್ಗ ಪಡೆಯುತ್ತಾಳೆಂಬ ಜನರ ಕಲ್ಪನೆಯನ್ನು ಕುಮಾರವ್ಯಾಸ ಇಲ್ಲಿ ಉಲ್ಲೇಖಿಸಿದ್ದಾನೆ.

'ಸಿರುಮಣನಾಯಕನ ಸಾಂಗತ್ಯ'ದಲ್ಲಿ ವೀರಣ್ಣನ ಮರಣದ ನಂತರ ಅವನ ಪತ್ನಿಯರು ಸತಿಹೋಗುವ ಸಮಯದಲ್ಲಿ 'ವೀರಣ್ಣನಡಿಗೆ ವಂದಿಸಿ ಬೇಡಿಕೊಂಡರು ವೀರಸ್ವರ್ಗವನು ಕೊಡೆಂದು' ಎಂದು ವಿವರಣೆ ಬರುತ್ತದೆ.

"ಬಾಗಿನವನು ಕೊಟ್ಟು ಬಂದರು ಸತಿಯರು
ಬೇಗಸಮಾಧಿಗೆ ಕುಳಿತು
ಭೋಗಿಭೂಷಣ ಕೈಲಾಸಕೆ ನಡೆಯೆನು
ತಾಗ ಸಮಾಧಿ(ಯು)ಮುಗಿಯೆ"[೯೮]

ಎಂದು ವೀರ ಮರಣ ಹೊಂದಿದ ಪತಿಯೊಂದಿಗೆ ವೀರಣ್ಣನ ಪತ್ನಿಯರು ಬಾಗಿನವನು ಕೊಟ್ಟು ವೀರಣ್ಣನೊಂದಿಗೆ ತಾವು ಸಮಾಧಿಯಲ್ಲಿ ಕುಳಿತು ಸ್ವರ್ಗ ಸೇರಿದರು. ಜೊತೆಗೆ 'ಸಮಾಧಿಸತಿ' ಪದ್ಧತಿಯ ಆಚರಣೆಯೊಂದಿಗೆ ಪತಿವ್ರತಾಧರ್ಮ ಪರಿಪಾಲಿಸಿದರೆಂಬ ನಂಬಿಕೆಯು ಇಲ್ಲಿ ವ್ಯಕ್ತವಾಗುತ್ತದೆ.

ಜನಪದ ಸಾಹಿತ್ಯವೂ ಸಹಗಮನಗೊಂಡ ಪತ್ನಿ ಸ್ವರ್ಗಕ್ಕೆ ಹೋಗುತ್ತಾಳೆ ಎನ್ನುವ ನಂಬಿಕೆಯನ್ನು ಪುಷ್ಠಿಗೊಳಿಸಿರುವ ಉದಾಹರಣೆಗಳಿವೆ. 'ಮಹಾಸತಿ ಕಾಟವ್ವ' ಗೀತೆಯಲ್ಲಿ ಕಾಟವ್ವ ಸತಿ ಹೋದಾಗ 'ಪೋದಳೆ ಕಾಟವ್ವ ಸಿವನರುಮನಿಗೆ' ಎಂಬ ವಿವರಣೆ ಬರುತ್ತದೆ. ಹೀಗೆ ವಡ್ಡಗೆರೆ 'ನಾಗಮ್ಮ' ಗೀತೆಯಲ್ಲಿ ತಾನು ಗಂಡನ ಹಿಂದೆ ಹೋದರೆ ಮುಕ್ತಿ ಸಿಗುತ್ತದೆ ಎಂದು ನಾಗಮ್ಮ ಹೇಳುತ್ತಾಳೆ.

"ರಾಜ್ಯವಾಳಾಕೆ ನನಗೆ ಪುಣ್ಯವಿಲ್ಲ
ಸಮರಾಜ್ಯವಾಳೋರ ಮಗ ಮುಂದೆ। ಸೊಸಿ ಹಿಂದೆ
ತೀರ್ಯೋದ್ರೆ ಮುಕುತಿ ಪಡದೇನು"[೯೯]

ಪತಿ ಮರಣ ಹೊಂದಿರಲು, ರಾಜ್ಯವಾಳಲು ನನಗೆ ಸಾಧ್ಯವಿಲ್ಲ. ಪತಿಯೇ ಸ್ವರ್ಗಲೋಕ ದಲ್ಲಿರುವಾಗ ನಾನು ಆತನೊಂದಿಗೆ ಮರಣ ಹೊಂದಿ ಮುಕ್ತಿ ಪಡೆಯುತ್ತೇನೆ. ಎಂದು ಸಿದ್ಧಳಾದ 'ನಾಗಮ್ಮ' ಕೊಂಡದಲ್ಲಿ ಕುಳಿತು ಕಟ್ಟಿಗೆ ಹಾಕುವ ಮಾವನನ್ನು ಕುರಿತು ಆಡುವ ಮಾತುಗಳು ಪದ್ಯದಲ್ಲಿ ಮನಕರಗುವಂತಿವೆ.[೧೦೦]

ಗಂಜಿ ಸೀರೆ ಮೇಲೆ ಗಂಧದ ಬಟ್ಟಿನಮೇಲೆ
ಅಂದವಾಗಿವಟ್ಟಣ್ಣ ಎದೆಗೊರಡ।ನಿನಮಗ
ಗಂಧ ಮಾಸಿದರೆಲ್ಲ ಬೈದಾನೆ

ಇಲ್ಲಿ ಒಟ್ಟುವ ಕಟ್ಟಿಗೆಯು ಅಸ್ತವ್ಯಸ್ಥತೆಯಿಂದ ಕೂಡಿದರೆ, ತಾನು ಹಚ್ಚಿಕೊಂಡ ಗಂಧ ಮಾಸಿ ಹೋಗುವುದು. ಇದನ್ನು ಕಂಡು ಸ್ವರ್ಗದಲ್ಲಿರುವ ತನ್ನ ಗಂಡ ಬೈಯುತ್ತಾನೆ. ಎನ್ನುವ ನಾಗಮ್ಮನ ಮಾತು ಜನಪದರ ಪ್ರಾತಿನಿಧಿಕ ಮಾತಾಗಿದೆ. ಪತ್ನಿ ಸತಿಹೋಗಿ ಸ್ವರ್ಗ ಸೇರುವಳೆಂಬ ನಂಬಿಕೆಯನ್ನು ಎಂ.ಚಿದಾನಂದಮೂರ್ತಿ ಅವರು ಅಧ್ಯಯನ ನಡೆಸಿರುವ 'ಚಿಕ್ಕುಡೇವಿನಮಾಸ್ತಿ' ವಿವರಣೆಯಲ್ಲಿಯೂ ಗುರುತಿಸಬಹುದಾಗಿದೆ.[೧೦೧]

೧೭ನೆಯ ಶತಮಾನದಲ್ಲಿ ಭಾರತವನ್ನು ಸಂಚರಿಸಿದ ವಿದೇಶಿ ಪ್ರವಾಸಿಗನಾದ ನಿಕೊಲೋ ಮನೂಚಿ ಹೇಳುವ ಮಾತುಗಳನ್ನು ಇದೇ ಸಂದರ್ಭದಲ್ಲಿ ಜ್ಞಾಪಿಸಿಕೊಳ್ಳಬಹುದು. "ಚಿತೆಯ

ಮೇಲೆ ಪತಿಯ ಶವದೊಂದಿಗೆ ಪತ್ನಿಯನ್ನು ಮಲಗಿಸಿದ ನಂತರ 'ಮೂರುಸಲ' ಆಕೆಯ ಹೆಸರು ಹಿಡಿದು ಅಲ್ಲಿ ನೆರೆದಿರುವ ಜನರು ಕರೆದು ಸ್ವರ್ಗಕ್ಕೆ ಹೋಗಲು ನಿನಗೆ ಆಸೆ ಇದೆಯೇ ಎಂದು ಕೇಳುತ್ತಾರೆ. ಆಗ ಚಿತೆಯಲ್ಲಿ ಕುಳಿತುಕೊಳ್ಳಲು ಸಿದ್ಧಳಿರುವವಳಿಂದ ಉತ್ತರ ಬಂದ ಕೂಡಲೇ ಬೆಂಕಿ ಹಚ್ಚುತ್ತಾರೆ. ಹೀಗೆ ಪತ್ನಿಯನ್ನು ಪತಿಯೊಂದಿಗೆ ದಹಿಸಲು ಬಂದ ಜನಸಮೂಹ ದಲ್ಲಿ 'ಸ್ವರ್ಗಕಲ್ಪನೆ' ಇರುವುದನ್ನು ನಿಕೊಲೋ ಮನೂಚಿ ಹೇಳಿದ್ದಾನೆ.[೧೦೨] ಹೀಗೆ ಮಾನವ ಸಮುದಾಯದಲ್ಲಿ ಸ್ವರ್ಗದ ನಂಬಿಕೆಯು ಬೇರೂರಿ ಸತಿಪದ್ಧತಿಯಂತಹ ಆಚರಣೆಗಳು ಉಗಮಗೊಂಡು ಬೆಳವಣಿಗೆ ಹೊಂದಲು ಸಹಕಾರಿಯಾಯಿತು.

೨. ಪುನರ್ಜನ್ಮ ಕಲ್ಪನೆ

ಪ್ರಾಚೀನ ಭಾರತದ ಜನಜೀವನದ ತಿಳುವಳಿಕೆಯಲ್ಲಿ ಪುನರ್ಜನ್ಮ ಕಲ್ಪನೆ ಸಾಮಾನ್ಯವಾಗಿತ್ತು. ಈ ಮಾತಿಗೆ ಭಾರತವು ಹೊರತಾಗಿಲ್ಲ. ಈ ಕಾರಣದಿಂದ ಮೃತನ ಪತ್ನಿಯು ಸತಿಹೋಗಿ ಮರುಜನ್ಮ ಪಡೆಯಲಿಚ್ಚಿಸಿರಬೇಕು ಎಂಬ ನಂಬಿಕೆಯನ್ನು ಜನಪದರು ಪುಷ್ಠಿಗೊಳಿಸಿದರು.

ಜನಪದ ಸಾಹಿತ್ಯದಲ್ಲಿ ಗಂಡಸತ್ತಾಗ ಪತ್ನಿ ಸತ್ತು ಮರು ಹುಟ್ಟಿನಲ್ಲಿ ಅವನನ್ನು ಪಡೆಯಬೇಕೆನ್ನುವ ಚಿತ್ರವೊಂದು ಅಪರೂಪವಾಗಿ ದೊರಕುತ್ತದೆ. ಉತ್ತರದೇವಿ ಗಂಡ ಚಿನ್ನಯ್ಯ ಮಡಿದಾಗ ಅವಳು ಹೀಗೆ ದುಃಖಿಸುತ್ತಾಳೆ.[೧೦೩]

ಬಿಟ್ಟೆ ಈ ಜನುಮ ಸುಟ್ಟೆ ಈ ಕರುಮ
ಕಟ್ಟಿದ್ಯಾದೋ ಮುಂದಿನಾ ಜನುಮಾಕೆ

ಈ ಜನ್ಮ ಬಿಟ್ಟು ಮುಂದಿನ ಜನ್ಮಕ್ಕೆ (ಗಂಡನಿದ್ದಲ್ಲಿಗೆ) ಹೋಗಬೇಕೆಂದು ಆಲೋಚಿಸಿ ದುಃಖಿಸುವ ಉತ್ತರದೇವಿ, ಸತಿಹೋಗುವ ಸ್ತ್ರೀಯರ ಪ್ರತೀಕದಂತೆ ಇದ್ದಾಳೆ. 'ಜಗುನೆಯ ಜಕ್ಕಣ್ಣ ಮಗುನೆಯ ಬ್ಯಾಟಿಕಾರ' ಲಾವಣಿಯಲ್ಲಿ ಗಂಡನಾಗಬಹುದಾದವನು ಮೃತಹೊಂದಲು ಸತಿಹೋಗಲು ಇಚ್ಛಿಸಿದ ಮಳಿಕೆಗೌಡನ ಮಗಳು ತನ್ನ ಮಾವನಿಗೆ ಹೀಗೆ ಹೇಳುತ್ತಾಳೆ.

"ಮಾವಯ್ಯ ಮಾವಯ್ಯ
ಒಂದಾನೆ ಒಂದು ದಿವಸ
ನಿನ್ನನೆ ಮನೆಯಿಂದ
ಹುಟ್ಟುತೀವಿ ಮಾವಯ್ಯ
ಕತ್ತರ ಚೆಂಡಾಗಿ
ಹುಟ್ಟುತ್ತಾನೆ ನಿನ ತಮ್ಮ

ದೊಡ್ಡನೆ ಚೆಂಡಾಗಿ
ಹುಟ್ಟುತ್ತೀನಿ ನಾ ನಿನ್ನ
ಎಸರ ಗುರ್ತುಗಳಿನ್ನ
ಅದೇ ಕಣೋ ಮಾವಯ್ಯ"[೧೦೪]

ಎಂದು ಮಳಿಕೆಗೌಡನ ಮಗಳು ಗಂಡನೊಡನೆ ಚಿತಾಪ್ರವೇಶ ಮಾಡಿ ಮುಂದಿನ ಜನ್ಮದಲ್ಲಿ ನಾವಿಬ್ಬರೂ ಚೆಂಡು ಹೂವಾಗಿ ಹುಟ್ಟುತ್ತೇವೆ ಎಂದು ಹೇಳುವ ಮಾತು ತುಂಬ ಗಮನಾರ್ಹ ವಾಗಿದೆ. ಸತ್ತಗಂಡ ಹಾಗೂ ಸತಿಹೋಗಲಿರುವ ಮಳಿಕೆಗೌಡನ ಮಗಳು ಇಬ್ಬರೂ ಮುಂದಿನ ಜನ್ಮದಲ್ಲಿ ಮಾವನ ಮನೆಯಲ್ಲಿಯೇ ಚೆಂಡು ಹೂವಾಗಿ ಹುಟ್ಟುವ ಇಲ್ಲಿಯ ಕಲ್ಪನೆ ಜನಪದರಲ್ಲಿ ಸಾವಿನಾಚೆಯ ಜೀವನ ಮುಂದುವರಿಕೆಯ ನಂಬಿಕೆಯನ್ನು ಸೂಚಿಸುವುದೇ ಆಗಿದೆ.

ಸತಿಹೋದವಳು ಗಂಡನನ್ನು ಮುಂದಿನ ಜನ್ಮದಲ್ಲಿ ಪಡೆದುಕೊಳ್ಳುತ್ತಾಳೆ ಎನ್ನುವ ಜನರ ನಂಬಿಕೆಯನ್ನು ಕುರಿತು ಕ್ರಿ.ಶ.೧೩೨೧ರಲ್ಲಿ ಪಶ್ಚಿಮ ಭಾರತಕ್ಕೆ ಭೇಟಿಕೊಟ್ಟ 'ಫೈಯರ್ ಓಡೊರಿಕ್' ಹೀಗೆ ಬರೆಯುತ್ತಾನೆ. "ಇಲ್ಲಿ ಸತ್ತವನನ್ನು ಸುಟ್ಟು ಬದುಕಿರುವ ಅವನ ಹೆಂಡತಿಯನ್ನು ಸುಡುತ್ತಾರೆ. ಇದಕ್ಕೆ ಕೊಡುವ ಕಾರಣವೆನೆಂದರೆ ಸತ್ತವನು ಇನ್ನೊಂದು ಸಲ ಜನ್ಮವೆತ್ತಿದಾಗ ಅವನ ಹೆಂಡತಿಯೂ ಅವನೊಡನೆ ಜನ್ಮವೆತ್ತುವಳು"[೧೦೫] ಎಂದು ಉಲ್ಲೇಖಿಸಿದ್ದಾನೆ.

ಪುನರ್‌ಜನ್ಮದ ಕುರಿತು 'ಬಪ್‌ತೀಸ್ಟ್ ಟಾವರನ್ಯೇ'ಯು ಹೀಗೆ ಬರೆಯುತ್ತಾನೆ. "ಬ್ರಾಹ್ಮಣರ ಚಿತಾವಣಿ ಬೇರೆ ಸತ್ತಗಂಡನೊಡನೆ ಚಿತೆಯೇರಿದರೆ ಇಬ್ಬರೂ ಮತ್ತೊಮ್ಮೆ ಗಂಡ, ಹೆಂಡತಿ ರಾಗಿಯೇ ಹುಟ್ಟಿ ಈಗಿಗಿಂತ ಇನ್ನೂ ಹೆಚ್ಚು ಸುಖವಾಗಿ ಬಾಳುವೆ ಮಾಡಬಹುದೆಂದು ಬ್ರಾಹ್ಮಣರು ಪುಸಲಾಯಿಸುತ್ತಾರೆ."[೧೦೬] ಎಂದು ಉಲ್ಲೇಖಿಸಿದ್ದಾನೆ. ಸತಿಪದ್ಧತಿಗೆ ಹಿನ್ನೆಲೆಯಾಗಿರುವ ಜನರ ಮರುಜನ್ಮದ ನಂಬಿಕೆಯು ಜನಜೀವನದಲ್ಲಿ ಗಾಢವಾಗಿ ನೆಲೆಯೂರಿ ಸತಿಪದ್ಧತಿಯ ಉಗಮಕ್ಕೂ ಅದರ ಬೆಳವಣಿಗೆಗೂ ಕಾರಣವಾಗಿರುವುದನ್ನು ಕಂಡುಕೊಳ್ಳಬಹುದಾಗಿದೆ.

೨.೩. ಸತಿಪದ್ಧತಿ ಆಚರಣೆಗಳು

'ಸತಿಪದ್ಧತಿ'ಗೆ ಸಂಬಂಧಿಸಿದ ಆಚರಣೆಗಳನ್ನು ಅವಲೋಕಿಸಿದಾಗ ಸತಿ ಸಹಗಮನ ಅಥವಾ ಅನುಗಮನ ಕಾಲಕ್ಕೆ ಸತಿ ಹೋಗುವವಳು ಮತ್ತು ಸಂಬಂಧಿಕರು ಈ ಕಾರ್ಯವಿಧಾನ ಗಳನ್ನು ಆಚರಿಸುತ್ತಿದ್ದರು. ಅವುಗಳನ್ನು ಈ ಕೆಳಗಿನಂತೆ ಗುರುತಿಸಬಹುದು.

೨.೩.೧. ಸತಿ ಸಹಗಮನಗೊಳ್ಳುವ ಸಂದರ್ಭದಲ್ಲಿನ ಆಚರಣೆಗಳು

'ಸತಿ' ಸಹಗಮನಗೊಳ್ಳುವ ಮುಖ್ಯ ಉದ್ದೇಶ ಮೃತ ಗಂಡನನ್ನು ಪಡೆಯುವ ನಂಬಿಕೆ ಹಾಗೂ ಅವನು ಇನ್ನೊಂದೆಡೆಯಲ್ಲಿ ಇರುವನೆಂಬ ಕಲ್ಪನೆಯಿಂದಾಗಿ ಈ ಸಂದರ್ಭದಲ್ಲಿ ಅವಳು ಮುತ್ತೈದೆಯಂತೆಯೇ ಹೋಗಬೇಕು ಎಂಬುದು ಸಮಾಜದ ತಿಳುವಳಿಕೆಯಾಗಿತ್ತು. ಮುತ್ತೈದೆ ಸ್ತ್ರೀಯು ಎಲ್ಲ ವಿಧದ ಅಲಂಕಾರಗಳನ್ನು ಧರಿಸಲು ಯೋಗ್ಯಳು. ತಾಳಿ, ಮೂಗುತಿ, ಕಾಲುಂಗುರ, ಬಳೆ, ಓಲೆ, ಕುಂಕುಮ, ಅರಿಷಿಣ, ಕಾಡಿಗೆ, ಹೂವು ಮೊದಲಾದವುಗಳು ಸೌಭಾಗ್ಯದ ಸಂಕೇತಗಳಾಗಿದ್ದು ಅವುಗಳನ್ನು ತ್ಯಜಿಸಬಾರದೆಂಬ ತಿಳುವಳಿಕೆ ಇಂದಿಗೂ ಇರುವುದು ಕಂಡುಬರುತ್ತದೆ. ಹಲವು ಹಳ್ಳಿಗಳಲ್ಲಿ ಮಾಸ್ತಿ ಕಲ್ಲುಗಳನ್ನು ಇಂದಿಗೂ 'ಮದವಳಿಗೆ ಕಲ್ಲು' ಎಂದು ಕರೆಯಲಾಗುತ್ತದೆ. ಉದಾಹರಣೆಗೆ ಮೋಚಿದೇವನು ವೀರಮರಣ ಹೊಂದಲಾಗಿ ಅವನ ಪತ್ನಿ ಮಹಾಸತಿಯಾಗಲು "ಬಮ್ಮಗೌಡನ ಮಗ ಮಾಗಗೌಡ ಮಾಡಿಸಿದ ಮದವಳಿಗೆ ಕಲ ನೆಡೆಸಿದು ಮಂಗಳ ಮಹಾಶ್ರೀ" ಎಂದು ಶಾಸನದಲ್ಲಿ ಉಲ್ಲೇಖಗೊಂಡಿದೆ. ಇಲ್ಲಿ ಸತಿ ಹೋಗುವುದು ಎಂದರೆ ಮದುವೆಯಾದಷ್ಟು ಸಂಭ್ರಮ ಎಂದು ತಿಳಿದಿದ್ದ ಭಾಗಶಃ ಜನರು ಸ್ಮಾರಕ ಕಲ್ಲನ್ನು 'ಮದವಳಿಗೆ ಕಲ್ಲು' ಎಂದು ಕರೆದಿರುವುದನ್ನು ಕಾಣಬಹುದು. ಮಾದಾರ ಧೂಳಯ್ಯನ ವಚನವೊಂದರಲ್ಲಿ ಸತಿಯು ಮುಡಿಗೆ ಹೂವು ಮುಡಿದು ಕೈಯಲ್ಲಿ ಲಿಂಬೆಹಣ್ಣು ಹಿಡಿದುಕೊಂಡಿದ್ದರ ವಿವರಣೆ ಸಿಗುತ್ತದೆ.[೧೦೭]

"ಪುರುಷ ನಿರ್ವಾಣಕ್ಕೆ ಉಗಿವ ಅಗನಿಯ ಹೊಕ್ಕು ತೋರಲು ಬಾರದು, ಒಬ್ಬಾನೊಬ್ಬ ಪುರುಷನು ರಣಮಂಡಲಕ್ಕೆ ಹೋಗಿ ಕಡಿದಾಡಿ ಮಡಿದಲ್ಲಿ ಅವನ ಸ್ತ್ರೀಯಳು ಎಣ್ಣೆ ಅರಿಷಿಣ ಹಚ್ಚಿಕೊಂಡು ಹೂವನ್ನು ಮುಡಿದುಕೊಂಡು ಮಾಸ್ತಿಯಾಗಿ ಮೆರೆವ ಪರಿಯಂತರ ಪರಿಣಾಮ ವಾಗಿರುವುದು"[೧೦೮] ಬಸವಣ್ಣನವರು ಟೀಕೆ ಬರೆದ ಈ ವಚನದಲ್ಲಿ ಪುರುಷನೋರ್ವ ಯುದ್ಧದಲ್ಲಿ ಹೋರಾಡಿ ಮಡಿದಾಗ ಅವನ ಪತ್ನಿ ಅರಿಷಿಣ, ಎಣ್ಣೆ, ಹಚ್ಚಿಕೊಂಡು ಹೂ ಮುಡಿದುಕೊಂಡು ಅಗ್ನಿಯನ್ನು ಪ್ರವೇಶಿಸುವಳು ಎಂದು ತಿಳಿದು ಬರುತ್ತದೆ.

ಹಡಪಣ್ಣನ ವಚನವು ಆಧ್ಯಾತ್ಮಿಕ ಔನ್ನತ್ಯವನ್ನು ಹೇಳುವುದರೊಂದಿಗೆ ಸತಿ ಸಿಂಗರಿಸಿಕೊಂಡು ಹೋದ ಚಿತ್ರಣವನ್ನು ಹೀಗೆ ಕೊಡುತ್ತದೆ. ಇಲ್ಲಿ ಸತಿಹೋದ ಸ್ತ್ರೀಯು ಹೂವಿನ ದಂಡೆ ಕಟ್ಟಿಕೊಂಡು ಅದರ ತೊಂಡಲನ್ನು ಸತಿಹೋಗುವ ಸಂದರ್ಭದಲ್ಲಿ ಹರಿದರು ಎಂಬುದು ವಚನದಲ್ಲಿ ಹೀಗೆ ಅಭಿವ್ಯಕ್ತವಾಗಿದೆ.

"ಆಧಾರದ ಕುಂಡಿಲಿ ಸರ್ಪನ
ಮಂಡೆಯು ಮೆಟ್ಟಿ ನಿಲಲು
ಗಂಡಾಳು ಕಾಲಕಾಮರಿಬ್ಬರು ಹತವಾದರು
ಅವರ ಹೆಂಡಿರುಗಳು ವಲಂಡೆ ಮುಚ್ಚಿದರು
ದಂಡೆಯ ಮುಟ್ಟಿದರು. ತೊಂಡಿಲ ಹರಿದರು
ತಮ್ಮ ಗಂಡರ ಕೂರಿ
ಸಮಾಧಿಯ ಹೊಕ್ಕರು"[೧೦೯]

ಷಣ್ಮುಖ ಶಿವಯೋಗಿಯು ವಚನ ಒಂದರಲ್ಲಿ ಸತಿ ಹೋಗುವ ಸ್ತ್ರೀಯು "ಗಂಡ ಸತ್ತನೆಂದು ಗಂಡನೊಡನೆ ಕೆಂಡವ ಬೀಳುವೆನೆಂದು ಪುಂಡ ವೀರಸ್ತ್ರೀ ತಾನು ದಂಡೆಯ ಕಟ್ಟಿಕೊಂಡು ಖಂಡೆಯವ ಪಿಡಿದು ತಂಡ ತಂಡದ ಜನರ ಮುಂದೆ ಮೆರೆದುಕೊಂಡು ಬಂದುಳು"[೧೧೦] ಎಂಬುದನ್ನು ಕುರಿತು ವಿವರಿಸಿದ್ದಾನೆ.

ಇಲ್ಲಿಯೂ ಸತಿ ಸಹಗಮನಗೊಳ್ಳಲು ಹೋಗುವಾಗ ಹೂವಿನ ದಂಡೆಯನ್ನು ಕಟ್ಟಿಕೊಂಡು ಕೈಯಲ್ಲಿ (ನಿಂಬೆಹಣ್ಣು, ಮಾದಳದ ಫಲ, ಬಾಳೆಹಣ್ಣು ಕಾಕೇಹಣ್ಣು) ಖಂಡೆಯವ ಹಿಡಿದುಕೊಂಡು ಸತಿ ಹೋಗುತ್ತಿದ್ದರೆಂದು ತಿಳಿದು ಬರುತ್ತದೆ.

ನಂಜುಂಡ ಕವಿಯು 'ರಾಮನಾಥ ಚರಿತೆ'ಯಲ್ಲಿ ಕುಮಾರರಾಮನ ಐದು ಜನ ಪತ್ನಿಯರು ಸತಿಹೋಗುವ ಕಾಲಕ್ಕೆ ಸಿಂಗರಿಸಿಕೊಂಡ ಬಗೆಯನ್ನು ಹೀಗೆ ಚಿತ್ರಿಸಲಾಗಿದೆ.

"ವೀರಮುದ್ರಿಕೆ, ನೂಪುರ, ಕಾಂಚಿಯದಾಮ,
ಹಾರ, ಪದಕ, ಹತ್ತುಕಟ್ಟು
ತೋರ ಮುತ್ತಿನ ಬೊಟ್ಟು ತುರುಬಿನ ಬಲೆವಣಿ
ಸೇರಿ ಕಣ್ಣಿಸೆದುವವರಿಗೆ
ಉಂಗುರ ಕಡಗ ಕಂಕಣ ಬಾಹುಪುರಮು
ನಂಗೊಳಿಸುವ ಭುಜಕೀರ್ತಿ
ಸಂಗಡಿಸಿದ ವಜ್ರದೋಲೆ ಮೆರೆಯೆ ರಾಮ
ನಂಗನೆಯರು ಕಣ್ಗೆಸೆದರು
ಮುರುಡಿಯ ಸರಪಣಿ ಮುಂಗಯ್ಯ ಮುರುಹಸ್ತ
ಸರ ಹೊನ್ನ ಬಳೆ ತೋಳಬಂದಿ

ಕರಮೆಸೆಯಲು ಮಾಸತಿಯರಾದರು ರಾಮ
ನರಸಿಯರಂದು ರಾಗದೊಳು
ಪಿಡಿದ ನಿಂಬೆಯ ಹಣ್ಣು ಕನ್ನಡಿ ಕಯ್ಯೊಳು
ಬಿಡದೆ ಮೆರೆಯಲಂದರು."[೧೧೧]

ಇಲ್ಲಿ ಕುಮಾರ ರಾಮನ ಸತಿಯನ್ನು ಕುರಿತು.'ನಳಿನಾಯರ್ರೈವರು ರಾಮನೆಡೆಗೆ ಪೋಪಳವಿನಿಂ ಸಿಂಗರಿಸಿದರು' ಎಂದು ನಂಜುಂಡ ಕವಿಯು ರಾಮನಾಥ ಚರಿತೆಯಲ್ಲಿ ಸುಂದರವಾಗಿ ಚಿತ್ರಿಸಿದ್ದಾನೆ.

ಇಲ್ಲಿ ಶರೀರದ ವಿವಿಧ ಭಾಗಗಳಾದ ಕೈ, ಕಾಲು, ಬೆರಳು, ಭುಜ, ಕೊರಳು, ಹಣೆ, ಮೂಗು, ಕಿವಿ, ತಲೆಗೆ ವಿಭಿನ್ನ ಆಭರಣಗಳನ್ನು ಸಿಂಗರಿಸಿಕೊಳ್ಳುತ್ತಿದ್ದರೆಂದು ತಿಳಿದು ಬರುತ್ತದೆ. ಇಲ್ಲಿ ಕುಮಾರ ರಾಮನ ಸತಿಯರು ವೀರಮುದ್ರಿಕೆ, ದೂಪುರ ಕಾಂಚಿದಾಮ, ಹಾರ, ಪದಕ, ಹತ್ತುಕಟ್ಟು, ತೋರಮುತ್ತಿನಬೆಟ್ಟು, ತುರುಬಿನ ಬಲೆವಣೆ, ಉಂಗುರ, ಕಡಗ, ಕಂಕಣ, ಬಾಹುಪುರ, ಭುಜಕೀರ್ತಿ, ವಜ್ರದೋಲೆ, ಮುರುಡಿಯ ಸರಪಣಿ, ಮುಂಗೈಮುರಿ ಹಸ್ತಸರ, ಹೊನ್ನಬಳೆ, ತೋಳಬಂದಿ ಮೊದಲಾದ ಆಭರಣಗಳನ್ನು ಧರಿಸಿಕೊಂಡು ಕೈಯಲ್ಲಿ ಲಿಂಬೆಹಣ್ಣು, ಕನ್ನಡಿ ಹಿಡಿದ ವಿವರಣೆಯಿದೆ.

ವಿರಕ್ತ ತೋಂಟದಾರ್ಯನ 'ಸಿದ್ಧೇಶ್ವರ ಪುರಾಣ'ದಲ್ಲಿ ಪತಿ ಮಡಿದನೆಂಬುದನ್ನು ಕೇಳಿ ಪತ್ನಿಯೋರ್ವಳು ಅರಿಸಿನ ಸೀರೆ ತೊಟ್ಟು ಗಂಡನನ್ನು ಪಡೆಯಲು ಮದುಮಗಳಂತೆ ಸಿಂಗರಿಸಿಕೊಂಡಿರುವುದನ್ನು ಹೀಗೆ ಹೇಳುತ್ತಾನೆ."ಸೂಸಕದಂಡೆಯುತವಾದ ಮುಂಡೆಯಿಂದರಿಸಿನದ ಸೀರೆಯುಟ್ಟಾಭರಣಗಳನು ತೊಟ್ಟು ಪರಿ ಪರಿಯ ಪುಷ್ಪ ಮಾಲಾನುಲೇಪನಗಳಿಂ ಪೆರಿದಲಂಕರಿಸಿ ಜಂಬೀರಫಲಮಂ ಪಿಡಿದು ತರದೆ ಮತ್ತೊಂದು ಕಯ್ಯೊಳಗೆ ಕೈ ಪಿಡಿವಿಡಿದು"[೧೧೨] ಸತಿಯಾಗಲು ಉತ್ಸಕಳಾಗುತ್ತಾಳೆ ಎಂಬುದು ತಿಳಿದು ಬರುತ್ತದೆ.

ಮಣಿಗನ್ನಡಿ, ಜಮದಾಡೆ, ತಲೆಗೆ ಗರಿಯ ಬಾಸಿಂಗ ಅಪೂರ್ವ ರತ್ನದ ಒಡವೆಗಳನ್ನು ಧರಿಸಿದ ಸತಿ ಚಿತ್ರ ಇಲ್ಲಿದೆ, ವೀರಯ್ಯನ ಮರಣ ಪ್ರಸಂಗದಲ್ಲಿ ಸತಿಹೋಗಲಿರುವ ಅವನ ಪತ್ನಿಯರು ಸಿಂಗರಿಸಿಕೊಂಡ ಬಗೆಯನ್ನು[೧೧೩] 'ಸಿರುಮಣ ನಾಯಕನ ಸಾಂಗತ್ಯ'ದಲ್ಲಿ ಹೀಗೆ ಚಿತ್ರಿಸಲಾಗಿದೆ.

ಹೊನ್ನ ಪುತ್ಥಳಿಯ ಹೋಲುವ ಮುಖಕಾಂತಿಯ
ರನ್ನ ಗನ್ನಡಿಗದಪುಗ(ಳ)
ಚಿನ್ನ ಮುತ್ತಿನ ಬಯಿತಲೆಬೊಟ್ಟನಿಟ್ಟು
ರನ್ನ ಮಾಣಿಕದ ಹಾರಗ(ಳ)
ಉತ್ತಮ ನಾಣ್ಯದುಕೂಲ ಸೀರೆಗಳನು
ಮತ್ತೇ (ನಿ)ರಿಯ ತೆಗೆದುಟ್ಟು
ಕತ್ತುರಿ ಪುಣುಗು ಜವಾದಿಯ ಲೇಪಿಸಿ
ಹಸ್ತರೆಟ್ಟರು ರನ್ನ ಬಳೆಯ

ವೀರಯ್ಯನ ಪತ್ನಿಯರು, ಸತಿ ಹೋಗುವಾಗ ಮುತ್ತಿನ ಬೈತಲೆ, ಹಣೆಗೆ ಬೊಟ್ಟು, ಕೊರಳಲ್ಲಿ ಮಾಣಿಕ್ಯದ ಹಾರ, ಕೈಯಲ್ಲಿ ರತ್ನದ ಬಳೆ, ಅದೇ ಆಗ ತೆಗೆದ ರೇಷ್ಮೆ ಸೀರೆಯನ್ನು ಉಟ್ಟು, ಆಭರಣಗಳನ್ನು ತೊಟ್ಟು, ಕಸ್ತೂರಿ, ಪುಣುಗು–ಜವಾದಿಗಳೆಂಬ ಸುಗಂಧ ದ್ರವ್ಯಗಳನ್ನು ಲೇಪಿಸಿಕೊಂಡು ಸತಿ ಹೋದರೆಂಬುದು ಉಲ್ಲೇಖಗೊಂಡಿದೆ.

'ಇಮ್ಮಡಿ ಚಿಕ್ಕ ಭೂಪಾಲನ ಸಾಂಗತ್ಯ'ದಲ್ಲಿ ತೋಂಟದಾರ್ಯನ ಮಡದಿ ಚೆನ್ನಬಸವಮ್ಮ ಸತಿಯಾಗುವಾಗ ವೈಭವಯುತವಾಗಿ ಅಲಂಕರಿಸಿಕೊಂಡಿರುವುದನ್ನು ಹೀಗೆ ಚಿತ್ರಿಸಲಾಗಿದೆ.

"ಎಡಗೈಯ ಮಣಿಗನ್ನಡಿ ಬಲಗೈಯ್ಯೊಳು
ಪಿಡಿದಲಗುವ ಜಮದಾಡೆ
ಮಡಿದ ಗರಿಯ ಬಾಸಿಂಗವ ಮುರಿದ ರನ್ನ
ದೊಡವೊಪ್ಪಲೈತಂದಳಾಗ,"[೧೧೪]

ಪದ್ಯದಲ್ಲಿ ಚೆನ್ನಬಸವಮ್ಮ ಮಣಿಗನ್ನಡಿ, ಜಮದಾಡೆ, ತಲೆಗೆ ಗರಿಯ ಬಾಸಿಂಗ ಅಪರೂಪದ ರತ್ನದ ಒಡವೆಗಳನ್ನು ಧರಿಸಿ ಸತಿಹೋದಳೆಂದು ತಿಳಿದು ಬರುತ್ತದೆ.

ಜನ್ನನ 'ಅನಂತನಾಥ ಪುರಾಣ'ದಲ್ಲಿ ಚಂಡಶಾಸನ ಪತ್ನಿಯರು ಸತಿಹೋಗುವ ಸಂದರ್ಭದಲ್ಲಿ ಬೆಲೆಯುಳ್ಳ ವಸ್ತ್ರಾಭರಣಗಳನ್ನು ಧರಿಸಿಕೊಂಡು ಸಿಂಗಾರಗೊಳ್ಳುತ್ತಿದ್ದರು. ಇದನ್ನು ಕವಿ ಹೀಗೆ ಹೇಳುತ್ತಾನೆ. "ತುಡಿಗೆಯನಾಯ್ದು ಕೊಂಡುಳಿದವಂ ಸಖಿಯರ್ಗಿರ ವೇಳ್ದು"[೧೧೫] ಇಲ್ಲಿ ಸತಿ ಹೋಗುವ ಪತ್ನಿಯರು ತಮಗೆ ಬೇಕಾದಷ್ಟು ವಸ್ತ್ರ, ಒಡವೆಗಳನ್ನು ತೆಗೆದುಕೊಂಡು ಉಳಿದವುಗಳನ್ನು ಅವರ ಸಖಿಯರಿಗೆ ಕೊಡುವುದು ಸ್ಪಷ್ಟವಾಗಿ ತಿಳಿದುಬರುತ್ತದೆ. ಇಲ್ಲಿ ಅರಸು

ಮನೆತನ ಮತ್ತು ಶ್ರೀಮಂತ ವರ್ಗದವರಲ್ಲಿ ನಡೆಯುತ್ತಿದ್ದ ಸತಿ ಆಚರಣೆಯ ಚಿತ್ರಣವನ್ನು ಕೊಟ್ಟಿದ್ದಾನೆ.

ಜನಪದ ಗೀತೆಗಳಲ್ಲಿ ಸತಿ ಸಿಂಗರಿಸಿಕೊಳ್ಳುವ ಕುರಿತು ತುಂಬಾ ಉಪಯುಕ್ತವಾದ ಮಾಹಿತಿಗಳು ದೊರಕುತ್ತವೆ. 'ಈರೋಬಿ' ಖಂಡಕಾವ್ಯದಲ್ಲಿ ಈರೋಬಿ ಬಣ್ಣ ಹಚ್ಚಿಕೊಂಡು, ಬಂಗಾರ ತೊಟ್ಟುಕೊಂಡು, ಲಿಂಬೆಹಣ್ಣು, ಈಚಲು ಗರಿಯನ್ನು ಕೈಯಲ್ಲಿ ಹಿಡಿದುಕೊಂಡು, ಕಳಸ ಹೊತ್ತುಕೊಂಡು, ತುರುಬಿಗೆ ಕುರುವಲ್ಲೆಯನ್ನು ಮುಡಿದುಕೊಂಡು, ವಾಲೆಯಿಕ್ಕಿಕೊಂಡು, ಕಣ್ಣಿಗೆ ಕಪ್ಪುನಿಟ್ಟುಕೊಂಡು, ನೀಲಿಪತ್ತಲವುಟ್ಟು, ನೀಲಕನ್ನಡಿ ಹಿಡಿದು ಸತಿ ಹೋಗುವ ವಿವರಗಳು ತಿಳಿದುಬರುತ್ತವೆ.[೧೧೬]

'ಮಾಹಾಸತಿ ವೀರತಿಮ್ಮವ್ವ' ಗೀತೆಯಲ್ಲಿ ಗಂಡ ಮರಣ ಹೊಂದಿದ್ದನ್ನು ಕೇಳಿದಾಗ 'ತಿಮ್ಮವ್ವ' ಅಣ್ಣ ಕರಿಯಣ್ಣ ಬಣ್ಣ ತಂದು ಕೊಡು, ಅಪ್ಪ ಕರಿಯಣ್ಣ ಪಟ್ಟೆ ತಂದು ಕೊಡು ಎಂದು ಮಡಿಯಾ ತಗದುಟ್ಟಾಳು, ಇಡಿದಾಳು ಕನ್ನಡಿಯ, ಮುಡಿದಾಳು ಎಸಳಮಲ್ಲಿಗೆ ಎಂಬ ವರ್ಣನೆಯೊಂದಿಗೆ ಹೇಳುವ ಮಾತುಗಳು ಹೀಗೆ ಬರುತ್ತವೆ.

"ಒಳ್ಯೋಳು ತಿಮ್ಮವ್ವ ಬಲ್ಲನೇರಿಕಂಡು
ಬಳ್ಳಿಮಲ್ಲಿಗೆ ಮುಡಕೊಂಡು
ಬಳ್ಳಿ ಮಲ್ಲಿಗೆ ಮುಡಕೊಂಡು ಬೂತನಗುಡಿಯ
ಅಳ್ಳದಾಗ ತಿಮ್ಮವ್ವ ಮೆರೆದಾಳೆ॥
ಅಸನಾದಳು ತಿಮ್ಮವ್ವ ಬಸವಾನೇರಿಕಂಡು
ಎಸಳು ಮಲ್ಲಿಗೆ ಮುಡಕೊಂಡು
ಎಸಳು ಮಲ್ಲಿಗೆ ಮುಡಕೊಂಡು ಬೂತನಗಿಡಿಯ
ಸೊಸಿ ಬೇವಿನಾಗ ಮೆರೆದಾಳೆ॥"[೧೧೭]

'ಕೊಂಡದ ಕಾಟವ್ವ' ಗೀತೆಯಲ್ಲಿ ಕಾಟವ್ವ, ಮುತ್ತಣ್ಣ ಮರಣ ಹೊಂದಿದಾಗ ಮೈತುಂಬ ಅರಿಷಿಣ, ಗಂಧ, ಮಾರುದ್ದ ಜಡೆ ಹಾಕಿ ಹೂವಿನಿಂದ ಅಲಂಕರಿಸಿಕೊಂಡು 'ಮುತ್ತೈದೆಯಾಗಿ ವೊರಡಮ್ಮ' 'ಮೊದಲಗಿತ್ಯಾಗಿ ವೊರಡಮ್ಮ' ಮುಂದೆ 'ಮುತ್ತೈದೆಯಾಗಿ ಬರುತಾಳೆ' ಎಂಬಂತಹ ವಿವರಗಳು ಗೀತೆಯಲ್ಲಿ ಹೀಗೆ ಅಭಿವ್ಯಕ್ತವಾಗಿವೆ.[೧೧೮]

ನಿಂಬೀಯ ಅಣ್ಣ ಅಂಬರಕೇಡಾಡುತ
ಬಂದೀಯ ತೋಳ ತಿರುವುತ

ಬಂದೀಯ ತೋಳ ತಿರುವೂತ ಮುತ್ತಣ್ಣನ।
ರೆಂಬೇ ಕೊಂಡಾಕೆ ನಡೆದಾಳೆ॥

'ಮಹಾಸತಿ ತಾಡಿನಾಗಮ್ಮ' ಕಥನಗೀತೆಯಲ್ಲಿ ನಾಗವ್ವಳು ಗಂಡನ ಮರಣವನ್ನು ಸಹಿಸಲಾರದೇ ಅಗ್ನಿ ಪ್ರವೇಶಿಸುತ್ತಾಳೆ. ಆಗ ಅವಳು ಅಲಂಕರಿಸಿಕೊಂಡ ರೀತಿ ಹೀಗಿದೆ. "ಪಟ್ಟೇದ ಸೀರುಟ್ಟು, ಮುತ್ತಿನ ಬಟ್ಟಿಟ್ಟು, ಅಕ್ಕ ಕೊಂಡದೊಳು ಹೋದಳು."[೧೧೯] ಎಂದು ಜನಪದರು ಹಾಡುತ್ತಾರೆ.

'ಮಹಾಸತಿ ವೀರತಿಮ್ಮವ್ವ' ಜನಪದ ಗೀತೆಯಲ್ಲಿ ತಿಮ್ಮವ್ವಳು ಸತಿ ಹೋಗುವ ಸಮಯದಲ್ಲಿ ಮುತ್ತೈದೆಯಾಗಿ ಗಂಡನ ಮನೆಗೆ ಹೊಸದರಲ್ಲಿ ಹೋಗುವ ಹಾಗೆ ಸಂಭ್ರಮಿಸುತ್ತ ಕಳುಹಿಸಿಕೊಡುವ ವಿವರಣೆಗಳು ಹೀಗೆ ಅಭಿವ್ಯಕ್ತಗೊಂಡಿವೆ.

"ರಾಯ ಸೀರ್‍ಯಾದ ಏರಿಕಲ್ಲಿನ ಮ್ಯಾಲೆ
ಸಾಲ್ಯಾದ ಸಿರ್‍ಯೋರು ಸರಿಸಮಕೆ
ಸಾಲ್ಯಾದ ಸಿರ್‍ಯೋರು ಸರಿಸಮಕೆ ತಿಮ್ಮವ್ವನ
ಮಾವಾನ ಮನಿಗೇ ಕಳಿಸ್ಸಾರೆ॥"[೧೨೦]

ಪಟ್ಟೆಸೀರೆ, ಸಾಲ್ಯಾದಸೀರೆ ಉಟ್ಟು ವಿವಿಧ ಆಭರಣ ಧರಿಸಿಕೊಂಡು ಅತ್ತೆ-ಮಾವನ ಮನೆಗೆ ಹೋಗಿ ಆಶೀರ್ವದಿಸಿಕೊಂಡು, ಬೇರೆ ಪ್ರಪಂಚದಲ್ಲಿರುವ ತನ್ನ ಗಂಡನನ್ನು ಪಡೆಯಲು ಹೊರಟಿದ್ದಾಳೆ ಎಂಬ ಸಂಭ್ರಮ ಇರುವುದು ಆಶ್ಚರ್ಯವೆನಿಸುತ್ತದೆ.

'ನಾಗವ್ವ' ಜನಪದ ಖಂಡ ಕಾವ್ಯದಲ್ಲಿ ನಾಗವ್ವ ಸತಿ ಹೋಗುವಾಗ ಸತಿ ಆಚರಣೆ ವಿವಾಹದ ಸಿದ್ಧತೆಯಂತೆ ನಡೆಯುತ್ತಿತ್ತು ಎಂಬ ವಿವರಗಳು ಕಾವ್ಯದಲ್ಲಿ ಹೀಗೆ ಅಭಿವ್ಯಕ್ತ ಗೊಂಡಿವೆ.

"ಕಿಚ್ಚಿನ ಸುತ್ತ ನುಚ್ಚಕ್ಕಿ ಹರೆಹುಯ್ದು
ಮುತ್ತಿನ ಕಳಸ ನಡುವಿರಿಸಿ ನಾಗವ್ವನ
ಕಿಚ್ಚಿಗೆ ಧಾರೆ ಎರೆದರು
ಕೊಂಡದಸುತ್ತ ಕೆಂಡದ ಹಸೆಹುಯ್ದು
ಬಂಗಾರದ ಕಳಸ ನಡುವಿರಿಸಿ ನಾಗವ್ವನ
ಕೊಂಡಾಕೆ ಧಾರೆ ಎರೆದಾರು."[೧೨೧]

ಇಲ್ಲಿ ಸತಿ ಹೋಗುವ 'ನಾಗವ್ವ' ಮುತ್ತೈದೆಯಂತೆ ಸಿಂಗರಿಸಿಕೊಂಡು ಮೃತಗಂಡನನ್ನು ಪಡೆಯಲು ಹೊರಟ ಕಾರಣದಿಂದ ಈ ರೀತಿಯ ಮಂಗಲ ಕಾರ್ಯಗಳು ನಡೆದಿವೆ. ಈಗಲೂ

ವಿವಾಹ ಕಾಲಕ್ಕೆ ನುಚ್ಚಕ್ಕಿಯ ಹಸೆ ಹಾಕುವ, ಮುತ್ತಿನ ಕಳಸ ಇಡುವ, ಧಾರೆ ಎರೆಯುವ ಕಾರ್ಯಗಳು ನಡೆಯುತ್ತಿರುವುದನ್ನು ಗಮನಿಸಬಹುದು.

ಪತ್ನಿಯಾದವಳು ಅನುಗಮನ ಇಲ್ಲವೇ ಸಹಗಮನದ ಮೂಲಕ ಸತಿಹೋಗುವ ವಿಷಯ ಊರಿನ ಸುತ್ತಮುತ್ತಲಿನ ಗ್ರಾಮಗಳಲ್ಲಿ ಕಾಡ್ಗಿಚ್ಚಿನಂತೆ ಹಬ್ಬುತ್ತಿತ್ತು. ಇದೇ ವೇಳೆ ಪತ್ನಿಯ ತವರು ಮನೆಯವರಿಗೆ ಕೊಂಡಕ್ಕೆ ಬೀಳುವ ವಿಷಯವನ್ನು ಹೇಳಿ ಕಳಿಹಿಸಲಾಗುತ್ತಿತ್ತು. ಸತಿ ಕೊಂಡ ಪ್ರವೇಶಿಸುವ ವಿಷಯ ಸಹಜವಾಗಿ ಪ್ರಚಾರಗೊಂಡು ಹತ್ತಾರು ಭಾಗಗಳಿಂದ ಜನತೆ ಹರಿದು ಬರುತ್ತಿದ್ದರು. ಅನುಗಮನದ ಸಮಯದಲ್ಲಿ ಸತಿಯಾದವಳು ಮೊದಲ ನಾಲ್ಕೈದು ದಿನಗಳಲ್ಲಿ ಊರಿನ ಬೀದಿಗಳಲ್ಲಿ ಮೆರವಣಿಗೆಯ ಸಮಯದಲ್ಲಿ ಮನೆಯ ಜನಕ್ಕೆ ವೀಳ್ಯ ಹಂಚಿ ಕಟ್ಟಿಗೆಯನ್ನು ಕೊಡುವಂತೆ ಹಾಗೂ ಕೊಂಡದ ಬಳಿ ಬರುವಂತೆ ಕೇಳಿಕೊಳ್ಳುತ್ತಿದ್ದಳು. 'ಮಹಾಸತಿ ವೀರತಿಮ್ಮವ್ವ' ಗೀತೆಯಲ್ಲಿ ತಿಮ್ಮವ್ವ ಸತಿಹೋಗುವಾಗ ಹೀಗೆ ಹೇಳುತ್ತಾಳೆ.

"ಅಳ್ಳಿಗೆಳತೇರು ಕೊಳ್ಳೀರಿ ನಿಮ್ಮಿಳ್ಯಾವ
ಒಳ್ಳೊಳ್ಳೆ ಸೌದೆ ಬರಬೇಕು
ಒಳ್ಳೊಳ್ಳೆ ಸೌದೆ ಬರಬೇಕು। ಬೈಗಿನ ಕಡೆಯ
ಉಳ್ಳಿ ಗುಗ್ರಿಯ ತಿನಬೇಕು॥
ಅಟ್ಟೀಯ ಗೆಳತೇರು ಕೊಟ್ಟೇನು ನಿಮಗೀಳ್ಯಾವ
ಗಟ್ಯನ್ನ ಸೌದೆ ಬರಬೇಕು। ಬೈಗಿನ ಕಡೆಯ
ರೊಟ್ಟಿ ಗುಗ್ರಿಯ ತಿನಬೇಕು॥"[೧೨೨]

ಇಲ್ಲಿ ತಿಮ್ಮವ್ವ ಗೆಳತಿಯರಿಗೆ ವೀಳ್ಯದೆಲೆ ಕೊಟ್ಟು ಕೊಂಡಕ್ಕೆ ಸೌದೆ ತರಲು ಹೇಳುತ್ತಾಳಲ್ಲದೆ, 'ಬೈಗಿನ ಕಡೆಯ ಉಳ್ಳಿ ಗುಗ್ರಿಯ ತಿನಬೇಕು' ಎಂದು ಹೇಳುತ್ತಾಳೆ. ಈ ಮಾತುಗಳಲ್ಲಿ ಸತಿ ಮರಣದ ನಂತರದಲ್ಲಿ ವಿಧಿ ಬದ್ಧವಾಗಿ ಉಳ್ಳಿ ಗುಗ್ರಿಯನ್ನು, ರೊಟ್ಟಿ ಗುಗ್ರಿಯನ್ನು ಬೈಗಿನಲ್ಲಿ ತಿನ್ನಬೇಕೆಂಬ ನಿಯಮವನ್ನು ತಿಮ್ಮವ್ವ ಇಲ್ಲಿ ಗೆಳತಿಯರಿಗೆ ನೆನಪಿಸಿದಂತಿದೆ. ಈಗಲೂ ಕೆಲವು ಗ್ರಾಮಗಳಲ್ಲಿ ಬಡವರು ಸತ್ತರೆ ಮನೆಗೊಂದು ಕಟ್ಟಿಗೆ ತುಂಡು ಕೊಡುವ ಪದ್ಧತಿ ಇದೆ. ಹಾಗೆಯೇ ಹಿಂದಿನ ಕಾಲಕ್ಕೆ ಸತಿಹೋಗುವವಳಿಗೆ ಜನ ಕಾಣಿಕೆಯಾಗಿ ಕಟ್ಟಿಗೆ ತುಂಡನ್ನು ಕೊಡುವುದು ಪುಣ್ಯವೆಂದೇ ಭಾವಿಸಿರಬೇಕು.

ಪತಿಯ ಮರಣದ ನಂತರ ಸತಿಯಾದವಳು ಸಹಗಮನ ಇಲ್ಲವೇ ಅನುಗಮನ ಹೋಗುವ ಸಂದರ್ಭದಲ್ಲಿ ಸತಿಯ ಅಣ್ಣನೋ ಮೈದುನನೋ ಹೊರಟು ಆ ಸೀಮೆಯ ಪಾಳೆಯಗಾರನ

ವಿವಾಹ ಕಾಲಕ್ಕೆ ನುಚ್ಚಕ್ಕಿಯ ಹಸೆ ಹಾಕುವ, ಮುತ್ತಿನ ಕಳಸ ಇಡುವ, ಧಾರೆ ಎರೆಯುವ ಕಾರ್ಯಗಳು ನಡೆಯುತ್ತಿರುವುದನ್ನು ಗಮನಿಸಬಹುದು.

ಪತ್ನಿಯಾದವಳು ಅನುಗಮನ ಇಲ್ಲವೇ ಸಹಗಮನದ ಮೂಲಕ ಸತಿಹೋಗುವ ವಿಷಯ ಊರಿನ ಸುತ್ತಮುತ್ತಲಿನ ಗ್ರಾಮಗಳಲ್ಲಿ ಕಾಡ್ಗಿಚ್ಚಿನಂತೆ ಹಬ್ಬುತ್ತಿತ್ತು. ಇದೇ ವೇಳೆ ಪತ್ನಿಯ ತವರು ಮನೆಯವರಿಗೆ ಕೊಂಡಕ್ಕೆ ಬೀಳುವ ವಿಷಯವನ್ನು ಹೇಳಿ ಕಳಿಹಿಸಲಾಗುತ್ತಿತ್ತು. ಸತಿ ಕೊಂಡ ಪ್ರವೇಶಿಸುವ ವಿಷಯ ಸಹಜವಾಗಿ ಪ್ರಚಾರಗೊಂಡು ಹತ್ತಾರು ಭಾಗಗಳಿಂದ ಜನತೆ ಹರಿದು ಬರುತ್ತಿದ್ದರು. ಅನುಗಮನದ ಸಮಯದಲ್ಲಿ ಸತಿಯಾದವಳು ಮೊದಲ ನಾಲ್ಕೈದು ದಿನಗಳಲ್ಲಿ ಊರಿನ ಬೀದಿಗಳಲ್ಲಿ ಮೆರವಣಿಗೆಯ ಸಮಯದಲ್ಲಿ ಮನೆಯ ಜನಕ್ಕೆ ವೀಳ್ಯ ಹಂಚಿ ಕಟ್ಟಿಗೆಯನ್ನು ಕೊಡುವಂತೆ ಹಾಗೂ ಕೊಂಡದ ಬಳಿ ಬರುವಂತೆ ಕೇಳಿಕೊಳ್ಳುತ್ತಿದ್ದಳು. 'ಮಹಾಸತಿ ವೀರತಿಮ್ಮವ್ವ' ಗೀತೆಯಲ್ಲಿ ತಿಮ್ಮವ್ವ ಸತಿಹೋಗುವಾಗ ಹೀಗೆ ಹೇಳುತ್ತಾಳೆ.

"ಅಳ್ಳಿಗೆಳತೇರು ಕೊಳ್ಳೀರಿ ನಿಮ್ಮಿಳ್ಯಾವ
ಒಳ್ಳೊಳ್ಳೆ ಸೌದೆ ಬರಬೇಕು
ಒಳ್ಳೊಳ್ಳೆ ಸೌದೆ ಬರಬೇಕು। ಬೈಗಿನ ಕಡೆಯ
ಉಳ್ಳಿ ಗುಗ್ರಿಯ ತಿನಬೇಕು॥
ಅಟ್ಟೀಯ ಗೆಳತೇರು ಕೊಟ್ಟೇನು ನಿಮಗೀಳ್ಯಾವ
ಗಟ್ಯನ್ನ ಸೌದೆ ಬರಬೇಕು। ಬೈಗಿನ ಕಡೆಯ
ರೊಟ್ಟಿ ಗುಗ್ರಿಯ ತಿನಬೇಕು॥"[೧೨೨]

ಇಲ್ಲಿ ತಿಮ್ಮವ್ವ ಗೆಳತಿಯರಿಗೆ ವೀಳ್ಯದೆಲೆ ಕೊಟ್ಟು ಕೊಂಡಕ್ಕೆ ಸೌದೆ ತರಲು ಹೇಳುತ್ತಾಳಲ್ಲದೆ, 'ಬೈಗಿನ ಕಡೆಯ ಉಳ್ಳಿ ಗುಗ್ರಿಯ ತಿನಬೇಕು' ಎಂದು ಹೇಳುತ್ತಾಳೆ. ಈ ಮಾತುಗಳಲ್ಲಿ ಸತಿ ಮರಣದ ನಂತರದಲ್ಲಿ ವಿಧಿ ಬದ್ಧವಾಗಿ ಉಳ್ಳಿ ಗುಗ್ರಿಯನ್ನು, ರೊಟ್ಟಿ ಗುಗ್ರಿಯನ್ನು ಬೈಗಿನಲ್ಲಿ ತಿನ್ನಬೇಕೆಂಬ ನಿಯಮವನ್ನು ತಿಮ್ಮವ್ವ ಇಲ್ಲಿ ಗೆಳತಿಯರಿಗೆ ನೆನಪಿಸಿದಂತಿದೆ. ಈಗಲೂ ಕೆಲವು ಗ್ರಾಮಗಳಲ್ಲಿ ಬಡವರು ಸತ್ತರೆ ಮನೆಗೊಂದು ಕಟ್ಟಿಗೆ ತುಂಡು ಕೊಡುವ ಪದ್ಧತಿ ಇದೆ. ಹಾಗೆಯೇ ಹಿಂದಿನ ಕಾಲಕ್ಕೆ ಸತಿಹೋಗುವವಳಿಗೆ ಜನ ಕಾಣಿಕೆಯಾಗಿ ಕಟ್ಟಿಗೆ ತುಂಡನ್ನು ಕೊಡುವುದು ಪುಣ್ಯವೆಂದೇ ಭಾವಿಸಿರಬೇಕು.

ಪತಿಯ ಮರಣದ ನಂತರ ಸತಿಯಾದವಳು ಸಹಗಮನ ಇಲ್ಲವೇ ಅನುಗಮನ ಹೋಗುವ ಸಂದರ್ಭದಲ್ಲಿ ಸತಿಯ ಅಣ್ಣನೋ ಮೈದುನನೋ ಹೊರಟು ಆ ಸೀಮೆಯ ಪಾಳೆಯಗಾರನ

ಅಪ್ಪಣೆಯನ್ನು ತರಬೇಕಿತ್ತು. ಈ ಪದ್ಧತಿಯನ್ನು ಒಪ್ಪಿದ ರಾಜನಾದರೆ ಅವಳ ಸಹಗಮನದ ಕಾರ್ಯಕ್ಕೆ ಒಪ್ಪಿಗೆ ಸೂಚಿಸಿ ಗಂಧದ ಚಕ್ಕಿ, ಕುಂಕುಮ, ಅರಿಷಿಣದ ಪತ್ತಲ ನೀಡುವುದರ ಮೂಲಕ ಅಪ್ಪಣೆ ಕೊಡುತ್ತಿದ್ದ. ಇಲ್ಲವಾದಲ್ಲಿ ಈ ಸಾಂಪ್ರದಾಯಿಕ ಆಚರಣೆಗೆ ತುಂಬಾ ತೊಂದರೆ ಅನುಭವಿಸಬೇಕಾಗುತಿತ್ತು. ಆಗ ಸತಿಯಾದವಳು ರಾಜನ ಅಪ್ಪಣೆಗೆ ಆಗ್ರಹಪಡಿಸುತ್ತಿರುವುದು ಜನಪದ ಗೀತೆಯಲ್ಲಿ ಹೀಗೆ ಅಭಿವ್ಯಕ್ತವಾಗಿದೆ.

"ಕಿಚ್ಚು ಕೊಡುವಾಕ ವೋಟ್ಯಾಪ್ಪ ನಾಯಕನಾಣೆ
ಪಚ್ಚೆಕಲ್ಲಾಣೆ ಪ್ರಜೆಯಾಣೆ। ಮುಮ್ಮಡಿಬೂಪ್ನ
ರೆಟ್ಟಿ ಮ್ಯಾಲಾಡೋ ಮಗನಾಣೆ॥"[೧೨೩]

'ಕೊಂಡದ ಕಾಟವ್ವ' ಗೀತೆಯಲ್ಲಿ ಬರುವ ಸತಿ ಕಾಟವ್ವನು ನಿಡುಗಲ್ಲು ಪಾಳೆಯಗಾರನಾದ ಹೊಟ್ಟಾಳ ನಾಯಕನನ್ನು ಕೊಂಡ ಹೋಗುವುದಕ್ಕೆ ಅಪ್ಪಣೆ ಕೊಡಲು ಆಣೆಯಿಟ್ಟು ಆಗ್ರಹಪಡಿಸುವಂತೆ ಕಾಣಿಸುತ್ತದೆ. ಈ ಸಂದರ್ಭದಲ್ಲಿ ಸತಿಯರು ಹಿರಿಯರ ಅಪ್ಪಣೆಗಾಗಿ ಎಷ್ಟು ಆಗ್ರಹಪಡಿಸುತ್ತಿದ್ದರು ಎಂಬುದಕ್ಕೆ ಬಪ್‌ತೀಸ್ಟ್ ಟೆವರ್ನ್ ವಿವರಿಸುವ ಪ್ರಸಂಗವೊಂದನ್ನು ಇಲ್ಲಿ ನೆನೆಪಿಸಿಕೊಳ್ಳಬಹುದು. ಡಚ್ಚನೊಬ್ಬನು ಸ್ಥಳದ ಅಧಿಪತಿಯೊಂದಿಗೆ ಡೇರೆಯೊಳಗೆ ಕುಳಿತಿರಲು ಇಪ್ಪತ್ತೆರಡು ವರ್ಷದ ಯುವತಿಯೊಬ್ಬಳು ಬಂದಳು. ಅವಳು ಗಂಡನೊಡನೆ ಚಿತೆಯೇರುವುದಕ್ಕೆ ಅಪ್ಪಣೆ ಕೇಳಿದಳು. ಚಿಕ್ಕಪ್ರಾಯದ ಹೆಂಗಸನ್ನು ಕಂಡು ಕನಿಕರಪಟ್ಟು ಆತ ಆಕೆಯ ಮನಸ್ಸನ್ನು ತಿರುಗಿಸಲು ಪ್ರಯತ್ನಪಟ್ಟ. ಪ್ರಯತ್ನಿಸುತ್ತಿದ್ದಂತೆಲ್ಲ ಆಕೆಯ ನಿರ್ಧಾರ ಬದಲಾಗಲಿಲ್ಲ. ನಾನು ಬೆಂಕಿಗೆ ಹೆದರುವುದಿಲ್ಲ ಎಂದು ಹೊತ್ತಿಸುತ್ತಿದ್ದ ಪಂಜಿಗೆ ಕೈಯಿಟ್ಟು ಸುಟ್ಟುಕೊಂಡಳು ಹಾಗೆ ಕೈ ಸುಟ್ಟು ಹೋಗುವಾಗಲೂ ಆಕೆಯ ಮುಖದಲ್ಲಿ ನೋವಿನ ಚಿನ್ಹೆ ಮಾತ್ರ ಕಾಣಿಸಲಿಲ್ಲವೆಂದು ಹೇಳುತ್ತಾನೆ. ಜೊತೆಗೆ ನೋಡುತ್ತಿದ್ದವರಿಗೆ ದಿಗಿಲಾಗಿ ಕೊನೆಗೆ ಅಪ್ಪಣೆ ಕೊಡಬೇಕಾಯಿತೆಂದು ತಿಳಿಸುತ್ತಾರೆ. ಇಲ್ಲಿ 'ಕಿಚ್ಚು ಕೊಡದಿದ್ದರೆ ಕಿತ್ತುಕೊಂಬೆ ನಾಲೀಗೆ' ಎನ್ನುವ ಉಕ್ತಿ ಬಹುಶಃ ಕೊಂಡಕ್ಕೆ ಬೀಳುವ ಸತಿಯ ಆತುರದ ತುಡಿತವನ್ನು ಹೇಳುತ್ತದೆ. ಅಲ್ಲದೇ ತಂದೆ-ತಾಯಿ, ಅಣ್ಣ, ಬಂಧು ಬಳಗದವರು ನೆರೆದು ಆಕೆಗೆ ಬಗೆ ಬಗೆಯ ರೀತಿಯಲ್ಲಿ ಸಮಾಧಾನ ಹೇಳಿ ವಿವಿಧ ಆಸೆ ತೋರಿಸಿ ಕೊಂಡಕ್ಕೆ ಬೀಳದಂತೆ ತಡೆದು ಬದುಕಲು ಹೇಳುತ್ತಿದ್ದರು.

"ಅರುಗೀದ ವಲದಾಗ ಸುರವೊನ್ನೆ
ಅರುದೇ ಬರುತಾನೆ ಅವರಣ್ಣ। ಕಾಟಣ್ಣ
ಅರುವತ್ತು ಕೊಟ್ಟೇನು ನಿಲುತಂಗಿ।

ಅರುವತ್ತು ಕೊಟ್ಟಾರೆ ತುರುಬೀನ ಬೆಲಿಯಲ್ಲ
ದುರುಗಾವಾಳೋರ ಮಗದೂರ
ದುರುಗಾಳೋರ ಮಗದೂರ। ವೋಗಲುವಾಳ
ತಡಿಯಾದೆ ಕಿಚ್ಚ ಕೊಡಿರಣ್ಣ॥
ಆಲಾದ ಮರದ ಸೋವಿಟ್ಟು ಮೆರೆವೋಳೆ
ತಾಯಿಯು ಬಂದವಳೆ ಮೊಕತೋರೆ॥
ತಾಯಿ ಬಂದರೆ ಬರಲಿ ವಾಲೆ ತಂದರೆ ತರಲಿ
ರಾಯವುಲಿ ಕುಂಟೆ ಮೂಡಾಲ। ದಿನ್ಯಾಗ
ಗಾಜೀನ ಕೊಂಡಾವು ನಮಗದೆ॥"[೧೨]

ಮಕ್ಕಳಿಗಾಗಿ, ತಂದೆ ತಾಯಿಯರಿಗಾಗಿಯಾದರೂ ಬದುಕು ಎಂದು ಬಂಧು ಬಳಗದವರು ತಿಳಿ ಹೇಳುತ್ತಿದ್ದರು. ಪ್ರವಾಸಿಗಳೂ ಕೂಡ ಈ ವಿವರವನ್ನು ಕೊಡುತ್ತಾರಲ್ಲದೆ, ಶಾಸನಗಳಲ್ಲಿಯೂ ಕೂಡ ಈ ವಿಚಾರ ಪ್ರತಿಪಾದಿತವಾಗಿದೆ. ದೇಕಬ್ಬೆಯ ಬೇಳತೂರು ಶಾಸನದ ವಿವರವನ್ನು ಈ ಸಮಯದಲ್ಲಿ ನೆನಪಿಸಿಕೊಳ್ಳಬಹುದು.

ಕೊಂಡದ 'ಕಾಟವ್ವ ಕಥೆ'ಯಲ್ಲಿ ಕಾಟವ್ವನ ಮದುವೆಯ ಸಿದ್ಧತೆಯ ಸಂದರ್ಭದಲ್ಲೇ ಅಪಶಕುನಗಳು ಆಗಿರುತ್ತವೆ. ಕಾಟವ್ವನಿಗೆ ಒಂದು ಮಗು ಆಗುವಷ್ಟರಲ್ಲೇ ಗಂಡ ತೀರಿಕೊಂಡ ಆಗ ಅವಳು ಮೆರವಣಿಗೆಯಲ್ಲಿ ಹೊರಟ ಸತಿ ಸರ್ವಾಲಂಕಾರ ಭೂಷಿತೆಯಾಗಿರುತ್ತಿದ್ದಳು. ತುರುಬುಕಟ್ಟಿ ಹೂ ಮುಡಿದು ಅರಿಷಿಣ ಸೀರೆ ಉಟ್ಟಿರುತ್ತಿದ್ದಳು. ಮೈ ತುಂಬ ಒಡವೆಗಳು ಹೇರಲ್ಪಟ್ಟಿರುತ್ತಿದ್ದವು. ಅಂಗೈಯಲ್ಲಿ ನಿಂಬೆ ಇಲ್ಲವೇ ಕಾಕಿಯ ಹಣ್ಣು ಇರುತ್ತಿತ್ತು. ಇವುಗಳನ್ನು ಎಸೆದಾಡಿಕೊಂಡು ನಗುತ್ತಾ, ನಲಿಯುತ್ತಾ ಬಂಧು ಬಳಗದವರೊಡನೆ ಕೂಡಿ ನಡೆಯುತ್ತಿದ್ದಳು. ಬೆಂಕಿಗೆ ಬೀಳುವ ಸಮಯದಲ್ಲಿ ಮಗನನ್ನು ಮುದ್ದಾಡಿ ಬರುತ್ತಾಳೆ. ಹಸಿಯಾದ ತುಗ್ಗಲಿಮರ ಎಸಳೊಡೆದು ಬೇಯುತ್ತದೆ ಎನ್ನುವ ಹಾಗೇ ಕಾಟಮ್ಮ ಉರಿಯುತ್ತಾಳೆ. ಅವರಣ್ಣ ಬೇಡವೆಂದೂ ಕೇಳಿದರೂ ಒಪ್ಪುವುದಿಲ್ಲ. ವುಲಿಕಂಟೆಯ ಮೂಡಲದಿನ್ನೆಯಲ್ಲಿ ಕೊಂಡ ಉರಿಯುತ್ತದೆ. ಕೊಂಡಕ್ಕೆ ಹೋಗುವಾಗ ಕಾಟವ್ವನ ಕಾರ್ಯ ಹೀಗಿತ್ತು ಎಂದು ಜನಪದರು ಹೇಳುತ್ತಿದ್ದರು.

"ನಿಂಬೀಯ ಅಣ್ಣ ಅಂಬಾರಕೀಡಾಡುತ
ಬಂದೀಯ ತೋಳ ತಿರುವೂತ
ಬಂದೀಯ ತೋಳ ತಿರುವೂತ। ಮುತ್ತಣ್ಣನ

ರೆಂಬೇ ಕೊಂಡಾಕ ನಡೆದಾಳೆ॥
ಪುರುಸಾನಿಲ್ಲದೋಳ ಸರಸಾವ ನೋಡೀರೆ
ಅರಿಸಿಣದೆ ಬಾವಿಯವಳ ಮನೆಮುಂದೆ। ಕಾಟವ್ವ
ಪುರುಸಾನಿದ್ದಾರೆಸ್ಟು ಮೆರೆದೀಯೆ॥"[೧೨೫]

ಗಂಡ ತೀರಿಕೊಂಡಿರುವುದು ನಿಜವಾದರೂ ಅವಳಿಗೆ ಸ್ವರ್ಗದಲ್ಲಿರುವ ಅವನ ಬಳಿಗೆ ಹೋಗುತ್ತಿದ್ದೆನೆಂಬ ಸಂತೋಷ, ಬೇಗ ಸೇರಬೇಕೆಂಬ ಕಾತುರ ಇದೆ. ನೆರೆದ ಜನ ಸತಿ ಹೋಗುವವಳು ಕೊಂಡದ ಬೆಂಕಿಯನ್ನು ಕಂಡು ಹೆದರಿ ಓಡಿಹೋಗಬಹುದೆಂಬ ಶಂಕೆಯಿಂದ ಸುತ್ತ ತೆರೆ ಕಟ್ಟಿಸುತ್ತಿದ್ದರೆಂದು ತಿಳಿದು ಬರುತ್ತದೆ. ಅಲ್ಲದೇ ಸತಿಯಾಗುವವಳು ಬೆಂಕಿಗೆ ಬಿದ್ದು ತಮ್ಮ ಧೈರ್ಯ ಪ್ರದರ್ಶನ ಮಾಡಲು ತವಕಿಸುತ್ತಿದ್ದರಂತೆ ಇದೇ ಸಂದರ್ಭದಲ್ಲಿ 'ಕಿಚ್ಚಿಗೆದರೋರ ಮಗಳಲ್ಲ, ಅಚ್ಚಡದ ತೆರೆಯಾ ತೆಗೆಸಯ್ಯ' ಎಂದು ಹೇಳುತ್ತಿದ್ದುದುಂಟು. ಸತಿಯಾಗುವವಳು ತನ್ನ ದೇಹವನ್ನು ಬೆಂಕಿಗೆ ಅರ್ಪಿಸಿಕೊಳ್ಳುವ ಮುನ್ನ ಒಡವೆಗಳನ್ನು ಕಳಚಿ ಸುತ್ತಮುತ್ತಲಿನವರಿಗೆ ದಾನಮಾಡುತ್ತಿದ್ದಳು. ಇದನ್ನು ಕಂಡ ವಿದೇಶಿ ಪ್ರವಾಸಿಗರು ತಮ್ಮ ಬರಹದಲ್ಲಿ ಉಲ್ಲೇಖಿಸಿರುತ್ತಾರೆ. ಕೆಲವು ಪ್ರವಾಸಿಗರು ತಾವು ಒಂದೆರಡು ಆಭರಣಗಳನ್ನು ಪಡೆದು ಸತಿಯ ನೆನೆಪಿನಲ್ಲಿ ಇರಿಸಿಕೊಂಡಿರುವುದಾಗಿ ಹೇಳಿಕೊಂಡಿದ್ದಾರೆ. ಹೀಗೆ ಜನಪದರು ದಾನ ಮಾಡುವ ವಿಷಯವನ್ನು ಪದ್ಯದೊಂದಿಗೆ ವಿವರಿಸುತ್ತಾರೆ.

"ತಾಳೀಯ ಸರವರಿದು ತಾಯಿಯ ಕೈಗೆ ಕೊಟ್ಟು
ತಾಯಮ್ಮ ನೀನು ಅಳಿದೀರೆ। ವಡ್ಡಗೆರೆ
ಗಾಜಿನ ಕೊಂಡ ನಮಗಾದಾವು॥
ಮುತ್ತೀನ ಸರವರಿದು ಅತ್ತೆಕೈಗೆ ಕೊಟ್ಟು
ಅತ್ತೆಮ್ಮ ನೀನು ಅಳದೀರೆ। ವಡ್ಡಗೆರೆ
ಕಿಚ್ಚೀನ ಕೊಂಡ ನಮಗಾದಾವು॥"[೧೨೬]

ಎಂದು ಸತಿ ಹೋಗುವವಳು ಸ್ವಸಂತೋಷದಿಂದ ಕೊಂಡಕ್ಕೆ ಬಿದ್ದು ಪ್ರಾಣ ಕಳೆದುಕೊಳ್ಳುತ್ತಿದ್ದಳು. ಒಮ್ಮೊಮ್ಮೆ ಕೆಲವರು ಬೆಂಕಿಗೆ ಬೀಳದೆ ಬದುಕುವ ಆಸೆಯಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿ ಓಡುತ್ತಿದ್ದುದರ ವಿಚಾರವನ್ನು ಈ ಹಿಂದೆಯೇ ಗಮನಿಸಲಾಗಿದೆ. ಹೀಗೆ ಬೆಂಕಿಗೆ ಬೀಳಲು ಭಯಪಡುತ್ತಿದ್ದವರ ವಿಚಾರದಲ್ಲಿ ಊರ ಹಿರಿಯರು ತುಂಬಾ ಎಚ್ಚರವಹಿಸುತ್ತಿದ್ದರು.[೧೨೭] ಕೆಲವೊಮ್ಮೆ ಸತಿ ಹೋಗಲು ಒಪ್ಪಿಗೆ ಸೂಚಿಸಿದರೂ ಹಿರಿಯರು ಬೆಂಕಿಗೆ ಹೋಗಬೇಕೆನ್ನುತ್ತಿದ್ದವರ

ವಿಚಾರಕ್ಕೂ ಇದೇ ಕ್ರಮ ಜರುಗಿಸುತ್ತಿದ್ದರು. ಆಗ ಸತಿಹೋಗುವವಳು ಕೆಂಡ ಕೊಂಡವಾಗಲು ಇಚ್ಛೆಪಡದೇ ಇರುವವರನ್ನು ಹಳಿದು, ತಾವು ಅನುಗಮನದ ಮೂಲಕವಾದರೂ ಕೆಂಡದ ಕೊಂಡಕ್ಕೆ ಹೋಗುತ್ತೇವೆ ಎಂದು ಘೋಷಿಸಿಕೊಳ್ಳುತ್ತಿದ್ದರು. ಇದರ ಪ್ರಸ್ತಾಪ ಈ ಕೆಳಗಿನ ಪದ್ಯದಲ್ಲಿ ಹೀಗೆ ಕಂಡು ಬರುತ್ತದೆ.

"ವೋಡಿವೋದಾಳೆಂದು ರಾಡುಗಳ ಆಕಿಸ್ದ
ವೋಡಿ ಪೋಗೋರ ಮಗಳಲ್ಲ। ಸಿರಿಗೊಂಡಗೌಡ
ರಾಡಾಬಾಗುಲ ತಗುಸಯ್ಯ॥
ಕದ್ದು ವೋದಾಳೆಂದು ದಿಡ್ಡಿಗಳ ಕಟ್ಟಿಸ್ತ
ಕದ್ದು ವೋಗೋರ ಮಗಳಲ್ಲ। ಸಿರಿಗೊಂಡಗೌಡ
ದಿಡ್ಡಿಬಾಗುಲ ತಗುಸಯ್ಯ॥
ಕಿಚ್ಚಿಗಂಜ್ಯಾಳೆಂದು ಅಚ್ಚಡದ ತೆರೆ ಕಟ್ಟಿಸ್ತ
ಕಿಚ್ಚಿಗಂಜೋರ ಮಗಳಲ್ಲ। ಸಿರಿಗೊಂಡಗೌಡ
ಅಚ್ಚಡದ ತೆರೆಯಾ ತಗುಸಯ್ಯ॥"

ಕಾಟವ್ವ ಆಡುವ ಈ ಮಾತುಗಳಲ್ಲಿ ತಾನು ಕೊಂಡಕ್ಕೆ ಬೀಳುವುದರ ಬಗೆಗೆ ಆತುರವೂ ಹಾಗೆ ಬೀಳಲು ಹಿಂಜರಿಯವವರ ಬಗೆಗಿನ ಹಳಿವೂ ಇದೆ.[೧೨೮] ಕೊಂಡಕ್ಕೆ ಬೀಳುವ ಕ್ರಮವೊಂದು ಸಣ್ಣ ಹಬ್ಬವಾಗಿಯೇ ಆಚರಿಸಲ್ಪಡುತ್ತಿತ್ತು. ನೆರೆದ ಬಂಧು ಬಳಗಕ್ಕೆ ಅನ್ನ ಸಂತರ್ಪಣೆ ನಡೆಯುತ್ತಿತ್ತು. ಎಲ್ಲರೂ ಸತಿಗೆ ಎಲ್ಲಿಲ್ಲದ ಗೌರವವನ್ನು ತೋರಿಸುತ್ತಿದ್ದರು. ಕುಲದೈವಕ್ಕೆ, ಸೂರ್ಯದೇವನಿಗೆ, ಪರಮಾತ್ಮನಿಗೆ ಬಂಧು ಬಳಗಕ್ಕೆ ನಮಸ್ಕರಿಸಿ ಸತಿ ಕೊಡ ಹೊತ್ತು ಹತ್ತಾರು ಹೆಜ್ಜೆ ದೂರಕ್ಕೆ ನಡೆದು ಇಲ್ಲವೇ, ಚಿತೆಯನ್ನು ಪ್ರದಕ್ಷಿಣೆ ಹಾಕಿ ಬೆಂಕಿಗೆ ಧುಮುಕುತ್ತಿದ್ದಳು. ಆಗ ಸುತ್ತಲೂ ನೆರೆದಿರುವವರು ತಮ್ಮ ಕಾಣಿಕೆಯಾಗಿ ಎಣ್ಣೆ, ತುಪ್ಪ, ಕಟ್ಟಿಗೆಯನ್ನು ಚಿತೆಯ ಮೇಲೆ ಸುರಿಯುತ್ತಿದ್ದರು. ನಿಮಿಷ ಮಾತ್ರದಲ್ಲಿ ಸತಿ ಹೋದವಳು ಭಸ್ಮವಾಗುತ್ತಿದ್ದಳು. ಎಲ್ಲರ ಕಣ್ಣಿನಲ್ಲೂ ಆಕೆ ದೇವತೆಯಾಗಿ ನಿಲ್ಲುತ್ತಿದ್ದಳು ಎಂದು ತಿಳಿದು ಬರುತ್ತದೆ.

"ಎಣ್ಣೇಯ ಕೊಡ ಉಳ್ಳುಳ್ಳಿ ಬೇಯೋವಾಗ
ರೆಂಬೆ ತಿಮ್ಮವ್ವ ಮೆರೆವಾಗ। ಸಂದನೋರ
ಕಂದನತ್ತೋರು ಮನಿಗೋಗಿ॥
ತುಪ್ಪಾದ ಕೊಡ ಉಕ್ಕುಕ್ಕಿ ಬೇಯೋವಾಗ

ನಿಸ್ತ್ರೇತಿಮ್ಮವ್ವ ಮೆರಿವಾಗ। ಸಂದನೋರ
ಪುತ್ರಾನೆತ್ತೋರು ಮನಿಗೋಗಿ॥
ಅಂಗಾಲು ಉರಿದಾವೆ ಅಂಗೈಯುರಿದಾವೆ
ಉಂಗುರದ ಬೆಟ್ಟ ಉರಿದಾವೆ। ನಾಗಮ್ಮಾನ
ಸಂಗಾತಿರಿಂದಾಕೆ ತಿರುವ್ಯಾರೆ॥"

ಇಲ್ಲಿಂದ ಮುಂದಕ್ಕೆ ಜನಪದರು ಕೊಡುವ ವಿವರಗಳೆಲ್ಲ ಕ್ವಚಿತ್ತಾದುವು. ಕೊಂಡ ಮುಚ್ಚಿ, ಜಗುಲಿಕಟ್ಟಿ ಮೇಲೆ ಬನ್ನಿ, ಬೇವು ಇಲ್ಲವೇ ತುಗ್ಗಲ ಮರ ನೆಡುತ್ತಿದ್ದರು. ಕಲ್ಲನ್ನೂ ಇರಿಸಿ ಪೂಜೆ ಪುನಸ್ಕಾರಗಳಿಗೆ ಅಣಿಮಾಡುತ್ತಿದ್ದರು. ಸತಿ ಕ್ರಮೇಣ ಗ್ರಾಮದೇವತೆಯಾಗುತ್ತಿದ್ದಳು. ಮಕ್ಕಳಿಲ್ಲದವರಿಗೆ ಸಂತಾನ ಕರುಣಿಸುವ, ಗ್ರಾಮಕ್ಕೆ ಒದಗಿ ಬರುವ ವಿಘ್ನಗಳನ್ನು ನಿವಾರಿಸುವ ತಾಯಿಯಾಗುತ್ತಿದ್ದಳು. ಹಾಗಾಗಿಯೇ ಇಂದಿಗೂ ಚಿತ್ರದುರ್ಗ ಜಿಲ್ಲೆಯ ಬಹಳಷ್ಟು ಗ್ರಾಮಗಳಲ್ಲಿ ಸತಿಯರು ಪೂಜೆಗೊಳ್ಳುತ್ತಿದ್ದಾರೆ ಎಂಬ ಮಾಹಿತಿ ಸಾಹಿತ್ಯದ ವಿವಿಧ ಮಗ್ಗಲುಗಳಿಂದ ತಿಳಿದು ಬರುತ್ತದೆ.

೨.೩.೨. ಸತಿಸಹಗಮನಗೊಂಡ ನಂತರ ಆಚರಿಸುವ ಆಚರಣೆಗಳು

ಸಹಗಮನಗೊಂಡ ಪತ್ನಿಯ ನೆನಪಿಗಾಗಿ ಅವಳ ಬಂಧುವರ್ಗದವರು ಕೆಲವು ಆಚರಣೆಗಳನ್ನು ನೆರವೇರಿಸುತ್ತಿದ್ದರು. ಸತಿ ಕಲ್ಲುಗಳನ್ನು ನೆಡುವುದು, ಗುಡಿ ಕಟ್ಟುವುದು, ಇಲ್ಲವೆ ಗದ್ದಿಗೆಗಳನ್ನು ನಿರ್ಮಿಸುವುದರೊಂದಿಗೆ ಭೂಮಿ ಸೀಮೆಗಳನ್ನು ಬಿಟ್ಟುಕೊಡುತ್ತಿದ್ದರು. ಜೊತೆಗೆ ಅವಳ ಸ್ಮಾರಕಗಳನ್ನು ಪೂಜಿಸಿ ಸತಿ ಆರಾಧನಾ ಪರಂಪರೆಗೆ ದಾರಿ ಮಾಡಿಕೊಡುತ್ತಿದ್ದರು. ರಾಜಸ್ಥಾನದಲ್ಲಿ ಸತಿ ಹೋದ ಹನ್ನೆರಡನೇ ದಿನಗಳಿಗೆ 'ಚುನರಿ' ಎಂಬ ಧಾರ್ಮಿಕ ಕಾರ್ಯವನ್ನು ಅತ್ಯಂತ ಉತ್ಸಾಹ ಸಡಗರದಿಂದ ಆಚರಿಸುತ್ತಿದ್ದರು. ಇಂದಿಗೂ ಅದರ ಕೆಲವು ಆಚರಣೆಗಳನ್ನು ಜನ ಆಚರಿಸುತ್ತಿರುವ ಮಾಹಿತಿ ಪಡೆಯಬಹುದು.[೧೨೯] ಈ ರೀತಿಯ ಧಾರ್ಮಿಕ ವಿಧಿ ವಿಧಾನಗಳು ಕರ್ನಾಟಕದಲ್ಲಿಯ ಸತಿ ದೇವಾಲಯಗಳಲ್ಲಿ ವರ್ಧಂತಿ ಮಹೋತ್ಸವಗಳೆಂದು ಪ್ರಸಿದ್ಧಿ ಪಡೆದು ಇಂದಿಗೂ ಜರಗುತ್ತಿವೆ.

ಮೃತನ ಪತ್ನಿ ಸತಿ ಸಹಗಮನಗೊಳ್ಳಲು ಹೋಗುವಾಗ ಅವಳು ಮತ್ತು ಅವಳ ಬಂಧುಗಳು ಪೂರೈಸುತ್ತಿದ್ದ ಕಾರ್ಯಗಳನ್ನು ಜನಪದರು ಹಾಡುಗಳಲ್ಲಿ ಕಥೆಗಳಲ್ಲಿ, ಪ್ರಾಚೀನ ಕಾವ್ಯಗಳಲ್ಲಿ, ವಿದೇಶಿ ಪ್ರವಾಸಿಗರ ಬರಹಗಳಲ್ಲಿ, ಶಾಸನಗಳಲ್ಲಿ ಚಿತ್ರಿಸಿದ್ದಾರೆ. ಈ ರೀತಿಯ ಆಚರಣೆಗಳು ಸಾಮಾನ್ಯವಾಗಿ ಶಾಸ್ತ್ರರೀತ್ಯ ಜರಗುತ್ತಿದ್ದ ವಿಧಿ ವಿಧಾನಗಳಾಗಿದ್ದರಿಂದ ಇವು

ಅವರ ಗಮನವನ್ನು ಸೆಳೆದಂತಿಲ್ಲ. 'ದೇಕಬ್ಬೆ' ಸತಿಹೋಗುವಾಗ ಬಿಟ್ಟು ಕೊಟ್ಟ ಸೀಮೆಗಳನ್ನು ಮುಂದಿನ ವಂಶಸ್ಥರು ರಕ್ಷಿಸಿಕೊಂಡು ಬರುವಂತೆಯು ಇಲ್ಲದಿದ್ದರೆ ಅವರು ನರಕಕ್ಕೆ ಹೋಗುವವರೆಂದು ಬೆಳತೂರು ಶಾಸನ ವರ್ಣಿಸುತ್ತದೆ.[೧೩೦] ಸತಿ ಕೊಟ್ಟ ದಾನ ಧರ್ಮಗಳು ಅವಳ ಮರಣಾನಂತರವು ಪ್ರಾಮುಖ್ಯತೆಯನ್ನು ಪಡೆದು ಬರುತ್ತಿರುವುದು ಸ್ಪಷ್ಟವಾಗುತ್ತದೆ. ಮಹಾಸತಿ 'ವೀರತಿಮ್ಮವ್ವಗೀತೆ'ಯಲ್ಲಿ ತಿಮ್ಮವ್ವ ಹಳ್ಳಿಯಲ್ಲಿರುವ ಹಟ್ಟಿಯ ಗೆಳತಿಯರಿಗೆ ವಿಳ್ಯದೇಲೆಯಕೊಟ್ಟು ಕೊಂಡಕ್ಕೆ ಸೌಧೆ ತರಲು ಹೇಳುತ್ತಾಳಲ್ಲದೆ ಬೈಗಿನಕಡೆಯ ಉಳ್ಳಿಗುಗ್ರಿಯ, ರೊಟ್ಟಿ ಗುಗ್ರಿಯ ತಿನಬೇಕು ಎಂದು ಹೇಳುವ ಮಾತುಗಳಲ್ಲಿ ಸತಿ ಮರಣದ ನಂತರದಲ್ಲಿ ವಿಧಿ ಬದ್ಧವಾದ ಆಚರಣೆಗಳಿದ್ದವೆಂದು ತಿಳಿದು ಬರುತ್ತದೆ.[೧೩೧]

ಸ್ತ್ರೀ ದೇವತೆಗಳಲ್ಲಿ ಧಾರ್ಮಿಕ, ಪೌರಾಣಿಕ, ಐತಿಹಾಸಿಕ ವ್ಯಕ್ತಿಗಳು ಇರುವುದು ಕಂಡು ಬರುತ್ತದೆ. ಸತಿದೇವತೆ ಐತಿಹಾಸಿಕ ವ್ಯಕ್ತಿಗಳ ಗುಂಪಿಗೆ ಸೇರಿದವಳಾಗಿದ್ದಾಳೆ. ಉದಾಹರಣೆಗೆ ರಾಜಸ್ಥಾನದ'ಝುಂಝುಂ'ದಲ್ಲಿಯ ಸತಿದೇವಿ ಭಾರತದಲ್ಲಿ ತುಂಬಾ ಪ್ರಸಿದ್ಧಿ ಪಡೆದ ಐತಿಹಾಸಿಕ ಸ್ತ್ರೀ ದೇವತೆಯಾಗಿದ್ದಾಳೆ.[೧೩೨] ಸತಿಯು ಇಂದು ಗ್ರಾಮದೇವತೆಯಾಗಿ, ಕುಲದೇವತೆಯಾಗಿ, ಮನೆ ದೇವತೆಯಾಗಿ ಪೂಜೆಗೊಳ್ಳುತ್ತಿದ್ದಾಳೆ. ಸತಿ ಆರಾಧನಾ ವಿಧಾನಗಳು ಅವಳ ಕುರಿತಾಗಿರುವ ನಂಬಿಕೆ, ಪವಾಡ, ನಿರ್ಬಂಧನೆಗಳು, ಅವಳ ಹೆಸರಿನಲ್ಲಿ ನಡೆಯುವ ಜಾತ್ರೆ, ಹಬ್ಬ, ಉತ್ಸವಗಳ ಅಧ್ಯಯನ ತುಂಬಾ ರೋಮಾಂಚನಕಾರಿಯಾಗಿವೆ. ಇವೆಲ್ಲವುಗಳನ್ನು ಗಮನಿಸಿದರೆ ಜನರಲ್ಲಿರುವ ಶ್ರದ್ಧೆ-ವಿಶ್ವಾಸಗಳು, ಭಯ-ಭಕ್ತಿಗಳು, ಮೌಢ್ಯ-ಅಂಧತೆಗಳು ಗೋಚರಿಸುತ್ತವೆ. ಅಲ್ಲದೇ ಇವುಗಳೇ ಸತಿ ಆರಾಧನೆಯ ಉಳಿಕೆಗೆ ಕಾರಣವೆಂಬುದು ಇದರಿಂದ ಮನವರಿಕೆಯಾಗುತ್ತದೆ.

ಕೊರಟಗೆರೆಯ ವಡ್ಡಗೆರೆ, ಶಿರಸಿಯ ದೇವಿಮನೆ, ಅಂಕೋಲಾದ ಮಾಸ್ತಿಕಟ್ಟಾ, ಹೊನ್ನವರದ ಅನಿಲಗೋಡ, ಭಟ್ಕಳದ ಶಿರಾಲಿ, ಕುಷ್ಟಗಿಯ ಕಬ್ಬರಗಿ, ಕಾರವಾರದ ಉಳ್ಗಾ ಮತ್ತು ಶಿರಸಿ ಊರುಗಳಲ್ಲಿ ಮಾಸ್ತಿದೇವತೆಯೆ ಮುಖ್ಯವಾಗಿರುವುದನ್ನು ಕಾಣಬಹುದು. ಮಾಸ್ತಿದೇವತೆಯಿಂದಲೇ ಗ್ರಾಮಗಳು ಬೆಳೆದಿವೆ. ಅವಳು ಫಲವತ್ತತೆಗೆ ಕಾರಣಳು ಎಂಬ ನಂಬಿಕೆ ಜನರಲ್ಲಿದೆ. ಹಾಗಾಗಿ ಮನೆಗಳಿಗೆ ಅಂಗಡಿ ಮುಂಗಟ್ಟುಗಳಿಗೆ, ವಿದ್ಯಾಲಯಗಳಿಗೆ ಮಹಾಸತಿ ಹೆಸರಿಟ್ಟಿರುವುದನ್ನು ಸ್ಮರಿಸಬಹುದು.

ಮಾಸ್ತ್ಯೆಮ್ಮ ಹಲವು ಕುಲಗಳ ಮುಖ್ಯದೇವತೆಯಾಗಿ ಇಂದಿಗೂ ಪೂಜಿಸಲ್ಪಡುತ್ತಿದ್ದಾಳೆ. ಕೂಡ್ಲಿಗೆಯ ಖಾನಾಮಡಗಿನ ಗೌಡರು, ಶ್ರೀರಂಗಪಟ್ಟಣ ಅರಿಕೇರಿಯ ಗಂಗಮತಸ್ಥರು, ಕಾರವಾರದ ಕೊಂಡರು, ಬ್ಯಾಡಗಿ ಅಗಸರು, ಹರಿಜನರು, ಸೊರಬದ ಮಡಿವಾಳರು, ಹೊನ್ನಳ್ಳಿಯ ಮಾಧಿಗರು, ಕಾರವಾರದ ಮಾಜಾಳಿಯಲ್ಲಿರುವ ಕುಮಾರ ಪಂತದವರು ತಮ್ಮ ಕುಲದೇವತೆಯಾಗಿ ಮಾಸ್ತೆಮ್ಮಳನ್ನು

ಪೂಜಿಸುವರು. ಅಲ್ಲದೇ ಇವರು ಪ್ರತಿ ವರ್ಷಕ್ಕೊಮ್ಮೆಯಾದರೂ ಮಾಸ್ತೆಮ್ಮನ್ನಲ್ಲಿಗೆ ಹೋಗಿ ತಮ್ಮ ಭಕ್ತಿ ಅರ್ಪಿಸಿ ಬರುವುದುಂಟು. ತಮ್ಮ ಮನೆಯಲ್ಲಿ ಯಾವುದೇ ಶುಭಕಾರ್ಯ ಪ್ರಾರಂಭಿಸುವ ಮೊದಲು ಮಾಸ್ತಿದೇವಿಗೆ ತೃಪ್ತಿಪಡಿಸಿಯೇ ಕಾರ್ಯೋನ್ಮುಖರಾಗುವರು.

ಮಾಸ್ತಿದೇವಿಯು ಮನೆದೈವವಾಗಿ ಗುರಿತಿಸಿಕೊಂಡಿರುವುದನ್ನು ಕಾಣಬಹುದು. ಚಂದಾವರ ದಲ್ಲಿಯ ಗುಡಿಗಾರ ಮನೆಯವರು, ಕುಂಚನೂರಿನ ಗೌಡರ ಮನೆ, ಶ್ರೀರಂಗ ಪಟ್ಟಣ ವೀರಮಾಸ್ತಯ್ಯನವರ ಮನೆ, ಗುತ್ತಲದ ಗಾಣಿಗಶೆಟ್ಟರ ಮನೆ, ಅಂಕೋಲೆಯ ಜಿ.ವಿ.ಐ ಗಳ ಮನೆ, ಮಾಚನಹಳ್ಳಿಯ ಕಟ್ಟಿಮನೆತನ, ಶಿರಾಲಿಯ ಆರ್.ಎನ್.ಶೆಟ್ಟಿ ಮನೆಯವರು ಸತಿದೇವತೆಯನ್ನು ತಮ್ಮ ಮನೆದೇವತೆಯಾಗಿ ತಿಳಿದು ಆರಾಧಿಸುತ್ತ ಬರುತ್ತಿದ್ದಾರೆ. ಶ್ರೀರಂಗಪಟ್ಟಣದ ವೀರಮಾಸ್ತಯ್ಯ ನವರು ಬಳೆ, ಸೀರೆ, ಕನ್ನಡಿ ಕಳಸಗಳನ್ನು ಸತಿ ಸ್ಮಾರಕಗಳೆಂದು ಪೂಜಿಸಿಕೊಂಡು ಬರುತ್ತಿದ್ದಾರೆ. ಗಾಣಿಗಶೆಟ್ಟರು ಆರ್.ಎನ್.ಶೆಟ್ಟಿ ಮನೆತನದವರು ಮಾಸ್ತಿ ಗುಡಿಗಳನ್ನು ಕಟ್ಟಿ ಪೂಜಿಸಿಕೊಂಡು ಬರುತ್ತಿದ್ದಾರೆ. ಕುಂಚುನೂರಿನ ಗೌಡರು ತಮ್ಮ ಮನೆದೇವತೆ ಎಂದು ಕುರುಹಾಗಿ ಬೆಳ್ಳಿಯ ಕಂಕಣ ಜಗಲಿಯ ಮೇಲಿಟ್ಟು ಆರಾಧಿಸುತ್ತ ಬರುತ್ತಿದ್ದಾರೆ.[೧೩೩]

ಸತಿದೇವಿಯು ಶಿಲೆ, ಶಿಲ್ಪ ಗೊಂಬೆ, ಕಟ್ಟೆ, ಗದ್ದಿಗೆ, ಹಕ್ಕಲು, ಹೊಲ, ಗಿಡ, ಬಳೆ, ಸೀರೆ, ಕನ್ನಡಿ, ಕಳಸ, ಕತ್ತಿ ಮೊದಲಾದ ರೂಪದಲ್ಲಿ ಪೂಜೆಗೊಳ್ಳುತ್ತಿದ್ದಾಳೆ. ಹೀಗೆ ಮೃತನ ಪತ್ನಿ ತನಗೆ ಸಾಧ್ಯವಾದ ಮಟ್ಟಿಗೆ ಸತಿಹೋಗುವಾಗ ದಾನ ಕಾರ್ಯವನ್ನು ಪಾಲಿಸಿಕೊಂಡು ಬಂದಿರು ವುದನ್ನು ಕಾಣುತ್ತೇವೆ. ಜೊತೆಗೆ ಸತಿಯರು ಕೊಟ್ಟ ವಸ್ತುಗಳನ್ನು ಇಂದಿಗೂ ಹಲವರ ಮನೆಗಳಲ್ಲಿ ಅವಳ ಸ್ಮರಣಾರ್ಥ ರಕ್ಷಿಸಿಕೊಂಡು ಬರಲಾಗುತ್ತಿದ್ದುದ್ದನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹು ದಾಗಿದೆ. ಅಲ್ಲದೆ ಹಲವು ಜನಾಂಗಗಳಲ್ಲಿ ಇಂದಿಗೂ ಮರಣ ಸಂಭವಿಸಿದರೆ ಅವರನ್ನು ಸುಡುವಾಗ, ಹೂಳುವಾಗ ಹಣ ಹಂಚುವ ಪದ್ಧತಿಯನ್ನು ಕಾಣಬಹುದಾಗಿದೆ. ಸಾಮಾನ್ಯವಾಗಿ ಈ ದಾನಕಾರ್ಯ ಮರಣ ಹೊಂದಿದವನ ಪಾಪ ಪರಿಹಾರಕ್ಕಾಗಿ, ಪುಣ್ಯ–ಸ್ವರ್ಗ ಪ್ರಾಪ್ತಿಗಾಗಿ ಎಂಬ ನಂಬಿಕೆಯ ಹಿನ್ನೆಲೆಯಲ್ಲಿ ನಡೆಯುತ್ತಿದೆ. ಸತಿಯು ಕೂಡ ದಾನ ಕಾರ್ಯಾದಿಗಳಿಂದ ಮಡಿದು ಇಂದು ಗ್ರಾಮದೇವತೆಯಾಗಿ, ಕುಲದೇವತೆಯಾಗಿ, ಮನೆ ದೇವತೆಯಾಗಿ ಪೂಜೆಗೊಳ್ಳುತ್ತಿದ್ದಾಳೆ.

೨.೪. ಸತಿಪದ್ಧತಿ ಚಾರಿತ್ರಿಕ ವಿಶ್ಲೇಷಣೆ

'ಸತಿಪದ್ಧತಿ' ಜಾಗತಿಕ ವ್ಯಾಪ್ತಿಯ ಒಂದು ಪ್ರಾಚೀನ ಜೀವನ ಮೌಲ್ಯ. ಭಾರತದಲ್ಲಿ ಇದಕ್ಕೆ ಸುದೀರ್ಘ ಪರಂಪರೆಯಿದೆ. ಸಾಮಾಜಿಕ ಕಾರಣಗಳಿಂದ ಅಸ್ತಿತ್ವಕ್ಕೆ ಬಂದು ಸಾಂಪ್ರದಾಯಿಕ

ಪರಿವೇಷ ಕಟ್ಟಿಕೊಂಡು ಬೆಳೆದಿರುವ ಈ ಪದ್ಧತಿಯ ಅಧ್ಯಯನ ಸತಿಪದ್ಧತಿ ಪ್ರಾಚೀನ ಜನಜೀವನದ ಒಂದು ಮುಖ್ಯ ಆಚರಣೆಯಾಗಿದ್ದರಿಂದ ಜೀವನದ ಅನೇಕ ಮಾಧ್ಯಮಗಳಲ್ಲಿ ಅನೇಕ ಬಗೆಯಾಗಿ ಅದು ದಾಖಲಾಗುತ್ತ ಬಂದಿದೆ.

ಭಾರತದ ಹಲವು ಜನಾಂಗಗಳಲ್ಲಿ ಸತಿ ಆಚರಣೆ ಆಚರಿಸಲ್ಪಟ್ಟಿದ್ದು ಕಂಡು ಬರುತ್ತದೆ. ಮುಖ್ಯವಾಗಿ ಇದು ಹೋರಾಟ ವರ್ಗದವರಲ್ಲಿ ಪ್ರಚಲಿತದಲ್ಲಿದ್ದುದನ್ನು ಶಾಸನಗಳು, ಶಿಲ್ಪಗಳು ಪ್ರವಾಸಿಗರ ವರದಿಗಳು ತಿಳಿಸುತ್ತವೆ. ಕುಪ್ಪಟೂರು, ದುಗೂರು, ಕಿಪಡಿ, ಕೊಂಡಗಳಲೆ, ಸಿರೂರ, ಹುಣಸೂರು, ಕೋಗಳಿ ಹೀರೆಹಾರಕ, ಹರಿತಾಳು ಈ ಮೊದಲಾದ ಶಾಸನಗಳಲ್ಲಿ ವೀರರು ಹೋರಾಟದಲ್ಲಿ ಮಡಿಯಲಾಗಿ ಅವನ ಪತ್ನಿ ಸತಿ ಹೋದುದ್ದನ್ನು ತಿಳಿಸಲಾಗಿದೆ. ಇದೇ ರೀತಿ ಹೆಬ್ಬಲಗುಪ್ಪೆ, ಬಳ್ಳಿಗಾವೆ, ಕುಣಗನಹಳ್ಳಿ, ಚಿಕ್ಕ ಹಾಲಿವಾಣ, ಹರೂರು ಈ ಮೊದಲಾದ ಊರುಗಳಲ್ಲಿಯ ಸ್ಮಾರಕ ಶಿಲ್ಪಗಳು ಹೋರಾಟ ಮಾಡಿ ಮಡಿದವರ, ಪತ್ನಿಯರು ಸತಿ ಹೋದುದ್ದನ್ನು ತಿಳಿಸುತ್ತವೆ.

ರಾಜಮನೆತನಗಳಲ್ಲಿ, ಗ್ರಾಮದ ಮುಖ್ಯಸ್ಥರ ಮನೆಗಳಲ್ಲಿ, ಸತಿಘಟನೆಗಳು ಆಚರಿಸಲ್ಪಟ್ಟಿವೆ. ಬಿಜ್ಜಳನ ತಾಯಿ ಸಹಗಮನ ಮಾಡಿಕೊಂಡದ್ದನ್ನು ಸಿಂಗಿರಾಜ ಪುರಾಣ ತಿಳಿಸುತ್ತದೆ.[೧೩೪] ಎರಡನೆಯ ದೇವರಾಯನ ಕಾಲಕ್ಕೆ ವಿಜಯನಗರಕ್ಕೆ ಭೇಟಿಕೊಟ್ಟ ನಿಕೊಲೆ-ದೆ-ಕೊಂತಿ ಎಂಬ ವಿದೇಶಿ ಪ್ರವಾಸಿ ರಾಜನು ಮರಣ ಹೊಂದಿದರೆ ಅವನ ಪತ್ನಿಯರು ಸತಿಹೋಗುತ್ತಿದ್ದರು ಎಂದು ಹೇಳುತ್ತಾನೆ.[೧೩೫] ಮಾನುಯೆಲ್ ಬರಾಡಾಸ್ ಎಂಬ ವಿದೇಶಿ ಪ್ರವಾಸಿಯು ವಿಜಯನಗರದ ಅರಸು ವೆಂಕಟಪತಿ ಮರಣ ಹೊಂದಿದಾಗ ಅವನು ಮೂವರು ರಾಣಿಯರು ಸತಿಹೋದುದ್ದನ್ನು ತಿಳಿಸುತ್ತಾರೆ.[೧೩೬] ಕುಮಾರ ವೀರಣ್ಣ ಯುದ್ಧದಲ್ಲಿ ಮರಣಗೊಳ್ಳಲು ಅವನ ಪತ್ನಿಯರು ಅವನ ಶವದೊಡನೆ ಸಮಾಧಿಯಲ್ಲಿ ಕುಳಿತು ಸತಿ ಹೋದುದ್ದನ್ನು ಸಿರುಮಣನಾಯಕನ ಸಾಂಗತ್ಯ ಹೇಳುತ್ತದೆ.[೧೩೭] ಮೈಸೂರು ಅರಸು ಮನೆತನದಲ್ಲಿ ಜರುಗಿದ ಸತಿಘಟನೆಗಳ ವಿವರಗಳಿವೆ. ಹೆಗ್ಗೋಡು ಗ್ರಾಮದ ಮಹಾಪ್ರಭುವಾದ ಬೀರಗುಡರ ಮಗ "ಬಯಿರವಉಡರು ಸತಿಸಂಡ ವಯಿಕುಂಟ ಪ್ರಪಿತರಾದರು"[೧೩೮] ಎಂದು ಹೆಗ್ಗೋಡು ಶಾಸನ ಹೇಳುತ್ತದೆ. "ಶ್ರೀಮಂನಾವಿಯದ ಪ್ರಭುಮಂಗಲೂರನಾಗುಡರ ಮಗಸೆಟ್ಟಿ. ಉಡರು ಸ್ವರ್ಗಸ್ಥರಾಗಲು ಆತನ ಮದುವಳಿಗೆ ಯಿಂಗುಡಿ ಅಗ್ನಿ ಪ್ರವೇಶವನ್ನು ಮಾಡಿದಳು"[೧೩೯] ಎಂದು ಮಂಗಳೂರು ಶಾಸನವು ತಿಳಿಸುತ್ತದೆ. ಮನಗುಂಡಿ ಶಾಸನದಲ್ಲಿ ನಾಡಪ್ರಭು ಹಳ್ಳಿಗೆರೆಯ ಮಲ್ಲಪ್ಪನು ಸ್ವರ್ಗಸ್ಥನಾದ ವಿಷಯವಿದೆ.[೧೪೦] ಈ ಸ್ಮಾರಕ ಶಿಲ್ಪದಲ್ಲಿ ಅವನ ಪತ್ನಿಯರು ಸತಿಹೋದ್ದುದನ್ನು ಚಿತ್ರಿಸಲಾಗಿದೆ. ಈ ವಿವರಗಳೆಲ್ಲ ಕರ್ನಾಟಕದ ಆಡಳಿತ ವರ್ಗದ ಮನೆತನಗಳಲ್ಲಿ ಸತಿಘಟನೆಗಳು ಜರುಗಿರುವುದನ್ನು ತಿಳಿಸಿದವುಗಳಾಗಿವೆ.

ಮಾಸ್ತಿ ಶಿಲ್ಪಗಳ ಮೇಲಿನ ಹಂತದಲ್ಲಿ ಸಾಮಾನ್ಯವಾಗಿ ಲಿಂಗ, ನಂದಿ, ಅರ್ಚಕನನ್ನು ಕಂಡರಿಸಿರುವುದನ್ನು ಕಾಣುತ್ತೇವೆ. ಈ ಶಿಲ್ಪಗಳು ಶೈವ ಮತದ ಸ್ತ್ರೀಯರು ಸತಿಹೋದುದ್ದನ್ನು ಧ್ವನಿಸುತ್ತವೆ. ಇಂಥ ಶಿಲ್ಪಗಳು ಅನೇಕ ಹಳ್ಳಿಗಳಲ್ಲಿ ದೊರಕುತ್ತವೆ. ಕ್ರಿ.ಶ.೧೪೨೨ರ ಬೆಳಗಾವಿ ಶಾಸನದಲ್ಲಿ ಬುಳ್ಳಿ ದೇವನ ಮೂವರು ಪತ್ನಿಯರು 'ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ'ದಲ್ಲಿ ತೋಂಟದಾರ್ಯನ ಮಡದಿ ಚೆನ್ನಬಸವಮ್ಮ 'ಸಿರುಮಣನಾಯಕನ ಸಾಂಗತ್ಯ'ದಲ್ಲಿ ವೀರಣ್ಣನ ಪತ್ನಿಯರು ಸತಿಹೋದುದ್ದನ್ನು ಚಿತ್ರಿಸಲಾಗಿದೆ. ಈ ಉದಾಹರಣೆಗಳು ವೀರಶೈವರಲ್ಲಿದ್ದ ಸತಿ ಆಚರಣೆಯನ್ನು ತಿಳಿಸುತ್ತವೆ. ಬೆನ್ನೂರಿನ ಕುಂಬಾರ ಕುಲದ ಚಂದ್ರವ್ವ ಸಹಗಮನ ಮಾಡಿಕೊಂಡದ್ದನ್ನು ಶಾಸನವೊಂದು ವಿವರಿಸುವುದನ್ನು ಇದೇ ಸಂದರ್ಭದಲ್ಲಿ ಸ್ಮರಿಸಬಹುದಾಗಿದೆ.[೧೪೧] ಜೈನಧರ್ಮಿಯರಾದ ಚೆಂನ್ನಕ್ಕ ಮುದ್ದಿಗೌಂಡಿ ಸತಿಹೋದುದ್ದನ್ನು ಹಿರೇಅವಲಿಯ ಎರಡು ಶಾಸನಗಳು ತಿಳಿಸುತ್ತವೆ.[೧೪೨] ಬಾಳೂರಿನ ಶಿಲ್ಪದಲ್ಲಿ ಜೈನಸ್ತ್ರೀಯ ಸಹಗಮನ ಚಿತ್ರಿಸಲಾಗಿರುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದಾಗಿದೆ. ಅಲ್ಲದೆ ರನ್ನನ 'ಅಜಿತನಾಥ ತೀರ್ಥಂಕರ ಪುರಾಣ'ದಲ್ಲಿನ ಜೈನಳಾದ ಗುಂಡಮಬ್ಬೆ ಗಂಡ ನಾಗದೇವನ ಶವದೊಡನೆ ಚಿತೆಯನ್ನು ಪ್ರವೇಶಿಸಿದ ವಿಷಯದ ಚಿತ್ರಣ ಪ್ರಸಿದ್ಧವಾದುದಾಗಿದೆ.

ಬ್ರಾಹ್ಮಣ ಸ್ತ್ರೀಯರು ಸಹಗಮನ ಮಾಡಿಕೊಂಡ ವಿವರಗಳು ದೊರಕುತ್ತವೆ. ಓಂ. ನರಸೀಪುರ ತಾಲ್ಲೂಕಿನ ಬ್ರಾಹ್ಮಣ ಹೆಂಗಸೊಬ್ಬಳು ಸತಿಹೋದುದು ಸರ್ಕಾರದ ಪತ್ರವೊಂದರಲ್ಲಿದೆ.[೧೪೩] ತುಮಕೂರು ಜಿಲ್ಲೆ ಕೈದಾಳು ಗ್ರಾಮದ ಸ್ಮಾರ್ತ ಬ್ರಾಹ್ಮಣರಾಗಿದ್ದ ಶಿವರಾಮಯ್ಯನವರ ಪತ್ನಿ ಸತಿಹೋದುದ್ದನ್ನು ಎಂಚಿದಾನಂದಮೂರ್ತಿ ಅವರು ತಿಳಿಸುತ್ತಾರೆ.[೧೪೪] ಕ್ರಿ.ಶ. ೧೮೨೬ ಜೂನ್ ೯ರಂದು ಬ್ರಾಹ್ಮಣ ಸ್ತ್ರೀಯೊಬ್ಬಳು ಸಹಗಮನ ಹೋದುದ್ದನ್ನು ಮಿಷಿನರಿ ಟಿಪ್ಪಣಿಗಳ ಪತ್ರವೊಂದರಲ್ಲಿ ತಿಳಿಸಲಾಗಿದೆ.[೧೪೫] ಹಂಪೆಯ ತುಲಾಭಾರ ಸ್ತಂಭದ ಬಳಿ ಇರುವ ವೀರಗಲ್ಲಿನ ಶಿಲ್ಪದಲ್ಲಿ ಇಬ್ಬರು ಸ್ತ್ರೀಯರು ಸತಿಹೋದುದ್ದನ್ನು ತೋರಿಸಲಾಗಿದೆ. ಈ ಸ್ಮಾರಕ ಶಿಲ್ಪದಲ್ಲಿ ಮೇಲಿನ ಸ್ತರದಲ್ಲಿ ವೈಷ್ಣವ ಲಾಂಛನಗಳಾದ ಶಂಖ, ಚಕ್ರ, ಪದ್ಮಗಳಿರುವುದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಕರ್ನಾಟಕದ ಹಿಂದುಳಿದ ವರ್ಗಗಳಲ್ಲಿ ಸತಿ ಆಚರಣೆ ನಡೆದುಕೊಂಡು ಬಂದಿರುವುದರ ಕುರಿತು ವಿವರಗಳು ದೊರಕುತ್ತವೆ. ಬೇಡಜನಾಂಗದ ಮಲೆಯಂದೂರ ಬೇಡ ಬೀರ ಜೀಲಜೀಯರ ಬೆಸದಾಂತಿರದಲ್ಲಿ ಅಮರರೋಳುಪೋಗೆ ಬೊಮ್ಮಕ್ಕನು ಮಹಾಸತಿಯಾಗಿ ದೇವಲೋಕಪ್ರಾಪ್ತರಾದರು ಎಂದು ಮಲ್ಲಂದೂರು ಶಾಸನವು ತಿಳಿಸಿದರೆ, ಕುಂಬಸಿಯಬೇಡರ ಮಾರಯನಾಯಕನು

ಆತನ ಮದುವಳಿಗೆ ಬೊಂಮಾಯಿ ಸ್ವರ್ಗಸ್ಥರಾದರು ಎಂದು ಕಂಸಿಗ್ರಾಮ ಶಾಸನವು ತಿಳಿಸುತ್ತದೆ.[೧೪೬] ಕ್ರಿ.ಶ.೧೦೫೭ರ ಬೆಳತೂರು ಶಾಸನದಲ್ಲಿ ದೇಕಬ್ಬೆಯು ಸತಿಹೋದುದ್ದನ್ನು ಚಿತ್ರಿಸಲಾಗಿದೆ.[೧೪೭] ಈ ದೇಕಬ್ಬೆ ಜಾತಿಯಿಂದ ಶೂದ್ರಳೆಂದು ರೆ. ಕಿಟೆಲ್ಲರು ಗುರುತಿಸಿರುವುದನ್ನು ಇಲ್ಲಿ ಸ್ಮರಿಸಬಹುದಾಗಿದೆ.[೧೪೮] ಕ್ರಿ.ಶ.ಸು.೧೬೨೩ರಲ್ಲಿ ಇಕ್ಕೇರಿಗೆ ಸಂದರ್ಶನಕೊಟ್ಟ ಪಿಯೊತ್ರೊ ದೆಲ್ಲಾವೆಲ್ಲೆ ಎಂಬ ವಿದೇಶಿ ಪ್ರವಾಸಿಯು 'ತೆರ್ಲೆಂಗಾ' ಜಾತಿಗೆ ಸೇರಿದ ಗಿಯಕ್ಕಮ್ಮಳು ಸಹಗಮನ ಪೂರ್ವದಲ್ಲಿ ಮೆರವಣಿಗೆ ಹೋಗಿರುವುದನ್ನು ವರ್ಣಿಸಿದ್ದಾನೆ.[೧೪೯] ಶ್ರೀರಂಗಪಟ್ಟಣದ ಶ್ರೀವೀರ ಮಾಸ್ತಯ್ಯನವರ ಮನೆತನದಲ್ಲಿ ಸ್ತ್ರೀಯೊಬ್ಬಳು ಸತಿಹೋಗಿರುವುದರ ಕುರುಹಾಗಿ ಕನ್ನಡಿ, ಕಳಸ, ಸೀರೆ, ಬಳೆಗಳಿವೆ. ಈ ಮನೆತನದವರು ಜಾತಿಯಿಂದ ಬೆಸ್ತರಾಗಿರುವುದನ್ನು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳಬಹುದಾಗಿದೆ. ಹೀಗೆ ಭಾರತದ ವಿವಿಧ ವರ್ಗದ ಜನರು ಸತಿ ಸಂಪ್ರದಾಯವನ್ನು ಒಪ್ಪಿಕೊಂಡು, ಆಚರಿಸಿಕೊಂಡು ಬಂದಿರುವುದನ್ನು ಕಾಣುತ್ತೇವೆ.

ಸತಿಶಿಲ್ಪ, ಕಟ್ಟೆ, ಕೊಂಡ, ಗುಡಿಗಳು ಸತಿ ಕೊಂಡ ಹೋಗಿರಬಹುದಾದ ಸ್ಥಳದಲ್ಲಿ ಇದ್ದುದರಿಂದಲೇ ಇವುಗಳ ಸುತ್ತ ಜನ ವಸತಿ ಪ್ರಾರಂಭಗೊಂಡು ಅದು ಊರಾಗಿ ಪರಿಣಮಿಸಿತು, ಮುಂದೆ ಮಾಸ್ತಿ ಎಂಬ ಹೆಸರಿನಿಂದ ಇಲ್ಲವೇ ಮಾಸ್ತಿಗೆ ಸಂಬಂಧಿಸಿದ ಹೆಸರಿನಿಂದ ಊರುಗಳನ್ನು ಕರೆಯಲಾಯಿತು. ಉದಾಹರಣೆಗೆ ಮಾಸ್ತಿಹಳ್ಳ, ಮಾಸ್ತಿಕಟ್ಟೆ, ಮಾಸ್ತಿಹಳ್ಳಿ, ಮಾಸ್ತಿಹಾಳ, ಮಾಸಡಿ, ಮಾಸ್ತೆಮ್ಮನಹಳ್ಳಿ, ಕೊಂಡದಹಳ್ಳಿಯಂತಹ ಹೆಸರುಗಳು ಬಂದಿವೆ.[೧೫೦]

ಪ್ರಸ್ತುತ ಸಂದರ್ಭದಲ್ಲೂ ಮಾಸ್ತಿಗುಡಿಗಳ ಸುತ್ತ ಜಾತ್ರೆ ಉತ್ಸವಗಳು ನಡೆಯುತ್ತವೆ. ಇವು ಸತಿಪದ್ಧತಿಗೆ ಸಂಬಂಧಿಸಿದಂತಹ ಐತಿಹಾಸಿಕ ಸಂಗತಿಗಳನ್ನು ನಿರೂಪಿಸುತ್ತವೆ. ಇದರಿಂದ ಜನರಲ್ಲಿ ಸತಿಹೋಗಿರುವವರ ಕುರಿತು ಇರುವ ಭಾವನೆ ನಂಬಿಕೆ ಮೊದಲಾದವುಗಳನ್ನು ತಿಳಿದುಕೊಳ್ಳಬಹುದು. ಸಾಮಾನ್ಯವಾಗಿ ಮಾಸ್ತಿಕಲ್ಲುಗಳಿಗೆ ಮಾಸ್ತಿಗುಡಿಗಳಲ್ಲಿರುವ ಮೂರ್ತಿಗಳಿಗೆ ವಿಶೇಷ ದಿನಗಳಲ್ಲಿ ಹಬ್ಬಗಳಲ್ಲಿ ಪೂಜೆ ಸಲ್ಲಿಸುವುದನ್ನು, ಸತಿ ಕುರಿತು ಹಾಡು ಹೇಳುವುದನ್ನು ಕಾಣುತ್ತೇವೆ. ಹಲವು ಗುಡಿಗಳಲ್ಲಿ ದಿನಾಲು ಪೂಜೆ ನಡೆದರೆ ಕೆಲವು ಗುಡಿಗಳಲ್ಲಿ ವಾರಕ್ಕೊಮ್ಮೆ, ಹಬ್ಬ ಹುಣ್ಣಿಮೆಗೊಮ್ಮೆ, ವರ್ಷಕ್ಕೊಮ್ಮೆ ಮಾತ್ರ ಪೂಜೆ ನಡೆಯುತ್ತದೆ. ಕೆಲವು ಗುಡಿಗಳಲ್ಲಿ ಇಂದಿಗೂ ಪೂಜೆ ಇರದೇ ಇರುವುದನ್ನು ಕಾಣಬಹುದು.

ಮಾಸ್ತಿ ಗುಡಿಗಳಲ್ಲಿ ರಕ್ತ ಬಲಿಕೊಡುವುದಲ್ಲದೇ ಮಾಂಸಹಾರ ನೈವೇದ್ಯವಿದ್ದರೆ ಕೆಲವು ಗುಡಿಗಳಲ್ಲಿ ಶುದ್ಧ ಸಸ್ಯಹಾರದ ನೈವೇದ್ಯ ಇರುವುದನ್ನು ಕಾಣಬಹುದು. ಕೆಲವು ಗುಡಿಗಳಲ್ಲಿ ಒಂದು ದಿನದ ಜಾತ್ರೆ ನಡೆದರೆ, ಇನ್ನು ಕೆಲವು ಗುಡಿಗಳಲ್ಲಿ ಮೂರು ದಿನಗಳವರೆಗೆ ದೊಡ್ಡ

ಪ್ರಮಾಣದಲ್ಲಿ ಜಾತ್ರೆಯ ಸಂಭ್ರಮವಿರುತ್ತದೆ. ಸಿಂಧಗಿಯ ದೇವರ ಹಿಪ್ಪರಗಿ ಮತ್ತು ಅಂಕೋಲಾ, ಭಟ್ಕಳದ ಮುರ್ಡೇಶ್ವರ (ತುಪ್ಪಳ್ಳಿ) ಕೋರ್ತೆರಟ್ಟಿ , ಚನ್ನಗಿರಿಯ ಕೊಂಡದಹಳ್ಳಿ, ಹೊನ್ನಾವರದ ಚಂದಾವರ, ಅನಿಲಗೋಡಹಳ್ಳಿ, ನಾಥಗೇರಿ, ಕಾರವಾರದ ಅರಗಾ, ಕೂಡ್ಲಿಗೆಯ ಕಾನಮಡಗು, ಹೆಗ್ಗನದೇವನಕೋಟೆ, ಬೆಳತೂರು, ಹೊಸನಗರದ ಮಾಸ್ತಿಕಟ್ಟೆಯಂತಹ ಊರುಗಳಲ್ಲಿ ಅತ್ಯಂತ ಸಂಭ್ರಮದಿಂದ ಜಾತ್ರೆ ಉತ್ಸವಗಳು ವರ್ಧಂತಿ ಮಹೋತ್ಸವಗಳು ಇಂದಿಗೂ ನಡೆಯುತ್ತವೆ. ಇವುಗಳಲ್ಲಿ ಸತಿಪದ್ಧತಿಯ ಕುರುಹುಗಳು ಇನ್ನೂ ಉಳಿದಿರುವುದನ್ನು ಗುರುತಿಸಬಹುದು.

ಕೊಂಡದ ಹಳ್ಳಿಯಲ್ಲಿ ಮಾಸ್ತ್ಯಮ್ಮ ಒಬ್ಬ ಪ್ರಮುಖ ದೇವತೆಯಾಗಿದ್ದು. ಇವಳ ಹಬ್ಬವಿಲ್ಲದೆ ನೇಗಿಲ ಹಲ್ಲು ನೆಲವನ್ನು ಸೀಳುವಂತಿಲ್ಲ. ಈ ಹಬ್ಬ ವರ್ಷಕ್ಕೆ ಒಂದು ಬಾರಿ ಯುಗಾದಿಯ ಅನಂತರ ನಡೆಯುತ್ತದೆ. ಯುಗಾದಿಯ ನಂತರ ಬರುವ ಮಂಗಳವಾರ ಹಬ್ಬಕ್ಕೆ ಅನುಕೂಲದಿನ. ಹಬ್ಬಕ್ಕೆ ಮೂರು ದಿನಗಳ ಮೊದಲು ಐವರು ಮುತ್ತೈದೆಯರು ಉಪವಾಸವಿರುತ್ತಾರೆ. ಮಾಸ್ತ್ಯಮ್ಮ ಹಾಗೂ ಅವಳ ಗಂಡನಿಗೆ ಬಾಸಿಂಗದ ತಯಾರಿಯನ್ನು ಊರಿನ ಬಡಿಗೇರ ಮಾಡುತ್ತಾರೆ. ಹಬ್ಬದ ದಿನ ಬೆಳಿಗ್ಗೆ ಗಂಡನ ಕಲ್ಲಿಗೆ ಗರಿಸೂತ್ರ, (ಬಾಸಿಂಗ) ಕಟ್ಟುತ್ತಾರೆ. ಮಾಸ್ತಿ ಕಲ್ಲಿಗೆ ನೂರೊಂದು ಪೂಜೆಯನ್ನು ಮಾಡುತ್ತಾರೆ. ದೇವಸ್ಥಾನದ ಅಮ್ಮನ ಕಲ್ಲನ್ನು ಆಭರಣಗಳಿಂದ ಅಲಂಕರಿಸುತ್ತಾರೆ. ಮುಖಪದ್ಮದ ಜೊತೆಗೆ ಬಾಸಿಂಗವನ್ನು ಕಟ್ಟುತ್ತಾರೆ. ಪಕ್ಕದಲ್ಲಿನ ಗಂಡನಕಲ್ಲಿಗೆ ಏನೂ ಇಲ್ಲ. ಮಾಸ್ತೈಮ್ಮನ ಬಗ್ಗೆ ಹಾಡುಗಳನ್ನು ಹೇಳುತ್ತಾರೆ. ಹಾಡುಗಳು ಈಗ ಅಲ್ಲಿ ಜೀವಂತವಾಗಿ ಉಳಿದಿಲ್ಲ. ಆ ಹಾಡುಗಳ ಕೆಲವು ತುಣುಕುಗಳು ಹೀಗಿವೆ.

ಅಕ್ಕ ಮಾಸ್ತ್ಯಕ್ಕ ಮದುಮಗಳೆ ದುಮ್ಮಿಂದ ಅಕ್ಕಿ ಹೊಂಬಾಳೆ ಬರಬೇಕು
ಪುರುಷರಿದ್ದು ಉರಿದಾಳೆ.
ಸಿಡಿದು ಹೋದಳೆ ಗಗನಕ್ಕೆ

ಎಂಬ ಹಾಡುಗಳು ಇಂದಿಗೂ ಅಲ್ಲಿ ಕೇಳಿಬರುತ್ತವೆ. ಸಾಯಂಕಾಲ ಹೊಲ ಊಳುವ ರೈತನಿಗೆ ಊಳುವ ಆಜ್ಞೆಯಾದ ನಂತರವೇ ಅವನ ಕೆಲಸ ಪ್ರಾರಂಭ. ಈ ಸಮಾರಂಭದ ಹೊರತು ರೈತನು ಹೊಲ ಊಳುವಂತಿಲ್ಲ. ತಪ್ಪಿ ನಡೆದರೆ ಮಾಸ್ತೈಮ್ಮನು ಶಿಕ್ಷೆ ವಿಧಿಸುತ್ತಾಳೆ ಎಂಬ ಭಯ, ಭಕ್ತಿ ಇವರದು. ಈ ಹಬ್ಬದಲ್ಲಿ ಜಾತಿ ಮತ ಬೇಧವಿಲ್ಲದೆ ಎಲ್ಲರೂ ಭಾಗವಹಿಸುತ್ತಾರೆ. ದೇವಸ್ಥಾನದ ಹೊರಗಡೆ ನಡೆಯುವ ದಾಸೋಹದೊಂದಿಗೆ ಹಬ್ಬ ಮುಕ್ತಾಯವಾಗುತ್ತದೆ.

ಅಂಕೋಲಾದ ಮಾಸ್ತಿಕಟ್ಟೆಯಲ್ಲಿರುವ ಮಾಸ್ತಿಗುಡಿಯ ಇತಿಹಾಸ ಸ್ವಾರಸ್ಯಕರವಾಗಿದೆ. ಇಲ್ಲಿ ಮಾಸ್ತಿಯ ಗೂಡನ್ನು ಕುಂಕುಮ ಅರಿಷಿಣಗಳಿಂದ ಪೂಜಿಸಿ ಕಪ್ಪು ಬಣ್ಣದ ಬಳೆಗಳನ್ನು ಇಟ್ಟಿರುತ್ತಾರೆ. ನವರಾತ್ರಿಯ ಹತ್ತು ದಿನಗಳ ಕಾಲ ಮಹಾ ಪೂಜೆ ನಡೆಯುತ್ತದೆ. ಊರಿನ ಜನ

ಎಡೆಗಳನ್ನು ತೆಗೆದುಕೊಂಡು ಪೂಜೆ ಸಲ್ಲಿಸುತ್ತಾರೆ. ನಂತರ ಅನ್ನ ಸಂತರ್ಪಣೆ ಕೀರ್ತನೆ ಮುಂತಾದ ಸಮಾರಂಭಗಳು ನಡೆಯುತ್ತವೆ. ಅಂಕೋಲದಲ್ಲಿ ಇಂದಿಗೂ 'ಬಂಡಿಹಬ್ಬ' ಎಂಬ ಹಬ್ಬವೊಂದು ನಡೆಯುತ್ತದೆ. ಈ ಹಬ್ಬದಂದು 'ಸತಿ'ಗೆ ಸಂಬಂಧಿಸಿದ ಆಟವೊಂದನ್ನು ಆಡುತ್ತಾರೆ. 'ಆಡುವಕಟ್ಟೆ'ಯಲ್ಲಿ ವೀರನೊಬ್ಬ ಹೋರಾಡಿ ಮಡಿಯುವುದು ಅವನ ಪತ್ನಿ ಅದನ್ನು ಕಂಡು ಸತಿ ಹೋಗುವುದನ್ನು ಈಗಲೂ ಆಡಿ ತೋರಿಸುತ್ತಾರೆ.

ಕೊಂಡದಹಳ್ಳಿಯಲ್ಲಿ ಯುಗಾದಿ ಹಬ್ಬದ ನಂತರ ಮಾಸ್ತಿ ಉತ್ಸವ ನಡೆಯುತ್ತದೆ. 'ಗಂಡನಕಲ್ಲಿ'ಗೂ 'ಮಕ್ಕಳಕಲ್ಲಿ'ಗೂ (ಮಾಸ್ತಿಕಲ್ಲು) ನೂರೊಂದು ಪೂಜೆ ನಡೆಯುತ್ತದೆ. ಗಂಡನ ತಲೆ ಕಲ್ಲಿಗೆ ಗರಿಸೂತ್ರ ಅಥವಾ ಬಾಸಿಂಗವನ್ನು ಮುಡಿಸಿ ಗುಡಿಗೆ ಬಂದು ಅಲ್ಲಿ ಮಾಸ್ತ್ಯೆಮ್ಮ ಮತ್ತು ಆಕೆಯ ಗಂಡನಿಗೆ ಮದುವೆ ಮಾಡುತ್ತಾರೆ. ಅಮ್ಮನಕಲ್ಲಿಗೆ ಅನೇಕ ಒಡವೆಗಳನ್ನು ಹಾಕಿ ಮುಖಪದ್ಮವಿಡುತ್ತಾರೆ. 'ಗಂಡನಕಲ್ಲಿಗೆ' ಗರಿಸೂತ್ರಗಳಿಂದ ಅಲಂಕರಿಸುತ್ತಾರೆ. ಇಲ್ಲಿ ಮದುವೆ ಸತ್ತ ಗಂಡನಿಗೂ, ಮಾಸ್ತ್ಯೆಮ್ಮನಿಗೂ ನಡೆಯುವುದರಿಂದ ಅಮ್ಮನಕಲ್ಲಿಗೆ ಮುಖಪದ್ಮವಿಟ್ಟು ಅಲಂಕರಿಸುತ್ತಾರೆ. ಗಂಡನ ತಲೆಗೆ ಯಾವುದೇ ಅಲಂಕಾರವನ್ನು ಮಾಡುವುದಿಲ್ಲ ಇದು ಮಾಸ್ತ್ಯಮ್ಮನ ಸಹಗಮನ ಮಾಡುವ ಮೊದಲು ಅಲಂಕಾರ ಮಾಡಿಕೊಳ್ಳುತ್ತಿದ್ದರು ಮತ್ತು ಅವಳಿಗೂ ಅವಳ ಸತ್ತ ಗಂಡನಿಗೂ ಮತ್ತೆ ಮದುವೆ ಶಾಸ್ತ್ರ ಮಾಡಿದುದರ ಸಂಕೇತವಿರಬೇಕು.[೧೫೧]

ರಾಯಚೂರು ಜಿಲ್ಲೆ ಕುಷ್ಟಗಿ ತಾಲ್ಲೂಕು ಕಬ್ಬರಗಿ ಗ್ರಾಮದಲ್ಲೂ ಮಹಾಸತಿ ಗುಡಿಯಿದೆ. ಇಲ್ಲಿ ದವನದ ಹುಣ್ಣಿಮೆ (ಮುತ್ತೈದ ಹುಣ್ಣಿಮೆ)ಯ ದಿನ ಎರಡು ದಿನಗಳವರೆಗೆ ಜಾತ್ರೆ ನಡೆಯುತ್ತದೆ. ಹಾಲು ಕಂಬದ ಆಟವೇ ಈ ಹಬ್ಬದ ಪ್ರಮುಖ ವೈಶಿಷ್ಟ್ಯ. ಹಬ್ಬದ ಸಮಯದಲ್ಲಿ ಆಡಿನ ಬಲಿ ಕೊಡುತ್ತಾರೆ. ಇಲ್ಲಿ ಪ್ರಾಣಿ ಬಲಿಯೊಂದಿಗೆ ಸುಮಾರು ಮೂರು ದಿವಸ ನಿರಂತರ ಜಾತ್ರೆ ನೆರವೇರುವುದು.[೧೫೨] ಕಂಬ ಏರುವ ಆಚರಣೆ ಮುಗಿದ ಮೇಲೆ ಗೊಲ್ಲ ಹೆಂಗಸರು, ಗಂಡಸರೆಲ್ಲ ಹಾಲು ಮೊಸರಿನ ಓಕುಳಿಯನ್ನು ದೇವಾಲಯದಲ್ಲಿ ಆಡುತ್ತಾರೆ. ಮಾಸ್ತಿಯ ಹಬ್ಬದ ನಂತರವೇ ಈ ಪ್ರದೇಶಗಳಲ್ಲಿ ಮದುವೆಗಳು ನಡೆಯುತ್ತವೆ. ಪ್ರತಿ ಶುಕ್ರವಾರಕ್ಕೊಮ್ಮೆ ಉಡಿ ತುಂಬುವ ಮೂಲಕ ಪೂಜೆ ಮಾಡುತ್ತಾರೆ. ಊರಿನಲ್ಲಿರುವ ಮಕ್ಕಳು ದನಕರುಗಳು ಕಾಯಿಲೆಗೆ ಬಿದ್ದರೆ, ಮಾಸ್ತ್ಯೆಮ್ಮನಿಗೆ ಹರಕೆ ಕಟ್ಟಿಕೊಳ್ಳುತ್ತಾರೆ. ಈ ರೀತಿಯ ಜಾತ್ರೆಗಳು ಮುರ್ಡೇಶ್ವರ, ಕೋಕ್ತಿಕಟ್ಟೆ, ಅನಿಲಗೋಡಹಳ್ಳಿ, ಅಲ್ಪ, ಸ್ವಲ್ಪ ಬದಲಾವಣೆಗೊಂಡು ನಡೆಯುವುದನ್ನು ಇಲ್ಲಿ ಸ್ಮರಿಸಬಹುದು.

ಸಾಗರ ತಾಲ್ಲೂಕಿನ ಕೊಪ್ಪದಲ್ಲೂ ಉರಿಯುತ್ತಿರುವ ಬೆಂಕಿಯ ಚಿತ್ರವಿರುವ ವಿಗ್ರಹವಿದೆ.

ಇಲ್ಲಿ ಯುಗಾದಿ ಹಾಗೂ ದೀಪಾವಳಿ ಸಮಯಕ್ಕೆ ಮಾಸ್ತಿಕಲ್ಲಿಗೆ ವಿಜ್ರಂಭಣೆಯ ಪೂಜೆ ನಡೆಯುತ್ತದೆ. ಎಡೆಮಣಿಮಾಡಿ ಅದರ ಮೇಲೆ ಕಳಶ ಇಟ್ಟು ಮಾಸ್ತಿಯನ್ನು ಅವಾಹನೆ ಮಾಡುತ್ತಾರೆ. ಎಡೆಮಣಿಯನ್ನು ಸಿದ್ಧಮಾಡುವದು ಹೀಗೆ. ಕುಡಿಬಾಳೆ ಎಲೆಯ ಮೇಲೆ ಅರ್ಧಸೇರು ಅಕ್ಕಿಯನ್ನು ಹರಡಿ ಅಕ್ಕಿಯಲ್ಲಿ ಚೆಂಬನ್ನು ಹುಗಿದು, ಎರಡು ತೊಂಡ್ಲು ಮಾವಿನ ಎಲೆಗಳನ್ನು ಅದರ ಬಾಯಿಗೆ ಸಿಕ್ಕಿಸಿ. ಚೆಂಬಿನಲ್ಲಿ ಗಂಗೋಧಕ ಹಾಕಿ ಕಾಯಿಯನ್ನು ಅದರ ಮೇಲೆ ಕೂಡಿಸುತ್ತಾರೆ. ನಂತರ ಪೂಜೆ ಮಾಡುತ್ತ ಮಾಸ್ತಿಯನ್ನು ಅದರಲ್ಲಿ ಅವಾಹಿಸುತ್ತಾರೆ.

ಮಾಸ್ತಿಕಲ್ಲಿಗೂ ಪೂಜೆ ನಡೆಯುತ್ತದೆ. ಕಣಗಳನ್ನು ಉಡಿಸುತ್ತಾರೆ. ಎಲ್ಲ ಪೂಜೆ ಮಡಿಯಲ್ಲೆ ನಡೆಯುತ್ತದೆ. ಕಷ್ಟಬಂದರೆ ಹರಕೆ ಹೊತ್ತುಕೊಳ್ಳುತ್ತಾರೆ. ಹೆಂಗಸರ್‍ಯಾರೂ ಈ ಮಾಸ್ತಿಯನ್ನು ಪೂಜಿಸುವದಿಲ್ಲ. ಕೆಲವು ಸಾರಿ ಅಪವಾದ ಎನ್ನುವ ಹಾಗೆ ಉಪ್ಪಾರ ಜನರು ಪೂಜೆ ಮಾಡುತ್ತಾರೆ. ಇಲ್ಲಿಯೂ ಹೆಂಗಸರು ಪೂಜೆ ಮಾಡುವುದಿಲ್ಲ ದನ–ಹಸುಗಳು ಈದಾಗ ಗಿಣ್ಣನ್ನು ಮೊದಲು ಮಾಸ್ತಿಕಲ್ಲಿಗೆ ಸುರಿದು ನಂತರ ಉಪಯೋಗಿಸುತ್ತಾರೆ.

ಮಾಸ್ತಿ ಪವಾಡದ ಕುರಿತು ಇಂದಿಗೂ ಜನರಲ್ಲಿ ನಂಬಿಕೆಯಿದೆ. ಹುಬ್ಬಳ್ಳಿ ಕಾರವಾರ ರಸ್ತೆಯಲ್ಲಿ ಮಾಸ್ತಿಕಲ್ಲೊಂದನ್ನು ಕಾಟ್ರಂಕ್ಟರನ್ನೊಬ್ಬ ನೋಡಿ ಹರಸಿ ಕೊಂಡಿದ್ದ ಮುಂದೆ ಅವನಿಗೆ ಲಾಭವಾಗಿ ಮಾಸ್ತಿಕಲ್ಲನ್ನು ರಸ್ತೆ ಪಕ್ಕದಲ್ಲಿ ಸ್ಥಾಪಿಸಲು ಪ್ರಯತ್ನಿಸಿದ ಅದರೆ ಹಳ್ಳಿಯವರು ಒಪ್ಪದಿದ್ದಾಗ ಮಾಸ್ತಿಯ ಪ್ರತಿರೂಪವನ್ನು ಕಲ್ಲಿನಲ್ಲಿ ಕೆತ್ತಿಸಿ ರಸ್ತೆಯ ಪಕ್ಕದಲ್ಲಿ ಸ್ಥಾಪಿಸಿದ ಅದೇ ಮಾರ್ಗದಲ್ಲಿ ಹೋಗಿ ಬರುತ್ತಿದ್ದ ವಾಹನಗಳು ಜನರು ಅಲ್ಲಿ ನಿಂತು ಪೂಜೆ ಆರಂಭವಾಯಿತು. ಮಾಸ್ತಿಕಲ್ಲಿಗೆ ಪವಾಡದ ಶಕ್ತಿ ಇದೆಯೆಂದು ಜನ ನಂಬಿದರು. ಹಾಗೆಯೇ ಕ್ರಮೇಣ ಹಣ ಸಂಗ್ರಹವಾಗಿ ಒಂದು ದೇವಸ್ಥಾನವೂ ಎದ್ದಿತು. ಈಗ ಆ ದೇವಸ್ಥಾನದಲ್ಲಿ ಕಾಳಿಕಾದೇವಿಯ ಪ್ರತಿಷ್ಠಾಪನೆಯಾಗಿ ಈಗ ಅನೇಕ ಸನ್ಯಾಸಿಗಳು, ಪೂಜಾರಿಗಳು ಅದರ ಪೂಜೆ ಮಾಡುತ್ತಿದ್ದಾರೆ. ಮಾಸ್ತಿಕಲ್ಲನ್ನು ಹಿಂದಿನ ಸಣ್ಣ ಕೋಣೆಯ ಗೋಡೆಗೆ ಸೇರಿದಂತೆ ಕಟ್ಟಿದ್ದಾರೆ. ಬಲಗೈಯನ್ನು ಎತ್ತಿ ಹಿಡಿದು ಕೆತ್ತನೆ ಇದ್ದು, ಮಾಸ್ತಿಕಲ್ಲಿನ ಕೆಳಬಾಗದಲ್ಲಿ ಚಿಕ್ಕದಾಗಿ ಬಿಲ್ಲು ಬಾಗಿ ಹಿಡಿದ ವೀರ ಮತ್ತು ಅವನ ಹೆಂಡತಿಯನ್ನು ಚಿತ್ರಿಸಿದ್ದಾರೆ. ಕಲ್ಲಿನ ಮೇಲ್ಬಾಗಕ್ಕೆ ನಂದಿ, ಸೂರ್ಯ, ಚಂದ್ರ ಇವುಗಳ ಕೆತ್ತನೆಯೂ ಇದೆ. ಹೀಗೆ ಮಾಸ್ತಿ ಜಾತ್ರೆ, ಉತ್ಸವಗಳು ಪವಾಡಗಳು ಸತಿಪದ್ಧತಿಯ ಅವಶೇಷಗಳನ್ನು ತನ್ನಲ್ಲಿ ಗರ್ಭೀಕರಿಸಿಕೊಂಡು ಇಂದಿಗೂ ಮಹತ್ವದ ದೈವ ಸಂಸ್ಕೃತಿಯ ಅಂಶಗಳಾಗಿ ಉಳಿದಿವೆ.

ಅಡಿಟಿಪ್ಪಣಿಗಳು

೧. E. C. ಕರ್ನಾಟಿಕಾ Vol VIII ಸೊರಬ, ಸಿಗ್ಗಗ್ರಾಮ, ಕಾಲ ೫೫೨

೨. ಅದೇ, ಸೊರಬ, ೧೬೩, ಕಾಲ ೧೪೪೩

೩. M.A.R. ೧೯೨೯, ಮೈಸೂರು, ಮಲದೇವನಹಳ್ಳಿ, ಕಾಲ ೪೨

೪. M.A.R. ೧೯೩೧, ಹೊಸನಗರ, ಸಾಗರ ರಸ್ತೆ ಪಕ್ಕ ನೆಟ್ಟಕಲ್ಲು, ೧೨೩೮, ಎ.ಡಿ.

೫. E. C. Vol VIII ಸೊರಬ, ೫೩೩, ಕಾಲ ೧೪೩೭–

೬. E. C. Vol VIII ಸೊರಬ, ೧೦೪ ಕಾಲ, ೧೩೫೪, ಎ.ಡಿ

೭. ದಿ ಅಕ್ಸಫರ್ಡ್ ಹಿಸ್ಟ್ರಿ ಆಫ್ ಇಂಡಿಯಾ, ವಿನ್ಸಂಟ್ ಸ್ಮಿಥ್, ಪು.೩೦೪

೮. ಬಸವರಾಜ ಕಲ್ಗುಡಿ, ಮಹಾಸತಿ ಆಚರಣೆ ಒಂದು ಅಧ್ಯಯನ, ಪು.೮–೯

೯. ಒರಿಜನ್ ಆಫ್ ಸತಿ, ಸೋಸಿಯಲ್ ಆ್ಯಂಡ್ ಪೊಲಿಟಿಕಲ್ ಲೈಫ್ ಇನ್ ದಿ ವಿಜಯನಗರ ಎಂಪಾಯರ್, ಪು.೨

೧೦. ಸಾಲೆತೊರೆ ಬಿ.ಎ., ನ್ಯೂನಿಜನ ವರದಿ. ಪು.೯೪

೧೧. ಅಲ್ತೇಕರ್ ಎ. ಎಸ್., ದಿ ಪೊಜಿಶನ್ ಆಫ್ ವುಮೆನ್ ಇನ್ ಹಿಂದೂ ಸಿವಿಲೈಜೇಶನ್, ಪು.೧೧೫–೧೧೬

೧೨. ಚಿದಾನಂದಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ೧೯೭೯, ಪು.೩೧೩–೩೧೪

೧೩. ಎಂ. ಎಂ. ಕಲಬುರ್ಗಿ, ಸಮಾಧಿ–ಬಲಿದಾನ–ವೀರ ಮರಣ ಸ್ಮಾರಕಗಳು, ೧೯೮೦, ಪು.೨೫–೨೬

೧೪. ಮಹಾಸತಿ ಆಚರಣೆ ಒಂದು ಅಧ್ಯಯನ, ಬಸವರಾಜ ಕಲ್ಗುಡಿ, ಪು.೩

೧೫. ಬಿ.ಎಸ್.ಶೇಠ, ಕರ್ನಾಟಕದಲ್ಲಿ ಸತಿಪದ್ಧತಿ, ೧೯೯೧ ಪು.೩೪

೧೬. ಕವಿ ಚಕ್ರವರ್ತಿ ಜನ್ನ ವಿರಚಿತ ಅನಂತನಾಥ ಪುರಾಣ, ಪು.೨೭೮

೧೭. ಮಹಾಕವಿ ರನ್ನ ವಿರಚಿತಮಪ್ಪ ಅಜಿತ ತೀರ್ಥಂಕರ ಪುರಾಣ ತಿಲಕಂ, ಪು.೧೦

೧೮. ನಾಗವರ್ಮ ವಿರಚಿತ ಕರ್ನಾಟಕ ಕಾದಂಬರಿ, ಪು.೧೫೦, ವಿಶ್ವಕವಿ ರತ್ನಾಕರವರ್ಣಿ

ಭರತೇಶ ವೈಭವ, ಪು.೫೦೫

೧೯. ಗದಾಯುದ್ಧ ದರ್ಪಣಂ, ಪು.೩೭೬ ; ಹರಿಹರ ಕವಿಯ ಗಿರಿಜಾ ಕಲ್ಯಾಣ ಮಹಾಪ್ರಬಂಧ, ಪು.೨೮೫-೨೯೧; ಕನಕದಾಸರ ಮೋಹನ ತರಂಗಿಣಿ ಸಂಗ್ರಹ, ಪು.೨೫; ಕುಮಾರವ್ಯಾಸ ಮಹಾಕವಿಯ ಕರ್ಣಾಟ ಭಾರತ ಕಥಾಮಂಜರಿ, ಪು.೬೨೧-೬೨೨

೨೦. ಪರಮಶಿವಯ್ಯ ಜೀ.ಶಂ., ಮಾಣಿಕ್ಯಶೆಟ್ಟಿ(ಸಂ), ಆಯ್ದ ಜನಪದ ಕಥೆಗಳು, ಪು.೧೦೭,

೨೧. ಕೊಂಡದ ಚೆನ್ನಮ್ಮ, ಪು.೧೩೮,

೨೨. ಕ. ರಾ. ಕೃ(ಸಂ), ಜನಪದ ಕಥನ ಗೀತೆಗಳು, ಪು.೬೭

೨೩. ಪರಮಶಿವಯ್ಯ ಜೀ.ಶಂ.(ಸಂ), ಜನಪದ ಖಂಡಕಾವ್ಯಗಳು, ಪು.೨೬೧

೨೪. E. C. VIII-೨, ೧೩೪, ಹಿರೇಅವಲಿ, ಸೊರಬ, ಕ್ರಿ.ಶ.೧೪೩೩, ಅದೇ ೧೬೩ ಹರೂರ, ಕ್ರಿ.ಶ.೧೪೪೨

೨೫. ಅದೇ, ೧೦೪, ಹಿರೇಅವಲಿ, ಕ್ರಿ.ಶ.೧೩೫೪, ಎಸ್.ಆಯ್.ಆಯ್.-XVIII, ೪೧೩ ಹೆಡಿಯಾಲ, ರಾಣೇಬೆನ್ನೂರ, ಕ್ರಿ.ಶ.೧೪೦೪

೨೬. ನಾಗೇಗೌಡ ಎಚ್.ಎಲ್., ಪ್ರವಾಸಿ ಕಂಡ ಇಂಡಿಯಾ, ಸಂ-೨, ನಿಕೋಲೊದೆ ಕೊಂತಿ, ಪು.೧೨೫

೨೭. ಅದೇ, ಸಂ.೨, ದು-ಆರ್ತೆ-ಬಾರ್ಬೋಸಾ, ಪು.೧೨೫

೨೮. ಅದೇ, ಗಾಸ್ಪರೋ ಬಾಲ್ಬಿ, ಸಂ-೪, ಪು.೭೮

೨೯. ಅದೇ, ಸಂ-೪, ಪು. ೧೦೭-೧೦೮

೩೦. ಅದೇ, ಸಂ-೪, ಪು.೧೪೨-೧೪೩

೩೧, ಅದೇ, ಸಂ-೮, ಪು.೬೬

೩೨. ಅದೇ, ಪಿಯಾತ್ರೊ ದೆಲ್ಲಾವಲ್ಲೆ, ಸಂ-೪, ಪು.೨೩೪

೩೩. ಚಿದಾನಂದಮೂರ್ತಿ ಎಂ., ಗ್ರಾಮೀಣ ಸೌಭಾಗ್ಯ ಲಕ್ಷಣಗಳು, ಪು.೧೫೩

೩೪. ಚಂಪಾಬಾಯಿ ಡಿ.(ಸಂ), ಹದಿಬದೆಯ ಧರ್ಮ, ಪು.೧೦ ಉದೃತ: ಸೀ. ವೀರಣ್ಣ, ಕನ್ನಡ ಕಾವ್ಯ ಕಂಡ ಹೆಣ್ಣು, ಪು.೧೭೬

೩೫. ಜವರೇಗೌಡ ದೇ.(ಸಂ), ನಳಚರಿತ್ರೆ ಪು.೯೧

೩೬. ದೇವೀರಪ್ಪ ಎಚ್.(ಸಂ), ರಾ. ಚ. ಸಂ.೨, ಪು.೮೮

೩೭. ಮಹೀಶವಾಡಿ ಬಿ.ಬಿ.(ಸಂ), ಸಂಯುಕ್ತ್ವ ಕೌಮುದಿ, ಪು.೯೫

೩೮. ಸಿ.ವೀರಣ್ಣ, ಕನ್ನಡ ಕಾವ್ಯ ಕಂಡ ಹೆಣ್ಣು, ಪು.೧೮೭

೩೯. ಸುಂಕಾಪೂರ ಎಂ. ಎಸ್., ಜೀವನ ಜೋಕಾಲಿ ಭಾಗ–೨, ಸ್ತ್ರೀ ನೀತಿ ಜೋಗುಳ, ಪು.೯೮

೪೦. ಹಾಡ್ಬೇಳ ತಂಗೀ ನೀ ದನಿ ಎತ್ತಿ, (ಸಂ) ಕಾವ್ಯಜೀವಿ, ಮುತ್ತೈದೆತನ, ಪು.೧೦೫(ಉಧೃತ: ಬಿ.ಎಸ್.ಶೇರೆ, ಕರ್ನಾಟಕದಲ್ಲಿ ಸತಿಪದ್ಧತಿ, ಪು.೪೪

೪೧. ಜಂಗಮಕೋಟಿ ಕೃಷ್ಣಶಾಸ್ತ್ರಿ(ಸಂ) ಗಾದೆಗಳ ಭಂಡಾರ, ಭಾಗ–೧, ಪು.೧೪೨

೪೨. ಅಜಿತ ತೀರ್ಥಂಕರ ಪುರಾಣ ತಿಲಕಂ, ಮಹಾಕವಿ ರನ್ನ ವಿರಚಿತಮಪ್ಪ ಪು.೧೦

೪೩. ಕುಮಾರವಾಲ್ಮೀಕಿ ವಿರಚಿತ ತೊರವೆ ರಾಮಾಯಣ, ಸಂ–೨, ಪು.೧೪೦

೪೪. ಹಿರೇಮಠ ಆರ್.ಸಿ.(ಸಂ), ಸಕಲ ಪರಾತನರ ವಚನಗಳು, ಸಂ–೧, ಪು.೪೮೦

೪೫. ಪಂಪಕವಿ ವಿರಚಿತ ಪಂಪಭಾರತಂ, ಪು. ೫೮೬, ನಾಗವರ್ಮ ವಿರಚಿತ ಕರ್ಣಾಟಕ ಕಾದಂಬರಿ, ಪು.೧೪೯, ನಾಗಚಂದ್ರ ವಿರಚಿತ ರಾಮಚಂದ್ರ ಚರಿತ ಪುರಾಣಂ, ೫೦೦, ಕುಮಾರವ್ಯಾಸ ಮಹಾಕವಿಯ ಕರ್ಣಾಟ ಭಾರತ ಕಥಾಮಂಜರಿ ಪು.೮೨, ೩೩೮ ಕುಮಾರ ವಾಲ್ಮೀಕಿ ತೊರವೆ ರಾಮಾಯಣ, ಪು.೪೧, ೨೭೮, ದೇವಪ್ಪ ಕವಿ ವಿರಚಿತ ರಾಮ ವಿಜಯ ಕಾವ್ಯ, ಪು.೧೩೦

೪೬. ಆದಿಪುರಾಣ ಪು. ೧೩೨

೪೭. ಜಂಗಮಕೋಟಿ ಕೃಷಶಾಸ್ತ್ರೀ, ಗಾದೆಗಳ ಭಂಡಾರ ಭಾಗ–೧, ಪು.೧೦, ಬಿ.ಬಿ.ಹಿಂಡಿ, ಎಂ.ಎಸ್.ಲಠ್ಠೆ(ಸಂ), ಉತ್ತರ ಕರ್ನಾಟಕದ ಗಾದೆಗಳು, ಪು.೬೫–೭೭

೪೮. ನಾಗೇಗೌಡ ಎಚ್.ಎಲ್.(ಸಂ), ಪ್ರವಾಸಿಕಂಡ ಇಂಡಿಯಾ, ಸಂ.೫, ಪು.೪೭೧–೪೭೨ ೪೯; ಸುಂಕಾಪೂರ ಎಂ.ಎಸ್., ಬಿ.ಬಿ.ಹೆಂಡಿ(ಸಂ), ಆಯ್ದ ಜನಪದ ಕಥನ ಗೀತೆಗಳು, ಪು.೩೭

೫೦. ಜೀ.ಶಂ.ಪರಮಶಿವಯ್ಯ, ಈರೋಬಿ(ಸಂ), ಜನಪದ ಖಂಡಕಾವ್ಯಗಳು, ಪು.೨೦

೫೧. ಹರಿಹರ ಕವಿಯ ಗಿರಿಜಾ ಕಲ್ಯಾಣ, ಮಹಾಪ್ರಬಂಧ, ಪು.೨೮೬

೫೨. ಎಚ್.ಎಸ್.ಅಚ್ಚಪ್ಪ, ಗ್ರಂಥಸ್ಥ ಗಾದೆಗಳು, ಪು.೧೦೧, ನಿಜಗುಣ ಶಿವಯೋಗಿಗಳ ಕೈವಲ್ಯ ಪದ್ಧತಿ, ಕ್ರಿ.ಶ.೧೫೦೦, ಪು.೪೯೬

೫೩. ಮಹಾಭಾರತ ೧, ೧೩೮, ೭೧–೨

೫೪. ಎಚ್.ಎಲ್.ನಾಗೇಗೌಡ(ಸಂ), ಪ್ರವಾಸಿಕಂಡ ಇಂಡಿಯಾ, ಸಂ–೫ ಪು.೪೭೧–೪೭೨

೫೫. ಚೆನ್ನಕ್ಕ ಎಲಿಗಾರ, ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ, ಪು.೧

೫೬. E.C.VIII-II–೨೬, ಮನೆಮನೆಗ್ರಾಮ, ಸೊರಬ, ಕ್ರಿ.ಶ.೧೪೪೧

೫೭. ಅದೇ, ೩೭, ಗುಂಜನೂರು, ಸೊರಬ.

೫೮. ಎಸ್,ಆಯ್,ಆಯ್, XVIII-೨೭೬, ಕಣವಿ, ಗದಗ, ಕ್ರಿ.ಶ. ೧೪೦೭

೫೯. E.C.VIII-II–೫೬೬, ಹೆಗ್ಗೋಡು, ಸೊರಬ, ಕ್ರಿ.ಶ.೧೪೧೫, ಅದೇ, ೨೫೯, ಕಪ್ಪಟೂರು, ಸೊರಬ, ಅದೇ, ೫೬೫, ಹೆಗ್ಗೊಡು, ಸೊರಬ, ಸು.ಕ್ರಿ ಶ.೧೨೦೦

೬೦. ಎಸ್.ಆಯ್.ಆಯ್, XVIII –೨೬೨, ಬೆನಕನಗೊಂಡ, ರಾಣೆಬೆನ್ನೂರು, ಕ್ರಿ.ಶ. ೧೨೮೪

೬೧. ಬಸವರಾಜ ಕಲ್ಗುಡಿ, ಮಹಾಸತಿ ಆಚರಣೆ ಒಂದು ಅಧ್ಯಯನ, ಪು.೨೫

೬೨. ಎಚ್.ಎಲ್.ನಾಗೇಗೌಡ(ಸಂ) ಪ್ರವಾಸಿ ಕಂಡ ಇಂಡಿಯಾ, ಪು.೧೧೩–೧೨೫

೬೩. E.C. III–೬೦, ಬೆಳತೂರು, ಹೆಗ್ಗಡೆದೇವನಕೊಟೆ, ಕ್ರಿ.ಶ.೧೦೫೭

೬೪. ಮಹಾಕವಿ ಕವಿರತ್ನ ವಿರಚಿತಮಪ್ಪ ಅಜಿತ ತೀರ್ಥಂಕರ ಪುರಾಣ, ಪು.೧೦

೬೫. E.C.VI-೬೬ ಕೋಟೆವೂರು, ಚಿಕ್ಕಮಗಳೂರು, ಕ್ರಿ.ಶ.೧೦೮೯, ಮತ್ತು E.C.III–೬೦, ಬೆಳತೂರು, ಹೆಗ್ಗಡದೇವನಕೋಟೆ, ಕ್ರಿ.ಶ.೧೦೫೭

೬೬. E.C.–VIII-II–೪೬೧ ಬೆನ್ನೂರು, ಸೊರಬ, ಕ್ರಿ.ಶ.೧೪೨೩, ಅದೇ, ೨೯೭, ಹಿರೀಕಬ್ಬೂರು, ಸೊರಬ, ಕ್ರಿ.ಶ.೧೨೨೩

೬೭. ಮಾತನಾಡುವ ಕಲ್ಲು, ಆನಂದಕಂದ ಪು.೬೧

೬೮. ಎಚ್.ಎಲ್.ನಾಗೇಗೌಡ(ಸಂ) ಪ್ರವಾಸಿ ಕಂಡ ಇಂಡಿಯಾ, ಸಂಪುಟ ೨, ಪು.೭೫

೬೯. ಅದೇ, ಸಂ.೪, ಪು.೨೪೭

೭೦. ಕಲಬುರ್ಗಿ ಎಂ.ಎಂ., ಸಮಾಧಿ–ಬಲಿದಾನ–ವೀರಮರಣ ಸ್ಮಾರಕಗಳು, ೧೯೮೦, ಪು.೨೫–೨೬

೭೧. ಎಚ್.ಎಲ್.ನಾಗೇಗೌಡ(ಸಂ), ಪ್ರವಾಸಿಕಂಡ ಇಂಡಿಯಾ, ಸಂ.೫, ಪು.೪೫೭–೪೫೯

೭೨. ಎಚ್.ಎಲ್.ನಾಗೇಗೌಡ(ಸಂ), ಪ್ರವಾಸಿಕಂಡ ಇಂಡಿಯಾ, ಸಂ–೫, ಉಧೃತ: ಬಿ.ಎಸ್.ಶೇಠೆ, ಕರ್ನಾಟಕದಲ್ಲಿ ಸತಿ ಪದ್ಧತಿ, ಪು.೧೨೩

೭೩. ಮಿರರ್ ಜನೇವರಿ, ೧೯೮೧, 'ದಿ ರಿಟರ್ನ ಆಫ್ ಸತಿ', ಎ. ಆರ್. ಶರೀಫ್, ಪು.೨೪

೭೪. ನ್ಯೂ ಲೈಟ್ ಆನ್ ದಿ ಮೋಸ್ಟ್ ಎನ್ಸಿಯಂಟ್ ಈಸ್ಟ್ ಗೋರ್ಡಾನ್ ಚೈಲ್ಡೆ, ಪು.೮೩ ಉಧೃತ: ಬಿ.ಎಸ್.ಶೇಠೆ, ಕರ್ನಾಟಕದಲ್ಲಿ ಸತಿ ಪದ್ಧತಿ, ಪು.೧೨೩

೭೫. ಎಂ.ಚಿದಾನಂದಮೂರ್ತಿ, ಕನ್ನಡ ಶಾಸನಗಳ ಸಂಸ್ಕೃತಿಕ ಅಧ್ಯಯನ, ಪು.೩೧೩

೭೬. 'ದಿ ಸಂಡೇ ಸ್ಟ್ಯಾಂಡರ್ಡ್', ೨೦–೮–೧೯೭೮, 'ಸತಿ ವಾಸ್ ಪ್ರಿವಿಲೆಂಟ್ ಆಲ್ ವೋವರ್ ದಿ ವರ್ಲ್ಡ್, ಇಕ್ಬಾಲ್ ಕೌಲ್

೭೭. ಎ. ಎಸ್.ಅಲ್ತೇಕರ್, ದಿ ಪೊಜಿಷನ್ ಆಫ್ ವುಮೆನ್ ಇನ್ ಹಿಂದೂ ಸಿವಿಲಿಜೇಶನ್, ಪು.೧೨೭–೧೨೮

೭೮. ಟಿ. ಕೆ. ಗಂಗಾಧರ್, ಉತ್ಥಾನ್, ಆಗಸ್ಟ್ ೧೯೮೦, ಅವಶೇಷ, ಪು.೯೨

೭೯. E. C.VIII–II–೮ ಮರೂರ, ಸಾಗರ, ಕ್ರಿ.ಶ.೧೪೧೦

೮೦. E.C.VIII–II–೮ ಮರೂರ, ಸಾಗರ, ೩೩೮, ಕುಣಿತೆಪ್ಪ, ಕ್ರಿ.ಶ.೧೪೫೯

೮೧. ಅದೇ, ೩೬–೩೭, ಗುಂಜನೂರು,

೮೨. ಎಸ್.ಆಯ್.ಆಯ್, VIII –೨೭೬, ಕಣವಿ, ಗದಗ, ಕ್ರಿ.ಶ. ೧೪೦೭

೮೩. ಅದೇ. ೫೬೫, ಹೆಗ್ಗೋಡು, ಕ್ರಿ.ಶ.೧೪೨೪

೮೪. ಜೀ. ಶಂ.ಪರಮಶಿವಯ್ಯ(ಸಂ), ಜನಪದ ಖಂಡಕಾವ್ಯಗಳು, 'ನಾಗವ್ವ', ಪು.೨೫

೮೫. ಅದೇ, ಪು.೨೫

೮೬. ಬಸವರಾಜ ಕಲ್ಗುಡಿ(ಸಂ) , ಮಹಾಸತಿ ಆಚರಣೆ ಒಂದು ಅಧ್ಯಯನ, ಪು.೨೩

೮೭. ಅಗ್ನಿ ಪುರಾಣ, ೧೨೨, ಪು.೭೯೬

೮೮. ಉಲ್ಲೇಖ, ದಿ ಪೊಜಿಶನ್ ಆಫ್ ವೂಮೆನ್ ಇನ್ ಹಿಂದೂ ಸಿವಿಲೈಜೇಶನ್, ಪು.೧೨೬

೮೯. ಅದೇ, ಪು.೧೨೬

೯೦. E.C. VIII-II-೧೦೪, ಹಿರೇಅವಲಿ, ಸೊರಬ, ಕ್ರಿ ಶ.೧೩೫೪

೯೧. ಅದೇ, ೪೯೭, ಕುಂಬತ್ತಿಗ್ರಾಮ, ಕ್ರಿ.ಶ.೧೪೩೨

೯೨. ಅದೇ, ೩೯೭, ಹಿರೀಕಬ್ಬೂರು, ಕ್ರಿ.ಶ.೧೨೨೩

೯೩. ಅದೇ, ೨೧೪, ಜಡ್ಡಿಹಳ್ಳಿ, ಅದೇ, ೫೪೪,

೯೪. ಪಂಪ ಕವಿ ವಿರಚಿತ ಪಂಪಭಾರತಂ, ಪು.೫೦೩

೯೫. ಮಹಾಕವಿ ಕವಿರತ್ನ ವಿರಚಿತಮಪ್ಪ ಅಜಿತನಾಥ ತೀರ್ಥಂಕರ ಪುರಾಣ, ಪು.೧೦

೯೬. ಬ್ರಹ್ಮಶಿವನ ಸಮಯ ಪರೀಕ್ಷೆ, ಪು.೩೮೦

೯೭ ನಯಸೇನ ವಿರಚಿತ ಧರ್ಮಾಮೃತಂ, ಪು.೩೬೧

೯೮. ಸಿರುಮಣ ನಾಯಕನ ಸಾಂಗತ್ಯ, ಪು.೬೭–೬೮

೯೯. ಕೃಷ್ಣಮೂರ್ತಿ ಹನೂರ, ಕತ್ತಾಲದಾರಿ ದೂರ, ಪು.೧೧೫

೧೦೦. ವಡ್ಡಗೆರೆ ನಾಗಮ್ಮ(ಸಂ) ವೈಜಂತಿಮಾಲ, ಪು.೬೮

೧೦೧. ಎಂ.ಚಿದಾನಂದಮೂರ್ತಿ, ಗ್ರಾಮೀಣ, ಪು.೧೨೨

೧೦೨. ಎಚ್.ಎಲ್.ನಾಗೇಗೌಡ(ಸಂ), ಪ್ರವಾಸಿಕಂಡ ಇಂಡಿಯಾ, ಪು.೨೯೧

೧೦೩. ದೇ.ಜವರೇಗೌಡ, ಜಾನಪದ ಸೌಂದರ್ಯ, ಪು.೪೮

೧೦೪. ಕೆ.ಮರಳುಸಿದ್ದಪ್ಪ(ಸಂ), ಲಾವಣಿಗಳು, ಪು.೧೧೩

೧೦೫. ಎಚ್.ಎಲ್.ನಾಗೇಗೌಡ(ಸಂ), ಪ್ರವಾಸಿಕಂಡ ಇಂಡಿಯಾ ಸಂ–೨, ಪು.೫೫

೧೦೬. ಅದೇ, ಸಂ.೫, ಪು.೪೭೨

೧೦೭. ಸಮಗ್ರ ವಚನ ಸಂಪುಟ–೮, ಮಾದಾರ ಧೂಳಯ್ಯನ ವಚನಗಳು, ಸಂಖ್ಯೆ, ೫೮ ಪು.೪೪೦

೧೦೮. ಬಸವಣ್ಣನವರ ಟೀಕಿನ ವಚನಗಳು, ವ–೬೮೦.

೧೦೯. ಸಮಗ್ರ ವಚನ ಸಂಪುಟ ೮, ವ–೫೭, ಪು.೨೯೬

೧೧೦.ಷಣ್ಮುಖಸ್ವಾಮಿ, ಅಖಂಡೇಶ್ವರ ವಚನ, ಪು.೧೩೮

೧೧೧.ನಂಜುಂಡ ಕವಿ ವಿರಚಿತ ರಾಮನಾಥ ಚರಿತ್ರೆ, (ಉತ್ತರಾರ್ಧ) ಸಂ.೩ ಪು.೩೩೬–೩೩೭

೧೧೨.ಸಿದ್ದೇಶ್ವರ ಮಹಾಪುರಾಣ, ಪು.೩೫–೩೬.

೧೧೩.ಸಿರುಮಣ ನಾಯಕನ ಸಾಂಗತ್ಯ, ಪು.೬೭

೧೧೪.ಇಮ್ಮಡಿ ಚಿಕ್ಕ ಭೂಪಾಲನ ಸಾಂಗತ್ಯ, ಪು.೭೦–೭೨

೧೧೫.ಕವಿ ಚಕ್ರವರ್ತಿ ಜನ್ನವಿರಚಿತ ಅನಂತನಾಥ ಪುರಾಣ, ಪು.೨೭೯

೧೧೬.ಜೀ.ಶಂ.ಪರಮಶಿವಯ್ಯ(ಸಂ), ಜನಪದ ಖಂಡಕಾವ್ಯಗಳು, 'ಈರೋಬಿ', ಪು. ಸಂ.೯

೧೧೭.ಕೃಷ್ಣಮೂರ್ತಿ ಹನೂರ, ಕತ್ತಾಲ ದಾರಿ ದೂರ, ಪು.೩೩–೩೫

೧೧೮.ಅದೇ, ಪು.೧೦೬–೧೦೭

೧೧೯.ಅದೇ, ಪು.೯೪

೧೨೦.ಅದೇ, ಪು. ೩೭

೧೨೧.ಜೀ.ಶಂ.ಪರಮಶಿವಯ್ಯ(ಸಂ), ಜನಪದ ಖಂಡ ಕಾವ್ಯಗಳು, ಪು.೨೬

೧೨೨.ಅದೇ, ಪು.೪೦

೧೨೩.ಅದೇ, ಪು.೧೩

೧೨೪.ಅದೇ, ಪು.೧೪

೧೨೫.ಬಸವರಾಜ ಕಲ್ಗುಡಿ, ಮಹಾಸತಿ ಆಚರಣೆ: ಒಂದು ಅಧ್ಯಯನ, ಪು.೧೯೫

೧೨೬.ಕೃಷ್ಣಮೂರ್ತಿ ಹನೂರ ಕತ್ತಾಲ ದಾರಿ ದೂರ, ಪು.೧೫

೧೨೭.ಬಸವರಾಜ ಕಲ್ಗುಡಿ, ಮಹಾಸತಿ ಆಚರಣೆ: ಒಂದು ಅಧ್ಯಯನ, ಪು.೧೯೩

೧೨೮.ಕೃಷ್ಣಮೂರ್ತಿ ಹನೂರ ಕತ್ತಾಲ ದಾರಿ ದೂರ, ಪು.೧೬–೧೭

೧೨೯.ತರಂಗ ೪, ಅಕ್ಟೋಬರ ೧೯೮೭, ಪು.೯

೧೩೦. E.C.III–೬೦, ಬೆಳತೂರು, ಹೆಗ್ಗಡದೇವನಕೋಟೆ, ಕ್ರಿ.ಶ.೧೦೫೭

೧೩೧.ಕೃಷ್ಣಮೂರ್ತಿ ಹನೂರ(ಸಂ), ಕತ್ತಾಲ ದಾರಿ ದೂರ, ಪು.೪೦

೧೩೨.ಮಿರರ್, ೧೯೮೧,ಜನವರಿ,ದಿ ಲಿಜೆಂಡ್ ಆಫ್ ರಾಣಿ ಸತಿ,ವಾಯ್.ಎಸ್.,ಪು.೨೮–೨೯

೧೩೩. ಆನಂದ ಕಂದ, ಮಾತುನಾಡುವ ಕಲ್ಲುಗಳು, ಕಂಕಣ್ಣದ ಕೈ, ಪು.೪೮-೬೧

೧೩೪. ಸಿಂಗಿರಾಜ ಕವಿಕೃತ, ಸಿಂಗಿರಾಜ ಪುರಾಣ, ಸಂಧಿ ೩೯, ಪದ್ಯ-೪೦

೧೩೫. ಎಚ್.ಎಲ್.ನಾಗೇಗೌಡ(ಸಂ), ಪ್ರವಾಸಿಕಂಡ ಇಂಡಿಯಾ, ಸಂ-೨, ಪು.೧೨೬

೧೩೬. ಅದೇ, ಸಂ-೪, ಪು.೧೫೮-೧೫೯

೧೩೭. ಸಿರುಮಣನಾಯಕನ ಸಾಂಗತ್ಯ, ಪು.೬೭-೬೮

೧೩೮. E. C.VIII-೨೫, ನಂ. ೬೫, ಹೆಗ್ಗೋಡು, ಸೊರಬ, ಕ್ರಿ.ಶ.೧೪೨೪

೧೩೯, ಅದೇ, ೪೬೭ ಮಂಗಳೂರು, ಸೊರಬ, ಅದೇ ೫೫, ಮನಗುಂಡಿ, ಕ್ರಿಶ. ೧೩೮೪,

೧೪೦, E. C.VII-೧-೯೩, ಬೆಳಗಾವಿ, ಶಿಕಾರಿಪುರ, ಕ್ರಿ.ಶ. ೧೪೨೨, ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ, ೧೬೭೦, ೭೨, ೭೫-೮೩- ಸಿರುಮಣನಾಯಕನ ಸಾಂಗತ್ಯ, ಪು.೬೭-೬೮

೧೪೧. ಅದೇ, ೧೦೪, ಹೀರೆಅವಲಿಗ್ರಾಮ, ಕ್ರಿ.ಶ.೧೩೫೪, ಅದೇ, ೧೦೬, ಹೀರೆಅವಲಿ, ಕ್ರಿ ಶ. ೧೩೭೬

೧೪೨. E.C.VIII- ೮-೨, ೪೬೧ ಬೆನ್ನೂರು, ಸೊರಬ, ಕ್ರಿ.ಶ.೧೪೨೩

೧೪೩. ಎಂ.ಎ.ಆರ್ ೧೯೩೮, ಟೀ.ನರಸೀಪುರ, ಮೈಸೂರು, ೨೪- ಮಾರ್ಚ್ ೧೮೦೫

೧೪೪. ಎಂ. ಚಿದಾನಂದಮೂರ್ತಿ, ವೀರಗಲ್ಲುಗಳು ಮತ್ತು ಮಾಸ್ತಿಕಲ್ಲುಗಳು, ಪು.೪೩

೧೪೫. ಬಸವರಾಜ ಕಲ್ಗುಡಿ, ಮಹಾಸತಿ ಆಚರಣೆ: ಒಂದು ಅಧ್ಯಯನ, ಪು.೧೪೧

೧೪೬. ಎಂ.ಎ.ಆರ್, ೧೯೨೩, ೮೯ ಮಲಂದೂರು, ಸಾಗರ, ಕ್ರಿ.ಶ. ೧೩೮೬, E. C.VIII ೨-೯೨, ಕುಂಸಿಗ್ರಾಮ, ಸೊರಬ

೧೪೭. E. C.VIII-೬೦, ಬೆಳತೂರು, ಹೆಗ್ಗಡೆದೇವನಕೋಟೆ, ಕ್ರಿ.ಶ.೧೦೫೭

೧೪೮. ಇ.ಆಯ್.VII, ಪು.೨೫

೧೪೯. ಎಚ್.ಎಲ್.ನಾಗೇಗೌಡ(ಸಂ), ಪ್ರವಾಸಿಕಂಡ ಇಂಡಿಯಾ, ಸಂ-೪, ಪು.೨೪೧-೨೪೯

೧೫೦. ಎಂ.ಚಿದಾನಂದಮೂರ್ತಿ, ಕರ್ನಾಟಕದ ಸ್ಥಳನಾಮಗಳು, ಪು.೩೪

೧೫೧. ಎಂ.ಚಿದಾನಂದಮೂರ್ತಿ, ಗ್ರಾಮೀಣ, ಪು.೧೨೦

೧೫೨. ಚನ್ನಕ್ಕ ಎಲಿಗಾರ, ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ, ಪು.೪೫೭

ಅಧ್ಯಾಯ : ಮೂರು

ಕನ್ನಡ ಕಾವ್ಯಗಳಲ್ಲಿ ಸತಿಪದ್ಧತಿ ನಿರ್ವಚನ

೩.೧. ಪ್ರಾಚೀನ ಕಾವ್ಯಗಳಲ್ಲಿ ಸತಿಪದ್ಧತಿ

೩.೨. ಮಧ್ಯಕಾಲೀನ ಸಾಹಿತ್ಯದಲ್ಲಿ ಸತಿಪದ್ಧತಿ

ಅಧ್ಯಾಯ : ಮೂರು

ಕನ್ನಡ ಕಾವ್ಯಗಳಲ್ಲಿ ಸತಿಪದ್ಧತಿ ನಿರ್ವಚನ

ಮನುಕುಲದ ಇತಿಹಾಸವನ್ನು ಅವಲೋಕಿಸುತ್ತಾ ಹೋದಂತೆ ಪ್ರಕೃತಿಯಲ್ಲಿ ಪ್ರತಿ ಜೀವಿಗೂ ಹುಟ್ಟು ಅನಿಶ್ಚಿತವಾದರೂ ಆ ಜೀವಿಗೆ ಸಾವು ನಿಶ್ಚಿತವಾಗಿರುತ್ತದೆ. ಇದು ಪ್ರಕೃತಿ ನಿಯಮವೂ ಆಗಿದೆ. ಇದನ್ನರಿತ ಮಾನವ ಲೌಖಿಕ ಮತ್ತು ಅಲೌಖಿಕ ಮಾರ್ಗಗಳೆರಡನ್ನು ಅನುಸರಿಸಿ ಆತ್ಮ ಬಲಿದಾನ ಮಾಡಿಕೊಂಡಿರುವುದು ತಿಳಿದು ಬರುತ್ತದೆ. ಇಂತಹ ಆತ್ಮಬಲಿದಾನದಲ್ಲಿ ಸ್ತ್ರೀ ಸಮುದಾಯವು ಸತಿಪದ್ಧತಿ ಆಚರಣೆಯ ಕೆಲವು ಮೌಲ್ಯಗಳನ್ನು ಆದರ್ಶಗಳನ್ನು ಅನುಸರಿಸುವುದರ ಮೂಲಕ ತಮ್ಮ ಪ್ರಾಣ ತ್ಯಜಿಸಿದರು. ಇಂತಹ ಆಚರಣೆಯ ಕುರಿತು ಕನ್ನಡ ಕಾವ್ಯಗಳಲ್ಲಿ ನಿರೂಪಿತವಾದ ಸಂಗತಿಗಳನ್ನು ಪ್ರಾಚೀನ ಕಾವ್ಯಗಳಲ್ಲಿ ಸತಿಪದ್ಧತಿ ಹಾಗೂ ಮಧ್ಯಕಾಲೀನ ಸಾಹಿತ್ಯದಲ್ಲಿ ಸತಿಪದ್ಧತಿ ಎಂದು ವರ್ಗೀಕರಿಸಿಕೊಂಡು ಅಧ್ಯಯನ ಮಾಡಲಾಗಿದೆ.

೩.೧. ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಸತಿಪದ್ಧತಿ

ಪ್ರಾಚೀನ ಕನ್ನಡ ಕಾವ್ಯಗಳಾದ ವಿಕ್ರಮಾರ್ಜುನ ವಿಜಯದಲ್ಲಿ ಮಾದ್ರಿ, ಅಜಿತನಾಥ ತಿರ್ಥಂಕರ ಪುರಾಣದಲ್ಲಿ ಗುಂಡಮಬ್ಬೆ, ಅನಂತನಾಥ ಪುರಾಣದಲ್ಲಿ ಚಂಡಶಾಸನ ಪತ್ನಿಯರು, ಕರ್ನಾಟಕ ಕಾದಂಬರಿಯಲ್ಲಿ ಮಹಾಶ್ವೇತೆ, ಧರ್ಮಾಮೃತದಲ್ಲಿ ಚಂದ್ರಲೇಖೆ, ಕೊಂಡ ಹೋದದ್ದರ ವಿವರಣೆಯನ್ನು ಉಲ್ಲೇಖಿಸುವ ಮೂಲಕ ಸತಿಪದ್ಧತಿಯನ್ನು ಸೂಚಿಸುತ್ತವೆ. ಸುವರ್ಣಯುಗ ವೆನಿಸಿಕೊಂಡ ಕಾಲದಲ್ಲಿ ವೀರತ್ವದ ಮೌಲ್ಯವನ್ನು ಎತ್ತಿ ಹಿಡಿದು ಯುದ್ಧ ಭೂಮಿಯಲ್ಲಿ ವೀರರು ಹೋರಾಡುತ್ತಾ ಮಡಿದರೆ ಅಂತಹ ವೀರರ ಮಡದಿಯರು ವೀರನಾರಿಯರಾಗಿ ಸತಿಧರ್ಮವನ್ನು ಒಂದು ಮೌಲ್ಯವಾಗಿಸಿಕೊಳ್ಳುವುದರ ಮೂಲಕ ಅವರು ತಮ್ಮ ಗಂಡಂದಿರೊಡನೆ ಮರಣ ಪಡೆಯುತ್ತಿದ್ದರು. ಇದನ್ನು ಪಂಪ ಕವಿ

"ಅದಟಂ ಕೊಂಡಾಡದೆ ಬೇ
ಡಿದವರ್ಗೀಯದೆ ಮರೆಗೆಎವಂದರಂಕಾಯದೆನೀ
ಳ್ದೊವಿದ ಜಸಮನು ಪಾರ್ಜಿ
ದಥಮನದೇತರ್ಕೆ ಬಾರ್ತೆ ಜೀವನ್ಮೃತಕಂ"[೧]

ವೀರಯುಗದಲ್ಲಿ ಸೈನಿಕರಿಗೆ 'ಯುದ್ಧದಲ್ಲಿ ಗೆದ್ದರೆ ವೀರಶ್ರೀ ಸತ್ತರೆ ಸ್ವರ್ಗದ ಅಪ್ಸರೆಯರು' ಎಂಬ ಕಲ್ಪನೆಯಿತ್ತು. ಈ ಕಲ್ಪನೆಯು ಸತಿಪದ್ಧತಿಗೆ ಮೂಲ ಕಾರಣವಾಯಿತು. ಇಂತಹ ಸಂಗತಿಗಳನ್ನಾಧರಿಸಿದ ಸತಿಪದ್ಧತಿಯ ಆಚರಣೆಯನ್ನು ಪ್ರಾಚೀನ ಕವಿಗಳು ತಮ್ಮ ಕಾವ್ಯಗಳಲ್ಲಿ ಉಲ್ಲೇಖಿಸಿರುವುದನ್ನು ಕಾಣಬಹುದು. ಪ್ರಾಚೀನ ಕನ್ನಡ ಕಾವ್ಯಗಳನ್ನು ಕುರಿತು ಅಧ್ಯಯನ ಮಾಡಿದಾಗ ಸಹಗಮನದ ಕುರಿತು ಮೊದಲು ಉಲ್ಲೇಖಿತವಾಗಿರುವುದು ಮಹಾಭಾರತದ ಮಾದ್ರಿಯದಾಗಿದೆ. "ಪಾಂಡು ರಾಜನೊಡನೆ ದಾಹೋತ್ತರದಂತೆ ಕಿರ್ಚಿಗೆ ಕುಲದೊಳಂ ಚಲದೊಳಮಾವ ಕುಂದುಮಿಲ್ಲದೆ ತನ್ನೊರಂಗಂ ದೊರೆಗಮಾರುಮಿಲ್ಲೆನಿಸಿ"[೨] ಸತಿಯಾದಳು ಎಂದು ಬರುತ್ತದೆ. ಇಲ್ಲಿ ಪಾಂಡುರಾಜ ತೀರಿಕೊಂಡಾಗ ವೈರಾಗ್ಯಕ್ಕೆ ಒಳಗಾಗಿ ಅವಳು ಅದೇ ಸಮಯದಲ್ಲಿ ಸಾವನ್ನಪ್ಪಿರಬೇಕೆಂದು ಸಂದೇಹಿಸಲಾಗಿದೆ. ಕಾರಣ ಪಾಂಡುರಾಜನ ಸಾವಿಗೆ ಅವಳು ನಿಮಿತ್ತವೂ ಆಗಿರುತ್ತಾಳೆ. ಆದ್ದರಿಂದ ಇವರೀರ್ವರ ಶವವನ್ನು ಮಹಾಭಾರತದಲ್ಲಿ ಹಸ್ತಿನಾಪುರಕ್ಕೆ ಒಟ್ಟಿಗೆ ತೆಗೆದುಕೊಂಡು ಹೋದದ್ದರ ಬಗ್ಗೆ ಉಲ್ಲೇಖವಿದೆ.[೩] ಇಲ್ಲಿ ಸಹಗಮನವನ್ನು ವೈಭವೀಕರಿಸುವ ಅನೇಕ ಉದಾಹರಣೆಗಳು ಕಾಣಸಿಗುತ್ತವೆ. ಇದೇ ಕಾವ್ಯದಲ್ಲಿ ಸ್ತ್ರೀಯರು ಪತಿ ಮಡಿದ ನಂತರ ಸ್ವರ್ಗದಲ್ಲಿರುವ ತಮ್ಮ ಪತಿಯನ್ನು ಸೇರಲು, ಸತಿಯರು ಅಗ್ನಿಕೊಂಡವನ್ನು ತುಂಬಾ ಅಲಂಕಾರದೊಡನೆ ಸಿದ್ಧಪಡಿಸಿ ಅಗ್ನಿಯನ್ನು ಪ್ರವೇಶಿಸುತ್ತಿದ್ದರು ಎಂಬ ಮಾತು ಬರುತ್ತದೆ. ಹೀಗೆ ಮಾದ್ರಿಯು ಅಗ್ನಿಕೊಂಡವನ್ನು ತುಂಬಾ ಅಲಂಕಾರದೊಡನೆ ಸಿದ್ಧಪಡಿಸಿ ಕೊಂಡ ಹೋದಳೆಂಬ ಉಲ್ಲೇಖ ಬರುತ್ತದೆ.

ಪಾಂಡವರ ಪಡೆಯಲ್ಲಿ ಮಾದ್ರಿಯ ಸಹಗಮನದ ಉದಾಹರಣೆ ಒಂದಡೆಯಾದರೆ, ಕೌರವರ ಸಾವಿನ ಬೆನ್ನಲ್ಲೇ ಅವರ ಪತ್ನಿಯರು ಗಂಗಾನದಿಯಲ್ಲಿ ಧುಮುಖಿ ಜಲಸಮಾಧಿ ಹೊಂದಿದರೆನ್ನುವುದು ಸಹಗಮನದ ಇನ್ನೊಂದು ರೂಪವಾಗಿರಬಹುದು ಎಂಬ ಉಲ್ಲೇಖ ಬರುತ್ತದೆ. ರಾಮಾಯಣ ಮಹಾಕಾವ್ಯದಲ್ಲೂ ಇದಕ್ಕೆ ಸೂಚನೆ ಇದೆ. ದಶರಥ ಮಹಾರಾಜ ತೀರಿಕೊಂಡಾಗ ಅವನ ಪತ್ನಿ ರಾಣಿ ಕೌಶಲ್ಯ ಸ್ವಯಂ ಪ್ರೇರಿತಳಾಗಿ ತಾನೂ ಅಗ್ನಿ ಪ್ರವೇಶಿಸಲು ಕೇಳುತ್ತಾಳೆ. ಒಟ್ಟಿನಲ್ಲಿ ಸತಿ ಹೋಗುವ ಸಂಪ್ರದಾಯ ಯಾವುದೋ ಕಾಲಘಟ್ಟದಲ್ಲಿ ಮಹಾಕಾವ್ಯದ ಚೌಕಟ್ಟಿನೊಳಗೆ ಸೇರಿವೆ ಎಂಬುವುದನ್ನು ಉದಾಹರಣೆಗಳಿಂದ ತಿಳಿಯಬಹುದು.

ಮಹಾಕವಿ ಪಂಪ ರಚಿಸಿದ 'ಆದಿಪುರಾಣ'ದಲ್ಲಿ ಸತಿಯರು ವಿಧವೆಯರಾದರೆ ಅವರನ್ನು ಅತ್ಯಂತ ಅಮಾನವೀಯ ದೃಷ್ಟಿಕೋನದಲ್ಲಿ ನಡೆಸಿಕೊಳ್ಳುತ್ತಿದ್ದರೆಂದು ಉಲ್ಲೇಖಿಸಲಾಗಿದೆ. ಇಲ್ಲಿ ಲಲಿತಾಂಗನ ಸಾವಿನಿಂದ ಸ್ವಂಪ್ರಭೆಗೆ ಉಂಟಾದ ಸ್ಥಿತಿಯನ್ನು ವರ್ಣಿಸುವಾಗ ವಿಧವಾವಸ್ಥೆಯ ನೈಜ ಚಿತ್ರಣವನ್ನು ಪಂಪ ಹೀಗೆ ಹೇಳುತ್ತಾನೆ.

"ಅಲಕಂ ಮಂದಾರ ಶೂನ್ಯಂಕದಪುಮಕರಿಕಾಪತ್ರ ಶೂನ್ಯಂ ಲಲಾಟಂ
ತಿಲಕಾಳಂಕಾರಶೂನ್ಯಂಘನಕುಚಯುಗಳಂ ಹಾರಶೂನ್ಯಂ ನಿತಂಬಂ
ಕಲಕಾಂಚೀದಾಮಶೂನ್ಯಂಚರಣ ಯುಗಳಮುಂನೂಪುರಾಳಾಪಶೂನ್ಯಂ
ಲಲಿತಾಂಗಂ ಪೋದೊಡಾಯ್ತಾಕೆಗೆದಿವಮನಿತುಂನಿರ್ಜ(ನಾ)ರಣ್ಯಶೂನ್ಯಂ"[೪]

ಇದೇ ರೀತಿ ಶಾಸನಗಳು ಕೂಡ 'ವೈರಿವಧೂವೈಧವ್ಯ ದೀಕ್ಷಾಗುರು' 'ರಿಪುಯುವತೀ ವೈಧವ್ಯ ಶೀಳಶಿಕ್ಷಾದಕ್ಷ' 'ವೀರೋಧಿವೀರವನಿತಾ ವೈಧವ್ಯಾನಳ'ಎಂದು ಹೇಳುವುದರ ಹಿನ್ನೆಲೆಯಲ್ಲಿ ವಿಧವಾವಸ್ಥೆಯನ್ನು ಸಮಾಜದಲ್ಲಿ ಅತ್ಯಂತ ಕೀಳಾಗಿ ಕಾಣುತ್ತಿದ್ದರೆಂಬ ಉದಾಹರಣೆಗಳಿವೆ, ಇದರಿಂದ ನೊಂದ ಸತಿಯರು ಗಂಡನೊಂದಿಗೆ ಸಹಗಮನ ಹೊಂದಿ ಮಹಾಪತಿವ್ರತೆಯರೆನಿಸಿ ಕೊಳ್ಳುವುದೇ ಶ್ರೇಷ್ಠ ಎಂದು ನಿರ್ಧರಿಸುತ್ತಿದ್ದರೆಂಬ ಉಲ್ಲೇಖಗಳಿವೆ.[೫] ಕ್ರಿ.ಶ.ಸು.೯೪೫ರಲ್ಲಿ ಮಹಾಕವಿ ಪಂಪ ಬರೆದ ಇನ್ನೊಂದು ಮಹಾಕಾವ್ಯ 'ವಿಕ್ರಮಾರ್ಜುನ ವಿಜಯ' ಈ ಕಾವ್ಯದಲ್ಲಿ ಪಾಂಡು ರಾಜನು ಮರಣ ಹೊಂದಿದಾಗ ಮಾದ್ರಿ "ನಿನ್ನೊಡನೆವಂದು ದಿನದೊಳ್ ನಿನ್ನ ಮನೋರಥ ಮನರಸನೆರಪದೆ ಮಾಣ್ದೆಂ"ಎಂದು ಹೇಳುವ ಮಾತುಗಳಲ್ಲಿ ಸಹಗಮನದ ಚಿತ್ರಣವಿದೆ. ಹತ್ತನೆಯ ಶತಮಾನದ ಅವಧಿಯಲ್ಲಿ ಗಂಡಂದಿರ ಮೃತ ಶರೀರಗಳೊಂದಿಗೆ ಸತಿ ಹೋಗುತ್ತಿದ್ದ ಪತ್ನಿಯರ ಚಿತ್ರಣ ಕವಿಯ ಕಣ್ಣ ಮುಂದೆ ಇದ್ದಂತಿದೆ. ಇದೇ ಕಾವ್ಯದಲ್ಲಿ ಯುದ್ಧ ಪ್ರಸಂಗವೊಂದರಲ್ಲಿ ವೀರನೊಬ್ಬನು ಮಡಿದು ಸ್ವರ್ಗ ಸ್ತ್ರೀಯರನ್ನು ಕೂಡಬಹುದು ಎಂದು ತರ್ಕಿಸಿದ ಆತನ ಪತ್ನಿಯು ತನ್ನ ಸಾವನ್ನು ತಾನೇ ನಿಷ್ಕರ್ಷಿಸಿಕೊಂಡಿರುವುದನ್ನು ಪಂಪ ಹೀಗೆ ಚಿತ್ರಿಸುತ್ತಾನೆ.

"ತಾಂ ಗಡ ನಾಳೆ ಪೋಗಿ ದಿವಿಜಾಂಗನೆಯೊಳ್ ತೊಡರ್ದಿರ್ಪನಿಲ್ಲಿ ಮಾ
ಣ್ದಾಂ ಗಡಮಿರ್ಪೆನಂತನಿತು ಬೆಳ್ಳೆನೆ ಮುನ್ನಮೆ ಪೋಗಿ ನಲ್ಮೆಗೆ।
ಲ್ಲಂಗೊಳೆ ದೇವಲೋಕದೊಳಧೀಶನನಾನಿದಿರ್ಗೊಳ್ವೆನೋವೊ ಸ
ಗ್ಗಂಗಳೊಳಿರ್ಪ ದೇವಡಿ ತೋಳ್ತಿರೊಳಳ್ತಿಯನಾಗಲೀವೆನೇ॥"[೬]

ಕೈದವಮಿಲ್ಲದ ನಲ್ಮೆಯಂ ನಾಲಗೆಯ ತುದಿಗೆ ತಂದು ನುಡಿದಳ್. ಇಲ್ಲಿ ಪತಿಯು ಮಡಿದು ಸ್ವರ್ಗ ಸ್ತ್ರೀಯರನ್ನು ಕೂಡುವ ಮೊದಲೇ ಆತನ ಪತ್ನಿಯು ತನ್ನ ಸಾವನ್ನು ತಾನೇ

ನಿಷ್ಕರ್ಷಿಸಿಕೊಂಡಿರುವುದನ್ನು ಹಾಗೂ ದೇವಕನ್ನಿಕೆಯರು ತನ್ನ ಪತಿಯನ್ನು ಪಡೆಯುವರೆಂಬ ಕಲ್ಪನೆಯ ಹಿನ್ನೆಲೆಯಲ್ಲಿ ಪತ್ನಿಯರು ಸತಿಯಾಗುತ್ತಿದ್ದುದನ್ನು ಸೂಕ್ಷ್ಮವಾಗಿ ವಿವರಿಸಿದ್ದಾರೆ.

ಒಂದನೇ ನಾಗವರ್ಮನ ಕಾಲ ಸು.೯೯೦ ಈತನು ರಚಿಸಿದ 'ಕರ್ನಾಟಕ ಕಾದಂಬರಿ' ಯಲ್ಲಿಯೂ ಸತಿಯರ ಸಹಗಮನದ ಉಲ್ಲೇಖಗಳಿವೆ. ಇಲ್ಲಿ ಮಹಾಶ್ವೇತೆಯ ಗಂಡನಾದ ಪುಂಡರೀಕ ಮರಣವನ್ನು ಪಡೆದಿದ್ದಾಗ ಮಹಾಶ್ವೇತೆಯು ಸತಿ ಹೋಗಬೇಕೆಂದು ನಿರ್ಧರಿಸಿ ಸಹಗಮನ ಪಡೆಯಲು ಸಿದ್ಧತೆ ಮಾಡಿಕೊಳ್ಳುವ ವಿವರಗಳಿವೆ.[೭] ಆದರೆ ಇದನ್ನು ಕಂಡ ಚಂದ್ರಪೀಡನು ಈ ಸಹಗಮನ ಮರಣವನ್ನು ತಡೆಯುತ್ತಾನೆ. ಈ ವಿಚಾರ ಕರ್ನಾಟಕ ಕಾದಂಬರಿಯಲ್ಲಿ ಹೀಗೆ ಅಭಿವ್ಯಕ್ತಗೊಂಡಿದೆ.

"ಸತ್ತವರೇರ್ವರೆ ಪರೋಡ
ಸತ್ತರೆ ತಮ್ಮರಿತನಳವಿಯಂಮರ್ಗಿಸಲೆಂ
ದುತ್ತವಳಿಕೆಯೊಳೆಸಾವರ್
ಸತ್ತವರವರ್ಗಾವಹಿತಮನಾಚರಿಸುವರೋ"

ಇಲ್ಲಿ ಚಂದ್ರಪೀಡನು ಮಹಾಶ್ವೇತೆಯ ಸಹಗಮನವನ್ನು ಬುದ್ಧಿವಾದದ ಮಾತುಗಳನ್ನು ಹೇಳುವ ಮೂಲಕ ತಡೆಯುತ್ತಾನೆ. ಅವನು ಹೇಳುವ ಹಾಗೇ ಸತ್ತಗಂಡನ ಜೊತೆಗೆ ಸಹಗಮನ ಮಾಡಿದರೆ ಸತ್ತವರು ಏಳುತ್ತಾರೆಯೇ? ತಮ್ಮ ದುಃಖದ ಭಾರವನ್ನು ಅಡಗಿಸಬೇಕೆಂಬ ಒಂದು ಕಾತರದಲ್ಲಿ ಕೆಲವರು ಗಂಡನ ಜೊತೆಯಲ್ಲಿ ಸಾಯುತ್ತಾರೆ. ಅಂತಹವರು ಸಾಯುವುದರಿಂದ ಸತ್ತವರಿಗೆ ಯಾವ ಉಪಕಾರ ಮಾಡಿದಂತಾಗುತ್ತದೆ. ಇದ್ದರಾದರೂ ಅವರು ಸತ್ತವರಿಗೆ ತರ್ಪಣವನ್ನಾದರೂ ನೀಡಬಹುದೆಂದು, ಜೀವಿತಾವಧಿಯಲ್ಲಿ ಪುಣ್ಯಕಾರ್ಯಗಳನ್ನು ಮಾಡಿದರೆ ಮುಕ್ತಿಯಾದರೂ ಸಿಗುವುದು ಎಂದು ಹೇಳುವ ಮೂಲಕ ಸಹಗಮನ ಮರಣವನ್ನು ತಡೆಯಲು ಪ್ರಯತ್ನಿಸಿದನೆಂಬ ಉಲ್ಲೇಖವಿದೆ.

ಕವಿ ರನ್ನನ ಕಾಲ ಕ್ರಿ.ಶ.೯೯೦ ಈತ ರಚಿಸಿದ 'ಅಜಿತನಾಥ ತೀರ್ಥಂಕರ ಪುರಾಣ'ದಲ್ಲಿ ಗುಂಡಮಬ್ಬೆಯ ಸಹಗಮನವನ್ನು ಉಲ್ಲೇಖಿಸಿದ್ದಾನೆ. ಚಾಲುಕ್ಯ ಚಕ್ರವರ್ತಿ ಅಹವಮಲ್ಲದೇವನ ಭುಜಾದಂಡದಂತೆ ಇದ್ದ ನಾಗದೇವನು ಮರಣ ಹೊಂದಿದಾಗ ಪತ್ನಿ ಗುಂಡಮಬ್ಬೆ "ಇನಿಯ ಕೊಂಡು ಚಿತಮಾಗೆ ಚಿತಾವಗ್ನಿಯೋಳಣಿಮಿಸತ್ತ ಸಜ್ಜನಿಕೆಯ ಪೆಂಪು"[೮] ಎಂದು ಬಣ್ಣಿಸಿರುವುದನ್ನು ಇಲ್ಲಿ ಗಮನಿಸಬೇಕು. ವಿಧವಾ ಸ್ತ್ರೀಯರಿಗೆ ಎರಡು ಮಾರ್ಗಗಳನ್ನು ಹೇಳುತ್ತಾನೆ. ಒಂದು ಜಿನದೀಕ್ಷೆ ತೆಗೆದುಕೊಂಡು ವ್ರತಾಚರಣೆಯಲ್ಲಿ ನಿರತರಾಗುವುದು. ಇನ್ನೊಂದು ಶುಭಚರಿತದಿಂದ

ಮರಣ ಹೊಂದುವುದು ಅಂದರೆ ಮಹಾಸತಿಯಾಗುವುದು. ಈ ಎರಡು ಮಾರ್ಗಗಳನ್ನು ಕುರಿತು ಚಿಂತಿಸಿದ ಗುಂಡಮಬ್ಬೆಯು ಅತ್ತಿಮಬ್ಬೆಯಲ್ಲಿಗೆ ಬಂದು'ನಾಗದೇವನೊಡನಾಂ ಬೆಸವೇಳ್ದಪನೆಂದು ಬೇಡಿಕೊಂಡಿನಿಯನನಪ್ಪಿಕೊಂಡು ಚಿತಮಾಗೆ ಚಿತಾಗ್ನಿಯೊಳಣ್ಮಿ ಸತ್ತಳು'.ಇಲ್ಲಿ ಸತಿ ಹೋದ ಗುಂಡಮಬ್ಬೆಯು ಪತಿಯನ್ನು ಅಗಲಿರಬಾರದೆಂಬ ಕುಲವಧುವಿನ ಆಚರಣೆಯ ನೆಲೆಯಿಂದಾಗಿದೆ. ಈ ವಿಷಯ 'ಅಜಿತನಾಥ ತೀರ್ಥಂಕರ ಪುರಾಣ' ಕಾವ್ಯದಲ್ಲಿ ಹೀಗೆ ಅಭಿವ್ಯಕ್ತಗೊಂಡಿದೆ.

ಎರಡೆ ವಲಂ ಕುಲವಧುಗಾ
ಚರಿಸಲ್ ಪತಿಯಿಂ ಪರೋಕ್ಷದೊಳ್ ಜಿನದೀಕ್ಷಾ
ಚರಣಂ ಮೇಣ್ ಶುಭಚರಿತದೆ
ಮರಣಂ ಮೇಣಳಿಪಿನನಿಂದೆ ಬಾಳ್ವುದು ದೊರೆಯೇ (೧-೪೬)
ನಿನಗೆ ಮಗಂ ಜಗತ್ತಿಲಕನಿರ್ದಪನಕ್ಕ ಮಗಂ ಸಮರ್ಥನ
ಪ್ಪಿನವಿರು ನಾಗದೇವನೊಡನಾಂ ಬೆಸಕೇಳ್ದಪೆನೆಂದುಬೇಡಿಕೊಂ
ಡಿನಿಯನನಪ್ಪಿಕೊಂಡು ಚಿತಮಾಗೆ ಚಿತಾಗ್ನಿಯೊಳಣ್ಮಿ ಸತ್ತ ಸ
ಜ್ಜನಿಕೆಯ ಪೆಂಪು ಸಜ್ಜನಕೆ ಬಣ್ಣಿಸೆ ಸಂದುದು ಗುಂಡಮಬ್ಬೆಯಾ

ಇಲ್ಲಿ ಅತ್ತಿಮಬ್ಬೆಗೆ ಮಗನಿದ್ದ ಕಾರಣ ಗುಂಡಮಬ್ಬೆಯು "ನಾಗದೇವನೊಡನಾಂ ಬಸವೇರ್ಧಿಪೆನೆಂದು ಬೇಡಿಕೊಂಡಿನಿಯನಪ್ಪಿಕೊಂಡು ಚಿತಮಾಗೆ ಚಿತಾಗ್ನಿಯೊಳಣ್ಮಿ ಸತ್ತಳು."[೧೦] ಇದನ್ನು ಕಂಡು ಸಾವನ್ನಪ್ಪಿದ ಅವಳನ್ನು ಗುಂಡೆಲ್ಲಂ ಹೊಗಳುತ್ತದೆ ಎಂದು ಉಲ್ಲೇಖಿಸಿದ್ದಾನೆ. ಅಲ್ಲದೇ ಒಡಸತ್ತು ಪತಿವ್ರತೆ ಗುಂಡಮಬ್ಬೆ ಸೌಂದರ್ಯಸುಭಟಂಗೆ ಸಗ್ಗದೊಳಮಿಲ್ಲಿ ಮನಃಪ್ರಿಯೆಯಾದ ಳೆಂದು ಮಚ್ಚರಿಸುವರಿಂದ್ರಸೌಂದರಿಯರು ಎಂದು ಅಂತಿರ್ವರು ಗಿರ್ವಾಣಲೋಕದೊಳ್ ದಂಪತಿಗಳಾಗೆ ಇಲ್ಲಿ ದೇವಕನ್ನಿಕೆಯರು ಸಾವನ್ನಪ್ಪಿದ ವೀರನಾಗದೇವನು ತಮ್ಮವನಾಗದೇ ಸತಿ ಹೋದ ಗುಂಡಮಬ್ಬೆಯವನಾಗಿಯೇ ಉಳಿದುದನ್ನು ಕಂಡು ಮತ್ಸರಪಡುತ್ತಿದ್ದರು ಎಂದು ರನ್ನನು ತನ್ನ ಅಪೂರ್ವವಾದ ಕಲ್ಪನೆಯ ಮೂಲಕ ಕಾವ್ಯದಲ್ಲಿ ವಿವರಣೆಯನ್ನು ನೀಡಿರುವುದು ಮನಮೋಹಕವಾಗಿದೆ. ಇದೇ ಕಾವ್ಯದಲ್ಲಿ ಸಗರನ ಪತ್ನಿಯರು ತಮ್ಮ ಮಕ್ಕಳೆಲ್ಲರೂ ಮರಣ ಹೊಂದಲಾಗಿ ಪತಿಯನ್ನು ಹೀಗೆ ಕೇಳಿಕೊಳ್ಳುತ್ತಾರೆ.

"ಒಗೆದ ಪತಿವಿರಹತಾಪದೆ
ಪುಗಲಿರ್ದರ್ ಜಿನಗೃಹಂಗಳಂ ಶಿಖಿಶಿಖೆಯಂ

ಪುಗಲಿರ್ದ ಸೊಸೆವಿರೆಲ್ಲರ

ಮೊಗಂಗಳಂ ದೇವ ನೋಡಿ ಕರುಣಿಸಬೇಡ"[೧೧]

ಇಲ್ಲಿ ಸಗರನ ಸೊಸೆಯರೆಲ್ಲ ಗಂಡಂದಿರ ಮರಣವನ್ನು ತಿಳಿದು ಜಿನಗೃಹಗಳನ್ನು ಶಿಖಿಶಿಖೆಯನ್ನು ಪ್ರವೇಶಿಸುವ ಸಿದ್ಧತೆಯಲ್ಲಿ ಇದ್ದರೆಂಬುವುದು ತಿಳಿದು ಬರುತ್ತದೆ. ಮಹಾಭಾರತದಲ್ಲಿ ಬರುವ ಮಾದ್ರಿಯ ಪ್ರಸಂಗ ಮತ್ತು ಗುಂಡಮಬ್ಬೆಯ ಪ್ರಸಂಗಗಳು ಎರಡು ಭಿನ್ನ ವಾತಾವರಣದಲ್ಲಿ ನಡೆದ ಒಂದೇ ಮನೋಧರ್ಮದ ಕ್ರಿಯೆಗಳೆಂಬುದನ್ನು ಇಲ್ಲಿ ಗಮನಿಸಬಹುದು. ವಿಧವೆಯಾದ ಮಾದ್ರಿ " ಪಾಂಡು ರಾಜನೊಡನೆ ದಾಹೋತ್ತರದಂತೆ ಕಿರ್ಬಿಗೆ ಕುಲದೊಳಂ ಚಲದೊಳಮಾವ ಕುಂದುಂಮಿಲ್ಲದೆ ತನ್ನೊರಂಗಂ ದೊರೆಗಮಾರುಮಿಲ್ಲೆನಿಸಿ"[೧೨] ಸತಿಯಾದಳು. ಗುಂಡಮಬ್ಬೆಯೂ ಅತ್ತಿಮಬ್ಬೆಯನ್ನು ಬದುಕಿರುವಂತೆ ಹೇಳಿ ಗಂಡನೊಡನೆ ಅಗ್ನಿಪ್ರವೇಶ ಮಾಡಿದಳು ಎಂದು ಬರುತ್ತದೆ. ಗುಂಡಮಬ್ಬೆ ಮಹಾಸತಿಯಾದರೆ, ಅತ್ತಿಮಬ್ಬೆ ಜಿನದೀಕ್ಷೆ ಪಡೆದು ವ್ರತಾಚರಣೆಯಲ್ಲಿ ಜೀವನ ಕಳೆಯುತ್ತಾಳೆ ಎಂಬುವುದನ್ನು ಗಮನಿಸಬಹುದು.

ನಯಸೇನ ಈತನ ಕಾಲ ಸು.೧೧೧೨ ಈತ 'ಧರ್ಮಾಮೃತ' ಎಂಬ ಚಂಪೂ ಕಾವ್ಯ ರಚಿಸಿದ. ಈ ಕಾವ್ಯದಲ್ಲಿ ಗಂಡ ಪ್ರಮಾದಿ ಕುಮಾರನಿಗೆ ಯುದ್ಧದಲ್ಲಿ ಸಾವು ನಿಶ್ಚಿತವೆಂದು ತಿಳಿದು, ಪತ್ನಿ ಚಂದ್ರಲೇಖೆಯು "ಪತಿವ್ರತಾಗುಣಕ್ಕಂ ದರ್ಶನಕ್ಕಂ ಹಾನಿಯಾಗಲೀಯದೆ ಸಾವೆನೆಂದು ಬಗೆಯುತ್ತಾಳೆ".[೧೩] ಅದೇ ರೀತಿ ಧನಕೀರ್ತಿ ಎಂಬ ಕಥೆಯಲ್ಲಿ ಪತಿ ಶ್ರೀದತ್ತನು ಮೃತನಾಗಲು ಪತ್ನಿ ವಿಶಾಖೆಯು "ಫಲರುಂ ಬೇಡ ಬೇಡನೆ ಮನದಳಲಿಂದಿರಲಾರದೆ ವಿಷಪೂರಿತಮಪ್ಪ ಲಡ್ಡುಗೆಗಳಂ ತಿಂದು ಸಾಯುತ್ತಾಳೆ".[೧೪] ಹೀಗೆ ಇನ್ನೊಂದು ಕಥೆಯಲ್ಲಿ ಬೆಸ್ತಗಾರನು ಜೈನ ವೃತ ಹಿಡಿದಾಗ, ಹಾವು ಕಡಿದು ಸಾಯುತ್ತಾನೆ. ಅವನ ಪತ್ನಿ ಘಂಟೆಯೂ ಗಂಡನೊಡನೆ ಸಾಯುತ್ತಾಳೆ.[೧೫] ಮತ್ತೊಂದು ಕಥೆಯಲ್ಲಿ ಸಮುದ್ರ ಶೆಟ್ಟಿ ಸಾಯಲಾಗಿ, ಅವನ ಪತ್ನಿ ಧನದೆಯು ಗರ್ಭಿಣಿಯಾಗಿರುವುದರಿಂದ ಕೆಲವು ಕಾಲದ ನಂತರ ಪೆಣ್ಗೂಸನ್ನು ಪೆತ್ತು 'ಪತಿಯೊಡನೆ ಕೂಡುತ್ತೇನೆಂದು ಮರಣಹೊಂದುತ್ತಾಳೆ' ಹೀಗೆ ಧಮಾಮೃತದಲ್ಲಿ ಸತಿಯರು ಪತಿಯ ಮರಣದ ಕಾರಣವನ್ನಿಟ್ಟುಕೊಂಡು ಸಹಗಮನ ಮತ್ತು ಅನುಗಮನದ ಮೂಲಕ ಸತಿ ಹೋದರು. ಇದನ್ನು ಕವಿ ಹೀಗೆ ಚಿತ್ರಿಸುತ್ತಾನೆ.

"ತಂದೆಯನವಯದಿಂದಂ

ಕೊಂದೀ ಶಿಶು ಬೇಗಮೆನ್ನುಮಂ ಕೊಲ್ಗುಂ ಪೋ

ಸಂದೆಯಮಿಲ್ಲೆನ್ನಾಣ್ಮನೊ

ಳೊಂದುವೆನಾಂ ಮುನ್ನಮೆಂಬ ತೆರುದಿಂದಾಗಳ್॥

ಧನದೆಯುಮನದೆಯಾಗಿ ಕೆಲವು ದಿವಸಕ್ಕೆ ಕ್ರೂರಾಂತಕನದಾಡೆಗೊಳಗಪ್ಪುದುಂ..."[೧೬]

ಹೀಗೆ ಧರ್ಮಾಮೃತದಲ್ಲಿ ಚಂದ್ರಲೇಖೆ ಗಂಡನ ಮರಣ ನಿಶ್ಚಿತವೆಂದು ತಿಳಿದು ಮರಣ ಹೊಂದಲು ನಿಶ್ಚಯಿಸುವುದು. ವಿಶಾಖೆ, ಘಂಟೆ, ಧನದೆಯರು ತಮ್ಮ ಗಂಡಂದಿರು ಮೃತರಾಗಲು, ತಾವು ಜೀವಿಸಲು ಇಚ್ಚಿಸದೆ ಸಾಯುವುದು. ಇವೆಲ್ಲ ಸತಿ ಪದ್ಧತಿಯ ಮುಖವಾಡವನ್ನೇ ಹೊತ್ತಿರುವುದು ಗಮನಕ್ಕೆ ಬರುತ್ತದೆ. ಹೀಗೆ ಪ್ರಾಚೀನ ಕನ್ನಡ ಕಾವ್ಯಗಳು ಸತಿ ಹೋಗುವ ಮಹಾಸತಿರನ್ನು ಕುರಿತು ವಿವರಿಸುತ್ತವೆ.

೩.೨. ಮಧ್ಯಕಾಲೀನ ಸಾಹಿತ್ಯದಲ್ಲಿ ಸತಿಪದ್ಧತಿ

ಮಧ್ಯಕಾಲೀನ ಸಾಹಿತ್ಯದ ಅವಧಿಯಲ್ಲಿ ಜನರ ಸಾಮಾಜಿಕ, ರಾಜಕೀಯ, ಧಾರ್ಮಿಕ ಸ್ಥಿತಿಗಳು ನಾನಾ ರೀತಿಯಲ್ಲಿ ರೂಪಗೊಂಡು, ರಾಜ್ಯ ಸಾಮ್ರಾಜ್ಯಗಳ ಉದಯಾಸ್ತಗಳು ಯುದ್ಧದ ಘೋರ ಪರಿಣಾಮಗಳು ಜನತೆಯ ಬದುಕನ್ನು ಅಲ್ಲಾಡಿಸಿ ಹೊಸ ಬದಲಾವಣೆ ಗಳಾದವು. ಆಗ ರಾಜಕೀಯ, ಧಾರ್ಮಿಕ ಸಾಮಾಜಿಕ ಸ್ಥಿತ್ಯಂತರಗಳು ತಲೆದೋರಿದವು. ಅಂದಂದಿನ ಸ್ಥಿತಿಗಳ ಪ್ರಭಾವವು ಜನರ ಬದುಕಿನ ರೀತಿಯನ್ನೇ ಬದಲಾಯಿಸಿತು. ಸಮಾರು ೧೨ ನೇ ಶತಮಾನದಿಂದ ಆಧುನಿಕ ಶತಮಾನದವರೆಗೂ ತನ್ನ ಪರಿಧಿಯನ್ನು ವ್ಯಾಪಿಸಿಕೊಂಡಿತು. ತನ್ನದೇ ಆದ ವಿಶಿಷ್ಟ ಸಂಸ್ಕೃತಿಕ ಮೌಲ್ಯಗಳಿಗೆ ನಾಂದಿಹಾಡಿತು. ಇದೇ ಅವಧಿಯಲ್ಲಿ ಅತ್ಯಂತ ವೈಭವಪೂರ್ಣವಾಗಿ ಪೂಜ್ಯನೀಯವಾಗಿ ಅತ್ಯಂತ ಸೋಜಿಗವನ್ನುಂಟು ಮಾಡಿದ ಸತಿ ಪದ್ಧತಿಯನ್ನು ಮಧ್ಯಕಾಲೀನ ಸಾಹಿತ್ಯ ಕೃತಿಗಳು ಉಲ್ಲೇಖಿಸುವ ಮೂಲಕ ಸತಿಪದ್ಧತಿಯನ್ನು ಸೂಚಿಸುತ್ತವೆ.

ಬ್ರಹ್ಮಶಿವನ ಸಮಯ ಪರೀಕ್ಷೆಯಲ್ಲಿ ಯುದ್ಧ ವೀರರ ಪತ್ನಿಯರು, ರಾಮನಾಥ ಚರಿತೆಯಲ್ಲಿ ಕುಮಾರ ರಾಮನ ಪತ್ನಿಯರು, ಕರ್ಣಾಟ ಭಾರತ ಕಥಾಮಂಜರಿಯಲ್ಲಿ ಮಾದ್ರಿ, ಶ್ರೀ ಸಿದ್ಧೇಶ್ವರ ಮಹಾಪುರಾಣದಲ್ಲಿ ಯುದ್ಧ ವೀರನೊಬ್ಬನ ಪತ್ನಿ, ತೊರವೆ ರಾಮಾಯಣದಲ್ಲಿ ಸೀತೆ ಮೋಹನ ತರಂಗಿಣಿಯಲ್ಲಿ ರತಿ, ಭರತೇಶ ವೈಭವ, ಸಿಂಗಿರಾಜ ಪುರಾಣದಲ್ಲಿ ಬಿಜ್ಜಳನ ತಾಯಿ, ಇಮ್ಮಡಿ ಚಿಕ್ಕ ಭೂಪಾಲನ ಸಾಂಗತ್ಯದಲ್ಲಿ ತೋಂಟದಾರ್ಯನ ಪತ್ನಿ ಚನ್ನಬಸವಮ್ಮ, ಸಿರುಮಣನಾಯಕನ ಸಾಂಗತ್ಯದಲ್ಲಿ ವೀರಣ್ಣನ ಪತ್ನಿಯರು ಸತಿ ಹೋಗಿರುವುದನ್ನು ಸೂಚಿಸುತ್ತವೆ.

ಬ್ರಹ್ಮಶಿವನ ಕಾಲ ಸು.೧೧೫೦ ಈತ 'ಸಮಯ ಪರೀಕ್ಷೆ' ಎಂಬ ಕೃತಿಯನ್ನು ಕಂದ ಮತ್ತು ವೃತ್ತದಲ್ಲಿ ರಚಿಸಿದ್ದಾನೆ. ಈ ಕೃತಿಯಲ್ಲಿ ಕವಿ ತನ್ನ ಕಾಲದಲ್ಲಿರುವ ಮಹಾಸತಿ ಆಚರಣೆಯನ್ನು ವಿರೋಧಿಸುತ್ತಾನೆ. ಇದನ್ನು ಆಚರಿಸಲು ಪ್ರೇರಣೆ ನೀಡುವವರನ್ನು 'ದುರ್ಬೋಧ

ರೆಂದು' ಕರೆಯುತ್ತಾನೆ. ಅಲ್ಲದೇ ಗಂಡನ ಮರಣದ ನಂತರ ಪತ್ನಿ ಸತಿ ಹೋದರೆ ಸ್ವರ್ಗ ಪಡೆಯುತ್ತಾಳೆಂಬ ನಂಬಿಕೆಯನ್ನು ವಿಡಂಬಿಸುವ ರೀತಿಯನ್ನು ಕವಿ ಹೀಗೆ ಅಭಿವ್ಯಕ್ತಿಸಿದ್ದಾನೆ.[೧೭]

> ಪುರುಷನ ಪರೋಕ್ಷದೊಳ್ವೀರ
> ಗಿರದಾಗಡೆ ಸತ್ತಳಪ್ಪೊಡಾಕೆಗೆ ಸಗ್ಗಂ
> ದೊರೆಕೊಳ್ಳುಗುಮೆಂಬ ದುರ್ಬೋ
> ಧರ ಮಾತುಂ ಕೇಳ್ದು ನಂಬಿಕಿಚ್ಚಂ ಪೊಗುವರ್॥(ಅನುಬಂಧ ೧೨–೨೮)

ಇಲ್ಲಿ ಪುರುಷನು ಮಕ್ಕಳಿಲ್ಲದೇ ಮರಣ ಹೊಂದಿದಾಗ ವಿಧವೆಯಾದ ಪತ್ನಿಯನ್ನೂ ಮರಣ ಕೂಪಕ್ಕೆ ತಳ್ಳಿ ಅವಳ ಆಸ್ತಿಯನ್ನು ಪಡೆಯಲು ಪ್ರಭುವರ್ಗ ಇಲ್ಲವೆ ಪುರೋಹಿತ ವರ್ಗದವರು ಸಂಚು ರೂಪಿಸುತ್ತಿದ್ದರೆಂಬುದನ್ನು ಬ್ರಹ್ಮಶಿವ ಕಾವ್ಯದಲ್ಲಿ ಹೀಗೆ ತಿಳಿಸಿದ್ದಾನೆ.

> "ಪುರುಷಂ ಸತ್ತಡೆ ಪುತ್ರನುಳ್ಳವರು ಸಾಯಲ್ವಲ್ಲದೆಂಬರ್ಥರಾಮರರೇಕಾಗಮ
> ನಿಯಮಮಾಗಿ ಧನಮಂ ನಿಃ ಪುತ್ರನಾವಾಗಳಾ
> ದರದಿಂದಂ ತವಗಿತ್ತು ಸಾವಡೆನತುಂ ಸಾಯಲ್ಕೆ ಪೇಳ್ವರ್ಮಹಾ
> ಪುರುಷರ್ಸತ್ತಡೆ ಬದ್ದರೊಂದೊಡಮೆಯಂ ಕೊಳುವೊಂದು ಪಾಯಮ್ಮಿಗಲ್"[೧೮]

ಆ ಕಾಲದಲ್ಲಿ ಮಕ್ಕಳಿರುವವರಿಗೆ ಮಹಾಸತಿಯಾಗಲು ಅವಕಾಶ ಇಲ್ಲದಿರುವುದು ತಿಳಿದುಬರುತ್ತದೆ. ಈ ವಿಷಯದತ್ತ ಗಮನಹರಿಸಿದ ಎಂ.ಎಂ ಕಲಬುರ್ಗಿಯವರು, ಬ್ರಹ್ಮಶಿವನು ಸತಿಯಾದವಳು ಅಗ್ನಿಪ್ರವೇಶ ಮಾಡಬೇಕೆಂದು ಹೇಳುವವರ ಮನದಲ್ಲಿ ತುಂಬಿರುವ ಸ್ವಾರ್ಥವನ್ನು ಈ ಪದ್ಯದ ಮೂಲಕ ಬಯಲಿಗೆಳೆಯುತ್ತಾನೆ ಎಂದು ಹೇಳುತ್ತಾರೆ. ಅಷ್ಟೇ ಅಲ್ಲದೇ ಅವರು ಮುಂದುವರೆದು "ಸಪುತ್ರಕ ವಿಧವೆಗೆ ಅಗ್ನಿ ಪ್ರವೇಶ ಸಲ್ಲದು,ಅಪುತ್ರಕ ವಿಧವೆಗೆ ಅಗ್ನಿ ಪ್ರವೇಶ ನಿಯತ, ಎಂದು ಹೇಳುವವರನ್ನು ಅವಳ ಆಸ್ತಿಯನ್ನು ಸೆಳೆದುಕೊಳ್ಳುವ ಹೊಂಚುಕಾರರೆಂದು ನಿಂದಿಸಿ, ಈ ಆಚರಣೆಯನ್ನು ವಾಸ್ತವಿಕ ಹಿನ್ನಲೆಯಲ್ಲಿ ವಿಶ್ಲೇಷಿಸಿದ್ದಾನೆ"[೧೯] ಎಂದು ಬರೆಯುತ್ತಾರೆ.

ಕರ್ಣಪಾರ್ಯ ಈತನ ಕಾಲ ಸು.೧೧೫೦ ಈತ ಸೂತ್ರದಲ್ಲಿ 'ವೀರೇಶ ಚರಿತೆ' ಎಂಬ ಕೃತಿ ರಚಿಸಿದ್ದು ಈ ಕೃತಿಯಲ್ಲಿ ಅಗ್ನಿ ಪ್ರವೇಶ ಮರಣದ ಪ್ರಸ್ತಾಪವಿದೆ. ಭಾರತೀಯ ಸಂಸ್ಕೃತಿಯ ಸ್ತ್ರೀ ದೇವತೆಗಳಲ್ಲಿ ಅತ್ಯಂತ ಶ್ರೇಷ್ಠಳೆನಿಸಿದ ದ್ರಾಕ್ಷಾಯಿಣಿ ಅಥವಾ ಸತಿದೇವಿ ದಕ್ಷಬ್ರಹ್ಮನ ಯಾಗದಲ್ಲಿ ಪತಿ ನಿಂದೆಯನ್ನು ತಾಳಲಾರದೇ ಪತಿಯ ಪರವಾಗಿ ನಿಂತು ಯಜ್ಞದಲ್ಲಿ ಪ್ರಾಣಾರ್ಪಣೆ ಮಾಡಿಕೊಂಡಿದ್ದು ಮೊದಲ ಮಹಾಸತಿತ್ವಕ್ಕೆ ಉದಾಹರಣೆಯಾಗಿದೆ ಎಂದು ತಿಳಿದು ಬರುತ್ತದೆ.

ಇಲ್ಲಿ ಸತಿದೇವಿಯ ಅಗ್ನಿ ಪ್ರವೇಶ ಮರಣವನ್ನು

"ಕಡೆಗೀ ಪತಿವ್ರತೆಯರ ಮನೆದೈವವು ಬುರ್ಬುಗಿ
ಲಿಡುತಿಹ ಕುಂಡವ ನಿಟ್ಟಿಸಿ ಬಿಸಿ ಮುಸುಳಿಸಿ ಶಿಖಿ
ನಡಗಲು ನಗುತೆಡಬಲನಂಬಲಿದಂತಃ ಕುಂಡಲಿಯೊಳ್ ಪ್ರಾಣವ ತೊಡಚಿ।
ನಡುನೆತ್ತಿಯೊಳೆತ್ತಿ ದೊತುರಿಯೆದ್ದಾ ಅಧ್ವಾರವಂ
ಸುಡುವಾ ಪಣದಿಂ ಜ್ಯೋತಿ ಸಹಸ್ರರವಿಪ್ರಭೆ
ಬಿಡದೊಗೆದೆಲ್ಲರ ಕಣ್ಗೆ ತಮಂಧಂಗೆದರಲುನೆಗೆದಳ್ ಗಗನಾಂಗಣಕೆ।"[೨೦]

ಎಂದು ಉಲ್ಲೇಖಿಸಲಾಗಿದೆ. ಇಹಲೋಕದಲ್ಲಿ ಪತಿಯ ಜೊತೆ ಜೀವಿಸಿದ ಸತಿ ಪರಲೋಕದಲ್ಲೂ ಅವನ ಜೊತೆ ಜೀವಿಸಬೇಕೆನ್ನುವ ಸತಿ-ಪತಿ ಧರ್ಮದ ಮೌಲ್ಯಗಳು ಇಂತಹ ಉದಾಹರಣೆಗಳನ್ನು ಮುಂದಿಟ್ಟುಕೊಂಡು ಸಹಗಮನದಂತಹ ಮರಣಗಳನ್ನು ಪತಿವ್ರತಾ ಧರ್ಮದ ಹಿನ್ನೆಲೆಯಲ್ಲಿ ಅನುಸರಿಸುತ್ತಿದ್ದರೆಂದು ತಿಳಿದು ಬರುತ್ತದೆ.

ಹರಿಹರ ಕಾಲ. ಸು.೧೨೦೦ ಈತನ ಕೃತಿ 'ರತಿ ವಿಲಾಪ' ಚಂಪೂ ಕಾವ್ಯವಾಗಿದ್ದು, ಇದರಲ್ಲಿ ವೈಧವ್ಯ ಎಂಬುದು ಅಮಂಗಳವಾದದ್ದು, ಅದು ಹೆಣ್ಣಿನ ಜೀವನದಲ್ಲಿ ಭಯಂಕರ ದುಃಖ ಸಂಕಟಗಳ ಪರಂಪರೆಗೆ ನಾಂದಿ ಹಾಡುವಂಥದ್ದು ಎಂದು ವೈಧವ್ಯ ಹೆಣ್ಣಿನ ಸ್ಥಿತಿಗತಿಯನ್ನು ಚಿತ್ರಿಸಲಾಗಿದೆ.

ಲಾವಣ್ಯಂಲಯಮಾಯ್ತು ವಿಭ್ರಮವಿಲಾಸ ಮಾಯವಾಯ್ತುಕಟಾ
ಜೀವಂ ಬೆಂದುದು ಚೆಲ್ವು ಸತ್ತುದುಸುಖಂಹಾಳಾಯ್ತು ಕಂದರ್ಪಸದ್
ಭಾವಂ ಭಸ್ಮಮದಾಯ್ತು ಮೆಯ್ಮೆಮಡಿಯಿತ್ತುತ್ಸಾಹವಂಗಿತ್ತು[೨೧]

ಇಲ್ಲಿ ವಿಧವೆಗೆ ಬೇಕು ಬೇಡವೆಂಬುದಿಲ್ಲ, ಆಕೆಯ ರೂಪು ವಿರೂಪಗೊಳಿಸುವುದು, ಆಕೆ ಸಮಾಜದಲ್ಲಿ ಅಮಂಗಳೆ ಎಂದು ಸುತ್ತ ಮುತ್ತಲಿನ ಪರಿಸರ ಆಕೆಯನ್ನು ಕಂಡು ಅಪಹಾಸ್ಯಮಾಡಿ ನಗುವ ಸ್ಥಿತಿ ಇನ್ನೂ ಭಯಂಕರವಾದುದು ಇಂಥ ಅಸಹ್ಯ ಕ್ರೂರ ಅಶಕ್ತ ಬದುಕಿಗಿಂತ ಸಾವೇ ಉತ್ತಮ ಮಾರ್ಗವಾಗಿ ಸ್ತ್ರೀಯರಿಗೆ ಕಂಡಿರುವುದರಲ್ಲಿ ಯಾವ ಆಶ್ಚರ್ಯವೂ ಇಲ್ಲ ಎಂಬುವುದನ್ನು ಕಂಡು ಕವಿ ಉಲ್ಲೇಖಿಸಿದ್ದಾನೆ.

ಜನ್ನನ ಕಾಲ ಸು.೧೨೨೫ ಈತನ ಚಂಪು ಕೃತಿಯಾದ 'ಅನಂತನಾಥ ಪುರಾಣ'ದಲ್ಲಿ ಚಂಡಶಾಸನ ಪತ್ನಿಯರ ಸಹಗಮನದ ದೃಶ್ಯ ಹಾಗೂ ಸುನಂದೆಯ ಮರಣದ ಪ್ರಸ್ತಾಪವಿದೆ. ಸುನಂದೆಯು ತನ್ನ ಗಂಡನಿಗಾಗಿ ಅಗ್ನಿಪ್ರವೇಶ ಮಾಡಿ ಮರಣ ಪಡೆದಾಗ ಅವಳನ್ನು ಪ್ರೀತಿಸಿದ

ಚಂಡಶಾಸನನು ಸಹಗಮಮನ ಮಾಡಿ ಮರಣ ಪಡೆಯುವ ಸಂದರ್ಭ ಕಾವ್ಯದಲ್ಲಿ ಮೂಡಿ ಬಂದಿದೆ.[೨೨] ಹೀಗೆ ಕನ್ನಡ ಕಾವ್ಯಗಳಲ್ಲಿ ಸಹಮರಣ ಚಿಂತನೆಗಳು ಭಿನ್ನವಾದ ಮನೋಧರ್ಮದಲ್ಲಿ ನಿರೂಪಣೆಗೊಂಡಿವೆ.

ಚಂಡಶಾಸನ ಸುನಂದೆಯನ್ನು ಅಪಹರಣ ಮಾಡಿದಾಗ ಮಾಂಡಳಿಕ ರಾಜನಾದ ಸಿಂಹಚೂಡನು ಸ್ತ್ರೀಯನ್ನು ರಕ್ಷಣೆ ಮಾಡಬೇಕೆಂದು ತಡೆಯಲು ಮುಂದೆ ಬಂದು ಚಂಡಶಾಸನನ ಕೋಟೆಯನ್ನು ಮುತ್ತಿ ಹೋರಾಡುತ್ತಾ ವೀರಮರಣ ಪಡೆಯುತ್ತಾನೆ. ಇಂತಹ ಸಂದರ್ಭದಲ್ಲಿ ಸಿಂಹ ಚೂಡನ ಜೋಳೆವಾಳಿಗಳು, ವೆಳೆವಾಳಿಗಳು, ಲೆಂಕರು, ಅವರ ಪತ್ನಿಯರು ಅದರ ಜೊತೆಗೆ ಸಿಂಹಚೂಡನ ಮಡದಿಯರೆಲ್ಲರೂ ಸಿಂಹಚೂಡನ ಸ್ವಾಮಿನಿಷ್ಟೆಗೆ ಅಗ್ನಿಪ್ರವೇಶ ಮಾಡಿ ಮರಣಪಡೆಯಲು ಮುಂದಾಗುತ್ತಾರೆ. ಸಹಗಮನ 'ಸಮುತ್ಸುಕತೆಯಿಂ ಕೈವಿಸೆಕೈಗುಡವ ಕೈದುಬರ್ಸಕೈವಿಡಿದ ಪೆಂಡಿರ ತಂಡ' ಎಂದು ಕಾವ್ಯದಲ್ಲಿ ಹೇಳಿದೆ. ಇಲ್ಲಿ ಹೆಂಡಿರ ತಂಡವು ಸಹಗಮನ ಮರಣಕ್ಕೆ ಉತ್ಸುಕರಾಗಿರುವುದನ್ನು ತಿಳಿಸಲಾಗಿದೆ. ಇದೇ ಕಾವ್ಯದಲ್ಲಿ ಹೆಣ್ಣಿಗಾಗಿ ಅಗ್ನಿಪ್ರವೇಶ ಮಾಡುವ ಪುರುಷನ ಸಹಗಮನ ಮರಣದ ಉಲ್ಲೇಖವು ಇದೆ. ವಸುಷೇಣ ಮತ್ತು ಚಂಡಶಾಸನ ಇಬ್ಬರು ಸ್ನೇಹಿತರು. ವಸುಷೇಣನ ಹೆಂಡತಿಯಾದ ಸುನಂದೆಯನ್ನು ಚಂಡಶಾಸನ ಪ್ರೀತಿಸುತ್ತಿದ್ದನು. ಅವಳನ್ನು ಪಡೆಯುವ ಸಲುವಾಗಿ ಆತ ಹೋರಾಡಿದ. ಅದರಲ್ಲಿ ವಸುಷೇಣನು ಮರಣ ಹೊಂದಿದನು. ಹೋರಾಟದಲ್ಲಿ ಮಡಿದ ಗಂಡನ ಶಿರವನ್ನು ಕಂಡ ಪತ್ನಿ ಸುನಂದೆಗೆ ಯಾವ ಮಾತು ಬಾರದೇ ದುಃಖ ತಪ್ತಳಾಗಿ ಅವಳು ಸಹಗಮನ ಮರಣವನ್ನು ಅನುಸರಿಸಿದ ಸಂದರ್ಭವನ್ನು ಜನ್ನ ಕಾವ್ಯದಲ್ಲಿ ಹೀಗೆ ಚಿತ್ರಿಸುತ್ತಾನೆ.

> "ಹೃದಯದೊಳಿರ್ದ ವಲ್ಲಭನನಾಕ್ಷಣ ಭೀತಿಯನೀಕ್ಷೆಪಂತೆ ಮು
> ಚ್ಚಿದುವಲರ್ಗಣ್ಬೊಣರ್ತಡವಿ ನೋಡುವವೋಲ್ಕುಚ ಮಧ್ಯದಲ್ಲಿಗಾ
> ದುದುಕರಪಲ್ಲವಂ ಸರಮಾಲಿಸುವಂತೆ ವೊಗಂ ಮಲಗಿತಂ
> ಗದೊಳೆರ್ದೆ ಶೂನ್ಯಮಾಗರಸುವಂತಸುಪೋಯ್ತುಸಿತಾಬ್ಜ ನೇತ್ರಯಾ"[೨೩]

ಶ್ರೀಮಂತ ವರ್ಗದವರು ಅದರಲ್ಲಿಯೂ ಅರಸು ಮನೆತನದವರು ಆಚರಿಸಿಕೊಂಡು ಬರುತ್ತಿದ್ದ ಸತಿ ಸಂಪ್ರದಾಯದ ಚಿತ್ರಣವನ್ನು ಜನ್ನ ಅತ್ಯಂತ ಶ್ರೀಮಂತವಾಗಿ ಕೊಟ್ಟಿದ್ದಾನೆ. ಸತಿಹೋಗುವ ಸಂದರ್ಭದಲ್ಲಿ ಸ್ತ್ರೀಯರು ಬೆಲೆಯುಳ್ಳ ವಸ್ತ್ರಾಭರಣಗಳನ್ನು ಧರಿಸಿಕೊಂಡು ಸಿಂಗಾರಗೊಳ್ಳುತ್ತಿದ್ದರು. ಇದನ್ನು ಕವಿ ಹೀಗೆ ಹೇಳುತ್ತಾನೆ. "ತುಡಿಗೆಯನಾಯ್ದು ಕೊಂಡುಳಿದವಂ ಸಖಿಯರ್ಗಿರವೇಳ್ದು"[೨೪] ಸತಿ ಹೋಗುವ ಪತ್ನಿಯರು ತಮಗೆ ಬೇಕಾದಷ್ಟು ವಸ್ತ್ರ ಒಡವೆಗಳನ್ನು ತೆಗೆದುಕೊಂಡು ಉಳಿದವುಗಳನ್ನು ಅವರ ಸಖಿಯರಿಗೆ ಕೊಡುವುದು ಸ್ಪಷ್ಟವಾಗಿ ತಿಳಿದುಬರುತ್ತದೆ.

ಇದನ್ನು ಕವಿ "ಪೊನ್ನ ಮಾಣಿಕ್ಯದ ಬಾಯಿನಂ ಸಮಕಟ್ಟುವರ್ತುಬಂದೊಡೆ ಒಡಿಹಾರ ಮೀವಳವಿಯಚ್ಚರಿಯಾದುದು ಪೆಂಡವಾಸದೊಳ್" ಎಂದಿದ್ದಾನೆ. ಇಲ್ಲಿ ರಾಣಿವರ್ಗ ಬಂಗಾರ ಮತ್ತು ಮಾಣಿಕ್ಯದಿಂ ಒಡಗೂಡಿದ ಬಾಗಿನವನ್ನು ಅಂದರೆ 'ಪೊನ್ನ'ವನ್ನು (ಅಂದಿನ ಕಾಲದ ನಾಣ್ಯ) ಕೊಡುತ್ತಿದ್ದರು. ಇದರೊಂದಿಗೆ ಸಮಕಟ್ಟು, ಹಾರಗಳನ್ನು ದಾನಮಾಡುತ್ತಿದ್ದುದು ವಿಧಿತವಾಗುತ್ತದೆ.

ಚಂಡಶಾಸನ ರಾಣಿವರ್ಗದವರು ಸತಿಹೋಗುವಾಗ ಬರುವ ಪದ್ಯವೊಂದು ಇದೇ ಭಾವವನ್ನು ಹೀಗೆ ಹಿಡಿದಿಟ್ಟುಕೊಂಡಿದೆ.

"ಪ್ರಾಣೀಶ್ವರನೊಳ್ಮನ್ನಣೆ
ಯಾಣೆಗೆಗೋಸನೆಗೆ ಸೂಳಪಾಳಿಗೆ ನಮ್ಮೊಳ್
ಮಾಣದೆ ಮಚ್ಚರಿಪಂತಿರೆ
ಹೂಣಿಸಿ ಮಂಚಲ್ಕೆವೇಳ್ಕುಮೋರ್ವರಿನೊರ್ವರ್"[೨೫]

ಹೀಗೆ ಕವಿ ಜನ್ನನು ಸಹಗಮನಗೊಳ್ಳುವ ಸಂದರ್ಭದಲ್ಲಿ ರಾಣಿ ವರ್ಗದವರಲ್ಲಿದ್ದ ಸಿದ್ಧತೆ, ಉತ್ಸಾಹ, ರಸಿಕತೆಗಳನ್ನು ತುಂಬ ಸುಂದರವಾಗಿ ಕಾವ್ಯದಲ್ಲಿ ಅಭಿವ್ಯಕ್ತಿಸಿದ್ದಾನೆ.

ಜನ್ನನ 'ಅನಂತನಾಥ ಪುರಾಣ'ದಲ್ಲಿ ಸುನಂದೆಯು ಪತಿ ಮರಣ ಹೊಂದಿದ್ದನ್ನು ಕಂಡಾಕ್ಷಣ ಅಥವಾ ಕೇಳಿದಾಕ್ಷಣ ಏನನ್ನು ಯೋಚಿಸದೇ ಆ ಕ್ಷಣವೇ ಮರಣ ಹೊಂದಿದ್ದಾಳೆ. ಇದು ಪ್ರೀತಿಯ ಒಂದು ಮುಖವಾದರೆ, ರನ್ನನ 'ಅಜಿತನಾಥ ತಿರ್ಥಂಕರ ಪುರಾಣ'ದಲ್ಲಿಯ ಗುಂಡಮಬ್ಬೆಯು ಪತಿ ಮರಣ ಹೊಂದಿದ್ದನ್ನು ಕಂಡು ಅಥವಾ ಕೇಳಿ ತಾನೂ ಬದುಕಲಿಚ್ಛಿಸದೇ ಮರಣ ಹೊಂದಲು ನಿಶ್ಚಯಿಸಿ ಸಾಯುವುದು ಇನ್ನೊಂದು ಮುಖವಾಗಿದೆ. ಇವೆರಡೂ ಸ್ಥಿತಿಗಳ ಹಿಂದೆ ಇರುವುದು ಪ್ರೀತಿಯ ಉತ್ಕಟ ವ್ಯವಸ್ಥೆಯೇ ಆಗಿದೆ ಎಂಬುವುದನ್ನು ಮರೆಯ ಬಾರದು.

'ಕುಮಾರವ್ಯಾಸನ ಕಾಲ ಸು.೧೪೦೦ ಈತ ಭಾಮಿನೀ ಷಟ್ಪದಿಯಲ್ಲಿ 'ಕರ್ಣಾಟ ಭಾರತ ಕಥಾಮಂಜರಿ' ಎಂಬ ಕಾವ್ಯವನ್ನು ರಚಿಸಿದ ಇದರಲ್ಲಿ 'ಮಾಘದನಮರಣಾನಂತರ ಅವನ ಸಂಸ್ಕಾರದಲ್ಲಿ ನಾರೀ ನಿಹವ ಸಹಗತವಾಯ್ತು' ಎಂದು ತಿಳಿಸುತ್ತಾನೆ. ಇಲ್ಲಿ ಮಹಾಕವಿ ಮೃತನಾದ ಪತಿಯೊಡನೆ ಪತ್ನಿಯರು ಸತಿ ಹೋಗುವುದನ್ನು 'ಸಹಗತವಾಯ್ತು' ಎಂಬ ಮಾತಿನಲ್ಲಿ ಅಭಿವ್ಯಕ್ತಗೊಳಿಸಿದ್ದಾನೆ. ಅಂದರೆ ಒಬ್ಬ ಪುರುಷನಿಗೆ ಅನೇಕ ಜನ ಪತ್ನಿಯರಿರುವ ರೆಂಬುದು ಇದರಿಂದ ತಿಳಿದು ಬರುತ್ತದೆ. ಅಲ್ಲದೇ ಇದು ಸಾಮೂಹಿಕವಾಗಿ ಸಹಗಮನಗೊಳ್ಳುವ ಸಂಪ್ರದಾಯವನ್ನು ಸೂಚಿಸುತ್ತದೆ.

"ಮೂರು ಕೋಟಿಯ ಕೋಟಿ ಧರ್ಮವ
ಮೀರದಿಹ ರೋಮಾಳಿ ಸಂಖ್ಯೆಯೊ
ಳಾರನೆನ್ನದೆ ನಿಜಪತಿಯ ಸಹಗಮನದಲಿ ತನುವ
ಮಾರಿದಬಲೆಯರುಗಳ ದೆಸೆಯಿಂ
ದಾರುಮಡಿ ಸ್ವರ್ಗಾದಿ ಭೋಗವ
ಸೂರೆಗೊಂಬುದು ತಪ್ಪದವನೀಪಾಲ ಕೇಳೆಂದ"[೨೬]

ಇಲ್ಲಿ ಪತಿ, ಪತ್ನಿಯರೆಂಬ ಎರಡೂ ಜೀವಗಳು ಪ್ರೀತಿಯಲ್ಲಿ ಒಂದಾಗುವುದಲ್ಲದೇ ಆ ಪ್ರೀತಿ ಎಷ್ಟರ ಮಟ್ಟಿಗೆ ವ್ಯಾಪ್ತಿ ವೈಶಾಲ್ಯತೆ ಪಡೆಯಿತೆಂದರೆ, ಸಾವಿನಲ್ಲಿಯೂ ಇವರು ಒಂದಾಗಿ ಸ್ವರ್ಗಪಡೆಯುತ್ತಾರೆಂಬ ಕಲ್ಪನೆಯನ್ನು ಕವಿ ಇಲ್ಲಿ ಉಲ್ಲೇಖಿಸಿದ್ದಾನೆ. ಸಂಚಿ ಹೊನ್ನಮ್ಮ ಗಂಡಿನ ಪಾಲಿಗೆ ಹೆಣ್ಣು ಒಂದು ಒಡವೆಯಾಗಿರುವುದರಿಂದ "ಒಡೆಯನಿರಿಸಿಂತಿರ್ಪದಲ್ಲದೇ ಪೇಳೊಡವೆಗೆ ಬೇರುಂಟೆ" ಎಂದು ಹೊನ್ನಮ್ಮ 'ಹದಿಬದೆ'ಯ ಧರ್ಮದಲ್ಲಿ ಹೇಳಿದ್ದಾಳೆ. ಈ ಮಾತು ಪುರುಷ ಜಗತ್ತಿನಲ್ಲಿ ಹೆಣ್ಣಿನ ಸ್ಥಾನವನ್ನು ಹೇಳುತ್ತದೆ. ಗಂಡ ಹೆಂಡಿತಿಯರ ಸಂಬಂಧ ಭಕ್ತಿ ಪಂಥದ ದೇವ ಮತ್ತು ಭಕ್ತ ಸಂಬಂಧಕ್ಕಿಂತ ಬೇರೆಯಾಗಿರಲು ಸಾಧ್ಯವಿರಲಿಲ್ಲ. ಸ್ತ್ರೀಯರ ಮೇಲಿನ ಆಕ್ರಮಣ ಹಿಂದೆಂದಿಗಿಂತಲೂ ಹೆಚ್ಚಾಗಿದ್ದ ಈ ಕಾಲದಲ್ಲಿ ಅದು ಇನ್ನಷ್ಟು ಭದ್ರವಾಯಿತು.

"ಪತಿಯನುಳಿದರೆ ಬೆಂದ ಕೊರಡಿನ
ಗತಿಯಲಿಹುದು ಕನಿಷ್ಟ ಸತಿಗಾ
ಪ್ರತಿಯೆ ಗುರು ಪತಿದೈವ ಪತಿಯಿಹಪರಕೆ ಸಾಧನವೂ
ಪತಿಯೆ ಭಾಗ್ಯ ನಿಧಾನ ಪರಿಕಿಸೆ
ಪತಿಯೆ ದಾನ ತಪೋವ್ರತಂಗಳು
ಪತಿಯನುಳಿದಿನಿತರಲಿ ಫಲಸತಿಗಿಲ್ಲವಿದು ಸಿದ್ಧಾ"[೨೭]

ಇಲ್ಲಿ ಗಂಡನೇ ಹೆಂಡತಿಯ ಪಾಲಿಗೆ ಸಾಕ್ಷಾತ್ ದೇವರೆಂಬುವುದೇ ಈ ನಿಲುವಿನ ಕೇಂದ್ರ ಆಶಯವಾಗಿತ್ತು. ಇದೇ ಅಭಿಪ್ರಾಯವನ್ನು ಕುರಿತು 'ಪತಿಯನೆ ಪರದೇವತೆಯೆಂದು ಭಜಿಸುವ ಸತಿಯರನ್ನು ಸನ್ಮತಿಸುವೆನು'ಎಂದು ಸಂಚಿ ಹೊನ್ನಮ್ಮ ಹೇಳುತ್ತಾಳೆ. "ತಡೆಯಬಾರದು ತಮ್ಮ ಪತಿಯ ಕೈಯೊಳೆ ದೀಕ್ಷೆ ಒಡೆದು ಸುಖಿಗಳಾಗಲೆಂದು"[೨೮] ಎಂದು ಹೇಳುವ ಮೂಲಕ ಜೈನ ಸತಿಯರು ತಮ್ಮ ಪತಿಯರಿಂದಲೇ ದೀಕ್ಷೆ ಪಡೆಯಬೇಕೆಂದು ಹೇಳಿದ್ದಾರೆ. ಇದರಿಂದ ಅಂದಿನ ಸಮಾಜದಲ್ಲಿ ಪುರುಷ ವರ್ಗವೇ ಶ್ರೇಷ್ಠವೆನಿಸಿ ಸ್ತ್ರೀ ಸಮುದಾಯವನ್ನು ಸಾಮಾಜಿಕ

ಆಚರಣೆಗಳ ಬಂಧನದಲ್ಲಿ ಹಿಡಿದಿಡುವಲ್ಲಿ ಇಂತಹ ಸಂದೇಶಗಳು ಕಾರಣವಾಗಿ ಸತಿಪದ್ಧತಿ ಮತ್ತಷ್ಟು ನೆಲೆಯೂರಲು ಕಾರಣವಾಯಿತು ಎಂಬುವುದನ್ನು ಮರೆಯುವಂತಿಲ್ಲ.

ಕುಮಾರವಾಲ್ಮೀಕಿಯ ಕಾಲ ಸು. ೧೫೦೦ ಈತ ರಚಿಸಿದ 'ತೊರವೆ ರಾಮಾಯಣ' ಕೃತಿಯು ಭಾಮಿನೀ ಷಟ್ಪದಿಯಲ್ಲಿ ರಚನೆಗೊಂಡಿದ್ದು, ಈ ಕಾವ್ಯದಲ್ಲಿ ರಾಮನು ವಿಭಿಷಣನಿಗೆ ರಾವಣನ ಶವ ಸಂಸ್ಕಾರ ಮಾಡಲು ತಿಳಿಸಿದ ಸಂದರ್ಭದಲ್ಲಿ ಪದ್ಯವೊಂದು ಹೀಗೆ ಬರುತ್ತದೆ.

"ಬೀಳುಕೊಂಡ ಸುರೇಂದ್ರ ಬಂದುವಿ
ಶಾಲ ವೈಧಿಕ ವಿಹಿರದಿಂ ದಶ
ಮೂಳಿಯನು ಸಂಸ್ಕರಿಸಿದನು ಬಳಿಕಾಹಿತಾಗ್ನಿಯಲಿ
ಬಾಲಿಕಿಯರೊಡಿಗಿದರು ವಹ್ನಿ
ಜ್ವಾಲೆಯಲ್ಲಿ ಮಿಕ್ಕ ಸುರರಗ್ಗದ
ಬಾಲೆಯರು ಸಹಗಮನದಲಿ ನೀಗಿದರು ನಿಜತನುವ"[೨೯]

ಇಲ್ಲಿ ವಿಭಿಷಣನು ದಶಮೂಳಿಯನ್ನು ಸಂಸ್ಕರಿಸುವ ಹಾಗೂ ಆ ಅಗ್ನಿಯಲ್ಲಿಯೇ ಆತನ ಪತ್ನಿಯರು ಸಹಗಮನಗೊಳ್ಳುವ ಚಿತ್ರಣವಿದೆ. ಅಲ್ಲದೇ ಉಳಿದ ಅಸುರರ ಪತ್ನಿಯರು ಕೂಡ ಅಗ್ನಿಜ್ವಾಲೆಯಲ್ಲಿ ಸಹಗಮನ ಮಾಡಿಕೊಂಡರೆಂಬ ಚಿತ್ರಣವಿದೆ. ರಾವಣನೊಡನೆ ಆತನ ಪತ್ನಿಯರು ಅಸುರರರೊಡನೆ ಅವರವರ ಪತ್ನಿಯರು ಬೇರೆ ಬೇರೆ ಅಗ್ನಿಕೊಂಡಗಳನ್ನು ರಚಿಸಿಕೊಂಡು ಸತಿ ಹೋದರು ಎಂಬ ಅಪೂರ್ವ ದೃಶ್ಯಗಳನ್ನು ಕವಿಯು ತನ್ನ ಕಾವ್ಯದಲ್ಲಿ ಅಲ್ಲಲ್ಲಿ ಪ್ರತಿ ಬಿಂಬಿಸಿದ್ದಾನೆಂಬುದನ್ನು ಇಲ್ಲಿ ಉಲ್ಲೇಖಿಸಲಾಗಿದೆ. ಇದೇ ಕಾವ್ಯದಲ್ಲಿ ಸೀತೆಯು ತನ್ನ ಪರಿಶುದ್ಧತೆಯನ್ನು ತೋರ್ಪಡಿಸಲು ಅಗ್ನಿಪ್ರವೇಶ ಮಾಡುವಾಗ ಕೊಂಡ ಕಟ್ಟುವ ವಿವರಣೆ ಬರುತ್ತದೆ. ಬಹುಶಃ ಕುಮಾರ ವಾಲ್ಮೀಕಿಯು ಅದನ್ನು ಚಿತ್ರಿಸುವಾಗ ಅವನ ಕಣ್ಮುಂದೆ ಜರುಗುತ್ತಿದ್ದ ಸತಿಯರ ಅಗ್ನಿ ಪ್ರವೇಶಗಳೇ ಇದಕ್ಕೆ ಹಿನ್ನೆಲೆಯಾಗಿರಬೇಕೆನಿಸುತ್ತದೆ. ಇಲ್ಲಿ ಪದ್ಯಗಳೆರಡು ಹೀಗೆ ಅಭಿವ್ಯಕ್ತವಾಗಿವೆ.

"ರಚಿಸು ಕುಂಡವನಗ್ನಿ ದೇವರ
ರುಚಿ ದಿಗಂತವ ಬೆಳಗಲೆಂಬೀ
ವಚನ ಮಾತ್ರಕೆ ಕೋಟಿ ಸಂಖ್ಯೆಯ ಸರಿಗರಕ್ಕಸರು
ಪ್ರಚುರತರವೆನೆ ಸೀಳಿದರು ಬಳಿ
ಕಚಲೆಯನು ಸಮಚೌಕದಲಿ ಶಶಿ

ರುಚಿಯ ಶಿಲೆಗಳ ಕಂಡರಿಸಿ ಕಟ್ಟಿದರು ಕುಂಡದಲಿ

ತಂದು ಬಳಿಕೊಟ್ಟಿದರು ಪರಿಮಳ
ಚಂದನದ ನೀರಸ ಕುಜಂಗಳನಂದುಮಿಗೆ ಮಧ್ಯದಲಿ ಸರಿದರು ಭಾರಸಂಖ್ಯೆಯಲಿ
ಒಂದು ತಾಳುತ್ಸೇಧದಲಿ ಹಳು
ಕೊಂದಿದುತ್ತಮ ಕರ್ಪೂರವನ
ಲ್ಲಿಂದ ಮೇಲುರಿಗೊಳಿಸಿ ನಿಲಿಸಿದರನಿಲಬಾಂಧವನ"[೨೦]

ಅಗ್ನಿಕೊಂಡವನ್ನು ರಚಿಸುವಾಗ ಸಮಚೌಕದಲಿ ಶಸಿರುಚಿಯ ಶಿಲೆಗಳಿಂದ ಕುಂಡ ಕಟ್ಟಿದ ನಂತರದಲ್ಲಿ ಚಂದನ ತುಪ್ಪ ಮೊದಲಾದವುಗಳಿಂದ ಕೊಂಡದಲ್ಲಿ ಉರಿಗೊಳಿಸುತ್ತಾರೆ. ಆಗ 'ಧರಿತ್ರೀದೇವಿಗೆ ಕೈಮುಗಿದುರಿಯೊಳಗೆ ಧುಮ್ಮಿಕ್ಕಿದಳು ಸೀತೆ' ಎಂಬ ವಿವರ ಬರುತ್ತದೆ. ಈ ರೀತಿಯ ಅಗ್ನಿ ಪ್ರವೇಶವು ಮುಂದಿನ ಜನಾಂಗದ ಸ್ತ್ರೀ ಸಮುದಾಯಕ್ಕೆ ಪತಿವ್ರತೆಯ ಸಂಕೇತವಾಗಿ ಮುಂದುವರೆಯಿತೆಂದು ಹಾಗೂ ಮುಂದೆ ನಡೆಯುವ ಸತಿಯರ ಅಗ್ನಿ ಪ್ರವೇಶವನ್ನು ಇದು ನೆನೆಪಿಸುತ್ತದೆ ಎಂದು ತಿಳಿಯಬಹುದು.

ನಂಜುಂಡ ಕವಿ ಕಾಲ ಸು. ೧೫೨೫ ಈತ ರಚಿಸಿದ 'ಕುಮಾರ ರಾಮನ ಕಥೆ'ಯು ಸಾಂಗತ್ಯದ ಜೊತೆಗೆ ಷಟ್ಪದಿಯಿಂದ ಕೂಡಿದ್ದು. ಇಲ್ಲಿ ಕುಮಾರ ರಾಮನ ಐದು ಜನ ಪತ್ನಿಯರು ಸತಿ ಹೋಗುವ ಕಾಲಕ್ಕೆ ಸಿಂಗರಿಸಿಕೊಂಡ ಬಗೆಯು ಪದ್ಯದಲ್ಲಿ ಹೀಗೆ ಅಭಿವ್ಯಕ್ತ ವಾಗಿದೆ.

"ವೀರಮುದ್ರಿಕೆ ನೂಪುರ, ಕಾಂಚಿಯದಾಮ
ಹಾರ ಪದಕ ಹತ್ತುಕಟ್ಟು
ತೋರ ಮುತ್ತಿನ ಬೊಟ್ಟು ತುರುಬಿನ ಬಲೆವಣಿ
ಸೇರಿ ಕಣ್ಗೆಸೆದುವವರಿಗೆ

ಉಂಗುರ ಕಡಗ ಕಂಕಣ ಬಾಹುಪುರ ಮ
ನಂಗೊಳಿಸುವ ಭುಜಕೀರ್ತಿ
ಸಂಗಡಿಸಿದ ವಜ್ರದೋಲೆ ಮೆರೆಯೆ ರಾಮ
ನಂಗನೆಯರು ಕಣ್ಗೆಸೆದರು
ಮುರುಡಿಯ ಸರಪಣಿ ಮುಂಗಯ್ಯ ಮುರುಹಸ್ತ

ಸರ ಹೊನ್ನ ಬಳೆ ತೋಳಬಂದಿ
ಕರಮೆಸೆಯಲು ಮಾಸತಿಯರಾದರು ರಾಮ
ನರಸಿಯರಂದು ರಾಗದೊಳು
ಪಿಡಿದ ನಿಂಬೆಯಹಣ್ಣು ಕನ್ನಡಿ ಕಯ್ಯೊಳು
ಬಿಡದೆ ಮೆರೆಯಲಂದವರು"[೩೧]

ಇಲ್ಲಿ ಕುಮಾರ ರಾಮನ ಸತಿಯನ್ನು ಕುರಿತು 'ನಳಿನಾಕ್ಷಿಯರೈವರು ರಾಮನೆಡೆಗೆ ಪೋಪಳವಿನಿಂ ಸಿಂಗರಿಸಿದರು' ಎಂದು ನಂಜುಂಡ ಕವಿಯು 'ರಾಮನಾಥ ಚರಿತೆ'ಯಲ್ಲಿ ಸುಂದರವಾಗಿ ಚಿತ್ರಿಸಿದ್ದಾನೆ.[೩೨] ಇಲ್ಲಿ ಶರೀರದ ವಿವಿಧ ಭಾಗಗಳಾದ ಕೈ, ಕಾಲು, ಬೆರಳು, ಭುಜ, ಕೊರಳು, ಹಣೆ, ಮೂಗು, ಕಿವಿ, ತಲೆಗೆ ವಿಭಿನ್ನ ಆಭರಣಗಳನ್ನು ಸಿಂಗರಿಸಿಕೊಳ್ಳುತ್ತಿದ್ದರೆಂದು ತಿಳಿದು ಬರುತ್ತದೆ. ಇಲ್ಲಿ ಕುಮಾರ ರಾಮನ ಸತಿಯರು ವೀರಮುದ್ರಿಕೆ, ದೂಪುರ, ಕಾಂಚಿಯದಾಮ, ಹಾರ, ಪದಕ, ಹತ್ತುಕಟ್ಟು, ತೋರಮುತ್ತಿನಬಟ್ಟು, ತುರುಬಿನ ಬಲೆವಣೆ, ಉಂಗುರ, ಕಡಗ, ಕಂಕಣ, ಬಾಹುಪುರ, ಭುಜಕೀರ್ತಿ, ವಜ್ರದೋಲೆ, ಮುರುಡಿಯ ಸರಪಣಿ, ಮುಂಗೈಮುರಿ ಹಸ್ತಸರ, ಹೊನ್ನಬಳೆ, ತೋಳಬಂದಿ ಮೊದಲಾದ ಆಭರಣಗಳನ್ನು ಧರಿಸಿಕೊಂಡು ಕೈಯಲ್ಲಿ ಲಿಂಬೆಹಣ್ಣು, ಕನ್ನಡಿ ಹಿಡಿದ ವಿವರಣೆಯಿದೆ. ಇದೇ ಪದ್ಯಭಾಗದಲ್ಲಿ ಕುಮಾರರಾಮನ ಪತ್ನಿಯರು ಸತಿ ಹೋಗುವಾಗ ಚಿತಾ ಕೊಂಡಕ್ಕೆ ಹಾಕಿರುವ ವಸ್ತುಗಳ ವಿವರವನ್ನು ಕೊಡಲಾಗಿದೆ.

ಪನಿನೀರ ಕುಪ್ಪಿಗೆ ಕರ್ಪೂರದಂಡೆ ಪೂ
ವಿನ ಪೊಟ್ಟಣ ಮೃಗಮದದ
ತನಿಗಂಪಿನ ವೀಣೆ ಸಾದಿನ ಭರಣಿಗ
ಳನಲ ಕೊಂಡಕೆ ಹಾಕಿದರು

ಭೂರಕದಗಿಲು ಸುಗಂಧದ ಪುಡಿಗಳ
ಭರಣಿಗಳನು ಭರದಿಂದ
ತರಿಸಿ ಹಾಕಿಸಿದನು ರಾಮನ ರಾಣಿಯ
ರುರಿಗೊಂಡಕಾ ಮಂತ್ರಿವರನು

ಇಲ್ಲಿ ಕುಮಾರ ರಾಮನ ಸತಿಯರು ಸೌಭಾಗ್ಯ ಸಂಕೇತದ ಆಭರಣಗಳನ್ನು ಧರಿಸಿಕೊಂಡು ಕರ್ಪೂರ ಸುಗಂಧ ದ್ರವ್ಯಗಳನ್ನು ಹಾಕಿ ಮಂತ್ರಿವರರು ಸಿದ್ಧಪಡಿಸಿರುವ ಕೊಂಡದ ಚಿತೆಯಲ್ಲಿ

ಪ್ರವೇಶ ಮಾಡಿದರೆಂಬ ಉಲ್ಲೇಖಗಳು ಕಾವ್ಯದಲ್ಲಿ ತುಂಬಾ ಸುಂದರವಾಗಿ ಅಭಿವ್ಯಕ್ತವಾಗಿವೆ. ಇಲ್ಲಿ ಮಾತಂಗಿಯೊಡನೆ ಕುಮಾರ ರಾಮನು ಯುದ್ಧಕ್ಕೆ ಹೊರಡಲು ಅವನ ಸತಿಯರು ಚಿತಾಪ್ರವೇಶ ಮಾಡುವ ಸಂದರ್ಭದಲ್ಲಿಯ ಚಿತ್ರಣವನ್ನು ಕುರಿತ ಪದ್ಯವೊಂದು ಹೀಗಿದೆ.

"ಕಂಡನಗಿಲು ಭಾವನ್ನ ಗೊರಡುಗಳ
ಕೆಂಡಗಳಿಂದಿಡಿದಿರ್ದ
ಕುಂಡಗಳನು ರಾಜಾಂಗಣದೊಳು ಮುಂ
ಕೊಂಡು ನಿಂದಿರ್ದ ಪೆಣ್ಗಳನು

ಕೇಸುರಿಗೆದರುವ ಕೆಂಡಗಳಿಂದ ವಿ
ಲಾಸವಡೆದ ಕುಂಡಗಳೊಳು
ಸೂಸುತ ಕರ್ಪೂರಗಳನು ನಿಂದಿರ್ದಮ
ಹಾಸತಿಯರ ಕಂಡನಲ್ಲಿ

ತನ್ನಳಿವುಳಿವ ಕೇಳುತ ಕೆಳದಿಯರಿಂದ
ಕನ್ನಡಿ ನಿಂಬೆವಣ್ಗಳನು
ಮನ್ನಿಸುತಲಿರ್ದ ನಿಜಸತಿಯರ ಮೊಗ
ಗನ್ನಡಿಗಳ ಕಂಡನೊಸೆದು

ವೀಣೆ ಕಿನ್ನರಿಂಗಳಿಂ ತನ್ನ ಪೆಸರ ಪದ
ಶ್ರೇಣಿಯನೊಸೆದು ಬಾಜಿಸುವ
ರಾಣಿವಾಸಗಳನು ಕಂಡನು ಸುರು
ತ್ರಾಣಬಲಾಬ್ಧಿ ಬಾಡಬನು

ಅಂಗನೆಯರ ಮೊಗನೋಡಿ ನುಡಿದನು ತ
ರಂಗಿತ ವೀರರಸದೊಳು
ಪಿಂಗದಿಂದೆನಗಾಜಿಯೊಳು ದೇವವೇಶ್ಯಾಭು
ಜಂಗದರ್ಶನವೆಂದನವನು

ಇಂದೆನಗಿಂದು ಶೇಖರಪದಯುಗಳರ

ವಿಂದಾವಲೋಕನಲಾಭ
ಸಂದೇಹವಿಲ್ಲದಾದಪುದೆಂದೊರೆದನಾ
ನಂದ ಕೈಮಿಗೆ ವೀರರಾಮು

ನುಡಿಯಲಾ ಮಾತು ಹಿಂಚಿತು ಕುವರನನೊಡ
ನೊಡನಮರ್ದ ಮರ್ದಪ್ಪಿಕೊಂಡು
ಮಡದಿಯರಾನಂದ ಕೈಮಿಗೆ ಬೀಳ್ದರಂ
ದಡಗಡಿಗಗ್ನಿ ಕುಂಡದೊಳು

ನಳನಳಿಸುವ ಕೆಂದಾವರೆಯಿಡಿದಿರ್ದ
ಕೊಳದೊಳು ಜಲಕೇಳಿಯೊಳು
ಎಳಸಿ ಬೀಳ್ದಂತೆ ಬಿಳ್ದರು ಲಲನೆಯರಾ
ಕಳಕಳಿಪಗ್ನಿ ಕೊಂಡದೊಳು

ಬಳಿಕ ಕೃತಕದ ಮಾಹಸತಿಯರು ಪುರಜನ
ಗಳ ಪರಸುತ ಲೀಲೆಮಿಗಿಲು
ಘಳಿಲನುರಿದ ಕೊಂಡದೊಳಗೆ ಬಿದ್ದರು
ಪುರ ಲಲನೆಯರೆಲ್ಲ ಗೋಳಿಡಲು"[೩೩]

ಇಲ್ಲಿ ಸತಿಯರ ಲೀಲೆ ಮಿಗಿಲು ಚಿತಾಗ್ನಿ ಕೊಂಡದಲ್ಲಿ ಘಳಿಲನೆ ಬಿದ್ದರೆಂಬ ವಿವರಣೆ ತುಂಬ ದಶವತ್ತಾಗಿದೆ. 'ಸಂಗಮಸಾಹಿತ್ಯ'ದ ಕಾಲದಲ್ಲಿಯೂ 'ಫೆರುಂಕೋಪ್ಪಂಡು' ಎಂಬುವವಳು ಸತಿ ಹೋಗುವಾಗ ಚಿತಾಗ್ನಿಯು ನನಗೆ 'ಈ ಸರೋವರದ ತಣ್ಣೀರಿಗಿಂತ ಭಿನ್ನವಲ್ಲ'[೩೪] ಎಂದು ಹೇಳುವ ಮಾತು ಈ ಸಂದರ್ಭದಲ್ಲಿ ನೆನಪಾಗುತ್ತದೆ.

ಹೀಗೆ ಕುಮಾರ ರಾಮನ ಪತ್ನಿಯರು ಕನ್ನಡಿ ಲಿಂಬೆಹಣ್ಣುಗಳನ್ನು ತೂರಾಡುತ್ತ ಪತಿಯ ಹೆಸರನ್ನು ಸ್ಮರಿಸುತ್ತ ವೀಣೆ ಕಿನ್ನರಿಗಳನ್ನು ಬಾರಿಸುತ್ತ ಹೊಗಳುತ್ತ, ಅವನನ್ನು ಅಪ್ಪಿಕೊಳ್ಳುತ್ತ 'ಕೊಳದೊಳು ಜಲಕೇಳಿ ಯೊಳು ಎಳಸಿ ಬೀಳ್ದಂತೆ' ಅಗ್ನಿಕುಂಡದಲ್ಲಿ ಬಿದ್ದು ಸತಿ ಹೋದರೆಂಬ ವಿವರ ತುಂಬಾ ಅಪೂರ್ವವಾಗಿದೆ.

ಪುರಂದರದಾಸ ಕಾಲ ಸು.೧೫೫೦ ಇವರು ಕೀರ್ತನ ಸಾಹಿತ್ಯದಲ್ಲಿ ಆಗಿನ ವಿಧವೆಯರನ್ನು

ನಡೆಸಿಕೊಳ್ಳುತ್ತಿದ್ದ ಸ್ಥಿತಿಯನ್ನು ದಾಖಲಿಸುತ್ತದೆ. ಇದು ಈ ಕಾಲಕ್ಕೂ ಅನೇಕ ಕಡೆ ಹೆಚ್ಚೇನು ಬದಲಾಗಿಲ್ಲವೆಂದೇ ಹೇಳಬೇಕು. ವಿಧವೆಯರು ಸತ್ತ ಗಂಡನನ್ನೇ ಧ್ಯಾನಿಸುತ್ತ ಇಹವನ್ನು ಕಳೆಯಬೇಕೆಂಬ ಕಟ್ಟಪ್ಪಣೆ ಇದ್ದರೂ ಎಲ್ಲರೂ ಅದನ್ನೇ ಒಪ್ಪಿ ನಡೆದಿದ್ದರೆಂದಲ್ಲ. ಇಲ್ಲಿ ವಿಧವೆಯರ ಗೆಳೆತನ ಮಾಡಿದ ಗಂಡಸರಿಗೂ ಆದೇಶವಿದೆ. "ಮುಂಡೆಯರ ಸಂಗ ಹಿಂದಣ ಗಂಡನ ಮಲಮೂತ್ರವೆಂದು ಬಲ್ಲವರೆಲ್ಲರು"[೩೫] ಎಂದು ಅದನ್ನು ಕಟುವಾಗಿ ಟೀಕಿಸಲಾಗಿದೆ. ಎಂದು ಪುರಂದರದಾಸರು ಅಂತವರಿಗೆ ಎಚ್ಚರಿಕೆ ಕೊಡುತ್ತಾರೆ. 'ವಿಧವೆಯಾದವಳು ಶೀಲಮಾಲಂಬಿಸಿ ತವರ್ಮನೆಯೊಳಿರ್ದನಿತು ಕಾಲಮಾಲಸ್ಯಮಿಲ್ಲದೆ ಸದಾಚಾರ ಕನಕೂಲೆಯಾಗಿರು ತಿರ್ದು ದೇಹಮಂ ದಂಡಿಸಲ್ ಪರಲೋಕಮಂ ಪಡೆವಳು' ಅಂದರೆ ದೇಹವನ್ನು ದಂಡಿಸಿ ದುಡಿಯುವ ಶಿಕ್ಷೆಯೇ ಅವಳಿಗೆ ಸದ್ಗತಿ ಕೊಡುವುದು ಎಂದು ಹೇಳುವ ಮೂಲಕ ವಿಧವೆಯರ ಬಗ್ಗೆ ಕನಿಕರ ತೋರಿಸದಿದ್ದರೂ ಅವರ ದುಸ್ಥಿತಿಯನ್ನು ಚಿತ್ರವತ್ತಾಗಿ ಬಿಡಿಸಿಟ್ಟಿದ್ದಾರೆ.

ರಮಣನಿಲ್ಲದ ನಾರಿ ಪರರ ಕಣ್ಣಿಗೆ ಮಾರಿ
ಪಡೆದವಳ ಎದೆಗೊರಳ ಕೊಯ್ವಂಥ ಚೂರಿ
ಮಾತು ಕಲಿತರೆ ಏನು ಮಹಾ ಜಾಣೆಯಾದರೆ ಏನು
ಚಾತುರ್ಯವಿದ್ಯೆ ಇದ್ದರೇನು ಚೆಲುವೆಯಾದರೇನು
ರಾಶಿ ಹಣವಿದ್ದರೇನು ಏಸು ಪೇಳಿದರೇನು
ರೀತಿ ಕೆಟ್ಟ ಜನ್ಮ ಪೊರೆಯಬೇಕಲ್ಲ
ಹೊರಗೆ ಬರಲಿಕೆ ಸಲ್ಲ ಇದಿರಾಗಿ ಇರೆಸಲ್ಲ
ಅಡಿಗೆಯೋಗ್ಯಳಲ್ಲ ಹರಿಯು ತಾನೆ ಬಲ್ಲ
ಮರ್ಯಾದೆಗಳು ಇಲ್ಲ ಬಲು ಹಗುರ ರಾಜ್ಯಕೆಲ್ಲ
ಸರ್ವ ರೀತಿಯ ಕೆಟ್ಟ ಜನ್ಮ ಪೊರೆಸಲ್ಲ
ಅತ್ತೆ ತನ್ನಯ ಮಗಗೆ ಮೃತ್ಯು ಎಂತೆಂಬಳು
ಹುಟ್ಟಿದ ಮನೆಯವರು ದೂಷಿಸುವರು
ಎಷ್ಟು ಹೇಳಲಿ ಬಹಳ ತುಚ್ಚವನೆ ಮಾಡುವರು
ಅತಿ ಶ್ರಮಪಟ್ಟರೂ ಆದರಿಸರು
ವಿಪರೀತ ಹಣವಿದ್ದರಪಹರಿಸಿ ತಿಂಬುವರು
ಅತಿದೈನ್ಯದಿಂದ ಬೇಡೆ ಬಾಯ ಬಡಿಸುವರು

ಚಾಕರಿಯ ಮಾಡಿದರೆ ಅಚಿಚೆಲ್ಲಾಡುವರು
ರಾಶಿ ಅನ್ನವನುಂಡಳೆಂದು ದೂರುವರು
ಈಸು ಸೈರಿಸಿಕೊಂಡು ಏಕಾಂತದಲಿ ಕುಳಿತು...

ಎಂದು ಹೇಳುವ ಮೂಲಕ ಪುರಂದರದಾಸರು ಅಂದಿನ ಸಮಾಜದಲ್ಲಿರುವ ಸ್ತ್ರೀಯರ ಸ್ಥಿತಿಗತಿಗಳನ್ನು ಮನವರಿಕೆ ಮಾಡಿಕೊಡುವುದಲ್ಲದೇ ಇಂತಹ ಆಚರಣೆಗಳೇ ಸತಿಪದ್ಧತಿಗೆ ಮೂಲ ಕಾರಣವಾಗಿ ಬಾಳಿ ಬದುಕಬೇಕಿದ್ದ ಸ್ತ್ರೀಯರನ್ನು ಸಾವಿನ ದವಡೆಗೆ ನೂಕುವ ಅಮಾನವೀಯ ಘಟನೆಗಳು ಸಮಾಜದಲ್ಲಿ ನಡೆಯುತ್ತಿವೆ ಎಂದು ಅವುಗಳನ್ನು ಅಲ್ಲಗಳೆಯಬೇಕೆಂದು ಕೀರ್ತನೆಗಳ ಮೂಲಕ ಸಮಾಜವನ್ನು ಎಚ್ಚರಿಸಿದ್ದಾರೆ.

'ಕನಕದಾಸರ ಮೋಹನ ತರಂಗಿಣಿ'ಯಲ್ಲಿ ರತಿ ತನ್ನ ಗಂಡ ಕಾಮನನ್ನು ಶಿವ ಸುಡಲು, ಶಿವನನ್ನು ಉದ್ದೇಶಿಸಿ ರತಿ ಹೀಗೆ ಹೇಳುತ್ತಾಳೆ.

"ಸರ್ವರೊಳಗೆ ಮುತ್ತೈದೆಯಾಗಿರ್ದು ವೈ
ಧವ್ಯವನಾಂತು ಬಾಳುವೆನೆ
ಗರ್ವದ ನುಡಿಯಲ್ಲ ತನಗೆ ತನ್ನಾಳ್ದನ
ತರ್ವಾಯ ಮಾಡೆಂದಳಳುತ॥
ಕೊಂಡವ ತೋಡಿಸಬೇಡ ಶುಷ್ಕವ ಸುಟ್ಟು
ಕೆಂಡವ ಮಾಡಿಸಬೇಡ
ಖಂಡೇದುಶೇಖರ ಕಣ್ಣಿಚ್ಚಿನಿಂದೆನ್ನ
ಗಂಡನನುರುಹಿದಂತುರುಹು॥"[೩೬]

ಇಲ್ಲಿ ರತಿ ಸತಿಯಾಗುವುದನ್ನು ಚಿತ್ರಿಸದಿದ್ದರೂ, ರತಿ ವಿಲಾಪವನ್ನು ಚಿತ್ರಿಸುತ್ತ, ಅವಳು ಶಿವನನ್ನು ಕುರಿತು ಸರ್ವರಲ್ಲಿ ನಾನು ಮುತ್ತೈದೆಯಾಗಿದ್ದು, ನನ್ನ ಗಂಡನಿಂದ ನನ್ನುನ್ನು ದೂರ ಮಾಡಿ ಕೊಂಡವೇರುವ ಹಾಗೇ ಮಾಡಬೇಡ ಎಂದು ಶಿವನಿಗೆ ಆಡಿದ ಮಾತುಗಳು ಕಾವ್ಯದ ರೂಪದಲ್ಲಿ ಅಭಿವ್ಯಕ್ತವಾಗಿದೆ. ಇದನ್ನು ಗುರುತಿಸಿದ ಕನಕದಾಸರು ಸಮಾಜದಲ್ಲಿ ತಾವು ಕಂಡ ಸತಿಪದ್ಧತಿಯ ಮುಖವೊಂದನ್ನು ಇಲ್ಲಿ ಪರಿಚಯಿಸಿದ್ದಾರೆ.

ರತ್ನಾಕರವರ್ಣಿಯ ಕಾಲ ಸು. ೧೫೬೦ ಈತ ರಚಿಸಿದ 'ಭರತೇಶ ವೈಭವ' ಕೃತಿಯು ಸಾಂಗತ್ಯದಲ್ಲಿದ್ದು, ಇದು ಬಾಹುಬಲಿ ದೀಕ್ಷೆಗೈದಿದ್ದಾಗ ಅವನ ರಾಣಿಯರು "ನಲ್ಲರನಗಲ್ದಾರು ಸೈರಿಪರು ಮೋಕ್ಷಕೆಯ್ದಿದ ನುಡಿಯಾದರೆ ಹರಣವನಾ ಕ್ಷಣದೊಳೆ ಬಿಸುಡುವರು, ದೀಕ್ಷೆಯೊಳಿಹನೆನೆ

ಬಯಲಾಸೆಯಿಂದೊಮ್ಮೆ ಈಕ್ಷಿಪೆನು"[೩೭] ಎನ್ನುತ್ತ ನಡೆಯುತ್ತಾರೆ. 'ಮೋಕ್ಷೆಕೆಯ್ದಿದ ನುಡಿಯಾದರೆ ಹರಣವನಾ ಕ್ಷಣದೊಳೆ ಬಿಸುಡುವರು' ಎನ್ನುವಲ್ಲಿ ಪತಿ ಸತ್ತು ಸ್ವರ್ಗಕ್ಕೆ ಹೋಗಿದ್ದ ಮಾತಾಗಿದ್ದರೆ, ಪತ್ನಿಯರು ಪ್ರಾಣವನ್ನು ತ್ಯಜಿಸುವರು ಆದರೆ ಇಲ್ಲಿ ಬಾಹುಬಲಿ ದೀಕ್ಷೆಗೈದಿದ್ದಾನೆ ಎಂದು ಕವಿ ವರ್ಣಿಸಿ ಹೇಳುವುದರೊಂದಿಗೆ ಸತಿಸಹಗಮನದ ಸೂಚನೆಯನ್ನು ನೀಡುತ್ತಾನೆ.

ಕೆಂಪುನಾರಾಯಣ ಕಾಲ ಸು. ೧೮೮೦ ಈತ ಗದ್ಯ ರೂಪದಲ್ಲಿ 'ಮುದ್ರಾ ಮಂಜೂಷ'ಎಂಬ ಕೃತಿ ರಚಿಸಿದ ಈ ಕೃತಿಯಲ್ಲಿ "ಪ್ರಾಣಮಂ ತೊರೆದು ಕೊಳ್ಳೋಣ ಎಂದರೆ ಅದು ಮೂರ್ಖ ಸ್ತ್ರೀಯರುಗಳು ಮಾತ್ರ ಆಚರಿಸುವ ದುಷ್ಕೃತ್ಯವು"[೩೮] ಎಂಬ ಮಾತು ಬರುತ್ತದೆ. ಇಲ್ಲಿ ಕವಿ ತನ್ನ ಕಾಲದಲ್ಲಿ ಸತಿ ಹೋಗುವ ಸ್ತ್ರೀಯರನ್ನು ಮುಂದಿಟ್ಟುಕೊಂಡು ಪ್ರಾಣವನ್ನು ಕಳೆದುಕೊಳ್ಳುವ ಸ್ತ್ರೀಯರು ಮೂರ್ಖರು ಎಂಬ ಮಾತನ್ನು ಹೇಳಿರಬೇಕೆನಿಸುತ್ತದೆ ಎಂಬ ಉಲ್ಲೇಖ ಬರುತ್ತದೆ.

ಹೀಗೆ ಪ್ರಾಚೀನ ಹಾಗೂ ಪೌರಾಣಿಕತೆಯ ಪಾತ್ರಗಳು ಸಹಗಮನದ ಮಾತುಗಳನ್ನು ಉಲ್ಲೇಖಿಸುವಲ್ಲಿ ಕನ್ನಡ ಕವಿಗಳು ತಮ್ಮ ಸಮಕಾಲೀನ ಬದುಕಿನಲ್ಲಿಯ ಸತಿ ಆಚರಣೆಗಳನ್ನೇ ಮೂಲವಾಗಿಟ್ಟುಕೊಂಡು ಸತಿ ಆಚರಣೆಗೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ಹೇಳಿ ಕವಿಗಳು ಮುಂದಿನ ಕಥಾ ವಿಸ್ತರಣೆಗೆ ಕೈಹಾಕಿರುವುದು ಮಡಿವಂತಿಕೆಯ ದೃಷ್ಟಿಕೋನವೇ ಆಗಿದೆ ಎಂಬುವುದು ಗಮನಿಸಬಹುದಾದ ಸಂಗತಿಯಾಗಿದೆ.

ಆಧುನಿಕ ಪೂರ್ವ ವಚನ ಸಾಹಿತ್ಯದಲ್ಲಿ ಸಹಗಮನ ಕುರಿತಾದ ಅನೇಕ ಉಲ್ಲೇಖಗಳು ದೊರೆಯುತ್ತವೆ. ಪತಿಯು ಮರಣ ಹೊಂದಿದ ನಂತರ ಪತ್ನಿಯ ಬದುಕು ಅತ್ಯಂತ ದಯನೀಯ ಹಾಗೂ ಗಂಡಾಂತರಕಾರಿಯಾದದ್ದರ ಕುರಿತು ವಚನಕಾರರು ಸ್ತೂಲವಾಗಿ ವಿವರಿಸಿರುವುದನ್ನು ಕಾಣುತ್ತೇವೆ. ಈ ವಿಷಯದ ಕುರಿತು ವ್ಯಕ್ತಪಡಿಸಿರುವ ಅವರ ಅಭಿಪ್ರಾಯಗಳು ಸಾಮಾಜಿಕ ಸಂಪ್ರದಾಯಕ್ಕೆ ಅಂಟಿಕೊಂಡಿರುವುದನ್ನು ವಚನಕಾರರನ್ನು ಸಾಮಾಜಿಕ ಕ್ರಾಂತಿಯ ಹಿನ್ನೆಲೆಯಲ್ಲಿ ನೋಡಿದಾಗ, ಅವರು ಸತಿ ಆಚರಣೆಯ ಕುರಿತಾಗಿ ಕೆಲವೇ ಕೆಲವು ವಚನಗಳನ್ನು ಮಾತ್ರ ನೀಡಿರುವುದು ಆಶ್ಚರ್ಯವೆನಿಸುತ್ತದೆ.

ಇವರು ಸಮಾಜದೊಡನೆ ನೇರ ಸಂಬಂಧವನ್ನಿಟ್ಟುಕೊಂಡು ಸತಿಪದ್ಧತಿಯನ್ನು ತುಂಬಾ ವಿವರವಾಗಿ ಚಿತ್ರಿಸಿ, ಅದನ್ನು ಅಲ್ಲಗಳೆಯಬಹುದಾಗಿತ್ತು. ಆದರೆ ಶರಣರು ಈ ದಿಕ್ಕಿನಲ್ಲಿ ಹೆಚ್ಚು ದೃಷ್ಟಿ ಹಾಕದಿರುವುದು ಒಂದು ಕೊರತೆಯೆಂದೇ ಹೇಳಬಹುದು. ಈ ವಿಷಯದಲ್ಲಿ ವಚನಕಾರರು ವ್ಯಕ್ತ ಮಾಡಿರುವ ಅಭಿಪ್ರಾಯಗಳು ಸಂಪ್ರದಾಯಕ್ಕೆ ಅಂಟಿಕೊಂಡೇ ಇವೆ. ಇದನ್ನು ಗಮನಿಸಿದರೆ ಅವರ ಮನೋಜ್ಞವಾದ ಚಿಂತನೆ ಸಾಮಾಜಿಕ ಪಿಡುಗುಗಳನ್ನು ವಿರೋಧಿಸಿರುವುದು ವ್ಯಕ್ತಗೊಂಡಿದೆ. ಇಂತಹ ವಚನಕಾರರಲ್ಲಿ ಬಸವಣ್ಣ, ಮಾದಾರ ಧೂಳಯ್ಯ, ಅಕ್ಕಮಹಾದೇವಿ, ಷಣ್ಮುಖ

ಶಿವಯೋಗಿಯಂತಹ ವಚನಕಾರರು ಸತಿ ಆಚರಣೆಯ ಚಿತ್ರಣವನ್ನು ತಮ್ಮ ಕೆಲವು ವಚನಗಳಲ್ಲಿ ಕೊಡುತ್ತಾರೆ. ವಚನಕಾರ್ತಿಯೊಬ್ಬಳು ತನ್ನ ಕಾಲದಲ್ಲಿ ಅನುಸರಿಸುತಿದ್ದ ಮರಣ ಪ್ರಕಾರಗಳನ್ನು ತನ್ನ ವಚನದಲ್ಲಿ ಹೀಗೆ ದಾಖಲಿಸಿದ್ದಾಳೆ.

> "ಮರ್ತ್ಯಕ್ಕೆ ಬಂದ ಭಕ್ತಕಾಯರು ತಮ್ಮ ತಮ್ಮ ಗತ್ತಿನಲ್ಲಿಯೇ ಮುಕ್ತರು
> ತಮ್ಮತಮ್ಮ ನಿಷ್ಟೆಯಲ್ಲಿಯೇ ತೃಪ್ತರು.
> ಸ್ವಇಚ್ಛಾ ಮರಣ ಸಂತೋಷ ಮರಣ,ಕಂಟಕ ಮರಣ
> ಖಂಡನೆ ಮರಣ ದಿಂಡುಮರಣ ಅರಿಲಯ ಮರಣ ಶರೀಉನೀರವಯಂ
> ಅಂತರೀಕ್ಷ ಸುಮಾನಯಲಸ್ವಾನುಭಾವ ಐಕಯ ಸದ್ಭಾವಕೂಟ
> ಇಂತೀ ಸರ್ವ ಸಂಭಂದಕಾಯ ಬಯಲಹರುಂಟು
> ನಾನೊಂದುಭಾವಿಸಿ ಕಲ್ಪಿಸಿದವನಲ್ಲ."[೩೯]

ಬಸವಣ್ಣ, ಮಾದಾರ ಧೂಳಯ್ಯ, ಮಹಾದೇವಿಯಕ್ಕ, ಷಣ್ಮುಖ ಶಿವಯೋಗಿ ಮೊದಲಾದ ವಚನಕಾರರು ಸಮಕಾಲೀನ ಸತಿ ಘಟನೆಗಳೊಡನೆ ಸ್ಪಂದಿಸಿದ್ದಾರಲ್ಲದೇ 'ಮಹಾಸತಿ' ಸಂಪ್ರದಾಯ ವನ್ನು ವಚನದ ಮೂಲಕ ಟೀಕಿಸಿರುವುದನ್ನು ಕಾಣಬಹುದು.

ಬಸವಣ್ಣನವರ ವಚನವೊಂದರ ಟೀಕೆ ಈ ರೀತಿ ಇದೆ. ಪುರುಷ ನಿರ್ವಾಣಕ್ಕೆ ಉಗಿವ ಅಗನಿಯ ಹೊಕ್ಕು ತೋರಲು ಬಾರದು, ಒಬ್ಬಾನೊಬ್ಬ ಪುರುಷನು ರಣಮಂಡಲಕ್ಕೆ ಹೋಗಿ ಕಡಿದಾಡಿ ಮಡಿದಲ್ಲಿ ಅವನ ಸ್ತ್ರೀಯಳು ಎಣ್ಣೆ ಅರಿಷಿಣ ಹಚ್ಚಿಕೊಂಡು ಹೂವನ್ನು ಮುಡಿದುಕೊಂಡು ಸತಿ ಹೋದಳೆಂದು ವಿವರಿಸಿದ್ದಾರೆ. ಇಲ್ಲಿ ಸತಿ ಹೋಗುವಾಗ ಹೂವಿನ ದಂಡೆಯನ್ನು ಕಟ್ಟಿಕೊಂಡು, ಕೈಯಲ್ಲಿ (ನಿಂಬೆಹಣ್ಣು, ಮಾದಳ ಫಲ, ಬಾಳೆಹಣ್ಣು, ಕಾಕೇಹಣ್ಣು) ಖಂಡೆಯವ ಹಿಡಿದುಕೊಂಡು ಸತಿ ಹೋಗುತ್ತಿದ್ದರೆಂದು ತಿಳಿದು ಬರುತ್ತದೆ. "ಐದೆ ಅಣಚಿ ಇಲ್ಲದವಳಿಂಗೆ ಸೌಭಾಗ್ಯದ ಹೂವಿನ ಬೊಟ್ಟೇಕೆ, ಬಾಳಿಲ್ಲದವಳ ಒಲೆಯಂತಾತ್ತೆನಗೆ"[೪೦] ಎಂಬ ಮಾತುಗಳಲ್ಲಿ ಬಸವಣ್ಣನವರು ಸಮಾಜದಲ್ಲಿ ಸ್ತ್ರೀಯು ವಿಧವೆಯಾದಲ್ಲಿ ಒಲೆ, ಹೂವು, ಕುಂಕುಮ ಬೊಟ್ಟುಗಳನ್ನು ಧರಿಸಬಾರದೆನ್ನುವ ನಿಷೇಧವಿತ್ತು ಎಂಬುವುದನ್ನು ಉಲ್ಲೇಖಿಸಿದ್ದಾರೆ.

ಈ ರೀತಿ ಪ್ರಸ್ತಾಪವಾಗಿರುವ ವಿಚಾರಗಳು ನೇರವಾಗಿ ಹೆಣ್ಣಿನ ಸಂಬಂಧದಲ್ಲಿ ಹೇಳಿದ ಮಾತುಗಳಾಗಿರದಿದ್ದರೂ, ಅವುಗಳನ್ನು ಯಾವ ಅರ್ಥದಲ್ಲಿ ಬಳಸಲಾಗಿದೆ ಎಂಬುವುದು ಮುಖ್ಯ. ಈ ವಿಷಯಗಳ ಕುರಿತು ವಚನಕಾರರರಿಗಿರುವ ಸಮ್ಮತಿ ಮತ್ತು ವಿರೋಧವು ಮುಖ್ಯವಾಗಿ ಯಾವುದೆಂದು ಈ ಸಂಗತಿಗಳನ್ನಾಧರಿಸಿ ತಿಳಿಯಬಹುದು.

ಇವರ ಟೀಕಿನ ಇನ್ನೊಂದು ವಚನದಲ್ಲಿ ಪುರುಷನೋರ್ವ ಯುದ್ಧದಲ್ಲಿ ಹೋರಾಡಿ ಮಡಿದಾಗ, ಅವನ ಸ್ತ್ರೀ ಅನುಗಮನದ ಮೂಲಕ ಸತಿ ಹೋಗುವ ಪೂರ್ವದಲ್ಲಿ 'ಮೈಗೆ ಅರಿಷಿಣ, ಎಣ್ಣೆ ಹಚ್ಚಿಕೊಂಡು, ಹೂ ಮುಡಿದುಕೊಂಡು ಮುತ್ತೈದೆಯಂತೆ ಸಿಂಗರಿಸಿಕೊಂಡು ಮನೆಮನೆಗೆ ಹೋಗಿ ಕೂರೂಟವನ್ನು ಉಂಬುತ್ತ ಇಪ್ಪತ್ತೇಳು ದಿವಸದ ನಂತರದಲ್ಲಿ ಸತಿ ಹೋಗುತ್ತಿದ್ದರೆಂಬುದು ಸ್ಪಷ್ಟಗೊಳ್ಳುತ್ತದೆ. ಇಲ್ಲಿ "ಮಾಸ್ತಿಯಾಗಿ ಮೆರೆವ ಪರಿಯಂತರ ಪರಿಣಾಮ ವಾಗಿರುವುದು. ಅವಳು ಕಡೆಯಲ್ಲಿ ಸತಿಕಲ್ಲ ಮೇಲೆ ನಿಂತುಕೊಂಡು ಕೈಯಲ್ಲಿ ನಿಂಬೆಹಣ್ಣು ಹಿಡಿದುಕೊಂಡು ಕಿಚ್ಚಿನಲ್ಲಿ ಬಿದ್ದು ಪತಿವ್ರತಾಭಾವದ ಪರೀಕ್ಷೆಯನ್ನು ಕಾಣಿಸಿಹನೆಂದರೆ ಅವಶ್ಯಕವಾಗಿ ಪೂರ್ಣದು"[೬೧] ಎಂಬಲ್ಲಿ ಸ್ತ್ರೀ ಸೌಭಾಗ್ಯವತಿಯಾಗಿ ಮೆರೆಯುವ, ಕೂರೂಟ ಉಂಬುವ ಕಾರ್ಯಗಳನ್ನು ಸತಿ ಹೋಗುವ ಪೂರ್ವದಲ್ಲಿ ಮಾಡಿ ಗಂಡನ ಯಾವುದಾದರೊಂದು ವಸ್ತುವಿನೊಡನೆ ಚಿತೆಯೇರುತ್ತಿದ್ದರೆಂಬ ವಿಷಯ ಬಸವಣ್ಣನವರ ಟೀಕಿನ ವಚನದಲ್ಲಿ ಪ್ರಸ್ತುತವಾಗಿದೆ.

"ಪುರುಷ ಸತ್ತಡೆ ಸತಿ ಮುಂಡೆತನದಂತೆನೀಸಲಾರೆ"[೬೨] ಎನ್ನುವ ಅರಿವಿನ ಮಾರಿತಂದೆಯ ಮಾತು ವಿಧವೆಯ ಸ್ಥಿತಿ ಶೋಚನೀಯವಾಗಿತ್ತು ಎಂಬುವುದನ್ನೇ ಹೇಳುತ್ತದೆ. "ಹೇಳಿದ ಬೋಧೆ ವಿಧವೆಯ ಯೌವನದಂತಾಗಬಾರದು"[೬೩] ಎನ್ನುತ್ತಾನೆ. ಮಡಿವಾಳ ಮಾಚಯ್ಯ ವಿಧವೆಯ ಯೌವ್ವನದ ನಿರರ್ಥಕತೆಯನ್ನು ಹೇಳುತ್ತಾನೆ. "ಗಂಡನಿಲ್ಲದ ಮುಂಡೆಗೆ ಗರ್ಭನಿಂದಡೆ ಅವಳಾರಿಗೆ ಯೋಗ್ಯ"[೬೪] ಎಂದರೆ, ಅರಿವಿನ ಮಾರಿ ತಂದೆ ಎಡವಿದ ವಿಧವೆಯ ದುರ್ಗತಿಯನ್ನು ವಿವರಿಸಿ ಅವಳನ್ನು ತಾನೂ ನಿರಾಕರಿಸುತ್ತಾನೆ. "ಗಂಡನ ಕೂಡ ಸಮಾಧಿಯ ಕೊಂಬ ಹೆಂಡಿರು ಅನಂತ, ಹೆಂಡಿರ ಕೂಡೆ ಸಮಾಧಿಯ ಕೊಂಬ ಗಂಡರುಂಟೇ ಲೋಕದೊಳು"[೬೫] ಎಂದು ಅಂಬಿಗರ ಚೌಡಯ್ಯ ಆಶ್ಚರ್ಯದಿಂದ ಪ್ರಶ್ನಿಸುತ್ತಾನೆ. ಸಮಾಜದಲ್ಲಿ ಗಂಡ ಸತ್ತರೆ ಅವನೊಂದಿಗೆ ಹೆಂಡತಿ ಸಾಯುವುದು ಸಹಜ. ಹೆಂಡತಿ ಸತ್ತರೆ ಅವಳೊಂದಿಗೆ ಗಂಡ ಸಾಯುವುದು ಅಸಹಜ ಮತ್ತು ಸರಿಯಲ್ಲ. ಇದು ಸತಿ ಪದ್ಧತಿಯನ್ನು ಪರೋಕ್ಷವಾಗಿ ಸಮರ್ಥಿಸುವ ನಿಲುವೇ ಆಗುತ್ತದೆ ಎಂಬುವುದನ್ನು ಪುರುಷ ಪ್ರಧಾನ ವ್ಯವಸ್ಥೆ ಪುಷ್ಟೀಕರಿಸುತ್ತದೆ.

ಷಣ್ಮುಖ ಶಿವಯೋಗಿಯು ತನ್ನ ವಚನ ಒಂದರಲ್ಲಿ ಸತಿ ಹೋಗುವ ಸ್ತ್ರೀಯು "ಗಂಡ ಸತ್ತನೆಂದು ಗಂಡನೊಡನೆ ಕೆಂಡವ ಬೀಳುವೆನೆಂದು ಪುಂಡ ವೀರಸ್ತ್ರೀ ತಾನು ದಂಡೆಯ ಕಟ್ಟಿಕೊಂಡು ಖಂಡೆಯವ ಪಿಡಿದು ತಂಡ ತಂಡದ ಜನರ ಮುಂದೆ ಕೊಂಡಕ್ಕೆ ಬೀಳುವುದೇ ಅವಳ ಪತಿವ್ರತಾಧರ್ಮವಾಗಿದೆ."[೬೬] ಇಲ್ಲಿ ಮಹಾಸತಿಯಾಗಲು ನಿಶ್ಚಯಿಸಿದ ಕೆಲವು ಸ್ತ್ರೀಯರು ಕಿಚ್ಚನ್ನು ನೋಡಿ ಹೆದರಿ ಓಡಿಹೋಗುತ್ತಿದ್ದರು ಎಂಬ ವಿಷಯ ಪ್ರಸ್ತಾಪವಾಗಿದೆ. ಇಂತಹ ವಿಷಯಗಳನ್ನು ಮನಗೊಂಡು ಆ ಕಾಲದ ಸ್ತ್ರೀಯೋರ್ವಳ ಸಹಗಮನ ನಿಶ್ಚಯದ ಚಿತ್ರಣವನ್ನು

ಕುರಿತು ಷಣ್ಮುಖ ಶಿವಯೋಗಿಗಳು ತಮ್ಮ ವಚನವೊಂದರಲ್ಲಿ ಹೀಗೆ ಹೇಳುತ್ತಾರೆ.

ಗಂಡ ಸತ್ತನೆಂದು ಗಂಡನೊಡನೆ ಕೆಂಡವ ಬೀಳುವೆನೆಂದು
ಪುಂಡ ವೀರಸ್ತ್ರೀ ತಾನು ದಂಡೆಯ ಕಟ್ಟಿಕೊಂಡು
ಖಂಡೆಯವ ಪಿಡಿದು ತಂಡ ತಂಡದ ಜನರ ಮುಂದೆ
ಮೆರೆದುಕೊಂಡು ಬಂದು
ಕಿಚ್ಚಿನ ಕೊಂಡವ ಕಂಡು ಹೆದರಿ ಹಿಮ್ಮೆಟ್ಟಿದಡೆ
ಅವಳಿಗದೆ ಭಂಗವಲ್ಲದೆ ಶೃಂಗಾರ ಮೆರೆವುದೆ ಅಯ್ಯಾ?
ಪತಿಲಿಂಗ ಸತಿಶರಣ ತನ್ನ ಪತಿವ್ರತಾ
ಭಾಷೆಯ ನುಡಿದು ನಡೆಯಲ್ಲಿ ತಪ್ಪಿದಡೆ
ಅವನ ಭಂಗಕ್ಕೆ ತುದಿಮೊದಲಿಲ್ಲ ನೋಡಾ ಅಖಂಡೇಶ್ವರಾ

(ವ.ಷಿಳಿಶಿ,.ಪು.ಸಂ.೨೭೭)

ಸತಿಯಾಗುವವಳು ದಂಡೆ ಕಟ್ಟಿಕೊಂಡು, ಕೈಯಲ್ಲಿ ನಿಂಬೆ ಹಣ್ಣು ಹಿಡಿದು ತಂಡೋಪಾದಿಯಲ್ಲಿ ಮೆರೆದಿರುವ ಜನರ ಮುಂದೆ ಮೆರವಣಿಗೆ ಮೂಲಕ ಹೋಗುತ್ತಿದ್ದಳು. ಈ ದೃಶ್ಯವನ್ನು ನೋಡಲು ಜನರು ತಂಡೋಪ ತಂಡವಾಗಿ ಬರುತ್ತಿದ್ದರು. ಈ ಸಂದರ್ಭದಲ್ಲಿ ಕೆಲವರು ಸತಿಹೋಗುವಾಗ ಚಿತೆಯನ್ನು ನೋಡಿ ಚಿತಾಪ್ರವೇಶಕ್ಕೆ ಹಿಮ್ಮೆಟ್ಟುತ್ತಿದ್ದುದು ತಿಳಿದು ಬರುತ್ತದೆ. ಹೀಗೆ ಹೆದರಿ ಹಿಂಜರಿದರೆ ಮಹಾಸತಿತ್ವಕ್ಕೆ ಅದು ಭಂಗವಲ್ಲದೇ ಮತ್ತೇನು ಪತಿ ಲಿಂಗ ಸತಿ ಶರಣವಾದಾಗ, 'ಪತಿವ್ರತಾ' ಧರ್ಮದಂತೆ ನುಡಿದು ನಡೆಯದಿದ್ದರೆ, ಸ್ತ್ರೀಯು ಸಮಾಜದಲ್ಲಿ ಅವಮರ್ಯಾದೆಗೆ ಒಳಗಾಗಬೇಕಾಗುವುದು ಎಂಬುವುದನ್ನು ಷಣ್ಮುಖ ಶಿವಯೋಗಿಗಳು ತಮ್ಮ ವಚನವೊಂದರಲ್ಲಿ ಅನಾವರಣಗೊಳಿಸಿದ್ದಾರೆ.

ಈ ನಿರೂಪಣೆಯ ಹಿನ್ನೆಲೆಯಲ್ಲಿ ಪತಿಗೆ ಭಾಷೆಕೊಟ್ಟು ಪೂರೈಸಿದ ಸತಿಯ ಬಲಗೈ ಚಿತ್ರವನ್ನು ಸ್ಮಾರಕವಾಗಿ ಶಿಲೆಯ ಮೇಲೆ ಶಿಲ್ಪಿಗಳು ಬಿಡಿಸುತ್ತಿರಬೇಕೆಂದು ಹೇಳಬಹುದಾಗಿದೆ. ಅದು ಮುಂದೆ ಅವಳ ಸೌಭಾಗ್ಯದ, ಧನ್ಯ ಜೀವನದ ಸಂಕೇತವಾಗಿಯೂ ಜನತೆಗೆ ಆಶೀರ್ವಾದ ಮಾಡಿ ಹರಸುವ ಸಂಕೇತವಾಗಿಯೂ ಪರಿಣಮಿಸಿರಬಹುದು.

ಗಂಡ ಇರುವವರೆಗೆ ಅವನಿಗೆ ಸೇವೆ ಮಾಡುವುದು. ಅವನು ಸತ್ತೊಡನೆ ತಾನೂ ಸಾಯುವುದು. ಇದಲ್ಲದೆ ಸ್ತ್ರೀಯರಿಗೆ ಅನ್ಯ ಮಾರ್ಗವಿರಲಿಲ್ಲ. ಆ ಕಾಲದಲ್ಲಿ ಸಹಗಮನ ವ್ಯಾಪಕವಾಗಿಯೇ ಇತ್ತು. ಗಂಡ ಸತ್ತನೆಂದು ತಿಳಿದೊಡನೆಯೇ ಹೆಂಡತಿಯರು "ಕೊಡಿಸು

ನಮಗೆ ಕಿಚ್ಚ ನಿಮ್ಮ ಮಗನ ಬೆನ್ನಬಿಡದಯ್ಯಬೇಕು."[೪೭] ಎಂದು ಅತ್ತೆಯನ್ನು ಕೇಳುತ್ತಿದರೆಂಬ ಉಲ್ಲೇಖಗಳಿವೆ. ಗಂಡ ಸತ್ತ ಮೇಲೆ ಬೆಂಕಿಗೆ ಬೀಳುವುದಿರಲಿ ಕೆಲವು ಸಲ ಗಂಡ ಸಾಯುವ ಮೊದಲೇ ಸಾಯುವ ಪತಿವ್ರತೆಯರು ಇದ್ದರು.

ಪತಿಯ ಸಾವನು ಕಾಣ್ಬುದನು ಚಿತವೆಂದಾ
ಸತಿವಾಗುರೆ ಮರನೇರಿ
ಅತಿ ವೇಗದಿಂದ ಕೋಟರದೊಳು ಬೆರೆಚಿಟ್ಟು
ಹತಮಾದಳಿಹಿ ಮುಖದಿಂದ

ಗಂಡ ಸತ್ತಾಗ ಅವನೊಂದಿಗೆ ಸಾಯುವ ಹೆಂಡತಿಯರನ್ನು ಹಾಡಿ ಹರಸುತ್ತಿದ್ದರು. ಸಾಯದೇ ಉಳಿದವರನ್ನು "ಇಳೆಯೊಳಗ ಸಮಬಲ ಪತಿಯಳಿದ ಸತಿಗೊಪ್ಪುವುದೇ ಬದುಕುವುದೂ' ಎಂದು ಪ್ರಶ್ನಿಸುತ್ತಿದ್ದರು. ದೃಢ ಪತಿವ್ರತೆ ಹರಸಿ ತಾನುಗ್ಗಡದ ಭಕ್ತಿಯೊಳಗಗ್ನಿ ಪುರುಷನಿಗೆ ಝಡಿತೆಯಲಿ ಬಲ ಬಂದು ಬಿದ್ದಳು"[೪೮] ಎಂದು ದೃಢ ಮನಸ್ಸು ಮಾಡಿ ಸಾಯುವುದೇ ಸರಿಯಾದ ತೀರ್ಮಾನವೆಂದು ಅವಳಿಗೆ ಸೂಚಿಸಲಾಗುತ್ತಿತ್ತು. ಸಾವಿಗೆ ಹೆದರಿ ಬದುಕುಳಿದ ವಿಧವೆಯರನ್ನು ಕುರಿತು ಪತಿವಿಹೀನೆಗೆ ಸಲ್ಲುವುದೇ ಸುವ್ರತ ಭೋಜನ ಸೌಖ್ಯ ಸುಖ ಸಂಗತಿಗಳುಂಟೆ ಎಂದು ಮೂಗು ಮುರಿಯುತ್ತಿದ್ದರು. ಪುರುಷ ಕಾಣದ ಚಲುವಿಕೆ ನಿಷ್ಫಲ ಎಂಬುವುದೇ ಸಮಾಜದ ಭಾವನೆ.

ಮುಂಡೆಯ ತಲೆಯು ನೂಲುಂಡೆಯಂತಿರಬೇಕು
ಮುಂಡೆ ಬಯಿತಲೆಯ ತೆಗೆದರೆ ಕಂಡವರ
ಕೊಂಡಳೆಂದರಿ ಸರ್ವಜ್ಞ

ಎಂದು ಹೇಳುವ ಮೂಲಕ ಸಮಾಜದಲ್ಲಿ ಪತಿಯ ಸಾವಿನ ನಂತರ ಸತಿಯಾದವಳು ಕೇಶ ಮುಂಡನ ಮಾಡಿಸಿಕೊಳ್ಳುವುದೇ ಸರಿ ಎಂಬಂತೆ ಹೇಳಲಾಗಿದೆ.[೪೯] ವಿಧವೆಯಾದವಳು ಅವಲಕ್ಷಣವಾಗಿ ಕಂಡರೆ, ಪರ ಪುರುಷರು ಅವಳ ತಂಟೆಗೆ ಬರದಿರಬಹುದು ಎಂದಿರಬೇಕು. ಅಲ್ಲದೇ ವಿಧವೆಯರಿಗೆ ಆ ಕಾಲದಲ್ಲಿ ಗೌರವ ಕೊಡುವುದನ್ನು ಸಮಾಜ ಸಹಿಸುತ್ತಿರಲಿಲ್ಲ ಎಂಬ ಮಾಹಿತಿ ದೊರೆಯುತ್ತದೆ. "ಗಂಡಸತ್ತವ್ವಗ ರಂಡೆಮುಂಡೆನಬೇಡ ಕಂದನ ಹಿಡಿದು ತಪವಹಾಳ ಅವಳಿಗಿಗ ಗಂಗಾದೇವೆಂದು ಕರಿಬೇಕು"[೫೦] ಎಂದು ಹೇಳಿದೆ. ಇಲ್ಲಿ ಗಂಡನನ್ನು ಕಳೆದುಕೊಂಡ ಹೆಣ್ಣನ್ನು ರಂಡೆಮುಂಡೆ ಎಂದು ಕರೆಯುವ ನೋವನ್ನು ಅನುಭವಿಸಿದ ಹೆಣ್ಣು ಸತಿಮರಣಕ್ಕೆ ದಾರಿ ಮಾಡಿಕೊಂಡಂತೆ ಕಾಣುತ್ತದೆ.

ಗಂಡಸತ್ತವಳಿಗೆ ಎಂಟೆಂಟು ದಿನಸಂತೆ
ಹಣತೆಯ ಎಣ್ಣೆ ಬೊಕ್ಕುತಲೆತಕ್ಕೊಂಡು
ಹುಡುಗರ ಬಾಳಹರಿದಾಳ

ಎಂದು ಗಂಡನನ್ನು ಕಳೆದುಕೊಂಡ ಹೆಣ್ಣನ್ನು ಕತ್ತಲೆಯ ಕೋಣೆಯಲ್ಲಿ ಕುಳಿತುಕೊಳ್ಳುವ ಹಾಗೆ ವ್ಯವಸ್ಥೆ ಮಾಡುತ್ತಿದ್ದರು. ಅಲ್ಲದೇ ಅವಳ ತಲೆಯ ಕೂದಲು ತೆಗೆದು ಬೊಕ್ಕತಲೆಯನ್ನಾಗಿ ಮಾಡುವುದರಲ್ಲಿ ಹೆಣ್ಣನ್ನು ಕೆಲವು ಅನಿಷ್ಟ ಸಂಪ್ರದಾಯಗಳಿಗೆ ಒಳಗಾಗುತ್ತಿದ್ದರು. ಈ ಕಾರಣವಾಗಿ ಅಂತಹ ಆಚರಣೆಗಳನ್ನು ಅನುಸರಿಸುವಲ್ಲಿ ಹೆಣ್ಣು ಅನುಭವಿಸುವ ನೋವು ಹತಾಶೆ, ಅವಮಾನಗಳನ್ನು ಸಹಿಸಿಕೊಳ್ಳಲಾಗದೇ ಸಹಗಮನ ಮರಣಕ್ಕೆ ಸ್ತ್ರೀಯರು ಮುಂದಾಗುತ್ತಿದ್ದುದನ್ನು ತಿಳಿಸುತ್ತವೆ.

ವಿಧವೆಯರ ಕಷ್ಟ ಎಷ್ಟರ ಮಟ್ಟಿನದೆಂದರೆ 'ದೇವ ತನಗೊಡಹುಟ್ಟಿದವಳೆಂದು ನರನೆನ್ನನಾವ ತೆರದಿಂ ಕರೆವನದ್ವರಕೆ ಬರಲುಪ್ಪುದೇ ವಿಧವೆ ಹಯಹಸ್ತಿಗಳ ನಿತ್ತೊಡಾಳ್ವರಾರ್ ಪತಿ ಪುತ್ರರಿಲ್ಲ ತನಗೆ' ಎಂದು ವಿಧವೆಯೊಬ್ಬಳು ಹೇಳುತ್ತಾಳೆ. ವಿಧವೆಯಾದವಳು ಸುಖ ಪಡುವ ಮಾತಿರಲಿ ಎಲೆ ಅಡಿಕೆ ಹಾಕಿದರೂ, "ಮುಂಡೆ ಅಡಕೆಲೆಯನಗಿದರೆ ಕಂಡವರ ಕೊಂಡಳೆಂದರಿ"[೫೧] ಎಂಬ ಮಾತು ಕೇಳಬೇಕಾಗುತ್ತಿತ್ತು ಎಂದು ತಿಳಿದು ಬರುತ್ತದೆ. ಇವೆಲ್ಲವು ಸತಿಪದ್ಧತಿಗೆ ಪೂರಕವಾಗಿ ಕಾರ್ಯನಿರ್ವಹಿಸಿವೆ ಇಂತಹ ಆಚರಣೆಗಳು ಸತಿಪದ್ಧತಿಯನ್ನು ಮತ್ತಷ್ಟು ಬಲಪಡಿಸಿದವು ಎಂಬುವುದನ್ನು ಮರೆಯುವಂತಿಲ್ಲ.

ಮಾದಾರ ಧೂಳಯ್ಯನೆಂಬ ವಚನಕಾರನ ವಚನವೊಂದರಲ್ಲಿ "ಧೀರೆಯಾದ ಮಾಸ್ತಿಯ ವೀರರಾಗಿದ್ದವರು ಮುಡಿಯಲರ, ಹಿಡಿದ ಲಿಂಬೆಯ ಹಣ್ಣ ಬೇಡಿದಡೆ ಕೊಡುವಳು, ಧೃಡವುಳ್ಳ ವೀರರು ತರುವರು"[೫೨] ಎಂಬ ಮಾತು ಬರುತ್ತದೆ. ಇಲ್ಲಿ ಮಹಾಸತಿಯು ವೀರರಾಗಿದ್ದವರಿಗೆ ಹೂವು ಮತ್ತು ಲಿಂಬೆಹಣ್ಣುಗಳನ್ನು ಕೊಡುವುವಳಾಗಿ ಚಿತ್ರಿತವಾಗಿದ್ದಾಳೆ.

ಧೀರೆಯಾದ ಮಾಸ್ತಿಗೆ ವೀರತ್ವವಲ್ಲದೆ
ಹಾರುಣಿಯ ಜನರೆಲ್ಲರೂ ಕೂಡಿ ಹೇಡಿಮಾಸ್ತಿ ಎಂದರೆ ಬಳಿಕ
ವೀರತ್ವವೆಲ್ಲಿಯದೋ
ಧೀರೆಯಾದ ಮಾಸ್ತಿಯ ವೀರರಾಗಿದ್ದವರು
ಮುಡಿಯಲರ, ಹಿಡಿದ ಲಿಂಬೆಯ ಹಣ್ಣು ಬೇಡಿದಂತೆ ಕೊಡುವಳು
ದೃಢವುಳ್ಳ ವೀರರು ತರುವರು ದೃಷ್ಟವ ನೋಡಿರಣ್ಣಾ
ಕೊಡುವಾಕೆ ದಹನವಾದಳು, ಕೊಂಬಾತ ರೂಪಾದ

ಈತ ಬೇಡಿದ ಇಷ್ಟವ ಕೊಟ್ಟಾತನು
ಯಾತವೋ ಆತ್ಮನೋ? ಬಲ್ಲಡೆ ನೀವೇ ಹೇಳಿರಣ್ಣಾ
ನಿಮ್ಮ ಜ್ಞಾನದ ಮುಸುಕ ತೆರೆದು
ಮ್ಮ ಬಲ್ಲವಂತಿಕೆಯ ಕಾಣಬಹುದು
ಕಾಮಧೂಮ ಧೂಳೇಶ್ವರ ಲಿಂಗವನರಿವುದಕ್ಕೆ ಇದೇ ದೃಷ್ಟ

ಎಂದು ಮಾದಾರ ಧೂಳಯ್ಯನು ಸತಿಪದ್ಧತಿಯನ್ನು ನೇರವಾಗಿ ಟೀಕಿಸಿ ಸತಿಯಾಗುವವಳನ್ನು 'ಧೀರೆ' ಎಂದೆಲ್ಲ ಹೊಗಳಿರುವುದಲ್ಲದೆ, ಸಂಪ್ರದಾಯವಾದಿಗಳು ಧರ್ಮದ ಹೆಸರಿನಲ್ಲಿ ಸತಿಪದ್ಧತಿಯನ್ನು ಒಂದು ವಿಶಿಷ್ಟ ಆಚರಣೆಯನ್ನಾಗಿ ಮಾಡಿರುವುದು ಸ್ತ್ರೀ ಸಮುದಾಯಕ್ಕೆ ಮಾಡಿರುವ ದೊಡ್ಡ ಅನ್ಯಾಯವೇ ಎಂದು ಪ್ರಸ್ತಾಪಿಸುತ್ತಾನೆ. ವಿಧವೆಯರು ಕಷ್ಟಪಟ್ಟು ಬದುಕುವುದಕ್ಕಿಂತ ಸತಿಯಾಗುವುದು ಮೇಲು ಎಂಬ ಭಾವನೆ ಇಲ್ಲಿ ವ್ಯಕ್ತವಾಗಿದ್ದು, ಇದು ಅನ್ಯಾಯದ ಪರಮಾವಧಿ ಎಂದು ಟೀಕಿಸಿದ್ದಾರೆ

ಮಾಸ್ತಿಯಾಗಲು ಹೊರಟವಳು ಬೇಡಿದವರಿಗೆಲ್ಲ ತನ್ನ ಅಮೂಲ್ಯ ವಸ್ತುಗಳನ್ನು ಕೊಡುತ್ತಿದ್ದಳು. ಅವಳು ಮಲ್ಲಿಗೆ ದಂಡೆಯನ್ನು ಮುಡಿದು ಕೈಯಲ್ಲಿ ಲಿಂಬೆಹಣ್ಣು ಹಿಡಿದಿರುವುದು ತಿಳಿದು ಬರುತ್ತದೆ. ಕೊಡುವ ದಾನಿಯಾದ ಇವಳು ದಾನಕೊಟ್ಟು ಕೊನೆಗೆ ದಹನವಾಗಿ ಹೋಗುತ್ತಾಳೆಂಬ ಕಟು ಸತ್ಯವನ್ನು ವಚನಕಾರ ತನ್ನ ವಚನದಲ್ಲಿ ಹೀಗೆ ಅನಾವರಣಗೊಳಿಸಿದ್ದಾನೆ.

"ಶರಣಸತಿ ಲಿಂಗಪತಿ ಎಂಬರು
ಶರಣ ಹೆಣಾದಪರಿಇನ್ನೇಂತು
ಲಿಂಗ ಗಂಡಾದ ಪರಿ ಇನ್ನೆನಗನೇಂತೂ
ನೀರು ನೀರ ಕೂಡಿ ಬೆರೆತಲ್ಲಿ ಬೇಧಿಸಿ ಬೇರೆ ಮಾಡಬಹುದೇ
ಗಂಡು ಹೆಣ್ಣು ಯೋಗವಾದಲ್ಲಿ
ಆತುರು ಹೀಂಗೆ ಪಟ್ಟು ಬೇರಾಯಿತು ಶರಣ ಸತಿ ಲಿಂಗ ಪತಿ ಎಂಬ ಮಾತು
ಮೊದಲಿಗೆ ಮೊಸಲಾಭಕ್ಕಧಿಕವುಂಟೇ"[೫೩]

ಎಂದು ಅಂಬಿಗರ ಚೌಡಯ್ಯ ಈ ಪರಿಕಲ್ಪನೆಯನ್ನು ಮೋಸವೆಂದು ತಿರಸ್ಕರಿಸುತ್ತಾನೆ. ನಾನಾ ಮಾರ್ಗಗಳ ಸಾಧಕರ ಸಂಘಟನೆಯಂತೆ ತೋರುವ ವಚನಕಾರರ ಗುಂಪಿನಲ್ಲಿ ಕೂಡಾ ಕೆಲವು ವಿಚಾರಗಳಲ್ಲಿ ಏಕಾಭಿಪ್ರಾಯವಿದ್ದರೆ, ಇನ್ನೂ ಕೆಲವು ವಿಚಾರಗಳಲ್ಲಿ ಭಿನ್ನಾಭಿಪ್ರಾಯವಿದೆ

ಎಂಬುವುದನ್ನು ಇಲ್ಲಿ ತಿಳಿಯಬಹುದು. ಸಮಾಧಿಸತಿಯನ್ನು ಕುರಿತ ಮತ್ತೊಂದು ವಚನದಲ್ಲಿ ಸ್ತ್ರೀಯರು ಹಾಗೂ ಪುರುಷರ ಮಧ್ಯ ಇರುವ ಸಾಮಾಜಿಕ ತಾರತಮ್ಯದ ಮನೋಭಾವವನ್ನು ವಚನದ ಮೂಲಕ ಹೀಗೆ ಟೀಕಿಸುತ್ತಾನೆ.

"ಸತ್ತಡೆ ಸಂಗಡ ಹೂಳಿಸಿಕೊಂಬ ಲಿಂಗವು
ತನ್ನ ಕೊರಳಲ್ಲಿ ಹತ್ತೆಯಾಗಿ ಕಟ್ಟಿರಲು
ನಾನು ಸತ್ಯ ಶುದ್ಧ ಶಿವಭಕ್ತನೆಂದರಿಯದೆ
ಮತ್ತೆ ಅನ್ಯ ದೈವಕ್ಕೆರಗುವ ಕತ್ತೆ ಮೂಳರು ನೀವು ಕೇಳಿರೊ
ಗಂಡನ ಕೂಡೆ ಸಮಾಧಿಯ ಕೊಂಬ ಹೆಂಡತಿ ಅಪೂರ್ವ
ಹೆಂಡಿರ ಕೂಡೆ ಸಮಾಧಿಯ ಕೊಂಬ ಗಂಡರುಂಟೆ ಲೋಕದೊಳು
ಛೀ ಛೀ ಹಂದಿಮೂಳರಿರ ಈ ದೃಷ್ಟವ ಕಂಡಾದರೂ ನಾಚಲಿಲ್ಲವೆ?"[೫೪]

(ವ.೨೫೬. ಪು.೭)

ಈ ರೀತಿ ಗಂಡನ ಜೊತೆಗೆ ಸಮಾಧಿಯನ್ನು ಹಂಚಿಕೊಳ್ಳುವ ಸತಿಯರು ಅಪೂರ್ವವಾಗಿದ್ದಾರೆ. ಆದರೆ ಹೆಂಡತಿ ಸತ್ತಾಗ ಆಕೆಯೊಂದಿಗೆ ಸಮಾಧಿ ಹೊಂದುವ ಗಂಡಸರು ಸಮಾಜದಲ್ಲಿ ಇದ್ದಾರೆಯೇ ಎಂಬ ಪ್ರಶ್ನೆ ಪುರುಷ ಪ್ರಧಾನ ಸಮಾಜವನ್ನು ಎಚ್ಚರಿಸುತ್ತದೆ. ಇಂತಹ ಆಚರಣೆಯನ್ನು ಪ್ರೋತ್ಸಾಹಿಸುವ ಗಂಡಸರನ್ನು 'ಛೀ ಛೀ ಹಂದಿಮೂಳರಿರಾ' ಎಂದು ಟೀಕಿಸಿದ್ದಾರೆ.

ಹಡಪಣ್ಣನ ವಚನವು ಆಧ್ಯಾತ್ಮಿಕ ಜೌನ್ನತ್ಯವನ್ನು ಹೇಳುವುದರೊಂದಿಗೆ ಸಮಾಧಿ ಸತಿಯ ಮತ್ತೊಂದು ಉಲ್ಲೇಖವನ್ನು ನೀಡುತ್ತದೆ. ಸತಿಯರು ಸಿಂಗರಿಸಿಕೊಂಡು ಚಿತೆಯನ್ನೇರಲು ಹೋದ ಚಿತ್ರಣವನ್ನು ವಚನವು ಅಭಿವ್ಯಕ್ತಿಸುತ್ತದೆ.

"ಆಧಾರದ ಕುಂಡಿಲಿ ಸರ್ಪನ
ಮಂಡೆಯು ಮೆಟ್ಟಿ ನಿಲಲು
ಗಂಡಾಳು ಕಾಲಕಾಮರಿಬ್ಬರು ಹತವಾದರು
ಅವರ ಹೆಂಡಿರುಗಳು ಮುಂಡೆ ಮುಚ್ಚಿದರು
ದಂಡೆಯ ಮುತ್ತಿದರು ತೊಂಡಿಲ ಹರಿದರು
ತಮ್ಮ ಗಂಡರ ಕೂಡಿ
ಸಮಾಧಿಯ ಹೊಕ್ಕರು"[೫೫]

ಇಲ್ಲಿ ಗಂಡಂದಿರು ಹೋರಾಟದಲ್ಲಿ ಮಡಿದಾಗ ಅವರ ಹೆಂಡತಿಯರು ಪತಿಯ ಮರಣದ ನಂತರ ತಾನು ವಿಧವೆ ಈ ಸಮಾಜದಲ್ಲಿ ತನ್ನವರಾರೂ ಇಲ್ಲ ಎಂಬ ಪರಿಕಲ್ಪನೆಯಲ್ಲಿ ಸ್ತ್ರೀಯು ಹೂವಿನ ದಂಡೆ ಕಟ್ಟಿಕೊಂಡು ಸತಿ ಹೋಗುವಾಗ ಅದರ ತೊಂಡಲನ್ನು ಹರಿದರು. ತಮ್ಮ ಗಂಡನೊಂದಿಗೆ ಸ್ವರ್ಗದಲ್ಲಿ ಒಂದಾಗುವೆನೆಂಬ ಮನೋಭಾವದಿಂದ ಜೀವಂತವಾಗಿ ಸಮಾಧಿಯನ್ನು ಹೊಕ್ಕರು ಎಂಬುವ ವಿವರಣೆಯ ಮೂಲಕ ಅಂದಿನ ಸಮಾಜದಲ್ಲಿ ಸತಿಪದ್ಧತಿಯ ಆಚರಣೆಯಿದ್ದು ಅದನ್ನು ಅಲ್ಲಗಳೆಯಬೇಕೆಂದು ತಿಳಿಸಿದರು.

ಸಿಂಗಿರಾಜ ಪುರಾಣವು ಹನ್ನೆರಡನೇ ಶತಮಾನದಲ್ಲಿ ನಡೆದಿರುವ ಬಿಜ್ಜಳನ ತಾಯಿಯ ಸಹಗಮನವನ್ನು ಉಲ್ಲೇಖಿಸುತ್ತದೆ.[೫೬] ಕರ್ನಾಟಕದಲ್ಲಿರುವ ಕಲಚೂರಿ ಮನೆತನದ ಅರಸನಾದ ಬಿಜ್ಜಳನು ರಾಜ್ಯಭಾರ ಮಾಡಿರುವುದು ತಿಳಿದು ಬರುತ್ತದೆ. ಬಿಜ್ಜಳನು ಚಿಕ್ಕವನಿರುವಾಗಲೇ ಅವನ ತಾಯಿಯು ಗಂಡ ಮರಣ ಹೊಂದಲಾಗಿ ಸಹಗಮನ ಮಾಡಿಕೊಂಡರೆಂದು ಸಿಂಗಿರಾಜ ಪುರಾಣದಲ್ಲಿ ಉಲ್ಲೇಖವಿದೆ. ಎಂ.ಎಂ.ಕಲಬುರ್ಗಿ ಅವರು "ಬಸವಣ್ಣನವರ ಮರಣ ಕ್ಷಣದಲ್ಲಿ ನೀಲಮ್ಮನವರು ಲಿಂಗೈಕ್ಯರಾದುದು ಸ್ಥೂಲವಾಗಿ ಸಹಗಮನವೆನಿಸುವುದು ಎಂದು ಹೇಳಿರುವುದನ್ನು ಇದೇ ಸಂದರ್ಭದಲ್ಲಿ ಸ್ಮರಿಸಬಹುದಾಗಿದೆ."[೫೭]

'ವಿರಕ್ತ ತೋಂಟದಾರ್ಯನ ಸಿದ್ದೇಶ್ವರ ಪುರಾಣ'ದಲ್ಲಿ ಅನುಗಮನ ಮಾಡಿದ ವೀರನೊಬ್ಬನ ಪತ್ನಿಯೊಬ್ಬಳ ಚಿತ್ರಣ ದೊರಕುತ್ತದೆ. 'ಸತಿಯೋರ್ವಳು ತನ್ನ ಪತಿ ದೂರದೊಳು ಪೋಗಿ ಕ್ಷಿತಿವರರ ಸಮರಾಂಗಣದೊಳು ಯುದ್ಧ ಗೈದು ಹತನಾದನೆಂಬುದು ತನ್ನ ಬಂದುಗಳಾಪತ್ರರಿಂಕೇಳ್ದು ನಿಜವಾಗಲು ಮೃತ ಒಪ್ಪೆವುಳಿನೆಂದು ಇಚ್ಚೆಸಿ ಸತಿ ಹೋಗುತ್ತಾಳೆ.' ಇಲ್ಲಿ ಮೃತನಾದ ವ್ಯಕ್ತಿ ವೀರನಾಗಿದ್ದಾನೆ. ಅವನು ಕ್ಷಿತಿವರರ ರಣರಂಗದಲ್ಲಿ ಯುದ್ಧಮಾಡಿ ಕೊಲ್ಲಲ್ಪಟ್ಟಿದ್ದಾನೆ. ಯುದ್ಧ ಭೂಮಿಯಾದರೂ ಅವನ ಪತ್ನಿ ಯುದ್ಧ ಸ್ಥಾನದಿಂದ ಬಹುದೂರದಲ್ಲಿದೆ ಅವನು ಮಡಿದ ಸುದ್ದಿ ಅವನ ಬಂಧುಗಳಿಗೆ ತಿಳಿದು ಅವಳು ಸತಿ ಹೋಗುತ್ತಾಳೆ.

ದೂರದ ಸಮರದಲ್ಲಿ ಮಡಿದ ಗಂಡನ ಸುದ್ದಿ ಬಂಧುಗಳಾಪ್ತರಿಂಕೇಳ್ದು ನಿಜವಾಗಲು ಎನ್ನುವ ಮಾತು ತುಂಬ ಮುಖ್ಯವಾಗಿದೆ. ಆ ವಿಷಯ ನಿಜವೆಂದು ಗುರುತಿಸಿಕೊಳ್ಳುತ್ತಾಳೆ. ಕುರುಹು ಇದ್ದಾಗ ಅವಳು ಉಳಿಯದೇ ಮರಣ ಹೊಂದಲು ಇಚ್ಚೆಸಿ ಬೀದಿ ಬೀದಿಗಳಲ್ಲಿ ವಾದ್ಯ ಸಮೇತ ಮೆರೆದು ಸತಿ ಹೋಗುತ್ತಾಳೆ. ಪತಿ ಮಡಿದನೆಂಬುದನ್ನು ಕೇಳಿ ಪತ್ನಿಯೋರ್ವಳು. ಅರಿಷಿಣ ಸೀರೆ ತೊಟ್ಟು ಗಂಡನನ್ನು ಪಡೆಯಲು ಮದುಮಗಳಂತೆ ಸಿಂಗರಿಸಿಕೊಂಡಿರುವುದನ್ನು ಹೀಗೆ ಹೇಳುತ್ತಾನೆ. "ಸೂಸಕದಂಡೆಯುತವಾದಮುಂಡೆ ಅರಿಸಿನದ ಸೀರೆಯುಟ್ಟು ಆಭರಣಗಳನ್ನು

ತೊಟ್ಟು, ಪರಿ ಪರಿಯ ಪುಷ್ಪ ಮಾಲಾನುಲೇಪನಗಳಿಂಪೆರಿದಲಂಕರಿಸಿ ಜಂಬೀರ ಫಲಮಂ ಪಿಡಿದು ತರದೆ ಮತ್ತೊಂದು ಕಯ್ಯೊಳಗೆ ಕೈ ಪಿಡಿವಿಡಿದು"[೫೮] ಸತಿಯಾಗಲು ಉತ್ಸಕಳಾಗಿ ಹೊರಡುತ್ತಾಳೆಂದು ತಿಳಿದು ಬರುತ್ತದೆ.

ಇಮ್ಮಡಿ ಚಿಕ್ಕ ಭೂಪಾಲನ ಸಾಂಗತ್ಯದಲ್ಲಿ ತೋಂಟದಾರ್ಯನ ಮಡದಿ ಚೆನ್ನಬಸವಮ್ಮ ಸತಿಯಾಗುವಾಗ ವೈಭವಯುತವಾಗಿ ಅಲಂಕರಿಸಿಕೊಂಡಿರುವುದನ್ನು ಹೀಗೆ ಚಿತ್ರಿಸಲಾಗಿದೆ.

"ಎಡಗೈಯ ಮಣಿಗನ್ನಡಿ ಬಲಗೈಯ್ಯೊಳು
ಪಿಡಿದಲಗುವ ಜಮದಾಡೆ
ಮುಡಿದ ಗರಿಯ ಬಾಸಿಗವಮರಿದ ರನ್ನ
ದೊಡವೊಪ್ಪಲೈತಂದಳಾಗ"[೫೯]

ಪದ್ಯದಲ್ಲಿ ಚೆನ್ನಬಸವಮ್ಮ ಮಣಿಗನ್ನಡಿ, ಜಮದಾಡೆ, ತಲೆಗೆ ಗರಿಯ ಬಾಸಿಂಗ, ಅಪರೂಪದ ರತ್ನದ ಒಡವೆಗಳನ್ನು ಧರಿಸಿ ಸತಿಹೋದಳೆಂಬ ಉಲ್ಲೇಖ ಬರುತ್ತದೆ.

ಮಹಾಲಿಂಗ ಸ್ವಾಮಿಯ 'ಬಾಲರಾಮನ ಸಾಂಗತ್ಯ'ದಲ್ಲಿ ಪತಿ ಮರಣ ಹೊಂದಿದ ಮೇಲೆ ಅವನ ಸತಿ ಶಿವನನ್ನು ಧ್ಯಾನಿಸುತ್ತ ಆತ್ಮ ಬಲಿದಾನ ಮಾಡಿಕೊಳ್ಳುತ್ತಿದ್ದ ಸಂಗತಿಯು ಕಾವ್ಯದಲ್ಲಿ ಹೀಗೆ ಚಿತ್ರಿಸಲಾಗಿದೆ.

"ಪತಿ ಅಳಿದು ನಾನಿ
ದುರ್ಗ ಗತಿಯೇನು ಧರೆಯೊಳಗೆ
ಜೊತೆಗೂಡಿ ನಡೆಯೆ ಪತಿಯೊಡನೆ
ಸಿತಿಕಂಠ ವರಪುತ್ರ ಶರಭನ ವಂದಿಸಿ
ಹತಮಾಡಿಕೊಂಬೆ ಪ್ರಾಣವನು॥"[೬೦]

ಕುಮಾರ ರಾಮನ ಸತಿಯರ ಸಾಂಗತ್ಯದಲ್ಲಿ ಕುಮಾರ ರಾಮನ ತಾಯಿ ಹರಿಹರದೇವಿಯು ಸೊಸೆಯಂದಿರಿಗೆ ಸತಿಹೋಗಲು ಮಗನ ತಲೆಯನ್ನು ತಂದು ಕೊಡುವಂತೆ ಮಂತ್ರಿ ಬೈಚಪ್ಪನಿಗೆ ಹೇಳುವ ವಿಷಯವನ್ನು ಇಲ್ಲಿ ಸ್ಮರಿಸಬಹುದು ಜೊತೆಗೆ ಬೈಚಪ್ಪನು ಸಹಗಮನದ ಸಿದ್ಧತೆಗೆ ಕೊಂಡ ಮಾಡಿದ ವ್ಯವಸ್ಥೆ ಹೀಗಿದೆ.

ಕುವರೊಡನೆ ಸತ್ತ ಸುಭಟರ ತಲೆಗಳ
ನವರವರಂಗನೆಯರಿಗೆ
ತವಕದಿಂ ತರಿಸಿಕೊಟ್ಟುರಿಗೊಂಡಗಳ ಬೇರವರಿಗೆ ಮಾಡಿಸಿದನು.

ಕುಮಾರ ರಾಮನೊಡನೆ ಸತತ ಸುಭಟರ ತಲೆಗಳನ್ನು ಅವರವರ ಪತ್ನಿಯರಿಗೆ ಒಪ್ಪಿಸಿಕೊಡುವ ವಿವರ ಇಲ್ಲಿದೆ. ಸಹಗಮನಕ್ಕಾಗಿ ಅವರಿಗೆ ಬೇರೆ ಬೇರೆ ಕಿಚ್ಚಿನ ಕೊಂಡಗಳನ್ನು ಮಾಡಿಕೊಡುವ ಅಪೂರ್ವ ವಿಚಾರಗಳು ಇಲ್ಲಿ ದೊರಕುತ್ತವೆ. 'ಕುಮಾರ ರಾಮನ ಸಾಂಗತ್ಯ'ದಲ್ಲಿಯ ಈತನ ಪತ್ನಿಯರು ಪಲ್ಲಕ್ಕಿಯಲ್ಲಿ ಸ್ನಾನಕ್ಕೆ ಹೋಗಿದ್ದನ್ನು ನಂಜುಂಡ ಕವಿ ಪದ್ಯವೊಂದರಲ್ಲಿ ಹೀಗೆ ಚಿತ್ರಿಸಿದ್ದಾನೆ.

ಪಲ್ಲಕ್ಕಿಗಳ ಮೇಲೆ ಚೆನ್ನಿಗರಾಯನ
ವಲ್ಲಭೆಯರ ಕುಳ್ಳಿರಿಸಿ ನಿಲ್ಲದೆ ಕೊಂಡೊಯ್ದು ಕೊಂಡದ ಕೆಲ
ನಿಲ್ಲಿಸಿ ತೆರೆವಿಡುದು ಹೀಗಡ ಹೀ

ಕೆಲವು ಸತಿಯರು ಪಲ್ಲಕ್ಕಿಗಳಲ್ಲಿ ಕುಳಿತುಕೊಂಡು ಸತಿ ಸ್ಥಾನಕ್ಕೆ ಹೋಗಿರುವುದರ ಕುರಿತ ಅಪರೂಪದ ವಿವರಗಳು ಸಿಗುತ್ತವೆ. ಹೆಚ್ಚು ಜನ ಸ್ತ್ರೀಯರು ಕಾಲ್ನಡಿಗೆಯಲ್ಲಿಯೇ ಸತಿ ಸಾಮಾನ್ಯವಾಗಿ ಸತಿ ಹೋಗುವ ಸ್ಥಾನಕ್ಕೆ ಹೋಗಿರಬೇಕೆನಿಸುತ್ತದೆ. ಶ್ರೀಮಂತ ವರ್ಗದ ಜನಮಾತ್ರ ಕುದುರೆ, ಪಲ್ಲಕ್ಕಿಗಳಲ್ಲಿ ಸತಿ ಮೆರವಣಿಗೆ ಹೋಗುತ್ತಿರಬೇಕು. ಬಡ ವರ್ಗದ ಸ್ತ್ರೀಯರು ವಾದ್ಯಗಳ ಜೊತೆ ಕುಣಿಯುತ್ತ ನೇರವಾಗಿ ಸತಿ ಹೋಗುವ ಸ್ಥಳಕ್ಕೆ ಹೋಗಿರಬೇಕೆನಿ ಸುತ್ತದೆ. ಕುಮಾರರಾಮ ದೆಹಲಿ ಸುಲ್ತಾನನ ಸೈನ್ಯದೊಂದಿಗೆ ನಿರ್ಣಾಯಕ ಯುದ್ಧ ಮಾಡಲು ನಿಶ್ಚಯಿಸಿ ತನ್ನ ಐದು ಜನ ರಾಣಿಯರನ್ನು ಕರೆಯಿಸಿಕೊಂಡು 'ನನ್ನ ಅಳಿವಾದಾಗ ಬರಬೇಕು ಎನ್ನೊಡನೆ' ಎಂದು ಕೇಳಿಕೊಳ್ಳುತ್ತಾನೆ. ಅದಕ್ಕೆ ಅವರು ಸಮ್ಮತಿಸಿದುದನ್ನು 'ಬಾಲರಾಮನ ಸಾಂಗತ್ಯ'ದಲ್ಲಿ[೬೧] ಹೀಗೆ ಹೇಳಲಾಗಿದೆ.

ರಾಯ ರಾಮನು ಕರೆಸಿ ರಾಣಿಯರೈವರ
ಬಾರೆನ್ನರಂಭೇ ಊರ್ವಸಿಯೆ।
ಬಾರೆನ್ನ ರತಿ ಭಾಗ್ಯದ ಸ್ತ್ರೀ ಲಕ್ಷ್ಮಿ(ಯೆ)
ಬಾರೆನ್ನ ಚಂದ್ರನ ಕಳೆಯೇ ॥೨೦೭॥
ಮಡದಿಯರೈವರ ತೋಳೆಡೆಯೊಳು ಕುಳ್ಳಿರಿಸಿ
ಪರಿವಾರ ಸಮೇತ ಮಧ್ಯದಲ್ಲಿ।
ಪಿಡಿದು ಗಲ್ಲಗಳನು ಲಯಗಾಲ ಕೇಳಲು ನೀವು
ಬರಬೇಕು ಎನ್ನೊಡನೆ ಎನಲು ॥೨೦೮॥
ಮಲೆವರಾಯರ ಗಂಡ ರಣವಿಜಯ ಕಲಿಪಾರ್ಥ

ಹಿಡಿ(ನ)ಮ್ಮ ಅಭಯ   ಹಸ್ತವನು

ಎರೆಗೆಡದೆ ವೈರಿಯ ಕಡಿ ನಾವು ಬರುವುದಕೆ

ಎರಡೆಂದು ಬೇಡ ಬೆನ್ನೊಡನೆ ॥೨೦೯॥

ಸಿದ್ಧಕವಿಯು ರಚಿಸಿದ 'ಸಿರುಮಣ ನಾಯಕನ ಸಾಂಗತ್ಯ'ದಲ್ಲಿ ವೀರಣ್ಣನ ಪತ್ನಿಯರು ಸಮಾಧಿ ಸತಿಯಾಗಿರುವುದರ ಉಲ್ಲೇಖಗಳಿವೆ.[೬೨] ಸಿರುಮಣ ವಿಜಯನಗರದ ಅರಸ ನರಸಿಂಹ ನೊಂದಿಗೆ ಯುದ್ಧ ಮಾಡಿದ ಘಟನೆಯನ್ನು ಈ ಕೃತಿ ವಿವರಿಸುತ್ತದೆ. ಯುದ್ಧದಲ್ಲಿ ಸಿರುಮಣ ಮಗ ವೀರಣ್ಣನನ್ನು ನರಸಿಂಹನ ಕಡೆಯವನಾದ ತಿಪ್ಪನು ಡೆಂಕಣಿ ಗುಂಡಿನಿಂದ ಹೊಡೆದು ಕೊಲ್ಲುತ್ತಾನೆ. ಇವನ ಶವವನ್ನು ಭಟರು ಎತ್ತಿಕೊಂಡು ಹೋಗುತ್ತಾರೆ. ಆಗ ಅವನ ಹೆಂಡತಿಯರು ಅವನ ಶವದೊಂದಿಗೆ ಜೀವಂತ ಸಮಾಧಿಯಾಗುತ್ತಾರೆ. ವೀರಣ್ಣನ ಶವವನ್ನು ತಂದಾಗ ಎಲ್ಲರೂ ದುಖಿಃಸುತ್ತಾರೆ. ತಾಯಿ ಚಿಕ್ಕಾಯಿ ದುಃಖಪಡುತ್ತಾಳೆ. ಆಗ ವೀರಣ್ಣನ ರಾಣಿಯರು ಮಾಣಿಕ್ಯದ ಹಾರ ದುಕೂಲದ ಸೀರೆಯನ್ನುಟ್ಟು ಚಿನ್ನದ ಬಳೆಗಳನ್ನು ತೊಟ್ಟು ಶೃಂಗಾರವಾಗಿ ಬಂದು ವೀರಣ್ಣನಿಗೆ ನಮಸ್ಕರಿಸಿ ವೀರ ಸ್ವರ್ಗ ಕೊಡೆಂದು ಪ್ರಾರ್ಥಿಸುತ್ತಾರೆ.

ಇಲ್ಲಿ ವೀರಯ್ಯನ ಪತ್ನಿಯರು ಸಿಂಗರಿಸಿಕೊಂಡು ಸತಿ ಹೋಗಲಿರುವ ಬಗೆಯನ್ನು ಕುರಿತು ಹೀಗೆ ಚಿತ್ರಿಸಲಾಗಿದೆ.

ಹೊನ್ನ ಪುತ್ಥಳಿಯ ಹೋಲುವ ಮುಖಕಾಂತಿಯ

ರನ್ನ ಗನ್ನಡಿಗದಪುಗ (ಳ)

ಚೆನ್ನ ಮುತ್ತಿನ ಬಯಿತಲೆಬೊಟ್ಟನಿಟ್ಟ(ರು)

ರನ್ನ ಮಾಣಿಕದ ಹಾರಗ(ಳ)

ಉತ್ತಮ ನಾಣ್ಯದುಕೂಲ ಸೀರೆಗಳನು

ಮತ್ತೆ (ನಿ)ರಿಯ ತೆಗೆದುಟ್ಟು

ಕತ್ತುರಿ ಪುಣುಗು ಜವಾದಿಯ ಲೇಪಿಸಿ

ಹಸ್ತಕಿಟ್ಟರು ರನ್ನ ಬಳೆಯ

ಹೀಗೆ ವೀರಯ್ಯನ ಪತ್ನಿಯರು ಸತಿ ಹೋಗುವಾಗ ಮುತ್ತಿನ ಬೈತಲೆ, ಹಣೆಗೆ ಬೊಟ್ಟು, ಕೊರಳಲ್ಲಿ ಮಾಣಿಕ್ಯದ ಹಾರ, ಕೈಯಲ್ಲಿ ರತ್ನದ ಬಳೆ, ಅದೇ ಆಗ ತೆಗೆದ ರೇಷ್ಮೆ ಸೀರೆಯನ್ನುಟ್ಟು, ವಿವಿಧ ಆಭರಣಗಳನ್ನು ತೊಟ್ಟು, ಕಸ್ತೂರಿ, ಪುಣುಗು, ಜವಾದಿಗಳೆಂಬ ಸುಗಂಧ ದ್ರವ್ಯಗಳನ್ನು

ಲೇಪಿಸಿಕೊಂಡು ಕಾರ್ಮಿಂಚು ಹೊಳೆವಂತೆ ಶೃಂಗಾರ ಮಾಡಿಕೊಂಡು ಸತಿ ಹೋದರೆಂಬುದು ಉಲ್ಲೇಖಗೊಂಡಿದೆ.

ಕುಮಾರ ವೀರಯ್ಯನು ಯುದ್ಧದಲ್ಲಿ ಮರಣ ಹೊಂದಲಾಗಿ ಅವನೊಡನೆ ಅವನ ಪತ್ನಿಯರು ಸಮಾಧಿಗೊಳ್ಳಲು ಕುದುರೆಯ ಮೇಲೆ ಬಂದುದನ್ನು ಕವಿ ಹೀಗೆ ತಿಳಿಸುತ್ತಾನೆ.

"ಪನ್ನಂಗ(ತೊ)ಳಗೆ ಕುಮಾರವೀರಯ್ಯನ
ಕನ್ನೆವೆಂಡಿರು ತುರಗದಲಿ
ಚೆನ್ನ ಸ್ವರ್ಗವ ಸೂರೆಗೊಂಬಂತೆ ನಡೆದರು
ಉನ್ನಂತವರ ಸ್ವರ್ಗ ಗೃಸೊರೆಗೊಂಬತೆ ನಡೆದರು
ಕಾರ್ಮಿಂಚು ಹೊಳೆವಂತೆ ಶೃಂಗಾರವ ಮಾಡಿ
ನಾರಿಯರತಿ ಪುಟವೇರಿ
ವೀರಣ್ಣನಡಿಗೆ ವಂದಿಸಿ ಬೇಡಿಕೊಂಡರು
ವೀರಸ್ವರ್ಗವನು ಕೊಡೆಂದು"[೬೩]

ಕುಮಾರರಾಮನ ಸತಿಯರು ಶೃಂಗರಿಸಿಕೊಂಡು ಸೋಮೇಶ್ವರನ ಪಾದಕ್ಕೆ ನಮಸ್ಕರಿಸುತ್ತಾರೆ. ಅನಂತರ ವೀರಭದ್ರನ ದೇವಾಲಯದ ಆವರಣದಲ್ಲಿ ವೀರಣ್ಣನ ಜೊತೆ ಜೀವಂತ ಸಮಾಧಿಯಾಗುತ್ತಾರೆ.

"ತಪವಿರ್ದುಹಡೆದೆನೀ ವೀರಯ್ಯನ
ತಪವಿಂದು ವಿಫಲವಾಯ್ತು
ತಪಸಿ ವೀರೇಶ್ವರಲಿಂಗನಾಲಯದಲಿ
ವಿಪರೀತವಾಯ್ತು ಸಮಾಧಿ"[೬೪]

(ಸಂಧಿ–೩ ಪು.೧೭೨)

ವೀರಣ್ಣ ಯುದ್ಧದಲ್ಲಿ ಮರಣ ಹೊಂದುತ್ತಾನೆ. ಆಗ ಅವನ ಪತ್ನಿಯರು ಅವನ ಶವದೊಂದಿಗೆ ಜೀವಂತ ಸಮಾಧಿಯಾಗುತ್ತಾರೆ.[೬೫] ಇವನ ಸತಿಯರು ಬಾಗಿನ ಕೊಟ್ಟು ವೀರಯ್ಯನ ಸಮಾಧಿಯಲ್ಲಿ ಕುಳಿತುಕೊಳ್ಳುತ್ತಾರೆ. ಮಣ್ಣು ಮುಚ್ಚಿ ಅವರನ್ನು ಜೀವಂತ ಸಮಾಧಿ ಮಾಡಲಾಗುತ್ತದೆ. ಈ ವಿಷಯ ಕಾವ್ಯದಲ್ಲಿ ಹೀಗೆ ಅಭಿವ್ಯಕ್ತವಾಗಿದೆ.

“ಬಾಗಿನವನು ಕೊಟ್ಟು ಬಂದರು ಸತಿಯರು
ಬೇಗ ಸಮಾಧಿಗೆ ಕುಳಿತು
ಭೋಗಿ ಭೂಷಣ ಕೈಲಾಸಕೆ ನಡೆಯೆನು
ತಾಗ ಸಮಾಧಿ(ಯು)ಮುಗಿಯೆ।
ಹರಶರಣರು ಉಘೆಯೆನುತಲಿ ಸಿರುಮಗೆ
ಧರಿಸಿದರಾಗ ಭಸಿತವ
ಸರಿಸಿಜವದನೆ ಚಿಕ್ಕಾಯಿ ಶೋಃಖಿಸುತಲಿ
ತಿರುಗಿದಳಾಗ ಮಂದಿರಕೆ”[೬೬]

(ಸಂಧಿ ೩ ಪು.೧೭೫-೧೭೬)

ಇಲ್ಲಿ ವೀರಯ್ಯನ ಪತ್ನಿಯರು ಸಮಾಧಿಯಲ್ಲಿ ಕುಳಿತು ಸತಿ ಹೋಗುವುದನ್ನು ಕಾಣುತ್ತೇವೆ. ‘ಸಮಾಧಿಯು ಮುಗಿಯೆ’ ಎನ್ನುವಲ್ಲಿ ಅಗೆದ ನೆಲದಲ್ಲಿ ಪತಿಯೊಂದಿಗೆ ಸತಿಯರನ್ನು ಕುಳ್ಳಿರಿಸಿ ಮಣ್ಣು ಮುಚ್ಚಿದರು. ಎಂಬ ಅರ್ಥ ಗೋಚರವಾಗುತ್ತದೆ.

ಇಂತಹದೇ ಪ್ರಸಂಗವೊಂದು ‘ಸಿರುಮಣ ನಾಯಕನ ಸಾಂಗತ್ಯ’ದಲ್ಲಿ ಅತೀ ಭೀಕರವಾಗಿ ಕಾಣಿಸಿಕೊಳ್ಳುತ್ತದೆ.

“ಆರುನೂರು ರಂಬೆವೆಣ್ಣಿಗೆ ತಂದು ಕೊಟ್ಟರು
ಕುರುಹಿನ ಕಾಲಕುಪ್ಪಸವ
ಮೆರೆವ ರಭಸಕೆ ಸುಸುಕ ದಂಡೆಯ ತಮ್ಮ
ತುರುಬಿನೊಳಳವಡಿಸಿದರು

ದರುಶನ ಕಳೆಯುಳ್ಳ ಹೆಣ್ಣು ಮಕ್ಕಳಿಗೆಲ್ಲ
ಬೆರಸಿ ಕರ್ಪೂರೆ ತೈಲವನು
ತರಸಿ ಹೇಮದ ಬಟ್ಟಲೊಳು ಕೊಡೆ ವಿಷಕೊಂಡು
ಸೊರಗಿ ಬಿದ್ದರು ಅವನಿಯಲಿ
ಹಿರಿಯ ಕಾಚಣ್ಣ ರಾಟಿಯ ಸೋಮಯ್ಯಗೆ
ಬೆರೆಸಿಕೊಟ್ಟರು ಬಟ್ಟಲೊಳಗೆ
ಮರವಟ್ಟು ಸೊರಗಿ ಬೀಳಲು ಕೊಂಡಕೆಳೆದ(ನು)

ದುರುಳಕುಮಾರ ಮಲ್ಲಣನು
ಮೀಡಿಯ ಗಾಯಕೆ ಬಿದ್ದ ಮಡದಿಯರೆಲ್ಲರ
ಕೆಡಹಿ ಕೊರಳ ಕೊಯ್ಯುತಲಿ
ಹಿಡಿ ಹಿಡಿದೆತ್ತಿ ಕೊಂಡಕೆ ಹಾಕಿ ಮಲ್ಲಣ್ಣ
ಸುಡು ಸಂಸಾರವೇಕೆಂದ"[೬೭]

'ರಾಮನಾಥ ಚರಿತ'ದಲ್ಲಿ ಸ್ತ್ರೀಯರೇ ಅಗ್ನಿಕುಂಡದಲ್ಲಿ ಹಾರಿಕೊಳ್ಳುವುದನ್ನು ಕಂಡರೆ, 'ಸಿರಮಣನಾಯಕನ ಸಾಂಗತ್ಯ'ದಲ್ಲಿ ಸ್ತ್ರೀಯರ ತಲೆಯನ್ನು ಕತ್ತರಿಸಿ ಅವರನ್ನು ಅಗ್ನಿಕುಂಡಕ್ಕೆ ಎಳೆದು ಹಾಕುವುದನ್ನು ಕಾಣುತ್ತೇವೆ. ಇಲ್ಲಿ ಜೋಹರ ಸಂಪ್ರದಾಯದ ಅಪೂರ್ವ ವಿವರಣೆ ಇದೆ. ಯುದ್ಧಕ್ಕೆ ಹೋಗುವ ಪೂರ್ವದಲ್ಲಿ ತಮ್ಮ ಪತ್ನಿಯರನ್ನು ವೀರರು ಮರಣಕ್ಕೆಡೆಮಾಡಿ ಹೋಗುತ್ತಿದ್ದ ವಿಷಯ ಇಲ್ಲಿದೆ. ಈ ಪದ್ಧತಿಯಲ್ಲಿ ಸ್ತ್ರೀಯರು ಮುತ್ತೈದೆಯರಾಗಿ ಸತ್ತು, ಗಂಡನನ್ನು ಹಿಂಬಾಲಿಸುತ್ತಾರೆ. ಇದು ಸಾಮೂಹಿಕ ಸಹಗಮನವಾಗಿದೆ. ಆದರೆ ಸಹಗಮನದಲ್ಲಿ ಸತ್ತ ಗಂಡನನ್ನು ಅವನ ವಿಧವೆಯಾದ ಸತಿ ಹಿಂಬಾಲಿಸುತ್ತಾಳೆ. ಇದು ವೈಯಕ್ತಿಕವಾದುದು. ಎರಡರಲ್ಲೂ ಮೂಲ ಮನೋಭಾವ ಒಂದೇ ಇರುವುದನ್ನು ಇಲ್ಲಿ ಗುರುತಿಸಲಾಗಿದೆ.[೬೮]

ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಕವಿಲೆ ದುರ್ಗದ ಬಳಿ ಕೆರೆಯ ಹತ್ತಿರದ ಸಮಾಧಿಗಳ ಸ್ತ್ರೀಯರ ಆತ್ಮ ಬಲಿದಾನ 'ಸಮಾಧಿಸತಿ'ಗೆ ಸಂಬಂಧಿಸಿದವುಗಳೆಂದು ಹಲವು ವಿದ್ವಾಂಸರು ಊಹಿಸುತ್ತಾರೆ. ಆರ್.ಶೇಷಶಾಸ್ತ್ರಿಯವರು ಈ ಸಮಾಧಿಗಳನ್ನು ಕುರಿತು ಇವು ಕೆಳದಿಯ ನಾಯಕರು, ವೀರರು ಹೋರಾಟದಲ್ಲಿ ಮಡಿದಾಗ ಅವರನ್ನು ಯುದ್ಧ ಭೂಮಿಯಿಂದ ತಂದು ಇಲ್ಲಿ ಸಮಾಧಿ ಮಾಡಲಾಯಿತಂತೆ ಇದು ಇಲ್ಲಿಯ ಜನರ ಅಭಿಪ್ರಾಯ. "ವೀರಗಲ್ಲಿನ ಶಿಲ್ಪದಲ್ಲಿ ಬಿಡಿಸಲಾಗಿರುವ ಮಹಿಳೆಯರು ಯುದ್ಧದಲ್ಲಿ ಮಡಿದ ತಮ್ಮ ಗಂಡಂದಿರೊಡನೆ ಸಮಾಧಿಯಲ್ಲಿ ಜೀವಂತವಾಗಿ ಹುಗಿಸಿಕೊಳ್ಳುವುದರ ಮೂಲಕ ಸಹಗಮನ ಮಾಡಿರಬೇಕು"[೬೯] ಎಂದು ಹೇಳುತ್ತಾರೆ. ಇವರ ಅಭಿಪ್ರಾಯವನ್ನು ಒಪ್ಪುವುದಾದರೆ, ಇವು 'ಸಮಾಧಿಸತಿ'ಗೆ ಸಂಬಂಧಿಸಿದ ಸಮಾಧಿಗಳೆಂದು ಹೇಳಬೇಕಾಗುತ್ತದೆ.[೭೦]

ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯದಲ್ಲಿ ತೋಂಟದಾರ್ಯನ ಮಡದಿ ಚೆನ್ನಬಸವಮ್ಮ ಸತಿಹೋಗುವಾಗ ಬರುವ ವರ್ಣನೆ ಹೀಗಿದೆ.

"ನರ್ತಿಸಿದಳು ನಲಿದಳು ಮನದನ್ನನ

ಮೂರ್ತಿಯ ವಿಮಲ ಸದ್ಗುಣವ
ಕೀರ್ತಿಸುತಬ ಸತಿ ಮಹಾಸತಿಯಾಗಿಪ್ರ
ವರ್ತಿಸಿದುದನೆಂಬೇ॥”[೨೧]

ಈ ವಿವರಗಳು ಪತ್ನಿ ಗಂಡನೊಡನೆ ಮರಣಹೊಂದಿ ಮಹಾಸತಿಯಾಗುವ ಗೌರವ ಪಟ್ಟವನ್ನು ಸೂಚಿಸುತ್ತವೆ. ಪಂಪನು ಮಾದ್ರಿಯ ಸಹಗಮನವನ್ನು ತಪೋವನದ ಋಷಿಗಳು ಹೊಗಳಿದರೆಂದು, ರನ್ನನು ಗುಂಡಮಬ್ಬೆಯ ಸಹಗಮನವನ್ನು ಗುಂಡೆಲ್ಲ ಹೊಗಳಿತೆಂದು ವರ್ಣಿಸುವುದನ್ನು ಇಲ್ಲಿ ಸ್ಮರಿಸಬಹುದು.[೨೨] ಈ ಕಾರಣಗಳನ್ನು ಒಪ್ಪಿಕೊಂಡು ಮಾಹಾಸತಿತ್ವಕ್ಕಾಗಿ ಸತಿಪದ್ಧತಿಯನ್ನು ಸ್ತ್ರೀ ಸಮೂಹ ಅನುಸರಿಸಿರುವುದು ತಮ್ಮ ಹಿರಿಮೆಯನ್ನು ಜನ ಕೊಂಡಾಡುತ್ತಾರೆಂದು ಹಾಗೂ ಪತಿವ್ರತೆಯೆಂಬ ಗೌರವ ತರುವಂಥದ್ದೆಂಬ ಭಾವನಾತ್ಮಕ ದೃಷ್ಟಿಕೋನದ ಹಿನ್ನೆಲೆಯಲ್ಲಿ ಅದರ ಬೆಳವಣಿಗೆಗೆ ಉಳಿಯುವಿಕೆಗೆ ಕಾರಣರಾದರು.

ಹೀಗೆ ಕಾವ್ಯ, ವಚನ, ಸಾಂಗತ್ಯ, ಪುರಾಣಗಳಲ್ಲಷ್ಟೇ ಅಲ್ಲದೇ ಶಾಸನಗಳಲ್ಲೂ ಸತಿಪದ್ಧತಿಯ ಉಲ್ಲೇಖಗಳಿವೆ. ಈ ಹಿನ್ನೆಲೆಯಲ್ಲಿ ಬೆಳತೂರು ಶಾಸನ ಸಾಹಿತ್ಯದ ದೃಷ್ಟಿಯಿಂದ ತುಂಬಾ ಅಪೂರ್ವವಾಗಿದೆ.[೨೩] ಇದು ಅಕ್ಕರ, ಲಲಿತವೃತ್ತ, ಕಂದ ಪದ್ಯಗಳ ಹಾಸು ಬೀಸಿನಿಂದ ದೇಕಬ್ಬೆಯ ಅನುಗಮನವನ್ನು ಸಮರ್ಥವಾಗಿ ಚಿತ್ರಿಸಿದೆ. ದೇಕಬ್ಬೆಯ ತವರು ಮನೆಯ ಮತ್ತು ಗಂಡನ ಮನೆಯ ವರ್ಣನೆಗೆ ಶಾಸನದ ಬಹುಭಾಗ ಮೀಸಲಾಗಿರುವುದು ಸೂಕ್ತವಾದುದಾಗಿದೆ. ದೇಕಬ್ಬೆಯ ಪತಿ ಏಚನನ್ನು ತಲೆಕಾಡಿನಲ್ಲಿ 'ಉಯ್ದು' ಕೊಲ್ಲಲಾಗುತ್ತದೆ. ಕವಿ ಈ ದುರಂತದ ಮುಂದಿನ ಭಾಗವನ್ನು ಕಂದ ಪದ್ಯಗಳು ಉಸಿರಿನಲ್ಲಿ ಎಡಬಿಡದೇ ಹೀಗೆ ಚಿತ್ರಿಸುತ್ತಾನೆ.

ಕಲಿಕಾಲವೇಳನೆನಿಸಿದ
ಕಲಿಚಾಗಿಯನಿರಿದುಕೊಂದರೆಂಬುದ ಮಾತಂ
ಲಲಿತಾಂಗಿ ಕೇಳ್ದುರವಿಗನ
ಕುಲದೀಪಕಿ ಸಾಯಲೆಂದು ಕೊಂಡಕೆ ನಡೆದಳ್

ತಂದೆಯುಮಬ್ಬೆಯುವೊಡನೆಯೆ
ಬಂಧುಗಳುಂ ಬಂದು ಮಗಳೆ ಸಾಯದೆ ಮಾಣ್ ನೀ
ನೆಂದೆಲ್ಲಂ ಕಾಲ್ವಿಡಿದಡ
ನಿಂದಿತೆದೇಕಬ್ಬೆ ಮುನಿದು ಬಗ್ಗಿಸಿ ನುಡಿದಳ್

ನುಗುನಾಡಧಿಪತಿ ರವಿಗನ
ಮಗಳಾಗಿಯುವಂತೆ ನವಿಲೆನಾಡಧಿಪತಿಗಾಂ
ನೆಗಳೆ ಸತಿಯಾಗಿ ಬಾಳ್ದುದು
ಒಗೆದೆರ್ಪಿನೆ ಕೊಟ್ಟಕೊಂಡ ಮನೆಯಶಮಳಿಯಲ್

ಎಂದು ಪರಿಚ್ಛೇದಿಸಿ ನಯ
ದಿಂದಂ ದೇವಂಗೆ ತೋಂಟ ಖಂಡದ ಮಣ್ಣಂ
ನಂದಾದೀವಿಗೆಗಿತ್ತರ
ವಿಂದಾನನೆ ಸಲೆ ನಿವೇದ್ಯಕೆಂದನುನಯದಿಂ
ಮಡದಿ ಸಲೆಗೇಳಿ ಗಳ್ದೆಯ
ಪಡುವಣ ಕಡೆಯಲ್ಲೀ ತೆಂಕಲಯ್ಗೊಳ ಬೆದಯಂ
ಕಡುಗೂರ್ತುಗೊಟ್ಟ ನುಗುನಾ
ಡೊಡೆಯನ ಕುಲಪುತ್ರೆ ಪೆಚ್ಚಿ ಮತ್ತಂ ಮತ್ತಂ

ಇಲ್ಲಿ ಶಾಸನ ನಾಯಕಿಯ ಚಿತ್ರಣ ಸಮರ್ಥವಾಗಿ ಮೂಡಿ ಬಂದಿದೆ. ಕಲಿಕಾಲವೇಳ ನೆನಸಿದ ಕಲಿಚಾಗಿಯಾಗಿದ್ದ ತನ್ನ ಗಂಡನನ್ನು ಕೊಂದುದನ್ನು 'ಲಲಿತಾಂಗಿ' ಕೇಳಿ 'ರವಿಗನ ಕುಲದೀಪಕಿ' ಸಾಯಲಿಕ್ಕಾಗಿ ಕೊಂಡಕ್ಕೆ ಹೊರಟೆ ಬಿಡುತ್ತಾಳೆ. ಘನ ವ್ಯಕ್ತಿತ್ವ ಹೊಂದಿದ ಪತಿ ಮತ್ತು ಪಿತ್ರರ ಚಿತ್ರಗಳೊಡನೆ ಅಸಾಮಾನ್ಯ ವ್ಯಕ್ತಿತ್ವ ಹೊಂದಿದ ಪತ್ನಿ-ಮಗಳ ಚಿತ್ರಣವು ಒಟ್ಟಾಗಿ ಚಿತ್ರಿಸುವಲ್ಲಿ ಕಂದ ಪದ್ಯ ಇಲ್ಲಿ ಸಾರ್ಥಕ್ಯ ಸಾಧಿಸಿದೆ. ಈ ಪದ್ಯ ಭಾಗದಲ್ಲಿಯ 'ಇರಿದು' ಎಂಬ ಪದದ ಕ್ರೂರತೆ ಮತ್ತು 'ಲಲಿತಾಂಗಿ' ಎಂಬ ವಿಶೇಷಣದ ಕೋಮಲತೆ ಒಟ್ಟಾಗಿ ಬಂದು ಪ್ರಸಂಗದ ಗಂಭೀರತೆಯನ್ನು ಹೆಚ್ಚಿಸುತ್ತವೆ. ಮುಂದಿನ ಕಂದ ದೇಕಬ್ಬೆಯ ತಂದೆ-ತಾಯಿಗಳ ಕರುಣಾಜನಕ ಸ್ಥಿತಿಯನ್ನು ತಿಳಿಸುತ್ತದೆ. ಮಗಳು ಕೊಂಡಕ್ಕೆ ಹೋಗಲಿರುವ ಸುದ್ದಿ ಅವರಿಗೆ ಸಿಡಿಲಾಗಿ ಪರಿಣಮಿಸಿದೆ. ಅವರು ಬಂಧುಗಳು ಮೊದಲ್ಗೊಂಡು ಬಂದು ಮಗಳನ್ನು ಸತಿಹೋಗದಂತೆ ಕೇಳಿಕೊಳ್ಳುತ್ತಾರೆ. ದೇಕಬ್ಬೆ ಸತಿಹೋಗುವ ತನ್ನ ನಿರ್ಧಾರವನ್ನು ಬದಲಿಸುವುದಿಲ್ಲ. ಈ ಪದ್ಯದಲ್ಲಿ 'ಮಗಳೆ ಸಾಯದೆ ಮಾಣ್ ನೀನಲ್ಲಂ ಕಾಲ್ವಿಡಿದಡೆ' ಎನ್ನುವ ಮಾತು ತಂದೆ-ತಾಯಿಗಳ ದುಃಖದ ತೀವ್ರತೆಯನ್ನು ತಿಳಿಸುತ್ತದೆ. ಅಲ್ಲದೆ ಇದರಿಂದ ತಂದೆ-ತಾಯಿಗಳು ಮೊದಲು ದೇಕಬ್ಬೆಯನ್ನು ಸತಿಯಾಗದಂತೆ ಮನವೊಲಿಸಲು ಮತ್ತೆ ಮತ್ತೆ ಪ್ರಯತ್ನಿಸಿರಬೇಕೆಂದೂ, ಅದಕ್ಕೆ ಅವಳು ಒಪ್ಪದಿದ್ದಾಗ ಕೊನೆಗೆ ಅವಳ ಕಾಲ್ವಿಡಿದು ಕೇಳಿಕೊಂಡರಬೇಕೆಂದೂ ತಿಳಿಯಲು

ಶಕ್ಯವಿದೆ. ಬಹುಶಃ ಅವರು ಬೇಡವೆನ್ನುವುದು, ಅವಳು ಸತಿ ಹೋಗುವೆ ಎನ್ನುವುದು ದೀರ್ಘಕಾಲದವರೆಗೆ ನಡೆದಿರಬೇಕು. ಕೊನೆಗೆ ಮಗಳ ಕಾಲನ್ನು ತಂದೆ–ತಾಯಿಗಳು ಹಿಡಿಯುವವರೆಗೂ ಈ ಪ್ರಸಂಗದ ಅತಿರೇಕತೆ ಬೆಳೆದು ಕೊಂಡಿತೆಂದೆನಿಸುತ್ತದೆ. ಆಗ ಮಗಳಿಗೆ ತಂದೆ–ತಾಯಿಗಳ ಈ ಕಾರ್ಯ ಸರಿಬಾರದೇ ಹೋಗಿ ಅವರ ಮೇಲೆಯೇ ಸಿಟ್ಟುಗೊಂಡು ತನ್ನ ವಾದಕ್ಕೆ ಮತ್ತೆ ಸಮರ್ಥನೆಯನ್ನು ಕೊಡುತ್ತಾಳೆ.

'ನುಗುನಾಡಧಿಪತಿ ರವಿಗನ ಮಗಳಾಗಿ, ನವಿಲೆನಾಡಧಿಪತಿ ಏಚನಿಗೆ ಪತ್ನಿಯಾಗಿ ಈಗ ಸತಿಹೋಗದೆ 'ಕೊಟ್ಟ–ಕೊಂಡ' ಮನೆಯ ಕೀರ್ತಿ ಅಳಿಸಲು ಬದುಕಬೇಕೆ ಎನ್ನುವ ದೇಕಬ್ಬೆಯ ಮಾತುಗಳು ತಂದೆ ತಾಯಿಗಳನ್ನು ನಿರುತ್ತರಗೊಳಿಸಿತು ಎನಿಸುತ್ತದೆ. ಹೀಗೆ ತಂದೆ–ತಾಯಿಗಳ ವಾತ್ಸಲ್ಯದಿಂದ ಬಿಡಿಸಿಕೊಂಡ ದೇಕಬ್ಬೆ ನಯವಿನಯದಿಂದ ದೇವರಿಗೆ ದಾನ ಬಿಟ್ಟು ನೆರೆದವರಿಗೆ ದಾನ ಮಾಡಿ ಕೊನೆಗೆ "ದೇವರ ದೇವಂಗಳ್ತಿಯಿಂ ಕಯ್ಮುಗಿದುರಿವುರಿಯಂ ಪೊಕ್ಕು" ಎಂದು ಸತಿ ಹೋಗುತ್ತಾಳೆ. ಆಗ ಶಾಸನಕವಿ 'ಕವಿರಾಜ ಬಾನ್ದವನು' ಅವಳ ಗುಣಗಾನವನ್ನು ಲಲಿತ ವೃತ್ತದಲ್ಲಿ ಅತ್ಯಂತ ಸಮರ್ಥವಾಗಿ ಮಾಡಿ ತನ್ನ ಪಾಲಿನ ಕರ್ತವ್ಯವನ್ನು ಮುಗಿಸುತ್ತಾನೆ.

ಶ್ರೀರಮಣಿಗೌರಿಸಚಿಧಾರಿಣಿಯ ಪುತ್ರಿರತಿಭೂರಮಣಿಯನ್ದದ ಸರೂಪವರೆವೊಳ್ಪೌ
ದಾರೆ ಜಯದಾರೆ ಜಸಧಾರೆನಯಧಾರೆಭಯಹಾರೆಪತಿಭಕ್ತೆಧೃತಿಶಕ್ತೆಯೆನೆ ಸಂಧೀ
ವೀರ ನಿಧಿಯಂಚಲದವಾರಿನಿಧಿಯಂಗುಣದಚಾರುನಿಧಿಯಂನಗರ್ದ್ದದೇಕಲೆಯನಿನ್ತೀ
ನಾರಿಜನರನ್ನ ಮನದಾರೋ ಮರೆವರ್ ಸಕಳಧಾರಣಿಯೊಳಿನ್ತುವರಕಾನ್ತೆದೊರೆಯಾವಳ್

ಇಲ್ಲಿ ದೇಕಬ್ಬೆಯ ಸಾವಿಗೆ ಕವಿಹೃದಯ ಕರಗಿದೆ. ಸತಿಹೋದ ದೇಕಬ್ಬೆಯ ಸ್ವರೂಪ ಜಗದ ಮಾನವ ಸ್ವರೂಪವಲ್ಲ ಅವಳು 'ಶ್ರೀರಮಣೀ ಗೌರಿ ಸಚಿಧಾರಿಣಿಯ ಪುತ್ರಿ ರತಿ ಭೂರಮಣಿ" ಎಂದಳು ಕವಿ ಹೃದಯದಲ್ಲಿ ಅವಳು ಸಾವನ್ನಪ್ಪಿ ಆಗಲೇ ದೇವತೆಯಾಗಿ ಬಿಟ್ಟಿದ್ದಾಳೆ. ಅವಳ ಗುಣಗಳನ್ನು ಒಂದೊಂದಾಗಿ ಅತ್ಯಂತ ಸುಂದರವಾಗಿ ಜೌದಾರೆ, ಜಯಧಾರೆ ಜಸಧಾರೆ ನಯಧಾರೆ, ಭಯಹಾರೆ, ಪತಿಭಕ್ತೆ ಧೃತಿಶಕ್ತೆ ಎಂದು ಎತ್ತಿ ಸಾರಿದ್ದಾನೆ. ಇಲ್ಲಿ 'ರ'ಕಾರ ಮೇಲಿಂದ ಮೇಲೆ ಬಂದು ವಾಕ್ಯದಲ್ಲಷ್ಟೇ ಅಲ್ಲದೇ ಇಡೀ ಪದ್ಯದ ಸೌಂದರ್ಯವನ್ನು ಹೆಚ್ಚಿಸಿದೆ. ಕವಿ ಅಷ್ಟಕ್ಕೆ ತೃಪ್ತಿಗೊಳ್ಳದೇ ಸಂದಿವೀರನಿಧಿಯಂ ಚಲದವಾರಿನಿಧಿಯಂಗುಣದ ಚಾರುನಿಧಿಯಂ ಎಂದು ಅವಳನ್ನು ಕೊಂಡಾಡುತ್ತದೆ. ಇಲ್ಲಿ 'ನಿಧಿ' ಎಂಬುದು ಉತ್ಕೃಷ್ಟವಾಗಿ ಬಳಕೆಗೊಂಡದ್ದಲ್ಲದೆ. ಮೇಲಿಂದ ಮೇಲೆ ಬಂದು ಪದ್ಯದ ಮೆರಗನ್ನು ಹೆಚ್ಚಿಸಿದೆ. ಪದ್ಯದ ಕೊನೆಯ ಪಾದದಲ್ಲಿಯ "ನಾರಿ ಜನರನ್ನು ಮನದಾರೋ ಮರೆವರ್" "ಸಕಲಧಾರಣಿ ಯೊಳಿನ್ತುವರಕಾನ್ತೆ ದೊರೆಯಾವಳ್" ಎನ್ನುವ ಮಾತುಗಳಂತೂ ಸಹೃದಯನಲ್ಲಿ ಯಾವತ್ತೂ

ಗುಣಗುಣಿಸುತ್ತ ಉಳಿಯುವವುಗಳಾಗಿವೆ. ಹೀಗೆ ದೇಕಬ್ಬೆಯ ಸತಿ ಚಿತ್ರವು ಕಾವ್ಯದ ಸೊಬಗಿನಿಂದ ಕೂಡಿಕೊಂಡು ಶಾಸನ ಸಾಹಿತ್ಯದಲ್ಲಿ ವಿಶಿಷ್ಟಸ್ಥಾನ ಪಡೆದಿದೆ ಎಂದು ಹೇಳಬಹುದಾಗಿದೆ.

ಹೀಗೆ ಸತಿಪದ್ಧತಿಯನ್ನು ಪ್ರಾಚೀನ ಮಧ್ಯಕಾಲೀನ ಸಾಹಿತ್ಯದ ವಿವಿಧ ನೆಲೆಗಳು ಧರ್ಮ ನೀತಿಗಳ ಪ್ರಭಾವದಿಂದಾಗಿ ಭಯ ಮತ್ತು ಮಾನವನಿಗಿರುವ ಸಂಬಂಧ, ಸಾಮಾಜಿಕ, ಆರ್ಥಿಕ ಸಮಸ್ಯೆಗಳು ಮತ್ತು ಮಾನವನಿಗಿರುವ ಸಂಬಂಧಗಳಿಂದಾಗಿ ಈ ಪದ್ಧತಿ ರೂಪಗೊಂಡಿದೆ ಎಂದು ಉಲ್ಲೇಖಿಸಿವೆ. ಇಲ್ಲಿ ಧರ್ಮ ನೀತಿಗಳ ಪ್ರಭಾವ ಸ್ತ್ರೀಯರಲ್ಲಿ ಕಂಡರಿಯದ ಅಲೌಖಿಕ ಶಕ್ತಿಯ ಕುರಿತು ಇರುವ ಭಯ, ಸ್ತ್ರೀಯು ಒಂಟಿಯಾಗಿ ಎದುರಿಸಬೇಕಾದ ಆರ್ಥಿಕ ಸಾಮಾಜಿಕ ಪರಿಸ್ಥಿತಿಗಳ ಒತ್ತಡ ಇವೆಲ್ಲವುಗಳ ಸೂಕ್ಷ್ಮ ಸಂಬಂಧಗಳ ಹಿನ್ನೆಲೆಯಲ್ಲಿ ರೂಪಗೊಂಡ ಈ ಆಚರಣೆ ಮಾನವನೊಂದಿಗಿರುವ ವಿಶಿಷ್ಟ ಪರಿಸ್ಥಿತಿಗಳ ಸಂಬಂಧದ ಸೃಷ್ಟಿ ಹಾಗೂ ಅಮಾನವೀಯತೆಯ ಕ್ರೂರ ಆಚರಣೆಯೆಂದು ಉಲ್ಲೇಖಿಸುವ ಮೂಲಕ ಇದನ್ನು ಸಂಪೂರ್ಣವಾಗಿ ಸಮಾಜದಿಂದ ತಿರಸ್ಕರಿಸಬೇಕೆಂದು ಸೂಚಿಸುತ್ತವೆ.

ಅಡಿಟಿಪ್ಪಣಿಗಳು

೧. ನರಸಿಂಹಶಾಸ್ತ್ರಿ ಕೆ.ಎಲ್,(ಸಂ) ಆದಿಪುರಾಣ, ೨೦೧೧, ಪು.೫೦೦, ೧೨–೯೬

೨. ಬೆಳ್ಳಾವೆ ವೆಂಕಟನಾರಾಯಣಪ್ಪ, ವಿಕ್ರಮಾರ್ಜುನ ವಿಜಯ, ಪು.೨–೨೬

೩. ಮಹಾಭಾರತ ಅಧ್ಯಾಯ–೧, ೧೨೬,–೩೨

೪. ಆದಿಪುರಾಣ, ಪು.೧೩೨

೫. ಎಸ್.ಆಯ್.ಆಯ್. ೪೫, ಕುರ್ಡಟ್ಟಿ, ನವಲಗುಂದ, ಕ್ರಿ.ಶ.೧೧೯೮, E. C.VIII–II–೧೯೨, ದಾನಶಾಲೆ, ತೀರ್ಥಹಳ್ಳಿ, ಕ್ರಿ.ಶ.೧೧೦೩ ಅದೇ, ೨೭೬

೬. ಪಂಪ ಕವಿ ವಿರಚಿತ ಪಂಪಭಾರತಂ, ಪು. ೧೩೮, ಮತ್ತು ಕುಮಾರವ್ಯಾಸ ಕರ್ಣಾಟ ಭಾರತ ಕಥಾ ಮಂಜರಿ, ಪು.೧೫

೭. ನಾರಾಯಣಶಾಸ್ತ್ರೀ ಎಚ್.ವಿ.(ಸಂ), ಕರ್ಣಾಟಕ ಕಾದಂಬರಿ, ಗದ್ಯಾನುವಾದ, ೨೦೧೧, ಪು.೨೭೪

೮. ರನ್ನ, ಅಜಿತ ತೀರ್ಥಂಕರ ಪುರಾಣ ತಿಲಕಂ, ಪು.೧೦

೯. ಹಂಪನಾಗರಾಜಯ್ಯ(ಸಂ), ರನ್ನನ ಅಜಿತ ತೀರ್ಥಂಕರ ಪುರಾಣ ತಿಲಕಂ, ೨೦೦೬, ಪು.೧–೪೬

೧೦. ಎಂ. ಚಿದಾನಂದಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು.೩೧೬

೧೧. ಅದೇ ಪು.೩೧೬-೩೧೭

೧೨. ಬೆಳ್ಳಾವೆ ವೆಂಕಟನಾರಾಯಣಪ್ಪ, ವಿಕ್ರಮಾರ್ಜುನ ವಿಜಯ, ಪು.೨-೨೬

೧೩. ನಯಸೇನ ವಿರಚಿತ ಧರ್ಮಾಮೃತಂ, ತ್ರಯೋದಶ್ವಾಸ, ಪು.೧೯

೧೪. ಅದೇ, ದಶಮಾಶ್ವಾಸ, ಪು.೭೨೩

೧೫. ಅದೇ, ದಶಮಾಶ್ವಾಸ, ಪು.೭೩೭-೭೩೮

೧೬. ಅದೇ, ಅಷ್ಟಮಾಶ್ವಾಸಂ, ಪು.೫೫೪

೧೭. ಬಿ.ಎಸ್.ಕುಲಕರ್ಣಿ(ಸಂ), ಬ್ರಹ್ಮಶಿವ, ಸಮಯ ಪರೀಕ್ಷೆ, ೧೯೫೮, ಪು.೩೭೮ ಅನುಬಂಧ ೧೨-೨೮

೧೮. ಕಲಬುರ್ಗಿ ಎಂ.ಎಂ., ಸಮಾಧಿ-ಬಲಿದಾನ-ವೀರಮರಣ ಸ್ಮಾರಕಗಳು, ೧೯೮೦, ಪು. ೨೫-೨೬

೧೯. ಎಂ.ಎಂ.ಕಲಬುರ್ಗಿ, ಪ್ರಬುದ್ಧ ಕರ್ನಾಟಕ, ಸಂ-೧, ಆತ್ಮಬಲಿದಾನ: ಬ್ರಹ್ಮಶಿವನ ವಿಚಾರಗಳು, ೧೯೭೪, ಪು.೭೦,

೨೦. ಶಿವಮೂರ್ತಿಶಾಸ್ತ್ರಿ ಬಿ.(ಸಂ), ವಿರೇಶ ಚರಿತೆ, ೨೦೦೪, ಪು.೨೩೧-೬೮

೨೧. ಹರಿಹರ ಕವಿ, ಗಿರಿಜಾಕಲ್ಯಾಣ, ಮಹಾಪ್ರಬಂಧ, ಪು.೨೮೬

೨೨. ಕವಿ ಚಕ್ರವರ್ತಿ ಜನ್ನ ವಿರಚಿತ ಅನಂತನಾಥ ಪುರಾಣ, ಪು.೨೪೨

೨೩. ಕವಿ ಚಕ್ರವರ್ತಿ ಜನ್ನ ವಿರಚಿತ ಅನಂತನಾಥ ಪುರಾಣ, ಪು.೨೭೮

೨೪. ಅದೇ ಪು.೨೭೯.

೨೫. ಕವಿ ಚಕ್ರವರ್ತಿ ಜನ್ನವಿರಚಿತ ಅನಂತನಾಥ ಪುರಾಣ, ಪು.೨೮೦

೨೬. ಕುಮಾರವ್ಯಾಸ ಮಹಾಕವಿಯ ಕರ್ಣಾಟ ಭಾರತ ಕಥಾಮಂಜರಿ, ಪು.೩೧೩

೨೭. ಚಂಪಾಬಾಯಿ(ಸಂ), ಹದಿಬದೆಯ ಧರ್ಮ, ಪು.೧೦ ಉದೃತ: ಸೀ.ವೀರಣ್ಣ, ಕನ್ನಡ ಕಾವ್ಯ ಕಂಡ ಹೆಣ್ಣು, ಪು.೧೭೬-೧೭೭

೨೮. ಅದೇ, ಪು.೧೭೮

೨೯. ಕುಮಾರ ವಾಲ್ಮೀಕಿ ವಿರಚಿತ ತೊರವೆ ರಾಮಾಯಣ, ಸಂ-೨, ಪು.೬೩೮

೩೦. ಅದೇ, ಪು.೬೫೮–೬೫೯

೩೧. ನಂಜುಂಡ ಕವಿ ವಿರಚಿತ 'ಕುಮಾರ ರಾಮನ ಕಥೆ' (ಉತ್ತರಾರ್ಧ) ಸಂ–೩, ಪು. ೩೩೬–೩೩೭

೩೨. ಅದೇ, ಪು.೩೩೬

೩೩. ನಂಜುಂಡ ಕವಿ, ರಾಮನಾಥ ಚರಿತೆ, ಉತ್ತರಾರ್ಧ, ಸಂ–೩, ಪು.೩೩೭–೪೮೫

೩೪. ಸಂಗಮ ರಾಜಕೀಯ ಸಾಮಾಜಿಕ ವ್ಯವಸ್ಥೆ , ಮೂಲ, ಎನ್. ಸುಬ್ರಮಣಿಯನ್, ಅನು, ನಿರಂಜನ, ಪು.೩೬೩

೩೫. ಎಸ್.ಕೆ. ರಾಮಚಂದ್ರರಾವ್(ಸಂ), ಪುರಂದರ ಸಾಹಿತ್ಯ,ಸಂ–೩, ಪು.೧೨೬ ಉದೃತ: ಸಿ. ವೀರಣ್ಣ, ಕನ್ನಡ ಕಾವ್ಯ ಕಂಡ ಹೆಣ್ಣು, ಪು.೧೮೮,

೩೬. ಕನಕದಾಸರ ಮೋಹನ ತರಂಗಿಣಿ ಸಂಗ್ರಹ, ಪು. ೨೬–೨೭, ೬೫–೬೬

೩೭. ವಿಶ್ವಕವಿ ರತ್ನಾಕರ, ಭರತೇಶ ವೈಭವ, ಪು.೫೦೫

೩೮. ಕೆಂಪುನಾರಾಯಣನ ಮುದ್ರಾ ಮಂಜೂಷ, ಪು.೧೭

೩೯. ರಾಜೂರ ವೀರಣ್ಣ, ಶಿವಶರಣೆಯರ ವಚನಗಳು, ಸಂಪುಟ–೫ ವ.೧೦೯, ಪು.೧೯

೪೦. ಆರ್.ಸಿ. ಹಿರೇಮಠ(ಸಂ), ಬಸವಣ್ಣನವರ ವಚನಗಳು, ೬೭೮, ಸಕಲಪುರಾತನರ ವಚನಗಳು, ೧೭೬೧, ಶಿವಶರಣೆಯರ ವಚನಗಳು, ಪು.೧೫೩ ಅಖಂಡೇಶ್ವರ ವಚನ, ಷಣ್ಮುಖಸ್ವಾಮಿ ವ.೧೩೮" ಬಸವಣ್ಣನವರ ವಚನಗಳು, ಪು.೨೫೩

೪೧. ಸಮಗ್ರ ವಚನಗಳು, ಸಂಪುಟ–೮, ವಚನ ಸಂಖ್ಯೆ ೫೮, ಪು.೪೪೦

೪೨. ಬಿ.ಎಸ್.ಸಣ್ಣಯ್ಯ(ಸಂ), ಅಕ್ಕಮಹಾದೇವಿ ವಚನಗಳು, ಪು.೧೨೨

೪೩. ಎಸ್.ಉಮಾಪತಿ(ಸಂ), ಮಡಿವಾಳ ಮಾಚಯ್ಯನ ವಚನಗಳು ಪು.೯೬

೪೪. ಆರ್.ಸಿ.ಹಿರೇಮಠ(ಸಂ), ಬಸವಣ್ಣನವರ ವಚನಗಳು ಪು.೫೦೦

೪೫. ಸಿ.ಪಿ.ಸಿದ್ಧಾಶ್ರಮ, ಎಸ್.ವಿದ್ಯಾಶಂಕರ(ಸಂ), ಅಂಬಿಗರ ಚೌಡಯ್ಯನ ವಚನಗಳು, ಪು.೨೨

೪೬. ರಾಜೂರ ವೀರಣ್ಣ(ಸಂ), ಸಂಕೀರ್ಣ ವಚನಗಳು, ಸಂಪುಟ–೯, ೨೦೦೧, ವ.೩೪೫, ಪು.೨೭೭

೪೭. ಬಿ.ಬಿ.ಮಹೀಶವಾಡಿ(ಸಂ), ಸಂಯುಕ್ತ ಕೌಮುದಿ, ಪು.೯೫

೪೮. ಸಿ.ವೀರಣ್ಣ, ಕನ್ನಡ ಕಾವ್ಯ ಕಂಡ ಹೆಣ್ಣು, ೧೯೯೯, ಪು.೧೮೭,

೪೯. ಎಲ್.ಬಸವರಾಜು(ಸಂ), ಸರ್ವಜ್ಞನ ವಚನಗಳು ಪು.೨೫೩ ಉದ್ಧೃತ: ಸೀ.ವೀರಣ್ಣ ಕನ್ನಡ ಕಾವ್ಯ ಕಂಡ ಹೆಣ್ಣು, ಪು.೧೮೭

೫೦. ಅದೇ, ಪು.೧೮೭–೧೮೮

೫೧. ಸೀ ವೀರಣ್ಣ, ಕನ್ನಡ ಕಾವ್ಯ ಕಂಡ ಹೆಣ್ಣು, ಪು.೧೮೭–೧೮೮

೫೨. ಬಿ.ಆರ್.ಹಿರೇಮಠ(ಸಂ), ಸಕಲ ಸಂಕೀರ್ಣ ವಚನಗಳು, ಸಂಪುಟ–೩, ೧೯೯೩, ಪು.೪೩೫–೪೪೦

೫೩. ಸಿ.ಪಿ.ಸಿದ್ಧಾಶ್ರಮ ಮತ್ತು ಎಸ್. ವಿದ್ಯಾಶಂಕರ(ಸಂ), ಅಂಬಿಗರ ಚೌಡಯ್ಯನ ವಚನಗಳು, ಪು.೭೧

೫೪. ಕಲಬುರ್ಗಿ ಎಂ.ಎಂ., ಸಂಕೀರ್ಣ ವಚನಗಳು, ಸಂಪುಟ–೧, ೨೦೦೧ ವ–೨೫೬, ಪು.೮೭

೫೫. ಸಮಗ್ರ ವಚನಗಳು, ಸಂಪುಟ–೮ ವ–೫೭ ಪು.೨೯೬

೫೬. ಸಿಂಗಿರಾಜಕವಿಕೃತ ಸಿಂಗಿರಾಜ ಪುರಾಣ, ಪು.೩೯೫

೫೭. ಎಂ.ಎಂ. ಕಲಬುರ್ಗಿ, ಸಮಾಧಿ–ಬಲಿದಾನ–ವೀರಮರಣ ಸ್ಮಾರಕಗಳು, ಪು.೪೦

೫೮. ಸಿದ್ದೇಶ್ವರ ಮಹಾಪುರಾಣ, ಪು. ೩೫–೩೬

೫೯. ಇಮ್ಮಡಿ ಚಿಕ್ಕ ಬೂಪಾಲನ ಸಾಂಗತ್ಯ, ಪು.೭೦–೭೨

೬೦. ಎಂ.ಎಂ. ಕಲಬುರ್ಗಿ(ಸಂ), ಮಹಾಲಿಂಗಸ್ವಾಮಿ ಬಾಲರಾಮನ ಸಾಂಗತ್ಯ, ೨೦೦೭, ಪು.೪೫

೬೧. ಅದೇ, ಸಂಧಿ–೧೯,೨೦೦೭ ಮತ್ತು ೨೦೦೯, ಪು.೩೮೫

೬೨. ಸಿದ್ಧಕವಿ, ಸಿರುಮಣ ನಾಯಕನ ಸಾಂಗತ್ಯ, ಪು.೬೭

೬೩. ಎಂ.ಎಂ.ಕಲಬುರ್ಗಿ(ಸಂ), ಸಿದ್ಧಕವಿ, ಸಿರುಮಣನಾಯಕನ ಸಾಂಗತ್ಯ, ೧೯೮೩, ಸ–೩, ಪು.೧೬೯

೬೪. ಅದೇ, ಪು.೧೬೯

೬೫. ನಾಗಯ್ಯ ಜೆ.ಎಂ. ಮತ್ತು ಹಿರೇಮಠ ಕೆ.ಎಸ್. ಮಹಾಮರಣ ವೀರಮೌಲ್ಯ ಕುರಿತ ಎಂ.ಎಂ.ಕಲಬುರ್ಗಿಯವರ ಪ್ರಬಂಧಗಳ ಸಂಕಲನ

೬೬. ಎಂ.ಎಂ.ಕಲಬುರ್ಗಿ(ಸಂ), ಸಿರುಮಣನಾಯಕನ ಸಾಂಗತ್ಯ, ಪು.೬೮

೬೭. ಸಿರುಮಣ ನಾಯಕನ ಸಾಂಗತ್ಯ, ಪು.೯೮–೯೯

೬೮. ಎಂ.ಚಿದಾನಂದಮೂರ್ತಿ, ವೀರಗಲ್ಲುಗಳು ಮತ್ತು ಮಾಸ್ತಿಕಲ್ಲುಗಳು, ಪು.೪೫

೬೯. ಶೇಷಶಾಸ್ತ್ರಿ ಆರ್, ಕರ್ನಾಟಕದ ವೀರಗಲ್ಲುಗಳು, ೧೯೮೨, ಪು.೮೭

೭೦. ಎಂ.ಎಂ.ಕಲಬುರ್ಗಿ(ಸಂ), ಸಿರುಮಣನಾಯಕನ ಸಾಂಗತ್ಯ, ಪು.೧೯೮–೩೧೮

೭೧. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ, ಪು.೭೦–೮೫

೭೨. ಪಂಪ ಕವಿ ವಿರಚಿತ ಪಂಪ ಭಾರತಂ, ಪು.೧೩೮, ಮಹಾಕವಿ ರನ್ನ ವಿರಚಿತಮಪ್ಪ ಅಜಿತ ತೀರ್ಥಂಕರ ಪುರಾಣ ತಿಲಕಂ, ಪು.೧೦

೭೩. E. C.III–೬೦, ಹೆಗ್ಗಡೆದೇವನಕೋಟೆ, ಕ್ರಿ.ಶ.೧೦೫೨

ಅಧ್ಯಾಯ : ನಾಲ್ಕು

ದಾಖಲು ಸಾಹಿತ್ಯದಲ್ಲಿ ಸತಿಪದ್ಧತಿ ನಿರ್ವಚನ

೪.೧. ಶಾಸನಗಳು

೪.೨. ಸ್ಮಾರಕಗಳು

೪.೩. ಕೈಫಿಯತ್ತುಗಳು

೪.೪ ಪ್ರವಾಸಿಗರ ವರದಿಗಳು

ಅಧ್ಯಾಯ : ನಾಲ್ಕು

ದಾಖಲು ಸಾಹಿತ್ಯದಲ್ಲಿ ಸತಿಪದ್ಧತಿ ನಿರ್ವಚನ

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಮೌಖಿಕ ಸಾಹಿತ್ಯವನ್ನು ಹೊರತುಪಡಿಸಿ ಲಿಪಿ ಮಾಧ್ಯಮದ ಮೂಲಕ ಗುರುತಿಸಿಕೊಂಡ ಸಾಹಿತ್ಯ ಕಾವ್ಯ ಸಾಹಿತ್ಯ ಮತ್ತು ದಾಖಲು ಸಾಹಿತ್ಯ. ದಾಖಲು ಸಾಹಿತ್ಯ ಪ್ರಮುಖವಾಗಿ ಶಾಸನ, ಕಡತ, ನಿರೂಪ, ಭಿನ್ನವತ್ತಳೆ, ದಿನಚರಿ, ಕೈಫಿಯತ್ತು, ವಂಶಾವಳಿ, ಸ್ಥಳಪುರಾಣ, ಮಹಾತ್ಮೆಗಳನ್ನು ಒಳಗೊಂಡಿದೆ. ಶಾಸನಗಳು ದಾಖಲು ಸಾಹಿತ್ಯಕ್ಕಿಂತ ಕಾವ್ಯ ಸಾಹಿತ್ಯ ಎಂಬರ್ಥದಲ್ಲಿ ಅಧ್ಯಯನಕ್ಕೆ ಒಳಗಾಗಿದ್ದವು. ಇದನ್ನು ಗುರುತಿಸಿದ ವಿದ್ವಾಂಸರಾದ ಎಂ.ಎಂ. ಕಲಬುರ್ಗಿಯವರು "ಕರ್ನಾಟಕದ ಶಾಸನಗಳು ಸಾಹಿತ್ಯಕ್ಕೆ ಸಾಹಿತ್ಯ ದಾಖಲೆಗೆ ದಾಖಲೆ ಎನಿಸಿವೆ. ಇಲ್ಲಿ ಸಾಹಿತ್ಯಿಕ ಗುಣದ ಪ್ರಮಾಣ ಅಧಿಕವಾಗಿರುವುದರಿಂದಲೇ ಅವುಗಳನ್ನು ನಮ್ಮ ಪ್ರಾಚೀನ ಸಾಹಿತ್ಯದ ಒಂದು ಮುಖ್ಯಭಾಗವೆಂದು ಪರಿಗಣಿಸುತ್ತ ಬರಲಾಗಿದೆ."[೧] ಎಂದಿದ್ದಾರೆ.

ಪ್ರಾಚೀನ ಕಾಲದ ಐತಿಹಾಸಿಕ, ಸಾಮಾಜಿಕ, ಧಾರ್ಮಿಕ, ರಾಜಕೀಯ ಬದುಕಿನ ಚಿತ್ರಣವನ್ನು ಕಟ್ಟಿಕೊಡುವ ಪ್ರಮುಖ ಆಕರ ಸಾಮಗ್ರಿಗಳಾಗಿರುವ ಶಾಸನಗಳು, ಸ್ಮಾರಕಗಳು, ಪ್ರವಾಸಿಗರ ವರದಿಗಳು, ಕೈಫಿಯತ್ತುಗಳು ಕಾವ್ಯ ಸಾಹಿತ್ಯಕ್ಕಿಂತ ಭಿನ್ನವಾದ ವೈಲಕ್ಷಣ ಸ್ವರೂಪ ಹೊಂದಿ ದಾಖಲು ಸಾಹಿತ್ಯವೆನಿಸಿಕೊಳ್ಳುತ್ತವೆ. ರಾಜ ಪ್ರಭುತ್ವದಲ್ಲಿ ಬೆಳೆದು ಬಂದ ಶಾಸನಗಳನ್ನು 'ಪ್ರಭುಸಮ್ಮಿತ'ವೆಂದು ಗುರುತಿಸುವ ಔಚಿತ್ಯವನ್ನು ಇಲ್ಲಿ ನೆನಪಿಸಿಕೊಳ್ಳಬೇಕು. ಮಿತ್ರಸಮ್ಮಿತ, ಕಾಂತಾ ಸಮ್ಮಿತಗಳಾದ ಕಾವ್ಯ ಸಾಹಿತ್ಯಕ್ಕಿಂತ ಪ್ರಭುಸಮ್ಮಿತವನ್ನು ಪಡೆಯುವ ಶಾಸನಗಳು ಅಂದಿನ ಕಾಲದ ದಾಖಲೆಗಳಾದವು.

ಕಾವ್ಯ ಸಾಹಿತ್ಯ ಬರೆದ ಕವಿಗಳ ಜೊತೆಗೆ ದಾಖಲು ಸಾಹಿತ್ಯ ರಚಿಸಿದ ಶಾಸನ ಕವಿಗಳ ಚರಿತ್ರೆಯನ್ನು ಸೇರಿಸಿದ ಕವಿ ಚರಿತ್ರೆಕಾರರು ಹಾಗೂ 'ಶಾಸನ ಕವಿ ಚರಿತೆ' ಬರೆದ ಮೇವುಂಡಿ ಅವರ ಕಾರ್ಯವೂ ಶ್ಲಾಘನೀಯ. ಅವರು ಶಾಸನಗಳನ್ನು ಪ್ರಾಚೀನ ಕಾವ್ಯ ಸಾಹಿತ್ಯದ ಒಂದು

ಭಾಗವೆಂದು ತಿಳಿದುದರ ಪರಿಣಾಮದಿಂದಾಗಿ ಶಾಸನಗಳು ದಾಖಲು ಸಾಹಿತ್ಯದ ಭಾಗವಾಗುತ್ತವೆ ಎಂಬುವುದನ್ನು ತಿಳಿಯಬಹುದು.[೨]

ಡಾ.ಎಂ.ಎಂ.ಕಲಬುರ್ಗಿಯವರು ಇತಿಹಾಸವನ್ನು ಕುರಿತು "ನಿಜವಾಗಿಯೂ ನಮ್ಮ ರಾಷ್ಟ್ರದ ಇತಿಹಾಸವೆಂದರೆ ಕೇವಲ ಕವಿಗಳು ಬರೆದಿಟ್ಟ 'ಕಾಳಗದ ಕಥೆಯಲ್ಲ ಕರಣಿಕರು ಬರೆದಿಟ್ಟ ಕೃತಕ ದಾಖಲೆಗಳಲ್ಲ. ಈ ರಾಷ್ಟ್ರದ ಪ್ರಜೆಗಳು ಯಾವ ಆದರ್ಶಗಳಿಗಾಗಿ ಯಾವ ಮೌಲ್ಯಗಳಿಗಾಗಿ ಬಾಳಿದರೆಂಬುದು. ಅವುಗಳನ್ನು ಅನುಷ್ಠಾನಗೊಳಿಸುವಲ್ಲಿ ಹೇಗೆ ನಡೆದುಕೊಂಡರೆಂಬುದು ಈ ರೀತಿಯ ದಾಖಲೆಗಳಿಂದ ತಿಳಿದುಬರುತ್ತದೆ. ಇದರಿಂದ ಇತಿಹಾಸದ ಪುನರ್ ರಚನೆಗೆ ಸಹಾಯಕವಾಗುತ್ತದೆ"[೩] ಎಂದಿದ್ದಾರೆ.

ಸಾರ್ವಜನಿಕ ವಿಷಯ ನಿರೂಪಣೆ ಹೊತ್ತಿರುವ ಶಾಸನಗಳು ದಾಖಲೆ ಸಾಹಿತ್ಯವಾಗಿದ್ದು ಅವುಗಳನ್ನು ಸಾರ್ವಜನಿಕ ಸ್ಥಳಗಳಾದ ದೇವಾಲಯ, ಮಠ-ಮಂದಿರ, ಕೆರೆ–ಬಾವಿ ಮುಂತಾದ ಕಡೆಗಳಲ್ಲಿ ಸ್ಥಾಪನೆಗೊಳಿಸಲಾಗಿದೆ. ಇವು ಕೂಡ ವ್ಯಕ್ತಿ ಒಡೆತನ ಪಡೆದುಕೊಂಡಿವೆಯೇ ಹೊರತು ಸಾರ್ವಜನಿಕ ಸೊತ್ತಾಗಿ ಉಳಿಯಲಿಲ್ಲ ಎಂಬುವುದನ್ನು ಕುರಿತು ಡಾ.ಎಂ.ಎಂ. ಕಲ್ಬುರ್ಗಿಯವರು ಹೀಗೆ ವಿವರಿಸಿದ್ದಾರೆ. "ಪ್ರಾಚೀನ ಕರ್ನಾಟಕದಲ್ಲಿ ಅಗ್ರಹಾರ ಸಂಸ್ಕೃತಿಗಿಂತ ದೇವಾಲಯ ಸಂಸ್ಕೃತಿ ಗಣ್ಯವಾದುದು. ಹೀಗಾಗಿ ವೈಯಕ್ತಿಕ ಒಡೆತನದ ಅಗ್ರಹಾರ ಸಂಸ್ಕೃತಿಯ ದಾಖಲೆಗಳಾದ ತಾಮ್ರಪಟಗಳಿಗಿಂತ, ಸಾಮೂಹಿಕ ಒಡೆತನದ ದೇವಾಲಯ ಸಂಸ್ಕೃತಿಯ ದಾಖಲೆಗಳಾದ ಶಿಲಾಶಾಸನಗಳ ಸಂಖ್ಯಾ ಪ್ರಮಾಣ ನಮ್ಮಲ್ಲಿ ಅಧಿಕವೆನಿಸಿವೆ."[೪] ಇವು ಸಮಾಜದ ಬಹುಸಂಖ್ಯಾತ ಜನರಿಗೆ ನೀತಿ ನಿಯಮ ಪಾಲನೆಗಾಗಿ ರೂಪಗೊಂಡ ದಾಖಲೆಗಳೆನಿಸಿರುವುದು ಗಮನಾರ್ಹವಾಗಿವೆ.

ಕನ್ನಡ ದಾಖಲು ಸಾಹಿತ್ಯ ಸುಮಾರು ೨೬೦ ವರ್ಷಗಳಿಗಿಂತಲೂ ಪೂರ್ವ ಇತಿಹಾಸ ಹೊಂದಿದ್ದು, ಈ ಸಾಹಿತ್ಯದ ಅಧ್ಯಯನದಲ್ಲಿ ಹಲವಾರು ವಿದ್ವಾಂಸರು ದುಡಿದಿದ್ದಾರೆ. ಇವರು ಸಂಗ್ರಹಿಸಿದ ಅಕರಗಳ ಸಹಾಯದಿಂದ ಅಧ್ಯಯನ, ಅಧ್ಯಾಪನ ಸಂಶೋಧನೆಗಳು ನಡೆದಿದ್ದು, ಸನ್ನಿವೇಶದ ಅನಿವಾರ್ಯತೆಯಲ್ಲಿ ಸತಿ ವಿವರಣೆಗಳನ್ನು ನೀಡಿದರೂ, ಒಂದಾದರೂ ಸಂಪೂರ್ಣ ವಿವರಣೆ ನೀಡುವ ದಾಖಲೆಗಳಿಲ್ಲ. ಇದಕ್ಕೆ ಪ್ರಮುಖ ಕಾರಣ ಸಮಕಾಲೀನ ಬದುಕಿನಲ್ಲಿ ಸಹಗಮನದ ಘಟನೆಗಳ ಕುರಿತಾಗಿರುವ ವಿಶಿಷ್ಟ ಮಡಿವಂತಿಕೆಯ ಧೋರಣೆಯು ಕಾರಣವಾಗಿರ ಬಹುದು. ಈ ದೃಷ್ಟಿಯಿಂದ ಪ್ರಸ್ತುತ ಪ್ರಬಂಧದಲ್ಲಿ ಸತಿಪದ್ಧತಿಯ ಕುರಿತಾಗಿ ಇರುವ ವಿಷಯ ವನ್ನು ಒಟ್ಟಾರೆ ಕಟ್ಟಿಕೊಡಲು ಪ್ರಯತ್ನಿಸಿದೆ.

೪.೧. ಶಾಸನಗಳು

ಶಾಸನಗಳು ಕನ್ನಡ ದಾಖಲು ಸಾಹಿತ್ಯ ಗಣನೀಯವಾಗಿ ಸೃಷ್ಟಿಯಾಗುವಲ್ಲಿ ಸಹಾಯವಾಗಿವೆ. ಇವು ಸತಿಪದ್ಧತಿಯ ಕುರಿತಾಗಿರುವ ವಿಷಯವನ್ನು ದಾಖಲಿಸುತ್ತವೆ. “ಭಾಷಾ ಮಾಧ್ಯಮದಲ್ಲಿ ಬದುಕನ್ನು ಚಿತ್ರಿಸುವ ಎರಡು ಸಾಧನಗಳೆಂದರೆ ದಾಖಲು ಸಾಹಿತ್ಯ ಮತ್ತು ಕಾವ್ಯ ಸಾಹಿತ್ಯ ಇವುಗಳಲ್ಲಿ ಶಾಸನಗಳು ದಾಖಲೆ ವರ್ಗಕ್ಕೆ ಸೇರುತ್ತವೆ. ಹೀಗಿದ್ದೂ ಸಾಹಿತ್ಯಿಕವಾಗಿ ಬರೆಯುತ್ತ ಬಂದ ಕಾರಣ ಕರ್ನಾಟಕದ ಶಾಸನಗಳು ಸಾಹಿತ್ಯಕ್ಕೆ ಸಾಹಿತ್ಯ ದಾಖಲೆಗೆ ದಾಖಲೆ ಎನಿಸಿವೆ. ಹೀಗಾಗಿಯೇ ಪ್ರಾಚೀನರು ಇದನ್ನು ಸಾಹಿತ್ಯದ ಒಂದು ಭಾಗ ಎಂದು ಪರಿಗಣಿಸಿದ್ದಾರೆ”[೫] ಸಾಹಿತ್ಯಕ್ಕಿಂತ ಭಿನ್ನವಾದ ರೀತಿಯಲ್ಲಿ ಐತಿಹಾಸಿಕ ಮಹತ್ವ ತಿಳಿಸಿಕೊಡುವ ಶಾಸನಗಳು ದಾಖಲು ಸಾಹಿತ್ಯ ಗುಂಪಿಗೆ ಸೇರುವಲ್ಲಿ ಸೂಕ್ತವೆನಿಸಿವೆ.

‘ಶಾಸನ’ ಎಂಬುದು ಶಾಶ್ವತವಾಗಿ ಉಳಿಯುವ ವಸ್ತುಗಳ ಮೇಲೆ ಬರೆದ ಬರಹ ಎಂಬರ್ಥ ನೀಡುತ್ತದೆ. ಇದು ಕೊರೆಯುವ ಕ್ರಿಯೆ ಮತ್ತು ಬಹುಕಾಲ ಉಳಿಯುವ ಲೇಖನ ಸಾಮಗ್ರಿ ಎಂದು ಗುರುತಿಸಿಕೊಂಡಿದೆ. ಶಾಸನವೆಂದರೆ ಪ್ರಾಚೀನ ಬರಹಗಳಾಗಿರಬೇಕೆಂಬ ನಿಯಮವೇನೂ ಇಲ್ಲ. ಇದು ಕಲ್ಲು, ತಾಮ್ರ, ಬೆಳ್ಳಿ ಲೋಹಗಳ ಮೇಲೆ ಕೊರೆಯಲ್ಪಟ್ಟ ಬರಹಗಳು ಸಹ ಶಾಸನಗಳೇ ಆಗಿವೆ.[೬] ಪ್ರಾಚೀನ ಬರಹಗಳು ಆಂತರಿಕ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ‘ಶಾಸನ’ ಎಂಬ ಪದಕ್ಕೆ ವಿಶಾಲ ಅರ್ಥವನ್ನು ನೀಡಿವೆ. ಆಜ್ಞೆ, ಸಂವಿಧಾನದ ನೀತಿ ಸಂಹಿತೆಗಳು, ಧರ್ಮಲಿಪಿಗಳು, ಎಂಬುವುದರಿಂದ ಹಿಡಿದು ಕೆತ್ತು, ಕೊರೆ, ಕಂಡರಿಸು ಎಂಬ ಭಿನ್ನತೆಯೊಂದಿಗೆ ಆಡಳಿತ, ಪ್ರಭುತ್ವ, ಆಜ್ಞೆ, ಅಪ್ಪಣೆ, ಕಾನೂನು, ಕಟ್ಟಳೆ, ವಿಧಿ ನಿಗ್ರಹ, ಹಿಡಿತ, ಶಿಲಾಲೇಖ, ತಾಮ್ರಲೇಖ, ದಾಖಲೆ, ಶಿಕ್ಷೆ, ದಂಡನೆ, ಒಪ್ಪಂದ, ಕರಾರು ಎಂಬ ವ್ಯಾಪಕಾರ್ಥ ಪಡೆದಿದೆ. ಇದನ್ನು ನಮ್ಮ ಪ್ರಾಚೀನ ಕಾವ್ಯಗಳು ಹೀಗೆ ಉಲ್ಲೇಖಿಸುತ್ತವೆ.

“ದೇವ ದೇವಂ ಪುಲಿಗಿರಿನಗರೀ ಶಾಸನಾಂಕಂ ಮೃಗಾಂಕಂ ಸೋಮೇಶಂ”[೭] ಹಾಗೂ “ಧಾತ್ರಿಯೊಳ್ನುಡಿದುದೆ ನನ್ನಿ ಮಾಡಿದುದೆ ಶಾಸನವಿತ್ತುದೆ ದೇವರಿತ್ತುದೆಂದೊಡೆ ಗುಣದೊಳ್ಳನೇಕೆ ಬೆಸಗೊಂಡಪೆನೀ ಗುಣದಂಕ ಕಾರ್ತಿಯಾ”[೮] ಎಂಬ ಹೇಳಿಕೆಗಳು ಶಾಸನವನ್ನು ಆಜ್ಞೆ, ಅಪ್ಪಣೆ ಎಂದು ಅರ್ಥೈಸುತ್ತವೆ. ಮಹಾಸತಿಯಾದವಳ ಸ್ಮರಣೆಗಾಗಿ ನೆಟ್ಟ ಕಲ್ಲೇ ‘ಮಹಾಸತಿ ಕಲ್ಲು’ ಅಥವಾ ‘ಮಾಸ್ತಿಕಲ್ಲು’. ಈ ಮಾಸ್ತಿ ಕಲ್ಲುಗಳಲ್ಲಿ ಕೆಲವು ಶಾಸನ ಹೊಂದಿದ್ದರೆ, ಇನ್ನು ಕೆಲವು ಶಿಲ್ಪಗಳನ್ನು ಮಾತ್ರ ಹೊಂದಿವೆ. ಮಧ್ಯಕಾಲೀನ ಅವಧಿಯಲ್ಲಿ ಸಾಮಾಜಿಕ ಜೀವನದ ಹಲವು ಆಚರಣೆಗಳನ್ನು ತಿಳಿಯಲು ಪುರಾಣ ಐತಿಹ್ಯಗಳನ್ನು ಬಳಸಿಕೊಳ್ಳಲಾಯಿತು.

ಅಂದಿನ ಸಮಾಜಿಕ, ಆರ್ಥಿಕ, ಧಾರ್ಮಿಕ ಆಚರಣೆಗಳನ್ನು ಏಳು ಬೀಳುಗಳ ಒಳನೋಟಗಳನ್ನು ಅರಿಯುವಲ್ಲಿ ಶಾಸನಗಳು ಸಹಾಯಕವಾದವು. ಸಹಗಮನ, ಅನುಗಮನ, ಸಲ್ಲೇಖನಾವ್ರತ, ವೇಳೆವಾಳೀತನ, ಗರುಡಪದ್ಧತಿ ಮುಂತಾದ ಆಚರಣೆಗಳನ್ನು ಹೇಳುವ ಬಹಳ ಉಲ್ಲೇಖಗಳು ಶಾಸನಗಳಿಂದ ದೊರೆಯುತ್ತವೆ. ಸತಿಪದ್ಧತಿಗೆ ಸಂಬಂಧಿಸಿದ ಐತಿಹಾಸಿಕ ವಿವರಗಳು, ಶಾಸನಗಳ ಕಾಲ, ಸಹಗಮನವಾದ ಹೆಣ್ಣಿನ ಮನೆತನದ ವಿವರಗಳು, ಆಚರಣೆಗೆ ಸಂಬಂಧಿಸಿದ ವಿವರಗಳು ಇವುಗಳಿಂದ ತಿಳಿದು ಬರುತ್ತವೆ. ಸಹಗಮನವನ್ನು ಹೇಳುವ ಶಾಸನಗಳು 'ಮಾಸ್ತಿಕಲ್ಲು' 'ಮಾಸ್ತಿಶಾಸನ' ಎನಿಸಿಕೊಳ್ಳುವವು. ಕೆಲವೊಂದು ಪ್ರದೇಶದಲ್ಲಿ ಶಿಲ್ಪಗಳು ಇವೆ. ಈ ಶಿಲ್ಪಗಳಲ್ಲಿ ಸತಿ ಮತ್ತು ಪತಿ ಎರಡೂ ಶಿಲ್ಪಗಳಿರಬಹುದು. ಸತಿ ಮಾತ್ರ ಬಲಗೈ ಎತ್ತಿ ಅಭಯ ಹಸ್ತದಲ್ಲಿರುವಂತೆ ಕೆತ್ತಲ್ಪಟ್ಟಿರುತ್ತದೆ. ಒಮ್ಮೊಮ್ಮೆ ವ್ಯಕ್ತಿಯ ಶಿಲ್ಪವನ್ನು ಕಂಡರಿಸದೆ ಕಂಬವನ್ನು ಕೆತ್ತಿ ಅದರಿಂದ ಅಭಯ ಹಸ್ತ ಹೊರಟಂತಿರುತ್ತದೆ. ಒಂದು ಕೈ ಇದ್ದರೆ ಒಕ್ಕೈಮಾಸ್ತಿ, ಒಂದಕ್ಕಿಂತ ಹೆಚ್ಚು ಕೈಗಳು ಇರುವ ಮಾಸ್ತಿಕಲ್ಲುಗಳು ಇವೆ. ಎಷ್ಟು ಹಸ್ತಗಳಿರುತ್ತವೆಯೋ ಅಷ್ಟು ಪತ್ನಿಯರಿದ್ದಾರೆಂದು ಅರ್ಥ. ಈ ರೀತಿಯ ಶಾಸನೋಕ್ತ ಮಹಾಸತಿಯಾದವರ ವಿವರವನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

ಮಾಸ್ತಿ ಮರಣದ ದಾಖಲೆಯು ಕ್ರಿ.ಶ.೫ ಮತ್ತು ೬ನೇ ಶತಮಾನದ'ಕವಡಿ ಶಾಸನ'ದಿಂದ ಆರಂಭಿಸುತ್ತದೆ. ಈ ಶಾಸನವು ಸಂಸ್ಕೃತ ಭಾಷೆಯಲ್ಲಿದ್ದು, ಅದರ ಪೂರ್ಣ ಪಾಠ ಹೀಗಿದೆ.

"ಶ್ರೀ ಮೃಗೇಶ ಸುತಶ್ಚಯಃ
....ಹಮಲ್ಲ ತಾಂ ರಾಜ್ಞೀಶ್ರೀರವಿವರ್ಮ್ಮಣಾ
ಷಕಯುಕ್ತಾ ಸಾಮುಕ್ತಾ ವೈರವಿತೇಜಸಾ
.....ಲಕ ಸಂಯುಕ್ತೋಯೋಪ ಹರ್ತಾಭರವೇನ್ನರಃ
ಪಾಪೇನ ಭೂಯೋಪಿನರಕೇಪಚ್ಚತೇ ಚಿರಂ"

ಇದು ಕದಂಬ ರವಿವರ್ಮನ ರಾಣಿಯರ ಸಹಗಮನವನ್ನು ತಿಳಿಸುತ್ತದೆ. ಈ ಶಾಸನವನ್ನು ಕುರಿತು ಎಂ. ಚಿದಾನಂದಮೂರ್ತಿ ಅವರು ಹೀಗೆ ಬರೆಯುತ್ತಾರೆ.[೧೦] ಕದಂಬ ವಂಶದ ರಾಣಿಯೊಬ್ಬಳು ರವಿವರ್ಮನೊಡನೆ 'ಮುಕ್ತಳಾದಂತೆ' ಶಾಸನವು ತಿಳಿಸುತ್ತದೆ. ರವಿವರ್ಮನ ಕುರಿತು ಹೆಚ್ಚು ಮಾಹಿತಿ ದೊರೆತಿಲ್ಲವಾದರೂ, ರವಿವರ್ಮನು ಕದಂಬ ವಂಶದ ರಾಜನೆಂದೂ ಅವನ ರಾಣಿ ಸತಿ ಹೋದಳೆಂದು ಗ್ರಹಿಸಬಹುದಾಗಿದೆ. ರವಿವರ್ಮನ ರಾಣಿಯ ಸಹಗಮನದ ನಂತರ ಸು. ೯ನೇ ಶತಮಾನದವರೆಗೆ ಯಾವ ಸತಿ ಘಟನೆಗಳ ಉಲ್ಲೇಖಗಳು ದೊರಕುವುದಿಲ್ಲ. ಈ ಮೂರುನೂರು ವರ್ಷಗಳ ಧೀರ್ಘಾವಧಿಯಲ್ಲಿ ಸತಿ ಘಟನೆಗಳು ಜರುಗಿದ್ದರೂ ಸರಿಯಾದ

ಉಲ್ಲೇಖಗಳಿಲ್ಲವೆಂದು ತಿಳಿಯಬಹುದಾಗಿದೆ.

ಕ್ರಿ.ಶ.೯೦೮–೯೦೯ ರ ಕೋಗಳಿ ಶಾಸನದಿಂದ ಬೆಳ್ಳಕ್ಕಿನ ಸಹಗಮನದ ವಿಚಾರ ತಿಳಿದು ಬರುತ್ತದೆ."ಪ್ರಪತ್ರನೆ ಜನನಾಳುತ್ತಿರೆ ಆತನ ಹೆಗ್ಗಡೆ ತೊಮ್ಮನೊಮ್ಮೆ ಆಜಿಯೊಳ್ಕಾದಿ ಸುತ್ತೊಡಾತನ ಪೆಣ್ಡತಿ ಬಳಕ್ಕನ ಪ...ಸಾನೊ ಕಾಯಿಕೋಜ"[೧೧] ಈ ಶಾಸನವು ಸ್ಪಷ್ಟವಿಲ್ಲ. ಎಂಬುವುದನ್ನು ಗಮನಿಸಬೇಕು. ಇಲ್ಲಿ ತೊಮ್ಮೆ ಎಂಬಾತ ಯುದ್ಧದಲ್ಲಿ ಮಡಿದ ಆದರೆ ಅವನ ಹೆಂಡತಿ ಸಹಗಮನ ಮಾಡಿಕೊಂಡ ವಿಷಯದ ಶಾಸನ ಭಾಗ ತೃಟಿತವಾಗಿದೆ.

ದಕ್ಷಿಣ ಭಾರತದ ವಿಜಯನಗರ ಸಾಮ್ರಾಜ್ಯದಲ್ಲಿ ಒಟ್ಟು ನಲ್ವತ್ತು ಸತಿಘಟನೆಗಳು ಜರುಗಿರುವುದು ಶಾಸನಗಳಿಂದ ತಿಳಿದುಬರುತ್ತದೆ. ವಿಜಯನಗರ ಕಾಲದಲ್ಲಿ (ಕ್ರಿ.ಶ.೧೩೩೬ – ಕ್ರಿ.ಶ.೧೬೪೬)ಇವುಗಳ ಸಂಖ್ಯೆ ಹೆಚ್ಚುತ್ತ ಹೋಯಿತು. ಈ ಕಾಲದಲ್ಲಿ ಒಟ್ಟು ತೊಂಬತ್ತೊಂದು ಸತಿಘಟನೆಗಳು ಜರುಗಿರುವುದನ್ನು ಶಾಸನಗಳು ಉಲ್ಲೇಖಿಸುತ್ತವೆ. ಈ ಸಾಮ್ರಾಜ್ಯವು ಮುಖ್ಯವಾಗಿ ಹಿಂದೂ ಧರ್ಮರಕ್ಷಣೆಗಾಗಿ ಉದಯಗೊಂಡದ್ದನ್ನು ಈ ಸಂದರ್ಭದಲ್ಲಿ ಸ್ಮರಿಸಬಹುದಾಗಿದೆ. ಇದು ಪರಕೀಯ ಆಕ್ರಮಣಗಳನ್ನು ಎದುರಿಸಿ ನಿಂತು ಹೋರಾಡಿತು. ಮುಸ್ಲಿಂ ಅರಸರೊಡನೆ ವಿಜಯನಗರ ಅರಸರು ಹೋರಾಡಿದ ಸಂಘರ್ಷಯುಗ ಇದಾಗಿದೆ. ಈ ಕಾಲದಲ್ಲಿ ಯುದ್ಧವು ಕರ್ನಾಟಕ ಜನಜೀವನದ ಒಂದು ಅಂಗವಾಗಿ ಬೆಳೆದು ಬಂದಿತ್ತು. ಹೀಗಾಗಿ ಯುದ್ಧವೀರರ ಪತ್ನಿಯರು ಸತಿಹೋಗುವುದು ಈ ಕಾಲದಲ್ಲಿ ಸಹಜವಾಗಿಯೇ ಹೆಚ್ಚಾಗಿರಬೇಕು ಎಂಬ ಮಾಹಿತಿ ದಾಖಲೆಗಳಿಂದ ತಿಳಿದುಬರುತ್ತದೆ. ಕ್ರಿ.ಶ.೧೩೫೪ರ ಹಿರೇಆವಲಿ ಶಾಸನವು ವಿಜಯನಗರ ಕಾಲದ ಮೊಟ್ಟ ಮೊದಲನೆಯ ಸತಿ ಉಲ್ಲೇಖವುಳ್ಳ ಶಾಸನವಾಗಿದೆ.[೧೨] ಈ ಶಾಸನವು "ಶ್ರೀವೀರಹರಿಯಪ್ಪವೊಡೆಯರು ರಾಜ್ಯವಾಳುತ್ತಿದ್ದಾಗ, ಹಿರೇಆವಲಿ ಗ್ರಾಮದ ಕಾಮಗೌಡನ ಮೊಮ್ಮಗನೂ, ಸಿರಿಯುಮಗವುಡನ ಮಗನೂ ಆದ ಮಲಗವುಡನು ಸನ್ಯಾಸನ ಮರಣಹೊಂದಿದ್ದನೆಂದೂ, ಆಗ ಅವನ ಪತ್ನಿ 'ಚೆಂನಕ್ಕ' ಸಹಗಮನ ಮಾಡಿಕೊಂಡಳೆಂದು"[೧೩] ಶಾಸನ ಹೇಳುತ್ತದೆ. ಕ್ರಿ.ಶ.೧೩೭೬ರಲ್ಲಿಯ ಇನ್ನೊಂದು ಶಾಸನವು "ಬೇಚಿಗೌಂಡನು ಪಂಚನಮಸ್ಕಾರ ದಿಂದ ಮಡಿಯಲಾಗಿ ಆತನ ಕಿರಿಯ ಮದವಳಿಗೆ ಮುದ್ದಿಗೌಂಡಿ ಸಹಗಮನ ಹೊಂದಿದ್ದಳೆಂದು ತಿಳಿಸುತ್ತದೆ".[೧೪] ಈ ಕಾಲದಲ್ಲಿ ಬುಕ್ಕರಾಯ ವಿಜಯನಗರವನ್ನು ಆಳುತ್ತಿದ್ದನೆಂದು ಈ ಶಾಸನವು ಉಲ್ಲೇಖಿಸುತ್ತದೆ. ಇವೆರಡೂ ಶಾಸನಗಳು ಜೈನ ಸಮಾಧಿ ಮರಣವನ್ನು ಕುರಿತು ಹೇಳುತ್ತವೆ. ವಿಜಯನಗರ ಕಾಲದಲ್ಲಿ ಸತಿ ಆಚರಣೆಯು ಜೈನರಲ್ಲಿಯೂ ನೆಡೆದುಕೊಂಡು ಬಂದಿರುವುದು ಈ ಉದಾಹರಣೆಗಳಿಂದ ಸ್ಪಷ್ಟವಾಗುತ್ತದೆ. ಚೆಂನಕ್ಕ ಮತ್ತು ಮುದ್ದಿಗೌಂಡಿ ಇಬ್ಬರೂ ಒಂದೇ ಊರಿನ ಸೊಸೆಯರಾಗಿದ್ದು ಸಹಗಮನ ಹೊಂದಿದವರಾಗಿದ್ದಾರೆ. ಚೆನ್ನಕ್ಕ ಕ್ರಿ.ಶ.೧೩೫೪ರಲ್ಲಿ

ಸತಿಹೋಗಿದ್ದರೆ, ಮುದ್ದಿಗೌಂಡಿ ಕ್ರಿ.ಶ.೧೩೭೬ ಸತಿಹೋಗಿದ್ದಾಳೆ. ಇವೆರಡು ಸತಿಘಟನೆಗಳ ಮಧ್ಯ ಇಪ್ಪತ್ತೆರಡು ವರ್ಷಗಳ ಅಂತರವಿದೆ. ಬಹುಶಃ ಮುದ್ದಿಗೌಂಡಿಯ ಚೆನ್ನಕ್ಕಳ ಸಹಗಮನ ಘಟನೆಯನ್ನು ಕಂಡವಳಾಗಿರಬೇಕು ಎಂದು ಈ ಶಾಸನದಿಂದ ತಿಳಿದು ಬರುತ್ತದೆ.

ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನ ಕವನಂದಿ ಹೋಬಳಿ ಹಿರೇಕಬ್ಬೂರು ರಾಮೇಶ್ವರ ದೇವಾಲಯದ ಮುಂದೆ ನೆಟ್ಟ ಮಾಸ್ತಿ ಶಾಸನವೊಂದರಲ್ಲಿ "ಶ್ರೀಮತು ಕಬ್ಬೂರು ಕಾಳಗಉಡರಮಗ ಬೊಮ್ಮನಗೌಡ ಆತನ ಕಿವಿ ಆಳು ಕೊಂಮಾರ ಬೊಗೌಡನ ಮಗ ಕಲ್ಲಪ್ಪನ ಕೊಡವಿದೆ ಹೊಂನಿನ ಕಲ್ಸಕೆ ಜಗಳವ ಮಾಡಿ ಕೊಂದಲಿ ಆದ ಯಾದ್ಯಕಲ್ಲನ್ನು ಹಾಡಿಯ ಶ್ರೀ ಕಾಡಿರದಲಿ ಆ ಬೊಮಗುಡನು ತಂನಮದುವೊಳಿಗೆ ಜಬಿಗೆಉಡಿಸಗಿತ ಸ್ವರ್ಗಸ್ಥಳಾದಳು"[೧೫] ತಂದೆ ಹಾಗೂ ಮಗನ ನಡುವೆ ಹೊನ್ನಿನ ಸಲುವಾಗಿ ಜಗಳವಾಯ್ತು. ಇದರ ಪರಿಣಾಮವಾಗಿ ತಂದೆ ಸಾವನ್ನಪ್ಪಿದ ಆತನೊಂದಿಗೆ ಅವನ ಹೆಂಡತಿಯು ಸಹಗಮನ ವಾದಳು ಎಂಬ ಉಲ್ಲೇಖ ಬರುತ್ತದೆ.

"ಹೋಂನೆನಾಯಕನ ಮಗ ತಿರುಮಲನಾಯಕನು ಸ್ವರ್ಗಸ್ಥನಾದನು ಈತನ ಹೆಂಡತಿಯಾದ ಮಾಯಕ್ಕಳು ಗಂಡನೊಡನೆ ಸಹಗಮನವಾದಳು"[೧೬] ಎಂದು ಪುರತಿ ಗ್ರಾಮದ ಶಾಸನವು ಉಲ್ಲೇಖಿಸುತ್ತದೆ. ಇದರಿಂದ ಮಾಯಕ್ಕ ಮಾಸ್ತಿಯಾಗಿರುವುದು ತಿಳಿದುಬರುತ್ತದೆ. "ಬಲ್ಲುಣಿ ದೇವನು ಡಿಂರಂಗಕಾಯ್ಯನು ತನಂಮವೊಡೆಯರ ಮುಂದೆ ಕಾದಿ ಗೆಲಿದಿಪೆದು ಯಿದಿರ್ಚೇ ಸುರಲೋಕ ಪ್ರಾಪ್ತನಾದ ಯಾತನ ಸತಿ ಬಾನುಮತಿ ಕಾಯ್ಯನವೊಡನೆ ಸಹಗಮನವ ಮಾಡಿ ಕೊಂಡಳು"[೧೭] ಎಂದು ಕಲಕೇರಿ ಶಾಸನವು ಉಲ್ಲೇಖಿಸುತ್ತದೆ. ಈ ಶಾಸನದಲ್ಲಿ ದೇವಗಿರಿಯನ್ನು ಯಾದವ ರಾಮದೇವನು ಆಳುತ್ತಿರುವಾಗ ಮಹಾಮಂಡಳೇಶ್ವರ ಸಾಳಿವ ಬಲ್ಲುಗಿದೇವನು ಚಂದಾಪುರದ ಮೇಲೆ ಯುದ್ಧಕ್ಕೆ ಹೋಗುತ್ತಾನೆ ಅಲ್ಲಿ ಚಂದಾಪುರದ ಕಾಮದೇವ ಗೋಮೆಯ ಹೆಮ್ಮಾಡಿದೇವ ಚಾರಕನೂರು ಪಾಂಡ್ಯದೇವರೊಂದಿಗೆ ಹೋರಾಡಿ ಗೆಲ್ಲುವಾಗ ಅವನ ಸಹಾಯಕನಾದ ಕಾಯಿಯ್ಯನೆಂಬುವವನು ವೀರ ಮರಣ ಹೊಂದುತ್ತಾನೆ. ಆಗ ಆತನ ಪತ್ನಿಯಾದ ಬಾನುಬಾಯಿಯು ಅವನೊಂದಿಗೆ ಸಹಗಮನ ಹೊಂದುತ್ತಾಳೆ. ಎಂಬುದು ತಿಳಿದುಬರುತ್ತದೆ.

ಬಳ್ಳಿಗಾವಿ ಶಾಸನದಲ್ಲಿ "ಗಣೇಶ್ವರನು ಆತನ ಪ್ರಾಣೇಶ್ವರಿ ಜೋಂಮಾಯಿ ಕೂಡಿ ಪತಿಬ್ರತಾಗುಣದಿಂ ಅಗ್ನಿಪ್ರವೇಶಂ ಮಾಡಿ ಸಂಗ್ರಾಮರಂಗದೊಳ್ ಸ್ವರ್ಗ ಪ್ರಾಪ್ತರಾದರು."[೧೮] ಯಾದವ ರಾಮಚಂದ್ರ ರಾಜ್ಯ ಆಳುತ್ತಿರುವಾಗ ಪಾಳದೇವನ ಅರ್ಧಾಂಗಲಕ್ಷ್ಮಿ ಯಲ್ಲುಬಾಯಿಯ ಮಗ ಸಕಲ ಸಂಪನ್ನನಾದ ಗಣೇಶ್ವರನು ಸ್ವರ್ಗಸ್ಥನಾದ ಇವನ ಪ್ರಾಣೇಶ್ವರಿಯಾದ ಬೊಮ್ಮಾಯಿಯ

ಪತಿವ್ರತ ಗುಣದಿಂದ ಅಗ್ನಿಪ್ರವೇಶ ಮಾಡಿ ಸಂಗ್ರಾಮ ರಂಗದಲ್ಲಿ ಸ್ವರ್ಗಪ್ರಾಪ್ತಳಾದಳು. ಎಂದು ಉಲ್ಲೇಖಿತವಾಗಿದೆ. ಕ್ರಿ.ಶ.೧೧೯೯ರ ಅವಧಿಯಲ್ಲಿ ಹೊಯ್ಸಳರ ನರಸಿಂಹ ತೆಳ್ಳನೂರು ಆಳುತ್ತಿರುವಾಗ ಒಬ್ಬ ಹೆಣ್ಣು ಮಗಳು ಸತಿಹೋಗುತ್ತಾಳೆ.[೧೯] ವಿಶ್ವಕರ್ಮ ಕೊಂಗಣಿಯರ ಮಾಯಣಾಚಾರಿಯ ಮಗ ಕೇತಚಾರಿಯು ಮಾಸ್ತಿಕಲ್ಲನ್ನು ಮಾಡಿದ್ದು ತೆಳ್ಳನೂರ ಶಾಸನದಲ್ಲಿ ತಿಳಿದುಬರುತ್ತದೆ. "ಹೊಯ್ಸಳದೇವ ಆಳುತ್ತಿರುವಾಗ ಅರಸಿನಗುಪ್ಪೆಯ ಹೇಮಾಡಿ ಸವುಡನ ಮಗಳು ರಾಜನವುಡನು ಸ್ವರ್ಗಸ್ಥನಾಗುತ್ತಾನೆ ಈತನ ಹೆಂಡತಿ ಮಾಳಗೊಡಿಯು ಗಂಡನೊಂದಿಗೆ ಸುರಲೋಕ ಪ್ರಾಪ್ತಳಾದಳು."[೨೦] ಎಂಬ ವಿವರಗಳು ಅರಸಿನಗುಪ್ಪ ಮಾಸ್ತಿ ಶಾಸನದಲ್ಲಿ ಉಲ್ಲೇಖಗೊಂಡಿದೆ.

ತೀರ್ಥಹಳ್ಳಿ ಅರಗ ಶಾಸನದಲ್ಲಿ "ವೇದಗಿರಿ ವಿರುಂಪಣ ಒಡೆಯರಕೂಡಿ ಮುಂಜಾದೇವಿ ಸ್ವರ್ಗವ ಸೂರೆಗೊಂಡಳು ಎಂದು ಉಲ್ಲೇಖಿಸಿದೆ. ವಿಜಯನಗರದ ಅರಸನಾದ ಹರಹರದೇವನು ಆಳ್ವಿಕೆಯ ಸಮಯದಲ್ಲಿ ವಾಸುಕಾರ ರಾಮದೇವನ ಮಗಳು ಪದುಮಲದೇವಿ. ಇವಳ ಮಗ ಶ್ರೀ ವೀರಬುಕ್ಕರಾಯ ಇವನ ಮಗ ವೇದಗಿರಿ ವಿರುಪರಾಯ ಇವನ ಹೆಂಡತಿ ಮುಂಜಾದೇವಿಯ ದತ್ತಿ ಬಿಟ್ಟಿದ್ದು ಮತ್ತು ಸಹಗಮನಗೊಂಡು ಮಾಸ್ತಿಯಾದರು."[೨೧] ಎಂಬುವುದು ಸ್ಪಷ್ಟವಾಗಿ ತಿಳಿದು ಬರುತ್ತದೆ. "ವೀರ ಹರಿಹರರಾಯ ಆಳುತ್ತಿರುವಾಗ ಅಂಗದ ಕಂಪಣದೊಳಗಣ ನೆಲವೆಳಿಗೆ ನಾಡಿಗೆ ಮುಖ್ಯವಾದ ಸಂಡದ ಬೋಳಗೌಡರಮಗ ಭೂಜಗೌಡರು ಶಕೆ, ೧೩೦೩ ರ ವಿಶು ಸಂವತ್ಸರದ ಮಾಘ ಶು. ೪ ಸೋಮವಾರದಂದು ಸ್ವರ್ಗಸ್ಥನಾಗುತ್ತಾನೆ."[೨೨] ಅವನ ಮದುವಳಿಗೆ ತ್ಯಾಯ ತಾಯವ್ವ ಸಹಗಮನ ಮಾಡುತ್ತಾಳೆ ಎಂಬುವುದನ್ನು ಶಿಕಾರಿಪುರದ ಸಂಡರ ಶಾಸನವು ಉಲ್ಲೇಖಿಸುತ್ತದೆ.

ಕಸಲಗೆರೆಯ ವೀರಗಲ್ಲಿನ ಶಾಸನದಲ್ಲಿ ಮಹಾದೇವಿ ಸತಿಹೋದ ವಿವರಗಳು ತಿಳಿದು ಬರುತ್ತವೆ. "ಕಸಲಗೆರೆ ಸಾಮಂತ ಸೋಮನ ಪುತ್ರ ಮಾರದೇವನು ಮರಣ ಹೊಂದಿದಾಗ, ಆತನ ಹೆಂಡತಿ ಮಹಾದೇವಿಯು ಮಹಾಸತಿಯಾಗುವ ಮೂಲಕ ಸುರಲೋಕ ಪ್ರಾಪ್ತಿಯಾದಳು"[೨೩] ಎಂಬ ಉಲ್ಲೇಖವಿದೆ. ಕ್ರಿ.ಶ.೧೩೮೪ ಮನಗುಂಡಿ[೨೪] ಶಾಸನವೊಂದು ನಾಡಪ್ರಭು ಹಳಿಗೆರೆಯ ಮಲ್ಲಪ್ಪನು ಸ್ವರ್ಗಸ್ಥನಾದುದನ್ನು ಸೂಚಿಸುತ್ತದೆ. ಈ ಸ್ಮಾರಕ ಶಿಲೆಯಲ್ಲಿ ಮಲ್ಲಪ್ಪನ ಪತ್ನಿಯರು ಮೂವರು ಸತಿಹೋದುದ್ದನ್ನು ಶಿಲ್ಪದ ಮೂಲಕ ತೋರಿಸಲಾಗಿದೆ. ಶಾಸನವು ತ್ರುಟಿತವಾಗಿರುವುದರಿಂದ ಇಲ್ಲಿಯ ವಿಷಯ ಸ್ಪಷ್ಟಗೊಳ್ಳುವುದಿಲ್ಲ. ಆದರೆ ಈ ಸ್ಮಾರಕ ಶಿಲೆ ಸತಿಶಿಲ್ಪವನ್ನೊಳಗೊಂಡಿರುವುದರಿಂದ ಇದು ಸತಿಘಟನೆಯನ್ನು ಸೂಚಿಸುತ್ತದೆ. ಎಂದು ಸ್ಪಷ್ಟವಾಗಿ ಹೇಳಬಹುದಾಗಿದೆ.

ಕುಗ್ವೆ ಗ್ರಾಮದ ಶಾಸನದಲ್ಲಿ ಮಾಸ್ತಿ ತೆಂಬಾಯಮ್ಮನ ಕುರಿತು ಉಲ್ಲೇಖವಿದೆ. ಚೌಡನಾಯಕನಮಗ ಕರಿಯನಾಯಕ ಸಿರಿವಂತೆಯ ತುರುಗಾಳಗದಲ್ಲಿ ಹೋರಾಡಿ ಸ್ವರ್ಗಸ್ಥನಾಗುತ್ತಾನೆ. ಆಗ ಅವನ ಪತ್ನಿ ತೆಂಬಾಯಮ್ಮ ಅವನ ಜೊತೆಯಲ್ಲಿಯೇ ಮಹಾಸತಿ ಯಾಗುತ್ತಾಳೆ. ಈ ವಿಷಯ ಶಾಸನದಲ್ಲಿ ಹೀಗೆ ದಾಖಲಾಗಿದೆ. "ಚೌಡನಾಯಕನ ಮಗ ಕರಿಯನಾಯಕನು ಸಿರಿವಸ್ತೆಯ ತುರು ಹುಯಿಲಲು ಬರುವಾಗ ಹೊಯ್ದು ಕಾದಿ ಸ್ವರ್ಗಸ್ಥನಾದ ಇವನ ಮದುವಳಿಗೆ ತೆಂಬಾಯಮಾ ಕೂಡಿ ಸಗ್ಗಲಮೇರಿದಳು"[೨೫] ಎಂದು ತಿಳಿದು ಬರುತ್ತದೆ. ಕ್ರಿ.ಶ.೧೧೩೪ರ ಹುತ್ತ ಗ್ರಾಮದ ಶಾಸನದಲ್ಲಿ ವ್ಯಕ್ತಿಯೊಬ್ಬನು ದಾನ ಸ್ನಾನ ಪೂರ್ವಕವಾಗಿ ಸೂರ್ಯಲೋಕ ಪ್ರಾಪ್ತನಾಗುತ್ತಾನೆ. ಈತನ ಮರಣ ನಂತರ ಅವನ ಹೆಂಡತಿ ದೇವಿಯಕ್ಕ 'ಪುರುಷಬ್ರತ'ವನ್ನು ಕೈಗೊಂಡು ಮಂಡಲಿ ಸಾವಿರದ ಎಡತೊರೆನಾಡಿನ ಉತ್ತವದ ಗ್ರಾಮದಲ್ಲಿ ಸುರಲೋಕ ಪ್ರಾಪ್ತಳಾಗುತ್ತಾಳೆ. ಈಕೆಯ ಪತಿ ಸೂರ್ಯ ಗ್ರಹಣದಂದು ಆತ್ಮಬಲಿದಾನ ಮಾಡಿಕೊಂಡಿರುವುದು ತಿಳಿದುಬರುತ್ತದೆ. ಈಕೆಯೂ ಪತಿಯ ಹಾದಿಯನ್ನು ತುಳಿದು ಮಾಸ್ತಿ ಯಾಗಿದ್ದಾಳೆ.[೨೬] ಇಲ್ಲಿ 'ಪುರುಷಬ್ರತ' ಎಂಬ ಪದವು ಸಹಗಮನಕ್ಕೆ ಪರ್ಯಾಯವಾಗಿ ಬಳಕೆ ಗೊಂಡಿದ್ದನ್ನು ಕಾಣುತ್ತೇವೆ.

ಚಿಕ್ಕಹಾಲಿವಾಣ ಶಾಸನದಲ್ಲಿ ೧ ರಲ್ಲಿ ಕಾಳದೇವಿಯ ಸಹಗಮನದ ಉಲ್ಲೇಖವಿದೆ. "ಮುಂದೆಗಾಮುಂಡ ಸೋಯನ ಮಗಂ ವೀರನರ ನಾಮಾದಿವುರಿವಾನ ಬೊಂಮನಾಯಕ ಮಗಳು ಕಾಳದೇವಿ ಸಹಗಮನ ಮಾಡಿದಳು ಮಂಗಳ ಮಹಾ"[೨೭] ಎಂದು ಬರುತ್ತದೆ. ಇದರಿಂದ ಕಾಳದೇವಿ ಸಹಗಮನ ಮಾಡಿದುದು ಗೊತ್ತಾಗುತ್ತದೆ. ಇದೇ ಶಾಸನ ೨ರಲ್ಲಿ "ಸಜಂಡಳಣತ ಚಿಕ್ಕರಸಿ ಗಂಗಾಬಾಯಿ ಸಹಗಮನವ ಮಾಡಿದಳು"[೨೮] ಎಂದು ಬರುತ್ತದೆ. ಇಲ್ಲಿ ಚಿಕ್ಕರಸಿ ಗಂಗಾಬಾಯಿಯು ಸಹಗಮನ ಮಾಡಿದ್ದು ತಿಳಿದು ಬರುತ್ತದೆ. ೩ನೇ ಶಾಸನದಲ್ಲಿ "ಕುರಣಿವಕ.... ಮಗ ಕಂಕಣ ಆತನ ಮದವಳಿಗೆ ದೇವನಾಕಿತ್ತಿ ಸ್ವರ್ಗಸ್ಥರಾದರು."[೨೯] ಎಂದು ಬರುತ್ತದೆ. ಕಕಣ್ಣ ಮರಣ ಹೊಂದಿರಬೇಕು. ಆಗ ಅವನ ಮದವಳಿಗೆ ದೇವನಾಕಿತ್ತಿಯು ಮಾಸ್ತಿಯಾಗುವ ಮೂಲಕ ಸ್ವರ್ಗಸ್ಥಳಾಗಿದ್ದಾಳೆ ಎಂದು ತಿಳಿದುಬರುತ್ತದೆ.

ಬಾಳೆಹಳ್ಳಿ ಮಾಸ್ತಿಕಲ್ಲಿನ ಶಾಸನದಲ್ಲಿ "ಮಜಿಗಉಡನು ಬಾಳೆಹಳ್ಳಿಯಲ್ಲಿ ಸ್ವರ್ಗಸ್ಥನಾದನು"[೩೦] ಎಂದು ಬರುತ್ತದೆ. ಇವನ ಹೆಂಡತಿ ಸತಿ ಹೋಗಿರುವುದರಿಂದ ಈ ಮಾಸ್ತಿಕಲ್ಲನ್ನು ನಿಲ್ಲಿಸಲಾಗಿದೆ. ಮಾಸ್ತಿಯಾದವಳ ಹೆಸರು ವಿವರಗಳು ತಿಳಿದು ಬರುವುದಿಲ್ಲ. ಈ ಮಾಸ್ತಿಕಲ್ಲು ಬಾಳೆಹಳ್ಳಿಯ ಮಾಸ್ತೆಮ್ಮನ ಗುಡಿಯೊಳಗೆ ಇದ್ದು ಅದನ್ನು ಪೂಜಿಸಲಾಗುತ್ತದೆ. ಈ ಕಲ್ಲನ್ನು ಕಟೆದಾತ ನಾಗೋಜ ಎಂದು ತಿಳಿದು ಬರುತ್ತದೆ. ಮಲಿದೇವಿ ಗಂಡನ ಶವದೊಂದಿಗೆ ಜೀವಂತವಾಗಿ ಹೂಳಿಸಿಕೊಳ್ಳುವ ಮೂಲಕ ಮಹಾಸತಿಯಾಗಿರುವುದನ್ನು ರಾಣೆಬೆನ್ನೂರು ತಾಲ್ಲೂಕಿನ ಹೆಡೆಯಾಲ

ಗ್ರಾಮದ ಸಣ್ಣಕೆರೆ ಏರಿ ಮೇಲಿರುವ ಮಾಸ್ತಿಕಲ್ಲಿನ ಮೇಲಿನ ಶಾಸನ ಹೇಳುತ್ತದೆ. "ನಾಯಕರ ಮಗ ಹೆಡೆಯಾಲದ ರಾಮೆ.. ಯಕರು ಲಿಂಗದೊ.. ದಲ್ಲಿ ಆತನ ಅರ್ಧಾಂಗಿ ಮಲಿದೇವಿ ನಡಸಮಾಧಿಯನು ಹೊಕ್ಕು ದೇವರೊಳಗಾಗಿ ಅವರ ಮಹಾಸತಿಯ ಪತ್ರುಮೆ ಪ್ರಥಿಷ್ಟೆ ಮಾಡಿಸಿದ ಮಗ ಮಾದೆಯ ನಾಯಕನು ಮಂಗಳ ಮಹಾಶ್ರೀ"[೨೧] ಎಂದು ಬರುತ್ತದೆ. ಇದರಿಂದ ರಾಮೆಯನಾಯಕನು ಲಿಂಗದೊಳಗಾದಲ್ಲಿ ಎಂದು ಬರುವುದರಿಂದ ಇವನು ವೀರಶೈವನೆಂಬುದು ಸ್ಪಷ್ಟವಾಗುತ್ತದೆ. ಶೈವ, ವೀರಶೈವರಲ್ಲಿ ಶವಗಳನ್ನು ಹೂಳಲಾಗುತ್ತದೆ. ಆತನ ಶವದ ಜೊತೆಗೆ ಅವನ ಪತ್ನಿ ಮಲಿದೇವಿ ಸಮಾಧಿಯನ್ನು ಹೊಕ್ಕು ಮಹಾಸತಿಯಾಗುತ್ತಾಳೆ. ಆಕೆಯ ಪ್ರತಿಮೆಯನ್ನು 'ಮಾಸ್ತಿಕಲ್ಲು' ಎಂದು ಮಗನಾದ ಮಾದೆಯ ನಾಯಕನು ಪ್ರತಿಷ್ಟೆ ಮಾಡಿಸುತ್ತಾನೆ ಎಂದು ತಿಳಿದು ಬರುತ್ತದೆ.

ಕೆಳದಿಯಲ್ಲಿರುವ ಮಾಸ್ತಿ ಪ್ರತಿಮೆಯ ಮೇಲೆ ಇರುವ ಶಾಸನದಲ್ಲಿ "ವೀರ ಹರಿಹರರಾಯನು ಆಳುತ್ತಿರುವಾಗ ಕೆಳದಿಯ ಹರಿಯಗೌಡನು ಆತನ ಮದವಳಿಗೆ ಮೇಚಿಗಲುಡಿ ಸಹಿತ ಸ್ವರ್ಗಸ್ಥನಾದನು."[೨೨] ಎಂದು ಬರುತ್ತದೆ. ಇದರಿಂದ ಹರಿಯಗೌಡನು ಮರಣ ಹೊಂದಿದಾಗ ಅವನ ಶವದೊಂದಿಗೆ ಅವನ ಪತ್ನಿ ಮೇಚಿಗಲುಡಿ ಮಾಸ್ತಿಯಾಗಿದ್ದಾಳೆಂದು ತಿಳಿಯುತ್ತದೆ. "ಮುರಾರಿ ಹೊನ್ನಪ್ಪನ ಮಗ ತಿಪ್ಪಣ್ಣನು ದೇವರ ಪಾದವನ್ನು ಕೂಡಿದಾಗ ಅವನ ಹೆಂಡತಿ ಖಿಯನರಾಯಿ ವೀರಮಹಾಸತಿಯಾಗಿ ಕಿಚ್ಚನ್ನು ಹಾಯುವ ಮೂಲಕ ಸಹಗಮನ ಮಾಡಿ ಕೊಳ್ಳುತ್ತಾಳೆ."[೨೩] ಇದನ್ನು ಸಾತೇನಹಳ್ಳಿ ಶಾಸನವು ಉಲ್ಲೇಖಿಸುತ್ತದೆ. ಈ ಮಾಸ್ತಿಕಲ್ಲನ್ನು ಭಾರಂಗಿಯ ಮಲ್ಲೋಜನು ಮಾಡಿದ್ದಾನೆ ಎಂದು ತಿಳಿದು ಬರುತ್ತದೆ.

"ಶ್ರೀ ವೀರಹರಿಹರ ಮಹಾರಾಯರ ಕಿಲಾರಿ ಸಾಯಿನಾಯ್ಕನ ಮಗ ದೇವೆ ನಾಯಕ ಅವನ ಮದವಳಿಗೆ ನಾಗಾಯಿ ದೇಮಾಯಿಗಳು ಮಹಾಸತಿಯರಾಗಿ ಆತನ ಸಂಘಾತ ಸ್ವರ್ಗಸ್ಥರಾದರು"[೨೪] ಎಂದು ಬರುತ್ತದೆ. ದೇವನಾಯಕ ಮರಣ ಹೊಂದಿದಾಗ ಅವನ ಇಬ್ಬರೂ ಪತ್ನಿಯರಾದ ನಾಗಾಯಿ ಮತ್ತು ದೇವಾಯಿಗಳು ಮಾಸ್ತಿಯಾಗಿರುವುದು ತಿಳಿದು ಬರುತ್ತದೆ. ಜಂಬಾನೆ ಗ್ರಾಮದ ಮಾರಿ ಗುಡಿಯ ಮುಂದೆ ನೆಟ್ಟ ಮಾಸ್ತಿ ವಿಗ್ರಹದ ಮೇಲಿನ ಶಾಸನದಲ್ಲಿ ಹೀಗಿದೆ. ಬೇಗೂರ ಬಯಿಚಯ್ಯನ ಮಗ ಮರಣ ಹೊಂದಿದಾಗ ಅವನ ಪತ್ನಿ ಸಾಯಕ್ಕ ಮಾಸ್ತಿ ಹೋಗುತ್ತಾಳೆ. ಶಾಸನದಲ್ಲಿ "ಬೇಗೂರ ಬಯಿಚಯನ ಮಗ ತಿಚಿಲಿಯ ಬೇಗೂರ ಮಾಸ್ತಿ ಸಾಯಕ್ಕ ಮಂಗಳ ಮಹಶ್ರೀ"[೨೫] ಎಂದು ಬರುತ್ತದೆ. ಬಯಿಚಯನ ಮಗ ಎಂದು ಮಾತ್ರ ಬರೆದಿದ್ದು, ಮಗನ ಹೆಸರು ತಿಳಿದು ಬರುವುದಿಲ್ಲ. ಊರಬಾಗಿಲ ಬಳಿ ನೆಟ್ಟ ಮಾಸ್ತಿಕಲ್ಲಿನ ಶಾಸನದಲ್ಲಿ ಆಮಿಗಲುಡಿಯ ಸಹಗಮನದ ಉಲ್ಲೇಖವಿದೆ. ವೀರದೇವರಾಯರು ಆಳುತ್ತಿರುವಾಗ

ಮನೆಮನೆಯ ವಿಠಲನು ಸಾಯುತ್ತಾನೆ. ಆಗ ಅವನ ಅರ್ಧಾಂಗಿ ಆಮಿಗಉಡಿಯ ಅವನ ಜೊತೆಯಲ್ಲಿಯೇ ಸ್ವರ್ಗಸ್ಥಳಾಗುತ್ತಾಳೆ.

ಊರ ಹೊರವಲಯದಲ್ಲಿ ನೆಟ್ಟಿರುವ ಮಾಸ್ತಿಕಲ್ಲಿನ ಶಾಸನದಲ್ಲಿ ಬಯಿರವಗಉಡಿಯ ವಿವರವಿದೆ. ವಿಜಯನಗರದ ಮಲ್ಲಿಕಾರ್ಜುನರಾಯರ ವೇಂಟೆಯದ ಚಂದ್ರಗುತ್ತಿ ವೇಂಟೆಯ ದಲ್ಲಿರುವ ಹರವೂರಿನ ಅಮ್ಮಗೌಡನು ಬಯಿರಗೌಡಿ ತಮ್ಮ ಸ್ತ್ರೀಯರು ಸಹಸಂಗತಿಯಿಡಿದರು. ಎಂದು ಹರೂರ ಶಾಸನದಲ್ಲಿ ಹೇಳಲಾಗಿದೆ. ಇದರಿಂದ ಅಮ್ಮಗೌಡನ ಮರಣವಾದಾಗ ಅವನ ಪತ್ನಿ ಬಯಿರಗೌಡಿ ಮತ್ತು ಇತರ ಸ್ತ್ರೀಯರು ಮಾಸ್ತಿಯಾಗಿರುವುದು ತಿಳಿದು ಬರುತ್ತದೆ. ಶಾಸನದಲ್ಲಿ "ಹರಊರ ಅಂಮಗಉಡ ಬಯಿರವಗಉಡಿ ತಂಮ ಸ್ತ್ರೀಯರು ಸಹ ಸಂಗತಿಯಿಡಿದರು ಶ್ರೀ"[೩೬] ಎಂದು ತಿಳಿದು ಬರುತ್ತದೆ. ಇಲ್ಲಿ ಬಯಿರಗೌಡಿಯದು ಮಾಸ್ತಿಯೆನಿಸಿದರೆ ಇತರ ಸ್ತ್ರೀಯರು ಅಮ್ಮಗೌಡನ ಪತ್ನಿಯರಾಗಿರದಿದ್ದರೆ, ಅವರದು ಒಡೆಯ/ಒಡೆತಿಗಾಗಿ ಆತ್ಮಬಲಿದಾನವಾಗುತ್ತದೆ. ತೀರ್ಥಹಳ್ಳಿಗೆ ಹೋಗುವ ರಸ್ತೆಯ ಬಳಿ ಕಾಡಿನಲ್ಲಿರುವ ಮಾಸ್ತಿಕಲ್ಲಿನ ಮೇಲಿನ ಶಾಸನದಲ್ಲಿ ನಾಗಕ್ಕಳ ಸಹಗಮನದ ಉಲ್ಲೇಖವಿದೆ. "ವೀರಪ್ರತಾಪದೇವ ಮಹಾರಾಯನು ವಿಜಯನಗರ ಸಾಮ್ರಾಜ್ಯವನ್ನು ಆಳುತ್ತಿರುವಾಗ ರಾಯಪ್ಪ ವಿಠಣ್ಣವೊಡೆಯ ಆಗರದ ರಾಜ್ಯ ವಾಳುತ್ತಿದ್ದನು. ಆಗ ಮೇಗರವಳ್ಳಿಯ ನಾಗಕ್ಕ ಮಹಾಸತಿಯಾಗುತ್ತಾಳೆ"[೩೭] ಎಂದು ಮೇಗರವಳ್ಳಿ ಶಾಸನವು ಉಲ್ಲೇಖಿಸುತ್ತದೆ.

ಪುರ ಶಾಸನದಲ್ಲಿ ಬಸವಭಕ್ತನ ಮೂವರು ಪತ್ನಿಯರು ಸಹಗಮನ ಮಾಡಿದ ಉಲ್ಲೇಖವಿದೆ. ಹಾಡ್ಲೆಯಪುರದ ಮಾರಭಕ್ತನ ಮಗ ಬಸವಭಕ್ತನು ಸ್ವರ್ಗಸ್ಥನಾಗುತ್ತಾನೆ. ಆತನ ಮೂವರು ಹೆಂಡತಿಯರು ತೋಳು ಕೈಕೊಟ್ಟು ಮಾಸ್ತಿಯಾಗುತ್ತಾರೆ. ಅದೇ ದಿನದಂದು ಬಸವಭಕ್ತನ ಮಗ ಬೊಮ್ಮಣ್ಣನು ದನಗಳನ್ನು ಕಾಯಲು ಹೋದಾಗ ಕಳ್ಳರು ಆಗಮಿಸಿ ದನಗಳನ್ನು ಕದಿಯುವಾಗ ಇವನು ಕಳ್ಳರೊಂದಿಗೆ ಹೋರಾಡಿ, ಕಳ್ಳರನ್ನು ಕೊಂದು ವೀರಸ್ವರ್ಗ ಪಡೆದು ಕೊಳ್ಳುತ್ತಾನೆ.[೩೮] ಇದರಿಂದ ಒಂದೇ ದಿನ ಒಂದೇ ಮನೆಯಲ್ಲಿ ಐದು ಜನರು ಮರಣ ಹೊಂದಿರುವುದು ತಿಳಿದು ಬರುತ್ತದೆ. ಹಿರೇಹಾರಕ ಶಾಸನದಲ್ಲಿ ಬೊಮ್ಮಗೌಡಿಯ ಸಹಗಮನದ ಉಲ್ಲೇಖವಿದೆ.[೩೯] ವೀರಪ್ರತಾಪದೇವರಾಯ ವಿಜಯನಗರ ಸಿಂಹಾಸನದಿಂದ ಆಳುತ್ತಿರುವಾಗ ದೇವರಾಯ ಒಡೆಯರ ನಿರೂಪದಿಂದ ಗೋವೆ, ಗುತ್ತಿಯ ರಾಜ್ಯವನ್ನು ವಿರೂಪ ದಣ್ಣಾಯಕರು ಚಂದ್ರಗುತ್ತಿಯಿಂದ ಆಳುತ್ತಿದ್ದರು. ಇವರ ಸಮ್ಮುಖದಲ್ಲಿ ರಾಮಗೌಡನು ಇದ್ದು, ಅಲ್ಲಿ ದೇವರ ಪಾದವನ್ನು ಸೇರುತ್ತಾನೆ. ಆಗ ಯಿರುಗುಪ್ಪ ಒಡೆಯನು ಚಂದ್ರಗುತ್ತಿಯಿಂದ ಹರಿಕೆ ಹೊತ್ತು ರಾಮಗೌಡನ ಶವವನ್ನು ತೆಗೆದುಕೊಂಡು ಹೋಗುತ್ತಾನೆ. ಅಲ್ಲಿ ರಾಮಗೌಡನ ಪತ್ನಿ ಬೊಮ್ಮಗೌಡಿಯು

ಸಹಗಮನ ಮಾಡುತ್ತಾಳೆ. ಆಗ ರಾಮಗೌಡ ಮತ್ತು ಬೊಮ್ಮಕ್ಕ ಇಬ್ಬರೂ ಸ್ವರ್ಗಕ್ಕೆ ಹೋಗುತ್ತಾರೆ ಎಂದು ತಿಳಿದು ಬರುತ್ತದೆ.

ಮನೆಮನೆ ಗ್ರಾಮದ ಊರಬಾಗಿಲ ಬಳಿ ನೆಟ್ಟಿರುವ ಮಾಸ್ತಿಕಲ್ಲಿನಲ್ಲಿಯ ಶಾಸನದಲ್ಲಿ ಮಾದಿಗ ಸಿಯ..ಳ ಸಹಗಮನದ ಉಲ್ಲೇಖ ಬರುತ್ತದೆ. "ಪ್ರತಾಪ ದೇವಾರಾಯನು ಆಳುತ್ತಿರುವಾಗ ಈ ಘಟನೆ ಸಂಭವಿಸಿದೆ. ಶಾಸನದಲ್ಲಿ 'ಮನಮನೆಯ ಮಾದಿಗ ಸಿಯ.... ಸ್ತನಾದಲಿ ಅವರ ಅರ್ಧಾಂಗಿ ಸ್ವರ್ಗಸ್ತೆಯಾ..."[೪೦] ಎಂದು ಬರುತ್ತದೆ. ಕೆಳವರ್ಗದ ಹೆಣ್ಣು ಮಗಳು ಮಾಸ್ತಿ ಆಗಿರುವುದಕ್ಕೆ ಇದೊಂದು ಉದಾಹರಣೆಯಾಗಿದೆ. ಬೇಡಕಣಿ ಶಾಸನದಲ್ಲಿ ಮಸಣಿಗೌಡಿಯ ಸಹಗಮನದ ಉಲ್ಲೇಖವಿದೆ. ಬೇಡುಕಣಿಯ ರಾಮಗೌಡ ಸ್ವರ್ಗಸ್ಥರಾದಾಗ ಅವನ ಮದವಳಿಗೆ ಮಸಣಿಗೌಡಿ ಸಹಗಮನವನ್ನು ಮಾಡುತ್ತಾಳೆ. ಶಾಸನದಲ್ಲಿ "ರಾಮನಗಉಡರೂ ಸ್ವರ್ಗಸ್ಥರಾಗಿ ಆ ರಾಮಗಉಡರ ಮಡವಳಿಗೆ ಮಸಣಿಗಉಡಿ ಸಹಗಮನವಂ ಮಾಡಿದ ವೀರಮಹಾಸತಿ ಯಿ ಕಂಭಕೆ ಮಂಗಳ ಮಹಾಶ್ರೀ"[೪೧] ಎಂದು ಬರುತ್ತದೆ. ಹಿರೇಕೆರೂರಿನ ವೀರಭದ್ರ ದೇವಾಲಯದ ಮುಂದಿರುವ ಮಾಸ್ತಿಕಲ್ಲಿನಲ್ಲಿ ಮೂಕಗೌಡನ ಮದವಳಿಗೆಯ ಶಾಸನವಿದೆ. ಕೇಟಗಾರನಾಯಕನ ಮಗ ಮೂಕಗೌಡನು ಸ್ವರ್ಗಸ್ಥನಾದಾಗ ಆತನ ಮದವಳಿಗೆ ಸಹಗಮನ ಮಾಡುತ್ತಾಳೆ.[೪೨]

"ಕುಣಗಹಳ್ಳಿ ಮಾಸ್ತಿಶಾಸನದಲ್ಲಿ ತಿಂಮಲಾವಾಮಂಣನ ಪೆಣ್ಡತಿ ಮಂಚಾಯಿ ಸತಿಯಾದರು ಮಂಗಳ ಮಹಾಶ್ರೀ"[೪೩] ಎಂದು ಬರುತ್ತದೆ. ಇದರಿಂದ ವಾಮಣ್ಣನು ಮರಣ ಹೊಂದಿದಾಗ ಅವನ ಹೆಂಡತಿ ಮಂಚಾಯಿ ಸತಿ ಹೋಗುತ್ತಾಳೆ. ಹಿರೇಹಾರಕ[೪೪] ಮಾಸ್ತಿಕಲ್ಲಿನ ಶಾಸನದಲ್ಲಿ ಭಯಿರಗೌಡಿಯ ಸಹಗಮನದ ಉಲ್ಲೇಖವಿದೆ. ಹಾರಿಕದ ರಾಮಗೌಡರ ಮಗ ಭೈರವಗೌಡ ಸ್ವರ್ಗಸ್ಥನಾಗುತ್ತಾನೆ. ಇವನ ಮದವಳಿಗೆ ಭೈಯರಿಗೌಡಿ ಅವನ ಶವದ ಜೊತೆಗೆ ಸಹಗಮನ ಮಾಡುತ್ತಾಳೆ. ಆಗ ಗೋವೆ, ಚಂದ್ರಗುತ್ತಿಯ ಮಲ್ಲರಸ ಒಡೆಯರು ಆಳುತ್ತಿದ್ದದು ತಿಳಿದುಬರುತ್ತದೆ. ಕೆಳದಿ ಸ್ತ್ರೀಯೋರ್ವಳ[೪೫] ಒಕ್ಕೈ ಮಾಸ್ತಿ ಕಲ್ಲಿನ ಮೇಲೆ ಕಾಲವನ್ನು ಮಾತ್ರ ಕೆತ್ತಲಾಗಿದೆ. ಮಹಾಸತಿಯಾದ ಸ್ತ್ರೀಯ ವಿವರಗಳು ತಿಳಿದುಬರುವುದಿಲ್ಲ. ಶಿರಾಳಗಿಯಲ್ಲಿ ಒಡೆದ ಸತಿಕಲ್ಲಿನ ಮೇಲೆ ಚೌಡಮ್ಮನ ಮಾಸ್ತಿ ಶಾಸನವಿದ್ದು ಅದರಲ್ಲಿ "ಶ್ರೀಮತು ಬಳವ(ಟಿ)ಯ ಮಾ ಮಗ ಚುಡಂಮನೂ ಸ್ವರ್ಗಸ್ಥ ಆತನ ಮಗ ಸಿ"[೪೬] ಎಂದು ಬರುತ್ತದೆ. ಇದರಿಂದ ಈ ಮಾಸ್ತಿಕಲ್ಲು ಚವುಡಮ್ಮನ ಪತ್ನಿಯದಾಗಿರುವುದು ಸ್ಪಷ್ಟ ಆತನ ಮಗ ಈ ಮಾಸ್ತಿಕಲ್ಲು ಮಾಡಿಸಿರಬೇಕು.

ಚಿತ್ರಟ್ಟಿಹಳ್ಳಿ[೪೭] ರಾಮೇಶ್ವರ ದೇವಸ್ಥಾನದ ಹಿಂದೆ ಬಿದ್ದಿರುವ ಮಾಸ್ತಿಕಲ್ಲಿನಲ್ಲಿಯ ಶಾಸನವು ಬೊಮ್ಮರಸಿ ಸತಿಯಾದುದನ್ನು ಹೇಳುತ್ತದೆ. ಸೋಮನಾಥದೇವರ ದಿವ್ಯ ಶ್ರೀಪಾದಪದ್ಮಾರಾಧಕನಾದ ಸೋಮೈಯ್ಯದೇವ ಒಡೆಯರ ಶಿಷ್ಯರಾದ ಚಿತಟ್ಟಿಯ ಹಳಿಯ ಜಡೆಯಗೌಂಡನ ಮಗ ಮಲಪನು

ಸ್ವರ್ಗಸ್ಥನಾಗುತ್ತಾನೆ. ಆತನ ಮದವಳಿಗೆ ಬೊಮ್ಮರಸಿಯು ಸತಿಯಾಗುತ್ತಾಳೆ. ಬೊಮ್ಮರಸಿಯ ತಮ್ಮಗೌಂಡನ ಮೊಮ್ಮಗನು ಬಮ್ಮರಸಿಗೆ ಈ ಕಲ್ಲನ್ನು ಮಾಡಿಸಿರಬೇಕು. ಹೊಸಾಳಿಯ[೪೮] ಮಾಸ್ತಿಕಲ್ಲಿನ ಶಾಸನದಲ್ಲಿ ಲಕುಮಾಯಿಯು ಸತಿಹೋದ ಉಲ್ಲೇಖವಿದೆ. ರಾಜ ಸಾಳುವ ಹೊವಾಕಿಸಿಯನಾಕ ಬಟಕಳಕನ ನಾಗರಸ ಒಡೆಯರು ಪರಿವಾರ ಸಹಿತವಾಗಿ ಮೂಡವೂರನ್ನು ಮುರಿದಾಗ ಹೊಸಾಳಿಯ 'ಮುಸಂವಳಿಯ ಸಾಳುವ ನಾಯಕನು' ಸ್ವರ್ಗಸ್ಥನಾಗುತ್ತಾನೆ. ಆಗ ಇವನ ಮದವಳಿಗೆ ಲಕುಮಾಯಿ ಅಗ್ನಿಪ್ರವೇಶ ಮಾಡುತ್ತಾಳೆ.

ಹರೂರು ಶಾಸನದಲ್ಲಿ "ಶ್ರೀಮತು ಹರಊರ ಚಾಉಂಡಗಾಉಡ.... ಮಗ ಬೊಂಮ್ಮಗಉಡ ಸ್ವರ್ಗಸ್ಥನಾದನು (ಆತನ) ಮದವಳಿಗೆ ಬೊಂಮಿಗಉಡಿ ಸಮಸ್ವರ್ಗಕ್ಕೆ ಸಂದಳು..."[೪೯] ಎಂದು ಬರುತ್ತದೆ. ಇದರಿಂದ ಬೊಮ್ಮಗೌಡ ಸ್ವರ್ಗಸ್ಥನಾದಾಗ ಅವನ ಪತ್ನಿ ಬೊಮ್ಮಿಗವುಡಿ ಸತಿ ಹೋಗಿರುವುದು ಗೊತ್ತಾಗುತ್ತದೆ. ನಾದೂರು ಹೋಬಳಿ[೫೦] ಕಸಬೆಯಲ್ಲಿರುವ ರಾಮದೇವರ ದೇವಸ್ಥಾನದ ಬಳಿಯಿರುವ ಕಲ್ಲಿನಲ್ಲಿ ಇರುವ ಶಾಸನದಲ್ಲಿ ನಾಗಮ್ಮಳ ಸಹಗಮನದ ಉಲ್ಲೇಖವಿದೆ. ವೀರಬುಕ್ಕರಾಯನು ಆಳುತ್ತಿರುವಾಗ ನಾದೂರ ಬಿಯಿಟಿವೆರಾಣಿಯನು, ಆಚಗೌಡ, ಹೆಗ್ಗಡೆ ಪೆರೆಯಯಿವರು ಊರನ್ನು ಆಳುತ್ತಿರುವಾಗ ನಾದೂರ ನಾಗ ಮಡುವಾಳ ಅವನ ಹೆಂಡತಿ ಎಡವಯ ಮಗಳು ಬೊಂಮ ಮಡುವಾಳ ಅಲ್ಲಿನ ಹೆಂಡತಿ ಕಮಾಯಿ, ಹೊಂನಮ ನಾಗಯಸರಣಗೆ ನವೀರಗೇಂಅಪ ಮೃತನಾದಲ್ಲಿ ಆತನ ಹೆಂಡತಿ ನಾಗಮ್ಮ ತನ್ನ ಗಂಡನ ಕೂಡ ಮೃತಳಾಗುತ್ತಾಳೆ. ಇವರ ಸೊಸೆ ಕೂಡ ವೀರಗಲ್ಲನ್ನು ನೆಡಿಸಿ ಬಾರ್ಯೆಸಕೊಂಡು ಮೃತಳಾಗಿ ಮಾವನಿಗೆ ಕೊಟ್ಟ ಬಾಸೆಗೆ ಕಲ್ಲು ನಿಲ್ಲಿಸಿದರು. ಎಂಬ ಅಸ್ಪಷ್ಟ ವಿವರಗಳಿವೆ. ಒಟ್ಟಾರೆ ನಾಗಮ್ಮ ಸತಿ ಹೋಗಿರುವುದು ಸ್ಪಷ್ಟವಾಗಿ ತಿಳಿದು ಬರುತ್ತದೆ.

ಗೌಜಗ್ರಾಮದ[೫೧] ಬನಶಂಕರಿ ಗುಡಿಯ ದಕ್ಷಿಣ ಪಾರ್ಶ್ವ ಭಾಗದಲ್ಲಿ ನೆಟ್ಟಿರುವ ಒಕ್ಕೈ ಮಾಸ್ತಿಕಲ್ಲಿನಲ್ಲಿಯ ಶಾಸನದಲ್ಲಿ 'ಚಾಕಿಯಕ್ಕ ಕಿಚ್ಚ ಹಾಯ್ದಳು' ಎಂದು ಬರುತ್ತದೆ. ಈಕೆಯ ಗಂಡನ ಹೆಸರು ಮೊದಲಾದವುಗಳು ತಿಳಿದುಬರುವುದಿಲ್ಲ. ಅರಸಾಳು ಗ್ರಾಮದಲ್ಲಿರುವ ವೀರಭದ್ರನ ದೇವಾಲಯದ ಮುಂದೆ ನೆಟ್ಟಿರುವ ಒಕ್ಕೈ ಮಾಸತಿಕಲ್ಲಿನ ಶಾಸನದಲ್ಲಿ "ಅರಿಲಮರೆ ಬೋಗಗೌಂಡನ ಮಗ ತಿಪ್ಪಯನ ಮದವಳಿಗೆ ಹರಿಸಿ ಕೊಡೆ ಸ್ವರ್ಗಸ್ಥೆಯಾದಳು"[೫೨] ಎಂದು ಬರುತ್ತದೆ. ಇದರಿಂದ ತಿಪ್ಪಯ್ಯನ ಹೆಂಡತಿ ಸತಿ ಹೋಗಿರುವುದು ಸ್ಪಷ್ಟ ಆದರೆ ಆಕೆಯ ಹೆಸರು ತಿಳಿದು ಬರುವುದಿಲ್ಲ.

ಐಸೂರಿನ[೫೩] ವೀರಭದ್ರ ದೇವಾಲಯಯದಲ್ಲಿರುವ ಸತಿಕಲ್ಲಿನ ಮೇಲಿರುವ ಶಾಸನದಲ್ಲಿ ಪುರ . . ಗ.. ಲ .. ಅಂ ಮಹಾ .. (ಯೂಗಿ) . (ಸಹ)ಗಮನ(ವ) ಮಾಡಿ ದೇವ(ರ) ಪ್ರಿಯಳಾದಳು ಎಂದು ಬರುತ್ತದೆ. ಇದರಿಂದ ಸ್ತ್ರೀಯೋರ್ವಳು ಸಹಗಮನ ಮಾಡಿದುದು

ಗೊತ್ತಾಗುತ್ತದೆ. ನಾಗಸಮುದ್ರದ[೫೪] ಆಂಜನೇಯ ದೇವಸ್ಥಾನದ ಮುಂದೆ ಇರುವ ವೀರಗಲ್ಲಿನಲ್ಲಿ ಮುರಾರಿಮಲಣ ನಾಯಕರು ಎಂದು ಬರುತ್ತದೆ. ಶಾಸನ ಶಿಲ್ಪದಲ್ಲಿ ಇವನ ಹೆಂಡತಿಯನ್ನು ಕೆತ್ತಿದ್ದು ಆಕೆಯ ಕೈಯನ್ನು ಮುರಾರಿ ಮಲಣನಾಯಕನು ಹಿಡಿದುಕೊಂಡಿದ್ದಾನೆ. ಇದರಿಂದ ಅವನ ಪತ್ನಿ ಮಹಾಪತಿವ್ರತೆಯಾಗಿರುವುದು ಸ್ಪಷ್ಟ ಎಂದು ತಿಳಿದು ಬರುತ್ತದೆ. ಮಾದಕಹಳ್ಳಿ ಶಾಸನದಲ್ಲಿ ಈಕೆಯ ಸತಿ ಹೋದ ಉಲ್ಲೇಖವಿದೆ. ಶಾಸನದಲ್ಲಿ "ಮಾದಗೌಣ್ಣನ ಮಗ ಗುಳಿಗನ ಮದವಳಿಗೆರು ಸತಿಯಾದರು"[೫೫] ಎಂದು ಬರುತ್ತದೆ. ಗುಳಿಗನ ಪತ್ನಿಯ ಹೆಸರು ತಿಳಿದುಬರುವುದಿಲ್ಲ. ಭೈರನಾಯಕನಹಳ್ಳಿಯ ವೀರಭದ್ರ ದೇವಾಲಯದಲ್ಲಿರುವ ತೋಳುಗ್ಗೆ ಮಾಸ್ತಿಕಲ್ಲು ಮೇಲಿನ ಶಾಸನದಲ್ಲಿ "ಹಿರಿಯ ಅಂಕಣನ ಹೆಂಡತಿ ಗುಜಿಗುಡಿಯ ತೋಳು ಕಇ"[೫೬] ಎಂದು ಬರುತ್ತದೆ. ಹಿರಿಯ ಅಂಕಣ್ಣ ಮರಣಿಸಿದಾಗ ಅವನ ಪತ್ನಿ ಗುಜಿಗೌಡಿ ಮಾಸ್ತಿ ಯಾಗುತ್ತಾಳೆ. ಚಿಕ್ಕ ಅಂಕಣ್ಣ ಈ ಕಲ್ಲನ್ನು ಕೆತ್ತಿಸಿದ್ದಾನೆ. ದೊಡ್ಡಮಾಗೋಡು ಗ್ರಾಮದ ಪುಟ್ಟಯ್ಯಗೌಡನ ಬದಿಯಲ್ಲಿ ನೆಟ್ಟ ಮಾಸ್ತಿಕಲ್ಲಿನ ಮೇಲಿರುವ ಶಾಸನದಲ್ಲಿ " ಶ್ರೀಮನು ಮಾ ಗೋಡಗೌಡಿಯರು . . . ಮಣಲೆ . . . ಗ ಚನ್ನ ವೊಡೇರು . . . . .ಶ್ರೀ"[೫೭] ಎಂದು ಬರುತ್ತದೆ. ಮಾಗೋಡ ಗೌಡಿಯರು ಸತಿಹೋಗಿದ್ದು ಅವಳ ನೆನಪಿಗೆ ಈ ಕಲ್ಲನ್ನು ನೆಡಲಾಗಿದೆ. ಕಳೂರು[೫೮] ಗ್ರಾಮದ ಮಾಸ್ತಿಕಲ್ಲಿನ ಮೇಲಿರುವ ಶಾಸನದಲ್ಲಿ ಕಾಮಾಯಿಗಳ ಸಹಗಮನದ ಉಲ್ಲೇಖವಿದೆ. ಶಾಸನದಲ್ಲಿ ". . . ದೇವಲೋಕಕೆ ಪ್ರಾಪ್ತಿಯಾದರು. ಮಾಸ್ತಿನಾದಾರು ಕಾಮಾಯಿಗಳು ಸಹಗಮನ ಸ್ವರ್ಗಪ್ರಾಪ್ತರಾದರು"[೫೯] ಎಂದು ಬರುತ್ತದೆ. ಕಾಮಾಯಿಗಳು ಸಹಗಮನ ಮೂಲಕ ಸ್ವರ್ಗಪ್ರಾಪ್ತರಾಗುತ್ತಾರೆ. ವಿರೂಪೋಜ ಈ ಕಲ್ಲನ್ನು ಕೆತ್ತುತ್ತಾನೆ.

ಮರೂರಿನ ಮಾಸ್ತಿಕಲ್ಲಿನ ಮೇಲಿರುವ ಶಾಸನದಲ್ಲಿ ಮಸಣಕ್ಕ ಸಹಗಮನ ಮಾಡಿದುದನ್ನು ಹೇಳಲಾಗಿದೆ.[೬೦] ದೇವರಾಯನು ರಾಜ್ಯವಾಳುವ ಕಾಲದಲ್ಲಿ ಬೀರೂರು ಬೊಮ್ಮೆಗೌಡನ ಮಗ ಮಾದಪ್ಪನು ಸ್ವರ್ಗಸ್ಥನಾಗುತ್ತಾನೆ. ಆಗ ಆತನ ಮದವಳಿಗೆ ಸಹಗಮನ ಮಾಡುತ್ತಾಳೆ. ಹೆಂನಗೇರಿ ಮಾಸ್ತಿಕಲ್ಲಿನ ಶಾಸನದಲ್ಲಿ "ಹೆಂನಗೇರಿಯ ಮರಿಯಗಉಡರು ಸ್ವರ್ಗಸ್ಥರಾದರು ನಿಲ್ಲಿಸಿದ ಕಲು"[೬೧] ಎಂದು ತಿಳಿದುಬರುತ್ತದೆ. ಇದು ಮಾಸ್ತಿಕಲ್ಲಾಗಿರುವುದರಿಂದ ಮರಿಯಗೌಡನು ಪತ್ನಿ ಮಾಸ್ತಿಯಾಗಿರುವುದು ಸ್ಪಷ್ಟ. ದೇವರಾಯ ಒಡೆಯನು ಆಳುತ್ತಿರುವಾಗ ಕೆಳದಿಯ ಕರಿಯ ತಿಮ್ಮೆಗೌಡನು ಸ್ವರ್ಗಸ್ಥನಾಗುತ್ತಾನೆ. ಆತನ ಮದವಳಿಗೆ ರಾಮಾಯಿ ವೀರಮಾಸ್ತಿಯಾಗುತ್ತಾಳೆ.

ಕಾನಲೆ[೬೨] ಗ್ರಾಮದ ಶಾಸನದಲ್ಲಿ ಈಕೆಯ ಸಹಗಮನದ ಉಲ್ಲೇಖವಿದೆ. ವೀರಪ್ರತಾಪ ದೇವರಾಯ ಆಳುತ್ತಿರುವಾಗ ಚಂದ್ರಗುತ್ತಿಗೆ ಸಲ್ಲುವಯ್ರ್ಯಾಮ ಹಳ್ಳಿಯರ ಬೊಮ್ಮಗೌಡ ಸ್ವರ್ಗಸ್ಥನಾಗುತ್ತಾನೆ. ಅವರ ಮದವಳಿಗೆ ಬೊಮ್ಮಿಗವುಡಿ ಸಹಗಮನ ಮಾಡುತ್ತಾಳೆ. ಕಿಪಡಿ[೬೩]

ಗ್ರಾಮದ ಶಾಸನದಲ್ಲಿ ಈಕೆಯ ಸಹಗಮನದ ಉಲ್ಲೇಖವಿದೆ. ವೀರದೇವರಾಯರು ಆಳುತ್ತಿರುವಾಗ ಶ್ರೀಮತು ಸಬಳಿಗ ಚಾಮಗೌಡರನು ತುರುಗಳನ್ನು ಸೆರೆ ಹಿಡಿಯುತ್ತಾರೆ. ಆಗ ಚಾಮಗೌಡರನು ಸಬಾಯ್ತರು ತುರುಗಳನ್ನು ಸೆರೆ ಹಿಡಿಯುತ್ತಾರೆ. ಆಗ ಆಮಚಗೌಡರು ತುರುಸೆರೆ ಬಿಡಿಸಿ ಮರಳಿಸಲು ಹೇಳಿದಾಗ ಹೋರಾಡಿ ಮರಣ ಹೊಂದಿದವನೆಂದರೆ ಹದಸೆಯ ಬೀರಗೌಡ. ಈ ಬೀರಗೌಡನ ಮದವಳಿಗೆ ಗೌರಾಯಿ ಸಹಗಮನ ಮಾಡಿ ವೀರಸ್ವರ್ಗ ಪಡೆದಳು. ಈ ಶಾಸನವನ್ನು ಕರವುರ ವೀರಜ್ಜನು ಬರೆದಿದ್ದಾನೆ. ಸತಿ ಕಲ್ಲನ್ನು ದುಗೋಜನು ಕೆತ್ತಿದ್ದಾನೆ. ಎಂದು ತಿಳಿದು ಬರುತ್ತದೆ. ಕಿಪಡಿಯ[೬೪] ಇನ್ನೊಂದು ಮಾಸ್ತಿಕಲ್ಲಿನ ಶಾಸನದಲ್ಲಿ ಮಾಲವತ್ತಿಯ ಸಬಳಿಗ ಕಮಗೌಡರು ಸ್ವರ್ಗಸ್ಥರಾದ ಉಲ್ಲೇಖವಿದೆ. ಇವನ ಪತ್ನಿ ಸತಿಹೋಗಿದ್ದು ಆಕೆಯ ನೆನಪಿಗಾಗಿ ನೆಟ್ಟ ಮಾಸ್ತಿಕಲ್ಲು ಇದಾಗಿದ್ದರೂ ಸತಿಹೋದವಳ ಹೆಸರು ಮಾತ್ರ ಇಲ್ಲಿ ಉಲ್ಲೇಖಿಸಿರು ವುದಿಲ್ಲ. ಮತ್ತೊಂದು ಮಾಸ್ತಿಕಲ್ಲಿನ ಶಾಸನದಲ್ಲಿ ಮಾಲ. . ಯ. . ಗೌಡರು ಸ್ವರ್ಗಸ್ಥರಾದುದನ್ನು ಹೇಳಲಾಗಿದೆ.[೬೫] . ಇವನ ಪತ್ನಿ ಸತಿ ಹೋಗಿದ್ದು ಅವಳ ಸ್ಮರಣೆಗಾಗಿ ನೆಟ್ಟ ಮಾಸ್ತಿಕಲ್ಲು ಇದಾಗಿದೆ.

ಮಹಾಮಂಡಳೇಶ್ವರ ಮಂಡಳಿಕಗಳ ಗಂಡಗತ್ತರಿ ಕುಮಾರ ಬೊಮ್ಮರಸರು[೬೬] ಬಿದಿರೂರು, ಮಳಲಿಗೆ ದಾಳಿಯಿಟ್ಟು ಸುಟ್ಟು ಸೂರೆಗೊಂಡು ಬರುವಾಗ ಲಿಂಗದ ಮಕ್ಕಿಯಲ್ಲಿ ಅಡ್ಡೆ ಹೋದು ತಲೆಬಾಗಿಲದಂಗೆಡಿಸಿದಲ್ಲಿ ಸೇಣಿಗೆಯ ಬೊಮ್ಮಾಯ ನಾಯಕನು ಬಂದು "ಕುದುರೆಯ ಕುತ್ತಿಬಿದ್ದು" ದೇವಲೋಕ ಪ್ರಾಪ್ತನಾಗುತ್ತಾನೆ. ಬಾಸೆಯ ಬೊಮ್ಮಕ್ಕಳು ಬೊಮ್ಮಯ್ಯ ನಾಯಕನ ಕೊಡೆ ಕಿಚ್ಚು ಹೋಗುತ್ತಾಳೆ. ಬೊಮ್ಮನಾಯಕನ ತಂಗಿ ಬೈಚನ ಹೆಂಡತಿ ಸಿರಿಯಬ್ಬೆ ಈ ಕಲ್ಲನ್ನು ಮಾಡಿಸುತ್ತಾಳೆ. ಗುಂಡನೂರಿನ ಮಹಾಸತಿಕಲ್ಲಿನ ಶಾಸನದಲ್ಲಿ "ನಾಗೆನಾಯಕನು ಸೊರ್ಗಸ್ಥನಾದರೆ ಹೆಂಡತಿ ಕೊಡೆ ಹೋದಳು"[೬೭] ಎಂದು ಬರುತ್ತದೆ. ನಾಗೆನಾಯಕನು ಸತ್ತಾಗ ಅವನ ಹೆಂಡತಿ ಸತಿ ಹೋಗುತ್ತಾಳೆ. ಆಕೆಯ ಹೆಸರು ತಿಳಿದು ಬರುವುದಿಲ್ಲ.

ಕಲ್ಲಂಬಿ[೬೮] ಮಾಸ್ತಿ ಶಾಸನದಲ್ಲಿ 'ಬೊಂಮಗಉಡರು ದೇವರ ಪಾದಕೆ ಸಂದರು' ಎಂದು ಬರುತ್ತದೆ. ಬೊಮ್ಮಗವುಡನ ಪತ್ನಿ ಸತಿಹೋಗಿದ್ದು ಆಕೆಯ ಹೆಸರು ತಿಳಿದು ಬರುವುದಿಲ್ಲ. ಕಲ್ಲಂಬಿಯ[೬೯] ಗೊಂಡಯ ಬೋಮನ ಮಗ ಉದಿಯಣ್ಣನು ಮರಣ ಹೊಂದಿದಾಗ ಆತನ ಮದವಳಿಗೆ 'ಉದ್ರೆಯಕ್ಕ.. ನಿಯಗ .. ನೆ ಕೂಡಿ ಸಹಗಮನವ ಮಾಡಿದರು' ಎಂದು ಶಾಸನದಲ್ಲಿ ಹೇಳಲಾಗಿದೆ. ಉದ್ರೆಯಕ್ಕ ಸಹಗಮನ ಮಾಡಿದುದು ಸ್ಪಷ್ಟವಾಗಿ ತಿಳಿದುಬರುತ್ತದೆ. ಮಾಸ್ತಿ ಶಾಸನ ಹೆಚ್ಚು ತ್ರುಟಿತವಾಗಿರುವದರಿಂದ ಸತಿಹೋದ ಸ್ತ್ರೀಯ ವಿವರಗಳು ತಿಳಿದು ಬರುವುದಿಲ್ಲ.[೭೦] ತಮ್ಮಗೌಂಡನ ಮಗ ಎಂದು ಮಾತ್ರ ಬರುತ್ತಿದ್ದು ಅವನ ಮಗ ಮರಣ

ಹೊಂದಿದಾಗ ಇವನ ಹೆಂಡತಿ ಸತಿ ಹೋಗಿದ್ದಾಳೆ.

ಕುಂಸಿಗ್ರಾಮದ ಮಾದಿಗರ ಸಣ್ಣನ ಹಿತ್ತಲಲ್ಲಿ ಬಿದ್ದಿರುವ ಮಾಸ್ತಿಕಲ್ಲಿನಲ್ಲಿ ಈಕೆ ಸತಿ ಹೋಗಿದ್ದು ತಿಳಿದು ಬರುತ್ತದೆ. ಶಾಸನದಲ್ಲಿ "ಕುಂಬಸಿಯ ಬೇಡರ ಮಾರಯನಾಯಕನು ಆತನಮದವಳಿಗೆ ಬೋಂಮಾಯಿ ಸ್ವರ್ಗಸ್ಥರಾದರು"[೭೯]. ಇದರಿಂದ ಬೇಡರ ಮಾರಯ್ಯನಾಯಕ ಮರಣ ಹೊಂದಿದ್ದಾನೆ. ಅವನ ಪತ್ನಿ ಬೊಮ್ಮಾಯಿ ಸತಿ ಹೋಗಿದ್ದಾಳೆ. ಚಿಕ್ಕಗೌಡಿಯು ಗಂಡನ ಶವದೊಂದಿಗೆ ಸಮಾಧಿಯಾಗುವ ಮೂಲಕ ಸತಿ ಹೋಗಿದ್ದಾಳೆ. ಚಂದ್ರಗುತ್ತಿಯ ವೇಂತೆಯಕೆ ಸಲ್ಲುವ ಯೆಡೆನಾಡ ಒಳಗಣ ಗುಂಜನೂರು ಮುಖ್ಯ ಪ್ರಭು ತಮ್ಮ ಗೌಡರ ಮಗ ಯೀರಯ್ಯ ಗೌಡರ ಪ್ರಸಾದದೆಡಗೌಡರು ಸ್ವರ್ಗಸ್ಥರಾಗುತ್ತಾರೆ. ಆಗ ಅವರ ಮದವಳಿಗೆ ಚಿಕ್ಕಗೌಡಿ ಅವನೊಂದಿಗೆ ಸಮಾಧಿ ಹೊಕ್ಕು ಸ್ವರ್ಗಸ್ಥಳಾಗುತ್ತಾಳೆ. ಈ ವಿಷಯ ಗುಂಡನೂರ ಮಾಸ್ತಿ ಶಾಸನದಲ್ಲಿ ಹೀಗೆ ಬರುತ್ತದೆ"ಗುಂಜನೂರು ಮುಖ್ಯ ಪ್ರಭುತಂಮಗಉಡರಮಗಯಿರಯ್ಯ ಗವಡರ ಪ್ರಸಾದದೆಡಗಉಡರು ಸ್ವರ್ಗಸ್ಥರಾದರು ಅವರು ಮದವಳಿಗೆ ಚಿಕ್ಕಗಉಡಿ ಅವರ ಕೂಡೆ ಸಮಾಧಿಯನು ಪೊಕ್ಕು ಸ್ವರ್ಗಸ್ಥರಾದರು."[೮೦] ಎಂದು ಬರುತ್ತದೆ.

ಮಾಸ್ತಿಕಲ್ಲಿನ ಮೇಲಿನ ಶಾಸನದಲ್ಲಿ ನಾಗಬೋಮನ ಮಗ ಸ್ವರ್ಗಸ್ಥನಾದುದನ್ನು ಹೇಳಲಾಗಿದೆ.[೮೧] ಇವನ ಪತ್ನಿ ಸತಿ ಹೋಗಿದ್ದು ಅವಳ ನೆನಪಿಗಾಗಿ ನೆಟ್ಟ ಮಾಸ್ತಿಕಲ್ಲು ಇದಾಗಿದೆ.

ಆದರೆ ಇದರಲ್ಲಿ ಸತಿ ಹೋದವಳ ಹೆಸರನ್ನು ಉಲ್ಲೇಖಿಸಿರುವುದಿಲ್ಲ. ಚೆಂನಬುಳ್ಳಾಯಿ, ಬಾಚಲೆ, ಉನಂತೆಮಧುಕಾಯ ಎಂಬ ಮೂವರು ಸತಿಯರು ಗಂಡನಾದ ಬುಳ್ಳಿದೇವನ ಶವದೊಂದಿಗೆ ಸಮಾಧಿ ಹೊಂದಿದ್ದು ಬಳ್ಳಿಗಾವಿ ಶಾಸನದಲ್ಲಿ ಹೇಳಲಾಗಿದೆ. ಬುಳ್ಳಿದೇವನು ಪ್ರಶಸ್ತಿಯಿಂದ ಇವನು ವೀರಶೈವನಾಗಿದ್ದುದು ತಿಳಿದು ಬರುತ್ತದೆ. ಶಾಸನದಲ್ಲಿ ವಿಜಯನಗರದ ಅರಸ ವೀರಪ್ರತಾಪದೇವರು ಆಳುತ್ತಿರುವುದನ್ನು ಹೇಳಲಾಗಿದೆ. "ದೇವರು ಕೊಡನಾಡೊಳಗಣ ಕುಡಿಗೆರೆಯ ಸಿದ್ದೇಶ್ವರ ದೇವರು ಮುಖ್ಯವಾದ ಆಚಾರಿಯ ಬುಳ್ಳಿದೇವಂಗಳ ಸುಚಾರಿತ್ರವೆಂತೆಂದಡೆ ಪರಮಶುದ್ಧ ಪಾವನ ಚರಿತ್ರ ವಿಸಾಲ ಚಿತ್ರಂ ಶಾಸ್ತ್ರದೊಳ್ಪಂ ಗೌತಮಾಂನ್ವಯಾಂಬುಧಿ ಸುಧಾಕರಂ॥ ಶ್ರೀ ಕಲ್ಪಭೂರುಹಂ ....ನರಾತಿದ..... ಪರಾಜಿಪಂ ಧರೆಯೊಳಾ ಬೊಂಮಿದೇವನ ಸುಪುತ್ರನು ಬುಳ್ಳದೇವಂ ಕ್ರಿತದಾನ..... ನಿಗಮೋಕ್ತಿಯ ವಿಚಾರದೊಳಂ ಮಿಗಿ . . .ಪ್ರಭಾವಧಾರುಣಿಯೊಳು ತನ್ನಂ. . . . .ಕೊಟ್ಟ . . . ನಂಬುಧಾರೆಯನೆರದು . . . .ಭಕ್ತಿ. . . . ನೆತಂನೊಳಾವಗಂ ವರಗುಣಿ ಬುಳ್ಳಿದೇವನ ಚರಿತ್ರತೆಗಾರ್ಸರಿ ಭೂತಳಾಗ್ರದೊಳು॥ ಕರ ಚರಣ ದ್ವಯಕ್ಕೆ ಜಂಗಮರೂಪಿನಿಂದ ಧಾರಿಣಿಯೊಳು ಪೂಜೆಗೊಂಬನತಿ ಭಕ್ತರ ರುವದೊಳು ನಿರಂತರಂ ಪರಮ ಸಿವಾಗಮೀಕರಿಗೆ ಶಾವಧಿಕಾರಿ ಎನಿಪನಾವಗಂ ಸ್ತಿರತೆಯೊಳು ಬುಳ್ಳಿದೇವನ ಗುಣಂಗಳ ಬಂಣಿಪರಾರ್ಧರಿತ್ರಿಯೊಳು॥

ಶಕವರುಷರುಷಂ ಸುಸಾವಿರದ ಮುನ್ನೂರನಾಲ್ವತ್ತು ನಾಲ್ಕು ರ ಶುಭಕೃತವೆನಿಸಿದ ಸಂವತ್ಸರದೊಳಾಸ್ವೀಜ ಸುಧದ ಪಂಚಮಿ ಪ್ರಕಾಶಾದಿಯವಾರದೊಳ್ಪ. . . ಸ್ಥಿರವಲ್ಲೆನಗೆಂದು . . . .ಬುಳ್ಳಿದೇವನು ಸುರಲೋಕಕ್ಕೈದಿದ ಸುರೇಂದ್ರನ ರಾಣಿಯರು. . . . .॥ ಮೂವರು ಕಾಂತೆಯರುಂನತದಿಂದಲೀ ಸಮಾಧಿಗೊಡಲಂ ಕೊಟ್ಟಾ ಚೆಂನಬುಳ್ಳಾಯ ಬಾಚಲೆ ಉಂನ್ನತೆಮಧುಕಾಯತಂಮ್ಮೊಳತಿದಯ ದಿಂದಂ"[೨೪] ಎಂದು ಬರುತ್ತದೆ. ಬುಳ್ಳಿದೇವನು ಬೊಮ್ಮಿದೇವನ ಪುತ್ರನಾಗಿದ್ದಾನೆ. ಅಲ್ಲದೆ ಇವನು ಕೂಡಿಗೆರೆಯ ಸಿದ್ಧೇಶ್ವರದೇವರ ಪಂಚೇಶ್ವರದೇವರ ಆಚಾರಿಯಾಗಿದ್ದು ಸುಚರಿತ್ರನೆನಿಸಿದ್ದನು. ಹೀಗಾಗಿ ಜಂಗಮ ರೂಪಿಯೆನಿಸಿ ಜನರಿಂದ ಪೂಜೆಗೊಳ್ಳಲ್ಪಡುತ್ತಿದ್ದನು. ಪರಮಶಿವಾಗಮಿಕರಿಗೆ ಅಧಿಕಾರಿಯೆನಿಸಿದ್ದ ಇವನ ಬದುಕು ಸ್ತಿರವಲ್ಲವೆಂದು ಸುರಲೋಕಕ್ಕೆ ಹೋಗುತ್ತಾನೆ. ಆಗ ಇವನ ಮೂವರು ಪತ್ನಿಯರು 'ಸಮಾಧಿ ಗೊಡಲಂಕೊಟ್ಟಾರು' ಅಂದರೆ ಸಮಾಧಿ ಸತಿಯಾಗುತ್ತಾರೆ.

ಕೆಲವು ಮಾಸ್ತಿ ಶಾಸನಗಳಲ್ಲಿ ಸತಿಹೋದ ಸ್ತ್ರೀಯರ ಹೆಸರುಗಳಿಲ್ಲದೇ ಇರುವುದನ್ನು ಗುರುತಿಸಲಾಗಿದೆ. ಅವುಗಳೆಂದರೆ, ಸೊರಟೂರು ಗ್ರಾಮದ ಮಾಸ್ತಿ ಹೊಲದಲ್ಲಿ ನೆಟ್ಟಿರುವ ಮಾಸ್ತಿಕಲ್ಲಿನ ತೃಟಿತ ಶಾಸನದಲ್ಲಿ "ಮುಸಂಕಗಉಡನ. . . ಸಂಕಂಮ. . . .ದೆಡೆ. . . ಹೋದನು. . . ಉಗ ಕಂ ಮಂಗಳ ಮಾಹಾಶ್ರೀ ಶ್ರೀ"[೨೫] ಎಂದು ಬರುತ್ತದೆ. ಕರಿಗಾನಹಳ್ಳಿ ಮಾಸ್ತಿ ಶಾಸನದಲ್ಲಿ "ಗಂಗದೇವನ್ವಾಳಿಕೆಯಲು xxx ಬವರದೊಲುxxx ಪೋಗೆ ಅವನ ಸತಿ ಸಹಾನುಭೂತಿಯಂ ಪೊಂದಿ ಸುರಲೋಕಕೆ ಸಂದಳು"[೨೬] ಎಂದು ಬರುತ್ತದೆ. ಗಂಗದೇವನ ಆಳ್ವಿಕೆಯಲ್ಲಿ ಇವಳು ಸತಿಹೋಗಿದ್ದು ಇವಳ ಹೆಸರು ಮತ್ತು ಇವಳ ಗಂಡನ ಹೆಸರು ತಿಳಿದು ಬರುವದಿಲ್ಲ. ಉದ್ರಿಯ ಮಾಸ್ತಿ ಶಾಸನದಲ್ಲಿ "....ಆ ಕಲ. . . .ದಾನ ಉದರೆಯ ಹೊಂನೋಜನು"[೨೭] ಎಂದು ಬರುತ್ತದೆ. ಇಲ್ಲಿ ಸತಿಹೋದವಳ ವಿವರಗಳು ತಿಳಿದು ಬರುವುದಿಲ್ಲ. ಮಂಡಳಿಮಠ ದಲ್ಲಿರುವ ಮಾಸ್ತಿಕಲ್ಲಿನಲ್ಲಿ "ಶ್ರೀಮತು ವಿಕ್ರುಸವಚರದಲಿ ನಿಲಿಸಿದು ಕಲಿದೇವ ಚಿಕಮಗ ಸಾಳಪೂಜೆ"[೨೮] ಎಂದು ಬರುತ್ತದೆ. ಹೆಚ್ಚಿನ ವಿವರಗಳು ತಿಳಿದುಬರುವುದಿಲ್ಲ.

ಬನ್ನೂರು ಗ್ರಾಮದ ಮಾಸ್ತಿಕಲ್ಲಿನ ಶಾಸನದಲ್ಲಿ "ಶ್ರೀ ಜಯಾಭ್ಯದಯ ಶಕವರಿಶ ೧೫೭ ದುಂದುಭಿ ಸಂವತ್ಸರ ಮಾರ್ಗಶಿರ ಬ ೧೦ ಭಾನುವಾರ"[೨೯] ಎಂದು ಮಾತ್ರ ಬರುತ್ತದೆ. ಹುನವಳ್ಳಿಯ ಮಾಸ್ತಿಕಲ್ಲಿನಲ್ಲಿ "ಸಾಖವರಿಷ ೧೩೭೩ನೇಯ. . . . ಸಂವಚರದ ಮಾರ್ಗಸಿರ ಮಾಸಗುರು . . . ."[೩೦] ಎಂದು ಬರುತ್ತದೆ. ಹೀಗೆ ಅತಿ ಹೆಚ್ಚು ಸಹಗಮನದ ಘಟನೆಗಳು ಘಟಿಸಿರುವುದು ಶಾಸನಗಳಿಂದ ತಿಳಿದುಬರುತ್ತದೆ.

೪.೨. ಸ್ಮಾರಕಗಳು

'ಸ್ಮರಣೆಗೆ' ಪೂರಕವಾಗಿರುವ ವ್ಯಕ್ತಿಗಳು, ವಸ್ತುಗಳು, ವಿಷಯಗಳು ಸ್ಮಾರಕಗಳಾಗಿ ಗುರುತಿಸಿಕೊಳ್ಳುತ್ತವೆ. ಆಧುನಿಕ ಪೂರ್ವ ಸಾಹಿತ್ಯವನ್ನು ಅವಲೋಕಿಸಿದಾಗ 'ಸತಿಪದ್ಧತಿ'ಯಂತಹ ಆಚರಣೆಯಲ್ಲಿ ಬಳಕೆಗೊಂಡ ಹಾಗೂ ಅದರ ಕುರುಹುಗಳಿಗೆ ಸಂಬಂಧಿಸಿದಂತಹುಗಳು ಸ್ಮಾರಕಗಳಾಗಿ ಇಂದಿಗೂ ಗುರುತಿಸಿಕೊಂಡಿವೆ. ಗಂಡನ ಮರಣದ ನಂತರ ಪತ್ನಿಯಾದವಳು ಸತಿ ಹೋಗುವಾಗ ಉಪಯೋಗಿಸಿದ ಬಳೆ, ಸೀರೆ, ಕಳಸ, ಕಂಕಣ, ಲಿಂಬೆಹಣ್ಣು, ಕನ್ನಡಿಯಂತಹ ವಸ್ತುಗಳನ್ನು ರಕ್ಷಿಸಿಕೊಂಡು ಸ್ಮಾರಕಗಳನ್ನಾಗಿ ಉಳಿಸಿಕೊಂಡು ಬಂದಿದ್ದಾರೆ.[೮೧] 'ಸತಿ' ಹೋದವಳ ನೆನಪಿಗಾಗಿ ಜನರು ಹಲವು ವಿಧದಲ್ಲಿ ಶಿಲೆಗಳನ್ನಿಟ್ಟು ಪೂಜಿಸುವುದರೊಂದಿಗೆ ದೊಡ್ಡ ದೊಡ್ಡ ಗುಡಿಗಳನ್ನು ಕಟ್ಟಿ ಜಾತ್ರೆ, ಉತ್ಸವ, ಹಬ್ಬ, ಹರಿದಿನಗಳನ್ನು ಆಚರಿಸುತ್ತಿದ್ದಾರೆ. ಜೊತೆಗೆ ಇಂತಹ ವಿಶೇಷ ಸಂದರ್ಭಗಳಲ್ಲಿ ಸತಿ ಘಟನೆಯ ಕುರುಹುಗಳಾಗಿ ಇವುಗಳನ್ನು ಸ್ಮರಿಸಲಾಗುತ್ತದೆ.

ಸತಿ ಹೋದವರ ವಂಶಸ್ಥರೆಂದು ಹೇಳಿಕೊಂಡ ಕೆಲವು ಮನೆಗಳಲ್ಲಿ ಇಂದಿಗೂ ಈ ವಸ್ತುಗಳು ಇರುವುದನ್ನು ಕಾಣಬಹುದು. ಶ್ರೀರಂಗಪಟ್ಟಣದ ವೀರಮಾಸ್ತಯ್ಯ ಅವರ ಮನೆಯಲ್ಲಿ ಬೆಳ್ಳಿ ಬಳೆ, ಸೀರೆಯ ತುಂಡು, ಕನ್ನಡಿ, ಕಳಸ ಇರುವುದನ್ನು ಸ್ಮರಿಸಬಹುದು. ಚನ್ನಗಿರಿ ತಾಲ್ಲೂಕಿನ ಚಿಕ್ಕಡೇವಿನ ಹಳ್ಳಿಯಲ್ಲಿ ಸತಿ ಬೆಂಕಿಗೆ ಹಾರುತ್ತಲೇ ಆಕಾಶದಿಂದ ಬೆಳ್ಳಿಯ ಲಿಂಬೆಹಣ್ಣು, ಕನ್ನಡಿ ಮತ್ತು ಕತ್ತಿ ಉದುರಿತು ಎಂದು ಇಂದಿಗೂ ಮನೆಯೊಂದರಲ್ಲಿ ಪೂಜಿಸಿಕೊಂಡು ಬರುತ್ತಿದ್ದಾರೆ. ಬೆಳಗಾಂವ ಜಿಲ್ಲೆಯ ಕುಂಚನೂರಿನಲ್ಲಿ ನಾಗಲಬ್ಬೆ ಸತಿಹೋದುದರ ಅವಶೇಷವಾಗಿ ಅವಳ ಕಂಕಣವನ್ನು ಇನ್ನೂ ರಕ್ಷಿಸಿಕೊಂಡು ಬರಲಾಗಿದೆ. ಇಂದಿಗೂ ಚಿಕ್ಕಮಗಳೂರು ಜಿಲ್ಲೆಯ ಮಲೆನಾಡಿನ ಗ್ರಾಮದ ಮನೆಯೊಂದರಲ್ಲಿ ಸಹಗಮನ ಮಾಡಿದ ಒಬ್ಬ ಸ್ತ್ರೀಯ ವಸ್ತ್ರದ ತುಂಡನ್ನು ಪವಿತ್ರ ವಸ್ತುವೆಂಬಂತೆ ರಕ್ಷಿಸಿಕೊಂಡು ಬರುತ್ತಿದ್ದಾರೆ.[೮೨]

ಮಾಸ್ತ್ಯೆಮ್ಮ ಗೀತೆಯೊಂದರಲ್ಲಿ ಸತಿ ಕುಂಡದಲ್ಲಿ ಉರಿದು ಹೋದ ನಂತರ ಅವಳ ಆಭರಣವೊಂದು ಬೂದಿಯಲ್ಲಿ ದೊರೆಯಿತೆಂದು ತಿಳಿದುಬರುತ್ತದೆ. 'ಕಂಕಣದ ಕೈ ಕತೆ'ಯಲ್ಲಿ ನಾಗಲಬ್ಬೆ ಚಿತೆಯಲ್ಲಿ ಸತಿಹೋದ ಮೂರನೆಯ ದಿನಕ್ಕೆ ಅಸ್ತಿ ಸಂಚಯನದ ಸಮಯದಲ್ಲಿ ಅವಳ ಕೈಯ ಕಂಕಣಗಳು ದೊರೆಕಿದವು ಎಂದು ವಿವರಣೆಗಳು ದೊರಕುತ್ತವೆ. "ವಿದೇಶಿ ಪ್ರವಾಸಿಗನಾದ 'ದು–ಆರ್ತೆ–ಬಾರ್ಬೋಸಾ' ಸತಿ ಹೋಗುವವಳು ತನ್ನಲ್ಲಿದ್ದ ಭರಣಗಳನ್ನೆಲ್ಲ ತನ್ನ ನೆಂಟರಿಷ್ಟರಿಗೆ ಹಂಚಿ ಬಿಡುತ್ತಾಳೆ."[೮೩] ಎಂದು ಪ್ರವಾಸ ಕಥನದಲ್ಲಿ ಬರೆಯುತ್ತಾನೆ. ಮಾಂಡೆಲ್ ಸ್ಲೊ ಎಂಬ ಇನ್ನೋರ್ವ ಪ್ರವಾಸಿಗ "ಸತಿ ಹೋಗುತ್ತಿರುವಾಗ ನಾನು ತುಂಬಾ

ಕನಿಕರ ಪಡುತ್ತಿದ್ದೆ ಆಗ ಅದನ್ನು ಆಕೆ ಅರಿತಳೋ ಏನೋ ಆಕೆ ತನ್ನ ಬಳೆಯೊಂದನ್ನು ತೆಗೆದು ನನ್ನ ಕಡೆ ಎಸೆದಳು. ಎಸೆದ ಬಳೆಯನ್ನು ನಾನು ಕೆಳಗೆ ಬೀಳದಂತೆ ಕೈಯಲ್ಲಿ ಹಿಡಿದು ಕೊಂಡೆ ಅದನ್ನು ಜ್ಞಾಪಕಾರ್ಥವಾಗಿ ನನ್ನ ಬಳಿ ಇಟ್ಟುಕೊಂಡಿದ್ದೇನೆ"[೮೪] ಎಂದು ತನ್ನ ಪ್ರವಾಸ ವರದಿಯಲ್ಲಿ ಬರೆದಿದ್ದಾನೆ.

'ಮಾಸ್ತಿ' ದೈವವನ್ನು ಪ್ರತಿನಿಧಿಸುವ ಶಿಲೆಗಳು ಕೊಂಡದಹಳ್ಳಿ, ಯರಬಳ್ಳಿ, ಹೆಮ್ಮನಹಳ್ಳಿ, ಹಾಲ್ನೂರು, ಶಿಟ್ಟಹಳ್ಳಿಗಳಲ್ಲಿ ಶಿಲೆಗಳು ಮಾಸ್ತಿ ದೇವತೆಯಾಗಿ ಪೂಜೆಗೊಳ್ಳುತ್ತಿವೆ.[೮೫] ಯರಬಳ್ಳಿಯಲ್ಲಿ ತಿಮ್ಮವ್ವ ಮತ್ತು ಬೋರಮ್ಮ ಗಂಡನ ಮರಣದ ನಂತರ ಸತಿಯಾದರು. ಇಂದಿಗೂ ಅವರ ನೆನಪಿಗಾಗಿ ಸಣ್ಣ ಗುಡಿಗಳಲ್ಲಿ ಚಿಕ್ಕ ಚಿಕ್ಕ ಕಲ್ಲುಗಳನ್ನಿಟ್ಟು ಪೂಜಿಸುತ್ತಿದ್ದಾರೆ. ಹೆಮ್ಮನಹಳ್ಳಿಯಲ್ಲಿ ಮಾಸ್ತಿ ಹೆಸರಿನಲ್ಲಿ ಮಂಟಪವೊಂದಿದೆ. ಅದರ ಮಧ್ಯಭಾಗದಲ್ಲಿ ಮೂರು ಕಲ್ಲುಗಳಿದ್ದು ಮಾಸ್ತ್ಯೆಮ್ಮ ಎಂದು ಪೂಜಿಸಲ್ಪಡುತ್ತವೆ. ಮಾಸ್ತ್ಯೆಮ್ಮ ಮಂಡ್ಯ ಜಿಲ್ಲೆಯ ಹುಲಿವಾಹನದಲ್ಲಿ ಹುಟ್ಟಿ ಮದ್ದೂರ ತಾಲ್ಲೂಕಿನ ಅಡಗನಹಳ್ಳಿಯ ದತ್ತು ಮಗಳಾಗಿ ಬೆಳೆದು ಹೆಮ್ಮನಹಳ್ಳಿಯಲ್ಲಿಯ ಹೊಂಬಾಳಿ ಗಂಡನನ್ನು ವಿವಾಹವಾದಳು. ಆತ ಯುದ್ಧದಲ್ಲಿ ಮಡಿಯಲಾಗಿ ಮಾಸ್ತ್ಯೆಮ್ಮ ಕೆಂಡ ಕೊಂಡವಾಗಲು ನಿರ್ಧರಿಸುತ್ತಾಳೆ. ಮೂರು ಊರಿನ ಜನ ಹೇಳಿದರೂ ಅವಳು ಕೇಳದೇ ಸತಿಯಾಗುತ್ತಾಳೆ ಎಂದು ತಿಳಿದುಬರುತ್ತದೆ.[೮೬]

ಕೊಂಡದಹಳ್ಳಿಯಲ್ಲಿ ಒಡೆದು ಮುಡಿದವೆಂದು ಹೇಳಲಾಗುವ ಎರಡು ಸಾಮಾನ್ಯ ಕಲ್ಲುಗಳನ್ನು ಮಾಸ್ತ್ಯೆಮ್ಮನೆಂದು ಹೇಳುತ್ತಾ ಚಿಕ್ಕ ದೇವಸ್ಥಾನವೊಂದರಲ್ಲಿ ತೋರಿಸುತ್ತಾರೆ. ಗಂಡನ ಮರಣದ ನಂತರ ಸತಿಹೋದ ಪತ್ನಿಯ ನೆನಪಿಗಾಗಿ ಶಿಲ್ಪ ನಿರ್ಮಿಸುವುದು ಸಾಮಾನ್ಯವಾಗಿದ್ದಿತ್ತು. 'ಸಂಗಮ್ ಯುಗದ' ಸಾಮಾಜಿಕ ಜೀವನವನ್ನು ವಿವೇಚಿಸುವ ಎನ್, ಸುಬ್ರಮಣಿಯನ್ ಅವರ ಮಾತುಗಳು ಈ ವಿಚಾರದಲ್ಲಿ ಸ್ಪಷ್ಟಗೊಳ್ಳುತ್ತವೆ. ಸತಿಗಾಗಿ ಸತಿಕಲ್, ಮಹಾಸತಿಕಲ್, ಮಾಸ್ತಿಕಲ್ ಎಂಬ ಹೆಸರಿನ ಸ್ಮಾರಕ ಕಲ್ಲನ್ನು ನೆಡುವ ಪದ್ಧತಿ ಸಂಗಮ್ ಸಾಹಿತ್ಯದಲ್ಲಿ ಪ್ರಸ್ತಾಪವಾಗಿಲ್ಲ. ಈ ಪದ್ಧತಿಯ ಅರಿವು ಅವರಿಗಿದ್ದರಿಲೂಬಹುದು. ಏಕೆಂದರೆ ತಮ್ಮ ಪ್ರಭುವಿಗಾಗಿ ಪತಿಗಾಗಿ ಮುಡಿಯುವ ವೀರಪತ್ನಿಯರಿಗೆ ನೆಡುವದು, ಆ ವಿಚಾರದ ಕೇವಲ ವಿಸ್ತರಣ ಮಾತ್ರ ಕಣ್ಣಗಿಯ (ಮಹಾಸತಿ) ಗೌರವಾರ್ಥ ಸೆಂಗುವಟ್ಟುವನ್ ನೆಟ್ಟಕಲ್ಲನ್ನು ನಡುಕಲ್ ಎಂದು ಇಳಂಗೊ ಬಣ್ಣಿಸಿರುವದು ಗಮನಾರ್ಹವಾಗಿದೆ.[೮೭] ಕರ್ನಾಟಕದಲ್ಲಿಯೂ ಸಹಗಮನ ಮಾಡಿದ ಸ್ತ್ರೀಯ ಸ್ಮರಣಾರ್ಥ ಸಿಗುವ ಅತಿ ಪ್ರಾಚೀನ ಸ್ಮಾರಕವೆಂದರೆ ಕ್ರಿ.ಶ. ೬ನೇ ಶತಮಾನದ್ದು ಎಂಬುದನ್ನು ಇಲ್ಲಿ ಸ್ಮರಿಸಬಹುದು.

ಸತಿ ಶಿಲ್ಪಗಳಲ್ಲಿ ಹಲವು ಸ್ವರೂಪಗಳನ್ನು ಗುರುತಿಸಬಹುದಾಗಿದೆ. ಕಂಬದಿಂದ ಹೊರಟ ಬಲಗೈ ಎತ್ತಿದ ಶಿಲ್ಪ, ಕಂಬದಿಂದ ಹೊರಟ ಬಲಗೈ ಎತ್ತಿದ ಶಿಲ್ಪದೊಂದಿಗೆ ಪತಿ ಸತಿ ಕುಳಿತ ಚಿತ್ರ, ಕಂಬದಿಂದ ಹೊರಟ ಬಲಗೈ, ಪತಿ–ಸತಿ ಈ ಶಿಲ್ಪಗಳೊಂದಿಗೆ ಇನ್ನುಳಿದ ಶಿಲ್ಪಗಳು, ಸತಿಯನ್ನು ಮಾತ್ರ ಒಳಗೊಂಡ ಶಿಲ್ಪ, ಸತಿ–ಪತಿಯರನ್ನು ಒಳಗೊಂಡ ಶಿಲ್ಪ, ಸತಿ–ಪತಿಯರನ್ನು ಒಳಗೊಂಡ ವಿವಿಧ ಸ್ತರಗಳ ಶಿಲ್ಪ, ವೀರಗಲ್ಲುಗಳಲ್ಲಿಯ ಸತಿ ಶಿಲ್ಪ ಇತ್ಯಾದಿಯಾಗಿ ಸತಿಶಿಲ್ಪಗಳನ್ನು ಗುರುತಿಸಬಹುದಾಗಿದೆ.[೮೮] ಇವುಗಳಲ್ಲಿ ಎತ್ತಿದ ಬಲಗೈ ಶಿಲ್ಪವುಳ್ಳ ಸ್ಮಾರಕಗಳೆ ಅಧಿಕ ಸಂಖ್ಯೆಯಲ್ಲಿ ದೊರಕುವುದೊಂದು ವಿಶೇಷವಾಗಿದೆ.

೪.೩. ಕೈಫಿಯತ್ತುಗಳು

ಆಧುನಿಕಪೂರ್ವ ಸಮಾಜದ ಸಂಸ್ಕೃತಿಯಲ್ಲಿ ಒಂದು ಮೌಲ್ಯವಾಗಿ ಪ್ರಸಾರದಲ್ಲಿದ್ದ ಮಹಾಸತಿಯ ಘಟನೆಗಳನ್ನು 'ಕೈಫಿಯತ್ತುಗಳು' ಕೂಡ ದಾಖಲಿಸಿವೆ. ಇವು ಕರ್ನಲ್ ಮೆಕೆಂಝಿ ಅವರಿಂದ ಯುರೋಪಿಯನ್ ಕಾಗದದ ಮೇಲೆ ಬರೆಯಿಸಿದ ದಾಖಲೆಗಳಾಗಿವೆ. ಇವು ಕ್ರಿ. ಶ. ೧೮ ಮತ್ತು ೧೯ ನೇ ಶತಮಾನದ ಸಂಸ್ಕೃತಿಯನ್ನು ಅರಿಯಲು ಪ್ರಮುಖ ಆಕರಗಳಾಗಿದ್ದು, ಇವು ತಮ್ಮ ಸಮಕಾಲೀನ ಸಂಗತಿಗಳ ಜೊತೆಗೆ ತಮಗಿಂತ ಹಿಂದೆ ಘಟಿಸಿ ಹೋದ ಘಟನೆಗಳನ್ನು ದಾಖಲಿಸಿವೆ. ಅರೇಬಿಕ್ ಪರ್ಷಿಯನ್ ಭಾಷೆಗೆ ಸೇರಿದ ಈ ಪದ ಕನ್ನಡದಲ್ಲಿ 'ಸಮಾಚಾರ' ಎಂಬರ್ಥದಲ್ಲಿ ಬಳಕೆಯಾಗಿದೆ. ಇದು ಬಿಜಾಪುರದ ಆದಿಲ್ ಶಾಹಿಗಳ ಕಾಲದಲ್ಲಿ ಕನ್ನಡ ನಾಡಿನಲ್ಲೆಲ್ಲಾ ಪ್ರಚಾರಗೊಂಡು ಚಾರಿತ್ರಿಕ ನಿರೂಪಣೆಯೆಂಬ ಹೆಸರಿನಿಂದ ಗುರುತಿಸಿಕೊಂಡಿತು.[೮೯] ಹೈದರಾಲಿ ಹಾಗೂ ಟಿಪ್ಪು ಸುಲ್ತಾನರ ಕಾಲದಲ್ಲಿ ಪಾರ್ಸಿ ಲಿಪಿಕಾರರು ಇತಿಹಾಸ ಪ್ರಿಯರಾಗಿದ್ದು, ಇತಿಹಾಸದ ಘಟನೆಗಳನ್ನು ಕುರಿತು ಬರೆಯಲಾರಂಭಿಸಿದರು. ಇದರಿಂದಾಗಿ ಕೈಫಿಯತ್ತುಗಳು ವಿಪುಲವಾಗಿ ರಚನೆಯಾದವು.

ಸಾಹಿತ್ಯ ಪರಿಷತ್ತು ನಿಘಂಟುವಿನಲ್ಲಿ ಕೈಫಿಯತ್ತುಗಳಿಗೆ 'ವಿವರಣೆ ಪತ್ರ, ಆಜ್ಞಾತಪತ್ರ, ತಿಳುವಳಿಕೆ ಪತ್ರ' ವ್ಯಾಜ್ಯಗಳ ಪ್ರತ್ಯಾರೋಪಗಳಿಗೆ ಮೊದಲಬಾರಿಗೆ ನೀಡುವ ಲಿಖಿತ ಉತ್ತರ ಎಂಬ ಮೊದಲಾದ ವಿವರಗಳನ್ನೊಂಡ ದಾಖಲೆ[೯೦] ಎಂಬ ಅರ್ಥಗಳಿವೆ. ಕನ್ನಡದಲ್ಲಿ ಇದು 'ದೂರು' 'ಭಿನ್ನಹ' ಎಂಬ ಅರ್ಥಗಳಿಂದ ಕೂಡಿದೆ. ಈ ರೀತಿಯ ಕೈಫಿಯತ್ತುಗಳು ಇತಿಹಾಸ ಆಕರ ಸಾಮಗ್ರಿಯ ಒಂದು ಪ್ರಕಾರ ಎಂದು ವಿವರಿಸುತ್ತ ಎಂ.ಎಂ.ಕಲಬುರ್ಗಿ ಅವರು ಕೈಪಿಯತ್ತುಗಳಿಗೆ ಅರೇಬಿಯನ್ ಭಾಷೆಯಲ್ಲಿ ಸ್ಪಷ್ಟವಾದ ಹೇಳಿಕೆ, ವಿವರಣೆ ಎಂಬ ಅರ್ಥವಿದೆ

ಎಂದಿದ್ದಾರೆ. ಐತಿಹಾಸಿಕ ದಾಖಲೆ ಎಂಬ ಅರ್ಥ ಪಡೆದುಕೊಂಡ ಮೇಲೆ ಇದು 'ಸ್ಥಳಪುರಾಣ' ಎಂಬ ಅರ್ಥಕ್ಕೆ ಮಾತ್ರ ಸೀಮಿತವಾಗಿರಬೇಕು. ಕರ್ನಲ್ ಮೆಕೆಂಝಿ ದೇವಚಂದ್ರನಿಗೆ ಸ್ಥಳಪುರಾಣ ವುಂಟೆ? ಎಂದು ಕೇಳಿದ್ದನ್ನು ಇಲ್ಲಿ ನೆನೆಯಬಹುದು. ಮೂಲತಃ ಸ್ಥಳಗಳ ಘಟನೆ ಮತ್ತು ವಿವರಗಳನ್ನು ವಸ್ತುವಾಗಿಟ್ಟುಕೊಂಡು ಪ್ರಾರಂಭವಾದ ಈ ಪ್ರಕಾರ ಬರಬರುತ್ತಾ ವೃತ್ತ ಜಾತಿಗಳನ್ನು ಗುರಿಯಿಟ್ಟು ಅನೇಕ ವಿಷಯಗಳ ಮೂಲಕ ಬೆಳೆಯಲೆಂದು ತೋರುತ್ತದೆ. ಕರ್ನಲ್ ಮೆಕೆಂಝೀ ಕರ್ನಾಟಕದ ಅಧಿಕಾರಿಯಾಗಿ ಸ್ಥಳೀಯರಿಂದ ಬರೆಯಿಸಿಕೊಂಡ ವಿವರಣಾತ್ಮಕ ದಾಖಲೆಗಳಿಗೆ 'ಕೈಫಿಯತ್ತು' ಎಂಬ ಪದವನ್ನು ಬಳಸಿ ಪ್ರಚಾರಕ್ಕೆ ತಂದ[೧೧] ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಒಟ್ಟಾರೆ ಕೈಫಿಯತ್ತುಗಳು ರಾಜವಂಶಾವಳಿಗಳ ಜೊತೆಗೆ ಸಾಮಾನ್ಯ ಜನರ ಜಾತಿ, ಮತ, ಪಂಥಗಳ ವಿಚಾರಗಳನ್ನು ಸ್ಥಳ ಪುರಾಣಗಳೊಂದಿಗೆ ಆ ಪದ್ರೇಶದ ವ್ಯಾಪಾರ ವಹಿವಾಟು ಬೆಳೆ ಫಲವತ್ತಾದ ಕೃಷಿಗೆ ಸಂಬಂಧಿಸಿದ ಮಾಹಿತಿಗಳನ್ನು ತಿಳಿಸಿಕೊಡುವ ದಾಖಲೆ ಗಳಾಗಿವೆ.

ಕೈಫಿಯತ್ತುಗಳಲ್ಲಿ ಸಾಮಾಜಿಕ ಆಗು ಹೋಗುಗಳೆಲ್ಲಾ ಸೇರಿಕೊಂಡಿರುತ್ತವೆ. ಜಾತಿ, ಆಚಾರ-ವಿಚಾರ, ಹಬ್ಬ, ಹರಿದಿನ, ಜನನ, ಮರಣ, ಅಪರಾಧ, ಶಿಕ್ಷೆ, ಶಾಪ, ಜನಪದ ಆಟಗಳು, ಮನೋರಂಜನೆಗಳು ಮುಂತಾದ ಸಂಗತಿಗಳನ್ನು ತಿಳಿಯಲು ಸಹಕಾರಿಯಾಗಿವೆ. ಹಾಗೆಯೇ ಆಧುನಿಕ ಪೂರ್ವ ಸಮಾಜದ ಸಂಸ್ಕೃತಿಯಲ್ಲಿ ಒಂದು ಮೌಲ್ಯವಾಗಿ ಪ್ರಸಾರದಲ್ಲಿದ್ದ ಮಹಾಸತಿಯ ಘಟನೆಗಳನ್ನು ಕೈಫಿಯತ್ತುಗಳು ದಾಖಲಿಸಿವೆ ಆ ವಿವರಗಳು ಈ ಕೆಳಗಿನಂತಿವೆ.

ಕೈಫಿಯತ್ತು ಭಟ್ಟರಹಳ್ಳಿ, ತಾಲೂಕೆ ಬಳ್ಳಾರಿ ಕೈಫಿಯತ್ತಿನಲ್ಲಿ ಕುಮಾರರಾಮನ ಶಿರಚ್ಛೇಧನ ವಾಗಿರುವ ಸುದ್ದಿ ಕೇಳಿ ಕುಮಾರರಾಮನ ಮತ್ತು ಅವನ ನಾಲ್ಕು ಜನ ಸ್ನೇಹಿತರ ಹೆಂಡಂದಿರು ಕಂಪಲಿರಾಯನ ಬಳಿಗೆ ಬಂದು 'ನಾವು ಅಗ್ನಿಪ್ರವೇಶ ಮಾಡುತ್ತೇವೆ ನಮಗೆ ಅವಕಾಶ ಮಾಡಿ ಕೊಡಿ' ಎಂದು ಅಪ್ಪಣೆ ಕೇಳುತ್ತಾರೆ. ಇವರಿಗೆ ಸಮಾಧಾನ ಮಾಡಲು ಬೈಚಪ್ಪನಿಗೆ ಹೇಳಿದಾಗ ಅವನು ಆರು ತಿಂಗಳು ವ್ರತ ಮಾಡಲು ಹೇಳಿ ಸತಿಹೋಗುವುದನ್ನು ನಿಲ್ಲಿಸುತ್ತಾನೆ.

ಹತ್ತಿ ಬೆಳಗಲ್ಲು ಕೈಫಿಯತ್ತಿನಲ್ಲಿ[೧೨] ಸಾಬಿನಾಯಕನು ಆದವಾನಿಯಲ್ಲಿದ್ದಾಗ ಒಬ್ಬ ಹೆಂಗಸಿನ ಮೇಲೆ ಕಣ್ಣಿಟ್ಟಿದ್ದಕ್ಕೆ ಅವನ ತಲೆ ಕಡಿಯಲಾಗುತ್ತದೆ. ಇವನ ಹೆಣವನ್ನು ಬೆಳಗಲ್ಲಿಗೆ ತಂದು ಸುಡುವಾಗ ಈತನ ಹೆಂಡತಿಯರು ಚಿತಾಪ್ರವೇಶ ಮಾಡುತ್ತಾರೆ. ಆ ವಿವರಗಳು ಕೈಫಿಯತ್ತಿನಲ್ಲಿ ಹೀಗೆ ದಾಖಲಾಗಿವೆ. "ಯೀ ಸಾಬಿನಾಯಕನು ಆದವಾನಿಯಲ್ಲಿ ಯಿರುವಾಗ್ಯೆ ಅಲ್ಲಿ ವಬ್ಬಾ ಹೆಂಗಸರ ಮ್ಯಾಲ ದೃಷ್ಟಿಯಿಡಲಾಗಿ ಯೀತನ ಸಿರಶ್ಛೇದನಾ ಮಾಡಿಸಿದ್ದರು. ಯಿತನ ಕಡೆ ಜನರು ಹೆಣ ಹೊತ್ತು ಬೆಳಗಲ್ಲಿಗೆ ತಂದು ದಹನ ಮಾಡುವಾಗ್ಯೆ ಆತನ ಯಿಬ್ಬರು ಹೆಂಡರು ಕುಂಡದಲ್ಲಿ ಬಿದ್ದರು. ಯೀ ವೂರಿಗೆ ವುತ್ತರ ಭಾಗದಲ್ಲು ಸಾಮಿಪ್ಯವಾಗಿ ವೊಂದು ಗುಡಿಕಟ್ಟಿ

ವೊಂದು ಕಲ್ಲಿನ ಮ್ಯಾಲೆ ಕುದುರೆ ಮ್ಯಾಲೆ ಸಾಬಿನಾಯಕನ ರೂಪ, ಆತನ ಹೆಂಡರು, ಆತನ ಕಡೆ ಜನರು ಅಪತ್ತಾಗಿರಿ ಹಿರಿಯೋರು ಸಹ ಕಲ್ಲ ಮ್ಯಾಲೆ ರೂಪ ಕೆತ್ತಿಧಾರ."[೨] ಎಂಬ ವಿವರ ತಿಳಿದು ಬರುತ್ತದೆ.

ಕೈಫಿಯತ್ತುಗಳಲ್ಲಿ ನಾಡಿನ ಹಲವು ಪ್ರದೇಶಗಳ ಚರಿತ್ರೆಗಳು, ಸಂಗತಿಗಳು, ವಿಶಿಷ್ಠ ಪೂರ್ಣವಾದ ಮಾಹಿತಿಗಳು ದಾಖಲಾಗಿರುತ್ತವೆ. ಇವುಗಳ ಅಧ್ಯಯನದಿಂದ ಮಹತ್ವದ ವಿಚಾರಗಳು ಬೆಳಕಿಗೆ ಬರುತ್ತವೆ. ಕೈಫಿಯತ್ತುಗಳಲ್ಲಿರುವ ವಿಷಯ ಸತ್ಯ ಹಾಗೂ ನಿಷ್ಠೆಯಿಂದಿರು ತ್ತವೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರಾದರೂ ಸಮಕಾಲೀನ ಸಂಗತಿಗಳನ್ನು ಕುರಿತು ತಿಳಿಸುವ ಕೈಫಿಯತ್ತುಗಳು ನಂಬಲು ಅರ್ಹವಾಗಿರುತ್ತವೆ. ಇದಕ್ಕೆ ಕಾರಣ ಇವುಗಳ ರಚನೆಯಾದ ಕಾಲಕ್ಕಿಂತ ಸ್ವಲ್ಪ ಹಿಂದೆ ಇವುಗಳಲ್ಲಿ ನಿರೂಪಿತವಾದ ಘಟನೆಗಳು ಗತಿಸಿರಬಹುದು. ಅನೇಕ ಸಂಸ್ಥಾಪಕರು ಅರಸರ ಚರಿತ್ರೆಗಳನ್ನೊಳಗೊಂಡ ಕೈಫಿಯತ್ತುಗಳಲ್ಲಿ ಚಿಕ್ಕ ಪುಟ್ಟ ಘಟನೆಗಳು ದಾಖಲಾಗಿರುತ್ತವೆ. ಬೇರೆ ಯಾವ ಬಗೆಯ ಆಧಾರಗಳು ದೊರೆಯದೆ ಇರುವಾಗ ಕೈಫಿಯತ್ತುಗಳಲ್ಲಿ ಇರುವುದನ್ನು ಐತಿಹಾಸಿಕವೆಂದು ನಂಬಬೇಕಾಗುತ್ತದೆ.

ಐತಿಹಾಸಿಕತೆಗೆ ನಿಖರವಾದ ವಾರ, ದಿನ, ತಿಥಿ, ನಕ್ಷತ್ರಗಳ ಗಣಿತವೇ ಪ್ರಧಾನವಲ್ಲ ನಡೆದ ಮುಖ್ಯ ಘಟನೆಗಳು ಅವು ಬೀರುವ ಪರಿಣಾಮ ಮುಂತಾದವು ಮುಖ್ಯವೆನಿಸಿವೆ. ಆ ದಿಕ್ಕಿನಲ್ಲಿ ಕೈಫಿಯತ್ತುಗಳು ವರ್ಣಮಯ ಸಮಾಜ ಚಿತ್ರಣವನ್ನು ಕೊಟ್ಟು ನಮ್ಮ ಮನಸ್ಸನ್ನು ರಂಜಿಸುತ್ತವೆ. ಎಂಬುವುದರಲ್ಲಿ ಸಂಶಯವಿಲ್ಲ ಹೀಗಾಗಿಯೇ ಕೈಫಿಯತ್ತುಗಳು ಒಂದರ್ಥದಲ್ಲಿ ಚರಿತ್ರೆಗಳಾಗಿವೆ. ಕೈಫಿಯತ್ತುಗಳು ಶಾಸನಗಳನ್ನು ಆಧಾರವಾಗಿ ಬಳಸಿಕೊಂಡು ಬರೆದವುಗಳಾಗಿವೆ ಯೀ ವೂರಿಗೆ ಪಶ್ಚಿಮ ರಹದಾರಿ ಅಗ್ರಹಾರ ಕಟ್ಟಿಸಿ ಬ್ರಾಹ್ಮಣರಿಗೆ ಸರ್ವಸಾಮಾನ್ಯವಾಗಿ ಬಿಟ್ಟರು ಅವರ ಕಾಲದಲ್ಲಿ ಶಿಲಾಶಾಸನ ಹಾಕಿದ್ದು ಮೂರು ಶಾಸನವಿದೆ. ಅದರಲ್ಲಿ ಶಾಲಿವಾಹನ ಶ.೧೪೬೨ನೇಯ ಪ್ರಜೋತ್ಪತ್ತಿ ಸಂವತ್ಸರದಂದು ಎಂದು ಶಾಸನದಲ್ಲಿದೆ. ಎರಡನೆಯ ಶಾಸನದಲ್ಲೂ ಶಾಲಿವಾಹನ ಶಕ ೧೪೪೧ ನೆಯ ಶಿದ್ಧಾರ್ತಿ ಸಂವತ್ಸರಯಂದುಯಿದೆ. ಈ ಎರಡು ಶಾಸನದಲ್ಲೂ ಶಾಲಿವಾಹನ ಶಕ ಸಂವತ್ಸರದವರೆಗೆ ಅಕ್ಷರಗಳು ಶಿಥಿಲವಾಗಿ ಹೋಗಿವೆ. ಆದ್ದರಿಂದ ದಾಖಲು ಯಿರೋ ಬಗ್ಯೆ ಬರದುಯಿದ್ದೇನು ಎಂದು ದಾಖಲು ಸಾಹಿತ್ಯವೆನಿಸಿಕೊಳ್ಳುವ ಕೈಫಿಯತ್ತುಗಳ ಪ್ರಾಮಾಣಿಕತೆಯೊಂದಿಗೆ ರಾಜಕೀಯ, ಧಾರ್ಮಿಕ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಸತ್ಯ ಸಂಗತಿಗಳನ್ನು ತಿಳಿಸಿಕೊಡುವ ಮಹತ್ವದ ಆಚರಣೆಗಳಾಗಿವೆ. ಸ್ಥಳೀಯರಿಂದ ಸೃಷ್ಠಿಯಾಗಿದ್ದ ಸ್ಥಳಪುರಾಣಗಳು ಇವುಗಳಾಗಿರುವುದರಿಂದ ಸ್ಥಳೀಯ ಜನರ ಜೀವನ ಸಾಮಾಜಿಕ ಪದ್ಧತಿಯನ್ನು ಅರಿಯಲು ಸಹಕಾರಿಯಾಗಿವೆ.

ಹೀಗೆ ಮಾಸ್ತಿ ಆಚರಣೆ ಪ್ರಾಚೀನ ಕಾಲದಿಂದ ಈ ದೇಶದಲ್ಲಿದ್ದು, ಕ್ರಿ.ಶ.೧೮೨೯ರಲ್ಲಿ ಬ್ರಿಟಿಷ್ ಸರ್ಕಾರದಲ್ಲಿರುವ ಲಾರ್ಡ್‌ವಿಲಿಯಂ ಬೆಂಟಿಂಕ್, ರಾಜಾರಾಮ ಮೋಹನರಾಯ್ ಅಂಥವರ ಪರಿಶ್ರಮದಿಂದ ಈ ಅನಿಷ್ಟ ಪದ್ಧತಿ ನಿಂತು ಹೋಯಿತು. ಭಾರತೀಯ ಸಾಮಾಜಿಕ ಜೀವನದ ಒಂದು ಭಾಗವಾಗಿ ಇಂದಿಗೂ ಜನರು ಮಾಸ್ತ್ಯೆಮ್ಮನನ್ನು ಪೂಜಿಸುವ ಆರಾಧಿಸುವ ನಂಬಿಕೆ ಮಾತ್ರ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ. ಗ್ರಾಮಗಳಿಗೆ ದೇವಿ ಸ್ವರೂಪಳಾಗಿ ಧೈರ್ಯ, ತ್ಯಾಗ, ಪಾತಿವ್ರತ್ಯಗಳ ಸಂಕೇತವಾಗಿ ಪೂಜೆಗೊಳ್ಳುತ್ತಿರುವುದನ್ನು ಕಾಣಬಹುದು.

೪.೪. ವಿದೇಶಿ ಪ್ರವಾಸಿಗರ ವರದಿಗಳು

ಜಗತ್ತಿನ ಪ್ರಮುಖ ವಿದೇಶಿ ಪ್ರವಾಸಿಗರು ವಿವಿಧ ಕಾಲಘಟ್ಟದಲ್ಲಿ ಭಾರತದಾದ್ಯಂತ ಪ್ರವಾಸಮಾಡಿ ಇಲ್ಲಿನ ಧಾರ್ಮಿಕ, ಸಾಮಾಜಿಕ, ರಾಜಕೀಯ, ಆರ್ಥಿಕ ಚಟುವಟಿಕೆಗಳನ್ನು, ನಂಬಿಕೆ–ಸಂಪ್ರದಾಯಗಳನ್ನು ತಮ್ಮ ಬರಹಗಳಲ್ಲಿ ದಾಖಲಿಸಿದ್ದಾರೆ. ಇದೇ ಅವಧಿಯಲ್ಲಿ ಸಮಾಜಕ್ಕೆ ಅನಿಷ್ಟ ಪದ್ಧತಿಯಾಗಿ ಅಂಟಿಕೊಂಡಿರುವ 'ಸತಿಪದ್ಧತಿ'ಯಂತಹ ಆಚರಣೆಯಲ್ಲಿ ಸ್ತ್ರೀಯರನ್ನು ಕ್ರೂರವಾಗಿ ಕೊಲ್ಲುತ್ತಿದ್ದರೆಂಬ ಸಂಗತಿಗಳನ್ನು ತಿಳಿದು ಆ ಘಟನೆಗಳನ್ನು ನೋಡಿದ, ಕೇಳಿದ ವಿವರಗಳನ್ನು ತಮ್ಮ ಪ್ರವಾಸ ವರದಿಯಲ್ಲಿ ಈ ಕೆಳಕಂಡಂತೆ ದಾಖಲಿಸಿದ್ದಾರೆ. ಅವರುಗಳಲ್ಲಿ ಡಿಯೋಡೋರಸ್, ಸಿಕ್ಯುಲಸ್, ಪ್ರೈಯರ್‌ಓಡೋರಿಕ್, ಇಬ್–ನೆ–ಬತೂತಾ, ಸ್ಟ್ರಾಬೋ, ಸುಲೇಮಾನ್, ಆಲ್ಬೇರೂನಿ, ನಿಕೊಲೊ–ದೆ–ಕೊಂತಿ, ಸರ್‌ಜಾನ್ ಮಾಂಡವಿಲ್ಲೆ, ಪರ್ನಾವೋ ನ್ಯೂನಿಜ್, ದು–ಆರ್ತೆ ಬಾರ್ಬೋಸಾ, ಸೀಸರ್ ಫೇಡರಿಕ್, ಫ್ರಾನ್‌ಸ್ವಾಸ್ ಬೆರ್‌ನ್ಯೆ, ಡಚ್ ನೌಕರ ಹಾಲೆಂಡಿನ ಡೈರೆಕ್ಟರುಗಳಿಗೆ ಬರೆದ ಪತ್ರ, ಫಾದರ್ ಅಂತೋಣಿ ಮೊನ್ಸೆರೆಟ್ ಮೊದಲಾದವರು.

ಡಿಯೊಡೋರಸ್ ಸಿಕ್ಯೂಲಸ್ ಸಿಸಿಲಿಯದ ಅಜರಿಯಂ ಪ್ರದೇಶದವನು. ಇವನು ಜೂಲಿಯಸ್ ಸೀಜರ್, ಅಗಸ್ಟಸ್‌ನ ಕಾಲದಲ್ಲಿದ್ದ. ಈತ 'ಸತಿಪದ್ಧತಿ' ಆಚರಣೆಯನ್ನು ಸುಧೀರ್ಘವಾಗಿ ದಾಖಲಿಸಿದ್ದಾನೆ. ಇದನ್ನು ಉಪಲಬ್ಧದ ಆಧಾರದಿಂದ ಸತಿಪದ್ಧತಿಯನ್ನು ಉಲ್ಲೇಖಿಸುವ ಪ್ರಥಮ ದಾಖಲೆಯೆಂದು ಹೇಳಬಹುದು. ಆ ವಿವರಗಳು ಹೀಗಿವೆ.[೯೪] ಗ್ರೀಸ್‌ನಲ್ಲಿ ಇಂಡಿಯಾದ ಸೇನಾ ನಾಯಕನಾದ ಕೆಟಿಯಾಸನು ವೀರಾವೇಶದಿಂದ ಯುಮೇನಿಸನ ಪರವಾಗಿ ಆಂಟಿಗೋಸನೊಡನೆ ಹೋರಾಡಿ ಮಡಿದನು. ಆಗ ಅವನ ಇಬ್ಬರು ರಾಣಿಯರು ಸಹಗಮನಕ್ಕಾಗಿ ಹಾತೊರೆದು ಕೊನೆಗೆ ಹಿರಿಯ ರಾಣಿ ಗರ್ಭಿಣಿಯಾದುದರಿಂದ ಕಿರಿಯರಾಣಿ ಚಿತೆಯೇರುವುದನ್ನು ತಿಳಿಸುತ್ತಾನೆ.

ಈ ಘಟನೆ ಜೊತೆ ಸಿಕ್ಯೂಲಸ್ ಇಂಡಿಯಾ ದೇಶದ ಪ್ರಾಚೀನ ಕಟ್ಟಳೆಯೊಂದನ್ನು ಹೀಗೆ ವಿವರಿಸುತ್ತಾನೆ. ಯುವಕ ಯುವತಿಯರು ಮದುವೆಯಾಗಬೇಕೆಂದು ಇಚ್ಛಿಸಿದರೆ ತಂದೆ ತಾಯಿಯ ತೀರ್ಮಾನದಂತೆ ಮದುವೆಯಾಗದೆ ತಮ್ಮಿಷ್ಟ ಬಂದಂತೆ ಮದುವೆಯಾಗಬಹುದಿತ್ತು. ಆದರೆ ಅನೇಕ ಸಂದರ್ಭಗಳಲ್ಲಿ ಯುವಕ ಯುವತಿಯರ ತೀರ್ಮಾನ ಸರಿಯಾಗುತ್ತಿರಲಿಲ್ಲ. ತಾವು ಮಾಡಿದ್ದು ತಪ್ಪೆಂದು ಅವರಿಗೆ ಅರಿವಾದಾಗ ಪಶಾತ್ತಾಪಪಟ್ಟು ತಮಗೆ ಬೇಕಾದ ಪರ ಪುರುಷನ ಅಥವಾ ಪರಸ್ತ್ರೀ ಸಹವಾಸಕ್ಕೆ ಬೀಳುತ್ತಿದ್ದರು. ಪರ ಪುರುಷರಲ್ಲಿ ಮೋಹಗೊಂಡು ಹೆಂಗಸರು ಕೈ ಹಿಡಿದ ಗಂಡನಿಗೆ ವಿಷ ಹಾಕಿ ಸಾಯಿಸುತ್ತಿದ್ದರು. ಹೀಗೆ ಎಷ್ಟೋ ಜನ ಗಂಡಸರು ಹೆಂಗಸರಿಗೆ ಬಲಿಯಾದುದನ್ನು ಕಂಡು ಅಂತಹ ನೀಚ ಹೆಂಗಸರಿಗೆ ಕಠಿಣ ಶಿಕ್ಷೆ ವಿಧಿಸಬೇಕೆಂದು ನಿಯಮ ಮಾಡಿದರು. ಆದರೂ ಹೆಂಗಸರು ಈ ದುಷ್ಟ ವರ್ತನೆಗೆ ಹೆದರದೆ ಹೋದಾಗ ಒಂದು ಕಟ್ಟಳೆ ಮಾಡಿದರು. 'ಗಂಡ ಸತ್ತರೆ ಹೆಂಡತಿಯೂ ಅವನೊಡನೆ ಸಾಯ ಬೇಕೆಂದು' ಆದರೆ ಗರ್ಭಿಣಿಯಾದ ಅಥವಾ ಮಕ್ಕಳಿರುವ ಹೆಂಗಸರಿಗೆ ಇದು ಅನ್ವಯಿಸುತ್ತಿರಲಿಲ್ಲ. ಭ್ರಷ್ಟಳೆಂಬ ಕಾರಣದಿಂದ ವಿಧವೆಯಾದ ಮೇಲೆ ಯಜ್ಞ-ಯಾಗಾದಿಯಂತಹ ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸದೆ ಬಹಿಷ್ಕೃತಳಾಗಿರಬೇಕಾಗಿತ್ತು. ಹೀಗೆ ಇರಲು ಒಪ್ಪಿದರೆ ಗಂಡನೊಡನೆ ಬೆಂಕಿಯಲ್ಲಿ ಬಿದ್ದು ಭಸ್ಮವಾಗಬೇಕಾದ ಪ್ರಮೇಯವಿರಲಿಲ್ಲ. ಯಾವಾಗ ಈ ರೀತಿಯ ಕಟ್ಟಳೆಯಾಯಿತೋ ಆಗ ಸ್ತ್ರೀಯರು ತಮ್ಮ ಸ್ವಭಾವವನ್ನು ಬದಲಾಯಿಸಿದರು. ಮತ್ತು ವಿಧವೆ ಎಂಬ ಹಣೆಪಟ್ಟಿಯೊಂದಿಗೆ ನಿಕೃಷ್ಟ ಜೀವನ ನಡೆಸುವುದಕ್ಕಿಂತ ಗಂಡನೊಡನೆ ಸಾಯುವುದೆ ಲೇಸೆಂದು ಭಾವಿಸಿದರು. ಜೀವಿಸಿರುವ ತನಕ ತಮ್ಮ ಸುಖ, ಗಂಡನ ಸುಖವನ್ನು ಅವಲಂಬಿಸಿದೆ. ಎಂಬುದನ್ನು ಚೆನ್ನಾಗಿ ಮನನ ಮಾಡಿಕೊಂಡು ಆ ಸುಖಕ್ಕಾಗಿ ಜೀವಿಸಿರುವವರೆಗೂ ದುಡಿಯು ತ್ತಿದ್ದರು. ಗಂಡ ಸತ್ತ ಮೇಲೆ ಅವನೊಂದಿಗೆ ಚಿತೆಯನ್ನೇರುವುದು ಮಹಾಗೌರವ ಎಂದುಕೊಂಡರು.

ಹೀಗೆ ಕೇಟಿಯಾಸನು ಮರಣ ಹೊಂದಲು ಅವನು ಇಬ್ಬರು ಹೆಂಡತಿಯರು ಚಿತೆಯೇರಲು ತವಕ ಪಡುತ್ತಿದ್ದರು. ಹಾಗೆ ಮಾಡುವುದರಿಂದ ತಾವು ಶೀಲದ ಉತ್ತಮೋತ್ತಮ ಕಿರೀಟ ಧರಿಸುವರೆಂಬುದು ಅವರ ಭಾವನೆ. ಈ ವಿವಾದ ಸೇನಾನಾಯಕರಿಗೆ ಮುಟ್ಟಿತು. ಯಾರು ಚಿತೆಯನ್ನೇರಬೇಕು ಎಂಬುವುದನ್ನು ಅವರು ತೀರ್ಮಾನಿಸಬೇಕಾಯಿತು. ಅವರ ಮುಂದೆ ಹೆಂಡತಿಯರಿಬ್ಬರೂ ವಾದ ಮಾಡಿದರು. ಹಿರಿಯ ಹೆಂಡತಿ ಗರ್ಭಿಣಿ ಆಗಿರುವುದರಿಂದ ಕಟ್ಟಳೆಯ ಪ್ರಕಾರ ಆಕೆ ಚಿತೆಯನ್ನೇರಲು ಅವಕಾಶವಿಲ್ಲವೆಂದು, ಕಿರಿಯ ಹೆಂಡತಿ ವಾದಿಸಿದಳು. ತಾನು ವಯಸ್ಸಿನಲ್ಲಿ ಹಿರಿಯವಳು ಆಗಿದ್ದರಿಂದ ಚಿತೆಯನ್ನೇರುವ ಗೌರವ ಸಲ್ಲಬೇಕಾದದ್ದು, ನನಗೆ ಎಂದು ಹಿರಿಯ ಹೆಂಡತಿ ವಾದಿಸಿದಳು. ಸೇನಾನಾಯಕರು ಹಿರಿಯ ಹೆಂಡತಿ

ಗರ್ಭಿಣಿಯೆಂದು ಖಚಿತವಾದ್ದರಿಂದ ಕಿರಿಯ ಹೆಂಡತಿ ಚಿತೆಯನ್ನು ಏರಬಹುದೆಂದು ತೀರ್ಮಾನ ಕೊಟ್ಟರು. ಇದನ್ನು ಕೇಳಿ ಹಿರಿಯ ಹೆಂಡತಿ ಬಿಕ್ಕಿಬಿಕ್ಕಿ ಅಳುತ್ತಾ ತನ್ನ ಮುಖದ ಮೇಲಿನ ಮುಸುಕನ್ನು ಹರಿದು ಹಾಕಿದಳು. ತಲೆಯ ಕೂದಲನ್ನು ಕಿತ್ತುಕೊಂಡು ಅಳುತ್ತಾ ಹೊರಟು ಹೋದಳು. ಕಿರಿಯ ಹೆಂಡತಿ ಸಂತೋಷದಿಂದ ತಲೆಗೆ ಕಿರೀಟ ಧರಿಸಿ, ಮೈಗೆಲ್ಲ ಆಭರಣಗಳನ್ನು ತೊಟ್ಟಳು. ಮದುವಣಗಿತ್ತಿಯಂತೆ ತನ್ನ ಬಂಧು ಬಳಗದೊಡಗೂಡಿ ವಾದ್ಯ ಸಮೇತ ಚಿತಾಗ್ನಿಯಿರುವ ಕಡೆ ಹೊರಟಳು. ನೆರೆದ ಜನ ಸಮೂಹ ಆಕೆಯ ಹಿರಿಮೆಯನ್ನು ಹೊಗಳಿ ಹಾಡುತ್ತಿತ್ತು. ಚಿತಾಗ್ನಿಯನ್ನು ಸಮೀಪಿಸಿದ ನಂತರ ಆಕೆ ತನ್ನ ವಸ್ತ್ರಾಭರಣಗಳನ್ನೆಲ್ಲ ತೆಗೆದು ನೆಂಟರಿಷ್ಟರಿಗೂ, ಸೇವಕ ಸೇವಕಿಯರಿಗೂ ದಾನ ಮಾಡಿದಳು. ಆಕೆ ತನ್ನ ಕೈ ಬೆರಳುಗಳಿಗೆ ವಜ್ರದ ಉಂಗುರಗಳನ್ನು ಧರಿಸಿದ್ದಳು. ತಲೆಗೆ ಚಿನ್ನದ ಅನೇಕ ತಾರೆಗಳನ್ನು ಹಾಕಿಕೊಂಡಿದ್ದಳು. ಕೊರಳಿಗೆ ಮುತ್ತು ಮಾಣಿಕ್ಯದ ಸರಗಳ ಮಾಲೆಯನ್ನು ಹಾಕಿಕೊಂಡಿದ್ದಳು. ಆಕೆ ತನ್ನ ಆಭರಣಗಳನ್ನೆಲ್ಲ ಹಂಚಿದ ಮೇಲೆ ಆಪ್ತರಿಂದ ಬೀಳ್ಕೊಂಡಳು. ನಂತರ ತನ್ನ ಸಹೋದರನ ಕೈ ಹಿಡಿದು ಚಿತಾಗ್ನಿಯನ್ನೇರಿದಳು. ನೆರೆದ ಜನಸಮೂಹ 'ಉಫೇ' ಎಂದಿತು. ಅಗ್ನಿಸ್ಪರ್ಶ ಮಾಡುವ ಮುನ್ನ ಇಡೀ ಸೈನ್ಯವು ಚಿತಾಗ್ನಿಯ ಸುತ್ತ ಮೂರು ಬಾರಿ ಪ್ರದಕ್ಷಿಣೆ ಹಾಕಿದರು. ಆಗ ಅವಳು ವೀರ ರಮಣಿಯಂತೆ ಚಿತೆಯ ಮೇಲೆ ಗಂಡನ ಪಕ್ಕಕ್ಕೆ ಮಲಗಿದಳು. ಬೆಂಕಿಯ ಜ್ವಾಲೆ ಆಕೆಯನ್ನು ಆವರಿಸಿತು. ಆದರೂ ತನ್ನ ಗೌರವಕ್ಕೆ ಕುಂದು ಬರಬಾರದೆಂದು ಒಂದಿಷ್ಟು ಕಿರಿಚಿಕೊಳ್ಳಲಿಲ್ಲ. ಇದನ್ನು ನೋಡಿದವರಲ್ಲಿ ನಾನಾ ರೀತಿಯ ಭಾವನೆಗಳು ಉದ್ಭವಿಸಿದವು. ಕೆಲವರು ಕನಿಕರದಿಂದ ಕಣ್ಣೀರಿಟ್ಟರು. ಕೆಲವರು ಹೊಗಳಿ ಓಹೋ ಎಂದರು. ಆದರೂ ಈ ಪದ್ಧತಿ ಅನಾಗರಿಕವೆಂದೂ, ಅಮಾನುಷವೆಂದೂ, ಖಂಡಿಸುವ ಗ್ರೀಕರಿಗೇನೂ ಕಡಿಮೆಯಿರಲಿಲ್ಲ. ಹೀಗೆ ಸತಿಪದ್ಧತಿಯ ಆಚರಣೆಯ ವಿಧಿ–ವಿಧಾನಗಳನ್ನು ಡಿಯೋಡೋರಸ್ ಸಿಕ್ಯೂಲಸ್ ತನ್ನ ಪ್ರವಾಸ ಸಾಹಿತ್ಯದಲ್ಲಿ ದಾಖಲಿಸಿದ್ದಾನೆ.

ಸ್ಟ್ರಾಬೋ ಕ್ರಿ.ಪೂ. ೫೪ ರಿಂದ ಕ್ರಿ.ಶ.೨೪ರ ಅವಧಿಯಲ್ಲಿ ಭಾರತ ಪ್ರವಾಸದಲ್ಲಿದ್ದನು. ಇವನೂ ಕೂಡ ಹೆಂಡತಿ ಗಂಡನಿಗೆ ವಿಷಹಾಕಿ ಕೊಲ್ಲುತ್ತಿದ್ದರೆಂಬ ಕಾರಣಕ್ಕೆ ಈ ಪದ್ಧತಿ ಜಾರಿಗೆ ಬಂದಿದೆಯೆಂದು ಹೇಳುತ್ತಾನೆ.[೯೫] ಕಥಾಯಿಯ ಜನರಲ್ಲಿ(ಕಥಾಯಿ=ಖತ್ತಿಯೋ–ಕ್ಷತ್ರಿಯ ಜನಾಂಗ) ಮತ್ತೊಂದು ವಿಶೇಷ ಪದ್ಧತಿಯಿದೆ. ಗಂಡನು ಹೆಂಡತಿಯನ್ನು, ಹೆಂಡತಿ ಗಂಡನನ್ನು ಆಯ್ಕೆಮಾಡಿಕೊಳ್ಳುತ್ತಾರೆ. ಗಂಡ ಸತ್ತರೆ ಹೆಂಡತಿಯರು ಚಿತೆಯಲ್ಲಿ ಬಿದ್ದು ಸಾಯುತ್ತಾರೆ. ಹೆಂಡತಿ ಕೆಲವು ವೇಳೆ ಪರಪುರುಷನನ್ನು ಪ್ರೇಮಿಸಿ ಕೈ ಹಿಡಿದ ಗಂಡನಿಗೆ ವಿಷ ಹಾಕಿ ಸಾಯಿಸಿ ಬಿಡಬಹುದೆಂಬ ಅಥವಾ ಅವನನ್ನು ಬಿಟ್ಟು ಓಡಿ ಹೋಗಬಹುದೆಂಬ ಅನುಮಾನಗಳೆ

ಇದ್ದುದರಿಂದ ಅವರಿಷ್ಟದಂತೆ ಮದುವೆ ಮಾಡಲಾಗುತ್ತಿತ್ತು. ಗಂಡ ಸತ್ತ ಮೇಲೆ ತಾನು ಸಾಯಬೇಕಾದ ಕಟ್ಟಳೆ ಇರುವುದರಿಂದ ಹೆಂಡತಿ ಗಂಡನಿಗೆ ವಿಷಪಾನ ಮಾಡಿಸುವುದಕ್ಕೆ ಹೋಗುವುದಿಲ್ಲ ಎಂಬುದನ್ನು ಉಲ್ಲೇಖಿಸುತ್ತಾನೆ.

ಸುಲೇಮಾನ್ ದಕ್ಷಿಣ ಭಾರತ ಪ್ರವಾಸವನ್ನು ಕೈಕೊಂಡ ಈತ ದಕ್ಷಿಣ ಭಾರತದಲ್ಲಿ ಈ ಪದ್ಧತಿ ಕಡ್ಡಾಯವಾಗಿಲ್ಲವೆಂದು ಹೇಳುತ್ತಾನೆ. ಆದರೂ "ರಾಜನೂ ಸತ್ತಾಗ ಕೆಲವು ವೇಳೆ ಅವನ ಹೆಂಡತಿಯರೂ ಚಿತೆಯಲ್ಲಿ ಬಿದ್ದು ಸಾಯುತ್ತಾರೆ. ಆದರೆ ಹೀಗೆ ಮಾಡಲೇಬೇಕೆಂಬ ನಿರ್ಬಂಧವಿಲ್ಲ"[೯೬] ಎಂಬುದು ಸುಲೇಮಾನ್ ಅವರ ಅಭಿಪ್ರಾಯವಾಗಿದೆ.

ಅಲ್ಬೇರೂನಿ ಕ್ರಿ.ಶ.೯೭೩-೧೦೪೮ ರಲ್ಲಿ ಭಾರತಕ್ಕೆ ಭೇಟಿ ನೀಡಿದ. ಈ ಅವಧಿಯಲ್ಲಿ 'ಸತಿಪದ್ಧತಿ' ಕಡ್ಡಾಯವಾಗಿದ್ದು, ಇಲ್ಲಿ ರಾಣಿಯರನ್ನು ಒತ್ತಾಯ ಪೂರ್ವಕವಾಗಿ ಸುಟ್ಟು ಹಾಕುತ್ತಿದ್ದರು. ಎಂಬ ವಿವರಗಳ ಕುರಿತು ಹೀಗೆ ಹೇಳುತ್ತಾನೆ. "ಹೆಂಗಸರು ವಿಧವೆಯಾದರೆ ಪುನರ್ ವಿವಾಹವಿಲ್ಲ. ವಿಧವೆಯಾಗಿಯೇ ಇರಬೇಕು. ಇಲ್ಲವಾದರೆ ಗಂಡನೊಡನೆ ಚಿತೆಯನ್ನೇರ ಬೇಕು. ಇಲ್ಲಿ ಚಿತೆಯನ್ನೇರುವುದು ವಿಧವೆಯಾಗುವುದಕ್ಕಿಂತ ಉತ್ತಮವೆಂದು ಭಾವಿಸುತ್ತಾರೆ. ಏಕೆಂದರೆ ವಿಧವೆಯಾದವಳಿಗೆ ಸಾಯುವವರೆಗೂ ಹಿಂಸೆ ತಪ್ಪಿದ್ದಲ್ಲ. ರಾಜರು ಸಾವನ್ನಪ್ಪಿದರೆ ಅವರ ಹೆಂಡತಿಯರನ್ನು ಅವರು ಇಚ್ಛೆ ಪಡಲಿ, ಪಡದೇ ಇರಲಿ ಸುಟ್ಟು ಬಿಡುತ್ತಾರೆ. ಇದರ ಉದ್ದೇಶ ವಿಧವೆಯಾದ ಹೆಂಡತಿ ಪ್ರಖ್ಯಾತನಾದ ರಾಜನಿಗೆ ಹಾಗೂ ಆತನ ಮನೆತನಕ್ಕೆ ಅವಮರ್ಯಾದೆ ಆಗುವಂತಹ ಅಪಕೃತ್ಯ ಮಾಡದಿರಲಿ ಎಂದು ನಿರ್ಧರಿಸುತ್ತಿದ್ದರು. ಆದರೆ ಮಕ್ಕಳಿರುವವರಿಗೆ, ವಯಸ್ಸಾದವರಿಗೆ ವಿನಾಯತಿ ಇತ್ತು. ಅಂಥವಳನ್ನು ನೋಡಿಕೊಳ್ಳುವ ಜವಾಬ್ದಾರಿ ಮಗನಿಗೆ ಸೇರಿತ್ತು"[೯೭] ಎಂದು ದಾಖಲಿಸುತ್ತಾನೆ.

ಫ್ರೈಯರ್‌ಒಡೋರಿಕ್ ಇವನು ಕ್ರಿ.ಶ.೧೩೨೧ರಲ್ಲಿ ಭಾರತಕ್ಕೆ ಬಂದಿದ್ದು, ಫ್ರೈಯರ್ ವಿಲಿಯಂನಿಂದ ಬರೆಯಿಸಲ್ಪಟ್ಟ ತನ್ನ ಪ್ರವಾಸ ಕಥನದಲ್ಲಿ ಸತಿಪದ್ಧತಿ ಕುರಿತು ಹೀಗೆ ವಿವರಿಸಿದ್ದಾನೆ. "ಭಾರತದಲ್ಲಿ ಸತ್ತವರನ್ನು ಸುಡುತ್ತಾರೆ. ಸತ್ತವನನ್ನು ಸುಟ್ಟು ಬದುಕಿರುವ ಅವನ ಹೆಂಡತಿಯನ್ನು ಸುಡುತ್ತಾರೆ. ಇದಕ್ಕೆ ಕೊಡುವ ಕಾರಣವೇನೆಂದರೆ ಸತ್ತವನು ಇನ್ನೊಂದು ಸಲ ಜನ್ಮವೆತ್ತಿದಾಗ ಅವನ ಹೆಂಡತಿಯೂ ಜನ್ಮವೆತ್ತಲಿ ಎಂಬ ನಂಬಿಕೆಯಿಂದ. ಸತ್ತವನ ಹೆಂಡತಿಗೆ ಮಕ್ಕಳಿದ್ದರೆ ಆಕೆ ತನ್ನಿಷ್ಟದಂತೆ ಮಾಡಬಹುದು. ಆದರೆ ಬಹಳಷ್ಟು ಹೆಂಗಸರು ಗಂಡನ ಜೊತೆಯಲ್ಲಿ ಬಿದ್ದು ಸಾಯುವುದನ್ನೇ ಅಪೇಕ್ಷಿಸುತ್ತಾರೆ. ಗಂಡನಿಗಿಂತ ಹೆಂಡತಿ ಮೊದಲು ಸತ್ತರೆ ಗಂಡನು ಚಿತೆಯಲ್ಲಿ ಬೀಳುವ ತೊಂದರೆ ತೆಗೆದುಕೊಳ್ಳಬೇಕಾಗಿಲ್ಲ. ಇನ್ನೊಬ್ಬಳನ್ನು ಮದುವೆಯಾಗಿ ಸುಖವಾಗಿರ

ಬಹುದು”[೯೮] ಎಂದು ಹೇಳುತ್ತಾನೆ. ಇವರ ಪ್ರಕಾರ ಭಾರತೀಯ ನಂಬಿಕೆಯಾದ ಏಳೇಳು ಜನ್ಮದ ಸಂಬಂಧದ ಪರಿಕಲ್ಪನೆಯನ್ನಾಧರಿಸಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿರುವುದನ್ನು ಕಾಣುತ್ತೇವೆ. ಹೀಗೆ "ಜಪಾನ್–ಜಂಪಾ ದೇಶದಲ್ಲಿಯೂ ಈ ರೀತಿಯ ಪದ್ಧತಿಯಿದೆ. ಅಲ್ಲಿಯ ರಾಜ್ಯದಲ್ಲಿಯೂ ಸತ್ತವರನ್ನು ಸುಡುವ ಮತ್ತು ಸತ್ತವರ ಹೆಂಡತಿಯರನ್ನು ಗಂಡನ ಜೊತೆ ಸುಡುವ ಪದ್ಧತಿ ಯುಂಟು”[೯೯] ಎಂದು ಹೇಳುತ್ತಾನೆ.

ಇಬ್–ನೆ–ಬತುತಾ ಉತ್ತರ ಆಫ್ರಿಕಾದಲ್ಲಿರುವ ಮೊರಾಕೋ ದೇಶದ ಟ್ಯಾಂಜಿಯರ್‌ನವನು. ಇವನು ಕ್ರಿ.ಶ.೧೩೩೩ರಿಂದ ಕ್ರಿ.ಶ. ೧೩೪೭ರ ವರೆಗೆ ಭಾರತದಲ್ಲಿದ್ದು, ಇಲ್ಲಿಯ ವಿವರಗಳನ್ನು ಫೆಜ್‌ನಲ್ಲಿಯ 'ಜುಜ್ಜೆ' ಎನ್ನುವವನಿಂದ ಬರೆಯಿಸಿದನು. ಇಬ್–ನೆ–ಬತುತಾ ಮುಲ್ತಾನನಿಂದ ದಿಲ್ಲಿಗೆ ಪ್ರಯಾಣ ಮಾಡುವಾಗ ಅಜುಧಾನ (ಪಕಪಟ್ಟನ್)ಎಂಬ ಸಣ್ಣ ಊರಿನಲ್ಲಿ ನಡೆದ ಸಹಗಮನವನ್ನು ಸ್ವತಃ ನೋಡಿ ಹೀಗೆ ದಾಖಲಿಸುತ್ತಾನೆ. "ಇಲ್ಲಿ ಹಿಂದೂ ಸ್ತ್ರೀಯೊಬ್ಬಳು ಸತ್ತ ತನ್ನ ಗಂಡನೊಡನೆ ಸಹಗಮನ ಮಾಡುವುದನ್ನು ನೋಡಿದೆವು. ಸತ್ತ ಗಂಡನ ಶವವನ್ನು ಹೆಂಡತಿ ತಬ್ಬಿಕೊಂಡು ಆಕೆ ಚಿತೆಯಲ್ಲಿ ಭಸ್ಮವಾದಳು. ಹಿಂದೂ ಸ್ತ್ರೀಯರು ಈ ರೀತಿ ಮಾಡಿರುವುದನ್ನು ಅನೇಕ ಸಲ ನೋಡಿದ್ದೇನೆ. ಚಿತೆಯನ್ನೇರುವ ಹಿಂದೂ ಸ್ತ್ರೀ ಅಲಂಕಾರ ಮಾಡಿಕೊಂಡು, ಕುದುರೆಯ ಮೇಲೆ ಹೊರಡುತ್ತಾಳೆ. ಅವಳನ್ನು ಮುಸಲ್ಮಾನರು, ಹಿಂದೂಗಳು ತಾಳಸಮೇತ ಹಿಂಬಾಲಿಸುತ್ತಾರೆ. ಹಿಂದೂಗಳ ಮುಖ್ಯಸ್ಥರಾದ ಬ್ರಾಹ್ಮಣರು ಅವಳೊಡನೆ ಇರುತ್ತಾರೆ. ಆದರೆ ಆಕೆಯನ್ನು ನೋಡ ಬೇಕಿದ್ದರೆ ಸುಲ್ತಾನನ ಅಪ್ಪಣೆ ಪಡೆಯಬೇಕು. ಸುಲ್ತಾನ ಅಪ್ಪಣೆ ಕೊಟ್ಟ ಮೇಲೆ ಮುಂದಿನ ಕೆಲಸ. ಗಂಡ ಸತ್ತ ಮೇಲೆ ಹೆಂಡತಿಯು ಚಿತೆಯಲ್ಲಿ ಬೀಳುವುದು ಬಹಳ ಮೆಚ್ಚಿನ ಕೆಲಸವೆಂದು ಸ್ತ್ರೀಯರು ಭಾವಿಸುತ್ತಾರೆ. ಆದರೆ ಬಲತ್ಕಾರವಿಲ್ಲ. ವಿಧವೆಯಾದವಳು ಈ ರೀತಿ ದಹನ ಮಾಡಿಕೊಂಡರೆ, ಆಕೆಯ ಮನೆತನದ ಹೆಸರು ಹೆಚ್ಚುತ್ತದೆಯಲ್ಲದೇ ಆಕೆ 'ಪತಿವ್ರತೆ' ಎಂಬ ಹೆಸರು ಪಡೆಯುತ್ತಾಳೆ. ಹೀಗೆ ದಹನ ಮಾಡಿಕೊಳ್ಳದವಳು ಒರಟು ಬಟ್ಟೆಗಳನ್ನು ಧರಿಸಿ ತನ್ನ ಮನೆಯವರೊಡನೆ, ನೆರೆಮನೆಯವರ ಚುಚ್ಚು ಮಾತುಗಳಿಗೊಳಗಾಗಿ ಕಷ್ಟದಲ್ಲಿ ಬಾಳಬೇಕಾಗುತ್ತದೆ”[೧೦೦] ಎಂದು ಹೇಳುತ್ತಾನೆ. ಜೊತೆಗೆ ತಾನು ನೋಡಿದ ಇನ್ನೊಂದು ಸತಿ ಘಟನೆಯನ್ನು ಹೀಗೆ ವಿವರಿಸುತ್ತಾನೆ.

ಒಮ್ಮೆ ನಾನು ಆಮ್‌ಜೌರಿ(ಅಮ್ಝೇರ ಇದು ಧಾರ್ ಬಳಿ ಇದೆ) ಎಂಬ ಪಟ್ಟಣದ ಬಳಿ ನಡೆದ ಯುದ್ಧದಲ್ಲಿ ಸತ್ತ ಮೂವರು ಯೋಧರ ಹೆಂಡತಿಯರು ದಹನ ಮಾಡಿಕೊಳ್ಳಲು ಹೊರಟಿರುವುದನ್ನು ಕಂಡೆ. ಅವರು ಅಲಂಕಾರ ಮಾಡಿಕೊಂಡು ಸುಗಂಧ ದ್ರವ್ಯಗಳನ್ನು

ಪೂಸಿಕೊಂಡು ಕುದುರೆಗಳನ್ನೇರಿದರು. ಒಂದು ಕೈಯಲ್ಲಿ ಒಂದು ತೆಂಗಿನಕಾಯಿ ಇನ್ನೊಂದು ಕೈಯಲ್ಲಿ ಕನ್ನಡಿ ಹಿಡಿದುಕೊಂಡು ತೆಂಗಿನಕಾಯಿಯನ್ನು ಕೈಯಲ್ಲಿ ಆಡಿಸುತ್ತಾ, ಕನ್ನಡಿಯಲ್ಲಿ ಮುಖವನ್ನು ನೋಡಿಕೊಳ್ಳುತ್ತಾ ಹೊರಟರು. ಸುತ್ತಮುತ್ತ ವಾದ್ಯಗಳ ಜಯ ಘೋಷವಾಗುತ್ತಿತ್ತು. ನೆಂಟರಿಷ್ಟರೂ, ಬ್ರಾಹ್ಮಣರೂ ಅವರನ್ನು ಹಿಂಬಾಲಿಸುತ್ತಿದ್ದರು. ಪ್ರತಿಯೊಬ್ಬ ಹಿಂದೂವೂ ಅವರನ್ನು ಕುರಿತು ನಮ್ಮ ಅಪ್ಪ ಅಮ್ಮನಿಗೆ ನಮಸ್ಕಾರ ತಿಳಿಸು. ನನ್ನ ಸ್ನೇಹಿತನಿಗೆ ನಮ್ಮ ಯೋಗಕ್ಷೇಮ ತಿಳಿಸು ಎಂದು ಹೇಳುತ್ತಿದ್ದರು. ಇವರು ಹೇಗೆ ದಹನಗೊಳ್ಳುತ್ತಾರೆ. ಎಂಬುದನ್ನು ನೋಡಲು ನಾನು ನನ್ನ ಜತೆಗಾರರು ಹೋದೆವು. ಮೂರು ಮೈಲು ಹೋದ ಮೇಲೆ ಯಥೇಚ್ಛವಾಗಿ ನೀರು ನೆರಳು ಇರುವ ಸ್ಥಳದಲ್ಲಿ ನಾಲ್ಕು ವೇದಿಕೆಗಳಿದ್ದುದನ್ನು ನೋಡಿದೆವು. ಪ್ರತಿಯೊಂದರ ಮೇಲೂ ಕಲ್ಲಿನ ವಿಗ್ರಹಗಳಿದ್ದವು. ವೇದಿಕೆಗಳ ಬಳಿ ಇದ್ದ ಕೊಳಗಳಲ್ಲಿ ನೀರು ತುಂಬಿತ್ತು. ಸೂರ್ಯರಶ್ಮಿಯೂ ಬೀಳದಷ್ಟು ಒತ್ತಾಗಿದ್ದ ಆ ನೆರಳಿನಲ್ಲಿ ಆ ಸ್ಥಳ ನರಕದಂತೆ ಕಾಣುತ್ತಿತ್ತು. ಅಲ್ಲಿ ಸ್ತ್ರೀಯರು ವೇದಿಕೆಗಳ ಬಳಿ ಹೋಗಿ ದೇವರೆ! ನಮ್ಮನ್ನು ಈ ನರಕದಿಂದ ಪಾರುಮಾಡು! ಎಂದು ಕೊಳದಲ್ಲಿ ಇಳಿದು ನೀರಿನಲ್ಲಿ ಮುಳುಗಿ ಸ್ನಾನ ಮಾಡಿದರು. ತಮ್ಮ ಮೈಮೇಲಿದ್ದ ಬಟ್ಟೆ ಬರೆಗಳನ್ನು ಒಡವೆಗಳನ್ನು ಕಳಚಿ ದಾನ ಮಾಡಿದರು. ಆನಂತರ ಹೊಲೆಯದೆ ಇದ್ದ ಒಂದು ಬಟ್ಟೆಯನ್ನು ಮೈಗೆ ಸುತ್ತಿಕೊಂಡರು. ವೇದಿಕೆಗಳ ಮಧ್ಯ ತೋಡಿದ್ದ ಗುಂಡಿಗೆಗಳಲ್ಲಿ ಬೆಂಕಿ ಉರಿಯುತ್ತಿತ್ತು. ಎಳ್ಳೆಣ್ಣೆಯನ್ನು ಸುರಿದು ಉರಿಯನ್ನು ಹೆಚ್ಚಿಸುತ್ತಿದ್ದರು. ಇಪ್ಪತ್ತೈದು ಜನರು ಈ ಕುಂಡಗಳ ಬಳಿ ಸಣ್ಣ ಸಣ್ಣ ಕಟ್ಟಿಗೆಗಳನ್ನು ದೊಡ್ಡ ದೊಡ್ಡ ಮರದ ತುಂಡುಗಳನ್ನು ಹಿಡಿದು ನಿಂತಿದ್ದರು. ವಾದ್ಯಘೋಷ ಸಾಗುತ್ತಿತ್ತು. ಸ್ತ್ರೀಯರಿಗಾಗಿ ಕಾಯುತ್ತಿದ್ದರು. ಸ್ತ್ರೀಯರು ಬೆಂಕಿಯನ್ನು ನೋಡಿ ಹೆದರಿಕೊಳ್ಳದಿರಲಿ, ಎಂದು ಗಂಡಸರು ಒಂದು ಪರದೆ ಹಿಡಿದು ನಿಂತಿದ್ದರು. ಸ್ತ್ರೀಯರಲ್ಲಿ ಒಬ್ಬಳು ಪರದೆಯ ಬಳಿಗೆ ಬಂದು ಅದನ್ನು ಕಿತ್ತು ಬಿಸಾಡಿ ನಗುತ್ತಾ 'ನಾನು ಬೆಂಕಿಗೆ ಹೆದರುವೆನೆಂದು ಭಾವಿಸಿದಿರಾ?' ಅದು ಬೆಂಕಿ ಎಂದು ನನಗೆ ಗೊತ್ತು ನನ್ನ ಪಾಡಿಗೆ ನನ್ನನ್ನುಬಿಡಿ' ಎಂದು ಹೇಳಿ ಆಕೆ ತನ್ನ ಕೈಗಳನ್ನು ಜೋಡಿಸಿ ಬೆಂಕಿಗೆ ವಂದಿಸಿ ಕುಂಡದೊಳಗೆ ಧುಮುಕಿದಳು. ಅದೆ ಗಳಿಗೆಯಲ್ಲಿ ತಾಳ ಮದ್ದಳೆಗಳನ್ನು ಭಾರಿಸಿದರು. ತುತ್ತೂರಿಗಳನ್ನು ಊದಿದರು. ಗಂಡಸರು ತಮ್ಮ ಕೈಯಲ್ಲಿದ್ದ ಸಣ್ಣ ಕಟ್ಟಿಗೆಗಳನ್ನು ಆನಂತರ ಅವಳು ಅಲುಗಾಡದಿರುವಂತೆ ದೊಡ್ಡ ದೊಡ್ಡ ತುಂಡುಗಳನ್ನು ಅವಳ ಮೇಲೆ ಹಾಕಿದರು. ನೆರೆದಿದ್ದ ಜನರು ಜೈಜೈಕಾರ ಹಾಕಿದರು. ಇದನ್ನು ನೋಡುತ್ತಿದ್ದ ನಾನು ಜ್ಞಾನ ತಪ್ಪಿ ಕುದುರೆಯಿಂದ ಬೀಳುವುದರಲ್ಲಿದ್ದೆ, ಅಷ್ಟರೊಳಗೆ ನನ್ನ ಜೊತೆಗಾರರು ನೀರು ತಂದು ನನ್ನ ಮುಖಕ್ಕೆ ಎರಚಿ ನನಗೆ ಪ್ರಜ್ಞೆ ಬರುವಂತೆ ಮಾಡಿದರು. ಹೀಗೆ ಇಬ್–ನೆ–ಬತುತಾ ಮಾಸ್ತಿ ಆಚರಣೆಯ ವಿವರಗಳನ್ನು, ಆಚರಣೆಯ ಹಿಂದಿರುವ ನಂಬಿಕೆಗಳನ್ನು, ವಿಧಿ–ವಿಧಾನಗಳನ್ನು ಸ್ವತಃನೋಡಿ ಕಣ್ಣಿಗೆ ಕಟ್ಟುವಂತೆ

ದಾಖಲಿಸಿದ್ದಾನೆ.

ಫೇರ್ನಾಂವ್‌ನ್ಯೂನಿಜ್ ಕ್ರಿ.ಶ.೧೩೦೦ರಲ್ಲಿ ಭಾರತಕ್ಕೆ ಬಂದನು. ಇವನು ಸತಿಪದ್ಧತಿಯ ಕುರಿತು ಹೀಗೆ ಹೇಳುತ್ತಾನೆ. "ಹೆಣ್ಣು ಮಕ್ಕಳು ಸಹಗಮನ ಮಾಡುವುದು ಇಲ್ಲಿಯ ನಡುವಳಿಕೆಯಾಗಿದೆ. ಇದನ್ನು ಗೌರವವೆಂದು ತಿಳಿಯುತ್ತಾರೆ. ಬಂಧುಗಳೆಲ್ಲ ಸತ್ತಗಂಡನ ಹಿಂದೆ ಹೋಗುವುದು ಗೌರವವೆಂದೂ, ಮುಂದಿನ ತಲೆಮಾರುಗಳಿಗೆ ಶುಭವಾಗುವುದೆಂದೂ ಹೇಳಿ ಉಪದೇಶ ಮಾಡುತ್ತಿದ್ದರು. ಸತಿಯಾಗುವವಳು ಕುದುರೆಯ ಮೇಲೇರಿ ಮೈತುಂಬ ಆಭರಣಗಳನ್ನು ಧರಿಸಿ, ಗುಲಾಬಿ ಹೂಗಳನ್ನು ಏರಿಸಿಕೊಂಡು, ಕೈಯಲ್ಲಿ ಒಂದು ಕನ್ನಡಿ ಹಿಡಿದುಕೊಂಡು ಹೊರಡುತ್ತಾಳೆ. ಹಿಂದೆ ಸಂಗೀತ ವಾದ್ಯಗಳ ಗುಂಪು ಹೊರಡುತ್ತದೆ. ಮೆರವಣಿಗೆಯಾದ ಮೇಲೆ ಗಂಡನ ಚಿತೆಯ ಹತ್ತಿರ ಬಂದು ನಿಲ್ಲುತ್ತಾಳೆ. ಸತ್ತವನ ತಾಯಿ ಮತ್ತು ಬಂಧುಗಳು ಚಿತೆಯ ಸುತ್ತ ಮೂರು ಸುತ್ತು ಸುತ್ತುತ್ತಾರೆ. ಆಗ ಸತಿಯಾದವಳು ತನ್ನ ಕೈಯಲ್ಲಿದ್ದ ಗಡಿಗೆಯನ್ನು ಚಿತೆಗೆ ಎಸೆಯುತ್ತಾಳೆ. ನಂತರ ಬೆಂಕಿ ಹಚ್ಚುತ್ತಾರೆ. ಒಬ್ಬ ಬ್ರಾಹ್ಮಣ ನಿಯಮದ ಪ್ರಕಾರ ಕೆಲವು ವಿಧಿಗಳನ್ನು ಮಾಡುತ್ತಾನೆ. ಇವಳು ತನ್ನ ಆಭರಣಗಳನ್ನು ತೆಗೆದು ತನ್ನ ಬಂಧುಗಳಿಗೆ ಗೆಳತಿಯರಿಗೆ ಕೊಡುತ್ತಾಳೆ. ನಂತರ ತನ್ನ ಒಳ್ಳೆಯ ಬಟ್ಟೆಗಳನ್ನು ಬಿಟ್ಟು ಬಣ್ಣದ ಬಟ್ಟೆಗಳನ್ನು ಹಾಕಿಕೊಳ್ಳುತ್ತಾ ಕೊಂಡಕ್ಕೆ ಮೂರು ಪ್ರದಕ್ಷಿಣೆ ಹಾಕಿ ಅಟ್ಟಣೆಗೆ ಏರುತ್ತಾಳೆ. ಇವಳ ಹಿಂದೆ ಇದ್ದ ಸ್ತ್ರೀಯರು ಅಕ್ಕಿ ಇದ್ದ ಒಂದು ಚೀಲ ಮತ್ತು ಎಲೆಗಳನ್ನು ಸುತ್ತಿರುವ ಬಟ್ಟೆಯನ್ನು ಬೆಂಕಿಯಲ್ಲಿ ಒಗೆಯುತ್ತಾರೆ. ಅವಳ ಬಾಚಣಿಗೆ, ಕನ್ನಡಿಯನ್ನು ಸಹ ಅದರಲ್ಲಿ ಒಗೆಯುತ್ತಾರೆ. ಸತಿಯಾಗುವವಳು ತಲೆಯ ಮೇಲೆ ಎಣ್ಣೆಯ ಮಡಿಕೆಯನ್ನು ಇಟ್ಟುಕೊಂಡು ಬೆಂಕಿ ಹಾರುತ್ತಾಳೆ. ಸುತ್ತ ಇದ್ದವರು ಎಣ್ಣೆ ಮರದ ಬೊಡ್ಡೆಗಳನ್ನು ಎಸೆದು ಬೇಗನೆ ಸುಟ್ಟು ಹೋಗಲು ಅನುಕೂಲ ಮಾಡುತ್ತಾರೆ. ರಾಜನಾಗಲಿ, ಸೇನಾನಿಯಾಗಲಿ ಸಾವನ್ನಪ್ಪಿದಾಗ ಅವನ ಎಲ್ಲ ಪತ್ನಿಯರೂ ಸಹಗಮನ ಮಾಡುತ್ತಾರೆ."[೧೦೧] ಇದೇ ರೀತಿ ಇನ್ನೊಂದು ಮಾಹಿತಿಯನ್ನು ಫರ್ನಾವೋ ನ್ಯೂನಿಜ್ ದಾಖಲಿಸುತ್ತಾನೆ. ತೆಲುಂಗ (ತೆಲುಗರು) ಎಂಬ ಜನಾಂಗದಲ್ಲಿ ಗಂಡ ಸತ್ತಾಗ ಹೆಂಡತಿಯನ್ನು ಜೀವಸಹಿತ ಗಂಡನೊಡನೆ ಹೂಳುತ್ತಾರೆ ಅಲ್ಲದೇ ವಿಜಯನಗರ ರಾಜ್ಯವೂ ವಿಧರ್ಮಿಗಳ (ಹಿಂದೂಗಳ) ರಾಜ್ಯವಾಗಿದ್ದು, ಸ್ತ್ರೀಯರು ತಮ್ಮ ಗಂಡಂದಿರು ಸತ್ತಾಗ ಗಂಡನೊಡನೆ ಸಹಗಮನ ಮಾಡುತ್ತಾರೆ. ಎಂದು ದಾಖಲಿಸಿದ್ದಾನೆ.

ಸರ್‌ಜಾನ್ ಮಾಂಡವಿಲ್ಲೆ–೧೩೨೨–೧೩೭೨ ಫ್ರೈಯರ್ ಒಡರಿಕ್ ಜೊತೆಗೆ ಜತೆಗಾರನಾಗಿರಬಹುದು. ಇವನ ಅಭಿಪ್ರಾಯದ ಪ್ರಕಾರ "ಇಂಡಿಯಾದ ಮುಖಾಂತರ ಹಾದು ಹೋದರೆ ಸಾಗರದವರೆಗೂ ಅನೇಕ ನಾಡುಗಳನ್ನು ನೋಡಬಹುದು. ನಂತರ ಹರ್ಮಿಸ್ ಎಂಬ ದ್ವೀಪ

ಸಿಗುತ್ತದೆ. ಇಲ್ಲಿಗೆ ವೆನೀಸ್, ಈನೋವ ಮತ್ತು ಇನ್ನೂ ಅನೇಕ ಕ್ರೈಸ್ತ ದೇಶಗಳ ವರ್ತಕರು ವ್ಯಾಪಾರಕ್ಕಾಗಿ ಬರುತ್ತಾರೆ. ಇಲ್ಲಿಂದ ಮುಂದೆ ಸಮುದ್ರ ದಾಟಿದರೆ ಲಾನಾ(ಠಾಣಾ) ದ್ವೀಪ, ಮುಂದೆ ಲೊಂಬೆ ನಾಡಿನಲ್ಲಿ ಪೋಲೋಮಿಸ್ ಎಂಬ ನಗರ (ಮಲಬಾರ್ ತೀರದ ಕ್ವಿಲಾನ್) ಸಿಗುತ್ತದೆ. ಭಾರತದಲ್ಲಿ ಸತಿಪದ್ಧತಿಯಿದ್ದು, ಗಂಡ ಸತ್ತಾಗ ಮಕ್ಕಳಿಲ್ಲದೆ ಇದ್ದರೆ, ಆತನ ಹೆಂಡತಿಯನ್ನು ಸತ್ತವನೊಡನೆ ಚಿತೆಯಲ್ಲಿ ಹಾಕಿ ಸುಡುತ್ತಾರೆ. ಹೆಂಡತಿ ಸತ್ತಾಗ ಇಷ್ಟ ಬಂದಲ್ಲಿ ಗಂಡನೂ ಆಕೆಯೊಡನೆ ಸಾಯಬಹುದು"[೧೦೨] ಎಂದು ತನ್ನ ಪ್ರವಾಸ ಕಥನದಲ್ಲಿ ದಾಖಲಿಸಿದ್ದಾನೆ.

ನಿಕೊಲೊ-ದೆ-ಕೊಂತಿ ಇವನು ಕ್ರಿ.ಶ. ೧೪೪೦ರ ಅವಧಿಯಲ್ಲಿ ಭಾರತದ ವಿಜಯನಗರ ಸಾಮ್ರಾಜ್ಯಕ್ಕೆ ಭೇಟಿ ನೀಡಿದ. ಈ ಅವಧಿಯಲ್ಲಿ ತಾನು ಕಂಡು ಅನುಭವಿಸಿದ ವಿಚಾರಗಳನ್ನು ಪೋಪರ ಕಾರ್ಯದರ್ಶಿಯಾದ ಪೊದ್ದಿಯೋ ಬ್ರಚ್ಚಿಯೋಲನಿಗೆ ಹೇಳಿದನು. ಆತ ಲ್ಯಾಟಿನ್ ಬಾಷೆಯಲ್ಲಿ ಪ್ರವಾಸ ಕಥನ ಬರೆದನು. ಈ ಪ್ರವಾಸ ಕಥನದಲ್ಲಿ ಮಾಸ್ತಿ ಆಚರಣೆಯ ವಿವರಗಳು ದಾಖಲಾಗಿದ್ದು ಅವು ಇಂತಿವೆ. "ಈ ನಗರದಲ್ಲಿ ಶಸ್ತ್ರಾಸ್ತ್ರಗಳಲ್ಲಿ ಪ್ರವೀಣರಾದ ತೊಂಬತ್ತು ಸಾವಿರ ಜನರಿದ್ದಾರೆಂದು ಅಂದಾಜು ಹಾಕಲಾಗಿದೆ. ಇಲ್ಲಿ ಗಂಡಂದಿರು ತೀರಿಹೋದರೆ, ಹೆಂಡತಿಯರು ಗಂಡಂದಿರ ಜೊತೆ ಚಿತೆಯಲ್ಲಿ ಬಿದ್ದು ಸಾವನ್ನಪ್ಪುವುದು ಇಲ್ಲಿಯ ಪದ್ಧತಿ. ಗಂಡನಿಗೆ ಅತ್ಯಂತ ಪ್ರೀತಿ ಪಾತ್ರಳಾದ ಹೆಂಡತಿಯು ಸತ್ತ ಗಂಡನನ್ನು ಆಲಂಗಿಸಿಕೊಂಡು ಚಿತೆಯಲ್ಲಿ ಭಸ್ಮವಾಗುತ್ತಾಳೆ. ಉಳಿದ ಹೆಂಡತಿಯರು ತದನಂತರ ಚಿತೆಯಲ್ಲಿ ಬೀಳುತ್ತಾರೆ."[೧೦೩] ಮಧ್ಯ ಇಂಡಿಯಾದ ಜನರು ಏಕಪತ್ನಿತ್ವ ಆಚರಣೆಯಲ್ಲಿದ್ದರೆ, ಇತರ ಭಾಗಗಳಲ್ಲಿ ಬಹುಪತ್ನಿತ್ವ ಅನುಷ್ಠಾನದಲ್ಲಿದೆ. ಮಧ್ಯ ಇಂಡಿಯಾದಲ್ಲಿ ಸತ್ತವನನ್ನು ದಹನ ಮಾಡುತ್ತಾರೆ. ಆಗ ಚಿತೆಯಲ್ಲಿ ಆತನ ಹೆಂಡತಿಯು ಬಿದ್ದು ಸಾಯುತ್ತಾಳೆ. ಹಾಗೆ ಮಾಡುವ ಮುನ್ನ ಆಕೆ ಸರ್ವಾಂಲಂಕೃತಳಾಗಿ ಸಂತೋಷದಿಂದ ಹಾಡುತ್ತಾ ಜನರೊಡಗೂಡಿ ವಾದ್ಯ ಗೋಷ್ಠಿಯ ಸಮೇತ ಹೋಗುತ್ತಾಳೆ. ಈ ಮದ್ಯ ಬಚಾಲಿ ಎಂದು ಕರೆಯಲ್ಪಡುವ ಅರ್ಚಕರು ಎತ್ತರವಾದ ಸ್ಥಳದಲ್ಲಿ ನಿಂತು ಜನನ ಮರಣಗಳ ನಶ್ವರತೆಯನ್ನು ಬೇರೆ ಪ್ರಪಂಚದಲ್ಲಿ ಅವಳಿಗೆ ಸಿಕ್ಕಬಹುದಾದ ಸುಖ ಸಂತೋಷಗಳನ್ನು ವರ್ಣಿಸುತ್ತಾನೆ. ಚಿತೆಯಲ್ಲಿ ಬೀಳುವುದಕ್ಕೆ ಮುಂಚೆ ಹೆಂಗಸು ಸ್ನಾನ ಮಾಡಿ ಬಿಳಿ ಬಟ್ಟೆ ಧರಿಸಿ, ಎತ್ತರವಾದ ಸ್ಥಳದಲ್ಲಿ ನಿಂತು ಚಿತೆಯೊಳಕ್ಕೆ ಧುಮುಕುತ್ತಾಳೆ. ಭಯಪಟ್ಟು ಚಿತೆಯಲ್ಲಿ ಬೀಳುವುದಕ್ಕೆ ಅಂಜಿದರೆ, ಸುತ್ತ ಮುತ್ತ ಇದ್ದವರು ಆಕೆಯನ್ನು ಹಿಡಿದೆತ್ತಿ ಬೆಂಕಿಯಲ್ಲಿ ಹಾಕುತ್ತಾರೆ. ಆನಂತರ ಬೂದಿಯನ್ನು ಶೇಖರಿಸಿ ಕುಂಡಗಳಲ್ಲಿಟ್ಟು ಅದರ ಮೇಲೆ ಸಮಾಧಿ ಕಟ್ಟುತ್ತಾರೆ.

ವೈದಿಕರು ಏಕಪತ್ನಿ ವ್ರತಸ್ಥರು. ಗಂಡ ಸತ್ತಾಗ ಹೆಂಡತಿಯೂ ಅವನ ಜೊತೆ ಚಿತೆಯಲ್ಲಿ ಸಾಯುತ್ತಾಳೆ. ಸತ್ತ ಗಂಡನ ಜೊತೆ ಮಲಗಿ, ಆತನ ತಲೆಯನ್ನು ತನ್ನ ತೋಳ ಮೇಲೆ ಇಟ್ಟುಕೊಂಡು, ಬೆಂಕಿ ಹತ್ತಿಸಿಕೊಂಡು ಭಸ್ಮವಾಗುತ್ತಾಳೆ. ಆಗ ಆಕೆಯ ಮುಖದಲ್ಲಿ ನೋವಿನ ಸುಳಿವೇ ಕಾಣುವುದಿಲ್ಲ. ಎಂದು ದಾಖಲಿಸುತ್ತಾನೆ.

ಪೋರ್ಚುಗೀಸನವನಾದ ದು-ಅರ್ತೆ-ಬಾರ್ಬೊಸಾ ಕ್ರಿ.ಶ.೧೫೦೧ ರಿಂದ ಕ್ರಿ.ಶ.೧೫೧೫ ರವರೆಗೆ ಭಾರತದಲ್ಲಿದ್ದು, ವಿಜಯನಗರ ರಾಜ್ಯದಲ್ಲಿ ನಡೆಯುತ್ತಿದ್ದ ಸಹಗಮನವನ್ನು ಹೀಗೆ ದಾಖಲಿಸಿದ್ದಾನೆ. "ನರಸಿಂಗನ ರಾಜ್ಯದ ಜೆಂಟೈಲರಲ್ಲಿ ಮೂರು ಪಂಗಡಗಳಿವೆ. ರಾಜಮಹಾ ರಾಜರು, ಧೂತರು ಮತ್ತು ಹೋರಟಗಾರರು ತಮಗಿಷ್ಟ ಬಂದಷ್ಟು ಹೆಂಗಸರನ್ನು ಮದುವೆ ಯಾಗಬಹುದು. ಇವರ ಆಸ್ತಿ-ಪಾಸ್ತಿ ಹಳೆಯ ನಡತೆಯಂತೆ ತಮ್ಮ ಗಂಡನೊಡನೆ ಸಹಗಮನ ಮಾಡಲೇಬೇಕು. ಇದನ್ನು 'ಪತಿಭಕ್ತಿ' ಎಂದು ಭಾವಿಸುತ್ತಾರೆ. ಸಹಗಮನ ಮಾಡುವ ಹೆಣ್ಣು ಮಗಳು ಬಡವಳಾಗಿದ್ದರೆ, ಸತ್ತ ಗಂಡನ ಅಗ್ನಿಕುಂಡದಲ್ಲಿ ಆತ್ಮ ಸಂತೋಷದಿಂದ ಚಿತೆಯಲ್ಲಿ ಬಿದ್ದು ಸಾಯುತ್ತಾಳೆ. ಶ್ರೀಮಂತ ಹೆಣ್ಣು ಮಗಳು ಚಿತೆಗೆ ಬೀಳುವ ಮುನ್ನ ನೆಂಟರಿಷ್ಟರನ್ನೆಲ್ಲಾ ಸೇರಿಸಿ, ನೃತ್ಯ, ಕುಣಿತ, ಸಂಗೀತದಲ್ಲಿ ಊಟೋಪಚಾರ ಮಾಡಿಸಿ ತನ್ನ ಹತ್ತಿರವಿದ್ದ ಆಭರಣವನ್ನೆಲ್ಲ ಧರಿಸುತ್ತಾಳೆ. ಬಿಳಿ ಕುದುರೆ ಅಥವಾ ಬೂದು ಬಣ್ಣದ ಕುದುರೆಯನ್ನೇರಿ ಇಡೀ ಊರನ್ನು ಮೆರವಣಿಗೆಯಲ್ಲಿ ಸುತ್ತಿ, ನಂತರ ಸತ್ತ ಗಂಡನ ಚಿತೆಯ ಹತ್ತಿರ ಬರುತ್ತಾರೆ. ಪಕ್ಕದಲ್ಲೆ ಮರದ ಅಟ್ಟಣೆಯನ್ನು ಕಟ್ಟಿರುತ್ತಾರೆ. ಅದರ ಮೇಲೆ ಹತ್ತಿ ಸಿದ್ಧವಾದ ಚಿತೆಯ ಬಳಿಗೆ ಹೋಗಿ ಪೂರ್ವಾಭಿಮುಖವಾಗಿ ನಿಂತು, ಮೂರು ಸಲ ನಮಸ್ಕಾರ ಮಾಡುತ್ತಾಳೆ. ತನ್ನ ಮಕ್ಕಳು, ನೆಂಟರು, ಗೆಳತಿಯರಿಗೆಲ್ಲ ಆಭರಣಗಳನ್ನು ಹಂಚಿ ಸೊಂಟದಿಂದ ಕೆಳಗಿನ ಸ್ವಲ್ಪ ಬಟ್ಟೆಯನ್ನು ಬಿಟ್ಟು ಉಳಿದೆಲ್ಲವನ್ನೂ ಕಳಚಿಕೊಟ್ಟು, ಗಂಡಸರಿಗೆ ಕುರಿತು 'ನೋಡಿ ಗಂಡನೊಡನೆ ಸಾಯುವ ಹೆಂಗಸಿಗೆ ನೀವೆಷ್ಟು ಕೃತಜ್ಞರಾಗಿರಬೇಕು' ಎಂಬುದನ್ನು ನೆನಪಿನಲ್ಲಿಡಿ ಎಂದು ಹೇಳುತ್ತಾಳೆ. ನಂತರ ಎಣ್ಣೆಯ ಮಡಕೆ ಒಂದನ್ನು ತಲೆಯ ಮೇಲೆ ಸುರಿದುಕೊಂಡು ಚಿತೆಯನ್ನು ಮೂರು ಸಲ ಪ್ರದಕ್ಷಿಣೆ ಮಾಡಿ ಪೂರ್ವಾಭಿಮುಖವಾಗಿ ನಿಂತು ದೇವರಿಗೆ ಪ್ರಾರ್ಥನೆ ಸಲ್ಲಿಸುತ್ತಾಳೆ. ಆ ಮೇಲೆ ಗಡಿಗೆಯ ಎಣ್ಣೆಯನ್ನು ಉರಿಯುವ ಚಿತೆಗೆ ಸುರಿದು ಗಡಿಗೆಯನ್ನು ಅದರೊಳಗೆ ಎಸೆದು ಚಿತೆಯೊಳಕ್ಕೆ ಧುಮುಕುತ್ತಾಳೆ. ಆಗ ಜನ ಸಮೂಹವೆಲ್ಲ ತಾವು ಹಿಡಿದಿದ್ದ ಎಣ್ಣೆ ಕಟ್ಟಿಗೆಯ ದಿಮ್ಮಿಗಳನ್ನು, ತುಂಡುಗಳನ್ನು ಬೆಂಕಿಗೆ ಹಾಕುತ್ತಾರೆ. ಆ ಅಗಾಧ ಜ್ವಾಲೆಯಲ್ಲಿ ಆಕೆ ಒಂದರಗಳಿಗೆಯಲ್ಲಿ ಸುಟ್ಟು ಭಸ್ಮವಾಗಿ ಬಿಡುತ್ತಾಳೆ. ಸತಿ ಹೋಗದೆ ಇರುವವರು ತಲೆ ಬೋಳಿಸಿಕೊಂಡು ಅ ಗೌರವಕ್ಕೆ ಪಾತ್ರರಾಗುತ್ತಾರೆ. ಈ ಪದ್ಧತಿ ಎಷ್ಟು ಗೌರವವೆನಿಸುವ

ಆಚರಣೆಯಾಗಿದೆಯೆಂದರೆ 'ಒಬ್ಬ ರಾಜ ಮರಣ ಹೊಂದಿದರೆ ಅವನ ಹಿಂದೆ ಅವನ ಅಂತಪುರದ ೪೦೦ ರಿಂದ ೫೦೦ ಜನ ಸ್ತ್ರೀಯರು ಅವನೊಡನೆ ಚಿತೆಯಲ್ಲಿ ಬೀಳುತ್ತಿದ್ದರು.

ದು-ಆರ್ತೆ-ಬಾರ್ರೋಸಾ ಸಹಗಮನದ ವಿವರಗಳ ಜೊತೆಯಲ್ಲಿಯೇ ಶವ ಹೂಳುವ ಸಂಪ್ರದಾಯವು ಅಸ್ತಿತ್ವದಲ್ಲಿದ್ದ ಸಮಾಧಿ ಸತಿಯನ್ನು ಕುರಿತು(ವೀರಶೈವರದ್ದು)ಹೀಗೆ ದಾಖಲಿಸಿದ್ದಾನೆ.[೧೦೪] 'ಸತಿಪದ್ಧತಿ' ಬ್ರಾಹ್ಮಣ, ಲಿಂಗಾಯತ, ಶೆಟ್ಟಿಯರಲ್ಲಿ ಇರಲಿಲ್ಲವೆನ್ನುತ್ತಾನೆ. ಆದರೆ ಮೂರನೆಯ ಪಂಗಡಕ್ಕೆ ಸೇರಿದವರು ಬ್ರಾಹ್ಮಣರಂತೆಯೇ ಇರುವ ಮತ್ತೊಂದು ತರದ ಜನ. ಇವರು ಹುರಿ ಮಾಡಿದ ರೇಷ್ಮೆಯ ದಾರದಿಂದ ಮೊಟ್ಟೆ ಗ್ರಾತದ ಕಲ್ಲನ್ನು (ಇಷ್ಟಲಿಂಗ) ಬಟ್ಟೆಯಲ್ಲಿ ಕಟ್ಟಿ ಕುತ್ತಿಗೆಗೆ ನೇತು ಹಾಕಿಕೊಳ್ಳುತ್ತಾರೆ. ಆ ಕಲ್ಲೇ ಇವರಿಗೆ ದೇವರಂತೆ. ಇವರಿಗೆ ಸಮಾಜದಲ್ಲಿ ಬಹಳ ಗೌರವ ಸನ್ಮಾನಗಳುಂಟು. ಇವರು ಕಟ್ಟಿಕೊಂಡ ಆ ಕಲ್ಲನ್ನು ತಬರ್ರೈನೇ (ದೇವ/ಒಡೆಯ)ಎಂದು ಕರೆಯುತ್ತಾರೆ. ಆ ಕಲ್ಲಿನ ಮೇಲಿನ ಗೌರವದಿಂದ ಇವರು ಏನು ಮಾಡಿದರೂ, ಇವರಿಗೆ ಯಾರು ತೊಂದರೆ ಮಾಡುವುದಿಲ್ಲ. ಇವರು ಮೀನು, ಮಾಂಸ, ತಿನ್ನುವುದಿಲ್ಲ. ಒಂದು ಕಡೆಯಿಂದ ಇನ್ನೊಂದು ಕಡೆಗೆ ಇವರು ಅಡ್ಡಿ ಆತಂಕಗಳಿಲ್ಲದೆ ಹೋಗಬಹುದು.ಇವರು ಏಕಪತ್ನಿ ವ್ರತಸ್ಥರು ಗಂಡ ಸತ್ತಾಗ ಹೆಂಡತಿ ಗಂಡನ ಶವದೊಡನೆ ಸಮಾಧಿಯಾಗುತ್ತಾಳೆ. ಒಂದಾಳು ಮಟ್ಟಕ್ಕಿಂತ ಹೆಚ್ಚು ಆಳವಾದ ಗುಂಡಿಯನ್ನು ತೋಡಿ ಅದರೊಳಗೆ ಆಕೆಯನ್ನು ನಿಲ್ಲಿಸಿ, ಸುತ್ತಲೂ ಮಣ್ಣು ನೂಕಿ ತುಳಿದು ದುಮ್ಮಸ್ಸು ಮಾಡಿ ತಲೆಯ ಮೇಲೆ ದೊಡ್ಡ ಕಲ್ಲನ್ನು ಹೇರಿ ಮಣ್ಣನ್ನು ಎಳೆಯುತ್ತಾರೆ. ಆಕೆ ನಿಧಾನವಾಗಿ ಸಾಯುತ್ತಾಳೆ. ವೀರಶೈವರಲ್ಲೂ ಗಂಡ ಸತ್ತ ಮೇಲೆ ಸತಿ ಹೋಗುತ್ತಿದ್ದು, ಆಕೆಯನ್ನು ಜೀವಂತ ಹೂಳುತ್ತಿದ್ದುದು ಇದರಿಂದ ಗೊತ್ತಾಗುತ್ತದೆ. ಫೇರ್ನಾಂವ್ ನೂನಿಜ್ ಸಮಾಧಿ ಸತಿಯನ್ನು ಹೀಗೆ ಉಲ್ಲೇಖಿಸಿದ್ದಾನೆ. "ತೆಲುಂಗಲ್ಲೆ (ತೆಲುಗರು)ಎಂಬ ಇನ್ನೊಂದು ರೀತಿಯ ಜನರಿದ್ದಾರೆ. ಇವರಲ್ಲಿ ಗಂಡ ಸತ್ತಾಗ ಹೆಂಡತಿಯನ್ನು ಜೀವ ಸಹಿತ ಗಂಡನೊಡನೆ ಹೂಳುತ್ತಾರೆ."[೧೦೫]

ಸೀಜರ್‌ಫ್ರೆಡರಿಕ್ ವೇನಿಸ್‌ನಿಂದ ಕ್ರಿ.ಶ.೧೫೬೭ರಲ್ಲಿ ಭಾರತಕ್ಕೆ ಬಂದ. ಏಳು ತಿಂಗಳುಗಳ ಕಾಲ ನೆಲೆಸಿ ಸತಿಪದ್ಧತಿಗೆ ಸಂಬಂಧಿಸಿದ ಘಟನಾವಳಿಗಳನ್ನು ಹೀಗೆ ದಾಖಲಿಸಿದ್ದಾನೆ.[೧೦೬] "ನಾನಿದ್ದ ಏಳು ತಿಂಗಳ ಕಾಲದಲ್ಲಿ ಜೆಂಟೈಲರು ಮಾಡುತ್ತಿದ್ದ ಅನೇಕ ವಿಚಿತ್ರ ಹಾಗೂ ಅಮಾನುಷ ಕೃತ್ಯಗಳನ್ನು ಕಂಡೆ. ಗಂಡ ಸತ್ತ ಮೇಲೆ ಹೆಂಡತಿ ಸಹಗಮನವಾಗುವುದು. ಇಲ್ಲವೆ ಹೆಂಡತಿ ಒಂದು ಅಥವಾ ಮೂರು ತಿಂಗಳ ನಂತರ ಚಿತೆಯಲ್ಲಿ ಬೀಳುವುದಕ್ಕೆ ಸಿದ್ಧಳಾಗುತ್ತಾಳೆ. ನಿರ್ದಿಷ್ಟ ದಿನ ಬಂದಾಗ ಹೊತ್ತಿಗೆ ಮುಂಚೆಯೇ ಎದ್ದು, ಕುದುರೆಯ ಮೇಲೆ ಇಲ್ಲವೆ ಆನೆಯ ಮೇಲೆ ಅಥವಾ ಎಂಟು ಜನ ಹೊತ್ತ ಪಲ್ಲಕ್ಕಿಯ ಮೇಲೆ ಕುಳಿತು ವಧುವಿನ ಹಾಗೆ

ಶೃಂಗರಿಸಿಕೊಂಡು, ಚಿತೆಯ ಸ್ಥಳಕ್ಕೆ ಹೋಗುತ್ತಿದ್ದಳು. ಈ ಶೃಂಗಾರ ಅವಳ ಅಂತಸ್ತಿಗೆ ತಕ್ಕ ಹಾಗೆ ಇರುತ್ತಿತ್ತು. ವೆನೀಸ್‌ನಲ್ಲಿ ಮದುವೆಗೆ ಹೊರಟ ಹೆಣ್ಣಿನ ಮೆರವಣಿಗೆಯಂತೆ ಇರುತ್ತಿತ್ತು. ಆಕೆಯ ಎಡಗೈಯಲ್ಲಿ ಕನ್ನಡಿ, ಬಲಗೈಯಲ್ಲಿ ಒಂದು ಬಿಲ್ಲನ್ನೂ ಹಿಡಿದಿರುತ್ತಿದ್ದಳು. ಮೆರವಣಿಗೆಯಾಗುವಾಗ ಹಾಡುತ್ತಾ ತಾನು ತನ್ನ ನಲ್ಲನೊಡನೆ ಚಿರನಿದ್ರೆ ಮಾಡಲು ಹೋಗುತ್ತಿರುವೆನೆಂದು ಹೇಳುತ್ತಾಳೆ. ಆಗ ನೆಂಟರಿಷ್ಟರೆಲ್ಲರೂ ಮೆರವಣಿಗೆಯಲ್ಲಿ ಭಾಗವಹಿಸುತ್ತಾರೆ. ಮಧ್ಯಾಹ್ನ ಒಂದು ಅಥವಾ ಎರಡು ಗಂಟೆ ಹೊತ್ತಿಗೆ ಆನೆಗೊಂದಿಯ ನದಿಯ ದಂಡೆಗೆ ಹೋಗಿ ಅಲ್ಲಿ ಕೊಂಡ ತೋಡುತ್ತಾರೆ. ಪಕ್ಕದಲ್ಲಿ ಅಟ್ಟಣಿಗೆಯನ್ನು ಮಾಡುತ್ತಾರೆ. ಕೊಂಡಕ್ಕೆ ಸೌದೆ ತುಂಬುತ್ತಾರೆ. ಅಲ್ಲೇ ಒಂದು ಹಬ್ಬದ ಜೌತಣವನ್ನು ಏರ್ಪಡಿಸಿ, ಬಂಧುಗಳ ಜೊತೆ ಕೂಡಿ ಊಟ ಮಾಡುತ್ತಾಳೆ. ಮದುವೆಯ ದಿನವೋ ಎನ್ನುವಂತೆ ಎಲ್ಲರೂ ಹಾಡುತ್ತಾ ಕುಣಿಯುತ್ತ ಸ್ವಲ್ಪಹೊತ್ತು ಕಾಲ ಕಳೆಯುತ್ತಾರೆ. ನಂತರ ಕೊಂಡಕ್ಕೆ ಬೆಂಕಿ ಇಡುವಂತೆ ಆಜ್ಞಾಪಿಸುತ್ತಾಳೆ. ನಂತರ ಗಂಡನ ಹತ್ತಿರದ ಬಂಧುವೊಬ್ಬನ ಕೈ ಹಿಡಿದು ನದಿಯ ದಂಡೆಗೆ ಹೋಗಿ, ತನ್ನ ಎಲ್ಲ ಒಡವೆ ವಸ್ತ್ರಗಳನ್ನೆಲ್ಲ ಕಳಚಿ ತನ್ನ ತಂದೆ ತಾಯಿಗಳಿಗೂ, ನೆಂಟರಿಷ್ಟರಿಗೂ ಕೊಟ್ಟು, ಒಂದು ಬಟ್ಟೆಯನ್ನು ಸುತ್ತಿಕೊಂಡು ನದಿಯಲ್ಲಿ ಸ್ನಾನ ಮಾಡಿ ೧೪ ಮೊಳ ಉದ್ದದ ಅರಿಶಿನ ಬಟ್ಟೆಯನ್ನು ಉಟ್ಟುಕೊಳ್ಳುತ್ತಾಳೆ. ಪುನಃ ಗಂಡನ ಕಡೆಯವನ ಕೈ ಹಿಡಿದುಕೊಂಡು ಚಿತೆಯ ಬಳಿಗೆ ಬರುತ್ತಾಳೆ. ಚಿತೆಯ ಬಳಿ ಇರುವ ವೇದಿಕೆಯ ಮೇಲೆ ನಿಂತು, ಮಕ್ಕಳಿಗೂ ನೆಂಟರಿಷ್ಟರಿಗೂ ಬುದ್ಧಿಮಾತು ಹೇಳುತ್ತಾಳೆ. ಕೆಲವು ವೇಳೆ ಚಿತೆಯ ಸುತ್ತ ತಟ್ಟಿ ಕಟ್ಟಿರುತ್ತಾರೆ. ಬೆಂಕಿಯ ಜ್ವಾಲೆ ಕಾಣಿಸದಿರಲೆಂದು, ಕೆಲವು ಹೆಂಗಸರು ಈ ತಟ್ಟಿಯನ್ನು ಕಿತ್ತು ಹಾಕುತ್ತಾರೆ. ತಾವು ಬೆಂಕಿಗೆ ಹೆದರುವುದಿಲ್ಲ ಎಂಬುದನ್ನು ತೋರಿಸಲು, ವಿಧವೆ ತನ್ನ ಮಕ್ಕಳು ನೆಂಟರಿಷ್ಟರಿಗೂ ಹೇಳಬೇಕಾದ್ದನ್ನೆಲ್ಲಾ ಹೇಳಿದ ಮೇಲೆ ಬೇರೊಬ್ಬ ಹೆಂಗಸು ಆಕೆಯ ತಲೆಯ ಮೇಲೆ ಒಂದು ಗಡಿಗೆ ಎಣ್ಣೆಯನ್ನು ಸುರಿಯುತ್ತಾಳೆ. ಬರಿದಾದ ಗಡಿಗೆಯನ್ನು ಬೆಂಕಿಗೆ ಬೀಸಾಡುತ್ತಾಳೆ. ಹಾಗೆ ಬೀಸಾಡಿದ ಕೂಡಲೇ ವಿಧವೆ ಚಿತೆಗೆ ಹಾರಿ ಬಿಡುತ್ತಾಳೆ. ನೆರೆದವರು ಅತ್ತು ಕರೆದು ಗೊಳೋ ಅನ್ನುತ್ತಾರೆ. ಈ ರೀತಿ ಅನೇಕ ಜನ ಚಿತೆಯಲ್ಲಿ ಬೀಳುವುದನ್ನು ನಾನು ನೋಡಿದ್ದೇನೆ.

ನನ್ನ ಬಿಡಾರ ನದಿಗೆ ಹೋಗುವ ಹೆಬ್ಬಾಗಿಲಿನ ಬಳಿಯೇ ಇತ್ತು. ದೊಡ್ಡ ಮನುಷ್ಯನೊಬ್ಬ ಸತ್ತಾಗ ಅವನ ಹೆಂಡತಿಯೂ ಅವನು ಇಟ್ಟುಕೊಂಡಿದ್ದ ದಾಸಿಯರೂ ಒಟ್ಟಿಗೆ ಅವನ ಚಿತೆಯಲ್ಲಿ ಬಿದ್ದು ಸಾಯುತ್ತಾರೆ. ಹೀಗೆ ಸಹಗಮನದ ವಿವರಗಳನ್ನು ನೀಡಿದ ಫ್ರೆಡರಿಕ್ 'ಸಮಾಧಿಸತಿ'ಯನ್ನು ಕುರಿತು ಹೀಗೆ ಹೇಳಿದ್ದಾನೆ. ಇನ್ನೊಂದು ರೀತಿಯಲ್ಲಿ ಹೆಂಗಸರು ತಮ್ಮ ಪ್ರಾಣತ್ಯಾಗ ಮಾಡುವುದನ್ನು ನಾನು ನೋಡಿದ್ದೇನೆ. ಸತ್ತ ಗಂಡನ ಶವವನ್ನು ಚಕ್ಕಲು ಬೊಕ್ಕಲಾಗಿ ಕುಳ್ಳಿರಿಸುತ್ತಾರೆ. ಅವನ

ಹೆಂಡತಿ ಬಂದು, ಅವನ ಕುತ್ತಿಗೆಯನ್ನು ತಬ್ಬಿಕೊಂಡು ಕುಳಿತುಕೊಳ್ಳುತ್ತಾಳೆ. ಗಾರೆಯವರು ಸುತ್ತಲೂ ಗೋಡೆ ಕಟ್ಟುತ್ತಾರೆ. ಇನ್ನೇನು ಗೋಡೆಯನ್ನು ಮುಚ್ಚುಬೇಕು, ಅಷ್ಟರಲ್ಲಿ ಗಂಡಸೊಬ್ಬನು ಬಂದು ಆಕೆಯ ಕುತ್ತಿಗೆಯನ್ನು ಬಾಗಿಸಿ ಆಮೇಲೆ ಗೋಡೆಯನ್ನು ಮುಚ್ಚಿ ಇಬ್ಬರನ್ನು ಸಮಾಧಿ ಮಾಡುತ್ತಾರೆ. ಹೀಗೆ ಆಕೆಯನ್ನು ಜೀವಂತವಾಗಿಯೇ ಸಮಾಧಿ ಮಾಡುತ್ತಿದ್ದುದರಿಂದ ಸಹಜವಾಗಿ ಅವಳು ಉಸಿರುಗಟ್ಟಿ ಸಾಯುತ್ತಿದ್ದಳು ಎಂದು ಹೇಳಿದ್ದಾನೆ.

ಜಾನನ್‌ಹ್ಯೂಫೆನ್‌ಫನ್‌ಲಿನ್‌ಷಾಟಿನ್ ಒಬ್ಬ ಹೆಸರಾಂತ ಡಚ್ ಭೂಗೋಳಶಾಸ್ತ್ರಜ್ಞ ಇವನು ಕ್ರಿ.ಶ.೧೫೮೩ ರಿಂದ ಕ್ರಿ.ಶ.೧೫೮೮ರ ಅವಧಿಯಲ್ಲಿ ಭಾರತದ ಪ್ರವಾಸ ಕೈಗೊಂಡಿದ್ದಾನೆ. ಇವನು 'ಐಟನೆರೇರಿಯೋ' ಎಂಬ ಪ್ರವಾಸ ಕಥನದಲ್ಲಿ ಸಹಗಮನದ ಕುರಿತು ಹೀಗೆ ದಾಖಲಿಸಿದ್ದಾನೆ "ಬ್ರಾಮೇನರು ಸತ್ತಾಗ ಅವರನ್ನು ಸುಡಲು ಚಿತೆಯನ್ನೇರ್ಪಡಿಸುತ್ತಾರೆ. ಸತ್ತವನ ಹೆಂಡತಿಯು ಚಿತೆಯಲ್ಲಿ ಬಿದ್ದು, ಗಂಡನೊಡನೆ ಭಸ್ಮವಾಗುತ್ತಾಳೆ. ಚಿತೆಯಲ್ಲಿ ಬೀಳುವ ಮುನ್ನ ಮೆರವಣಿಗೆಯಲ್ಲಿ ಹೊರಟು, ತನ್ನ ಒಡವೆ ವಸ್ತುಗಳನ್ನೆಲ್ಲಾ ಕಳಚಿ ದಾನ ಮಾಡಿ, ಆಮೇಲೆ ನಗು ಮುಖದಿಂದ ಚಿತೆಯಲ್ಲಿ ಧುಮುಕುತ್ತಾಳೆ. ಯಾರಾದರೂ ಸಹಗಮನ ಮಾಡಲು ಹಿಂಜರಿದ ಪಕ್ಷದಲ್ಲಿ, ಆಕೆಯ ತಲೆ ಬೋಳಿಸುತ್ತಾರೆ. ಅಂಥವಳು ಒಡವೆಗಳನ್ನು ಹಾಕಿಕೊಳ್ಳದೆ ಸಮಾಜದ ಹಿಯ್ಯಾಳಿಸುವಿಕೆಯಲ್ಲಿ ಕಾಲ ನೂಕಬೇಕು."[೧೦೭] ಎಂಬುದನ್ನು ದಾಖಲಿಸಿದ್ದಾನೆ.

ಗಾಸ್ಪಾರೊಬಾಲ್ಬಿ ವೆನೀಸ್ ನಗರದವನಾದ ಈತ ಕ್ರಿ.ಶ.೧೫೮೩ ರಿಂದ ಕ್ರಿ.ಶ.೧೫೮೭ ರವರೆಗೆ ಭಾರತದಲ್ಲಿ ಸಂಚರಿಸಿದ್ದು, ಸಹಗಮನವನ್ನು ಹೀಗೆ ದಾಖಲಿಸುತ್ತಾನೆ "ನಾನು ಕಂಡ ಅಚ್ಚರಿಯ ವಿಷಯವೊಂದನ್ನು ಹೇಳುತ್ತೇನೆ. ನಾನು ಭೂಮಿಯ ಮೇಲೆ ಕಾಲಿಟ್ಟೆನೋ ಇಲ್ಲವೋ ಎನಿಸಿತು. ಅಲ್ಲಿ ಒಂದು ಗುಂಡಿಯ ತುಂಬ ನಿಗಿನಿಗಿ ಕಾಯುವ ಬೆಂಕಿಯ ಕೊಂಡ ಇದ್ದುದನ್ನು ಕಂಡೆ. ಒಬ್ಬ ಲಕ್ಷಣವಾದ ಹೆಂಗಸನ್ನು ಆಕೆಯ ಕಡೆಯುವರು ಒಂದು ವಾಹನದಲ್ಲಿ ಕರೆ ತಂದರು. ಅವಳ ಜೊತೆ ಇನ್ನೂ ಅನೇಕ ಜನ ಹೆಂಗಸರಿದ್ದರು. ಆ ಹೆಂಗಸಿನ ಎಡಗೈಯಲ್ಲಿ ಕನ್ನಡಿಯೂ ಬಲಗೈಯಲ್ಲಿ ನಿಂಬೆ ಹಣ್ಣು ಇದ್ದವು. ನಿಂಬೆಹಣ್ಣನ್ನು ಕೈಯಲ್ಲಿ ಆಡಿಸುತ್ತಾ ಆಕೆ ಕೊಂಡದ ಬಳಿಗೆ ಬಂದಳು. ಬಹಳ ಹೊತ್ತು ಹಾಡಿದಳು ಕುಣಿದಳು. ತೊಟ್ಟ ಉಡುಗೆ ತೊಡಗೆಗಳನ್ನು, ಒಡವೆಗಳನ್ನು ಬಿಚ್ಚಿ ತನಗೆ ಮೆಚ್ಚುಗೆಯಾದ ಹೆಂಗಸರಿಗೆ ಕೊಟ್ಟಳು. ಹೀಗೆ ಮಾಡಿ ಒಂದು ಬಟ್ಟೆಯನ್ನು ಮೈಗೆ ಸುತ್ತಿಕೊಂಡು ಕೊಂಡದೊಳಕ್ಕೆ ಧುಮುಕಿ ಹೊಟ್ಟೆ ಮೇಲಾಗಿ ನಿದ್ದೆ ಮಾಡುವಂತೆ ಮಲಗಿದಳು. ನೆರೆದ ನೆಂಟರಿಷ್ಟರು ಗಂಧದ ಮರ ಮುಂತಾದ ಸುಗಂಧಯುಕ್ತ ಸೌದೆಗಳನ್ನು ಎಸೆದರು. ಈ ರೀತಿ ಚಿತೆಯನ್ನೇರುವುದು ಸತ್ತ ಗಂಡನ ಮೇಲಿನ ಪ್ರೇಮ ಅಮರವಾದುದೆಂದು ತೋರಿಸಲು ಎಂದರು. ಹೀಗೆ ರಾಜನಾಗಲಿ ಅಥವಾ ಆಸ್ಥಾನದ

ಅಧಿಕಾರಿಯಾಗಲಿ ಸತ್ತರೆ ಅವನ ಹೆಂಡತಿಯರು ದಾಸಿಯರು ಅವನ ಜೊತೆಗೆ ಕೆಂಡಕೊಂಡವಾಗುತ್ತಾರೆ."[೧೦೮] ಎಂದು ದಾಖಲಿಸಿದ್ದಾನೆ.

ನಿಕೊಲಸ್ ವಿಥಿಂಗ್ಟನ್ ಕ್ರಿ.ಶ.೧೬೧೨ರಲ್ಲಿ ಕ್ಯಾಪ್ಟನ್ ಥಾಮಸ್ ಬೆಸ್ಟ್ನ ಜೊತೆಗೆ ಭಾರತಕ್ಕೆ ಬಂದನು. 'ಸತಿಪದ್ಧತಿ' ಕುರಿತು ಡಿಯೋಡರಸ್ ಸಿಕ್ಯುಲಸ್‌ನ ಅಭಿಪ್ರಾಯದಂತೆ ತಾನು ತನ್ನ ಅಭಿಪ್ರಾಯ ಮಂಡಿಸಿದ. ಕೆಲವು ಪತ್ನಿಯರು ತಮ್ಮ ಪತಿಯರನ್ನು ಪ್ರಿಯಕರನ ಕಾರಣಕ್ಕಾಗಿ, ವಿಷವನ್ನು ಕೊಟ್ಟು ಕೊಂದು ಹಾಕುತ್ತಿದ್ದರು. ಇದನ್ನು ಗಮನಿಸಿ ಗಂಡ ಸತ್ತಾಗ ಅವನ ಜೊತೆಗೆ ಪತ್ನಿಯರು ಸಹಗಮನ ಮಾಡಬೇಕೆಂಬ ಆಜ್ಞೆಯೊಂದು ಜಾರಿಗೆ ಬಂತು. ಹೆಂಡತಿಯರು ಎಷ್ಟೇ ಜನರಿದ್ದರೂ ಕೂಡ ಅವರೆಲ್ಲರೂ ಪತಿಯ ಜೊತೆಗೆ ಬೆಂಕಿಗೆ ಹಾರಬೇಕೆಂದು ನಿಯಮವಾಯಿತು.

ಸಹಗಮನದ ಕುರಿತು ವಿಥಿಂಗ್ಟನ್ ಹೀಗೆ ವಿವರಿಸುತ್ತಾನೆ. "ಮೊದಲು ವಿಧವೆ ತನ್ನ ಗಂಡನ ಸಾವಿನ ಬಗ್ಗೆ ದುಃಖಿಸುತ್ತಾಳೆ. ಆದರೆ ಪುನಃ ಅವನ ಸಂಗಡ ಹೋಗಿ ಜೀವಿಸುವೆನೆಂಬ ನಂಬಿಕೆಯಿಂದ ಸಂತೋಷ ಹೊಂದಿ, ತನ್ನ ಗೆಳತಿಯರನ್ನು ಅಪ್ಪಿಕೊಂಡು, ಸಂತೋಷದಿಂದ ಕೊಂಡದಲ್ಲಿ ಒಟ್ಟಿದ ಕಟ್ಟಿಗೆಯ ರಾಶಿಯ ಮೇಲೆ ಹೋಗಿ ಕುಳಿತು ಕೊಳ್ಳುತ್ತಾಳೆ. ತನ್ನ ತೊಡೆಯ ಮೇಲೆ ತನ್ನ ಗಂಡನ ತಲೆಯನ್ನು ಇಟ್ಟುಕೊಳ್ಳುತ್ತಾಳೆ. ನಂತರ ಕಟ್ಟಿಗೆಗೆ ಬೆಂಕಿ ಹಚ್ಚುತ್ತಾರೆ. ಅವಳ ಗೆಳತಿಯರು ಎಣ್ಣೆ ಸುವಾಸನೆಯ ವಸ್ತುಗಳು ಮುಂತಾದವುಗಳನ್ನು ಚಿತೆಯ ಮೇಲೆ ಎಸೆಯುತ್ತಾರೆ. ಅವಳು ಬೆಂಕಿಯನ್ನು ಅತ್ಯಂತ ಸಹನೆ ಮತ್ತು ಕಷ್ಟದಿಂದ ಸಹಿಸಿಕೊಳ್ಳುತ್ತಾಳೆ. ಅವಳನ್ನು ಕಟ್ಟಿರುವುದಿಲ್ಲ. ಆದರೆ ಅದನ್ನು ಅವಳೆ ಒಪ್ಪಿಕೊಂಡಿರುತ್ತಾಳೆ. ವಿಥಿಂಗ್ಟನ್‌ನ ಕೆಲವು ಮಾತುಗಳು ಸತಿಯ ಬಗ್ಗೆ ಇನ್ನೂ ಹೊಸ ಸಂಗತಿಗಳನ್ನು ತಿಳಿಸುತ್ತವೆ. ಸಾಯುವ ಸಮಯದಲ್ಲಿ ಗಂಡ ಸಹಗಮನ ಮಾಡಬೇಡವೆಂದು ಹೇಳಿದ್ದರೂ, ಕೂಡ ಅವರ ಮನೆಯವರು ಬಲವಂತವಾಗಿ ಬೆಂಕಿಯಲ್ಲಿ ಹೋಗುವಂತೆ ಹೇಳುತ್ತಾರೆ. ಅವಳ ತಂದೆ–ತಾಯಿಯರೆ ಕೈ ಕಾಲುಗಳನ್ನು ಕಟ್ಟಿ ಬೆಂಕಿಯಲ್ಲಿ ಎಸೆದು ಬಿಡುತ್ತಾರೆ."[೧೦೯] ಎಂದು ದಾಖಲಿಸಿದ್ದಾನೆ.

ಮಾನುಯೆಲ್‌ಬರಾಡಾಸ್ ಈತ ಕೊಚಿನ್‌ನಿಂದ ಬರೆದ ಪತ್ರದಲ್ಲಿ, ವಿಜಯನಗರದ ಒಂದನೆಯ ವೆಂಕಟಪತಿರಾಯ ಕ್ರಿ.ಶ.೧೬೧೪ರಲ್ಲಿ ಚಂದ್ರಗಿರಿಯಲ್ಲಿ ಸಂಭವಿಸಿದ ಸಹಗಮನದ ಘಟನಾವಳಿಗಳನ್ನು ದಾಖಲಿಸಿದ್ದಾನೆ. ವೆಂಕಟಪತಿರಾಯ ಮರಣ ಹೊಂದಿದಾಗ ಅವರ ರಾಣಿಯರು ಸಹಗಮನ ಮಾಡಿದುದನ್ನು ಬರಾಡಾಸ್ ಹೀಗೆ ದಾಖಲಿಸಿದ್ದಾನೆ.[೧೧೦] ಮೂರು ದಿನಗಳಾಗಿ ರಾಜನ ಕಾಲವಾಗಿರುತ್ತದೆ. ಆಗ ಅವನ ವಯಸ್ಸು ೬೭ ವರ್ಷ ಗಂಧ, ಪರಿಮಳಯುಕ್ತ,

ದ್ರವ್ಯಗಳನ್ನು ಹಾಕಿ ಶವಸಂಸ್ಕಾರ ಮಾಡಿದರು. ಅವನನ್ನು ಅನುಸರಿಸಿ ಅವನ ಮೂವರು ಜನ ರಾಣಿಯರು ಚಿತಾಗ್ನಿಯನ್ನೇರಿದರು. ಅವರಲ್ಲಿ ಒಬ್ಬಳಿಗೆ ರಾಜನಷ್ಟೇ ವಯಸ್ಸಾಗಿತ್ತು. ಇಬ್ಬರಿಗೆ ೩೭ ವರ್ಷಗಳು. ಅವರು ಚಿತೆಯನ್ನೇರುವಾಗ ತೋರಿದ ಧೈರ್ಯ ಮತ್ತು ತಾಳ್ಮೆ ಅಸಾಧಾರಣ ವಾಗಿತ್ತು. ಬೆಲೆಬಾಳುವ ಆಭರಣಗಳನ್ನು ವಸ್ತ್ರಗಳನ್ನು ಧರಿಸಿಕೊಂಡು, ಚಿತಾಗ್ನಿಯ ಬಳಿಗೆ ಬಂದು ಅವರು ತಮ್ಮ ಒಡವೆ ವಸ್ತ್ರಗಳನ್ನು ಹತ್ತಿರದ ಸಂಬಂಧಿಗಳಿಗೂ, ಬ್ರಾಹ್ಮಣರಿಗೂ ದಾನ ಮಾಡಿದರು. ಕೆಲವು ವಸ್ತುಗಳನ್ನು ಬಡವರಿಗೆ ದಾನ ಮಾಡಿದರು. ಆಮೇಲೆ ಎಲ್ಲರನ್ನೂ ಬೀಳ್ಕೊಂಡು, ಎತ್ತರವಾದ ಸ್ಥಳವನ್ನೇರಿ ಚಿತಾಗ್ನಿಯ ಮಧ್ಯಕ್ಕೆ ಧುಮುಕಿದರು. ಬೆಂಕಿ ಧಗಧಗಿಸುತ್ತಿತ್ತು. ಹೀಗೆ ಅವರು ಕಾಲ ನಿರ್ಣಯದೊಂದಿಗೆ ಐಕ್ಯವಾದರು. ಎಂದು ತಿಳಿದುಬರುತ್ತದೆ.

ಪೀಟರ್‌ಮಂಡಿ ಇಂಗ್ಲೆಂಡಿನ ಪ್ರವಾಸಿಗಳಲ್ಲಿ ಅತ್ಯಂತ ಹೆಚ್ಚು ಕಾಲ ಪ್ರವಾಸ ಮಾಡಿದವರಲ್ಲಿ ಒಬ್ಬನೆಂದು ಹೆಸರಾಗಿದ್ದಾನೆ. ಈತ ಕ್ರಿ.ಶ.೧೬೨೮ರಲ್ಲಿ ಭಾರತವನ್ನು ಸಂಚರಿಸಿ 'ಸತಿಪದ್ಧತಿ'ಯ ಕುರಿತು ತನ್ನ ಪ್ರವಾಸ ದಿನಚರಿಯಲ್ಲಿ ಈ ರೀತಿ ದಾಖಲಿಸಿದ್ದಾನೆ "ನಾನು ಸೂರತ್ತಿನಲ್ಲಿದ್ದಾಗ ಬನಿಯ ಹೆಂಗಸೊಬ್ಬಳು ಗಂಡನ ಚಿತೆಯೇರಿದ್ದನ್ನು ಕಂಡೆ. ಆ ಅವಧಿಯಲ್ಲಿ ಹೆಂಡತಿ ಸಹಗಮನ ಮಾಡಿದ ರೀತಿ ಹೀಗಿತ್ತು. ಸತ್ತ ಗಂಡನ ಶವವನ್ನು ತಪತಿ ನದಿಯ ದಡದಲ್ಲಿರುವ ಪಲ್ಪರ್‍ರಿ(ಪುಲ್ಪಾರ) ಎಂಬಲ್ಲಿಗೆ ಕೊಂಡೊಯ್ದು, ಅಲ್ಲಿ ಅದನ್ನು ತೊಳೆದರು. ಆಗ ಸತ್ತವನ ಹೆಂಡತಿಯೂ ನೀರಿನಲ್ಲಿ ನಿಂತು ಸ್ನಾನ ಮಾಡಿದಳು. ಒಂದು ಕಡೆ ಶವದ ದಹನಕ್ಕಾಗಿ ಚಿತೆ ಸಿದ್ಧವಾಗುತ್ತಿತ್ತು. ಸೊಪ್ಪು ಸೌದೆಗಳನ್ನು ಒಟ್ಟಿ ಅದರ ಮೇಲೆ ಸಗಣಿಯ ಬೆರಣಿಗಳನ್ನು ಜೋಡಿಸಿದರು. (ಬೆರಣಿ ಈ ದೇಶದಲ್ಲಿ ಬಹಳ ಹೆಚ್ಚಾಗಿ ಉಪಯೋಗಿಸಲ್ಪಡುವ ಸೌದೆ) ಆಗ ಹೆಂಡತಿ ನದಿಯಿಂದ ಸ್ನಾನ ಮಾಡಿಕೊಂಡು ಬ್ರಾಹ್ಮಣರ ಸಮೇತ ಬಂದು, ಚಿತೆಯನ್ನು ಮೂರು ಬಾರಿ ಪ್ರದಕ್ಷಿಣೆ ಮಾಡಿದಳು. ನೆಂಟರಿಷ್ಟರಿಂದ ಬೀಳ್ಕೊಂಡು, ಸಂತಸದಿಂದ ಸೌದೆಯನ್ನೇರಿ ಕುಳಿತು ಸತ್ತ ಗಂಡನ ತಲೆಯನ್ನು ತನ್ನ ತೊಡೆಯ ಮೇಲಿರಿಸಿಕೊಂಡಳು. ಹೀಗೆ ತನ್ನ ಕೈಯಿಂದಲೇ ಚಿತೆಯ ಗುಡ್ಡೆಗೆ ಬೆಂಕಿ ತೋರಿಸಿದಳು. ಭುಗಿಲೆಂದು ಬೆಂಕಿ ಹತ್ತಿಕೊಂಡಿತು. ಸುತ್ತ ನಿಂತವರು 'ಉಫೇ ಉಫೇ' ಎಂದರು. ಆಗ ವಾದ್ಯಗಳು ಮೊಳಗಿದವು"[೧೧೧] ಎಂದು ತಿಳಿಸಿದ್ದಾನೆ.

ಫ್ರಾನ್ಸಿಸ್ಕೋ ಪೆಲ್ಸಾರ್ಟ ಕ್ರಿ.ಶ. ೬೧೮ ರಲ್ಲಿ ಮೊಘಲ್ ದೊರೆ ಜಹಾಂಗೀರನ ಆಳ್ವಿಕೆಯ ಕಾಲದಲ್ಲಿ ಭಾರತದುದ್ದಕ್ಕೂ ಪ್ರವಾಸ ಮಾಡಿ ಆಗ್ರಾದಲ್ಲಿ ನಡೆದ ಸಹಗಮನವನ್ನು ಹೀಗೆ ದಾಖಲಿಸಿದ್ದಾನೆ. "ನಮ್ಮ ಮನೆಯ ಬಳಿಯಿದ್ದ ಹೆಂಗಸೊಬ್ಬಳು ತನ್ನ ಗಂಡ ಸತ್ತಾಗ ತಾನು ಸತಿ ಆಗುವೆನೆಂದು ಹೇಳಿ, ನೆರೆ ಹೊರೆಯವರಿಗೆ ತಿಳಿಸಿದಳು. ಆಗ ಆಕೆ ಕೇವಲ ೧೮ ವರ್ಷದ ಸುಂದರ ಯುವತಿ ಇದನ್ನು ಅರಿತ ಆಗ್ರಾದ ರಾಜ್ಯಪಾಲ ಆಕೆಯ ಸಹಗಮನ

ತಪ್ಪಿಸಲು ಬದುಕಿರುವವರೆಗೂ ವರ್ಷಕ್ಕೆ ೫೦೦ ರೂಪಾಯಿ ಜೀವನಾಂಶ ಕೊಡುವುದಾಗಿ ತಿಳಿಸಿದ. ಆದರೆ ಇವೆಲ್ಲ ಅವಳ ನಿರ್ಧಾರವನ್ನು ಹಿಂದೆಗೆಯುವಂತೆ ಮಾಡಲಿಲ್ಲ. ತಾನು ಬಡತನದಿಂದ ಸಾಯುತ್ತಿಲ್ಲ, ತನ್ನ ಗಂಡನ ಮೇಲಿನ ಪ್ರೀತಿಯಿಂದ ಸಹಗಮನ ಹೊಂದುತ್ತಿದ್ದೇನೆ. ನನಗೆ ರಾಜನ ಭಂಡಾರವನ್ನೇ ಕೊಟ್ಟರೂ, ತಾನು ಮಾಡಿದ ನಿರ್ಧಾರವನ್ನು ಬದಲಿಸಲಾರೆ ಎಂದು ನದಿಯಲ್ಲಿ ಸ್ನಾನ ಮಾಡಿ ಬಂದಳು. ತನ್ನ ಕೈಯಿಂದಲೇ ಬೆಂಕಿ ಹತ್ತಿಸಿ ಕೊಂಡಳು. ಆಗ ಸೇರಿದ ಜನ ಸಮೂಹ 'ರಾಮರಾಮ' ಎಂದು ಕೂಗಿದರು. ಸುಟ್ಟು ಬೂದಿಯಾದ ಮೇಲೆ ಎಲ್ಲರೂ ಒಂದಿಷ್ಟು ಬೂದಿಯನ್ನು ತೆಗೆದಿಟ್ಟುಕೊಂಡು, ಪ್ರಸಾದವಾಗಿ ಆತ್ಮ ಸಂತೋಷದಿಂದ ಹೊರಟರು. ಇದೆಲ್ಲವನ್ನು ನೋಡಿದಾಗ ನಮ್ಮ ದೇಶದ ಹೆಂಗಸರು ತಮ್ಮ ಗಂಡಂದಿರಿಗೆ ತೋರಿಸುವ ಪ್ರೇಮದಷ್ಟೇ ಪವಿತ್ರವಾದದು, ಈ ಹೆಂಗಸಿನ ಪ್ರೇಮ ಎಂದು ನನಗನ್ನಿಸಿತು."[೧೧೨] ಎಂದು ತನ್ನ ಪ್ರವಾಸ ಗ್ರಂಥದಲ್ಲಿ ದಾಖಲಿಸಿದ್ದಾನೆ.

ಪಿಯತ್ರೊ ದೆಲ್ಲಾವಲ್ಲೆ ಈತ ರೋಮ್ ದೇಶದ ಪ್ರಜೆ. ಕ್ರಿ.ಶ.೧೬೨೩ರ ಫೆಬ್ರುವರಿ ೧೦ ರಿಂದ ಕ್ರಿ.ಶ.೧೬೨೪ರ ನವೆಂಬರ ರವರೆಗೆ ಭಾರತದುದ್ದಕ್ಕೂ ಪ್ರವಾಸ ಮಾಡಿದ್ದಾನೆ. ಇವನು ಕರ್ನಾಟಕದ ಇಕ್ಕೇರಿಯಲ್ಲಿ ನಡೆದ ಸಹಗಮನವನ್ನು ಇಟಲಿ ಭಾಷೆಯಲ್ಲಿ ಪ್ರಕಟವಾದ ತನ್ನ ಪ್ರವಾಸ ಕಥನದಲ್ಲಿ ಹೀಗೆ ದಾಖಲಿಸಿದ್ದಾನೆ. "ಇಕ್ಕೇರಿ ನಗರದಲ್ಲಿ ಗಂಡ ಸತ್ತ ಹೆಂಗಸೊಬ್ಬಳು ಬೆಂಕಿಯಲ್ಲಿ ಬೀಳುವ ಸಿದ್ಧತೆ ಮಾಡಿಕೊಳ್ಳುತ್ತಿರುವುದನ್ನು ಕಂಡೆವು. ಇಂಡಿಯಾದ ಅನೇಕ ಹೆಂಗಸರು ಈ ಪದ್ಧತಿ ಆಚರಿಸುತ್ತಾರೆ. ಆಕೆ ಕುದುರೆಯ ಮೇಲೆ ಕುಳಿತಿದ್ದಳು ಆದರೆ ಮುಖ ಮುಚ್ಚಿಕೊಂಡಿರಲಿಲ್ಲ. ಅವಳು ಒಂದು ಕೈಯಲ್ಲಿ ನಿಂಬೆ ಹಣ್ಣು, ಇನ್ನೊಂದು ಕೈಯಲ್ಲಿ ಕನ್ನಡಿ ಹಿಡಿದಿದ್ದಳು, ಅವು ಏತಕ್ಕೆ ಎಂದು ನನಗೆ ಗೊತ್ತಾಗಲಿಲ್ಲ. ಆಕೆ ಗೊಳೋ ಎಂದು ಅಳುತ್ತಾ ಕನ್ನಡಿಯಲ್ಲಿ ನೋಡುತ್ತಿದ್ದಳು. ಇನ್ನೂ ಏನೇನೋ ಹಾಡು, ಮಾತು, ನಡೆಯುತ್ತಿತ್ತು ಆದರೆ ಅವು ನನಗೆ ಗೊತ್ತಾಗಲಿಲ್ಲ. ಈ ಪ್ರಪಂಚವನ್ನು ಬೀಳ್ಕೊಡುವ ಒಂದು ವಿಧದ ಮಾತು ಅವು ಎಂದು ಜನ ಹೇಳಿದರು. ಆಕೆಯನ್ನು ಹಿಂಬಾಲಿಸಿ ಅನೇಕ ಜನ ಹೆಂಗಸರೂ ಗಂಡಸರೂ ನೆಡೆದುಕೊಂಡು ಹೋಗುತ್ತಿದ್ದರು. ಆಕೆಯ ಮೇಲೆ ದೊಡ್ಡದೊಂದು ಛತ್ರಿ ಹಿಡಿದಿದ್ದರು. ಛತ್ರಿ ಹಿಡಿಸಿಕೊಳ್ಳುವುದು ಇಂಡಿಯಾದಲ್ಲಿ ದೊಡ್ಡ ಮನಷ್ಯರ ಲಕ್ಷಣ. ಆಕೆಯ ಮುಂದೆ ವಾದ್ಯಗಳನ್ನು ಬಾರಿಸುತ್ತಿದ್ದರು. ಆ ವಾದ್ಯದ ಗತ್ತಿಗೆ ತಕ್ಕಂತೆ ಹೆಂಗಸರು ದನಿಕೊಟ್ಟು ದುಃಖದ ಹಾಡು ಹಾಡುತ್ತಿದ್ದರು. ಆದರೆ ಆಕೆಯ ಧ್ವನಿಯಲ್ಲಿ ಉದ್ವೇಗವಿರಲಿಲ್ಲ. ಶಾಂತಚಿತ್ತಳಾಗಿ ಕಣ್ಣಲ್ಲಿ ನೀರಿಲ್ಲದೆ ತನ್ನ ಸ್ಥಿತಿಗಿಂತ ಹೆಚ್ಚಾಗಿ ಆಕೆ ತನ್ನ ಸತ್ತ ಗಂಡನ ಕುರಿತು ಯೋಚಿಸುತ್ತಿರುವಂತೆ ಕಂಡಳು."[೧೧೩]

ನವೆಂಬರ ೧೬ನೇ ತಾರೀಕು ಬೆಂಕಿಯಲ್ಲಿ ಬಿದ್ದು ಸಾಯುವಳೆಂದು ಹೇಳಿದ ಹೆಂಗಸನ್ನು ಹೋಗಿ ನೋಡಿದೆ. ಆಕೆ ಅಂಗಳದಲ್ಲಿ ಕುಳಿತಿದ್ದಳು. ಜನರು ವಾದ್ಯಗಳನ್ನು ಬಾರಿಸುತ್ತಿದ್ದರು. ಅಪ್ಪಟ ಬಿಳಿಬಟ್ಟೆ ತೊಟ್ಟಿದ್ದಳು. ಚಿನ್ನದ ಆಭರಣಗಳನ್ನು ಹಾಕಿಕೊಂಡಿದ್ದಳು. ತಲೆಯ ತುಂಬ ಹೂ ಮುಡಿದಿದ್ದಳು. ನೋಡಲು ಅವು ಕಿರಣಗಳಂತೆ ಕಾಣುತ್ತಿದ್ದವು. ಒಟ್ಟಾರೆ ಆಕೆ ಮದುವೆಯ ಹೆಣ್ಣಿನಂತೆ ಅಲಂಕೃತಗೊಂಡಿದ್ದಳು. ಕೈಯಲ್ಲಿ ನಿಂಬೆಹಣ್ಣು ಹಿಡಿದ ಆಕೆ ಮದುವೆಯ ಹೆಣ್ಣು ಎಷ್ಟು ಸಂತೋಷದಲ್ಲಿರಬಹುದೋ, ಅಷ್ಟು ಸಂತಸದಿಂದಿದ್ದಳು. ಅಲ್ಲದೆ ಗೆಳತಿಯರೊಂದಿಗೆ ನಗುತ್ತ ಸರಸ ಸಲ್ಲಾಪದಲ್ಲಿ ತೊಡಗಿದ್ದಳು. ಇದೇ ವೇಳೆ ನನ್ನನ್ನು ನೋಡಿ ಅಲ್ಲಿರುವವರೆಲ್ಲರೂ ನಾನೊಬ್ಬ ಪರದೇಶಿ ಎಂದು ನನ್ನ ಬಳಿ ಬಂದು ಕೆಲವರು ಮಾತನಾಡಿದರು. ನಾನು ನನ್ನ ದ್ವಿಭಾಷಿಯ ಮೂಲಕ ಅವರಿಗೆ 'ನಾನೊಬ್ಬ ಪರದೇಶಿ. ನನ್ನ ದೇಶ ಇಲ್ಲಿಂದ ಬಹಳ ದೂರ ಇಂಡಿಯಾದಲ್ಲಿ ಗಂಡ ಸತ್ತಾಗ ಹೆಂಡತಿಯರು ಸತಿಯನ್ನು ಆಚರಿಸುತ್ತಾರೆಂದು ಕೇಳಿದ್ದೆ, ಆದರೆ ಅದನ್ನು ನಾನು ಈಗ ಕಣ್ಣಾರೆ ನೋಡಿದೆ. ಎಂದು ನನ್ನ ದೇಶದವರಿಗೆ ಹೇಳುತ್ತೇನೆ' ಎಂದೆ. ಇದನ್ನು ಕೇಳಿ ಅವರಿಗೆ ಬಹಳ ಸಂತೋಷವಾಯಿತು. ಸತಿಯಾಗಲು ಸಿದ್ಧಳಾಗಿದ್ದ ಆಕೆಯೇ ಎದ್ದು ಬಂದು ನನ್ನೊಡನೆ ಮಾತನಾಡಿದಳು. ಬಹಳ ಹೊತ್ತು ನಾವಿಬ್ಬರೂ ಮಾತನಾಡಿದೆವು. ಆಕೆ ತನ್ನ ಹೆಸರು ಗಿಯವಮ್ಮ, ಗಿರಿಜಮ್ಮ ತಾನು ತೆರ್ಲಿಂಗಾ ಜಾತಿಗೆ ಸೇರಿದ ವಳೆಂದು, ಗಂಡ ದೋಣಿ ಬಾರಿಸುವ ಕೆಲಸ ಮಾಡುತ್ತಿದ್ದನೆಂದು ಹೇಳಿದಳು. ಇದನ್ನು ಕೇಳಿ ಮತ್ತಷ್ಟು ಆಶ್ಚರ್ಯವಾಯಿತು. ಕೆಳವರ್ಗದ ಜನರಲ್ಲಿಯೂ ಎಂತಹ ಮಹಾತ್ಯಾಗ ಎಂದುಕೊಂಡೆ.

ಗಿರಿಜಮ್ಮ/ಗಿಯಥಮ್ಮನ ಗಂಡ ತೀರಿಹೋಗಿ ೧೯ ದಿನಗಳಾಗಿದ್ದವು. ಈಕೆಯೊಂದಿಗೆ ಸತ್ತ ಗಂಡನಿಗೆ ಇನ್ನೂ ಇಬ್ಬರು ಹಿರಿಯ ಹೆಂಡತಿಯರಿದ್ದರು. ಆ ಇಬ್ಬರು ಹೆಂಡತಿಯರು ನಾವು ಮಾತನಾಡುವಾಗ ಅಲ್ಲಿಗೆ ಬಂದಿದ್ದರು. ಅವರು ತಮ್ಮ ಮಕ್ಕಳನ್ನು ಬಿಟ್ಟು ಸಾಯಲು ಇಷ್ಟವಿಲ್ಲ ಎಂದರು. ಗಿರಿಜಮ್ಮನಿಗೆ ಆರೇಳು ವರ್ಷದ ಒಂದು ಗಂಡು ಮಗು ಮತ್ತು ಒಂದು ಚಿಕ್ಕ ಹೆಣ್ಣುಮಗು ಇದ್ದು, ಆ ಮಕ್ಕಳನ್ನು ಆಕೆ ತೋರಿಸಿದಳು. ಅಂಥ ಚಿಕ್ಕ ಮಕ್ಕಳನ್ನು ಬಿಟ್ಟು ತಾನು ತನ್ನ ಗಂಡನನ್ನು ಹಿಂಬಾಲಿಸುತ್ತಿದ್ದೇನೆಂದು ಹೇಳಿದಳು. ಆಗ ನಾನು 'ಮಕ್ಕಳನ್ನು ಅನಾಥರನ್ನಾಗಿ ಮಾಡಿ ಸಾಯುವುದು ಬೇಡ' ಎಂದು ಹೇಳಿದೆ. ಮಕ್ಕಳನ್ನು ನನ್ನ ಸೋದರಮಾವ ಕಾಪಾಡಿಕೊಳ್ಳುತ್ತಾನೆಂದು ಆಕೆ ತಿಳಿಸಿದಳು. ಸೋದರ ಮಾವನು ಅಲ್ಲಿಯೇ ಇದ್ದು, ತನ್ನ ಸೊಸೆ ಮಾಡುತ್ತಿರುವುದು ತನಗೆ ಬಹಳ ಸಂತೋಷವಾದ ವಿಚಾರವೆಂದು ಆತ ಖುಷಿಯಾಗಿ ಮಾತನಾಡಿ, ತನ್ನ ಸೊಸೆಯ ಮಕ್ಕಳನ್ನು ಆಕೆಯ ವಾರಗಿತ್ತಿಯರು ನೋಡಿಕೊಳ್ಳುವುದು ಎಂದು ಹೇಳಿದ. ಆಗ ನಾನು 'ಆ ಮಕ್ಕಳನ್ನು ಅನಾಥರನ್ನಾಗಿ ಮಾಡಬೇಡ' ಎಂದು ಹೇಳಿ ನಾನು ಆಕೆಯ

ಮನಸ್ಸನ್ನು ತಿರುಗಿಸಲು ಪ್ರಯತ್ನಪಟ್ಟೆ ಆದರೆ ನಾನು ಹೇಳಿದ್ದೆಲ್ಲ ವ್ಯರ್ಥವಾಯಿತು. 'ಸಾವು ಎಂದರೆ ಸಾಸಿವೆ ಕಾಳಿಗಿಂತ ಕಡೆ' ಎನ್ನುವಂತೆ ಆಕೆ ನುಡಿದಳು. ಅವರಿವರ ಮಾತಿಗೆ ಕಟ್ಟುಬಿದ್ದು ತಾನು ಸಹಗಮನವಾಗುತ್ತಿಲ್ಲ. ತನ್ನ ಆತ್ಮಸಂತೋಷದಿಂದ ಹಾಗೆ ಮಾಡುತ್ತಿರುವೆನೆಂದು ತಿಳಿಸಿದಳು. ಈ ಸಮಯದಲ್ಲಿ ಯಾರಾದರೂ ಬಲವಂತ ಮಾಡುವರೇ ಎಂದು ಕೇಳಿದಾಗ, ಅಲ್ಲಿಯ ಜನ ಸಾಮಾನ್ಯವಾಗಿ ಹಾಗೆ ಮಾಡುವುದಿಲ್ಲ. ಆದರೆ ಕೆಲವೊಮ್ಮೆ ದೊಡ್ಡ ಮನೆತನದ ಗೌರವಕ್ಕಾಗಿ, ಕಿರಿಯ ವಯಸ್ಸಿನ ಹೆಂಡತಿ ಸತಿಯಾಗಲು ಒಪ್ಪದಿದ್ದಲ್ಲಿ ಆಕೆ ಮದುವೆಯಾಗಿ ಇಲ್ಲವೆ ಲೈಂಗಿಕ ಸಂಪರ್ಕಕ್ಕೆ ಒಳಗಾಗಿ ಕುಲಕ್ಕೆ ಕಳಂಕ ತರದಿರಲೆಂದು ಆಕೆಯನ್ನು ಬಲವಂತ ಮಾಡುವುದು ಇದೆ ಎಂದು ಹೇಳಿದರು. ಗಿರಿಜಮ್ಮ ತನ್ನ ಆತ್ಮಸಂತೋಷದಿಂದ ಸತಿ ಹೋಗುತ್ತಿದ್ದೇನೆಂದು ಇದರಿಂದ ತನಗೂ ತನ್ನ ಮನೆತನಕ್ಕೂ ಕೀರ್ತಿ ಬರುವುದೆಂದೂ ಹೇಳಿದಳು. ಮಹಾಸತಿಯಾಗುವುದು ಬಹುಸಂತೋಷದ ವಿಚಾರ ಹೀಗಿರುವಾಗ ಆಭರಣಗಳಿಂದ, ಹೂಗಳಿಂದ ಅಲಂಕಾರಗೊಂಡು 'ಮಾಸ್ತಿ'ಯನ್ನು ಮೆಚ್ಚಿಸುತ್ತೇನೆ. ಒಂದು ವೇಳೆ 'ಸತಿ' ಹೋಗದೆ ಇದ್ದಲ್ಲಿ ತಲೆಬೋಳಿಸಿಕೊಂಡು ಸಾಯುವವರೆಗೂ ವ್ಯಸನದಲ್ಲಿ ಜೀವನ ನಡೆಸಬೇಕಾಗುತ್ತದೆ ಎಂದಳು.

ಪರದೇಶದವರಾದ ತಾವು ತನ್ನನ್ನು ಕಾಣಲು ಬಂದಿರುವುದು ಸಂತೋಷ. ನನ್ನ ಕೀರ್ತಿ ದೂರ ದೇಶಕ್ಕೂ ಮುಟ್ಟುವುದೆಂದೂ, ನನಗೆ ಸಂತೋಷವಾಗಿದೆ ಎಂದು ಹೇಳಿದಳು. ಅಲ್ಲದೇ ತಾನು ಚಿತೆಯನ್ನೇರುವ ಮುನ್ನ ನನ್ನ ಬಿಡಾರಕ್ಕೆ ಬಂದು ಪದ್ಧತಿಯಂತೆ ಚಿತೆಗೆ ಬೇಕಾದ ಸೌದೆ ಕೊಳ್ಳಲು ನನ್ನಿಂದ ಭಿಕ್ಷೆ ಬೇಡುವುದಾಗಿಯೂ, ಅದನ್ನು ತಾವು ಕೊಡುವ ಕೃಪೆ ಮಾಡ ಬೇಕಾಗಿಯೂ ತಿಳಿಸಿದಳು. ಇದನ್ನು ಕಂಡ ನಾನು ಅವಳನ್ನು ಸಾವಿನಿಂದ ತಪ್ಪಿಸಬೇಕೆಂಬ ಮನಸ್ಸಿದ್ದರೂ, ಅದು ಸಾಧ್ಯವಿಲ್ಲದ್ದರಿಂದ ಕೊನೆಗೆ ಆಕೆಯ ಹೆಸರು ಈ ಪ್ರಪಂಚದಲ್ಲಿ ಚಿರಸ್ಥಾಯಿಯಾಗಿರುವಂತೆ ನನ್ನ ಲೇಖನಿಯಿಂದ ಶಕ್ತಿಮೀರಿ ಚಿತ್ರಿಸುವೆನೆಂದು, ಆಕೆಗೆ ಭರವಸೆ ನೀಡಿದೆ. "ಗಿಯಕಮ್ಮ(ಗಿರಿಜಮ್ಮ)ಮೂವತ್ತು ವರ್ಷ ವಯಸ್ಸು, ಕಪ್ಪು ಬಣ್ಣದ ಎತ್ತರದ ನಿಲುವಿನ ಸರ್ವಾಂಗ ಸುಂದರಳಾದ ಈ ಹೆಣ್ಣಿಗೆ ಇದೋ ನನ್ನ ಕಾವ್ಯರೂಪದ ಗೌರವ ಕಾಣಿಕೆ" ಎಂದೆ. ಆದರೆ ಈ 'ಸತಿಪದ್ಧತಿ' ಬಹಳ ಕ್ರೂರ ಹಾಗೂ ಅನಾಗರಿಕವಾದದ್ದು ಆದರೆ ಹೆಂಗಸರ ಈ ಪತಿವ್ರತೆ ಹಾಗೂ ಸತೀತ್ವ ಮೆಚ್ಚತಕ್ಕದ್ದು ಈ ರೀತಿ ನಗರದೊಳಗೆ ಎಷ್ಟೋ ದಿನಗಳು ಮೆರವಣಿಗೆ ಹೋದವು ನನಗೆ ಗೊತ್ತಾಗಲಿಲ್ಲ. ನಂತರ ತಿಳಿದ ಮೇಲೆ ಅವರ ಅಮರ ಪ್ರೇಮಕ್ಕೆ ನನ್ನ ಗೌರವವನ್ನಾದರೂ ಅರ್ಪಿಸಿ ಬರಬೇಕೆಂದು ನನಗನ್ನಿಸಿತು ಎಂದು ದಾಖಲಿಸಿದ್ದಾನೆ.

ಬಪ್‌ತೀಸ್ಟ್‌ಟಾವೆರ್‌ನ್ಯೇ ಫ್ರಾನ್ಸ್ ದೇಶದ ಪ್ರಸಿದ್ಧ ಪ್ರವಾಸಿಗಳಲ್ಲಿ ಒಬ್ಬನಾದ ಈತ ಕ್ರಿ.ಶ. ೧೬೪೩ ರಲ್ಲಿ ಸೂರತ್ ದೌಲತಾಬಾದ್, ಗೋಲ್ಕೊಂಡ, ರಾವುಲ್ಕೊಂಡ, ಗೋವಾ ಮೊದಲಾದ

ಸ್ಥಳಗಳನ್ನು ಸಂದರ್ಶಿಸಿದ. ಈತ ಸಹಗಮನದ ಕೆಲವು ಘಟನೆಗಳನ್ನು ನೋಡಿ ಹೀಗೆ ದಾಖಲಿಸಿದ್ದಾನೆ.[೧೧೪] ನಾನು ಗೋವಾದಿಂದ ವೆಂಗೋರ್ಲಾಕ್ಕೆ ಹಿಂದಿರುಗಿ ಅಲ್ಲಿಂದ ಬಟೇವಿಯಾಕ್ಕೆ ಹೋದೆ. ವೆಂಗೋರ್ಲಾದಲ್ಲಿ ನಾನು ಇದ್ದ ೯ ದಿನಗಳಲ್ಲಿ ನಡೆದ ಒಂದು ಪ್ರಸಂಗವನ್ನು ಹೇಳಬೇಕೆನಿಸುತ್ತದೆ. ಅದೇನೆಂದರೆ ಒಬ್ಬ ವಿಗ್ರಹ ಆರಾಧಕ ಸಾವನ್ನಪ್ಪಿದ. ಅವನ ಶವವನ್ನು ದಹನ ಮಾಡಲು ಚಿತೆ ಸಿದ್ಧವಾಯಿತು. ಮಕ್ಕಳಿಲ್ಲದ ಅವನ ಹೆಂಡತಿ ಗೌರ್ನರರ ಅಪ್ಪಣೆ ಪಡೆದು ಗಂಡನೊಡನೆ ಸಹಗಮನ ಮಾಡಲು ಸಿದ್ಧಳಾದಳು. ಪುರೋಹಿತರು ಮತ್ತು ನೆಂಟರಿಷ್ಟರ ಸಮೇತ ಆಕೆ ಚಿತೆಯ ಬಳಿಗೆ ಬಂದು ಅದನ್ನು ಮೂರು ಸಲ ಪ್ರದಕ್ಷಿಣೆ ಮಾಡಿದಳು. ಆಗ ಇದ್ದಕ್ಕಿದ್ದಂತೆ ಬಾರಿ ಮಳೆ ಬಂದು, ಪುರೋಹಿತರುಗಳು ಆತುರದಲ್ಲಿ ಆಕೆಯನ್ನು ಚಿತೆಗೆ ತಳ್ಳಿ ಓಡಿ ಹೋದರು. ಆದರೆ ಅತಿಯಾದ ಮಳೆಯಿಂದಾಗಿ, ಬೆಂಕಿ ಆರಿಹೋಯಿತು. ಅವಳಿಗೆ ಬೆಂಕಿಯಿಂದ ಒಂದಷ್ಟು ಗಾಯಗಳಾಗಿದ್ದವು. ಮಧ್ಯರಾತ್ರಿ ಆಕೆ ಚಿತೆಯಿಂದ ಎದ್ದು ಬಂದು ತನ್ನ ಸಂಬಂಧಿಗಳೊಬ್ಬರ ಮನೆಯ ಬಾಗಿಲು ತಟ್ಟಿದಳು. ಈ ವಿಚಾರ ಡಚ್ಚರಿಗೂ ಕಾಪುಚಿನ್ ಪಾದ್ರಿಯಾದ ಫಾದರ್ ಜನೋನ್‌ರಿಗೂ ತಿಳಿದು, ಅವರು ಅಲ್ಲಿಗೆ ಬಂದರು. ಅರ್ಧಂಬರ್ಧ ಸುಟ್ಟ ಆಕೆ ನೋಡಲು ಬಹು ವಿಕಾರವಾಗಿ ಕಾಣಿಸುತ್ತಿದ್ದಳು. ಅಸಾಧ್ಯವಾದ ನೋವಿನಿಂದ ನರಳುತ್ತಿದ್ದರೂ ಆಕೆ ಚಿತೆಗೆ ಬೀಳುವ ತನ್ನ ನಿರ್ಧಾರ ಬದಲಿಸದೇ ಎರಡು ದಿನಗಳ ನಂತರ ಚಿತೆಯಲ್ಲಿ ಬಿದ್ದು ಭಸ್ಮವಾದಳು. ಈತ ಮುಂದುವರಿದು ಸಹಗಮನ ಚಿತ್ರಣವನ್ನು ಹೀಗೆ ಕೊಡುತ್ತಾನೆ.[೧೧೫] ಇಂಡಿಯಾದ ವಿಗ್ರಹ ಆರಾಧಕರಲ್ಲಿ ಗಂಡ ಸತ್ತರೆ ಹೆಂಡತಿ ಮತ್ತೆ ಮದುವೆಯಾಗುವಂತಿಲ್ಲ. ವಿಧವೆಯಾದವಳು ತಲೆಬೋಳಿಸಿಕೊಂಡು ಒಡವೆ ವಸ್ತ್ರಗಳನ್ನೆಲ್ಲ ತೆಗೆದು ಹಾಕಿ ಎಲ್ಲಾ ಸುಖ ಸಂತೋಷಗಳಿಂದ ದೂರವಾಗಿದ್ದು ಬಿಡುತ್ತಾಳೆ. ಮನೆಯಲ್ಲಿ ಜೀತದಾಳಿಗಿಂತ ಕೀಳಾಗಿ ಬದುಕಬೇಕಾಗುತ್ತದೆ. ಇದರಿಂದಾಗಿ ಸತ್ತ ಗಂಡನ ಚಿತೆಯೇರುವುದೇ ಮೇಲು, ಎಂದು ಹೆಂಡತಿ ಭಾವಿಸುತ್ತಾಳೆ. ಅಲ್ಲದೆ ಇದರ ಜೊತೆ ಬ್ರಾಹ್ಮಣರ ಚಿತಾವಣೆ ಬೇರೆ, 'ಸತ್ತ ಗಂಡನೊಡನೆ ಚಿತೆಯೇರಿದರೆ ಇಬ್ಬರೂ ಮತ್ತೊಮ್ಮೆ ಗಂಡ ಹೆಂಡತಿಯರಾಗಿ ಹುಟ್ಟಿ, ಈಗಿರು ವುದಕ್ಕಿಂತಲೂ ಹೆಚ್ಚು ಸುಖವಾಗಿ ಬಾಳ್ವೆ ಮಾಡುವಿರೆಂದು' ಬ್ರಾಹ್ಮಣರು ಪುಸಲಾಯಿಸುತ್ತಿದ್ದರು.

ಸ್ಥಳದ ಅಧಿಪತಿಯ ಅನುಮತಿ ಪಡೆಯದೆ ಯಾವ ಹೆಂಗಸು ಚಿತೆಯನ್ನೇರುವಂತಿಲ್ಲ. ಆದರೆ ಮಹಮ್ಮದೀಯರ ಅಧಿಪತಿ ಇದಕ್ಕೆ ಸುಲಭವಾಗಿ ಅನುಮತಿ ಕೊಡುವುದಿಲ್ಲ. ಮಕ್ಕಳಿರು ವವರಿಗೆ ಅನುಮತಿ ಸಿಕ್ಕುವುದು ಕಡಿಮೆ ಅನುಮತಿ ಸಿಗದೆ ಇರುವ ವಿಧವೆಯರು ಧಾನ ಧರ್ಮ ಕಾರ್ಯಗಳಲ್ಲಿ ನಿರತರಾಗಿ ತಮ್ಮ ಬದುಕನ್ನು ಸಾಗಿಸುತ್ತಾರೆ. ಕೆಲವರು ಹೆದ್ದಾರಿಗಳ ಬಳಿ ಅರವಟ್ಟಿಗೆಗಳನ್ನು ಇಟ್ಟುಕೊಂಡು, ಪ್ರಯಾಣಿಕರಿಗೆ ನೀರು ಪಾನಕ ಮುಂತಾದವುಗಳನ್ನು

ನೀಡಿ ಅವರ ದಾಹ ಪರಿಹರಿಸುತ್ತಿದ್ದರು. ಮತ್ತೆ ಕೆಲವರು ಹೊಗೆಬತ್ತಿ ಸೇದುವ ಅಭ್ಯಾಸವುಳ್ಳವರಿಗೆ ಬೆಂಕಿ ಕೊಡುವ ಕಾರ್ಯದಲ್ಲಿ ನಿರತರಾಗಿರುತ್ತಾರೆ. ಇನ್ನೂ ಕೆಲವರು ದನಗಳು ಹಾಕಿದ ಸಗಣಿಯಲ್ಲಿ ಸಿಕ್ಕುವ ಕಾಳುಗಳನ್ನು ಬಿಟ್ಟು ಬೇರೆ ತಿನ್ನುವುದಿಲ್ಲವೆಂದು ವ್ರತ ಹಿಡಿಯುತ್ತಾರೆ. ಸುಬೇದಾರನು, ಬಡವಳಾದ ವಿಧವೆಗೆ ಚಿತೆಯೇರಲು ಅನುಮತಿ ಕೊಡುವುದಿಲ್ಲ. ಕಾರಣ ಚಿತೆಯೇರಲು ಸಂಬಂಧಿಗಳು, ಬ್ರಾಹ್ಮಣರು ಬಹಳ ಹೇಳಿಕೊಂಡ ಮೇಲೆ ಅವನಿಗೆ ಬರಬೇಕಾದ ಭಕ್ಷಿ (ಲಂಚ) ಬಂದಿದೆಯೆಂದು ಸನ್ನೆ ಮಾಡಿದ್ದನ್ನು ತಿಳಿದ ಮೇಲೆ ಆತ ಬಹಳ ಸಿಟ್ಟಾದವನಂತೆ 'ಹಾಳಾಗಿ ಹೋಗಿ' ಎಂದು ಹೇಳಿ, ಒಪ್ಪಿಗೆ ಸೂಚಿಸುತ್ತಿದ್ದನು. ಆಗ ಎಲ್ಲರೂ ವಾದ್ಯ ಸಮೇತ ಹೆಣದೊಡನೆ ನದಿಯ ದಡಕ್ಕೆ ಹೋಗಿ ದಹನ ಕಾರ್ಯ ಪ್ರಾರಂಭಿಸುತ್ತಾರೆ. ಸತಿಯಾಗುವವಳು ಮದುವೆಯ ಹೆಣ್ಣಿನಂತೆ ಶೃಂಗಾರ ಮಾಡಿಕೊಂಡು ದಹನವಾಗುವ ಸ್ಥಳಕ್ಕೆ ಮೆರವಣಿಗೆಯಲ್ಲಿ ಹೋಗುತ್ತಾಳೆ. ಬ್ರಾಹ್ಮಣರು ಧೈರ್ಯವಾಗಿರಬೇಕು, ಮನಸ್ಸು ಬದಲಿಸಬಾರದು ಎಂದು ಹೇಳುತ್ತಲೇ ಚಿತೆಗೆ ನೂಕುತ್ತಾರೆ. ಇದರಿಂದ ಆಕೆಯ ಮೈ ಮೇಲಿನ ಆಭರಣಗಳೆಲ್ಲ ಇವರಿಗೆ ಸೇರುತ್ತದೆ. ನಂತರ ಚಿತೆಯ ಬೂದಿಯಲ್ಲಿ ಸಿಗುವ ಸಿಕ್ಕ ಚೂರು ಪಾರುಗಳನ್ನು ಆಯ್ದುಕೊಳ್ಳುತ್ತಾರೆ. ಇದು ಅವರ ಹಕ್ಕು ಎಂಬುದು ದಾಖಲಾಗಿದೆ.

ಟಾವರ್‌ನ್ಯೇ, ಸ್ತ್ರೀಯರು ಮೂರು ಬಗೆಯಲ್ಲಿ ಚಿತೆಯೇರುವುದನ್ನು ನಾನು ನೋಡಿದ್ದೇನೆ ಎಂದು ದಾಖಲಿಸುತ್ತಾನೆ. ಗುಜರಾತ, ಆಗ್ರಾ, ದಿಲ್ಲಿ ಮೊದಲಾದ ಸ್ಥಳಗಳಲ್ಲಿ ಒಟ್ಟಿದ ಕಟ್ಟಿಗೆಗಳ ಮೇಲೆ ಹೆಂಡತಿ ಗಂಡನ ಶವದೊಡನೆ ಮಲಗಿ ಬೆಂಕಿಹಚ್ಚಿ ಎಂದು ಹೇಳಿ ಹೊತ್ತಿಸಿಕೊಳ್ಳುವುದು ಹಾಗೂ ಗಂಗಾ ನದಿಯಿಂದ ದೂರ ಇರುವವರು ೧೦-೨೦ ದಿವಸಗಳ ತನಕ ಶವದೊಡನೆ ಪ್ರಯಾಣ ಮಾಡಿ ಗಂಗಾ ತಟವನ್ನು ತಲುಪುತ್ತಾರೆ. ಅಷ್ಟು ಹೊತ್ತಿಗೆ ಹೆಣ ಕೊಳೆತು ನಾರುತ್ತದೆ. ಹೀಗೆ ನಾರುವ ಹೆಣದ ಜೊತೆಗೆ ಹೆಂಗಸೊಬ್ಬಳು ಜತೆಯಲ್ಲಿ ಬಿದ್ದು ಸತ್ತದ್ದನ್ನು ನಾನು ಕಣ್ಣಾರೆ ಕಂಡೆ ಎಂದು ಹೇಳುತ್ತಾನೆ.

ಇದೇ ರೀತಿ 'ಕೋರಮಂಡಲ ತೀರದಲ್ಲಿ ಒಂಬತ್ತು ಹತ್ತು ಅಡಿ ಆಳದ ಗುಂಡಿ ತೋಡುತ್ತಾರೆ. ಅದರಲ್ಲಿ ಸೌದೆ ತುಂಬಿದ ಮೇಲೆ ಗಂಡನ ಹೆಣವನ್ನು ಗುಂಡಿಯ ಅಂಚಿನಲ್ಲಿಡುತ್ತಾರೆ. ಆಗ ಹೆಂಡತಿ ವಾದ್ಯದ ಗತ್ತಿಗೆ ಕುಣಿಯುತ್ತ ಎಲೆ, ಅಡಕೆ, ತಾಂಬೂಲವನ್ನು ಮೆಲ್ಲುತ್ತ ನೆಂಟರಿಷ್ಟರೊಡಗೂಡಿ ಕೊಂಡದ ಬಳಿಗೆ ಹೋಗಿ ಒಂದೊಂದು ಸುತ್ತು ಬಂದ ನಂತರ ಹಿರಿಯರಿಗೆ ನಮಸ್ಕಾರ ಮಾಡುತ್ತಾಳೆ. ಹೀಗೆ ಮೂರು ಸುತ್ತು ಬಳಸಿದ ಮೇಲೆ ಬ್ರಾಹ್ಮಣರು ಗಂಡನ ಶವವನ್ನು ಕೊಂಡಕ್ಕೆ ಹಾಕುತ್ತಾರೆ. ಕೊಂಡಕ್ಕೆ ಬೆನ್ನು ಮಾಡಿ ನಿಂತ ಹೆಂಡತಿಯನ್ನು ಹಿಮ್ಮುಖವಾಗಿ ಕೊಂಡಕ್ಕೆ ನೂಕಿ ಬಿಡುತ್ತಾರೆ. ಆಮೇಲೆ ಗಡಿಗೆಗಟ್ಟಲೆ ಎಣ್ಣೆ ಮುಂತಾದವುಗಳನ್ನು

ಸುರಿಯುತ್ತಾರೆ. ಬೆಂಕಿ ಬುಗ್ಗೆಂದು ಉರಿಯುತ್ತದೆ.

ಟಾವರ್ನ್ಯೇ, ದಾಖಲಿಸಿದ ವೆಲ್ಲೂರು ರಾಜನ ಹನ್ನೊಂದು ರಾಣಿಯರ ಸಹಗಮನ ಗಮನ ಸೆಳೆಯುತ್ತದೆ. "ವಿಜಾಪೂರದ ರಾಜನ ದಂಡನಾಯಕನಿಗೂ ವೆಲ್ಲೂರು ರಾಜನಿಗೂ ಆದ ಯುದ್ಧದಲ್ಲಿ ವೆಲ್ಲೂರು ರಾಜ ತನ್ನ ರಾಜ್ಯದೊಂದಿಗೆ ಪ್ರಾಣವನ್ನು ಕಳೆದುಕೊಂಡ ಅವನಿಗೆ ೧೧ ಜನ ಹೆಂಡತಿಯರು. ಇವರೆಲ್ಲರೂ ಸಹಗಮನ ಮಾಡಲು ತೀರ್ಮಾನಿಸಿದರು. ಇದನ್ನರಿತ ದಂಡನಾಯಕ ಅವರ ಮನಸ್ಸನ್ನು ಬದಲಿಸಲು ಪ್ರಯತ್ನಿಸಿದ. ಜೊತೆಗೆ ಕೋಣೆ ಯೊಂದರಲ್ಲಿ ಕೂಡಿಹಾಕಿದ ಆದರೆ ಅವರು 'ಇನ್ನೂ ಮೂರು ಗಂಟೆಯೊಳಗೆ ನಾವು ಪ್ರಾಣ ಸಹಿತ ಇರಲಾರೆವು' ಎಂದರು. ಅದೇ ರೀತಿ ೩ ಗಂಟೆಯ ನಂತರ ಬಾಗಿಲು ತೆರೆದಾಗ ಸಾವಿಗಾಗಿ ಹಗ್ಗವಾಗಲಿ ವಿಷಯವನ್ನಾಗಲಿ ಅಥವಾ ಬೇರೆಯವರ ಹಿಂಸೆಯಿಂದಾಗಲಿ ಸಾವನ್ನಪ್ಪಿ ರಲಿಲ್ಲ. ಆದರೆ ಅವರ ಸಾವು ಕಂಡು ಎಲ್ಲರಿಗೂ ಆಶ್ಚರ್ಯ ಉಂಟಾಯಿತು. ಇದನ್ನು ಕಂಡ ನನಗೆ ಇದು ಪಿಶಾಚಿಯ ಆಟ ಎಂಬುವುದರಲ್ಲಿ ಯಾವುದೇ ಸಂಶಯವಿಲ್ಲ"[೧೧೬] ಎಂದೆನಿಸಿತು.

ಇದೇ ಅವಧಿಯಲ್ಲಿ ಹೆಣ್ಣು ಮಗಳೊಬ್ಬಳು ಸಹಗಮನಕ್ಕೆ ಅಪ್ಪಣೆ ಕೇಳಿದ ರೀತಿಯನ್ನು ಕುರಿತು ಟಾವರ್ನ್ಯೇ ಹೀಗೆ ಹೇಳುತ್ತಾನೆ. "ನಾನು ಇನ್ನೊಬ್ಬ ಡಚ್ಚನೂ ಸುಮಾರು ಎಂಬತ್ತು ವರ್ಷದ ಸ್ಥಳದ ಅಧಿಪತಿ ಐದಾರು ಸಾವಿರ ಕುದುರೆ ಸರದಾರನ ಮನೆಯಲ್ಲಿ ಕುಳಿತಾಗ, ಇಪ್ಪತ್ತು ಇಪ್ಪತ್ತೆರಡು ವರ್ಷದ ಹೆಂಗಸೊಬ್ಬಳು ಸತ್ತ ಗಂಡನೊಡನೆ ಚಿತೆಯನ್ನೇರುವುದಕ್ಕೆ ಅನುಮತಿ ಕೇಳಿದಳು. ಆ ಚಿಕ್ಕ ಪ್ರಾಯದ ಹೆಂಗಸಿನ ಮನಸ್ಸನ್ನು ಬದಲಿಸಲು ಪ್ರಯತ್ನಿಸಿದ್ದಷ್ಟು ಆಕೆ ನಿರ್ಧಾರ ದೃಡವಾಯಿತು. 'ನಾನು ಬೆಂಕಿಗೆ ಭಯಪಡುವುದಿಲ್ಲ ನನ್ನ ತಿರ್ಮಾನವನ್ನು ಬದಲಿಸಲಾರೆ' ಎಂದಳು. ಆಗ ದಳಪತಿ 'ಹಾಳಾಗಿ ಹೋಗು' ಎಂದು ಸಿಟ್ಟಿನಿಂದ ನೂಕಿದ ಅವಳ ಕಡೆಯವರು ಹೊತ್ತಿಸಿದ ಪಂಜೊಂದನ್ನು ಕೈಗೆ ಕೊಟ್ಟರು. ಬೆಂಕಿಯನ್ನು ಕೈಯಲ್ಲಿ ಹಿಡಿದು ಆಕೆ ಮುಖವನ್ನು ಒಂದಿಷ್ಟು ಸಿಂಡರಿಸಲಿಲ್ಲ ನೋಡಿದವರಿಗೆಲ್ಲ ಭಯವಾಯಿತು. ಇದನ್ನು ಕಂಡ ಅಧಿಪತಿ ಆಕೆಯನ್ನು ಅಲ್ಲಿಂದ ಕರೆದುಕೊಂಡು ಹೋಗುವಂತೆ ಆಜ್ಞಾಪಿಸಿದ"[೧೧೭] ಎಂದು ದಾಖಲಿಸಿದ್ದಾನೆ. ಟಾವರ್ನ್ಯೇ, ಮುಂದುವರೆದು 'ಸಮಾಧಿಸತಿ' ಕುರಿತು ಹೀಗೆ ಹೇಳು ತ್ತಾನೆ. "ಕೋರಮಂಡಲ ತೀರದ ಬಹು ಕಡೆಗಳಲ್ಲಿ ಗಂಡನ ಶವವನ್ನು ದಹನ ಮಾಡುವ ಬದಲು ಜೀವವಿರುವ ಹೆಂಡತಿಯೊಡನೆ ಹೂಳುವ ಪದ್ಧತಿಯಿದೆ. ಒಬ್ಬ ಮನುಷ್ಯನು ಕುಳಿತು ಕೊಳ್ಳುವಷ್ಟು ಆಳದ ಗುಂಡಿ ತೋಡಿ, ಅದರಲ್ಲಿ ಶವದೊಡನೆ ಹೆಂಡತಿಯನ್ನು ಕುಳ್ಳಿರಿಸಿ ಮಣ್ಣು ಮುಚ್ಚುತ್ತಾರೆ. ಬಂದ ಜನರೆಲ್ಲ ಮೇಲೆ ನಿಂತು ಕುಣಿಯುತ್ತಾರೆ. ಒಳಗಡೆ ಇರುವವಳು ಆದಷ್ಟು ಜಾಗ್ರತೆಯಿಂದ ಉಸಿರು ಗಟ್ಟಿ ಸಾಯಲಿ"[೧೧೮] ಎಂದು ದಾಖಲಿಸಿದ್ದಾನೆ.

ನಿಕೊಲೊ ಮನೂಚಿ ಕ್ರಿ.ಶ.೧೬೫೮ರಿಂದ ಕ್ರಿ.ಶ.೧೭೧೭ರ ಅವಧಿಯಲ್ಲಿ ಭಾರತದಲ್ಲಿ ಇದ್ದನೆಂದು ತಿಳಿದು ಬರುತ್ತದೆ. ಅವನು ಸಹಗಮನದ ವಿಚಿತ್ರ ಸಂಗತಿಯನ್ನು ಕುರಿತು ಹೀಗೆ ದಾಖಲಿಸಿದ್ದಾನೆ. "ಹೂಗ್ಲಿಯಿಂದ ಹೊರಟು ಖಾಸಿಂ ಬಜಾರ್ ಬಳಿಯಿರುವ ರಾಜಮಹಲಿಗೆ ಬಂದೆ. ಅಲ್ಲಿ ಹಿಂದೂ ಸ್ತ್ರೀಯೊಬ್ಬಳನ್ನು ಅಗ್ನಿಗೆ ಆಹುತಿ ಕೊಡುತ್ತಿದ್ದುದನ್ನು ಕಂಡೆ. ಈಕೆ ಸಂಗೀತಗಾರನೊಬ್ಬನನ್ನು ಪ್ರೀತಿಸಿ,ಗಂಡನಿಗೆ ವಿಷಹಾಕಿ ಸಾಯಿಸಿದ್ದಳು. ನಂತರ ಸಂಗೀತಗಾರ ಆಕೆಯನ್ನು ಮದುವೆಯಾಗುವುದಿಲ್ಲ ಎಂದು ನಿರಾಕರಿಸಿದ. ಇದರಿಂದ ಆಕೆ ನೊಂದು ಚಿತೆಯಲ್ಲಿ ಬೀಳುವ ನಿರ್ಧಾರಕ್ಕೆ ಬಂದಳು. ಅಗ್ನಿ ಸಿದ್ಧವಾಗಿತ್ತು. ಅದರಲ್ಲಿ ಬೀಳುವವರು ಮೊದಲು ತಮ್ಮ ಮೈಮೇಲಿನ ಆಭರಣಗಳನ್ನು ವೀಳ್ಯವನ್ನು ದಾನ ಮಾಡುವುದು ಪದ್ಧತಿ. ಅಂದರಂತೆ ಅವಳು ಅಗ್ನಿಕುಂಡದ ಸುತ್ತ ಪ್ರದಕ್ಷಿಣೆ ಮಾಡುತ್ತಾ ತಾನು ಪ್ರಸಿದ್ಧ ಸಂಗೀತಗಾರನ ಹತ್ತಿರ ಬಂದಾಗ ತನ್ನ ಕೊರಳಲ್ಲಿದ್ದ ಚಿನ್ನದ ಹಾರವನ್ನು ಅವನಿಗೆ ಹಾಕುವ ನೆಪದಲ್ಲಿ ಅವನನ್ನು ಹಾರದೊಳಗೆ ಸಿಕ್ಕಿಸಿ ತಬ್ಬಿ ಎಳೆದುಕೊಂಡು ಹೋಗಿ ಚಿತೆಯಲ್ಲಿ ಬಿದ್ದಳು. ಇಬ್ಬರೂ ಚಿತೆಯಲ್ಲಿ ಭಸ್ಮವಾದರು."[೧೧೯] ಎಂದು ದಾಖಲಿಸಿದ್ದಾನೆ.

ಸಹಗಮನದ ಆಚರಣೆಯ ನಂಬಿಕೆಗಳನ್ನು ಕುರಿತು ತನ್ನ ಪ್ರವಾಸ ಕಥನದಲ್ಲಿ ಹೀಗೆ ದಾಖಲಿಸುತ್ತಾನೆ. "ಯುದ್ಧದಲ್ಲಿ ಗಂಡಸು ಸತ್ತ ಸುದ್ದಿ ಖಚಿತವಾದ ಮೇಲೆ ಹೆಂಡತಿಗೆ ಮೂರು ದಿನಗಳ ವಾಯಿದೆ ಕೊಡುತ್ತಾರೆ. ಆ ಮೂರು ದಿನಗಳು ಆಕೆ ತನಗಿಷ್ಟ ಬಂದಂತೆ ಒಡವೆ ವಸ್ತ್ರಗಳ ಅಲಂಕಾರ ಮಾಡಿಕೊಂಡು ತಲೆಗೆ ಕಿರೀಟೋಪಾದಿಯಲ್ಲಿ ಹಣ್ಣುಗಳನ್ನು ಧರಿಸಿಕೊಂಡು ಊರಿನಲ್ಲೆಲ್ಲಾ ಮೆರವಣಿಗೆ ಹೊರಡುತ್ತಾಳೆ. ಆಕೆಯ ಮೈಮೇಲೆ ಸೊಂಟದಿಂದ ಮೇಲಕ್ಕೆ ಬಟ್ಟೆ ಇರುವುದಿಲ್ಲ. ಮೈ ಕೈ ಮುಖಗಳಿಗೆಲ್ಲ ಕುಂಕುಮ ಬಳಿದುಕೊಂಡಿರುತ್ತಾಳೆ. ಈ ರೀತಿಯಾಗಿ ಹೊರಟ ಆಕೆ ತನ್ನ ನೆಂಟರಿಷ್ಟರಿಂದ ಬೀಳ್ಕೊಂಡು ಸರಸದಿಂದ ಎಲ್ಲರೊಡನೆಯೂ ಮಾತನಾಡುತ್ತಾ ಹೋಗಿ ಬರುವನೆಂದು ಹೇಳುತ್ತಾಳೆ. ಊರ ಹೊರಗೆ ಒಂದು ಆಳವಾದ ದೊಡ್ಡ ಗುಂಡಿ ತೋಡಿ ಅದನ್ನು ಸೌದೆ ಮತ್ತು ಬೆರಣಿಗಳಿಂದ ಭರ್ತಿ ಮಾಡುತ್ತಾರೆ. ಅದಕ್ಕೆ ಬೆಂಕಿ ಹೊತ್ತಿಸುತ್ತಾರೆ. ಈ ಬೆಂಕಿಯನ್ನು ನೋಡಿದ ಕೂಡಲೆ ಆಕೆ ಹೊಸ ಉಡುಪು ಧರಿಸಿ ಮೈ ಕೈಗೆಲ್ಲ ಹೂವಿನ ಅಲಂಕಾರ ಮಾಡಿಕೊಂಡು, ತನ್ನ ಪರಿವಾರ ಸಮೇತ ಕೊಂಡದ ಬಳಿಗೆ ಬರುತ್ತಾಳೆ. ಕೊಂಡದ ಬಳಿ ಎರಡು ಕಡೆ ಎತ್ತರಕ್ಕೆ ಬಟ್ಟೆಯ ತೆರೆ ಹಿಡಿದಿರುತ್ತಾರೆ. ಅಗ್ನಿಕೊಂಡಕ್ಕೆ ಕುಂಕುಮ, ತುಪ್ಪ ಮುಂತಾದವುಗಳನ್ನು ಹಾಕಿ ಪೂಜೆ ಸಲ್ಲಿಸುತ್ತಾರೆ. ದೇವರ ಸ್ತೋತ್ರಗಳು ಮುಗಿದ ಮೇಲೆ ಆಕೆ ಎರಡು ಸಲ ಸುಮಾರು ನಲವತ್ತು ಹೆಜ್ಜೆ ಹಿಂದಕ್ಕೆ ಹೋಗಿ ಬಂದು, ಮೂರನೆಯ ಸಲ ಇನ್ನೂ ನಲವತ್ತು ಹೆಜ್ಜೆ ಹಿಂದಕ್ಕೆ ಹೋಗಿ ಮುನ್ನುಗ್ಗುತ್ತಾಳೆ. ಆಗ ಪರದೆ ತೆಗೆದು ಬಿಡುತ್ತಾರೆ.

ಆಕೆ ಧಗಿಧಗಿಸುವ ಅಗ್ನಿಕುಂಡಕ್ಕೆ ಧುಮುಕುತ್ತಾಳೆ. ಆ ಮೇಲೆ ಆಕೆಯ ಪಾತಿವ್ರತ್ಯದ ಸ್ಮಾರಕವಾಗಿ ಒಂದು ಹಿಡಿ ಬೂದಿ ಉಳಿಯುವುದು. ಅಗ್ನಿಕುಂಡಕ್ಕೆ ಬಿದ್ದ ಸ್ತ್ರೀಯರು ವೈಕುಂಠ ಸೇರಿ ದೇವತೆಗಳಾಗಿ ಪುನರ್ಜನ್ಮ ಪಡೆಯುತ್ತಾರೆ. ಎಂದು ಹಿಂದೂಗಳು ಹೇಳುತ್ತಾರೆ. ಹೀಗೆ ಸತಿಯಾದವಳ ಹೆಸರಿನಲ್ಲಿ ಸ್ಮಾರಕವಾಗಿ ವಿಗ್ರಹಗಳನ್ನು ನಿಲ್ಲಿಸುತ್ತಾರೆ. ಗಂಡಸರು ಸತ್ತರೂ ಹಾಗೆಯೇ ಮಾಡುತ್ತಾರೆ ಅಗ್ನಿಕುಂಡದಲ್ಲಿ ಬಿದ್ದು ಮಹಾಸಾಧ್ವಿಯರಾದ ಹೆಂಡತಿಯನ್ನು ಪಡೆದ ಗಂಡ ದೇವರ ಸಮಾನ ಎಂದು ಜನರ ಭಾವನೆ"[೧೦] ಎಂದು ಉಲ್ಲೇಖಿಸಿದ್ದಾನೆ.

ನಿಕೊಲೊ ಮನೂಚಿ ಇಟಲಿ ದೇಶದ ವೆನಿಸ್ ನಗರದವನು. ಬ್ರಾಹ್ಮಣರಲ್ಲಿ ಸಹಗಮನ ನಡೆದ ವಿವರಗಳನ್ನು ಹೀಗೆ ಉಲ್ಲೇಖಿಸುತ್ತಾರೆ."ತಾಳಿ ಕಟ್ಟಿದ ಮೇಲೆ ಗಂಡ ಸತ್ತರೆ, ಹೆಂಡತಿ ಮತ್ತೊಂದು ಮದುವೆಯಾಗುವಂತಿಲ್ಲ. ನಾಲ್ಕೈದು ವರ್ಷ ಬಾಲೆಯಾಗಿದ್ದರೂ ಮದುವೆ ಇಲ್ಲದೆ ಕಾಲ ತಳ್ಳಬೇಕು. ಹೆಣ್ಣುಮಕ್ಕಳು ಹತ್ತು ವರ್ಷದ ಒಳಗೆ ಹೆಣ್ಣಿಗೆ ಮದುವೆಯಾಗಲೇಬೇಕು. ಗಂಡ ಸತ್ತಾಗ ಆತನ ವಿಧವೆ ನಾಲ್ಕು ಮಾರ್ಗಗಳಲ್ಲಿ ಒಂದು ಮಾರ್ಗ ಅನುಸರಿಸುತ್ತಾಳೆ.

೧. ವೇಶ್ಯೆಯಾಗಿ ಬಾಳುವುದು

೨. ಅವಲಕ್ಕಿ ಮಾರಿಕೊಂಡು ಜೀವಿಸುವುದು

೩. ಸತ್ತ ಗಂಡನೊಂದಿಗೆ ಸಹಗಮನ ಮಾಡುವುದು

ಈ ರೀತಿ ಸಹಗಮನ ಮಾಡುವ ಸಮಯದಲ್ಲಿ ಎಂಟು ಒಂಬತ್ತು ಅಡಿ ಎತ್ತರದ ಚಿತೆ ಸಿದ್ಧ ಮಾಡಿ ಅದರ ಮೇಲೆ ಬದುಕಿದ್ದಾಗ ಹಾಕಿಕೊಳ್ಳುತ್ತಿದ್ದ ಬಟ್ಟೆ ಬರೆಗಳಲ್ಲಿ ಸತ್ತ ಬ್ರಾಹ್ಮಣನ ಶವವನ್ನು ಇಡುತ್ತಾರೆ. ತಲೆಯನ್ನು ದಕ್ಷಿಣಕ್ಕೂ, ಕಾಲುಗಳನ್ನು ಉತ್ತರಕ್ಕೂ ಮಾಡಿ ಮಲಗಿಸುತ್ತಾರೆ. ಆಗ ಊರ ಹಿರಿಯ ಪಂಚೇಂದ್ರಿಯಗಳ ಮಂತ್ರ ಪಠಿಸುತ್ತಾರೆ. ಇದಾದ ನಂತರ ನೆಂಟರಿಷ್ಟರು ಶವಕ್ಕೆ ತುಪ್ಪ ಹಚ್ಚಿ ಬಾಯಿಗೆ ಅಕ್ಕಿಕಾಳು ಹಾಕುತ್ತಾರೆ. ಆಗ ಆತನ ಹೆಂಡತಿ ನಗುತ್ತಾ ಶವದ ಜೊತೆ ಮಲಗುತ್ತಾಳೆ. ತಕ್ಷಣ ಆಕೆಯ ಕಾಲುಗಳನ್ನು ನೆಲಕ್ಕೆ ನೆಟ್ಟ ಗೂಟಗಳಿಗೆ ಭದ್ರವಾಗಿ ಬಿಗಿದು ಕಟ್ಟುತ್ತಾರೆ. ನಂತರ ಆ ಎರಡು ಶರೀರಗಳ ಮೇಲೆ ಮತ್ತಷ್ಟು ಸೌದೆ ಮತ್ತು ಬೆರಣಿ ಕಟ್ಟುತ್ತಾರೆ. ಇಷ್ಟೆಲ್ಲ ಆದ ಮೇಲೆ ಮೂರು ಸಲ ಆಕೆಯ ಹೆಸರು ಹಿಡಿದು ನಿನಗೆ ಸ್ವರ್ಗಕ್ಕೆ ಹೋಗಲು ಆಸೆ ಇದೆಯೇ ಎಂದು ಕೇಳುತ್ತಾರೆ. ಹೋಗುತ್ತೇನೆಂದು ಅವಳಿಂದ ಉತ್ತರ ಬಂದ ಕೂಡಲೇ ಬೆಂಕಿ ಹಚ್ಚುತ್ತಾರೆ. ಎರಡೂ ಶರೀರಗಳು ಸುಟ್ಟು ಬೂದಿಯಾದ ಮೇಲೆ ಎಲ್ಲರೂ ಹಿಂದಿರುಗುತ್ತಾರೆ. ನಂತರ ಆಕೆಯ ಹಿರಿಮೆಯನ್ನು ಕೊಂಡಾಡುತ್ತಾ ಜನ ಹೋಗು ವರು"[೧೧] ಎಂದು ದಾಖಲಿಸಿದ್ದಾನೆ.

ಜಾನ್‌ದ ದೆವನೋ ಕ್ರಿ.ಶ. ೧೬೬೬ ರಲ್ಲಿ ಫ್ರಾನ್ಸ್ ದೇಶದಿಂದ ಭಾರತಕ್ಕೆ ಬಂದ ಈತ ಸಹಗಮನ ಹಾಗೂ ಸಮಾಧಿಸತಿ ಕುರಿತು ಹೀಗೆ ಹೇಳುತ್ತಾನೆ. "ಹೆಂಡತಿ ಸತ್ತ ಗಂಡನೊಡನೆ ಸಹಗಮನ ಮಾಡುವುದುಂಟು. ಕೆಲವು ಕಡೆ ಅಗ್ನಿಕುಂಡವನ್ನು ಸಿದ್ಧಪಡಿಸಿ ಗಂಡನ ಶವವನ್ನು ಅದರಲ್ಲಿ ಇಟ್ಟ ಮೇಲೆ ಬ್ರಾಹ್ಮಣರು, ಹೆಂಗಸರನ್ನು ಅದರಲ್ಲಿ ನೂಕುತ್ತಾರೆ. ಅವಳೊಂದಿಗೆ ಆಕೆಯ ಸೇವಕಿಯರು ಬೀಳುವುದುಂಟು"[೧೨೨] ಎಂದು ತಿಳಿಸುತ್ತಾನೆ. ಸಮಾಧಿಸತಿ ಕುರಿತು ಭಾರತದಲ್ಲಿ ಕೆಲವು ಕಡೆ ಶವಗಳನ್ನು ಗುಂಡಿಯಲ್ಲಿ ಚಕ್ಕಲು ಬೊಕ್ಕಲಾಗಿ ಕುಳ್ಳಿರಿಸಿ ಅದೇ ಗುಂಡಿಯಲ್ಲಿ ಹೆಂಡತಿಯನ್ನು ಕುಳ್ಳಿರಿಸಿ ಮಣ್ಣು ತುಂಬುತ್ತಾಳೆ. ಕುತ್ತಿಗೆಯವರೆಗೆ ಮಣ್ಣು ತುಂಬಿದ ಮೇಲೆ ಬ್ರಾಹ್ಮಣರು ಅವಳ ಕತ್ತು ಹಿಸುಕಿ ಸಾಯಿಸುತ್ತಾರೆ. ಎಂದು ತನ್ನ ಪ್ರವಾಸ ಕಥನದಲ್ಲಿ ದಾಖಲಿಸಿದ್ದಾನೆ.

ಜೆ. ಮೆಲ್ಲಿ ಕರೇರಿಯು ಕ್ರಿ.ಶ.೧೬೯೫ರಲ್ಲಿ ಇಟಲಿಯಿಂದ ಬಾರತಕ್ಕೆ ಆಗಮಿಸಿ ಬಾರತದ ಹಲವು ಪ್ರದೇಶಗಳಲ್ಲಿ ಪ್ರವಾಸ ಮಾಡಿದ್ದಾನೆ. ಈತ ಗೋವಾದ 'ಪೋಂಡ' ನಗರದಲ್ಲಿ ನಡೆದ ಸಹಗಮನವನ್ನು ಹೀಗೆ ದಾಖಲಿಸಿದ್ದಾನೆ "ಪೋಂಡಾ ನಗರ ಗುಡ್ಡಾಗಾಡಿನಿಂದ ಆವೃತವಾಗಿದೆ. ದಿನಾಂಕ ೭ರ ಸೋಮವಾರ ಪೋಂಡಾದಲ್ಲಿ ಬಡಪಾಯಿ ಹಿಂದೂ ಹೆಂಗಸೊಬ್ಬಳು ಸುಭೇದಾರನಿಂದ ಸಹಗಮನಕ್ಕಾಗಿ ಅನುಮತಿ ಪಡೆಯಲು ಆಕೆ ಕೈ ತುಂಬ ಹಣ ನೀಡಿದ್ದಳು. ಮಧ್ಯಾಹ್ನ ಆ ಹೆಂಗಸು ಹೊಸ ಬಟ್ಟೆಗಳನ್ನು ತೊಟ್ಟು ಆಭರಣಗಳನ್ನು ತೊಟ್ಟು ವಾದ್ಯ ಸಮೇತ ಹೊರಟಳು. ನೆಂಟರಿಷ್ಟರು, ಬ್ರಾಹ್ಮಂ ಪುರೋಹಿತರೂ ಜೊತೆಯಲ್ಲಿದ್ದರು. ಪೋಂಡಾದಿಂದ ೧ ಮೈಲಿ ದೂರ ನಿರ್ಧಿಷ್ಟವಾದ ಸ್ಥಳಕ್ಕೆ ಬಂದು ಮೇಲೆ ಆಕೆಯನ್ನು ಎಣ್ಣೆ ಸೌದೆಯ ಕಟ್ಟೆಯ ಮೇಲೆ ಮಲಗಿಸಿ ಅಲ್ಲಾಡದಂತೆ ಕಟ್ಟಿದರು. ಕಟ್ಟೆಯ ಮೇಲೆ ಮಲಗಿಸಿ ಆಕೆ ಡಲೆ ಅಡಿಕೆ ಅಗಿಯುತ್ತ ಪರಲೋಕದಲ್ಲಿರುವವರಿಗೆ ಏನಾದರೂ ಹೇಳಬೇಕಾಗಿದೆ. ಇದೆಯೇ ಎಂದು ಅಲ್ಲಿದ್ದವರನ್ನು ಕೇಳಿದಳು. ಅವರು ಆಳಿಗೆ ಏನೇನೋ ಸಾಮಾನುಗಳನ್ನು ಕೊಟ್ಟರು. ಕೆಲವರು ಪರಲೋಕದಲ್ಲಿರುವ ತಮ್ಮವರಿಗೆ ಪತ್ರ ಕೊಟ್ಟರು. ಇವನ್ನೆಲ್ಲಾ ಆಕೆ ಬಟ್ಟೆಯಲ್ಲಿ ಗಂಟುಹಾಕಿ ಇಟ್ಟುಕೊಂಡಳು. ಇದಾದ ನಂತರ ಬ್ರಾಹ್ಮಣ ಪುರೋಹಿತರು ಸೌದೆಯ ಕಟ್ಟಿಗೆ ಬೆಂಕಿ ಹಚ್ಚಿದರು. ಸುತ್ತಲೂ ಇರುವ ಜನ ಎಣ್ಣೆ ಸುರಿದರು. ಆಕೆ ಸುಟ್ಟು ಬೂದಿಯಾದ ಮೇಲೆ ಬ್ರಾಹ್ಮಣರು ಕರಗಿದ ಚಿನ್ನ ಬೆಳ್ಳಿಯನ್ನು ಆರಿಸಿಕೊಳ್ಳುತ್ತಾರೆ"[೧೨೩] ಎಂದು ದಾಖಲಿಸಿದ್ದಾನೆ.

ಜಾನ್ ಫ್ರೈಯರ್ ಕ್ರಿ.ಶ.೧೬೭೩ರ ಜೂನ್ ೨೬ರಂದು ಭಾರತದ ಮಚಲಿ ಪಟ್ಟಣಕ್ಕೆ ಬರುತ್ತಾನೆ. ಭಾರತದುದ್ದಕ್ಕೂ ಪ್ರವಾಸ ಮಾಡಿ ಇಲ್ಲಿ ನಡೆದ ಸಹಗಮನದ ಕುರಿತು ತನ್ನ

ಪ್ರವಾಸ ಕಥನದಲ್ಲಿ ಹೀಗೆ ದಾಖಲಿಸಿದ್ದಾನೆ. "ಹಿಂದೂ ಸ್ತ್ರೀಯರು ಗಂಡ ಸತ್ತಾಗ ಆತನ ಚಿತೆಯಲ್ಲಿ ಬಿದ್ದು ದೇಹತ್ಯಾಗ ಮಾಡುತ್ತಾರೆ. ಒಂದು ವೇಳೆ ಹಾಗೆ ಮಾಡದಿದ್ದರೆ ತಲೆ ಬೋಳಿಸಿಕೊಂಡು ಜೀವನೋಪಾಯಕ್ಕಾಗಿ ವೇಶ್ಯಾವೃತ್ತಿ ಅನುಸರಿಸುತ್ತಾರೆ. ಈ ಕಾರಣದಿಂದ ಆಕೆಯ ಸಂಬಂಧಿಕರು ಸಿದ್ದಗೊಂಡು ಪಾನೀಯ ಕೊಟ್ಟು ಜ್ಞಾನ ತಪ್ಪಿಸಿ ಚಿತೆಯಲ್ಲಿ ಬೀಳುವಂತೆ ಮಾಡುತ್ತಾರೆ. ಅವಳು ಬೆಂಕಿಯಿಂದ ತಪ್ಪಿಸಿಕೊಳ್ಳದಂತೆ ದೊಡ್ಡ ದೊಡ್ಡ ಕಟ್ಟಿಗೆಗಳಿಂದ ಅವಳನ್ನು ಅದುಮಿ ಹಿಡಿಯುತ್ತಾರೆ."[೧೨೪] ಎಂದು ಹೇಳುತ್ತಾನೆ. ಈ ನಾಡಿನಲ್ಲಿ ಬಗೆ ಬಗೆಯ ಕ್ರೂರ ಪದ್ಧತಿಗಳನ್ನು ಆಚರಿಸುತ್ತಾರೆ. ಸತ್ತ ಗಂಡನೊಡನೆ ಹೆಂಡತಿ ಆತನ ಚಿತೆ ಏರಲು ಅನುಮತಿಯಿದೆ. ಅಷ್ಟೆ ಅಲ್ಲದೆ ಚಿತೆ ಏರಿದವರಿಗೆ ಅನೇಕ ಸ್ಮಾರಕಗಳನ್ನು ಕಟ್ಟಿದ್ದಾರೆ. ಈ ದೇಶದ 'ಹುಬ್ಬಿ' ಎಂಬಲ್ಲಿ ಲಿಂಗಾಯತ ಎಂಬ ಜಾತಿ ಜನ ಇದ್ದಾರೆ. ಈ ಜನಾಂಗದಲ್ಲಿ ಸತ್ತವರನ್ನು ನೆಟ್ಟಗೆ ಕುಳ್ಳಿರಿಸಿ ಹೆಂಡತಿ ಸಮಾಧಿ ಸತಿಗೆ ಒಪ್ಪಿಗೆ ಕೊಟ್ಟಿದೆ. ಅವಳನ್ನು ಜೀವಸಹಿತ ಅದೇ ಗುಂಡಿಯಲ್ಲಿ ಕುತ್ತಿಗೆಯವರೆಗೆ ಮಣ್ಣು ಹೇರಿ ಆಮೇಲೆ ಕೆಲವು ಕ್ರಿಯೆಗಳನ್ನು ಮಾಡಿ ಕುತ್ತಿಗೆ ತಿರುಚಿ, ಮೇಲೆ ಮತ್ತೆ ಮಣ್ಣು ಮುಚ್ಚುತ್ತಾರೆ. ಹೀಗೆ ಸಮಾಧಿಸತಿ ಮಾಡಿದ್ದನ್ನು ನಾನು ನೋಡಿದ್ದೆನೆಂದು ದಾಖಲಿಸಿದ್ದಾನೆ.

ಥಾಮಸ್ ಬೋವ್ರೆ ಇಂಗ್ಲೆಂಡಿನ ವ್ಯಾಪಾರಿ ಕ್ರಿ.ಶ.೧೬೬೯ರಲ್ಲಿ ಭಾರತಕ್ಕೆ ಬಂದ. ಇವನು ಭಾರತದ ಹಲವು ಪ್ರದೇಶಗಳಲ್ಲಿ ಸಂಚರಿಸಿದನು. ಈ ಅವಧಿಯಲ್ಲಿ ತಾನು ನೋಡಿದ ಸಹಗಮನ ಪದ್ಧತಿಯನ್ನು ಹೀಗೆ ದಾಖಲಿಸಿದ್ದಾನೆ. "ಗಂಡನು ಸತ್ತರೆ ಅವಳನ್ನು ಸುಡುವುದಕ್ಕೆ ಚಿತೆ ಸಿದ್ಧವಾಗುತ್ತದೆ. ಆಗ ಅವನ ಹೆಂಡತಿಯರು ಚಿತೆಯಲ್ಲಿ ಬೀಳಲು ಸಿದ್ಧರಾಗುವರು. ಸರ್ವಾಲಂಕಾರ ಭೂಷಿತೆಯರಾಗಿ ಆ ಪೈಶಾಚಿಕ ಬ್ರಾಹಣರೊಡಗೂಡಿ ರುದ್ರಭೂಮಿಗೆ ಹೋಗುತ್ತಾರೆ. ಆಗ ಬ್ರಾಹ್ಮಣರೆಲ್ಲರೂ ಸಹಗಮನ ಹೊರಟ ಹೆಂಗಸರ ಪಾತಿವ್ರತ್ಯದ ಮಹಿಮೆಯನ್ನು ಕೊಂಡಾಡುತ್ತ ನೀವು ಸ್ವರ್ಗದಲ್ಲಿ ಸುಖವಾಗಿರುತ್ತೀರಿ, ನೀವು ದೇವತೆಗಳಂತೆ ಪೂಜಿಸಲ್ಪಡುವಿರೆಂದು ಪ್ರೋತ್ಸಾಹಿಸುತ್ತ ಹೋಗುತ್ತಾರೆ. ನೆಂಟರಿಷ್ಟರೂ ಆಕೆಯ ಪಾತಿವ್ರತ್ಯ ಹೊಗಳುತ್ತಾರೆ. ನಾನು ಉರಿಯುವ ಬೆಂಕಿಯ ಮೇಲೆ ಗಂಡಸಿನ ಹೆಣ ಇದ್ದುದನ್ನು ನೋಡಿದೆ. ಕಡಿಮೆ ಪ್ರಮಾಣದಲ್ಲಿ ಚಿತೆಯ ಸುತ್ತ ಸೌದೆ ಮುಂತಾದವುಗಳನ್ನು ಗುಡ್ಡೆ ಹಾಕಿ ತಗ್ಗು ಮಾಡಿದ್ದರು. ಇದಕ್ಕೆ ಬೆಂಕಿ ಹಚ್ಚಿದಾಗ ಸುತ್ತ ಇದ್ದವರೆಲ್ಲ ಎರಡು ಮೂರು ಗಜ ಹಿಂದೆ ಸರಿದರು. ಸಹಗಮನ ಮಾಡುವ ಹೆಂಗಸಿರುವ ಕಡೆ ನನ್ನ ಕುದರೆ ನಡೆಸಿದೆ. ಆಕೆ ಬಹುಸಂತೋಷವಾಗಿರುವಂತೆ ಕಂಡಿತು. ಆಕೆಯನ್ನು ಕುರಿತು ಬ್ರಾಹ್ಮಣರ ಮಾತಿಗೇಕೆ ಮರುಳಾಗಿರುವಿರೆ ಎಂದೆ. ಇದನ್ನು ಕೇಳಿಸಿಕೊಂಡ ಬ್ರಾಹ್ಮಣರು ನನ್ನ ಮೇಲೆ ಸಿಟ್ಟಾದವರಂತೆ ಕಂಡರು ಅವರು ಮಾತನಾಡುವ ಮುನ್ನವೆ ಅವಳು 'ಇದು ನನ್ನ

ಬಾಳಿನಲ್ಲೇ ಅತ್ಯಂತ ಶುಭ ಘಳಿಗೆ' ಎಂದು ಹೇಳಿಬಿಟ್ಟಳು. ಮತ್ತೇನನ್ನೋ ಆತುರಾತುರವಾಗಿ ಹೇಳಿದಳು. ನನಗರ್ಥವಾಗಲಿಲ್ಲ. ಭಾರಿ ಉತ್ಸಾಹದಲ್ಲಿರುವ ಆಕೆಗೆ ಬಹುಶಃ ಅಮಲು ಬರುವಂತಹ ಪಾನೀಯವನ್ನು ಕುಡಿಸಿರಬೇಕು. ಅಂತೂ ಆ ಬಡಪಾಯಿ ಹೆಂಗಸು ಬಹು ಹರುಷದಿಂದ ಕೈ ಎತ್ತಿ ಎಲ್ಲರಿಗೂ ನಮಸ್ಕಾರ ಮಾಡಿದಳು. ನನ್ನ ಕಡೆಗೆ ಬಹು ಅಕ್ಕರೆಯಿಂದ ನೋಡಿ ಸೊಗಸಾಗಿ ಸಿಂಗರಿಸಿಕೊಂಡಿದ್ದ ಮುಡಿಯಿಂದ ಹಳದಿ ಮತ್ತು ಬಿಳಿಯ ಹೂವುಗಳನ್ನು ತೆಗೆದುಕೊಟ್ಟಳು. ಹೀಗೆ ಮಾಡಿ ಅವಳು ಅರೆಗಳಿಗೆಯಲ್ಲಿ ಬೆಂಕಿಗೆ ಹಾರಿಬಿಟ್ಟಳು. ಆಗ ನಾನಾ ವಾದ್ಯಗಳು ಭೋರ್ಗರೆದವು. 'ಉಘೇ ಉಘೇ' ಎಂದು ಜನ ಕೂಗಿದರು. ಆ ಕೂಗಿನ ಅಬ್ಬರದಲ್ಲಿ ಬೆಂಕಿಯಲ್ಲಿ ಬಿದ್ದ ಬಡಪ್ರಾಣಿಯ ಸಂಕಟದ ಕೂಗು ಕೇಳಲೆ ಸುತ್ತಮುತ್ತ ನಿಂತವರು ಆಕೆಯ ಮೇಲೆ ಒಣಗಿಸಿದ ಸೌದೆ, ಪುಳ್ಳಿ, ತುಪ್ಪ, ಎಣ್ಣೆ ತೆಂಗಿನಗರಿ ಮುಂತಾದ ಧಗಧಗನೆ ಉರಿಯುವ ವಸ್ತುಗಳನ್ನು ಹಾಕಿದರು." ಇದೇ ರೀತಿ ಮತ್ತೊಂದು ಸಹಗಮನ ನನ್ನ ಕಣ್ಣ ಮುಂದೆಯೇ ನಡೆಯಿತು"[೧೨೫] ಎಂದು ಉಲ್ಲೇಖಿಸುತ್ತಾನೆ.

ಮೈಲಾರಪುರದ ಬಳಿಯಿದ್ದ ನಾಯಕನೊಬ್ಬನು ನಾನು ಈಸ್ಟ್ ಇಂಡಿಯಾಕ್ಕೆ ಬಂದ ವರ್ಷ ಸಾವನ್ನಪ್ಪಿದ. ಆಗ ಅವನೊಡನೆ ಅವನ ಇಪ್ಪತ್ತೇಳು ಜನ ಉಪಪತ್ನಿಯರೂ ಸಹಗಮನ ಮಾಡಿದರು. ಇಂತಹ ಕ್ರೂರ ಪದ್ಧತಿಯು ಹಿಂದೂ ನಾಯಕರುಗಳು ರಾಜರುಗಳು ಇರುವ ಕಡೆಗಳಲ್ಲೆಲ್ಲಾ ಇದೆ. ಆದರೆ ಮಹಮ್ಮದೀಯ ನವಾಬರುಗಳು ಇರುವ ಕಡೆ ಇದರ ಪ್ರಮಾಣ ಅರ್ಧಕ್ಕರ್ಧ ಕಡಿಮೆ. ಅವರು ಹೆಂಗಸರನ್ನು ಅದರಲ್ಲಿಯೂ ಸುಂದರವಾಗಿದ್ದವರನ್ನೂ ಸಹಗಮನ ಮಾಡಬೇಡಿ ನೆಂಟರಿಷ್ಟರನ್ನೂ, ಬ್ರಾಹ್ಮಣರನ್ನೂ ಬಿಟ್ಟು ಬನ್ನಿ ನಿಮ್ಮನ್ನು ನಾವು ಸುಖವಾಗಿ ನೋಡಿಕೊಳ್ಳತ್ತೇವೆ, ಎಂದು ಪುಸಲಾಯಿಸುತ್ತಿದ್ದರು. ಆದರೆ ಇಲ್ಲಿ ಯಾರನ್ನು ಬಲವಂತವಾಗಿ ಒಪ್ಪಿಸುವಂತಿರಲಿಲ್ಲ. ಏಕೆಂದರೆ ಈ ಪದ್ಧತಿಯನ್ನು ಅನುಸರಿಸಲು ಮೊಗಲ್ ಚಕ್ರವರ್ತಿಗೂ ಅವನ ಅಮೀರರಿಗೂ ಕೈ ತುಂಬ ಹಣ ಕೊಟ್ಟ ಅನುಮತಿ ಪಡೆದುಕೊಂಡಿರುತ್ತಾರೆ. ಎಷ್ಟೋ ಹೆಂಗಸರಿಗೆ ಗಂಡನ ಚಿತೆಯಲ್ಲಿ ಬೀಳಲು ಇಷ್ಟವಿರುವುದಿಲ್ಲ. ಹೆತ್ತ ಮಕ್ಕಳನ್ನು ತೊರೆದು ಬೆಂಕಿಯಲ್ಲಿ ಬೀಳುವುದೆಂದರೆ ಯಾರಿಗೆ ತಾನೆ ಒಪ್ಪಿತು. ಆದರೆ ಆ ಪೈಶಾಚಿಕ ಬ್ರಾಹ್ಮಣರಿಗೆ ಇದು ಯಾವುದರ ಕುರಿತೂ ಗಮನವಿರುವುದಿಲ್ಲ. ಹೆಂಗಸರು ಒಪ್ಪದಿದ್ದರೂ ಬಲವಂತದಿಂದ ಬೆಂಕಿಯಲ್ಲಿ ಹಾಕಿ ಸುಟ್ಟು ಬಿಡುತ್ತಿದ್ದರು.

ಒಮ್ಮೆ ಒಬ್ಬ ಹೆಂಗಸನ್ನು ಅವಳ ಇಷ್ಟಕ್ಕೆ ವಿರುದ್ಧವಾಗಿ ಬೆಂಕಿಯಲ್ಲಿ ಹಾಕಿದರು. ಅರೆಬರೆ ಉರಿಯಲಿ ಬೆಂದ ಆಕೆ ತಪ್ಪಿಸಿಕೊಳ್ಳಲು ಯತ್ನಿಸಿದಳು. ಆದರೆ ಆ ಪಾಪಿಗಳು ಬಿಡಬೇಕಲ್ಲ. ಉದ್ದವಾದ ಗಳಗಳಿಂದ ಅವಳನ್ನು ಅದುಮಿ ಒಡಿದು ಬೆಂಕಿಯಲ್ಲಿ ಬೂದಿಯಾಗು ವಂತೆ ಮಾಡಿದ್ದನ್ನು ನಾನು ನನ್ನ ಕಣ್ಣಾರೆ ನೋಡಿದೆ. ಬ್ರಾಹ್ಮಣರು ಎಷ್ಟು ಕ್ರೂರಿಗಳೆಂದರೆ ಗಂಡನ

ಚಿತೆಯಲ್ಲಿ ಬೀಳಲು ಹಿಂಜರಿಯುವ ಹೆಂಡತಿಯನ್ನು ಬಲತ್ಕಾರದಿಂದ ಉರಿಯುವ ಬೆಂಕಿಗೆ ಹಾಕಿ ಗಳಗಳಿಂದ ಅದುಮಿ ಹಿಡಿದು ಸುಟ್ಟು ಹೋಗುವಂತೆ ಮಾಡುತ್ತಾರೆ. ಒಮ್ಮೆ ಹೀಗೆ ಬಲತ್ಕಾರದಿಂದ ಬೆಂಕಿಗೆ ಹಾಕಲು ಪ್ರಯತ್ನಿಸುತ್ತಿದ್ದಾಗ ಒಬ್ಬ ಹೆಂಗಸು ಬ್ರಾಹ್ಮಣನನ್ನೇ ಎಳೆದುಕೊಂಡು ಚಿತೆಯಲ್ಲಿ ಬಿದ್ದು ಭಸ್ಮವಾದುದನ್ನು ನಾನೇ ಕಣ್ಣಾರೆ ಕಂಡೆ ಎಂದು ಥಾಮಸ್ ಬೋವ್ರೆ ತನ್ನ ಪ್ರವಾಸ ಕಥನದಲ್ಲಿ ದಾಖಲಿಸಿದ್ದಾನೆ.

ರಾಬರ್ಟದ ನೊಬಿಲಿಯು ಮಧುರೆಯ ನಾಯಕ ತಿರುಮಲನ ಮರಣ ಮತ್ತು ಅವನ ರಾಣಿಯರ ಸಹಗಮನವನ್ನು ಹೀಗೆ ದಾಖಲಿಸಿದ್ದಾನೆ."ಸೋತು ಹೋದ ತಿರಿಮಲ ಬಿಜಾಪೂರಕ್ಕೆ ಅಧೀನನಾಗಿ ಸುಲ್ತಾನನಿಗೆ ಅಪಾರ ಪೊಗದಿಗಳನ್ನು ಸಲ್ಲಿಸಬೇಕಾಯಿತು. ಆತ ಸಾಯುವ ವೇಳೆ ಹೆಚ್ಚು ಕಡಿಮೆ ಕ್ರೈಸ್ತನಾಗಿಯೇ ಸತ್ತನೆಂದು ಸ್ಥಳ ಚರಿತ್ರೆಯಿದೆ. ದೇವಸ್ಥಾನಗಳಿಗೆ ಸಂದಾಯವಾಗುತ್ತಿದ್ದ ಆದಾಯವನ್ನು ನಿಲ್ಲಿಸಿಬಿಟ್ಟಿದ್ದ. ಕಾರಣ ಚೊಕ್ಕನಾಥ ದೇವಸ್ಥಾನದೊಳಕ್ಕೆ ಕರೆದುಕೊಂಡು ಹೋಗಿ ಅಲ್ಲಿ ನೆಲಮಾಳಿಗೆಯಲ್ಲಿ ಗುಪ್ತವಾಗಿ ಇಟ್ಟಿರುವ ನಿಧಿಯನ್ನು ತೋರಿಸುವ ನೆಪದಲ್ಲಿ ಆ ನೆಲಮಾಳಿಗೆಗೆ ನೂಕಿ ಕಲ್ಲು ಚಪ್ಪಡಿ ಹೇರಿ ಸಾಯಿಸಿ ಮೀನಾಕ್ಷಿಯ ಕೃಪೆಯಿಂದ ತಿರುಮಲ ಸ್ವರ್ಗಾರೋಹಣ ಮಾಡಿಬಿಟ್ಟ ಎಂದು ಹೇಳಿದನಂತೆ. ನಾಯಕ ಈ ರೀತಿ ಸಾವನ್ನಪ್ಪಿರುವುದನ್ನು ಕೇಳಿದ ಅವನ ಇನ್ನೂರು ಜನ ಹೆಂಡತಿಯರು ಅಗ್ನಿ ಕುಂಡದಲ್ಲಿ ಬಿದ್ದು ಸತಿಯಾದರು."[೧೨೬] ಎಂದು ದಾಖಲಿಸಿದ್ದಾನೆ.

ಸಂತಜಾನ್‌ಬ್ರಿಟ್ಟೋ ಜಿಂಜಿನಾಡಿನಲ್ಲಿರುವ ಕುತ್ತೂರಿನ ಪಟೇಲ ಮೀನಾಕ್ಷಿ ಅಯ್ಯರ ಅವರು ಕ್ರೈಸ್ತ ಧರ್ಮದ ಇಗರ್ಜಿಗಳನ್ನು ಸುಡಿಸಿದ್ದ. ನಮ್ಮನ್ನು ಕುತ್ತೂರಿನಿಂದ ಓಡಿಸಬೇಕೆಂದು ಪ್ರಯತ್ನಪಟ್ಟಿದ್ದ. ಆತ ಸಾವನ್ನಪ್ಪಿದಾಗ ದೇವರು ಅವನಿಗೆ ತಕ್ಕ ಶಾಸ್ತಿ ಮಾಡಿದ್ದಾನೆಂದು ಸಂತೋಷಪಟ್ಟೆ. ಇದೇ ಅವಧಿಯಲ್ಲಿ ಅವನ ಹೆಂಡತಿ ಗಂಡನ ಸಾವನ್ನು ಸಹಿಸಲಾರದೆ ಶವದ ಚಿತೆಯಲ್ಲಿ ಸಹಗಮನ ಮಾಡಿದಳೆಂದು[೧೨೭] ದಾಖಲಿಸಿದ್ದಾನೆ.

ಫಾದರ್‌ಕಾನ್‌ಸ್ಟಂಟ್ ಬೆಷ್ಚಿ ೪೭ ರಾಣಿಯರು ಚಿತಾಪ್ರವೇಶ ಮಾಡಿದ್ದನ್ನು ಹೀಗೆ ದಾಖಲಿಸಿದ್ದಾನೆ. "ಬ್ರಿಟ್ಟೋ ಎಂಬಾತ ಧರ್ಮವೀರನಾಗಿ ಮರಣ ಹೊಂದಿದ. ಈತನ ಮರಣಕ್ಕೆ ಕಾರಣನಾದ ರಾಮನಾಡಿನ ವಿಜಯ ರಂಗನಾಥ ತೇವಾನ್ ಉರುಫ್ ಕಿಲವಾನ್ ಕ್ರಿ.ಶ. ೧೭೧೦ರಲ್ಲಿ ಮರಣ ಹೊಂದಿದ ಈತನಿಗೆ ಆಗ ೮೦ ವರ್ಷ ಇವನಿಗೆ ಒಟ್ಟು ೪೭ ಹೆಂಡತಿಯರಿದ್ದರು. ಅವರೆಲ್ಲ ಚಿತೆಯೇರಿ ಫಾದರ್ ಮಾರ್ಟಿನ್ ಎಂಬಾತ ಕ್ರಿ.ಶ.೧೭೧೩ರ ಅವಧಿಯಲ್ಲಿ ಬರೆದ ಪತ್ರದಲ್ಲಿ ಹೀಗೆ ವರ್ಣಿಸಿದ್ದಾನೆ. "ಮರವಾರಾಜ ಕ್ರಿ.ಶ.೧೭೧೦ರಲ್ಲಿ ಮರಣ ಹೊಂದಿದ. ಆಗ ಅವನ ಚಿತೆಯಲ್ಲಿ ಆತನ ೪೭ ಜನ ಹೆಂಡತಿಯರು ಬಿದ್ದು ಸತಿಯಾದುದು ಅಪರೂಪದ

ಸಂಗತಿಯಾಗಿದೆ. ಸತಿ ಹೋದುದರ ಆಚರಣೆಯನ್ನು ಕುರಿತು ಹೀಗೆ ದಾಖಲಿಸಿದ್ದಾನೆ."[೧೨೮] ರಾಮನಾಡು ಪಟ್ಟಣದಿಂದ ಸ್ವಲ್ಪ ದೂರದಲ್ಲಿ ಆಳವಾದ ದೊಡ್ಡ ಹೊಂಡವೊಂದನ್ನು ತೆಗೆಯಲಾಯಿತು. ಅದರ ತುಂಬ ಗಾಡಿಗಟ್ಟಲೆ ಸೌದೆ ತುಂಬಿ ಚಿತೆ ಸಿದ್ಧಪಡಿಸಿದ್ದರು. ರಾಜನ ದೇಹವನ್ನು ಬೆಲೆಬಾಳುವ ಬಟ್ಟೆ ಬರೆಗಳಿಂದಲೂ, ಆಭರಣಗಳಿಂದಲೂ ಅಲಂಕರಿಸಿಕೊಂಡು ತಂದು ಚಿತೆಯ ಕೆಳಭಾಗ ನಾನಾ ಕಡೆಗಳಿಂದ ಬೆಂಕಿ ಹೊತ್ತಿಸಿದರು. ಕೆಳಭಾಗ ಹತ್ತಿಕೊಂಡು ಉರಿಯಲಾರಂಭಿಸಿದಾಗ ಸ್ತ್ರೀಯರ ತಂಡ ಚಿತೆಯನ್ನು ಸಮೀಪಿಸಿತು. ಅವರು ಸರ್ವಾಲಂಕಾರ ಭೂಷಿತೆಯರಾಗಿ ಕೊರಳಲ್ಲಿ ಹೂಮಾಲೆ ಧರಿಸಿ ಚಿತೆಯ ಪ್ರದಕ್ಷಿಣೆ ಮಾಡಿದರು. ಪಟ್ಟದ ರಾಣಿಯು ಕೈಯಲ್ಲಿ ಕತ್ತಿ ಹಿಡಿದಿದ್ದಳು. ಅವಳು ಮುಂದೆ ರಾಜನಾಗಲಿರುವವನನ್ನು ಕುರಿತು ನೋಡು ನಮ್ಮ ದೊರೆ ಶತ್ರುಗಳನ್ನು ಸಂಹಾರ ಮಾಡಿದ ಕತ್ತಿ ಇದು ಇದನ್ನು ಶತ್ರು ನಿಗ್ರಹಕ್ಕಲ್ಲದೆ, ಬೇರೆ ಉದ್ದೇಶಗಳಿಗೆ ಉಪಯೋಗಿಸಬಾರದು. ಏನೇ ಆದರೂ ನಿನ್ನ ಪ್ರಜೆಗಳ ರಕ್ತದಿಂದ ಇದನ್ನು ಅಪವಿತ್ರಗೊಳಿಸಬಾರದು ನೆನಪಿರಲಿ. ಪ್ರಜೆಗಳನ್ನು ನಿನ್ನ ಮಕ್ಕಳಂತೆ ಕಾಣು ನಮಗೆ ಈ ಭೂಮಿಯ ಮೇಲಿರಲು ಇಷ್ಟವಿಲ್ಲ. ಸಾವನ್ನಪ್ಪಿದ ಪತಿಯೊಡನೆ ಹೋಗುವುದೇ ನನ್ನ ಧರ್ಮ ಎಂದು ಹೇಳುತ್ತ ಅವಳು ಕತ್ತಿಯನ್ನು ಹೊಸ ದೊರೆಯ ಕೈಯಲ್ಲಿಟ್ಟಳು. ಆಗ ಅವಳ ಮುಖದಲ್ಲಿ ಯಾವ ನೋವಿನ ಭಾವನೆಗಳೂ ಕಾಣಲಿಲ್ಲ ದೇವರ ನಾಮಸ್ಮರಣೆ ಮಾಡುತ್ತ ಚಿತೆಯನ್ನು ಪ್ರವೇಶಿಸಿದಳು.

ರಾಜನ ಎರಡನೆಯ ಹೆಂಡತಿ ಪುದುಕೋಟೆಯ ತೋಂಡಮನ್ ರಾಜನ ಸಹೋದರಿ. ಆತ ಆಕೆಯ ಮೇಲಿದ್ದ ಆಭರಣಗಳನ್ನು ಪಡೆಯುವಾಗ ಗದ್ಗದಿತವಾಗಿ ಅಳಲಾರಂಭಿಸಿದ. ಆದರೂ ಅವನ ಸಹೋದರಿ ಶಿವಾ ಶಿವಾ ಎಂದು ಚಿತೆಗೆ ಹಾರಿದಳು. ಇನ್ನುಳಿದವರು ಅದೇ ರೀತಿ ಉರಿಯುವ ಕೊಂಡದಲ್ಲಿ ಬಿದ್ದರು. ಒಬ್ಬಳು ಮಾತ್ರ ಹೆದರಿ ಹತ್ತಿರದಲ್ಲಿದ್ದ ಕ್ರೈಸ್ತ ಸಿಪಾಯಿಯ ಬಳಿಗೆ ಓಡಿ ಬಂದು ನನ್ನನ್ನು ಉಳಿಸು ಎಂದು ಗೋಳಾಡಿದಳು. ಆತ ಆಕೆಯನ್ನು ಜೋರಾಗಿ ದೂಡಿದಾಗ ಆಕೆಯು ಹೋಗಿ ಚಿತೆಯ ಮೇಲೆ ಬಿದ್ದು ಕೊಂಡ ಕೆಂಡವಾದಳು. ಸಿಪಾಯಿ ಗಡಗಡ ನಡುಗಲಾರಂಭಿಸಿದ ಬುದ್ಧಿ ಭ್ರಮಣೆಯಿಂದ ಆತ ಮಾರನೆಯ ರಾತ್ರಿ ಮರಣ ಹೊಂದಿದ. ಉರಿಯುವ ಕೆಂಡದಲ್ಲಿ ಬಿದ್ದ ೪೭ ಸ್ತ್ರೀಯರು ಉರಿಯನ್ನು ತಾಳಲಾರದೆ ತಪ್ಪಿಸಿಕೊಳ್ಳುವ ಪ್ರಯತ್ನ ಮಾಡಿದರು. ಒಬ್ಬರ ಮೇಲೊಬ್ಬರು ಹೊರಳಾಡುತ್ತ ಹೋ ಎಂದು ಕಿರುಚಿಕೊಳ್ಳಲಾರಂಭಿಸಿದರು. ಆಗ ಅವರ ಮೇಲೆ ಗಾಡಿಗಟ್ಟಲೆ ಕಟ್ಟಿಗೆ ಹೇರಲಾಯಿತು. ಕೊಂಚ ಹೊತ್ತಿನಲ್ಲಿ ಅವರೆಲ್ಲರ ಕಿರುಚಾಟ ಸ್ತಬ್ಧವಾಯಿತು. ಭುಗಿಲೆದ್ದ ಬೆಂಕಿ ಅವರನ್ನೆಲ್ಲ ಮುಗಿಸಿ ಬೂದಿ ಮಾಡಿತು. ಚಿತೆಯಲ್ಲಿಯ ದೇಹಗಳೆಲ್ಲವೂ ಸುಟ್ಟು ಭಸ್ಮವಾದ ಮೇಲೆ

ಬ್ರಾಹ್ಮಣರು ಏನೇನೋ ಕರ್ಮಗಳನ್ನು ಆಚರಿಸಿ. ಸುಟ್ಟ ಮೂಳೆಗಳನ್ನು ಸಂಗ್ರಹಿಸಿದರು. ಅದನ್ನು ಪಟ್ಟೆ ಪಿತಾಂಬರಗಳಲ್ಲಿ ಸುತ್ತಿಕೊಂಡು ರಾಮೇಶ್ವರಕ್ಕೆ ತೆಗೆದುಕೊಂಡು ಹೋಗಿ ಸಮುದ್ರದಲ್ಲಿ ಹಾಕಿದರು. ಆಮೇಲೆ ಕೊಂಡದ ಮೇಲೆ ಮುಚ್ಚಿ ಅದರ ಮೇಲೆ ಸತ್ತ ರಾಜನ ಹಾಗೂ ಆತನ ಪತ್ನಿಯರ ಹೆಸರಿನಲ್ಲಿ ವೀರಗಲ್ಲು ಮತ್ತು ಸತಿಕಲ್ಲುಗಳನ್ನು ನಿಲ್ಲಿಸಿ ದೇವಸ್ಥಾನ ವೊಂದನ್ನು ಕಟ್ಟಿದರು.

ಅಬ್ಬೆ ಜೆ.ಎ.ಡುಬಾ ಕ್ರಿ.ಶ.೧೭೯೨ರಲ್ಲಿ ಕ್ರಿಶ್ಚಯನ್ ಮಿಷಿನರಿಯಾಗಿ ಫ್ರಾನ್ಸ್‌ನಿಂದ ಭಾರತಕ್ಕೆ ಬಂದ. ಇಲ್ಲಿಯ ಅನೇಕ ಪ್ರದೇಶಗಳಲ್ಲಿ ಸಂಚಾರ ಕಾರ್ಯ ನಿರ್ವಹಿಸಿ ಮದ್ರಾಸ್ ಪ್ರೆಸಿಡೆನ್ಸಿಗಳಲ್ಲಿ ತನ್ನ ಪುಸ್ತಕದಲ್ಲಿ ವಿಧವೆಯ ಸ್ಥಿತಿಗತಿ ಹಾಗೂ ಪದ್ಧತಿಯ ಕುರಿತು ವಿಸ್ತಾರವಾಗಿ ಹೀಗೆ ದಾಖಲಿಸಿದ್ದಾನೆ.[೧೫] ವಿಧವೆಯಾದವಳು ಗಂಡನೊಡನೆ ಸಹಗಮನ ಮಾಡುವ ಈ ಕರಾಳ ಪದ್ಧತಿಯನ್ನು ಕಾನೂನು ಮೂಲಕ ತಡೆಗಟ್ಟದಿದ್ದರೂ ಇದು ಉತ್ತರ ಭಾರತದಲ್ಲಿಯೇ ಸ್ವಲ್ಪ ಕಡಿಮೆಯಾಗಿದೆ. ಮಹಮ್ಮದೀಯರು ಈ ಪದ್ಧತಿಯನ್ನು ಸಹಿಸುವುದಿಲ್ಲ. ಆದರೆ ಕೆಳಗಿನ ಅಧಿಕಾರಿಗಳಿಗೆ ಲಂಚ ಕೊಟ್ಟು ನೆರವೇರಿಸುತ್ತಾರೆ.

ಯುರೋಪಿಯನ್ ಆಡಳಿತದ ಸಮಯದಲ್ಲಿ ಇದನ್ನು ತಪ್ಪಿಸಲು ಸಾಧ್ಯವಾಗಲಿಲ್ಲ. ಆದರೂ ಸರ್ಕಾರ ಈ ಪದ್ಧತಿ ತಪ್ಪಿಸಲು ಕ್ರಮ ರೂಪಿಸುತ್ತಿದೆ. ಈ ಪದ್ಧತಿಯ ಆಚರಣೆಯ ಮ್ಯಾಜಿಸ್ಟ್ರೇಟರ್ ಅನುಮತಿಯ ಅಗತ್ಯವಿತ್ತು. ಮ್ಯಾಜಿಸ್ಟ್ರೇಟರು ಬುದ್ಧಿವಾದ ತಿಳುವಳಿಕೆ ಹೇಳಿ ತಪ್ಪಿಸಲು ಪ್ರಯತ್ನ ಪಡುತ್ತಿದ್ದರು. ಅನಿವಾರ್ಯವಾದಲ್ಲಿ ಅನುಮತಿಸುತ್ತಿದ್ದರು. ಬಂಗಾಳ ಪ್ರಾಂತ್ಯ ಒಂದರಲ್ಲಿಯೇ ಕ್ರಿ.ಶ.೧೮೧೭ರಲ್ಲಿ ೭೦೬ ಜನ ಸತಿಯರಾದ ಲೆಕ್ಕವಿದೆ. ಗಂಗಾನದಿಯ ಅಕ್ಕಪಕ್ಕದಲ್ಲಿ ಈ ಪದ್ಧತಿ ಹೆಚ್ಚಾಗಿ ಅನುಷ್ಠಾನದಲ್ಲಿದೆ. ಪ್ರಥಮವಾಗಿ ಈ ಪದ್ಧತಿ ಕ್ಷತ್ರಿಯರಲ್ಲಿ ಆರಂಭವಾಯಿತು. ರಾಜನ ಹೆಂಡತಿ ಸತಿಹೋಗದೆ ಇದ್ದರೆ ಅದು ಅವಮಾನಕರವೆಂದು ಭಾವನೆ ಬೇರೂರಿತ್ತು. ಸತಿಯಾಗುವುದು ಸಾಧ್ವಿಯ ಲಕ್ಷಣ ಎಂದು ಭಾವಿಸಲಾಗಿತ್ತು. ಸತಿಯಾದವಳು ಬೂದಿ ಮೂಳೆಗಳನ್ನು ತುಂಬಾ ಶ್ರದ್ಧೆಯಿಂದ ಸಂಗ್ರಹಿಸಿ ಅವುಗಳನ್ನು ಹೂಳಿ ಆ ಸ್ಥಳದಲ್ಲಿ ಅವಳ ನೆನಪಿಗೆ ಕಲ್ಲುಗಳನ್ನು ನೆಡುವುದು ಒಂದು ದೊಡ್ಡ ಕಾರ್ಯ. ಈ ರೀತಿ ನಿಲ್ಲಿಸಿದ ಮಹಾಸತಿ ಕಲ್ಲುಗಳಿಗೆ ಹೆಂಗಸರು ಹೇರಳವಾಗಿ ಬಂದು ಭಕ್ತಿಯಿಂದ ಪೂಜೆ ಸಲ್ಲಿಸಿ ಸತಿಯಾದವಳು ಆಶೀರ್ವಾದ ಪಡೆಯುವ ವಾಡಿಕೆಯಿದೆ. ಸತಿಯಾಗಲು ಇಚ್ಛೆ ಇರದೇ ಇರುವ ಹೆಂಗಸಿಗೆ ನಾನಾ ವಿಧವಾದ ಭೋದನೆಗಳು ಒಪ್ಪುವ ಬಲವಂತಗಳು ನಡೆಯುತ್ತವೆ. ಒಪ್ಪದಿದ್ದಲ್ಲಿ ಮಾದಕ ವಸ್ತುಗಳನ್ನು ಕೊಟ್ಟು ಆಕೆ ಸತಿ ಹೋಗುವಂತೆ ಮಾಡುತ್ತಾರೆ. ಇದರಿಂದ ತಮ್ಮ ಮನೆತನಕ್ಕೆ ಗೌರವ ಎಂಬ ನಂಬಿಕೆಯಿದೆ. ಗಂಡನ ಮೇಲಿನ ಅಪಾರ ಪ್ರೇಮದಿಂದ ಹೆಂಡತಿ ಸಹಗಮನ ಮಾಡುತ್ತಾಳೆ, ಎಂದು ನಾನು

ಒಪ್ಪುವುದಿಲ್ಲ. ಹಿಂದೂಗಳಲ್ಲಿ ಗಂಡ ಹೆಂಡಿರ ಪ್ರೇಮ ಎಷ್ಟು ಬೂಟಾಟಿಕೆಯದು ಎಂದು ನಾನು ಅರಿತಿದ್ದೇನೆ. ಆದರೆ ಒಮ್ಮೆ ಸತಿಯಾಗಲು ಒಪ್ಪಿದ ಹೆಂಗಸು ಮತ್ತೆ ತನ್ನ ಮನಸ್ಸು ಬದಲಾಯಿಸುವಂತಿಲ್ಲ. ಸ್ವರ್ಗದಲ್ಲಿ ಸತಿಯಾದವಳಿಗೆ ಸ್ಥಾನವಿದೆ ಎಂಬ ಕಲ್ಪನೆಯ ಮೂಲಕ ಬ್ರಾಹ್ಮಣ ಪುರೋಹಿತರು ಹಾಗೂ ನೆಂಟರಿಷ್ಟರೂ ಪ್ರೋತ್ಸಾಹಿಸುವುದರೊಂದಿಗೆ ಆಕೆಗೆ ಒಳ್ಳೊಳ್ಳೆಯ ಪಟ್ಟೆ ಪೀತಾಂಬರಗಳಿಂದಲೂ ಹೇರಳವಾದ ಆಭರಣಗಳಿಂದಲೂ ಅಲಂಕರಿಸಿ ಚಿತೆಯ ಬಳಿಗೆ ಕರೆದೊಯ್ಯುತ್ತಾರೆ. ಇಂತಹ ಕರಾಳ ದೃಶ್ಯದ ವರ್ಣನೆ ಮಾಡಲು ನನ್ನಿಂದ ಸಾಧ್ಯವಾಗುತ್ತಿಲ್ಲ.

ಶೂದ್ರರು ಸತ್ತವರನ್ನು ಹೂಳುತ್ತಾರೆ. ಈ ಸಮಯದಲ್ಲಿ ಸತಿಯಾಗುವವಳು ಗಂಡನ ಶವದೊಡನೆ ಸಮಾಧಿಸತಿಯಾಗುತ್ತಾಳೆ. ಇಂತಹ ಹಲವು ಪ್ರಸಂಗಗಳನ್ನು ನಾನು ನೋಡಿದ್ದೇನೆ. ಅಲ್ಲದೆ ಕ್ರಿ.ಶ.೧೭೯೪ರಲ್ಲಿ ತಂಜಾವೂರ ಜಿಲ್ಲೆಯ ಪುದುಪೇಟೆ ಎಂಬ ಊರಿನಲ್ಲಿ ಕೋಮಟಿ ಒಬ್ಬ ಗೌರವಸ್ಥ ಮನುಷ್ಯ ಸಾವನ್ನಪ್ಪಿದ. ಆತನ ಮೂವತ್ತು ವರ್ಷದ ಹೆಂಡತಿ ಸತಿಯಾಗುವುನೆಂದು ಹೇಳಿದಾಗ ನೋಡಲು ಜನ ಸಾಗರವೇ ಬಂದಿತು. ಸತ್ತವನ ಶವವನ್ನು ಹೂವು, ಹಸಿರೆಲೆಗಳಿಂದ ಶೃಂಗರಿಸಿದ ಮಂಟಪದಲ್ಲಿ ಚಕ್ಕಲು ಬೊಕ್ಕಲಾಗಿ ಕುಳ್ಳಿರಿಸಿದರು. ಅದಕ್ಕೆ ವಸ್ತ್ರ ಒಡವೆಗಳನ್ನು ತೊಡಿಸಿದರು. ಬಾಯಲ್ಲಿ ತಾಂಬೂಲ ಇಟ್ಟರು. ಶವದ ಮೆರವಣಿಗೆ ಹೊರಟರು. ಸತಿಯಾಗು ವವಳನ್ನು ಸಿಂಗಾರ ಮಾಡಿದ ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ಶವದ ಹಿಂದೆ ಹೊತ್ತುಕೊಂಡು ಹೊರಟರು. ಪಲ್ಲಕ್ಕಿಯ ಸುತ್ತಮುತ್ತ ಜನವೋ ಜನ. ಸತಿ ಹೋಗುವವಳ ಕಡೆ ಜನರೆಲ್ಲರೂ ಕೈಮುಗಿದು 'ಮಹಾತಾಯಿ ನಮ್ಮವ್ವ' ಎಂದೆಲ್ಲಾ ಹೇಳುತ್ತಿದ್ದರು. 'ಎಂಥಾ ಭಾಗ್ಯವವ್ವ ನಿನ್ನದು' ಸ್ವರ್ಗವೇ ಸಿಕ್ಕಿತಲ್ಲವ್ವ ನಿಂಗೆ ಎಂದು ಹೊಗಳುತ್ತಿದ್ದರು. ನಮ್ಮ ಕಷ್ಟ ಪರಿಹಾರ ಮಾಡಮ್ಮಾ ನಮಗೊಂದು ಮಾತು ಹೇಳವ್ವಾ ಎಂದು, ಹೆಂಗಸರು ಆಕೆಯ ಹತ್ತಿರ ಹೋಗಿ ಕೈಮುಗಿದು ಕೇಳಿಕೊಳ್ಳುತ್ತಿದ್ದರು. ಅವಳು 'ನಿನಗೆ ಒಳ್ಳೆದಾಗುತ್ತೆ ಹೋಗಮ್ಮ' ನಿನಗೆ ಮನೆ ತುಂಬಾ ಮಕ್ಕಳಾಗುತ್ತವೆ. ನಿನ್ನ ಸಂಸಾರ ಸುಖವಾಗಿರುತ್ತೆ. ನಿನ್ನ ಗಂಡ ನಿನ್ನ ಚೆನ್ನಾಗಿ ನೋಡಿಕೊಳ್ಳುತ್ತಾನೆ. ಎನ್ನುವ ಮಾತುಗಳನ್ನು ಒಬ್ಬೊಬ್ಬರಿಗೆ ಒಂದೊಂದು ರೀತಿಯಲ್ಲಿ ಹೇಳಿ ಎಲ್ಲರಿಗೂ ಆಶೀರ್ವದಿ ಸುತ್ತಿದ್ದಳು. ವೀಳ್ಯೆದೆಲೆ ಕೊಟ್ಟು ಅದನ್ನು ಪಡೆಯಲು ಜನ ನಾ ಮುಂದು ತಾ ಮುಂದು ಎಂದು ನುಗ್ಗುತ್ತಿದ್ದರು. ಎಲೆ ದೊರಕಿತೆಂದ ಕೂಡಲೆ ಭಕ್ತಿಯಿಂದ ಕೈಮುಗಿದು ತಮ್ಮ ಬಾಳು ಸಾರ್ಥಕವಾಯಿತೆಂದು ಭಾವಿಸುತ್ತಿದ್ದರು. ಶವದ ಮೆರವಣಿಗೆ ತುಂಬಾ ವಿಜ್ರಂಭಣೆಯಿಂದ ಕೂಡಿತ್ತು. ವಿಧವೆ ಗಂಭೀರ ನಗುವಿನ ಜೊತೆ ಶಾಂತಿ, ಸಮಾಧಾನದಿಂದ ಇದ್ದಳು. ಸತಿಯಾಗುವ ಸ್ಥಳ ಸಮೀಪಿಸುತ್ತಿದ್ದಂತೆ ಆಕೆಯ ಮನಸ್ಸು ತಳಮಳಗೊಂಡತ್ತಿತ್ತು. ನೆಟ್ಟ ನೋಟದಿಂದ ಚಿತೆಯ ಕೊಂಡದ ಕಟ್ಟೆಯನ್ನು ನೋಡುತ್ತಿದ್ದಳು.

ಭಯ ಬೀತಿಯಿಂದ ಕೂಡಿದ ಆಕೆಯ ಕೈಕಾಲುಗಳು ನಡುಗಲಾರಂಭಿಸಿದವು. ಇನ್ನೇನೂ ಮೂರ್ಛೆ ಹೋಗುವವಳಂತೆ ಕಂಡಳು. ಇದನ್ನ ಅರಿತ ಬ್ರಾಹ್ಮಣ ಪುರೋಹಿತರು, ಬಂಧು ಬಳಗದವರು ಆಕೆಯ ಬಳಿಗೆ ಓಡಿಹೋಗಿ ಸಮಾದಾನ ಮಾಡಲೆತ್ನಿಸಿದರು. ಆದರೆ ಅದರಿಂದ ಏನೂ ಪ್ರಯೋಜನವಾಗಲಿಲ್ಲ. ಮೌನವಾಗಿರುವ ಅವಳನ್ನು ಪಲ್ಲಕ್ಕಿಯಿಂದ ಇಳಿಸಿ ಹತ್ತಿರದಲ್ಲಿದ್ದ ಕೊಳದ ಬಳಿಗೆ ಕರೆದುಕೊಂಡು ಹೋದರು. ಆಕೆ ತನ್ನ ಬಟ್ಟೆ ಬರೆ ಆಭರಣಗಳ ಸಮೇತ ನೀರಿನಲ್ಲಿ ಮುಳಗಿದಳು. ನಂತರ ಚಿತೆಯ ಬಳಿಗೆ ಕರೆದುಕೊಂಡು ಬಂದರು. ಸುತ್ತಲು ಬ್ರಾಹ್ಮಣರು ಕೈಯಲ್ಲಿ ಒಂದೊಂದು ತುಪ್ಪದ ಗಡಿಗೆ ಉರಿಯೋ ಕೊಳ್ಳಿ ಹಿಡಿದಿದ್ದರು. ನೆಂಟರಿಷ್ಟರೂ ಕತ್ತಿ ಬಂಧೂಕ ಮುಂತಾದ ಆಯುಧಗಳನ್ನು ಹಿಡಿದಿದ್ದರು. ಇದನ್ನು ನೋಡಿದ ನಾನು ಕೇಳಿದಾಗ ಸತಿಯಾಗುವವಳು ಈ ಸಮಯದಲ್ಲಿ ಮನಸ್ಸು ಬದಲಿಸಬಾರದು ಇದರಿಂದ ಅಪಶಕುನವಾಗುತ್ತದೆ ಎಂದು ನನಗೆ ಹೇಳಿದರು. ಕೊನೆಗೆ ಪುರೋಹಿತ ಸನ್ನೆ ಮಾಡಿದ ಅಥವಾ ವಿಧವೆಯ ಮೈಮೇಲೆ ಇದ್ದ ಒಡವೆಗಳನ್ನು ತೆಗೆದು ಬ್ರಾಹಣರು ಆಕೆಯನ್ನು ಚಿತೆಯ ಬಳಿಗೆ ಎಳೆದುಕೊಂಡು ಹೋದರು. ಚಿತೆಯನ್ನು ಮೂರು ಸುತ್ತು ಬಳಸುವಂತೆ ಮಾಡಿದರು. ಮೊದಲ ಸುತ್ತು ಹೇಗೋ ತಡವರಿಸುತ್ತಾ ಬಳಸಿದಳು. ಎರಡನೇ ಸುತ್ತಿನಲ್ಲಿ ಆಕೆ ಮೂರ್ಛೆ ಹೋದಳು. ಮೂರ್ಛೆ ಆಕೆಯನ್ನು ಹೊತ್ತುಕೊಂಡು ಮೂರು ಸುತ್ತು ಮುಗಿಸಿ ಸತ್ತ ಗಂಡನ ಶವದ ಬಳಿ ಮಲಗಿಸಿದರು. ನೆರೆದ ಜನ 'ಉಘೇ ಉಘೇ' ಎಂದು ಕೂಗಿದರು. ಬ್ರಾಹ್ಮಣರು ಒಣ ಕಟ್ಟಿಗೆಯ ಮೇಲೆ ತುಪ್ಪ ಸುರಿದು ಸುತ್ತ ಕೊಳ್ಳಿ ತೋರಿಸಿದರು. ಅರೆಕ್ಷಣದಲ್ಲಿ ಭುಗಿಲ್ ಎಂದು ಬೆಂಕಿ ಹೊತ್ತಿಕೊಂಡಿತು. ಆಗ ಆಕೆಯ ಹೆಸರನ್ನು ಮೂರು ಸಲ ಕರೆದರು. ಆ ಕಡೆಯಿಂದ ಯಾವ ಉತ್ತರವೂ ಬರಲಿಲ್ಲ.

ಇದೇ ರೀತಿ ಇನ್ನೊಂದು ಪ್ರಸಂಗವನ್ನು ನಾನು ನೋಡಿದ್ದೇನೆ. ಕ್ರಿ.ಶ.೧೮೦೧ರಲ್ಲಿ ತಂಜಾವೂರಿನ ರಾಜ ಮರಣ ಹೊಂದಿದ. ಅವನಿಗೆ ४ ಜನ ಪತ್ನಿಯರು. ಅವರ ಪೈಕಿ ಇಬ್ಬರನ್ನು ಸಹಗಮನಕ್ಕೆ ಬ್ರಾಹ್ಮಣರು ಆಯ್ಕೆ ಮಾಡಿದರು. ಒಂದು ದಿನದಲ್ಲಿ ಶವಸಂಸ್ಕಾರದ ಎಲ್ಲಾ ಏರ್ಪಡುಗಳು ಮುಗಿದವು. ಅರಮನೆಯಿಂದ ४ ಹರದಾರಿ ದೂರದಲ್ಲಿ ಸುಮಾರು ಆಳದ ಹದಿನೈದು ಅಡಿ ಚದುರದ ಗುಂಡಿ ತೋಡಿದರು. ಅದರಲ್ಲಿ ಗಂಧದ ಸೌಧೆ ಜೋಡಿಸಿದರು. ಅದರ ಮೇಲೆ ಗಂಧದ ಅಟ್ಟಿಗೆ ಮಾಡಿದರು. ಈ ಅಟ್ಟಣೆಗೆ ಕೊಂಚ ಅಲುಗಾಡಿಸಿದರೆ ಥಟಕ್ಕನೆ ಕುಸಿಯುವ ಊರೆಗಳನ್ನು ಜೋಡಿಸಿದರು. ನಾಲ್ಕು ಮೂಲೆಗಳಲ್ಲಿ ತುಪ್ಪ ತುಂಬಿದ ನಾಲ್ಕು ಹಂಡೆಗಳನ್ನು ಇಟ್ಟರು. ಶವದ ಮೆರವಣಿಗೆಯು ಹೊರಟಾಗ ಸುತ್ತ ಶಸ್ತ್ರಸುಸಜ್ಜಿತ ಸಿಪಾಯಿಗಳು ಅದರ ಹಿಂದೆ ಕೊಂಬು, ಕಹಳೆ ಮೊದಲಾದ ವಾದ್ಯಗಳೊಂದಿಗೆ ತೆರೆದ ಪಲ್ಲಕ್ಕಿಯಲ್ಲಿ ರಾಜನ

ಪಾರ್ಥಿವ ಶರೀರ. ಇದರ ಹಿಂದೆ ರಾಜಗುರು, ಅಧಿಕಾರಗಳು, ನೆಂಟರಿಷ್ಟರು ನಡೆದುಕೊಂಡು ಹೊರಟಿದ್ದರು. ಅನೇಕ ಬ್ರಾಹ್ಮಣರು ಶೋಕ ಸೂಚಕವಾಗಿ ಬರಿದೆಲೆಯಲ್ಲಿದ್ದರು. ಇವರನ್ನು ಹಿಂಬಾಲಿಸಿ ಸತಿಯಾಗಲು ಹೊರಟ ಪತ್ನಿಯರನ್ನು ಹೊತ್ತ ಪಲ್ಲಕ್ಕಿಗಳಿದ್ದವು. ಆ ಪತ್ನಿಯರು ಮೈತುಂಬಾ ಒಡವೆಗಳು. ಜನಸಮೂಹ ಅವರ ಹತ್ತಿರ ಹೋಗದಂತೆ ತಡೆಯಲು ಶಸ್ತ್ರ ಸುಸಜ್ಜಿತ ಸಿಪಾಯಿಗಳಿದ್ದರು. ಪತ್ನಿಯರಿಗೆ ತೀರಾ ಸಮೀಪದಲ್ಲಿ ಅವರ ಸಖಿಯರು, ಗೆಳತಿಯರು ಹತ್ತಿರದ ನೆಂಟರಿಷ್ಟರು ಇದ್ದರು.

ಶವಸಂಸ್ಕಾರದ ಸ್ಥಳವನ್ನು ತಲುಪಿದ ನಂತರ ಸತಿಯಾಗಲು ಇಬ್ಬರು ಪತ್ನಿಯರು ಸ್ನಾನ ಮಾಡಿ ಹಲವಾರು ಶಾಸ್ತ್ರಗಳನ್ನು ಆಚರಿಸಿದರು. ಆಗ ಅವರಲ್ಲಿ ಭಯ ಭೀತಿಗಳೇನೂ ಕಾಣಲಿಲ್ಲ. ಆದರೆ ಚಿತೆಯನ್ನು ಪ್ರದಕ್ಷಿಣೆ ಮಾಡುವಾಗ ಮುಖದಲ್ಲಿ ಬದಲಾವಣೆಗಳು ಕಂಡುಬಂದವು. ಈ ಮಧ್ಯೆ ರಾಜನ ಶವವನ್ನು ಚಿತೆಯ ಮೇಲಿಡಲಾಯಿತು. ತದನಂತರ ರಾಣಿಯರಿಬ್ಬರೂ ವಸ್ತ್ರ ಒಡವೆ ಸಮೇತರಾಗಿ ಚಿತೆಯನ್ನೇರಿ ರಾಜನ ಎಡ ಬಲ ಭಾಗದಲ್ಲಿ ಮಲಗಿಕೊಂಡು ತಮ್ಮ ತೋಳನ್ನು ಶವದ ಮೇಲಿಟ್ಟ ಪರಸ್ಪರ ಕೈ ಜೋಡಿಸಿದರು. ರಾಜಗುರು ಗಟ್ಟಿಯಾಗಿ ಮಂತ್ರಗಳನ್ನು ಘೋಷಿಸಿ ತೀರ್ಥವನ್ನು ಪ್ರೋಕ್ಷಣೆ ಮಾಡಿದ. ನಾಲ್ಕು ಹಂಡೆಗಳಲ್ಲಿರುವ ತುಪ್ಪವನ್ನು ಅವರ ಮೇಲೆ ಸುರಿಯಲಾಯಿತು. ಒಂದು ಕಡೆ ರಾಜನ ವಾರಸುದಾರ ಬೆಂಕಿ ತೀರಿಸಿದ. ಇನ್ನೊಂದು ಕಡೆ ರಾಜಗುರು ಉಳಿದೆಡೆಯಲೆಲ್ಲಾ ಬ್ರಾಹ್ಮಣರು ಬೆಂಕಿ ಹಚ್ಚಿದರು. ಧಗಧಗನೆ ಉರಿಯಲಾಂಭಿಸಿದಾಗ ನೆಟ್ಟಿರುವ ಊರುಗಳನ್ನು ತೆಗೆದರು. ಅಟ್ಟಿಗೆ ಧಡಕ್ಕನೆ ಕೆಳಕ್ಕೆ ಬಿದ್ದಿತು. ರಾಣಿಯರ ಹತ್ತಿರ ಸಂಬಂಧಿಗಳು ಅವರ ಹೆಸರು ಹಿಡಿದು ಕರೆದರು. ಆ ಜ್ವಾಲೆಯಿಂದ 'ಏನ್' ಎಂಬ ಮಾತು ಕೇಳಿಸಿತಂತೆ ಎಂದು ಹೇಳಿದರು. ಇದು ನನಗೆ ಸುಳ್ಳು ಎನಿಸಿತು. ಬೆಂಕಿ ಉರಿದು ಆರಿದ ಮೇಲೆ ಭಸ್ಮವಾದವರ ಅಸ್ತಿಗಳ ಬೂದಿಯನ್ನು ತಾಮ್ರದ ಪಾತ್ರೆಗಳಲ್ಲಿ ತುಂಬಿದರು. ಅವುಗಳಿಗೆ ಹೊಸ ರಾಜನ ಮುದ್ರೆ ಹಾಕಲಾಯಿತು. ಇದಾದ ನಂತರ ೩೦ ಜನ ಬ್ರಾಹ್ಮಣರು ಆ ಬೂದಿಯನ್ನು ತೆಗೆದುಕೊಂಡು ಕಾಶಿಯಲ್ಲಿರುವ ಗಂಗಾನದಿಗೆ ಬಿಟ್ಟು ಬರುವ ಏರ್ಪಾಡು ಮಾಡಿದರು. ಅವರೆಲ್ಲರೂ ಮರಳಿ ಬಂದು ರುಜುವಾತು ಕೊಟ್ಟಾಗ ಅವರಿಗೆ ಸೂಕ್ತ ಮರ್ಯಾದೆ ಮಾಡಲಾಯಿತು. ೧೨ ಜನ ಬ್ರಾಹ್ಮಣರು ಅಸ್ತಿಯ ಬೂದಿಯನ್ನು ಅನ್ನದಲ್ಲಿ ಸೇರಿಸಿ ಊಟ ಮಾಡಿದರು. ಇದು ಸಾವನ್ನಪ್ಪಿದವರನ್ನು ಪಾಪಗಳಿಂದ ಮುಕ್ತ ಮಾಡುವುದು ಈ ಪದ್ಧತಿಯ ಉದ್ದೇಶ ಎನ್ನುತ್ತಾರೆ. ಆದರೆ ಹಣದ ಆಸೆಗೆ ಎಂತಹ ಅಸಹ್ಯ ಕೆಲಸಗಳಲ್ಲಿ ತೊಡಗುತ್ತಾರೆ ಎಂಬುದು ವಿಪರ್ಯಾಸ.

ರಾಜನ ಶವಸಂಸ್ಕಾರ ಮತ್ತು ತಿಥಿಯಲ್ಲಿ ಭಾಗವಹಿಸಿದ ಬ್ರಾಹ್ಮಣರಿಗೆ ಕೈತುಂಬ ದಾನ ದಕ್ಷಿಣೆಗಳು ದೊರಕುವವು ರಾಜಪುರೋಹಿತನಿಗೆ ಆನೆಯ ಮರ್ಯಾದೆ. ಶವ ಹಾಗೂ ಇಬ್ಬರು ರಾಣಿಯರನ್ನು ಹೊತ್ತ ಮೂರು ಪಲ್ಲಕ್ಕಿಗಳನ್ನು ಮೂರು ಜನ ಬ್ರಾಹ್ಮಣರಿಗೆ ದಾನ ಮಾಡುವುದು, ಇನ್ನುಳಿದವರಿಗೆ ವಸ್ತ್ರದಾನ, ದ್ರವ್ಯದಾನ ಕೊಡಲಾಯಿತು. ಶವದ ಮೆರವಣಿಗೆಯ ಸಂದರ್ಭದಲ್ಲಿ ಚಿಲ್ಲರೆ ಹಣಗಳನ್ನು ದಾರಿಯುದ್ದಕ್ಕೂ ಚೆಲ್ಲಿಕೊಂಡು ಹೋಗಲಾಯಿತು. ಶವಸಂಸ್ಕಾರದ ಸ್ಥಳದಲ್ಲಿ ಹನ್ನೆರಡು ಅಡಿ ವ್ಯಾಸದ ಸಮಾಧಿ ಮಂದಿರ ನಿರ್ಮಿಸಲಾಯಿತು. ಅಲ್ಲಿಗೆ ಆ ರಾಜ್ಯ ಆಳುವ ರಾಜನು ಆಗಾಗ್ಗೆ ಹೋಗಿ ಸಾಷ್ಟಾಂಗ ನಮಸ್ಕಾರ ಮಾಡಿ ಪೂಜೆ ಸಲ್ಲಿಸಿ ಬರುತ್ತಾನೆ. ಬೇರೆ ಜನರೂ ಸಮಾಧಿಗಳ ಬಳಿಗೆ ಹೋಗಿ ಪೂಜೆ ಸಲ್ಲಿಸುತ್ತಾರೆ. ಕ್ರಿ.ಶ.೧೮೦೨ರಲ್ಲಿ ಸಮಾಧಿಯಾದ ರಾಜ ರಾಣಿಯರ ಅನೇಕ ಪವಾಡಗಳು ಅಲ್ಲಿ ನಡೆದಿವೆ ಎಂಬ ದಂತ ಕಥೆಗಳಿವೆ.

ಇದನ್ನೆಲ್ಲಾ ನೋಡಿದರೆ ಮನುಷ್ಯನ ಬುದ್ಧಿ ಎಂತಹ ಅಸಂಬದ್ಧ ಹಾಗೂ ವಿಚಿತ್ರ ರೀತಿಗಳಲ್ಲಿ ಕೆಲಸ ಮಾಡುತ್ತದೆ ಎಂಬುದನ್ನು ಅರಿಯಬಹುದಾಗಿದೆ. ಗೋವನ್ನು ಕೊಲ್ಲಬಾರದೆಂದು ಹೇಳುವ ಬ್ರಾಹ್ಮಣರು ಇಂಥ ಕ್ರೂರ ಸತ್ಯಗಳಿಗೆ ಹೇಸದಿರುವುದನ್ನು ನೋಡಿದಾಗ ಅವರ ನೀಚತನ ಎಷ್ಟರಮಟ್ಟಿನದು ಎಂದು ಯೋಚಿಸಬೇಕಾಗುತ್ತದೆ.

ಫ್ರಾನ್ಸ್‌ಸ್ವಾಸ್ ಬೆರ್ನ್ಯೇ ಸಹಗಮನ ಹೋದವಳ ಜೊತೆಗೆ ಸೇವಕಿಯರು ತಮ್ಮ ಒಡತಿ ಸಹಗಮನ ಮಾಡಿಕೊಂಡಂತೆ ತಾವು ಆತ್ಮಬಲಿದಾನಕ್ಕೆ ನಾನು ನೋಡಿದ್ದೇನೆ ಎಂದು, ತನ್ನ ಪತ್ರದಲ್ಲಿ ಘಟನೆಯೊಂದನ್ನು ದಾಖಲಿಸಿದ್ದಾನೆ. "ನಾನು ಭಾರತದ ಪ್ರವಾಸ ಮಾಡುವ ಸಂದರ್ಭದಲ್ಲಿ ಬತ್ತಿದ ಕೆರೆಯ ಅಂಗಳದಲ್ಲಿ ಒಂದು ಆಳವಾದ ಗುಂಡಿ ತೋಡಿ ಸೌದೆ ತುಂಬಿ ಅದರ ಮೇಲೆ ಸತ್ತವನ ಶವವನ್ನು ಮಲಗಿಸಿದ್ದರು. ಆತನ ಹೆಂಡತಿ ಅದೇ ಸೌದೆಯ ಮೇಲೆ ಕುಳಿತ್ತಿದ್ದಳು. ನಾಲ್ಕಾರು ಜನ ಬ್ರಾಹ್ಮಣರು ಕೆಲವೊಂದು ಆಚರಣೆಗಳನ್ನು ಆಚರಿಸುತ್ತಾ ಮಂತ್ರ ಪಠಿಸುತ್ತಾ ಸೌದೆಗೆ ಬೆಂಕಿ ಹೊತ್ತಿಸುತ್ತಿದ್ದರು. ಮಧ್ಯವಯಸ್ಸಿನ ಐದಾರು ಹೆಂಗಸರು ಕೈ ಕೈ ಹಿಡಿದುಕೊಂಡು ಹಾಡುತ್ತಾ ಹೆಜ್ಜೆ ಹಾಕುತ್ತ ಕೊಂಡದ ಸುತ್ತ ಕುಣಿಯುತ್ತಿದ್ದರು. ಅನೇಕ ಜನ ಹೆಂಗಸರು ಗಂಡಸರು ಇದನ್ನು ನೋಡಲು ನೆರೆದಿದ್ದರು."[೧೩೦] ಎಂದು ದಾಖಲಿಸುತ್ತಾನೆ.

ಸತಿ ಹೋಗುವವಳ ಬಟ್ಟೆಗೆ ಸುಗಂಧ ತೈಲ ಹಚ್ಚಿದ್ದರು. ಕೊಂಡಕ್ಕೆ ಯಥೇಚ್ಛವಾಗಿ ತುಪ್ಪವನ್ನು ಸುರಿದಿದ್ದರು. ಮೈಗೆ ಶ್ರೀಗಂಧ ತೇದು ಸವರಿದ್ದರು. ಇದರಿಂದ ಚಿತೆಗೆ ಬೆಂಕಿ ತೋರಿಸಿದ ಕೂಡಲೆ ಧಗ್ಗೆಂದು ಹೊತ್ತಿಕೊಂಡಿತು. ಆಗ ಸತಿ ಹೋಗುವವಳ ಮುಖ ಒಂದಿಷ್ಟಾದರೂ ಭಯಗೊಳ್ಳಲಿಲ್ಲ. ಆಕೆ ೫,೨ ಎಂಬ ಪದಗಳನ್ನು ಉಚ್ಚರಿಸಿದಳೆಂದು ಅಲ್ಲಿಯ ಜನ ಹೇಳಿದರು. ಅದರ ಅರ್ಥ. ಇದೇ ಗಂಡನೊಡನೆ ಇದುವರೆಗೆ ನಾನು ಐದು ಸಲ ಚಿತೆಯನ್ನೇರಿದ್ದೇನೆ.

ಇನ್ನೆರಡು ಸಲ ಚಿತೆ ಏರಿದರೆ ನಾನು ವೈಕುಂಠವಾಸಿಯಾಗಿ ಪುನರ್ಜನ್ಮದಿಂದ ಪಾರಾಗುವೆ ಎಂಬುದಾಗಿದೆ ಎಂದರು. ಇದನ್ನು ಕೇಳಿ ನನಗೆ ವಿಚಿತ್ರವೆನಿಸಿತು. ಮುಂದೆ ಕೊಂಡದ ಸುತ್ತ ಹಾಡುತ್ತ ಕುಣಿಯುತ್ತ ಇರುವುದು ಒಂದು ಪದ್ಧತಿ ಅಷ್ಟೇ ಎಂದುಕೊಂಡೆ. ಆದರೆ ಅಲ್ಲಿ ನಡೆದಿರುವುದೆ ಬೇರೆ ಸತಿಹೋಗುವ ಒಡತಿಗೆ ಐವರು ಹೆಂಗಸರು ಸೇವಕಿಯರಿದ್ದರು. ಗಂಡನ ಕಾಯಿಲೆಯಿಂದ ದುಃಖಪಡುತ್ತಿದ್ದ ಆಕೆಯನ್ನು ನೋಡಲಾರದೆ ಸೇವಕಿಯರು ತಾವು ಚಿತೆಯಲ್ಲಿ ಬಿದ್ದು ಸಾಯುತ್ತೇವೆಂದು ವಾಗ್ದಾನ ಮಾಡಿದ್ದರೆಂದು ಹೇಳಿದರು. ಇದನ್ನು ಗಮನಿಸುತ್ತಿರುವಾಗಲೇ ಒಬ್ಬಳ ಬಟ್ಟೆಗೆ ಬೆಂಕಿ ತಾಗಿದೆಯೆಂದು ಇನ್ನೊಬ್ಬಳು ಬಿದ್ದಳು. ಕೊನೆಗೆ ಮೂವರು ಹೆಂಗಸರು ಕೈ ಹಿಡಿದುಕೊಂಡು ಲಯಬದ್ಧವಾಗಿ ಕುಣಿಯುತ್ತಾ ಒಬ್ಬರಾದ ಮೇಲೊಬ್ಬರು ಕೊಂಡದಲ್ಲಿ ಧುಮುಕಿದರು. ಇದನ್ನು ನೋಡಿ ಇದೊಂದು ಘೋರ ಕೃತ್ಯವೇ ಸರಿ ಎಂದೆನಿಸಿತು. ಇದನ್ನು ನೋಡಿದ ನನಗೆ ಇದು 'ವೇಳೇವಾಳಿ' ಸಂಪ್ರದಾಯವನ್ನು ನೆನಪಿಸಿದೆ ಎಂದೆನಿಸಿತು ಹೀಗೆ ವಿದೇಶಿ ಪ್ರವಾಸಿಗರು ತಾವು ಕಂಡ ಸತಿಪದ್ಧತಿಯ ಘಟನೆಗಳನ್ನು ತಮ್ಮ ಪ್ರವಾಸಿ ವರದಿಗಳಲ್ಲಿ ಉಲ್ಲೇಖಿಸುವುದರೊಂದಿಗೆ ಸ್ತ್ರೀ ಬದುಕಿನ ಸಾಂಸ್ಕೃತಿಕ ಇತಿಹಾಸವನ್ನು ಕಟ್ಟಿಕೊಟ್ಟಿದ್ದಾರೆ.

ಅಡಿಟಿಪ್ಪಣಿಗಳು

೧. ಎಂ.ಎಂ.ಕಲಬುರ್ಗಿ(ಸಂ), ಶಾಸನ ಸೂಕ್ತಿ ಸುಧಾರ್ಣವ, ೧೯೯೭ ಪು.೭

೨. E. C.. IV ಚಾಮರಾಜನಗರ ೧೨೨, ಕ್ರಿ. ಶ. ೧೧೮೯ ಸೆಪ್ಟಂಬರ್ ೧೯, ತೆಳ್ಳನೂರು, ಚಾಮರಾಜನಗರ (ತಾ) ಮೈಸೂರು(ಜಿ)

೩. ಎಂ. ಎಂ. ಕಲಬುರ್ಗಿ, ಸಮಾಧಿ–ಬಲಿದಾನ–ವೀರಮರಣ ಸ್ಮಾರಕಗಳು, ೧೯೮೦, ಪು.೧೦೦

೪. ಚೆನ್ನಕ್ಕ ಎಲಿಗಾರ, ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ, ಪ್ರಬಂಧದ ಮುನ್ನುಡಿಯಿಂದ ಪು.೧

೫. ಎಂ.ಎಂ. ಕಲಬುರ್ಗಿ(ಸಂ), ಶಾಸನ ಸೂಕ್ತಿ ಸುಧಾರ್ಣವ, ೧೯೯೭, ಪು.೭

೬. ಆರ್. ಶೇಷಶಾಸ್ತ್ರೀ, ಶಾಸನ ಪರಿಚಯ, ಪು.೧ ಉದ್ಧೃತ: ಡಾ.ಕೆ.ರವಿಂದ್ರನಾಥ, ಕನ್ನಡ ದಾಖಲು ಸಾಹಿತ್ಯ, ೨೦೦೦, ಪು.೩೧

೭. ಕನ್ನಡ ನಿಘಂಟು, ಸಂ–೮ ಪು.೧೦೭

೮. ಅಜಿತನಾಥ ತೀರ್ಥಂಕರ ಪುರಾಣ, ಪು.೧೨–೧೮

೯. E. C.VIII–೫೨೩, ಕವಡಿ ಗ್ರಾಮ, ಸೊರಬ, ಕ್ರಿ.ಶ.ಸು.೬ನೇ ಶತಮಾನ.

೧೦. ಎಂ.ಚಿದಾನಂದಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು.೩೧೫

೧೧. ಎಸ್.ಆಯ್.ಆಯ್.IX –೧– ೫೬ ಕೊಗಳಿ, ಹಡಗಲಿ, ಕ್ರಿ.ಶ.೯೦೮–೯೦೯

೧೨. ಬಿ.ಎ.ಸಾಲೆತೊರೆ, ಸೋಸಿಯಲ್ ಆ್ಯಂಡ ಪೋಲಿಟಿಕಲ್ ಲೈಫ್ ಇನ್ ದಿ ವಿಜಯನಗರ ಎಂಪಾಯರ್, ಪು.೮೮

೧೩. E. C.VIII–೨–೧೦೪, ಹಿರೇಆವಲಿ ಗ್ರಾಮ, ಸೊರಬ, ಕ್ರಿ.ಶ.೧೧೫೪

೧೪. ಅದೇ, ೧೦೬ ಹಿರೇಆವಲಿ ಕ್ರಿ.ಶ.೧೩೭೬

೧೫. ೩೯೬ ಕಾಲ ಸು. ಕ್ರಿ.ಶ.೧೨೦೦

೧೬. ೩೯೬ ಕಾಲ ಸು.ಕ್ರಿ.ಶ.೧೨೦೦

೧೭. ನಂ ೩೫೬ ೧೯೨೩, ಸಿಡೇನೂರು, ಹಿರೇಕೆರೂರು, (ತಾ)ಧಾರವಾಡ

೧೮. ನಂ–೮೯, ಕ್ರಿ.ಶ.೧೩೮೬ ಮೇ ೧೫, ಮಲ್ಲಂದೂರು, ಅನಂತಪುರ, ಸಾಗರ(ತಾ) ಶಿವಮೊಗ್ಗ(ಜಿ)

೧೯. ಚಾಮರಾಜನಗರ ೧೨೨, ಕ್ರಿ.ಶ.೧೧೯೬ ಸೆಪ್ಟಂಬರ್ ೧೯, ತೆಳ್ಳನೂರು, ಚಾಮರಾಜನಗರ (ತಾ) ಚಾಮರಾಜನಗರ(ಜಿ)

೨೦. ಚಿಕ್ಕಮಗಳೂರು ೫೧, ಕ್ರಿ.ಶ.೧೨ನೇ ಶತಮಾನ, ಅರಸಿನಗುಪ್ಪೆ, ಚಿಕ್ಕಮಗಳೂರು (ತಾ/ಜಿ)

೨೧. ತೀರ್ಥಹಳ್ಳಿ ೨೩, ಅರಗ, ತೀರ್ಥಹಳ್ಳಿ (ತಾ) ಶಿವಮೊಗ್ಗ (ಜಿ)

೨೨. ಶಿಕಾರಿಪುರ ೩೦೨, ಕ್ರಿ. ಶ. ೧೪೦೧, ಸಂಡರ, ಶಿಕಾರಿಪುರ (ತಾ) ಶಿವಮೊಗ್ಗ (ಜಿ)

೨೩. E. C.VII ನಾಗಮಂಗಲ ೧೭೧, ಕ್ರಿ. ಶ. ೧೨ನೇಯ ಶತಮಾನ, ಕಸಲಗೆರೆ, ನಾಗಮಂಗಲ (ತಾ) ಮಂಡ್ಯ (ಜಿ)

೨೪. ಎಸ್.ಆಯ್.ಆಯ್. ೧೫ ನಂ. ೬೫೧, ಕ್ರಿ. ಶ. ೧೩೮೪, ಮನಗುಂಡಿ, ಧಾರವಾಡ (ತಾ/ಜಿ)

೨೫. ಕ್ರಿ.ಶ.೧೪೫೧ ಡಿಸೆಂಬರ ೧೩, ಕುಗ್ವೆ, ತಾಳಗುಪ್ಪ ಸಾಗರ (ತಾ) ಶಿವಮೊಗ್ಗ (ಜಿ)

೨೬. E. C. XIII, ಭದ್ರಾವತಿ ೩೮, ಕ್ರಿ.ಶ.೧೧೩೪ ಏಪ್ರೀಲ್ ೧೧, ಹುತ್ತ, ಭದ್ರಾವತಿ (ತಾ) ಶಿವಮೊಗ್ಗ (ಜಿ)

೨೭. E. C.VII, ಹೊನ್ನಾಳಿ ೯೨, ಕ್ರಿ.ಶ.೧೪೦೩, ಚಿಕ್ಕಹಾಲಿವಾಣ, ಹೊನ್ನಾಳಿ (ತಾ) ಶಿವಮೊಗ್ಗ (ಜಿ)

೨೮. E. C.VII, ಹೊನ್ನಾಳಿ ೯೩, ಕ್ರಿ.ಶ.೧೪೦೩ ಚಿಕ್ಕಹಾಲಿವಾಣ, ಹೊನ್ನಾಳಿ (ತಾ) ಶಿವಮೊಗ್ಗ (ಜಿ)

೨೯. ಅದೇ, ೯೫ ಕ್ರಿ.ಶ.೧೪೦೩, ಚಿಕ್ಕಹಾಲಿವಾಣ, ಹೊನ್ನಾಳಿ(ತಾ) ಶಿವಮೊಗ್ಗ(ಜಿ)

೩೦. ಶಾಸನ ಅಧ್ಯಯನ ಸಂಪುಟ-೩, ಬಾಳೆಹಳ್ಳಿ, ಚಿಕ್ಕಮಗಳೂರು (ತಾ), ಪು.೯೭

೩೧. ಸಮಾಧಿಸತಿ ಎಸ್, ೨೧೮-ನಂ ೪೧೩, ಕ್ರಿ. ಶ. ೧೪೦೪, ಮಾರ್ಚ್ ೧೬ ಹೆಡೆಯಾಳ, ರಾಣೆಬೆನ್ನೂರ (ತಾ) ಧಾರವಾಡ (ಜಿ)

೩೨. ಮಾರ್ಚ್ ೧೯೩೦, ನಂ. ೫೮, ಕ್ರಿ.ಶ.೧೪೦೪, ಡಿಸೆಂಬರ್ ೨ ಕೆಳದಿ, ಸಾಗರ (ತಾ) ಶಿವಮೊಗ್ಗ (ಜಿ)

೩೩. ಪಾಟೀಲ ಭೋಜರಾಜ, ನಾಗರಖಂಡ ೭೦ ಒಂದು ಅಧ್ಯಯನ, ಆನಂದಪುರಂ, ಮಲೆನಾಡು ವೀರಶೈವ ಅಧ್ಯಯನ ಸಂಸ್ಥೆ, ೧೯೯೫, ಶಾಸನ ಸಂಖ್ಯೆ ೩೨, ಕ್ರಿ.ಶ. ೧೪೦೬ ಸಾತೇನಹಳ್ಳಿ, ಹೀರೆಕೆರೂರ(ತಾ) ಧಾರವಾಡ(ಜಿ)

೩೪. ಎಸ್-೨ ೧೮, ೨೭೬ ಕ್ರಿ. ಶ. ೧೪೦೨ ಜುಲೈ ೨೪, ಕಣ್ವಿ, ಗದಗ(ತಾ) ಧಾರವಾಡ (ಜಿ)

೩೫. ಮಾರ್ಚ್ ೧೯೩೦, ನಂ. ೫೭, ಕ್ರಿ.ಶ.೧೪೧೦ ಮಾರ್ಚ, ಜಂಬಾನೆ ಗ್ರಾಮ, ಸಾಗರ(ತಾ) ಶಿವಮೊಗ್ಗ(ಜಿ)

೩೬. E.C.VIII ಸೊರಬ, ೧೬೩, ಕ್ರಿ.ಶ.೧೪೧೨, ಹರೂರ, ಸೊರಬ(ತಾ) ಶಿವಮೊಗ್ಗ(ಜಿ)

೩೭. E.C.XIII ತೀರ್ಥಹಳ್ಳಿ ೨೧೩, ಕ್ರಿ.ಶ.೧೪೧೭ ಆಗಸ್ಟ್ ೧೭, ಮೇಗರಹಳ್ಳಿ, ತೀರ್ಥಹಳ್ಳಿ (ತಾ)ಶಿವಮೊಗ್ಗ(ಜಿ)

೩೮. E.C.VII ಮಂಡ್ಯ ೭೩, ಪುರ, ಮಂಡ್ಯ (ತಾ/ಜಿ)

೩೯. E.C.VII ಶಿಕಾರಿಪುರ ೩೭, ಕ್ರಿ.ಶ.೧೪೧೭, ಹಿರೇಹಾರಕ, ಶಿಕಾರಿಪುರ (ತಾ)

ಶಿವಮೊಗ್ಗ (ಜಿ)

೪೦. E.C.VIII ಸೊರಬ, ೨೪ ಕ್ರಿ.ಶ.೧೪೨೯, ಮನೆಮನೆ, ಸೊರಬ(ತಾ) ಶಿವಮೊಗ್ಗ(ಜಿ)

೪೧. ಕೆ.ಆಯ್.ವಿ. ನಂ. ೧೧೬, ಕ್ರಿ.ಶ.೧೪೩೭, ಬೇಡಕಣಿ, ಸಿದ್ಧಾಪುರ,(ತಾ) ಉತ್ತರಕನ್ನಡ(ಜಿ)

೪೨. ಕೆ.ಆಯ್.ವಿ. IV ನಂ. ೨೭, ಕ್ರಿ.ಶ.೧೪೩೮ ಆಗಸ್ಟ ೧೫, ಹಿರೇಕೆರೂರ, ಹಿರೇಕೆರೂರ(ತಾ) ಧಾರವಾಡ(ಜಿ)

೪೩. E.C.IV ನಂ.೨೧೦, ಕ್ರಿ.ಶ.೧೪೩೯ ಜೂನ್ ೫, ಕುಣಗಹಳ್ಳಿ, ಗುಂಡ್ಲಪೇಟೆ (ತಾ) ಚಾಮರಾಜನಗರ(ಜಿ)

೪೪. E.C.VII , ಶಿಕಾರಿಪೂರ ೩೬, ಕ್ರಿ.ಶ.೧೪೪೩, ಹಿರೇಹಾರಕ, ಶಿಕಾರಿಪೂರ (ತಾ) ಶಿವಮೊಗ್ಗ(ಜಿ)

೪೫. ಎಂ.ಎ.ಆರ್, ೧೯೩೦, ನಂ. ೫೯, ಕ್ರಿ.ಶ.೧೪೫೩ ಅಕ್ಟೋಬರ್ ೧೭, ಕೆಳದಿ, ಸಾಗರ(ತಾ), ಶಿವಮೊಗ್ಗ(ಜಿ)

೪೬. ಕೆ.ಆಯ್.ವ್ಹಿ. ನಂ. ೧೧೭, ಕ್ರಿ.ಶ.೧೪೫೬ ಸೆಪ್ಟೆಂಬರ್ ೧, ಶಿರಾಳಗಿ, ಸಿದ್ಧಾಪೂರ(ತಾ) ಉತ್ತರ ಕನ್ನಡ(ಜಿ)

೪೭. ಎಮ್.ಎ.ಆರ್. ೧೯೪೨, ನಂ. ೫೨, ಕ್ರಿ.ಶ.೧೪೫೮, ಚಿತ್ರಟ್ಟಿಹಳ್ಳಿ, ಸೊರಬ (ತಾ) ಶಿವಮೊಗ್ಗ(ಜಿ)

೪೮. ಕೆ.ಆಯ್.ವಿ. ನಂ.೧೨೨, ಕ್ರಿ.ಶ.೧೫ನೇಯ ಶತಮಾನ, ಹೊಸಾಳಿ, ಕಾರವಾರ (ತಾ) ಉತ್ತರಕನ್ನಡ(ಜಿ)

೪೯. E.C.VIII, ಸೊರಬ ೧೬೫, ಕ್ರಿ.ಶ.೧೫೫೯, ಹರೂರ, ಸೂರಬ(ತಾ) ಶಿವಮೊಗ್ಗ(ಜಿ)

೫೦. E.C.XII ಶಿರಾ, ನಂ. ೫೨, ಕ್ರಿ.ಶ.೧೫೭೭, ಕಸಬೆ, ನಾದೂರ (ಹೊ) ಶಿರಾ (ತಾ) ತುಮಕೂರ(ಜಿ)

೫೧. ಎಮ್.ಎ.ಆರ್.೧೯೩೦, ನಂ. ೭೨ ಕ್ರಿ.ಶ.೧೫೮೨ ನವೆಂಬರ್೨೯, ಗೌಜಗ್ರಾಮ, ಸಾಗರ (ತಾ) ಶಿವಮೊಗ್ಗ(ಜಿ)

೫೨. ಎಮ್.ಎ.ಆರ್. ೧೯೩೧, ನಂ.೭೭, ಕ್ರಿ.ಶ.೧೫೮೬ ನವೆಂಬರ್ ೧, ಅರಸಾಳುನಗರ ಶಿವಮೊಗ್ಗ(ಜಿ)

೫೩. ಕೆ.ಆಯ್.ವಿ. ನಂ.೧೨೭, ಕ್ರಿ.ಶ.೧೬ನೇ ಶತಮಾನ, ಐಸೂರ ಸೇಡಂ(ತಾ) ಗುಲಬರ್ಗಾ(ಜಿ)

೫೪. ಎಮ್.ಎ.ಆರ್.೧೯೩೫. ನಂ.೭. ಕ್ರಿ.ಶ.೧೬ನೆಯ ಶತಮಾನ, ನಾಗಸಮುದ್ರ, ಮೊಳಕಾಲ್ಮುರ (ತಾ) ಚಿತ್ರದುರ್ಗ(ಜಿ)

೫೫. E. C.IV ಚಾಮರಾಜನಗರ, ನಂ.೭೦, ಕ್ರಿ.ಶ.೧೬ನೇ ಶತಮಾನ, ಮಾದಕಹಳ್ಳಿ, ಚಾಮರಾಜ ನಗರ(ತಾ) ಮೈಸೂರು (ಜಿ)

೫೬. E.C.IX , ಚನ್ನಪಟ್ಟಣ ನಂ.೨೨೦, ಭೈರನಾಯಕನಹಳ್ಳಿ, ಚನ್ನಪಟ್ಟಣ(ತಾ) ಬೆಂಗಳೂರು(ತಾ)

೫೭. E.C.VIII, ನಂ.೭ ದೊಡ್ಡಮಾಗೋಡು, ನಗರ(ತಾ) ಶಿವಮೊಗ್ಗ(ಜಿ)

೫೮. E.C.VIII, ನಂ.೭ ಕಳೂರು, ನಗರ(ತಾ) ಶಿವಮೊಗ್ಗ(ಜಿ)

೫೯. E.C.VIII, ಸಾಗರ ನಂ.೮, ಕ್ರಿ. ಶ. ೧೪೧೦, ಮರೂರು, ಸಾಗರ(ತಾ) ಶಿವಮೊಗ್ಗ(ಜಿ)

೬೦. E.C.VIII, ಸಾಗರ ನಂ.೨೩, ಹೆನ್ನಗೇರಿ, ಸಾಗರ (ತಾ) ಶಿವಮೊಗ್ಗ (ಜಿ)

೬೧. E.C.VIII, ಸಾಗರ ನಂ. ೩೫, ಕ್ರಿ.ಶ.೧೬೯೯, ಕೆಳದಿ, ಸಾಗರ (ತಾ) ಶಿವಮೊಗ್ಗ (ಜಿ)

೬೨. E.C..VIII, ಸಾಗರ, ನಂ. ೫೧, ಕ್ರಿ.ಶ.೧೪೩೨ ಕಾನಲೆ, ಸಾಗರ(ತಾ) ಶಿವಮೊಗ್ಗ(ಜಿ)

೬೩. E.C.VIII, ಸಾಗರ ನಂ. ೭೪, ಕ್ರಿ.ಶ.೧೪೨೧, ಕಿಪಡಿ, ಸಾಗರ(ತಾ) ಶಿವಮೊಗ್ಗ(ಜಿ)

೬೪. E. C.VIII, ಸಾಗರ, ನಂ.೭೫, ಕ್ರಿ.ಶ.೧೪೩೫ ಕಿಪಡಿ, ಸಾಗರ (ತಾ) ಶಿವಮೊಗ್ಗ (ಜಿ)

೬೫. E.C.VIII, ಅದೇ ಸಾಗರ, ನಂ. ೭೬, ಕ್ರಿ.ಶ.೧೪೧೭, ಕಿಪಡಿ, ಸಾಗರ (ತಾ) ಶಿವಮೊಗ್ಗ (ಜಿ)

೬೬. E.C.VIII, ಸಾಗರ, ನಂ.೭೮, ದೇಣಿಗೆ, ಸಾಗರ (ತಾ) ಶಿವಮೊಗ್ಗ (ಜಿ)

೬೭. E.C..VIII,, ಸೊರಬ, ನಂ. ೩೭, ಗುಂಡನೂರು, ಸೊರಬ (ತಾ) ಶಿವಮೊಗ್ಗ (ಜಿ)

೬೮. E.C..VIII, ಸೊರಬ, ನಂ. ೪೦, ಕಲ್ಲಂಬಿ, ಸೊರಬ(ತಾ) ಶಿವಮೊಗ್ಗ (ಜಿ)

೬೯. E.C.VIII, ಸೊರಬ, ನಂ.೪೧, ಕಲ್ಲಂಬಿ, ಸೊರಬ(ತಾ) ಶಿವಮೊಗ್ಗ(ಜಿ)

೭೦. E.C.VIII, ಸೊರಬ, ನಂ. ೮೧, ಚಿತ್ರಟ್ಟಿಹಳ್ಳಿ, ಸೊರಬ(ತಾ) ಶಿವಮೊಗ್ಗ (ಜಿ)

೭೧. E.C. VIII, ಸೊರಬ, ನಂ.೯೨, ಕುಂಸಿ, ಸೊರಬ(ತಾ) ಶಿವಮೊಗ್ಗ(ಜಿ)

೭೨. E.C.VIII, ಸೊರಬ, ನಂ.೩೬,ಗುಂಡನೂರು, ಸೊರಬ(ತಾ) ಶಿವಮೊಗ್ಗ(ಜಿ)

೭೩. E.C.VIII,, ಸೊರಬ, ನಂ.೨೮೨, ದೇವಸ್ಥಾನದ ಹಕ್ಕಲು, ಸೊರಬ (ತಾ) ಶಿವಮೊಗ್ಗ

(ಜಿ)

೭೪. E.C. VII, ಶಿಕಾರಿಪುರ ೯೩, ಕ್ರಿ.ಶ.೧೪೨೨, ಬಳ್ಳಿಗಾವಿ, ಶಿಕಾರಿಪುರ(ತಾ) ಶಿವಮೊಗ್ಗ(ಜಿ)

೭೫. E.C.VII ಹೊನ್ನಾಳಿ ೨೪, ಸೊರಟೂರು, ಹೊನ್ನಾಳಿ (ತಾ) ಶಿವಮೊಗ್ಗ (ಜಿ)

೭೬. ಎಂ.ಎ.ಆರ್. ೧೯೨೫, ನಂ–೮೩, ಕರಿಗಾನಹಳ್ಳಿ, ದೊಡ್ಡ ಕುರುಗೋಡು (ಹೋ) ಗೌರಿಬಿದನೂರು (ತಾ)

೭೭. E.C.VIII, ಸೊರಬ, ೧೫೯, ಉದ್ರಿ, ಸೊರಬ (ತಾ) ಶಿವಮೊಗ್ಗ (ಜಿ)

೭೮. E.C.VII, ಶಿವಮೊಗ್ಗ–೯ ಮಂಡಳಿಮಠ, ಶಿವಮೊಗ್ಗ (ತಾ\ಜಿ)

೭೯. E.C.–VIII, ಸೊರಬ, ೪೫೬, ಕ್ರಿ.ಶ.೧೪೭೫, ಬನ್ನೂರು, ಸೊರಬ(ತಾ) ಶಿವಮೊಗ್ಗ (ಜಿ)

೮೦. E.C.VIII, ಸೊರಬ, ೫೩೭, ಕ್ರಿ.ಶ.ಹುನವಳ್ಳಿ, ಸೊರಬ (ತಾ) ಶಿವಮೊಗ್ಗ (ಜಿ)

೮೧. ಬಿ.ಎಸ್.ಶೇತೆ, ಕರ್ನಾಟಕಲ್ಲಿ ಸತಿ ಪದ್ಧತಿ, ಪು.

೮೨. ಎಂ.ಚಿದಾನಂದಮೂರ್ತಿ, ವೀರಗಲ್ಲುಗಳು ಮತ್ತು ಮಾಸ್ತಿಕಲ್ಲುಗಳು, ಪು.೪೧

೮೩. ಬಸವರಾಜ ಕಲ್ಗುಡಿ, ಮಹಾಸತಿ ಆಚರಣೆ ಒಂದು ಅಧ್ಯಯನ, ‘ಮಾಸ್ತ್ಯಮ್ಮ ಪು. ೩೩೧; ಆನಂದಕಂದ, ಮಾತನಾಡುವ ಕಲ್ಲು, ಕಂಕಣದ ಕೈ, ಪು.೬೦

೮೪. ಎಚ್.ಎಲ್.ನಾಗೇಗೌಡ(ಸಂ), ಪ್ರವಾಸಿ ಕಂಡ ಇಂಡಿಯಾ, ಸಂಪುಟ ೨, ಪು.೨೯೬

೮೫. ಅದೇ, ಸಂಪುಟ ೪, ಪು.೪೪೭

೮೬. ಉದೃತ: ಬಿ.ಎಸ್.ಶೇತೆ, ಕರ್ನಾಟಕದಲ್ಲಿ ಸತಿಪದ್ಧತಿ, ಯರಬಳ್ಳಿ, ಚಳಕೆರೆ, ತಾ, ಚಿತ್ರದುರ್ಗ ಜಿ, ತಿಮ್ಮನಹಳ್ಳಿ, ಮದ್ದೂರ (ತಾ) ಮಂಡ್ಯ (ಜಿ) ಶೆಟ್ಟಿಹಳ್ಳಿ, ಗುಂಡ್ಲಪೇಟೆ, ತಾ, ಮೈಸೂರು ಜಿ. ಹಾಲ್ಲೂರ, ತುಮಕೂರ ಜಿ. ಕೊಂಡದಹಳ್ಳಿ, ಚನ್ನಗಿರಿ(ತಾ) ಶಿವಮೊಗ್ಗ(ಜಿ)

೮೭. ನಿರಂಜನ್(ಅನು), ಸಂಗಮ್ ರಾಜಕೀಯ ಸಾಮಾಜಿಕ ವ್ಯವಸ್ಥೆ, ಎನ್. ಸುಬ್ರಮಣಿಯನ್ (ಮೂಲ), ಪು.೩೬೪

೮೮. E.C.VIII, ೫೨೩, ಕವಡಿಗ್ರಾಮ, ಸೊರಬ, ಕ್ರಿ.ಶ.೬ನೆಯ ಶತಮಾನ

೮೯. ಕನ್ನಡ ವಿಶ್ವಕೋಶ ೧, ೧೯೭೩, V ಪು.೩೨೫,

೯೦. ಕನ್ನಡ ನಿಘಂಟು, ಸಂಪುಟ-೨, ೧೯೭೫, ಪು.೨೪೫,

೯೧. ಎಂ.ಎಂ.ಕಲಬುರ್ಗಿ(ಸಂ), ಕರ್ನಾಟಕದ ಕೈಫಿಯತ್ತುಗಳು, ಪು.೧೨

೯೨. ಕಲಬುರ್ಗಿ ಎಂ.ಎಂ. ಕರ್ನಾಟಕದ ಕೈಫಿಯತ್ತುಗಳು, ೧೯೯೪, ಪು.೪೭೫-೪೭೬

೯೩. ಅದೇ, ಪು.೫೫೭ ಉದ್ಧೃತ: ಜೆ.ಎಂ.ನಾಗಯ್ಯ, ಆತ್ಮ ಬಲಿದಾನ, ೨೦೧೭, ಪು.೪೬೬

೯೪. ಎಚ್.ಎಲ್.ನಾಗೇಗೌಡ(ಸಂ), ಪ್ರವಾಸಿ ಕಂಡ ಇಂಡಿಯಾ, ಸಂಪುಟ-೧, ೨೦೦೬, ಪು.೬೭-೬೯

೯೫. ಅದೇ, ಪು.೫೫-೫೬

೯೬. ಅದೇ, ಪು.೨೭೪

೯೭. ಅದೇ, ಪು.೩೪೮

೯೮. ಎಚ್.ಎಲ್.ನಾಗೇಗೌಡ(ಸಂ), ಪ್ರವಾಸಿ ಕಂಡ ಇಂಡಿಯಾ, ಸಂಪುಟ-೨, ೧೯೬೬ ಪು.೫೨-೬೧

೯೯. ಎಚ್.ಎಲ್.ನಾಗೇಗೌಡ(ಸಂ), ಪ್ರವಾಸಿ ಕಂಡ ಇಂಡಿಯಾ, ಸಂಪುಟ-೨, ೨೦೦೬, ಪು.೬೭-೬೮

೧೦೦. ಅದೇ, ಪು.೩೯೨

೧೦೧. ಅದೇ, ಪು.೬೪

೧೦೨. ಅದೇ, ಪು.೧೧೩, ೧೧೪, ೧೨೫

೧೦೩. ಎಚ್.ಎಲ್.ನಾಗೇಗೌಡ(ಸಂ), ಪ್ರವಾಸಿ ಕಂಡ ಇಂಡಿಯಾ, ಸಂಪುಟ-೨, ೨೦೦೬, ಪು.೨೭೩-೨೭೫

೧೦೪. ಎಚ್.ಎಲ್.ನಾಗೇಗೌಡ(ಸಂ), ಪ್ರವಾಸಿ ಕಂಡ ಇಂಡಿಯಾ, ಸಂಪುಟ-೨, ೨೦೦೬, ಪು.೩೯೨

೧೦೫. ಅದೇ, ಪು.೪೨೭-೪೨೮

೧೦೬. ಅದೇ, ಪು.೪೭೦

೧೦೭. ಎಚ್.ಎಲ್.ನಾಗೇಗೌಡ(ಸಂ), ಪ್ರವಾಸಿ ಕಂಡ ಇಂಡಿಯಾ, ಸಂಪುಟ–೪, ೨೦೦೬, ಪು.೭೩

೧೦೮. ಅದೇ, ಪು.೧೪೭

೧೦೯. ಅದೇ, ಪು.೨೯೬–೨೯೭

೧೧೦. ಅದೇ, ಪು.೧೪೨–೧೪೩:

೧೧೧. ಅದೇ, ಪು. ೨೨೭–೨೩೨–೨೩೪

೧೧೨. ಎಚ್.ಎಲ್.ನಾಗೇಗೌಡ(ಸಂ), ಪ್ರವಾಸಿ ಕಂಡ ಇಂಡಿಯಾ, ಸಂಪುಟ–೫, ೨೦೦೬, ಪು.೩೫೨

೧೧೩. ಅದೇ, ಪು.೪೫೭–೪೫೯

೧೧೪. ಅದೇ, ಪು.೪೫೯–೪೬೦

೧೧೫. ಎಚ್.ಎಲ್.ನಾಗೇಗೌಡ(ಸಂ), ಪ್ರವಾಸಿ ಕಂಡ ಇಂಡಿಯಾ, ಸಂಪುಟ–೫, ೨೦೦೬, ಪು.೪೬೦

೧೧೬. ಅದೇ, ಪು.೪೫೯

೧೧೭. ಎಚ್.ಎಲ್.ನಾಗೇಗೌಡ(ಸಂ), ಪ್ರವಾಸಿ ಕಂಡ ಇಂಡಿಯಾ, ಸಂಪುಟ–೬, ೨೦೦೬, ಪು.೧೭೧

೧೧೮. ಅದೇ, ಪು.೨೯೨–೨೯೩

೧೧೯. ಎಚ್.ಎಲ್.ನಾಗೇಗೌಡ(ಸಂ), ಪ್ರವಾಸಿ ಕಂಡ ಇಂಡಿಯಾ, ಸಂಪುಟ–೭, ೨೦೦೬, ಪು.೮೦

೧೨೦. ಅದೇ, ಪು.೧೧೮

೧೨೧. ಅದೇ, ಪು.೧೪೩

೧೨೨. ಅದೇ, ಪು.೨೭೯–೨೮೦, ೨೮೮–೩೧೫.

೧೨೩. ಎಚ್.ಎಲ್.ನಾಗೇಗೌಡ(ಸಂ), ಪ್ರವಾಸಿ ಕಂಡ ಇಂಡಿಯಾ, ಸಂಪುಟ–೮, ೨೦೦೬, ಪು.೫೨.

೧೨೪. ಅದೇ, ಪು.೬೬

೧೨೫. ಎಚ್.ಎಲ್.ನಾಗೇಗೌಡ(ಸಂ), ಪ್ರವಾಸಿ ಕಂಡ ಇಂಡಿಯಾ, ಸಂಪುಟ-೮, ೨೦೦೬, ಪು.೪೨೦-೪೨೫

೧೨೬. ಅದೇ, ಸಂಪುಟ-೮, ಪು.೪೨೦-೪೨೫

೧೨೭. ಎಚ್.ಎಲ್.ನಾಗೇಗೌಡ(ಸಂ), ಪ್ರವಾಸಿ ಕಂಡ ಇಂಡಿಯಾ, ಸಂ.೮, ೨೦೦೭ ಪು.೬೬

೧೨೮. ಅದೇ. ಪು.೮೨-೮೩

೧೨೯. ಅದೇ, ಸಂ.೮ ಪು.೪೨೦-೪೨೫

೧೩೦. ಎಚ್.ಎಲ್.ನಾಗೇಗೌಡ(ಸಂ), ಪ್ರವಾಸಿ ಕಂಡ ಇಂಡಿಯಾ, ಸಂ.೫ ಪು.೨೦೮-೨೧೩

ಅಧ್ಯಾಯ : ಐದು

ಮೌಖಿಕ ಸಾಹಿತ್ಯದಲ್ಲಿ ಸತಿಪದ್ಧತಿ ನಿರ್ವಚನ

೫.೧. ಜನಪದ ಗೀತೆಗಳು

೫.೨. ಜನಪದ ಕಥೆಗಳು

ಅಧ್ಯಾಯ : ಐದು

ಮೌಖಿಕ ಸಾಹಿತ್ಯದಲ್ಲಿ ಸತಿಪದ್ಧತಿ ನಿರ್ವಚನ

ಕನ್ನಡ ಸಾಹಿತ್ಯದ ಒಂದು ಭಾಗವಾದ ಮೌಖಿಕ ಸಾಹಿತ್ಯ ಜೀವನ ಸಂಸ್ಕೃತಿಯ ಹುಡುಕಾಟ, ಬದುಕುವ ಸಂಸ್ಕೃತಿಯ ಬಯಕೆ, ಸಹಜ ಸಂಸ್ಕೃತಿ ಮತ್ತು ಭೋಗ ಸಂಸ್ಕೃತಿಯ ನಡುವಿನ ಸಂಘರ್ಷವಾಗಿದೆ. ಜನಪದರು ಈ ಸಾಹಿತ್ಯದಲ್ಲಿ ಬರೆದಿಡುವುದಕ್ಕಿಂತ ಆಚರಣೆಗಳ ಮೂಲಕ, ಹಾಡುವುದರ ಮೂಲಕ, ಕಥೆ ಹೇಳುವುದರ ಮೂಲಕ ನೆನಪಿನಲ್ಲಿರಿಸಿಕೊಂಡು ಬಂದಿದ್ದಾರೆ. ಪೂರಕ ಆಕರಗಳನ್ನು ಆಧಾರವಾಗಿಟ್ಟುಕೊಂಡು ಐತಿಹಾಸಿಕ ಘಟನೆಗಳನ್ನು ಕಳೆದ ಘಟನೆಗಳೆನ್ನದೆ ಕಣ್ಣ ಮುಂದೆ ನಡೆದಿರುವ ಮತ್ತು ನಡೆಯುತ್ತಿರುವ ಸಂಗತಿಗಳನ್ನು ಇಲ್ಲಿ ಇವರು ಸಾಹಿತ್ಯವಾಗಿಸಿದ್ದಾರೆ. ಈ ಸಾಹಿತ್ಯವು ಸತಿಪದ್ಧತಿಯ ವಿವಿಧ ಮುಖಗಳ ಪರಿಚಯಕ್ಕೆ ತುಂಬಾ ನೆರವಾಗಿದೆ. ಅಲ್ಲದೇ ಇದರ ಕುರಿತಾದ ವಿಚಾರಗಳನ್ನು, ಘಟನೆಗಳನ್ನು ವಿಸ್ತಾರವಾಗಿ ವರ್ಣಿಸುವ ಸಾಧನ ಸಂಪತ್ತು ಇದಾಗಿದೆ.

ಈ ಸಾಹಿತ್ಯದಲ್ಲಿ ಸತಿ ಹೋದ ಕಾಲದಿಂದ ಮೊದಲ್ಗೊಂಡು ಕಾಲಕಾಲದ ಜನಾಂಗದ ನಾಲಗೆಯ ಮೇಲೆ ಸತಿ ಘಟನೆಗಳು ಬದುಕಿಕೊಳ್ಳುತ್ತ ಬಂದು ಇಂದು ಇತಿಹಾಸದ ಪಳೆಯುಳಿಕೆಗಳಾಗಿ ಗುರುತಿಸಿಕೊಂಡಿರುವ ಮಾಹಿತಿಯಿದೆ. ಇಲ್ಲಿ ಸ್ತ್ರೀ ತನ್ನ ಜೀವನದ ಸಂಕೋಲೆಗಳೊಂದಿಗೆ ಹೊಂದಿಕೊಂಡಿರುವ ರೀತಿ ನೀತಿ ಸಾಂಪ್ರದಾಯಿಕ ಬವಣೆಗಳ ವೈಭವವನ್ನು ಹಾಡುಗಳಲ್ಲಿ, ಕಥೆಗಳಲ್ಲಿ, ಸೂಕ್ಷ್ಮಾತೀಸೂಕ್ಷ್ಮ ರೀತಿಯಲ್ಲಿ ವರ್ಣಿತವಾಗಿರುವುದನ್ನು ನೋಡುತ್ತೇವೆ. ಅಲ್ಲದೇ ಸತಿ ಘಟನೆಗಳನ್ನು ವಸ್ತುವಾಗಿಯುಳ್ಳ ಹಲವು ಜನಪದ ಗೀತೆಗಳು, ಕಥೆಗಳು ಸತಿ ಘಟನೆಗಳನ್ನೇ ಮುಖ್ಯವಾಗಿಟ್ಟುಕೊಂಡು ರಚನೆಗೊಂಡಿದ್ದರೆ, ಇನ್ನೂ ಕೆಲವು ಸತಿ ಆಚರಣೆಯ ಕುರುಹುಗಳನ್ನು ತೋರಿಸಿ ಕೊಡುತ್ತವೆ. ಜೊತೆಗೆ ಸತಿಯನ್ನು ದೇವತೆಯನ್ನಾಗಿ ಕಂಡುಕೊಂಡು ಪ್ರಾರ್ಥಿಸುವಂತಹ ಗೀತೆಗಳು ಇವೆ.

ಜನಪದರು ತಮ್ಮ ಕಣ್ಣೆದುರು ನಡೆದ ಸತಿ ಸಂಗತಿಗಳ ಕುರಿತಾಗಿ ಹಾಡು ಹೇಳಿ, ಕಥೆ ಕಟ್ಟಿ ಆ ಮೂಲಕ ಸತಿ ಘಟನೆಗಳನ್ನು ಅಮರಗೊಳಿಸಿದರು. ಇವೆಲ್ಲವುಗಳನ್ನು ಆಧರಿಸಿದ ಕೆಲವು ಕುರುಹುಗಳು, ಗೀತೆಗಳು, ಕಥೆಗಳು, ಆಚರಣೆಗಳು, ನಂಬಿಕೆಗಳು, ಜಾತ್ರೆಗಳು ಉತ್ಸವಗಳು ಇಂದಿಗೂ ಪ್ರಸ್ತುತವಾಗಿವೆ.

೫.೧. ಜನಪದ ಗೀತೆಗಳು

ಜನಪದ ಗೀತೆಗಳು ಜೀವನದ ಅನೇಕ ನಂಬಿಕೆಗಳ ಆಚರಣೆಗಳ ಹಿನ್ನೆಲೆಯಲ್ಲಿ ವ್ಯಕ್ತಗೊಳ್ಳುತ್ತವೆ. ಇವು ಸಂಸ್ಕೃತಿಯ ಮೌಲ್ಯವಾಗಿ ಬೆಳೆದು ಬಂದ ಮಹಾಸತಿಯ ಘಟನಾವಳಿಗಳನ್ನು ನಿರೂಪಿಸುವ ಕೆಲವು ಜನಪದ ಗೀತೆಗಳು ಸತಿ ಘಟನೆಯನ್ನೇ ಮುಖ್ಯವಾಗಿಟ್ಟುಕೊಂಡು ರಚನೆಗೊಂಡಿದ್ದರೆ, ಕೆಲವು ಗೀತೆಗಳು ಆಚರಣೆಯ ವಿವರಗಳನ್ನು ಒಳಗೊಂಡಿವೆ. ಇನ್ನೂ ಕೆಲವು ಗೀತೆಗಳು ಸತಿಯನ್ನು ದೇವತೆಯನ್ನಾಗಿ ಕಂಡುಕೊಂಡು ಸ್ತುತಿಸುವಂತವುಗಳಾಗಿವೆ. ಈ ಎಲ್ಲ ಆಚರಣೆಯ ವಿವರಗಳು ವರ್ಣನೆಗಳು ಹೆಚ್ಚು ಕಡಿಮೆ ಒಂದೇ ರೀತಿಯಲ್ಲಿರುತ್ತವೆ ಎಂಬುವುದನ್ನು ಕಂಡುಕೊಳ್ಳಲಾಗಿದೆ.

ವಡ್ಡಗೆರೆ ನಾಗಮ್ಮ, ಚಿಕ್ಕೋಳು ಹಿರಿದಿಮ್ಮವ್ವ, ಈರೋಬಿ, ನಾಗವ್ವ, ಮಹಾಸತಿ ಕಾಟವ್ವ, ಕೊಂಡದ ಮಾಸ್ತ್ಯಮ್ಮ, ಚನ್ನಪಟ್ಟಣದ ಮಾಸ್ತಿ, ಅರಕೆರೆ ಮಾಸ್ತಿ, ಮಹಾಸತಿ ವೀರತಿಮ್ಮವ್ವ, ಮಹಾಸತಿ ತಂಗ್ಯಮ್ಮ ಈ ಮೊದಲಾದವರನ್ನು ಕುರಿತ ಗೀತೆಗಳು ಸತಿ ಘಟನೆಗಳನ್ನೇ ಮುಖ್ಯವಾಗಿಟ್ಟುಕೊಂಡಿವೆ. ಇವು ಹೆಚ್ಚಾಗಿ ಸರಸ್ವತಿ, ಸಿದ್ಧರಾಮ, ರಾಮಲಿಂಗ ಮೊದಲಾದ ದೇವತೆಗಳ ಸ್ತುತಿಯೊಂದಿಗೆ ಹಾಗೂ ಸತಿಯಾದವಳ ಸ್ತುತಿಯೊಂದಿಗೆ ಪ್ರಾರಂಭಗೊಳ್ಳುತ್ತವೆ. ಮಹಾಸತಿ 'ವೀರತಿಮ್ಮವ್ವನ ಕಥನಗೀತೆ'ಯಲ್ಲಿ ಲಿಂಗ ಜಂಗಮನನ್ನು ನೆನೆಯುತ್ತ ಗೀತೆಗಳು ಪ್ರಾರಂಭವಾಗುತ್ತವೆ.[೧]

ಲಿಂಗಾನ ನೆನದಾರೆ ಬಂಗಾರ ಕೊಡುವೊನು
ಕಂದಗಳ ಕೊಡುವೋನು ಮನಿತುಂಬ
ಕಂದಗಳ ಕೊಡುವೋನು ಮನಿತುಂಬ। ಇರಿಯಟ್ಟಿ
ನಿಂಗಾ ಜಂಗಮನಾ ನೆನೆದಾರೆ॥

ಈ ಗೀತೆಯಲ್ಲಿ ಸತಿಯನ್ನು ದೇವತೆ ಎನ್ನುವ ಮೂಲಕ ದೇವರ ಸ್ತುತಿಯೊಂದಿಗೆ ನೆನೆಯಲಾಗುತ್ತದೆ. ದೇವತೆಯಾಗಿರುವ ಮಹಾಸತಿಯು ನಮ್ಮ ಇಷ್ಟಾರ್ಥಗಳನ್ನು ನೆರವೇರಿಸುತ್ತಾಳೆ ಎಂಬ ನಂಬಿಕೆಯಿದೆ. ಈ ನಂಬಿಕೆಯನ್ನೇ ಮುಂದಿಟ್ಟುಕೊಂಡು ಜನಪದರು ಕಂದನನ್ನು,

ಸಂಪತ್ತನ್ನು ಕೊಡುವಂತೆ ಕೇಳಿಕೊಳ್ಳುವ ಸಂಪ್ರದಾಯವು ಇರುವುದನ್ನು ಪ್ರಸ್ತುತ ಸಂದರ್ಭದಲ್ಲಿ ಮಹಾಸತಿ ದೇವಸ್ಥಾನಗಳಲ್ಲಿ ಕಾಣಬಹುದು.

ಜನಪದ ಗೀತೆಗಳಲ್ಲಿ ಹಲವು ಸತಿಗೀತೆಗಳು ಒಂದೇ ಚೌಕಟ್ಟಿನಲ್ಲಿ ರಚನೆಗೊಂಡಿವೆ. ಮೊದಲಿಗೆ ಪ್ರಾರ್ಥನೆ, ಅನಂತರದಲ್ಲಿ ಹೆಣ್ಣು ಕೇಳಲು ಬರುವುದು. ಹೆಣ್ಣು ಕೊಡುವುದಿಲ್ಲ ಎನ್ನುವುದು. ಹೆಣ್ಣನ್ನು ಕೊಡಲು ಒಪ್ಪುವುದು. ಅಪಶಕುನಗಳುಂಟಾಗುವುದು. ದುಸ್ವಪ್ನ ಕಾಣುವುದು ಅಥವಾ ದುರಂತದ ಚಿನ್ಹೆಗಳನ್ನು ಕಂಡುಕೊಳ್ಳುವುದು. ಮದುವೆ ಹಿರಿಯರ ಸಮ್ಮುಖದಲ್ಲಿ ನಡೆದು ಹೋಗುವುದು. ಹೋರಾಟದಲ್ಲೊ ಇತರೆ ಕಾರಣಗಳಿಂದಾಗಿಯೋ, ಗಂಡ ಮಡಿಯುವುದು. ಪತ್ನಿ ಸತಿಯಾಗಲು ನಿರ್ಧರಿಸುವುದು. ಬಂಧುಗಳು ಸತಿಯಾಗದಂತೆ ಕೇಳಿಕೊಳ್ಳುವುದು. ಕೊನೆಗೆ ಸ್ತ್ರೀ ಅನುಗಮನ, ಸಹಗಮನ, ಇಲ್ಲವೇ ಸಮಾಧಿಸತಿಯಾಗುವ ಮೂಲಕ ತಮ್ಮ ಜೀವವನ್ನೇ ಕಳೆದುಕೊಳ್ಳುವುದು. ಈ ರೀತಿ ಜನಪದ ಗೀತೆಗಳಲ್ಲಿ ಕಥೆಗಳಲ್ಲಿ ಕಥಾ ವಸ್ತುವಿನ ಬೆಳವಣಿಗೆಯನ್ನು ಒಂದು ನಿರ್ದಿಷ್ಟವಾದ ಕ್ರಮದಲ್ಲಿ ಕಾಣುತ್ತೇವೆ. ಈ ರೀತಿಯ ಜನಪದ ಸತಿ ಗೀತೆಗಳಲ್ಲಿ ಕೆಲವು ಗೀತೆಗಳು ಸತಿಯಾದವಳನ್ನೇ ನೆನೆಯುತ್ತ ಪ್ರಾರಂಭಗೊಳ್ಳುತ್ತವೆ.

ಮುತ್ತಿನ ಮಣೆಯಂಗೆ ಎತ್ತೇವೆ ದಣಿಗಾಳು
ಅತ್ತು ಕೆಂಡದಾಗೆ ಪಗಡಿಯ। ಚೆಂಡಾಡಳೋ
ಮುತ್ತೈದೆ ನಿನ್ನ ನೆನೆದೆನೆ ॥
ಅವಳದ ಮಣಿಯಂಗೆ ತಗೆದೇವೆ ದಣಿಗಾಳು
ತಣಿಗಂಡದಾಗೆ ಪಗಡೀಯ। ಚೆಂಡಾಡಳೋ
ಈರು ನಾಗಮ್ಮ ನಿನ್ನ ನೆನೆದೇನೆ।[೨]

ಈ ರೀತಿಯ ಪದ್ಯಗಳಲ್ಲಿ ಸತಿಯೇ ದೇವತೆಯಾಗಿ ಫಲವತ್ತತೆಗೆ ಕಾರಣಳಾಗಿದ್ದಾಳೆ. ಸರಸ್ವತಿ, ಸಿದ್ಧರಾಮ, ರಾಮಲಿಂಗ ಈ ಮೊದಲಾದ ದೇವತೆಗಳ ಸ್ತುತಿ ಸತಿ ಗೀತೆಗಳ ಪ್ರಾರಂಭದಲ್ಲಿ ಕಾಣಿಸಿಕೊಳ್ಳುವುದು ಅಪರೂಪವೇನಲ್ಲ. ಆದರೆ 'ಈರೋಬಿ ಖಂಡ ಕಾವ್ಯ'ದಲ್ಲಿ ಗಂಡನು ತೀರಿಕೊಂಡದ್ದನ್ನು ಶಕುನಗಳ ಮೂಲಕ ಸೂಚಿಸುತ್ತ ಗೀತೆ ಪ್ರಾರಂಭಗೊಳ್ಳುವುದು ವಿಶೇಷವಾಗಿದೆ. ಇಲ್ಲಿ ಪುರಾಣ ಸ್ವರೂಪವನ್ನು ಪಡೆಯುವ 'ಈರೋಬಿ'ಯ ಗಂಡ ಸತ್ತ ಸುದ್ದಿ ತಿಳಿಯುವುದು ಶಕುನಗಳ ಮೂಲಕ ಎಂಬುವುದನ್ನು ಅಭಿವ್ಯಕ್ತಿಸುವ ಪದ್ಯ ಹೀಗಿದೆ.[೩]

ಅತ್ತೆಮ್ಮ ಅತ್ತೆಮ್ಮ ಕೆಟ್ಟ ಸ್ವಪ್ನವ ಕಂಡೆ
ದಿತ್ತುಳ್ಳಿಕಾರ ನಿನಮಗ ಮನಗೋಮಂಚ
ನಿಟ್ಟೆಲ್ಲ ಕತ್ತಿ ಕವಿಯಾದೋ
ಉತ್ತದ ಮೇಗಲ ಕಾಗೆ ನೆತ್ತರ ಕಾರೋದ ಕಂಡೆ
ಶೆಟ್ಟಿ ಶಂಕರರಾಯ ಬದುಕೋದ ಸಪುನವ
ಕಂಡೆನಮ್ಮ ಕಾಲು ಗಳಿಗೇಲಿ
ಮೂಗುತಿ ಮುರಿಯೋದ ಕಂಡೆ ಮುಂಬಲ್ಲು ಸಿಡಿಯೋದ ಕಂಡೆ
ಗಿಂಡಿ ತುಂಡಾಗಿ ಒಡೆಯೋದ ಸಪುನವ
ಕಂಡೆ ನಮ್ಮ ಕಾಲು ಗಳಿಗೇಲಿ.

ಕನಸು ಕಂಡ ಈರೋಬಿ ಗಂಡ ಮರಣ ಹೊಂದಿರುವನೆಂದು ತಿಳಿದು ಸತಿ ಹೋಗುವುದಕ್ಕೆ ನಿರ್ಧರಿಸುತ್ತಾಳೆ. ಬಂಧು-ಬಳಗವೆಲ್ಲ ಸತಿಯಾಗುವುದು ಬೇಡ ಎಂದು ಕೇಳಿಕೊಳ್ಳುತ್ತಾರೆ. ಆದರೂ ಸತಿ ಹೋಗುವ ತನ್ನ ಅಚಲ ನಿರ್ಧಾರವನ್ನು ತಿಳಿಸಿ ಕೊಂಡಕ್ಕೆ ಬೀಳಲು ಸಿದ್ಧಳಾಗುತ್ತಾಳೆ. ಇಂತಹ ಸಂದರ್ಭಗಳನ್ನು ಅರಿತಾಗ ಸತಿಯಾದವಳ ಮನಸ್ಸಿನಲ್ಲಿ ನೋವಿನ ವೇದನೆ ಎಷ್ಟರ ಮಟ್ಟಿಗೆ ಮಡುಗಟ್ಟಿತ್ತು ಎನ್ನುವುದು ಪದ್ಯಗಳ ಮೂಲಕ ಅಭಿವ್ಯಕ್ತವಾಗುತ್ತದೆ.[೪] ಅಮರ ಪತ್ನಿಯರಾದ ಕೊಂಡದ ಚೆನ್ನಮ್ಮ, ಮಾಣಿಕ್ಯಶೆಟ್ಟಿ, ಉರುಳೂರಮ್ಮ, ನಾಗವ್ವ, ಈರೋಬಿ ಕಥೆಗಳಲ್ಲಿ ಪತಿ ಮರಣ ಹೊಂದಿದಾಗ ಸತಿ ಅದನ್ನು ಸಹಿಸದೇ ತಾನು ಮರಣ ಸ್ವೀಕರಿಸುವುದನ್ನು ಕಾಣ ಬಹುದಾಗಿದೆ. ಅವುಗಳು ಜನಪದ ಗೀತೆಯ ಮೂಲಕ ಜನರ ಮನದಲ್ಲಿ ಅಚ್ಚಳಿಯದೇ ಉಳಿದಿವೆ.[೫]

ಮಹಾಸತಿಯಾದ 'ಈರೋಬಿ'ಯು ಹುಟ್ಟಿದ ಹಳ್ಳಿ ಸಂದ್ರ, ಬೆಳೆದಿದ್ದು ನಾಗ್ತಿಹಳ್ಳಿ, ಬಾಳಿದ್ದು ಬೆಳ್ಳೂರು ಆಗಿದೆ. ಈಕೆಯ ತಂದೆ ಮುದ್ದಯ್ಯ ಮಗನ ಹೆಸರು ಕೆಂಪರಸು. ಇವಳು ಗಂಡನೊಡನೆ ಚಿತೆಯೇರಿ ಮಹಾಸತಿಯಾಗಿದ್ದಾಳೆ ಎಂದು ಜನಪದ ಕಾವ್ಯವು ಉಲ್ಲೇಖಿಸುತ್ತದೆ.[೬] ಪತಿ ಶೆಟ್ಟಿ ಶಂಕರರಾಯ ಬಾಣಂತಿ ಈರೋಬಿ ಬಟ್ಟಲಲ್ಲಿ ಉಣ್ಣುತ್ತಿದ್ದಾಳೆಂದು ಪರಿವಾಣ ತರುವುದಕ್ಕೆ ಘಟ್ಟ ಇಳಿದು ಕೆಳಕ್ಕೆ ಹೋಗಿ ಅಲ್ಲಿ ಮಡಿಯುತ್ತಾನೆ. ಇತ್ತ ಈರೋಬಿ ಮಲಗಿದವಳು ಬೇಗ ಏಳಲಿಲ್ಲ. ಅತ್ತೆ ಎಬ್ಬಿಸಿದಾಗ ಅಂದು ತನಗೆ ಕೆಟ್ಟ ಸ್ವಪ್ನ ಬಿದ್ದಿದೆ ಆ ಸ್ವಪ್ನದಲ್ಲಿ ತನ್ನ ಪತಿಯ ಸಾವಿನ ಮುನ್ಸೂಚನೆಗಳು ಕಂಡಿವೆ ಎಂದು ಹೇಳುತ್ತಾಳೆ. ಆ ವಿವರ ಪದ್ಯದಲ್ಲಿ ಹೀಗೆ ಅಭಿವ್ಯಕ್ತವಾಗಿದೆ.

ಉತ್ತದ ಮೇಗಲ ಕಾಗೆ ನೆತ್ತರ ಕಾರೋದ ಕಂಡೆ
ಶೆಟ್ಟಿ ಶಂಕರರಾಯ ಬದುಕೋದ ಸಪುನವ
ಕಂಡೆನಮ್ಮ ಕಾಲುಗಳಿಗೇಲಿ

'ಮೂಗುತಿ ಮುರಿಯೋದ ಕಂಡೆ, ಮುಂಬಲ್ಲು ಸಿಡಿಯೋದ ಕಂಡೆ, ಗಿಂಡಿ ತುಂಡಾಗಿ ಒಡೆಯೋದ ಕಂಡೆ, ಸಪುನವ ಕಂಡೆನಮ್ಮ ಕಾಲಗಳಿಗೇಲಿ' ಎಂದು ಹೇಳುತ್ತಾಳೆ. ಇದಕ್ಕೆ ಅತ್ತೆ ಮೂಗುತಿ ಎಂದರೆ ನೀನು, ಮುಂಬಲ್ಲು ಅಂದರೆ ನಾನು, ಚಿನ್ನದ ಗಿಂಡಿ ಎಂದರೆ ನಿನ್ನ ಪುರುಷ ಎಂದು ಅರ್ಥ ಹೇಳುತ್ತಾಳೆ. ದನ ಮೇಯಿಸಲು ಈರೋಬಿ ಹೋದಾಗ ಅಲ್ಲಿ ದಾರಿಯಲ್ಲಿ ಕೆಲವರು ಈರೋಬಿ ನಿನ್ನ ಪುರುಷ ರಣದಲ್ಲಿ ಮಡಿದಿದ್ದಾನೆಂದು ಅವನ ತಲೆಗೆ ಹೊಡೆಯಲಾಗಿದೆಯೆಂದು ಹೇಳುತ್ತಾರೆ. ಅದಕ್ಕೆ ಈರೋಬಿ ಹೀಗೆ ಹೇಳುತ್ತಾಳೆ.

ಸತ್ತ ಸುದ್ದಿ ಬರಲಿ ನೆತ್ತರದರಬಿ ಬರಲಿ
ಕಿತ್ತುಳ್ಳಿ ಬರಲಿ ಗುರುತಿಗೆ ಸೋಮವಾರದ
ಹೋತನಂತೆ ಕೊಂಡ ಹೋಗುತೀನಿ

ಎಂದು ಹೇಳಿದ ಈರೋಬಿಗೆ ನೆತ್ತರದ ಅರಿಬಿ, ಖಡ್ಗಗಳನ್ನು ಗುರುತಿಸಿ ತಂದು ಕೊಡುತ್ತಾರೆ. ಆಗ ಈರೋಬಿಯು ದುಃಖ ತಡೆಯಲಾರದೇ ಸಹಗಮನ ಹೋಗಲು ನಿರ್ಧರಿಸುತ್ತಾಳೆ. ಆಕೆಯ ಅಪ್ಪ, ಅಣ್ಣ, ಕಟ್ಟಿಗೆ ತರಲು ಹೋಗುತ್ತಾರೆ. ಅತ್ತಿ ಮರದ, ಆಲದ ಮರದ, ಕಟ್ಟಿಗೆ ತರಲು ಹೇಳುತ್ತಾಳೆ. 'ಕೊಂಡ ಚೆನ್ನಾಗಿ ತೆಗೆಯಬೇಕು ಹಾಗೆ ತೆಗೆದರೆ ನಿಮಗೆ ಗಂಡು ಸಂತಾನವಾಗುತ್ತದೆ. ಕಿಚ್ಚನ್ನು ಚೆನ್ನಾಗಿ ಮಾಡಿದರೆ ನಿಮಗೆ ಪುತ್ರಸಂತಾನ ಲಭಿಸುತ್ತದೆ'. ಎಂದು ಹರಸುತ್ತಾಳೆ. ಕೊಂಡದ ಕಿಚ್ಚು ಸಿದ್ಧಗೊಳ್ಳುತ್ತದೆ. ಗಂಡನ ಶವವನ್ನು ತರುತ್ತಾರೆ. ಅಪ್ಪ, ಅಣ್ಣ ಸತಿಹೋಗಬೇಡವೆಂದು ಹೇಳುತ್ತಾರೆ. ಆದರೂ ಈರೋಬಿ ಸತಿ ಹೋಗುವ ನಿರ್ಧಾರವನ್ನು ಬದಲಿಸುವುದಿಲ್ಲ.

ಸೀರೆನುಡವಮ್ಮ ಕುಪ್ಪಸನೆ ಕೊಡುವಮ್ಮ
ಮಲ್ಲಿಗೆ ಹೂವ ಮುಡಿಯಮ್ಮ ಈರೋಬಿ
ತೆಪ್ಪನಿರಮ್ಮ ಅರಮಲ್ಲಿ
ಸೀರೆ ಬೇಡ ಕುಪ್ಪಸಬೇಡ 'ಒಡೆಗಿಚ್ಚ' ಕೊಡು ಎಂದು ಕೇಳುತ್ತಾಳೆ.
ಅಣ್ಣನಿಗೂ 'ಒಡೆಗಿಚ್ಚ' ಕೊಡಲು ಹೇಳುತ್ತಾಳೆ.
ಗಂಡ ಸಾಯೋಕಿಂತ ಮುಂಡ್ಯಾಗೋಕಿಂತ

ಕಂಡೋರ ಮನೆಯ ಕಸನ್ಹಾಕೆ ಸಾಯೋಕಿಂತ
ಕೊಂಡವನ್ನೋದೆ ಕಡುಲೇಸು

ಎಂದ ಈರೋಬಿಗೆ ಅಪ್ಪ, ಅಣ್ಣ, ಸತಿ ಹೋಗಬೇಡವೆಂದರೂ ಅವಳು ಸೀರೆ ಕುಪ್ಪಸಬೇಡ ನನಗೆ 'ಒಡೆಗಿಚ್ಚು ಕೊಡಿ' ಎಂದು ಹೇಳಿ ಸಹಗಮನ ಹೋಗಲು ಸಿದ್ಧಳಾಗುತ್ತಾಳೆ. ಗಂಡನ ತಂಗಿಯಾದ ನಾದಿನಿಗೆ, 'ನಾದಿನಿ ನಿನ್ನ ವಿಷವ ಬಿಡಲಿಲ್ಲ–ನಮ್ಮಿಬ್ಬರ ಗುದ್ದಾಟವಿಲ್ಲಿಗೆ ಸವೇದ್ದೋದೊ' ಎಂದು ಹೇಳುತ್ತಾಳೆ. ತನ್ನಿಷ್ಟದಂತೆ ಕೊಂಡ ತೆಗೆಸಿ, ಬಣ್ಣ ಇಟ್ಟಕೊಂಡು, ಬಂಗಾರ ತೊಟ್ಟುಕೊಂಡು, ಬೀದಿಗಳಲ್ಲಿ ಮೆರವಣಿಗೆ ಹೋಗುವ ಮೂಲಕ ಕೈಯಲ್ಲಿರುವ ಹನ್ನೆರಡು ನಿಂಬೆಹಣ್ಣುಗಳನ್ನು ಆಕಾಶಕ್ಕೆ ತೂರುತ್ತ ತನ್ನ ತೋಳನ್ನು ತಿರುವುತ್ತ ಬಂದು ಕೊನೆಗೆ ಚಿತೆಯೇರುತ್ತಾಳೆ.

ಮಹಾಸತಿ ಹಿರಿದಿಮ್ಮವ್ವ ಗಂಡನನ್ನು ಕೊಂದ ಬೇಡರ ಹುಡುಗನನ್ನು ಸಮಯ ನೋಡಿ ಕೊಂಡು ಕೊಂದು ಮಹಾಸತಿಯಾದ ವಿವರಗಳು ಜಾನಪದ ಖಂಡಕಾವ್ಯದಲ್ಲಿದೆ.[೭] ಹಿರಿಯತಿಮ್ಮವ್ವ ಎಂಬುದೇ ಹಿರಿದಿಮ್ಮವ್ವ ಆಗಿರಬೇಕೆಂದು ಸಂಪಾದಕರು ಹೇಳುತ್ತಾರೆ. ಹಿರಿದಿಮ್ಮವ್ವ ಚಿಕ್ಕವಳಾಗಿದ್ದು ಈಕೆಗೆ ಏಳುಜನ ಅಣ್ಣಂದಿರಿರುವ ಕೃಷಿ ಮನೆತನ ಈಕೆಯದು. ಏಳುಗೂಡುಗಳ ದನಗಳನ್ನು ಮೇಯಿಸುವಾಗ ಈಕೆ ಒಂದು ಆಲದ ಮರದ ಕೆಳಗೆ ಕುಳಿತುಕೊಳ್ಳುತ್ತಾಳೆ. ಹಾಗೆಯೇ ಮಲಗಿಕೊಂಡು ಮೇಲಕ್ಕೆ ನೋಡಿದಾಗ ಅಲ್ಲಿ ಪರದೇಶಿ ಹುಡುಗ ಕುಳಿತುಕೊಂಡಿದ್ದು ಅವನಿಗೆ ತಂದೆ ತಾಯಿ ಯಾರೂ ಇಲ್ಲದ್ದು ಗೊತ್ತಾಗುತ್ತದೆ. ಅವನಿಗೆ ಹೊದೆಯಲು ಬಟ್ಟೆ ಇಲ್ಲ ಉಣ್ಣುವುದಕ್ಕೆ ಹಿಟ್ಟಿಲ್ಲ, ಬಟ್ಟೆ ಹಿಟ್ಟು ಕೊಡುತೀನಿ ದನಕಾಯ್ದುಕೊಂಡು ನಮ್ಮ ಮನೆಯಲ್ಲಿರು ಎಂದು ಹಿರಿದಿಮ್ಮವ್ವ ಕೇಳುತ್ತಾಳೆ. ಅದಕ್ಕೆ ಹುಡುಗನು ಒಪ್ಪುತ್ತಾನೆ. ಅವನ ಜಾತಿ ಕುಲ ಕೇಳಿದಾಗ 'ಬೆಡಗು ಬೇಡರ್ಹುಡುಗ ಕುಲವೇ ಬೊಮ್ಮೇಲಿಂಗ' ಎಂದು ಹೇಳುತ್ತಾನೆ. ದನಕಾಯ್ಕೊಂಡು ಇರು ಎಂದು ಬಾರೆಯ ಹೊಲಕ್ಕೆ ಹೋಗುತ್ತಾಳೆ. ಏಳು ಜನ ಅಣ್ಣಂದಿರಿಗೆ ಬೇಡರ ಬೊಮ್ಮೇಲಿಂಗನ ಬಗ್ಗೆ ಹೇಳಿ ಹಿಟ್ಟು ಬಟ್ಟೆ ಕೊಟ್ಟರೆ ದನ ಕಾಯ್ಕೊಂಡು ಇರುತ್ತಾನೆ ಎಂದು ಹೇಳುತ್ತಾಳೆ. ಅವರು ಅವನು ಬೇಡರವನು ಬೇಡವೆಂದು ಹೇಳುತ್ತಾರೆ.

"ಬೆಲ್ಲದಂಗ ಇದ್ದಾರು ।ಸು। ಬೇಡರ ಸಂಗಬ್ಯಾಡ
ತುಪ್ಪದಂಗೆ ಇದ್ದಾರು ।ಸು। ತುರುಕರ ಸಂಗಬ್ಯಾಡ
ಹಾಲಿನಂಗೆ ಇದ್ದಾರು ।ಸು। ಹಾರುವರ ಸಂಗಬ್ಯಾಡ

ಅದಕ್ಕಾಗಿ ಬೇಡವೆಂದು ಹೇಳುತ್ತಾರೆ. ಆದರೂ ಹಿರಿದಿಮ್ಮವ್ವ ಪರದೇಶಿ ಇದ್ದಾನೆಂದು ಅವರನ್ನು ಒಪ್ಪಿಸುತ್ತಾಳೆ. ಮನೆಗೆ ಹೋಗಿ ಬಟ್ಟೆ ಹಿಟ್ಟು ತಂದು ಕೊಡುತ್ತಾಳೆ. ಒಮ್ಮೆ ಹೊಲದಲ್ಲಿರುವ

ಅಣ್ಣಂದಿರಿಗೆ ಹಿಟ್ಟು ತೆಗೆದುಕೊಂಡು ಹೋಗುತ್ತಾಳೆ. ಹೀಗೆ ಬರುವಾಗ ಬೇಡರ ಬೊಮ್ಮೇಲಿಂಗ ಈಕೆಯ ದಾರಿಕಾಯುತ್ತ ಕಗ್ಗಲ್ಲ ಕಣಿವೆಯಲ್ಲಿ ಕುಳಿತಿರುತ್ತಾನೆ. ಇವಳು ಬಂದ ತಕ್ಷಣ 'ಸಿಕ್ಕಿದೇನೆ ದಕ್ಕಿದೇನೆ' ಎಂದು ಮುತ್ತಿನ ಮುಂಜರಂಗ(ಮುಂದಿನ ಸೆರಗು) ಹಿಡಿಯುತ್ತಾನೆ. ಏಳು ಜನ ನನ್ನ ಅಣ್ಣಂದಿರು ನಿನ್ನ ಹೊಡೆದು ನಿನ್ನ ತಲೆಯ ಚೆಂಡಾಡುತ್ತಾರೆ. ಎಂದು ಹೇಳಿ ಬಿಡಿಸಿಕೊಂಡು ಹೋಗುತ್ತಾಳೆ. ಹಿರಿಯ ಅಣ್ಣ ನೋಡಿ ಏಳು ಜನ ಮನೆಯಲ್ಲಿ ಮಾಡುವುದಾದರು ಏನು? ಚಿಕ್ಕವಳ ಕೈಯಲ್ಲಿ ಹಿಟ್ಟು ಕಳುಹಿಸುವುದೇ? ಒಬ್ಬರು ಹೋಗಿ ಇಸಿದುಕೊಂಡು ಬನ್ನಿ ಎಂದು ಹೇಳುತ್ತಾನೆ. ಆಗ ಬೇಸಾಯ ನಿಲ್ಲಿಸಿ ಊಟ ಮಾಡುತ್ತಾರೆ. ಹಿರಿಯವನು ಕೇಳುತ್ತಾನೆ. 'ತಲೆಯಾಕೆ ಕೆದರ್ಯಾದೆ। ಮೊಗವ್ಯಾಕೆ ಬಾಡ್ಯಾದೆ' ಅದಕ್ಕೆ ಅವಳು ಕಗ್ಗಲ್ಲ ಕಣಿವೆಯಲ್ಲಿ ಕರಡಿ ಬಂತು. ಅದಕ್ಕೆ ಓಡಿ ಬಂದಿದ್ದೆನೆಂದು ಸುಳ್ಳು ಹೇಳುತ್ತಾಳೆ. ಆಗ ಒಬ್ಬ ಅಣ್ಣನನ್ನು ಈಕೆಯ ಸಂಗಡ ಮನೆಗೆ ಬಿಟ್ಟು ಬರಲು ಕಳುಹಿಸುತ್ತಾನೆ. ಇವಳು ಬೇಡರ ಬೊಮ್ಮೇಲಿಂಗನಿಗೂ ಊಟ ಬಡಿಸುತ್ತಾಳೆ. ಅನಂತರ ಮನೆಗೆ ಹೋಗುತ್ತಾಳೆ. ಹಿತ್ತಲ ಕಡೆಗೆ ಹೋಗಿ ನೋಡಿದಾಗ ಅವಳು ದೊಡ್ಡವಳಾಗಿರುವದು ಗೊತ್ತಾಗುತ್ತದೆ.

ಈ ವಿಷಯ ಅಣ್ಣಂದಿರಿಗೆ ಗೊತ್ತಾಗಿ ಅವರು ಬರುತ್ತಾರೆ. ಹೊರಗೆ ಗುಡಿಸಲು ಹಾಕಿ ಅದರಲ್ಲಿ ತಂಗಿಯನ್ನು ಮಲಗಿಸಿ ತಾವು ಏಳು ಜನರು ಕಾವಲಿಗೆ ನಿಂತು ಮಲಗುತ್ತಾರೆ. ಆ ಸಂದರ್ಭದಲ್ಲಿ ಬೇಡರ ಬೊಮ್ಮೇಲಿಂಗ ಕೊಬ್ಬರಿಯನ್ನು ಈಕೆಯ ಗುಡಿಸಲಿನ ಒಳಗೆ ಎಸೆಯುತ್ತಾನೆ. ಈಕೆ ಅದನ್ನು ಎತ್ತಿ ಆಚೆಗೆ ಎಸೆಯುತ್ತಾಳೆ. ಹಾಗೆ ಎಸೆಯುವಾಗ ಬಳೆ ಶಬ್ಧವಾಗಿ ಅಣ್ಣಂದಿರು ಏನೆಂದು ಕೇಳುತ್ತಾರೆ. ಆಗ ಹಿರಿದಿಮ್ಮವ್ವ ಬಳೆಗೆ ತುಪ್ಪದ ಜಿಡ್ಡು ಹತ್ತಿದೆ. ಅದಕ್ಕೆ ಇರುವೆ ಮುತ್ತಿವೆ. ಜಾಡಿಸಿದೆನೆಂದು ಸುಳ್ಳು ಹೇಳುತ್ತಾಳೆ. ಬೇಡರ ಬೊಮ್ಮೇಲಿಂಗ ಬೆಲ್ಲ ಎಸೆಯುತ್ತಾನೆ. ಅದನ್ನು ಅವಳು ಪುನಃ ಎಸೆಯುತ್ತಾಳೆ. ಕಾಲ್ಗೆಜ್ಜೆ ಶಬ್ಧವಾಗುತ್ತದೆ. ಏನೆಂದು ಅಣ್ಣಂದಿರು ಕೇಳಿದಾಗ 'ಗೊದ್ದಾವೆ ಮುತ್ತಿದೆ'ಯೆಂದು ಹೇಳುತ್ತಾಳೆ.

ಹಿರಿದಿಮ್ಮವ್ವಳ ಗಂಡನ ಮನೆಗೆ ಸುದ್ದಿ ಮುಟ್ಟಿಸಿ ಮಾವನನ್ನು ಕರೆಸಿಕೊಳ್ಳುತ್ತಾರೆ. ಹದಿನಾರನೇ ದಿವಸಕ್ಕೆ 'ಸೋಬಾನ' ಮಾಡುತ್ತಾರೆ. ಒಂದು ತಿಂಗಳ ಆದ ಮೇಲೆ ಹೊಸ ಸೀರೆ ತೊಡಿಸಿ ಮಡಿಲಕ್ಕಿ ಹಾಕಿ ಗಂಡನ ಮನೆಗೆ ಕಳುಹಿಸುತ್ತಾರೆ. ಗಂಡ ಹೆಂಡತಿ ಜೊತೆಗೆ ಹಿರಿದಿಮ್ಮವ್ವ ಸಾಕಿದ ನಾಯಿಯು ಹೋಗುತ್ತದೆ. ಬೇಡರ ಬೊಮ್ಮೇಲಿಂಗ ಇವರ ಬೆನ್ನು ಹತ್ತಿ ಹೋಗುತ್ತಾನೆ. ಅಡವಿಯಲ್ಲಿ ಬಾವಿದಂಡೆಯಲ್ಲಿ ಉಣ್ಣಲು ಕುಳಿತುಕೊಳ್ಳುತ್ತಾರೆ. ಬೇಡರ ಬೊಮ್ಮೇಲಿಂಗನಿಗೂ ಬುತ್ತಿ ನೀಡುತ್ತಾಳೆ. ಆಗ ಬೇಡರ ಬೊಮ್ಮೇಲಿಂಗ ಚಂದ್ರಾಯುಧ ತೆಗೆದುಕೊಂಡು ಹಿರಿದಿಮ್ಮವ್ವಳ ಗಂಡನನ್ನು ಕಡಿಯುತ್ತಾನೆ. ಆಗ ಹಿರಿದಿಮ್ಮವ್ವ 'ನೀನೆಯೆ ನನ್ನ ಗಂಡ ನಾನೇ ನಿನ್ನ ಹೆಂಡತಿ'

ಎಂದು ಹೇಳಿ ಬೇಡರ ಬೊಮ್ಮೇಲಿಂಗನಿಗೆ ಊಟಕ್ಕೆ ನೀಡುತ್ತಾಳೆ. ಊಟ ಮಾಡುತ್ತಾನೆ. ಆಗ ಅದೇ ಚಂದ್ರಾಯುಧ ತೆಗೆದುಕೊಂಡು ಅವನನ್ನು ಕಡಿಯುತ್ತಾಳೆ. ಗಂಡನ ಕಡಿದಾಗ ಆ ರಕ್ತದಲ್ಲಿ ಸಾಕಿದ ನಾಯಿ ಒದ್ದಾಡಿ ಮನೆಗೆ ಓಡಿ ಹೋಗುತ್ತದೆ. ಈಕೆಯ ಅಣ್ಣಂದಿರ ಮುಂದೆ ಹೋಗಿ ಸುತ್ತಿ ಗುಯ್ಯಾ ಗುಯ್ಯಾ ಅನ್ನುತ್ತದೆ. ಇದನ್ನು ನೋಡಿ ಏಳು ಜನರೂ ಹಿರಿದಿಮ್ಮವ್ವನ ಬಳಿ ಬಂದಾಗ। ಗಂಡನ ತೆಲೆಯಾನೆ ಸು। ಮಡಿಲಾಗೆ ಕಟ್ಟಕೊಂಡು ।ಸು।ಬೊಮ್ಮೇಲಿಂಗನ ತಲೆಯ ।ಸು। ಕಾಲಾಗೆ ಒದ್ದುಕೊಂಡು ಬರುತ್ತಾಳೆ.

ಚಿಕ್ಕೋಳ್ ಹಿರಿದಿಮ್ಮವ್ವ ।ಸು। ಕೆಂಡಕೊಂಡನಾಗುತಾಳೆ ।ಸು।
ಗಂಡಾನ ತಲೆಯನ್ನು ।ಸು। ತಲೆಕಡೆ ಮಡಿಕೊಂಡು ।ಸು।
ಬೊಮ್ಮಲಿಂಗ ತಲೆಯ ।ಸು। ಅವಳು ಕಾಲು ಕಡೆ ಮಾಡಿಕೊಂಡು ।ಸು।
ಚಿಕ್ಕೋಳ್ ಹಿರಿದಿಮ್ಮವ್ವ ।ಸು। ಕೆಂಡಕೊಂಡವಾದಾಳೆ ।ಸು।

ಅಣ್ಣಂದಿರಿಗೆ ಸಿರಿಗಂಧದ ಸೌದೆಯ ತರಿಸಿರೋ ಬೇಗ ।ಕೆಂಡಕೊಂಡ ಆಗುತೀನಿ। ಭೂಮಿಮ್ಯಾಲ ನಾ ಇರೋದಿಲ್ಲ ಎಂದು ಹೇಳುತ್ತಾಳೆ. ಅಣ್ಣಂದಿರು ಬೇಡವೆಂದರೂ ಹಿರಿದಿಮ್ಮವ್ವ ಕೇಳುವುದಿಲ್ಲ. ಸತಿ ಹೋಗುತ್ತಾಳೆ.

'ಮಹಾಸತಿ ತಾಡಿನಾಗಮ್ಮ' ಎಲಿಯೋರ ಮನೆತನಕ್ಕೆ ಸೇರಿದವಳು. ಈ ಮನೆತನ ಅಂದು ಅತ್ಯಂತ ಪ್ರಸಿದ್ಧಿ ಪಡೆದು ದೊಡ್ಡ ಮನೆತನವೆನಿಸಿತ್ತು. ಈ ಮನೆಗೆ ತಾಡವಡ್ಡಗೆರೆಯ ಆಗರ್ಭ ಶ್ರೀಮಂತನಾದ ಈರಗ್ಯಾತರಾಯನು ಊರಿನ ಹಿರಿಯರೆಲ್ಲರೊಂದಿಗೆ ಸೇರಿ ಬರುತ್ತಾನೆ. ಹೀಗೆ ಬಂದ ಈರಗ್ಯಾತರಾಯನು ತನ್ನ ಪುತ್ರ ನಾಗೋಜಿಗೆ ನಾಗಮ್ಮನನ್ನು ತಂದುಕೊಳ್ಳಬೇಕೆಂಬ ಪ್ರಸ್ತಾಪಿಸುವ ಪದ್ಯವೊಂದು ಹೀಗಿದೆ.

"ನಾವು ನಿಮ್ಮ ಮನಿಗೆ ಒಪ್ಪಬಂದ್ಯೆದೀವಿ
ರಾಯ ವಡ್ಡಗೆರೆಯ ಚದುರೀಗೆ । ವಾಲೆವೋದೊ
ನಾಗೋಜಿಗೆಣ್ಣು ಕೊಡಬೇಕು ॥೨೪॥"[೮]

ಇದನ್ನು ಕೇಳಿದ ನಾಗಮ್ಮನ ತಂದೆತಾಯಿಗಳು ನಮ್ಮ ಮಗಳು ಇನ್ನೂ ಚಿಕ್ಕವಳು ನಿಮ್ಮಂಥ ದೊಡ್ಡಮನೆಗೆ ಸರಿಹೋಗುವುದಿಲ್ಲವೆಂದು ಹೇಳುತ್ತಾರೆ.[೯] ಈ ವಿಷಯ ಕುರಿತು ಉಪ್ಪರಿಗೆಯಲ್ಲಿ ಕುಳಿತು ಚಿಕ್ಕಪ್ಪ-ಚಿಕ್ಕಮ್ಮ, ದೊಡ್ಡಪ್ಪ-ದೊಡ್ಡಮ್ಮ, ಚಿಕ್ಕಸೋದರಮಾವ, ದೊಡ್ಡಸೋದರಮಾವ ಸೇರಿ ಚರ್ಚೆಮಾಡುತ್ತಾರೆ. ಇದನ್ನು ಕಂಡ ನಾಗಮ್ಮನ ಅಣ್ಣ, ಚಿಕ್ಕತಂಗಿಯಾದ ಆಕೆಯನ್ನು ಕೊಡುವುದಿಲ್ಲವೆಂದು ಹೇಳುತ್ತಾನೆ. ಇನ್ನೊಬ್ಬ ಅಣ್ಣ ನಾಗಮ್ಮನನ್ನು ಕೊಡುತ್ತೇನೆಂದು

ಒಪ್ಪಿ ಈಳ್ಯವ ಹಿಡಿಯುತ್ತಾನೆ. ಆಗ ಒಳ್ಳೆದಾಗುವುದಿಲ್ಲ ಕೊಡಬೇಡವೆಂದು ಗೌಳಿಗಳು ಶಕುನ ನುಡಿಯುತ್ತವೆ. ಎಂಬ ವಿವರ ಈ ಕಥನ ಗೀತೆಯಲ್ಲಿ ಉಲ್ಲೇಖಗೊಂಡಿದೆ.

"ಕಂಬಾದ ನಡುವೆ ಗೌಳಿ ನುಡಿದಾವೆ
ನಾರಿ ನಾಗಮ್ನ ಕೊಡದೀರೋ
ನಾರಿ ನಾಗಮ್ನ ಕೊಡದೀರೋ ನಾಗಣ್ಣ
ವೋಗಿ ಕಾಳುಗದಲೆ ಮಡುದಾನು॥"[೧೦]

ಇಂತಹ ಸಮಸ್ಯೆಗಳ ಮಧ್ಯೆ ನಾಗಮ್ಮನಿಗೆ ಬಳೆಯನ್ನು ತೊಡಿಸುವಾಗ ಬಲಗಡೆಗೆ ಸೀನುತ್ತಾರೆ. ಕುಪ್ಪಸ ತೊಡುವಾಗ ಬೆಕ್ಕು ಅಡ್ಡ ಬರುತ್ತದೆ. ಇಂಥಹ ಅಪಶಕುನಗಳ ಮಧ್ಯೆ ಈರಗ್ಯಾತರಾಯ ಮತ್ತು ಹಿರಿಯರೆಲ್ಲರೂ ಸೇರಿ ನಾಗಮ್ಮನ ಮದುವೆ ನಿಶ್ಚಯ ಮಾಡಿ ಲಗ್ನವನ್ನು ಕಟ್ಟಿಸಿ ಬರುತ್ತಾರೆ. ನಾಗಮ್ಮನ ಮದುವೆಗೆ ಸಿದ್ಧತೆಯನ್ನು ಮಾಡಿಕೊಳ್ಳುತ್ತಾರೆ. ಸಿದ್ಧತೆಯ ವಿವರಗಳು ಕಥನಗೀತೆಯಲ್ಲಿ ಸುದೀರ್ಘವಾಗಿ ಬರುತ್ತವೆ. ನಾಗೋಜಿಯನ್ನು ಮದುಮಗನನ್ನಾಗಿ ಮಾಡಿಕೊಂಡು ನಿಬ್ಬಣ ಬರುತ್ತದೆ.

"ಕಂಬಳಿಗೂಡಾ ಇಂಬಾಗಿ ವೊಯ್ದಾರೆ
ದುಂಡುಮುತ್ತಿಟ್ಟು ಅಣೆದಾರೆ। ಅಸಮುಗ
ನಾಗೋಜಿಯೇ ಮದಲಿಂಗ॥"[೧೧]

ನಾಗೋಜಿಗೂ ನಾಗಮ್ಮನಿಗೂ ಮದುವೆಯಾಗುತ್ತದೆ. ನಾಗಮ್ಮನನ್ನು ನಾಗೋಜಿಗೆ ಧಾರೆ ಎರೆದು ಕೊಡಲಾಗುತ್ತದೆ. ಆಗ ನಾಗಮ್ಮ 'ಬಸಳೆನೋರು ಮನೆತನದವಳಾಗುತ್ತಾಳೆ'. ಈಕೆಯನ್ನು ಗಂಡನ ಮನೆಗೆ ಕಳುಹಿಸಿಕೊಡಲಾಗುತ್ತದೆ ಈ ವಿವರ ಪದ್ಯದಲ್ಲಿ ಹೀಗೆ ಅಭಿವ್ಯಕ್ತವಾಗಿದೆ.

"ಅಲ್ಲಮ್ಮ ವಸಕೇರಿ ಗಂದದೂರ ಬಾಗಲಾಗೆ
ಗಂಜಿ ಸೀರ್ಯೋರು ಸರಿಬೆರಕೆ । ನಾಗಮ್ಮನ
ಗಂಡಾನ ಮನಿಗೆ ಕಳಿವ್ಯಾರೆ॥"[೧೨]

ಬಸಳೆನೋರ ಸೊಸೆಯಾಗಿ ನಾಗಮ್ಮನ ಜೀವನ ಪ್ರಾರಂಭವಾಗುತ್ತದೆ. ಹೀಗಿರುವಾಗ ಸ್ವಲ್ಪ ದಿನಗಳಲ್ಲೇ ಯುದ್ಧ ನಡೆಯುತ್ತದೆ. ಅದರಲ್ಲಿ ಹೋರಾಟಕ್ಕಿಳಿದ ನಾಗೋಜಿ ವೀರಮರಣ ಹೊಂದುತ್ತಾನೆ. ಈ ಸುದ್ದಿ ನಾಗಮ್ಮನ ಕಿವಿಗೆ ಬೀಳುತ್ತದೆ. ಅದಕ್ಕೆ ನಂಬದ ನಾಗಮ್ಮ ಆಧಾರಗಳನ್ನು ಕೇಳುತ್ತಾಳೆ.

ಸತ್ತ ಸುದ್ಧಿ ಕಳವೋ ನೆತ್ತರದರುವೀ ಕಳವೋ
ಕತ್ತೀಯ ಕಳವೋ ಗುರುತೀಗೆ। ಸ್ವಾಮವಾರದ
ಯಾಳ್ಯಾಕೆ ನಾಗೋಜಿ ಮಡುದಾನೆ॥[೧೩]

ನಾಗೋಜಿ ಸತ್ತ ಸುದ್ದಿ ಬಂದಮೇಲೆ, ಅಲ್ಲಿ ಹೋಗಿ ನೋಡಲಾಗಿ ನಾಗಣ್ಣ ಅಡಿಯಾಳಾಗಿ ಸತ್ತು ಬಿದ್ದಿರುವುದು ನಾಗಮ್ಮನಿಗೆ ಕಂಡು ಬರುತ್ತದೆ.

ಬಿದ್ದಾನೆ ನಾಗಣ್ಣ ಬಿಳಿಯಂಗಿ ಅಡಿಯಾಗಿ
ಮಜ್ಜುರದ ಬಾಕು ಅಡಿಯಾಗಿ। ನಾಗಣ್ಣ
ಬಿದ್ದನು ಸೂರಿದಗೆ ಎದುರಾಗಿ॥[೧೪]

ನಾಗೋಜಿ ಸೂರ್ಯನಿಗೆ ಎದುರಾಗಿ ಬಿದ್ದ ಎಂದು ಹೇಳುವಲ್ಲಿಯೂ ವಿಶೇಷತೆ ಇದೆ ಅವನು ಸೂರ್ಯಮಂಡಲ ಪ್ರವೇಶಿಸಿ ಸ್ವರ್ಗಲೋಕಕ್ಕೆ ಹೋದನೆಂದು ಅರ್ಥ. ನಾಗಮ್ಮ ನಾಗಣ್ಣನ ಬಾಯಿಗೆ ನೀರು ಬಿಡುತ್ತಾಳೆ. ತಾನು ಸತಿಹೋಗಲು ನಿರ್ಧರಿಸಿ ತನ್ನ ಅಣ್ಣನಿಗೆ ಕೊಂಡಕ್ಕೆ ಹೊಂಡವನ್ನು ತೋಡಲು ಹೇಳುತ್ತಾಳೆ.

ವೊತ್ತುಂಟೆ ಏಳಣ್ಣ ತಟ್ವೊಡ್ಡರನ ಕರೆಸಣ್ಣ
ವಂಡಾಕ ಕಲ್ಲು ವಡೆಸಣ್ಣ। ಮರದಡಿಲಿ
ವೊಂಡಾವ ನೀನು ತಗುಸಣ್ಣ॥

ಸತಿ ಹೋಗಲಿರುವ ನಾಗಮ್ಮ ತನ್ನ ಅಣ್ಣನಿಗೆ ಹೇಳಿದಾಗ ಮನೆಯವರೆಲ್ಲ 'ಕಿಚ್ಚಿನ ಹಂಬಲ ನಿನಗೆ ಬೇಡ'ವೆಂದು ಹೇಳುತ್ತಾರೆ. ಅದಕ್ಕೆ ನಾಗಮ್ಮ 'ಕಿಚ್ಚು ಕೊಡದಿದ್ದರೆ ಕಿತ್ತುಕೊಂಬೆನು ನಾಲಿಗೆ' ಎಂದು ಹೇಳುತ್ತಾಳೆ. ಶ್ರೀಮಂತಿಕೆಯ ಆಸೆಯಿಂದ ತಂದೆ, ಸೋದರಮಾವ, ನಾಗಮ್ಮನನ್ನು ಧಾರೆಯೆರೆದುದರಿಂದ ಆಕೆ ಸತಿ ಹೋಗುವುದಕ್ಕಿಂತ ಪೂರ್ವದಲ್ಲಿ ಅಣ್ಣನ ಹೊಲದಲ್ಲಿ 'ಅಣ್ಣೆಗುರುಗು' ಬೆಳೆಯಲಿ. ಸಣ್ಣ ಮಾವನ ಹೊಲದಲ್ಲಿ 'ಸಣ್ಣರಾಜುಣ' ಬೆಳೆಯಲಿ. ಅಪ್ಪನ ಹೊಲದಲ್ಲಿ 'ಉತ್ರಾಣಿ' ಬೆಳೆಯಲಿ ಎಂದು ಶಾಪ ಹಾಕುತ್ತಾಳೆ. ಹೀಗೆ ಸತಿಯಾಗಬೇಕಾದ ನಾಗಮ್ಮ ಓಡಿಹೋಗಬಹುದೆಂದು ಬಾಗಿಲು ಹಾಕಿದ್ದನ್ನು ನೋಡಿ ನಾನು 'ವೋಡಿವೋಗೋರ ಮಗಳಲ್ಲ' ಬಾಗಿಲ ತೆಗೆಸೆಂದು ಹೇಳುತ್ತಾಳೆ. ದಿಡ್ಡಿಬಾಗಿಲು ಹಾಕಿಸಿದ್ದ ಈರಗ್ಯಾತರಾಯನಿಗೂ ಇದೇ ಮಾತನ್ನು ಹೇಳುತ್ತಾಳೆ. ಕೊನೆಗೆ ನಾಗಮ್ಮ ತಾಳಿಸರ ಹರಿದು ತಾಯಿ ಕೈಯಲ್ಲಿ, ಮುತ್ತಿನ ಸರ ಹರಿದು ಅತ್ತೆ ಕೈಯಲ್ಲಿ ಕೊಡುತ್ತಾಳೆ. ಆಕಾಶದ ಉದ್ದಕ್ಕೆ ಉರಿಯುವ ಜ್ವಾಲೆ ನೋಡಿ ನಾನು ಹೇಗೆ ಉರಿಯಲ್ಲಿ ಬಿದ್ದು ಸಾಯಲಿ ಶಿವನೇ ನನ್ನ ಗಂಡನ ಪ್ರಾಣವನ್ನು ಮರುಳಿಸೆಂದು ಬೇಡಿಕೊಳ್ಳುತ್ತಾಳೆ ಎಂಬ ವಿವರಗಳು ಪದ್ಯದಲ್ಲಿ ಹೀಗೆ ಅಭಿವ್ಯಕ್ತಗೊಂಡಿವೆ.

ಅಂಬಾರದುದ್ದಾಕ ಉರಿಯೆದ್ದೇಳುತಾವೆ
ನಾನೆಂಗೋಗಾಲಿ ಸಿವಸಿವನೆ ಏ ಸಿವನೆ
ರಾಯರ ಪ್ರಾಣವ ತಿರುವಯ್ಯ.[೧೫]

ಸತಿ ಗಂಡನೊಡನೆಯೋ, ಆತನ ಗುರುತಿನ ವಸ್ತುವಿನೊಡನೆಯೋ ಕೆಂಡಕೊಂಡವಾಗುತ್ತಾಳೆ. ಇಲ್ಲಿ ಸಹಗಮನಗೊಳ್ಳುವಾಗ ಸತಿ ಹೋಗುವವಳು ಕೊಂಡದಲ್ಲಿರುವ ಕಿಚ್ಚನ್ನು ನೋಡಿ ಹೆದರಿ ಹಿಂದೆ ಸರಿಯಬಾರದೆಂದು ಹಾಗೂ ಸತಿಯರಿಗೆ ಕೊಂಡದಲ್ಲಿರುವ ಕಿಚ್ಚು ಕಾಣಬಾರದೆಂದು ಅಚ್ಚಡ, ಕಂಬಳಿಗಳಿಂದ ಅಡ್ಡ ತೆರೆ ಕಟ್ಟಿಸುತ್ತಿದ್ದಂತೆ ಕಾಣುತ್ತದೆ. ಇಂತಹ ವಿವರಗಳನ್ನು ಒಳಗೊಂಡ ಪದ್ಯದಲ್ಲಿ ಸತಿ ಹೋಗುವವಳು ಶಿವನಲ್ಲಿ ಶೆರಗೊಡ್ಡಿ ಬೇಡುವ ಹಾಗೂ ಶಿವನು ತನ್ನ ಮನದ ನೋವನ್ನು ಅರಿಯಲಿಲ್ಲವೆಂದು ನೊಂದುಕೊಂಡು ಸಹಗಮನವಾಗುವ ಚಿತ್ರಣ ಕಂಡು ಬರುತ್ತದೆ. ಮುಂದೆ ಸತಿ ಹೋದ ಸ್ತ್ರೀ ಮಾತೃದೈವವಾಗಿ ಮನೆತನದ ತಾಯಿಯಾಗಿ ಪೂಜೆಗೊಳ್ಳಲ್ಪಡುತ್ತಾಳೆ.

ಪಟ್ಟೇದ ಸೀರುಟ್ಟು ಮುತ್ತಿನ ಬಟ್ಟಿಟ್ಟು
ಈರಕೊಂಡಾಕ ಕೊಲೆಯಾದಳು ಅಕ್ಕ ನಾಗಮ್ಮನಿಗೆ
ಆರುತಿಯಾನೆತ್ತೀರಿ ಜಯಮಂಗಳಾ ರಾಮ ಸುಖಮಂಗಳಾ

ಎಂಬ ಮಂಗಳಾರುತಿಯ ಪದ್ಯದೊಂದಿಗೆ ಒತ್ತಾಯಪೂರ್ವಕವಾಗಿ ಸತಿ ಹೋದ ನಾಗಮ್ಮ ಈರಗೊಂಡಾಕ ಕೊಲೆಯಾದಳು ಎಂಬಲ್ಲಿ ಪದ್ಯ ಮಹಾಸತಿಯ ಮನದ ಇಂಗಿತವನ್ನು ಅಭಿವ್ಯಕ್ತಿಸುತ್ತದೆ. ಇಲ್ಲಿ ಜನಪದ ಕವಿ ನಾಗಮ್ಮಳ ಕೊಲೆಯಾಯಿತು ಎನ್ನುವ ಮೂಲಕ ಸಹಗಮನದಂತಹ ಮೌಲ್ಯವನ್ನು ನಿರಾಕರಣೆ ಮಾಡಿದುದು ಗೊತ್ತಾಗುತ್ತದೆ. ಈ ಕಥನ ಗೀತೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ನಾಗಮ್ಮಳನ್ನು ಶ್ರೀಮಂತರ ಮನೆಗೆ ಒತ್ತಾಯ ಪೂರ್ವಕವಾಗಿ ಮದುವೆ ಮಾಡಿ ಕೊಡಲಾಗಿತ್ತು. ಇವಳಿಂದ ಬಂದ ತೆರವಿನ ಹಣಕ್ಕಾಗಿ ಗುದ್ದಾಡಿಕೊಂಡಿರುವ ವಿವರವು ದೊರೆಯುತ್ತದೆ. ಮೈದುನ ಬಾಗಿಲು ಹಾಕಿಸಿದ್ದು, ಮಾವ ದಿಂಡಿ ಬಾಗಿಲು ಹಾಕಿಸಿದ್ದು, ಶಿವನೇ ಈ ಉರಿಯಲ್ಲಿ ನಾನೇಗೆ ಹೋಗಲಿ ಎಂಬ ನಾಗಮ್ಮಳ ಮಾತುಗಳು ಎಂತವರ ಹೃದಯವನ್ನು ಛಿದ್ರಗೊಳಿಸುತ್ತದೆ. ಇಲ್ಲಿ ಜನಪದರು ನಾಗಮ್ಮಳ ಕೊಲೆಯಾಯಿತು ಎನ್ನುವ ಮೂಲಕ ಸಹಗಮನದಂಥಹ ಪದ್ಧತಿಯನ್ನು ನಿರಾಕರಣೆ ಮಾಡಿದುದು ಗೊತ್ತಾಗುತ್ತದೆ.

'ಕೊಂಡದ ಕಾಟವ್ವ'ಳ ಸಹಗಮನವನ್ನು ಕುರಿತು ಜನಪದ ಗೀತೆಯೊಂದು ಹುಟ್ಟಿಕೊಂಡಿದೆ.[೧೬] ಈ ಜನಪದ ಗೀತೆಯನ್ನು ಕುರಿತು ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನ ಹುಲಿಕುಂಟೆ, ಹರ್ತಿಕೋಟೆ, ತಿಮ್ಮಣ್ಣನಾಯಕನಕೋಟೆ ಗ್ರಾಮಗಳಲ್ಲಿ ಹಾಡಲಾಗುತ್ತದೆ. ಇವರ

ಪ್ರಕಾರ ಕಾಟವ್ವ ಕೊಂಡಕ್ಕೆ ಬಿದ್ದದ್ದು ಹುಲಿಕುಂಟೆ ಗ್ರಾಮದಲ್ಲಿ ಅವಳು ಬಿದ್ದ ಆ ಕೊಂಡದ ಸ್ಥಳವನ್ನು ಕಲ್ಲಿನಿಂದ ಮುಚ್ಚಿ ಮೇಲೆ ತೋಪು ಏಳಿಸಲಾಯಿತೆಂದು ಆ ತೋಪಿನ ಸ್ಥಳವನ್ನು ತೋರಿಸುತ್ತಾರೆ. ಮಹಾಸತಿ ಕಾಟವ್ವನ ಹೆಸರಿನಲ್ಲಿ ಆಗಾಗ ಪೂಜೆಗಳು ನಡೆಯುತ್ತವೆಯಾದರೂ ಜಾತ್ರೆಯಂತಹ ವಿಶೇಷ ಸಮಾರಂಭಗಳು ನಡೆಯುವುದಿಲ್ಲ. ಕಾಟವ್ವ ಹುಟ್ಟಿದ್ದು ಹರ್ತಿಕೋಟೆಯಲ್ಲಿ ಮದುವೆ ಮಾಡಿ ಕೊಟ್ಟಿದ್ದು ಹುಲಿಕುಂಟೆಗೆ ಈ ಎರಡು ಗ್ರಾಮಗಳು ನಿಡುಗಲ್ಲು ಪಾಳೆಯಗಾರರಿಗೆ ಸಂಬಂಧಿಸಿದ್ದವು.

ಈ ಕಾಟವ್ವನ ಸಹಗಮನ ನಡೆದಿದ್ದು ಕ್ರಿ.ಶ. ೧೭೦೫ ರಲ್ಲಿ ಎಂಬುವುದು ಕೃಷ್ಣಮೂರ್ತಿ ಹನೂರ ಅವರ ಅಭಿಪ್ರಾಯ. ಕಾರಣ ಈ ಜನಪದ ಗೀತೆಯಲ್ಲಿ ಪಾಳೆಯಗಾರ ಮುಮ್ಮಡಿ ಹೊಟ್ಯಾಳ ನಾಯಕನ ಹೆಸರು ಬರುತ್ತಿರುವುದು ಇದಕ್ಕೆ ಕಾರಣವಾಗಿದೆ. ಕಾಟವ್ವ ಗಂಡ ಮುತ್ತಣ್ಣ ಇವನು ಮರಣ ಹೊಂದಿದಾಗ ಕಾಟವ್ವ ಕೊಂಡಕ್ಕೆ ಹೋಗುತ್ತಾಳೆ. ಮುತ್ತಣ್ಣನ ಸಾವು ಹೇಗಾಯಿತೆಂದು ತಿಳಿದು ಬರುವುದಿಲ್ಲ. ಕಾಟವ್ವನ ತಂದೆ ಕುರಿಯಣ್ಣ ಮೈದುನ ಸಿರಿಗೊಂಡಗೌಡ ಈಕೆಯ ಸಹೋದರ ಕಾಟಣ್ಣ ಎಂದು ತಿಳಿದು ಬರುತ್ತದೆ.

ಸಣ್ಣೋಳು ಕಾಟಮ್ಮ ಬಲ್ಲಾನೇರಿಕೊಂಡು
ಬಳ್ಳಿ ಮಲ್ಲಿಗವಾ ಮುಡಕೊಂಡು
ಬಳ್ಳಿ ಮಲ್ಲಿಗವಾ ಮುಡಕೊಂಡು ವುಲಿಕುಂಟೆ
ಅಳ್ಳಿ ಕ್ವಾಲಾಲಿ ಮೆರುದಾಳೆ॥

ಎಂದು ಇವಳನ್ನು ಜನಪದರು ವರ್ಣಿಸುತ್ತಾರೆ.

ಇಲ್ಲಿ ಸತಿ ಹೋಗಲು ನಿರ್ಧರಿಸಿದ ಮಹಾಸತಿ ಕಾಟವ್ವ ಕೊಂಡ ತೆಗೆಯುವ ವಿವರದ ಜೊತೆಗೆ ಹರಕೆ ಹೊತ್ತವರಿಗೆ ಗಂಡು ಸಂತಾನವ ನೀಡುವ ವಿವರವನ್ನು ಕೊಡುತ್ತಾಳೆ. ಇದು ಪದ್ಯದಲ್ಲಿ ಹೀಗಿದೆ.

ಕೊಂಡಾ ತೆಗ್ಯೋರೊ ಚಂದಾಗೀ ತೆಗಿರಪ್ಪ
ಬಳ್ಳೂರಿಂದಾಚೇ ಕಿರುನೆಲ್ಲಿ ಕೆಳಗೇ
ಚೆಂದಾಗಿ ಕೊಂಡಾ ತೆಗಿರ್ಯೆಯ್ಯ
ಈ ಅಲಾದಾ ಮರದ್ಮೇಲೆ ಹತ್ತಿ ಕಡಿಯೋನೇ
ಮತ್ತೊಂದು ಕೊಂಬೇ ಮಿಗಿಲಾಗೀ ಕಡ್ದೋನೋ
ನಾ ಗಂಡೂ ಸಂತನವಾ ಕೊಡುವೇನೊ॥[೧೭]

ಎಂದು ಗಂಡನೊಡನೆ ಕೆಂಡಕೊಂಡವಾಗಲು ಹೊರಟ ಕಾಟವ್ವ ಸಹಗಮನಗೊಳ್ಳುವಾಗ ಕೊಂಡದಲ್ಲಿರುವ ಕಿಚ್ಚನ್ನು ನೋಡಿ ಹೆದರಿ ಹಿಂದೆ ಸರಿಯಬಾರದೆಂದು ಹಾಗೂ ಕೊಂಡದಲ್ಲಿರುವ ಕಿಚ್ಚು ಕಾಣಬಾರದೆಂದು ಅಚ್ಚಡ, ಕಂಬಳಿಗಳಿಂದ ಅಡ್ಡ ತೆರೆ ಕಟ್ಟಿರುವುದು ಪದ್ಯದಲ್ಲಿ ಉಲ್ಲೇಖವಾಗಿದೆ. ಇಂತಹ ವಿವರಗಳನ್ನು ಒಳಗೊಂಡ ಪದ್ಯ ಹೀಗಿದೆ.

ಕಿಚ್ಚ ಗಂಜ್ಯಾಳೆಂದು ಅಚ್ಚಡವ ತೆರೆಕಟ್ಟಿ
ಕಿಚ್ಚಿಗಂಜೋರ ಮಗಳಲ್ಲ
ಕಿಚ್ಚಿಗಂಜೋರ ಮಗಳಲ್ಲ ಸಿರಿಗೊಂಡಗೌಡ
ಅಚ್ಚಡದ ತೆರಿಯಾ ತಗುಸಯ್ಯಾ॥
ಕೊಂಡಕಂಜ್ಯಾಳೆಂದು ಕಂಬ್ಳಿ ತೆರೆಯ ಕಟ್ಟಿಸ್ತ
ಕೊಂಡಗಂಜೋರ ಮಗಳಲ್ಲ
ಕೊಂಡಗಂಜೋರ ಮಗಳಲ್ಲ ಸಿರಿಗೊಂಡಗೌಡ
ಕಂಬಳಿ ತೆರೆಯ ತಗುಸಯ್ಯಾ॥

'ಕೊಂಡದ ಕಾಟವ್ವ'ನ ಸಹಗಮನದ ಸಂದರ್ಭದಲ್ಲಿ ಸತಿಹೋಗಲು ಅರಸರ ಅಪ್ಪಣೆಯ ಅಗತ್ಯವಿತ್ತು ಎಂಬುದನ್ನು ತಿಳಿಸಿಕೊಡುತ್ತದೆ.[೧೮] ಕಾಟವ್ವನ ಮೈದುನ ಸಿರಿಗೊಂಡಗೌಡ 'ಲೋಕದಪ್ಪಣೆಯ ತರಲೋದುದನ್ನು ಪದ್ಯದಲ್ಲಿ 'ದುರುಗಾದಪ್ಪಣೆಯ ತರಲೋದ' ಎಂದು ಹೇಳಲಾಗಿದೆ. ಈಕೆಯ ಅಣ್ಣ ಬಣ್ಣ ತರುತ್ತಾನೆ. ಅಪ್ಪ ಕುರಿಯಣ್ಣ ಕುಪ್ಪಸ ತರುತ್ತಾನೆ. ಅಕ್ಕ ಜಡೆ ಹಾಕುತ್ತಾಳೆ. ಅಮ್ಮ ಜಕ್ಕುಣಿಕೆ ತರುತ್ತಾಳೆ. ಅರಿಷಿಣ ಸೀರೆ ತಂದು ಅಕ್ಕಿಕಾಳು ಇಟ್ಟು ಉಡಿ ತುಂಬಲಾಗುತ್ತದೆ. ಹೀಗೆ ಮುತ್ತೈದೆಯಾಗಿ ಬಂದವಳು ತನ್ನ ಮಗ ಬಾಲ ಸಿರಿಯಣ್ಣನನ್ನು ಮುದ್ದಾಡುತ್ತಾಳೆ. ಅಣ್ಣ ಕಾಟಣ್ಣ, ಅಕ್ಕ, ತಂದೆ, ತಾಯಿ, ಎಲ್ಲರೂ ದುಃಖಿಸುತ್ತಾರೆ. ಆದರೂ ಸತಿ ಹೋಗುತ್ತಾಳೆ. ಇದನ್ನು "ಕೀವಣ್ಣನೆಂಬೋ ಕುದರೀಯ ಏರಿಕೊಂಡು ವೋದಾಳೆ ಕಾಟವ್ವ ಸಿವನರುಮನಿಗೆ"[೧೯] ಎಂದು ಹೇಳಿರುವುದು ಪದ್ಯದಲ್ಲಿ ತಿಳಿದುಬರುತ್ತದೆ. ಈ ರೀತಿಯ ಸತಿ ಗೀತೆಗಳು ಕೊನೆಯಲ್ಲಿ ಮಂಗಳ ಪದ್ಯಗಳಿಂದ ಮುಕ್ತಾಯಗೊಳ್ಳುತ್ತವೆ.

ಎಲ್ಲಾರ ವಚನಾಕು ನಿಲ್ಲೋಳೆ ಸರಸೋತಿ
ನೆಲ್ಲು ತೆನೆಯಾಂಗೆ ಬಳುಕೂತ।
ಬಾಗೂತ ಬಾರಮ್ಮಾ ನಮ್ಮ ವಚನಾಕ
ನೀರಿಟ್ಟು ನೆನದೆನೆ ನಾರಿ ಕಾಟಮ್ಮನ

ನೀರಿಗೆ ಬತ್ತೇವ ನಡೆಸೋಳು। ಕಾಟಮ್ಮಾನ

ನೀರಿಟ್ಟು ನಾವು ನೆನೆದೇವು

ಎಸರಿಟ್ಟು ನ್ಯನದೇವು ದೆಸೆವಂತ ಕಾಟಮ್ಮ ಎಸರೀಗೆ ಬತ್ತೇವು

ಕೊಂಡದ ಕಾಟವ್ವ ಗೀತೆಯಲ್ಲಿ ಕಾಟವ್ವನೂ ಬಹಳ ಚಿಕ್ಕವಳು 'ಅಸುಮಗಳು ಕಾಟಮ್ಮ' ಸಣ್ಣೋಳು ಕಾಟಮ್ಮ' ಎಂಬ ಮಾತುಗಳು ಗೀತೆಯೊಳಗೆ ಮತ್ತೆ ಮತ್ತೆ ಪುನರುಕ್ತಿಯಾಗುತ್ತವೆ. ಗಂಡ ಸತ್ತು ಹೋದಾಗ 'ವಡ್ಡಗೆರೆ ನಾಗಮ್ಮ'ಳು ಬಹಳ ಚಿಕ್ಕವಳು. ಆರು ವರುಷದ ಮಗಳು ತಿಳಿಯದ ಕಂದಮ್ಮನನ್ನು ಕೊಂಡಕ್ಕೆ ಧಾರೆ ಎರೆಯುತ್ತಾರೆಂಬ ಉಲ್ಲೇಖ ಬರುತ್ತದೆ. 'ಮಾಚನಹಳ್ಳಿಯ ಮಾಸ್ತಿಗೀತೆ'ಯಲ್ಲೂ ಇದೇ ವಿಷಯ ಬರುತ್ತದೆ. ಹಾಗಾಗಿ ಹಾಡುವವರು ಮಾಸ್ತ್ಯಮ್ಮನನ್ನು ಕೋಪ ಮಾಡಿಕೊಳ್ಳಬೇಡ ಎನ್ನುವ ಧಾಟಿಯಲ್ಲಿ ಕೇಳಿಕೊಳ್ಳುತ್ತಾರೆ.

ವಡ್ಡೆಗೆರೆ ನಾಗಮ್ಮ ಮಾಸ್ತಿಗೀತೆಯಲ್ಲಿ ನಾಗಮ್ಮನಿಗೆ ಒಂದು ಗುಡಿ ಕಟ್ಟಿಸಿದ ವಿವರ ಬರುತ್ತದೆ. ಊರವರು ನಾಗಮ್ಮನ ಪ್ರತಿಮೆಯನ್ನು ಪ್ರತಿಷ್ಠಾಪಿಸುತ್ತಾರೆ. ಲೋಕದ ಜನರೆಲ್ಲ ಬಂದು ನಾಗಮ್ಮನ ಪೂಜೆ ಮಾಡಿ ಈಡಗಾಯಿ, ಹಣ್ಣು ಫಲಗಳಿಂದ ಉಡಿ ತುಂಬುತ್ತಾರೆ. ಜೊತೆಗೆ ಹರಕೆ ಹೊತ್ತುಕೊಳ್ಳುವುದರ ಮೂಲಕ ಮಕ್ಕಳನ್ನು ಕೊಡೆಂದು ಪ್ರಾರ್ಥಿಸುತ್ತಾರೆ.

"ಕಂದನ ಕೊಡಮ್ಮ ನನಗೊಂದು ನಾಗಮ್ಮ

ವಪ್ಪುಳ್ಳ ಹೆಸರ ಕರದೇವು ನಾಗಮ್ಮ

ನಿನಗೆ ವೊಕ್ಕಲು ಆದೇವು॥

ಪುತ್ತುರನ ಕೊಡಮ್ಮ ನಮಗೊಂದು ನಾಗಮ್ಮ

ನಿನ್ನ ಚೆಲುವ್ಹೆಸರ ನಾವು ಕರದೇವು

ನಾಗಣ್ಣನೆಂದು ಕರೆದೇವು ನಾಗಮ್ಮ

ನಾಗಮ್ಮನೆಂದು ಕರದೇವು"[೨೦]

ಹೀಗೆ ಬೇಡಿ ಹರಕೆ ಕಟ್ಟುತ್ತಾರೆ. ಮಾಸ್ತೆಮ್ಮನಿಗೆ ಒಕ್ಕಲಾಗಿ ಅನೇಕ ಮನೆತನಗಳು ಮಾಸ್ತಿ ಇರುವ ಹಳ್ಳಿಗಳಲ್ಲಿ ಇವೆ. ಇವರು ಮಕ್ಕಳಾದರೆ ಮಾಸ್ತ್ಯಮ್ಮನ ಹೆಸರನ್ನೇ ಇಡುತ್ತಾರೆ.

ಅಕ್ಕಿಲಿ ಅಸೆಬರೆದು ಅವಳದಲಿಗುಡಿ ಕಟ್ಟಿ

ಬಟ್ಟೆಮುತ್ತುರಂಗೋಲಿನಿಟ್ಟು ಸೃಷ್ಟಿಗೀಸಸ್ವರನ

ಮಗಳು ಮಾದೇವಿ ಮಾಲಕ್ಷ್ಮಿ ನಾಗಮ್ಮಾಗೆ

ಕಟ್ಟಿಸುವೆ ಗುಡಿ ಕಂಬುಗಳು ಜಯಮಂಗಳಾ ನಿತ್ಯಸುಬಮಂಗಳಾ
ಅಕ್ಕನಾಗಮ್ಮಾನ ಕಪ್ಪೀನ ಕೆಳಗಾಳು ವಪ್ಪಾವಾದವು
ಮುತ್ತಾತಗದು ಅಕ್ಕನೀಬಾರಂದು ಕರದು
ಕೈವಳಗಿಟ್ಟು ಬಾಲಾರಸಂತಾನ ಕೊಡುತ್ತಿದ್ದಾಳು
ಕೊಡತಾಳು ಮಾದೇವಿ ಮಾಲಕ್ಷ್ಮಿ ನಾಗಮ್ಮ ಜಯಮಂಗಳಾ ನಿತ್ಯಸುಬಮಂಗಳಾ
ಪಟ್ಟೇದ ಸೀರುಟ್ಟು ಮುತ್ತಿನ ಬಟ್ಟಿಟ್ಟು ಅಕ್ಕ
ಈರಗೊಂಡಾಕ ಕೊಲೆಯಾದಳು
ಈರಗೊಂಡಾಕ ಕೊಲೆಯಾದಳು। ಅಕ್ಕನಾಗಮ್ಮಾಗೆ
ಆರುತಿಯಾನೆತ್ತೀರಿ ಜಯಮಂಗಳಾ ರಾಮ ಸುಬ ಮಂಗಳಾ।

ವೈಯಕ್ತಿಕ ಪ್ರತಿಷ್ಠೆಯಿಂದಾಗಿ ಸಮಾಜದಲ್ಲಿ ಪತ್ನಿ ಸತಿಹೋಗುವುದನ್ನು ಗೌರವವೆಂದು ಭಾವಿಸಿದ್ದಳಲ್ಲದೇ ತನ್ನ ಹೆಸರನ್ನು ಸಮಾಜ ಹೊಗಳಿ ಚಿರಸ್ಥಾಯಿಯಾಗಿ ಉಳಿಸುತ್ತದೆಂದು ಮಹಿಳೆಯರು ನಂಬಿಕೊಂಡಿದ್ದರು ಹೀಗೆ ಸ್ತ್ರೀಯರು ಮನಸ್ಥಿತಿ ಸತಿಪದ್ಧತಿಯನ್ನು ಉಳಿಸಿಕೊಂಡು ಬೆಳೆಸಲು ಕಾರಣವಾದರು. ಪಾತಿವ್ರತ್ಯದ ಪರಿಕಲ್ಪನೆಯಿಂದಾಗಿ ಸ್ತ್ರೀ ಸಮೂಹ ಗಂಡನೊಡನೆ ಮರಣ ಹೊಂದುವುದು ಗೌರವ ಹಾಗೂ ಕೀರ್ತಿದಾಯಕವೆಂದು ಭಾವಿಸತೊಡಗಿದರು. ಗರ್ಭಿಣಿಯರಿರುವವರಿಗೆ ಮತ್ತು ಚಿಕ್ಕಮಕ್ಕಳಿರುವವರಿಗೆ ಸಹಗಮನವಾಗುವುದನ್ನು ನಿಷೇಧಿಸಲಾಗಿತ್ತು. ಆದರೂ ಕೆಲವು ಮಾಸ್ತಿಗೀತೆಗಳು ಚಿಕ್ಕಮಕ್ಕಳಿರುವ ವಿಧವೆಯರೂ ಸಹಗಮನ ಮಾಡಿದ ವಿವರವನ್ನು ಕೊಡುತ್ತವೆ.

ವುಲಿಕುಂಟೆಯ 'ಕೊಂಡದ ಕಾಟವ್ವ' ಗೀತೆಯಲ್ಲಿ ಕಾಟವ್ವ ತನ್ನ ಬಾಲ ಸಿರಿಯಣ್ಣನನ್ನು ಬಿಟ್ಟು ಸತಿ ಹೋಗುತ್ತಾಳೆ.[೨೧] ಈ ರೀತಿಯ ನಿದರ್ಶನಗಳನ್ನು 'ತವರ ಹಂಗ್ಹರಿದು ಬರತೇನಿ' ಜನಪದ ಗೀತೆಯಲ್ಲೂ, 'ಮಾಚನಹಳ್ಳಿ ಮಾಸ್ತಿ'ಯ ಜನಪದ ಗೀತೆಯಲ್ಲೂ ನೋಡಬಹುದು. 'ಅಡಗನಹಳ್ಳಿಯ ಮಾಸ್ತಿ ಕಥನಗೀತೆ'ಯಲ್ಲೂ ಎದೆ ಕುಡಿಯುವ ಕಂದನನ್ನು ಮಾಸ್ತಿ ಬಿಟ್ಟು ಕೊಂಡಕ್ಕೆ ಹೋಗುತ್ತಾಳೆ. ಮಹಾಸತಿ ವೀರದಿಮ್ಮವ್ವ ಮಾಸ್ತಿಗೀತೆಯಲ್ಲೂ ವೀರದಿಮ್ಮವ್ವ ಮಗುವನ್ನು ಬಿಟ್ಟು ಕೊಂಡವೇರುತ್ತಾಳೆ ಎಂದು ಗೀತೆ ವರ್ಣಿಸುತ್ತದೆ.[೨೨] ಹೀಗೆ ಸತಿ ಆಚರಣೆ ಸಮಾಜದಲ್ಲಿ ಭದ್ರವಾಗಿ ಬೇರೂರಿದ ಒಂದು ಕ್ರಿಯೆಯಾಗಿತ್ತು ಎಂಬುವುದಕ್ಕೆ ಈ ಘಟನೆಗಳೇ ಸಾಕ್ಷಿಯಾಗಿವೆ.

ಬಾಳೇಯ ಮರಕ ಬಾಲನ ತೊಟ್ಟಿಲು ಕಟ್ಟಿ
ಬಾಲಾ ಸಿರಿಯಣ್ಣ ಅಳದೀರೋ

ಬಾಲಾ ಸಿರಿಯಣ್ಣ ಅಳದೀರೋ ನಿಮ್ಮಮ್ಮ
ಬಾಯಾರಿದರೂ ಬರವಲ್ಲಾಳೋ॥
ಸಂದಿವೊಕ್ಕಾಳೆ ಕಂದನ ಮುದ್ದಾಡಾಳೆ
ಇಂದೇ ನನ್ನ ಕಂದನ ಅಗಲೀದೆ
ಇಂದೇ ನನ್ನ ಕಂದ ಅಗಲೀದೆ ವುಲಿಕೊಂಟೆ
ಮೂರಾದಿಗೆ ಕಯ್ಯ ಮುಗದಾಳೆ॥

'ನಾಗವ್ವ' ಸತಿಹೋದ ಘಟನೆಯನ್ನು 'ಹಣೆಗಂಟು ನಲುಗಿ ಉರಿದ್ಹೋದೋ' ಎಂಬ ಕಥನಗೀತೆಯಲ್ಲಿ ವಿವರಿಸಲಾಗಿದೆ.[೨೩] ನಾಗವ್ವನನ್ನು ದಿಲ್ಲಿ ದೊರೆಗಳು ಹೆಣ್ಣು ಕೇಳಲು ಬಂದಿದ್ದಾರೆಂದೇ ಗೀತೆ ಪ್ರಾರಂಭವಾಗುವುದನ್ನು ನೋಡಿದರೆ ನಾಗವ್ವಳ ವ್ಯಕ್ತಿತ್ವ ಅಂಥ ಶ್ರೇಷ್ಠಮಟ್ಟದ್ದಾಗಿದೆ. ಎನ್ನುವುದನ್ನು ನಿರೂಪಿಸುವುದೇ ಇಲ್ಲಿ ಕವಿಯ ಉದ್ದೇಶವಾಗಿದೆ. 'ಸಿರಿವಂತರ ಮನೆಗೆ ಕೊಡಿರಯ್ಯ ನವಿಲೂರ ಹೋರಾಡೋ ಮಗನಿಗೆ' ಎಂದು ಹೇಳುತ್ತಾರೆ. ನಾಗಮ್ಮಳ ಅಣ್ಣ ತನ್ನತಂಗಿಯನ್ನು ಕೊಡಲು ಒಪ್ಪುವುದಿಲ್ಲ ಅವಳು ಇನ್ನೂ ಸಣ್ಣವಳು, ಸೀರೆ ಉಡಲುಬಾರದು. ಆದುದರಿಂದ ಕಲಿಯಾದ ನವಿಲೂರು ಗೌಡರಿಗೆ ಹೆಣ್ಣು ನಾವು ಕೊಡುವುದಿಲ್ಲವೆಂದು ಹೇಳುತ್ತಾನೆ. ಆದರೂ ಕೊನೆಗೆ ನಾಗಮ್ಮಳ ಅಣ್ಣನನ್ನು ಎಲ್ಲರೂ ಕೂಡಿ ಒಪ್ಪಿಸುತ್ತಾರೆ. ಮದುವೆ ಕಾರ್ಯ ನಡೆಯುವಾಗ ಕೆಲವು ಅಪಶಕುನಗಳಾಗುತ್ತವೆ. ನಾಗವ್ವನಿಗೆ ಬಳೆತೊಡುವಾಗ ಬಲಗಡೆಗೆ ಬೆಕ್ಕುಗಳೆರಡು ಸೀನುವುದು ಮುಂದೆ ಕೇಡಾಗುವುದನ್ನು ಸೂಚಿಸುತ್ತದೆ. ಮದುಮಕ್ಕಳಿಗೆ ಎಣ್ಣೆ ಹಚ್ಚುವಾಗ ವರನಾದ ಚಿಂದಯ್ಯನ ತಂಗಿ ಚೆಲವಮ್ಮ ಅಲ್ಲಿಗೆ ಬಂದಿದ್ದಾಳೆ. ಅವನು ಏನು ಸುದ್ದಿ ತಂದೆಯೆಂದು ಕೇಳಿದಾಗ ಬೇಡಾರು ಆಡ ಹೊಡೆದಾರು। ಅನ್ನೋ ಸುದ್ದಿ ನಾಡಮೇಲೆಲ್ಲಾ ಹರಿದಾವು ಎಂಬುದನ್ನು ಹೇಳುತ್ತಾಳೆ. ಇಲ್ಲಿ ದಿಲ್ಲಿ ಸುಲ್ತಾನನ ಪ್ರತಿನಿಧಿಯಾಗಿ ಆಳುತ್ತಿರುವವನಿಗೆ ಸುದ್ದಿ ಮುಟ್ಟಿತೆಂದೇ ಅರ್ಥ. ಈ ಸುದ್ದಿ ಕೇಳಿದ ಚಿಂದಯ್ಯ ಮದುಮಗ ನಾಗಿದ್ದರೂ ಬಿಲ್ಲು ಹಿಡಿದು ಬೇಡರ ಸಂಹಾರಕ್ಕೆ ಸಿದ್ಧವಾಗುತ್ತಾನೆ.

ಕಟ್ಟಿದ ಕಂಕಣ ಇಕ್ಕಿದ ಸೆರೆಗ್ಹಣ್ಣೆ
ಅಪರಂಜಿ ಬಿಲ್ಲು ಬಲಗೈಲಿ, ಹಿಡುಕೊಂಡು
ಬಾಗುತ ಸೀಗೆಗೆ ನಡೆದಾನೆ

ಇಲ್ಲಿ ಬೇಡರ ಚಿಂದಯ್ಯ ಏಕಾಂಗಿಯಾಗಿ ದಂಡನೆಲ್ಲ ಮುರಿಯುತ್ತಾನೆ.

ಬೇಡರ ದಂಡನೆಲ್ಲ ಒಬ್ಬನೇ ಕಡಿದಾನೆ
ನೀರು ತತ್ತ ಹೋಗೆ ಕಿರುತಂಗಿ । ಅಂದಾರೆ
ಹೆಂಗೋಗಲಣ್ಣ ರಣದಾಗೆ

ಆಡುಗಳನ್ನು ಮರಳಿಸಿದ ಚಂದಯ್ಯ ಆಡುಗಳನ್ನು ಎಣಿಸುತ್ತಾನೆ. ಅವುಗಳಲ್ಲಿ ಕುಂಟಾಡಿನ ಮರಿಯೆ ಇರಲಿಲ್ಲ. ಅದನ್ನು ತರಲು ಅಲ್ಲಿಯೇ ಸೀಗೆಯ ಮಳೆಯಲ್ಲಿ ಮಲಗುತ್ತಾನೆ. ಮುಂಜಾನೆ ಬೇಡರ ದಂಡೆಲ್ಲ ಸೇರಿ ಚಂದಯ್ಯನನ್ನು ಕಡಿಯುತ್ತಾರೆ.

ಮುಂಗೋಳಿ ಕೂಗಿತು ಮೂಡು ಕೆಂಪೇರಿತು
ಸೀಗೆಯ ಮಳೆಯಲ್ಲಿ ಮಲಗವನೆ ।ಚೆಂದಯ್ಯ
ಹಾಳು ಬೇಡಾರು ಅವನ ಕಡಿದಾರು

ಇದನ್ನು ಕೇಳಿ ನಾಗವ್ವ ಆಕೆಯ ಬಂಧು ಬಳಗದವರೆಲ್ಲ ಸೇರಿ ದುಃಖಿಸುತ್ತಾರೆ. ಇದನ್ನರಿತ ನಾಗವ್ವ ಸತಿ ಹೋಗಲು ನಿರ್ಧರಿಸುತ್ತಾಳೆ. ಕೊಂಡದ ಸಿದ್ಧತೆಯು ನಡೆಯುತ್ತದೆ. ಕೊಂಡದ ಸುತ್ತ 'ಹುಸೆಹುಯ್ದು' ಬಂಗಾರದ ಕಳಸ ನಡುವಿರಿಸಿ ನಾಗವ್ವನನ್ನು ಕೊಂಡಕ್ಕೆ ಧಾರೆ ಎರೆಯುತ್ತಾರೆ. ಕಿಚ್ಚಿನ ಸುತ್ತ ನುಚ್ಚಕ್ಕಿ ಹಸೆ ಹುಯ್ದು ಮುತ್ತಿನ ಕಳಸ ನಡುವಿರಿಸಿ ಕಿಚ್ಚಿಗೆ ಆಕೆಯನ್ನು ಧಾರೆ ಎರೆಯುತ್ತಾರೆ. ತಂದೆ ತಾಯಿ ಸತಿ ಹೋಗಬೇಡವೆಂದು ಹೇಳಿದರೂ ಕೇಳದೇ ಕಿಚ್ಚನ್ನು ಹತ್ತುವುದೇ ಲೇಸೆಂದು ನಾಗವ್ವ ಸತಿಹೋದುದನ್ನು ಪದ್ಯ ಹೀಗೆ ಚಿತ್ರಿಸುತ್ತದೆ.

ಹೆಣ್ಣಿಗೆ ಮಣ್ಣು ಬಿದ್ದೋ ಕಣ್ಣಿಗೆ ಸತ್ತೆ ಬಿದ್ದೊ
ಸಣ್ಣ ಸೀರೆ ಮ್ಯಾಲೆ ಕಿಡಿಬಿದ್ದೊ। ನಾಗವ್ವನ
ಹಣೆಗಂಟು ನಲುಗಿ ಉರಿದ್ಹೋದೊ॥

ಮಹಾಸತಿ ನಾಗವ್ವ ದೈವೀ ಸ್ವರೂಪಳಾಗಿ ಇಂದಿಗೂ ಪೂಜೆಗೊಳ್ಳುತ್ತಿರುವುದನ್ನು ಕಾಣಬಹುದು. ಜನಪದ ಖಂಡಕಾವ್ಯದಲ್ಲಿ ಬರುವ 'ನಾಗವ್ವ' ಪತಿಯೊಂದಿಗೆ ಚಿತೆಯೇರಿರುವುದು ಸತಿಯಾಗಲಿರುವವಳ ಪತಿಯ ಮೇಲಿನ ಅಮರ ಪ್ರೇಮವನ್ನು ಸಾರುವವುಗಳೇ ಆಗಿವೆ.[೨೪] ಸತಿಯಾದವಳಿಗೆ ಪ್ರಾಣ ಪತಿಯೇ ಮರಣ ಹೊಂದಿ ಪ್ರೀತಿಯ ಬದುಕು ಶೂನ್ಯವಾದಾಗ ಸಾವು ಬೇಕೆನಿಸುವುದು ವಾಸ್ತವ ಸತ್ಯ. ಗಂಡನ ಮೇಲಿನ ನೈಜ ಪ್ರೇಮವನ್ನು ತಿಳಿಸುವುದು ಅವಳಿಗೆ ಇರುವ ಒಂದೇ ಮಾರ್ಗ ಎಂಬುದು ಪತಿಯ ಮೇಲಿನ ಅಮರ ಪ್ರೇಮವನ್ನು ಸಾರುತ್ತದೆ.

'ಸಾಳುಬಾಯಿಯ ಅನುಗಮನ'ದ ವಿವರಗಳು 'ಧೋಂಡೋಜಿವಾಘ' ಎಂಬ ಕೋಲು ಪದದಲ್ಲಿ ಬರುತ್ತದೆ.[೨೫] ದೋಡೋಜಿ ಪಂತ, ಧೋಂಡೋಜಿ ವಾಗರ ಕಾಳಗದ ವಿವರಗಳು ಈ ಕೋಲಿನ ಪದದಲ್ಲಿವೆ. 'ಧೋಡೋಜಿ ಪಂತ'ನ ರಣ ಕೌಶಲ್ಯವನ್ನು ಜನಪದ ಕವಿ ಆರಂಭಕ್ಕೆ ವರ್ಣಿಸುತ್ತಾನೆ. ಆನೆಬಲ, ಕುದರೆಬಲ, ಹತ್ತೆಂಟು ಫಿರಂಗಿಗಳಿದ್ದವು. ಆಗ ಮುಲ್ಕಿರಾಜನ ದಂಡು ರಾಜ್ಯಕ್ಕೆ ಬರುತ್ತದೆ.

ದೊಂಡೋ ಪಂತನ ವೈರಿ ಬಲ ಕೂಡಿತು.
ಗದುಗು ಡಂಬಳ ಠಾಣ್ಯ ಬಿಡದೆ ಮಾಡುತ
ಪುಂಡತನದಲ್ಲಿ ಅಣ್ಣಿಗೇರಿಗೆ ಬಂದನು
ದಂಡು ಕಟ್ಟಿದ ಗುಂಡು ಹಾರಿಸಿದ ಹಳ್ಳಿಯ
ಚಂಡು ಕೊಯಿದನು ಮಲೆತುನಿಂತ ವೈರಿಯ

ಹುಬ್ಬಳ್ಳಿಗೆ ಬಂದು 'ಹಳ್ಳೂರ' ಕಿಲ್ಲೆಯನ್ನು ಬೇಡುತ್ತಾನೆ. ರಾಘಪಂತೆಗೆ ಗೋಡೆ ಠಾಣ್ಯ ಬಿಡುಯೆಂದು ಕೌಲು ಮಾಡಿಕೊಳ್ಳಲು ಹೇಳಿದನು. ರಾಘಪಂತನು ಗೋಡೆ ಹ್ಯಾಂಗ ಬಿಡಲೆಂದ ಅದಕ್ಕೆ ಧೋಂಡೊ ಪಂತ ನಾ ಗೆದ್ದರೆ ಠಾಣ್ಯ ನಿಮ್ಮದೆಂದು ಹೇಳಿದಾಗ ಯುದ್ಧ ಪ್ರಾರಂಭವಾಗುತ್ತದೆ. ಇಲ್ಲಿ 'ಗೋಕುಲ' ನಾಪತ್ತೆಯಾಗಿರುತ್ತಾನೆ. ಕಳ್ಳ ಬಂಟರನ್ನು ಇವನು ಎಲ್ಲಿರುವನೆಂಬ ಸುದ್ದಿ ತರಲು ನೇಮಿಸಲಾಗುತ್ತದೆ. ಗೋಕ್ಲೆನನ್ನು ಹುಡುಕುವಾಗ ಧೋಂಡೋಜಿ ಪಂತನಿಗೆ ಧೋಂಡೋಜಿವಾಗ ಬಂದನೆಂಬ ಸುದ್ದಿ ಬರುತ್ತದೆ. ಅದರಿಂದ ದೋಂಡೊಜಿಪಂತನಿಗೆ ಗಾಬರಿಯಾಗುತ್ತದೆ. ದೋಂಡೋಜಿಪಂತನು ಮಗ ಅಪ್ಪಾಸಾಹೇಬನನ್ನು ಕರೆಸಿಕೊಂಡು ಮಾತಾಡುತ್ತಾನೆ. ದೋಡೋಂಜಿ ವಾಘನ ದಂಡು ಬಹಳ ಇದೆ ಎಂದು ವಿಚಾರ ಮಾಡಿ ತಮ್ಮ ದಂಡನ್ನು ಹಳ್ಯಾಳ ಕಡೆಗೆ ನಡೆಸಬೇಕೆಂದು ನಿರ್ಧರಿಸಿ ಹೋಗುತ್ತಾನೆ.

ಆನೆ ಅಂಬಾರಿ ಝುಂಡೆ ಮೊದಲಾಗಿ ಜಾಡಿಸಿ ದಂಡೆಲ್ಲ ಹಳ್ಯಾಳ ಹಾದಿ ಹಿಡಿಯಿತು. ಧೋಂಡೋಪಂತನು ಕಿತ್ತೂರ ಠಾಣ್ಯ ಬಿಟ್ಟು ಹೋಗುತ್ತಾನೆ. ಜಟ್ಟಿಂಗಕಾಕರನೆನ್ನುವ ಕುದರೆ ಸರದಾರ ಪಿತೂರಿ ಮಾಡಿ ಕಾಗದ ಬರೆದು ಕಳುಹಿಸುತ್ತಾನೆ. ಧೋಂಡೋಜಿ ಅದನ್ನು ಓದಿ ಗುಂಡು ಹಾರಿಸಿ ದಂಡ ಕೂಚು ಮಾಡಿದ. ಮುಂದೆ ಹೋಗುವ ಫೌಜಿಗೆ ಮುತ್ತಿರೆಂದನು. ಧೋಂಡೋಪಂತನ ಹಿಡಿದು ತನ್ನವರೆಂದು ಹೇಳುತ್ತಾನೆ. ತಂದೆ ಮಗ ಇಬ್ಬರೂ ಓಡಿಹೋದರೆಂದು ಕೇಳಿದ ಧೋಂಡೋಜಿ ವಾಘನು ಅವರ ಬೆನ್ನು ಹತ್ತುತ್ತಾನೆ. ಹೀಗೆ ಹೋಗುವಾಗ ಧೋಂಡೋಪಂತನ ತೋಪು ಸಾಗದೆ ಗಾಲಿ ಮುರಿದು ಹಾಗೆ ನಿಂತುಕೊಳ್ಳುತ್ತದೆ. ಅಲ್ಲೆ ಪಾಲಕಿ ಇಳಿಸಿ ನಿದ್ರೆ, ಸ್ನಾನ, ಫಲಾಹಾರ ಮುಗಿಸಿ ನಿಂತಿರುವಾಗ ಭರದಿಂದ ವೈರಿ ಬರುತ್ತಿರುವುದು

ಕಂಡು ಬರುತ್ತದೆ. ಸುತ್ತಲೂ ವೈರಿಯ ದಂಡು ಮುತ್ತುತ್ತದೆ. ಕೆಲವರು ಓಡುತ್ತಾರೆ. ತಂದೆ ಸಿಕ್ಕನು ಎಂಬುವುದನ್ನು ಕೇಳಿ ಹಿರಿಯ ಮಗ ಮರಳಿ ರಣಕ್ಕೆ ನಡೆಯುತ್ತಾನೆ.'ಅಪ್ಪ ಗೋಕುಲ ಹೆದರಬೇಡ'ವೆಂದು ಅಪ್ಪಾ ಸಾಹೇಬ ಶತ್ರುಗಳನ್ನು ಕಡಿಯುತ್ತಾನೆ. ರಣರಂಗ ಭಯಂಕಾರವಾಯಿತು. ಇಬ್ಬರೂ ಸಿಗುತ್ತಾರೆ. ರಣರಂಗದಲ್ಲಿ ಅಪ್ಪಾಸಾಹೇಬ ದಣಿದು ನಿಂತುಕೊಳ್ಳುತ್ತಾನೆ. ಇದನ್ನು ನೋಡಿ ಶತ್ರು ಹೊಡೆದಾಗ ಅಪ್ಪಾ ಸಾಹೇಬ ಜಕಮು ಹತ್ತಿ ಬಿದ್ದು ಸಾಯುತ್ತಾನೆ.

ರಣದಿ ಬಿದ್ದನು ಗುಣವಂತ ದೊರೆ ನೋಡಾ
ಹರನ ದಯ ತಪ್ಪಿ ಮರಣವೊದಗಿ ಬಂದಿತು
ಬಿದ್ದಸೂರನ ಮುತ್ತಿ ತಲೆಯಕೊಯ್ಯಲು
ಭಕ್ತವತ್ಸಲ ಹರಿಯೆಯೆಂದು ಮಡಿದನು

ಗೋಕುಲನು ಕೂಗುತ್ತ ಶತ್ರುಗಳನ್ನು ಸಂಹಾರ ಮಾಡುತ್ತಾನೆ. ಅನೇಕರು ಮರಣ ಹೊಂದುತ್ತಾರೆ. ದಣಿದ ಧೋಂಡೊಜಿಪಂತನ ಕುದರೆ ನೆಲಕ್ಕೆ ಬೀಳುತ್ತದೆ. ಧೋಂಡೋಪಂತನು ಭೂಮಿಗೆ ಬೀಳುತ್ತಾನೆ. ಮುಲಕುಖಾನನ ಬಲ ಮುತ್ತಿ ಧೋಂಡೋಪಂತನನ್ನು ಹಿಡಿದು ಅವನ ತಲೆ ಕಡಿಯಲಾಯಿತು.

ಬಿಡದೆ ಮೊಗಲರು ಅವನ ತಲೆಯ ಕೊಯ್ವರು
ನೆಗೆಹಿ ಕುತ್ತಿಗಿ ರಣದಿ ಕೊರೆವ ಸಮಯದಿ
ಎನ್ನ ಕುಲದೊರೆ ರಾಮ ಎಂದು ಮಡಿದನು

ಎಂದು ಧೋಂಡೋಪಂತನ ಮರಣವನ್ನು ಹೇಳಲಾಗಿದೆ. ಧೋಂಡೋಪಂತನು ಅಪ್ಪಾ ಸಾಹೇಬರಿಬ್ಬರೂ ಕೂಡಿ ರಣದೊಳು ಯುದ್ಧ ಮಾಡಿ ಮಡಿದರು. ಇವನ ಮಕ್ಕಳನ್ನು ತೋರಿಸೆಂದು ನವಾಬ ಹೇಳಿದಾಗ ಸಣ್ಣಮಗ ತಪ್ಪಿಸಿಕೊಂಡು ಹಳ್ಯಾಳ ಕಿಲ್ಲೆಯೊಳಗೆ ಇರುವನೆಂದು ಹೇಳುತ್ತಾರೆ. ಉಳಿದ ಮಂದಿ ಕುದರಿ 'ಮದನಸಿಂಗ ಚಿಂತಾಮಣಿರಾಯ' ಯುದ್ಧಮಾಡದೆ ಓಡಿ ಹೋದರು ಎಂದು ವರದಿ ಒಪ್ಪಿಸುತ್ತಾರೆ. ನವಾಬ ಅವರ ಹೆಣ ತಂದು ಕಿತ್ತೂರ ಮುಂದೆ ಇಡುತ್ತಾನೆ. ಅನಂತರ ಹೆಣಗಳನ್ನು ಸುಡಲಾಗುತ್ತದೆ. ಇತ್ತ ಹಳ್ಯಾಳ ಕೋಟೆಯಲ್ಲಿ ಸಣ್ಣ ಮಗ ಬಾಪುಸಾಹೇಬ, ಮದನಸಿಂಗ ಚಿಂತಾಮಣಿರಾಯ ದುಃಖಿಸುತ್ತಾರೆ. ಬಾಪುಸಾಹೇಬ ತನ್ನ ತಂದೆ ಅಣ್ಣ ಅಪ್ಪಾಸಾಹೇಬ ಮರಣ ಹೊಂದಿದ್ದಕ್ಕೆ ದುಃಖ ಪಡುತ್ತಾನೆ. ರಣಭೂಮಿಯಲ್ಲಿ ತಂದೆ ಮತ್ತು ಅಣ್ಣನ ಶವ ಹುಡುಕುತ್ತಾರೆ. ಅಣ್ಣನ ರುಂಡ ಸಿಗುತ್ತದೆ. ಅದನ್ನು ಹಿಡಿದು ದುಃಖಿಸುತ್ತಾನೆ. ಬಾಪುಸಾಹೇಬ ಅಣ್ಣನ ರುಂಡವನ್ನು ಉಡಿಯೊಳಗೆ ಕಟ್ಟಿಕೊಂಡು ಬಲಸಹಿತ ಹಿಂದಕ್ಕೆ ಹೋಗುತ್ತದೆ. ಹಳ್ಯಾಳಕ್ಕೆ ಹೋಗಿ ಅಲ್ಲಿ ತಲೆಯನ್ನು ದಹನ ಮಾಡುತ್ತಾರೆ. ಸ್ನಾನಮಾಡಿ ನೇಮ ತೀರಿಸುತ್ತಾರೆ. ರಾಮುತರೆಲ್ಲರೂ

ಅಲ್ಲಿ ಸೇರುತ್ತಾರೆ. ರಣಧೀರ ಮದನಸಿಂಗ, ಚಿಂತಾಮಣಿರಾಯ, ಶೂರರು, ಬಂಟರು, ಸರದಾರರು, ಮಾನ್ನೇರು ಎಲ್ಲ ಸೇರಿ ಕುಳಿತು ಧೋಂಡೋಪಂತ ಮತ್ತು ಅಪ್ಪಾಸಾಹೇಬನ ಮರಣಕ್ಕೆ ಮರಗುತ್ತಾರೆ. ಇತ್ತ ಚಿಂತಾಮಣಿರಾಯ ಕರಣಿಕರು ನರಗುಂದಕ್ಕೆ ಕಾಗದ ಬರೆಯುತ್ತಾರೆ. ನರಗುಂದದಲ್ಲಿ ಸೊಸಿಗೆ ಕೆಟ್ಟ ಸ್ವಪ್ನ ಬೀಳುತ್ತದೆ. ಅತ್ತೆ, ಸೊಸೆ ಕೂಡಿ ಚರ್ಚಿಸುತ್ತಾರೆ(ಆನಂದ ಬಾಯಮ್ಮ ಅತ್ತೆ ಸೊಸೆ ಸಾಳೂಬಾಯಿ). ರಾಮನ ಮೆರವಣಿಗೆಗೆ ರಾಜಬೀದಿಯಲ್ಲಿ ಕಂಡೆ ಪಾಲಕಿ ಬಂದು ಬಾಗಿಲ ಮುಂದುಳಿವೆ ನನ್ನ ಬಾರೆಂದು ಕರೆದಿದ್ದಾರೆ. ಮುತ್ತಿನ ಮೂಗುತಿ ಮುರಿದಿರುವ, ಗುಳದಾಳಿ ಕಳೆದು ಹೋಗುವುದು, ಬುಗುಡಿ ಕಳೆದಿರುವುದು, ಖಡ್ಗ ಮುರಿದಿರುವುದು, ಕಿಚ್ಚು ಸುಡುವ ಕೆಟ್ಟ ಸ್ವಪ್ನವನ್ನು ಸೊಸೆ ಸಾಳುಬಾಯಿ ಕಾಣುತ್ತಾಳೆ. ಇದನ್ನೆಲ್ಲ ಕೇಳಿ ದಂಡಿನ ಸುದ್ದಿ ತರಲು ಆಳನ್ನು ಕಳುಹಿಸುತ್ತಾರೆ. ದಾರಿಯಲ್ಲಿ ರಾಹುತರು ಸಿಗುತ್ತಾರೆ. ಯಾರ ಕಡೆಯವರೆಂದು ಕೇಳಿದಾಗ

ಧೋಂಡೋ ಪಂತನ ಕಡೆಯ ಚಾರರು ನಾವು
ಕಾಗದ ತಕ್ಕೊಂಡು ಹೋಗತೀವಿ ॥ಕೋ॥
ಆನಂದ ಬಾಯಮ್ಮ ಕಾಗದವ ಕೊಟ್ಯಾಳೆ
ಹೋಗಲೇವಣ್ಣ ದಂಡಿಗೆ॥ಕೋಲ॥

ರಾಹುತರು ಕುದರೆ ಮೇಲಿಂದ ಇಳಿದು ಮೊರಬದ ಮುಂದೆ ಕುಳಿತುಕೊಳ್ಳುತ್ತಾರೆ. ನರಗುಂದಕ್ಕೆ ಹೋಗಿ ಸುದ್ದಿ ಹೇಗೆ ಹೇಳಬೇಕೆಂದು ಚಿಂತೆ ಇವರಿಗೆ ಹತ್ತುತ್ತದೆ. ನರಗುಂದಕ್ಕೆ ಹೋಗಿ ಅರಮನೆ ಹತ್ತಿರ ನಿಂತು ಅವ್ವನನ್ನು ಹೊರಗೆ ಕರೆತರಲು ಹೇಳುತ್ತಾರೆ. ಅತ್ತೆ ಆನಂದ ಬಾಯಮ್ಮ ಸಾಳುಬಾಯಿ ಹೊರಡುತ್ತಾರೆ. ಹೊರಗೆ ಬಂದು ದೊರೆಗಳ ಸುದ್ದಿ ಹೇಳೆಂದಾಗ ರಾಹುತರು ಕಣ್ಣೀರು ಸುರಿಸುತ್ತಾರೆ. ಇಬ್ಬರೂ ರಣದಲ್ಲಿ ಸತ್ತರು ಧೋಂಡೋಪಂತನನ್ನು ಸೆರೆಹಿಡಿದು ಕೊಲ್ಲಾಲಾಯಿತು. ಅಪ್ಪಾ ಸಾಹೇಬನ ಕುತ್ತಿಗೆ ಕೊಯ್ದಿದ್ದಾರೆಂದು ಹೇಳುತ್ತಾರೆ. ಈ ಸುದ್ದಿ ಕೇಳಿದ ಸಾಳುಬಾಯಿ ಭೋರೆಂದು ಅಳುತ್ತಾ ದುಃಖತಪ್ತಳಾಗುತ್ತಾಳೆ. ಅತ್ತೆ–ಸೊಸೆ ಇಬ್ಬರೂ ತಕ್ಕೈಸಿಕೊಂಡು ಅಳುತ್ತಾರೆ. ವೆಂಕಟರಾಯನನ್ನು ಕರೆದು ತರಲು ಪರಿಚಾರಕನಿಗೆ ಹೇಳುತ್ತಾಳೆ. ದೊರೆಸತ್ತು ದಂಡು ಮುರಿದು ಹೋಯಿತು. ಉಳಿದವರು ಹಳ್ಯಾಳಕ್ಕೆ ಹೋಗಿದ್ದಾರೆಂಬ ಸುದ್ದಿ ಕೇಳಿದ ವೆಂಕಟರಾಯ ಓಡಿ ಬಂದು ಕಾಗದ ಓದಿ ದುಃಖಪಡುತ್ತಾನೆ. ಬೀಗ ಮತ್ತು ಅಳಿಯ ಭೂಮಿಗೆ ಬಿದ್ದ ಸುದ್ದಿ ಕೇಳಿ ಅಳುತ್ತಾನೆ. ಜೋಯಿಸರೆಲ್ಲ ನಿರ್ಣಯ ಮಾಡಿ ಮಂಡಲ ಪತಿಗೆ ಹೇಳುತ್ತಾರೆ.

ಕತ್ತಿ ನೆತ್ತರದರವಿ, ಹಸ್ತ ಎಂದ ಮೇಲೆ
ಕಿಚ್ಚು ಕೊಡುವುದು ಕುಲಧರ್ಮ ॥ಕೋಲ॥

ಧೋಂಡೋಪಂತನ ಮಗಳು ವೆಂಕಟರಾಯರ ಸೊಸಿ ತಾಯವ್ವ ತನ್ನ ತಂದೆ ಅಣ್ಣ ಸತ್ತದ್ದನ್ನು ನೆನೆಸಿಕೊಂಡು ಅಳುತ್ತಾಳೆ. ಹೋದ ಐದು ದಿನದ ಹಿಂದೆ ತಾಯಿ, ಮಗ ಹೋದರು ಮಾವ ಭಾವ ಹೋದರು ಚಿಕ್ಕ ಅಣ್ಣನ ಮಡದಿ ಅತ್ತಿಗೆ ಸತ್ಯಭಾಮಿ ಹೊಟ್ಟೆಯಲ್ಲಿ ಮಗನನ್ನಿಟ್ಟುಕೊಂಡು ಸತ್ತಳು. ಎಂದು ಹೇಳುತ್ತಾ ತಾಯವ್ವ 'ಹೆತ್ತವ್ವನ ಕೈಹಿಡಿದು ಗುಟ್ಟಾಗಿ ಕೈಯಮುಗದಾಳ' ಎಂಬಲ್ಲಿ ಸಾಳುಬಾಯಿಯ ಸಹಗಮನಕ್ಕೆ ನಾದಿನಿ ತಾಯವ್ವ ಏನೋ ಮಸಲತ್ತು ಮಾಡಿರುವುದು ಗೊತ್ತಾಗುತ್ತದೆ. ಇದೇ ಸಂದರ್ಭದಲ್ಲಿ ಸಾಳುಬಾಯಿಯ ಸಹಗಮನವನ್ನು ಅತ್ತೆ ಆನಂದಬಾಯಿಯೊಂದಿಗೆ ಬಂದು ಬಾಂಧವರೆಲ್ಲ ಸಮ್ಮತಿಸುತ್ತಾರೆ.

"ಕತ್ತಿ ನೇತರರವಿ ಹಸ್ತ ಬಂದ ಮ್ಯಾಲ
ಕಿಚ್ಚು ಕೊಡುವುದು ಕುಲಧರ್ಮ ॥ಕೋಲ॥
ಸಾಳುಬಾಯಮ್ಮನ ಆಗಮನಕ್ಕನುವಾಗಿ ।ಅನುಗಮನಕ್ಕನುವಾಗಿ
ಆನಂದಬಾಯಿ ಎಲ್ಲಾರು"[೨೬]

ಅಪ್ಪಾಸಾಹೇಬ ಪತ್ನಿ ಸಾಳುಬಾಯಿಯನ್ನು ತುಪ್ಪ ಹಚ್ಚಿ ಎರೆಯುತ್ತಾರೆ. ವಸ್ತ್ರ ತೊಡಿಸಿ ಹಣೆಗೆ ಕುಂಕುಮ, ಅರಿಷಿಣ, ಗಂಧ ಹಚ್ಚಿ ತೆಲೆಗೆ ಹೂವಿನ ದಂಡಿ ಮುಡಿಸುತ್ತಾರೆ. ವಿವಿಧ ಆಭರಣಗಳಿಂದ ಸಾಳುಬಾಯಿಯನ್ನು ಶೃಂಗಾರ ಮಾಡುತ್ತಾರೆ. ಕಾಡಿಗೆ ಹಚ್ಚಿ ಮಲ್ಲಿಗೆ ದಂಡಿ ಮುಡಿಸಿ ಹೊತ್ತಾಯಿತು 'ಸಾಳುಬಾಯಮ್ಮ ಕಳೂವುನು' ಎಂದು ಎಲ್ಲರು ಸಿದ್ಧರಾಗುತ್ತಾರೆ. ಆಕೆಯು ಎಲ್ಲರಿಗೂ ಬಾಗಿನವನ್ನು ಕೊಡುತ್ತಾಳೆ. ಅರಮನೆ ಬಿಟ್ಟು ಹೊರಬಂದಾಗ ಎಲ್ಲರೂ ಉಡುಗೊರೆ ಕೊಡುತ್ತಾರೆ. ಇದೇ ಸಮಯದಲ್ಲಿ ತನ್ನಲ್ಲಿರುವ ರೊಕ್ಕ ರೂಪಾಯಿ, ಹೊನ್ನು, ಮುತ್ತುಗಳನ್ನು, ವಸ್ತ್ರವನ್ನು ದಾನ ಮಾಡುತ್ತಾಳೆ.

ಸುತ್ತ ಹಸ್ತವ ಮುಗಿದು ಹತ್ತಿದಳು ಮೇಲಕ್ಕೆ
ನೆತ್ತರ ದರಿವಿ ಹಸ್ತವನು ॥ಕೋಲ॥
ಬಲಗೈಯಾಗಿಟಗೊಂಡು ಕರ್ಪೂರ ಕಟಿಕೊಂಡ
ಹಚ್ಚಿರೆಂದಾಳು ಅಗ್ನಿಯ ॥ಕೋಲ॥
ಕಿಚ್ಚ ಹಚ್ಚುತಲೆ ಅಚ್ಯುತನ ನೆನದಾಳು
ಮತ್ತೆ ಕುಲಸ್ವಾಮಿ ರಾಮೆಂದಾಳು

ದೇವರ ಧ್ಯಾನದಲ್ಲಿ ದಹನವಾದಳು ತಾನು
ದೇವರ ವೈಕುಂಠ ವಶವಾಗಿ ॥ಕೋಲ॥
ಸಾಳು ಬಾಯಮ್ಮನ್ನ ದಹನ ಮಾಡಿದರಲ್ಲಿ
ಸ್ನಾನ ಮಾಡಿನ್ನು ಬಂದಾರು ॥ಕೋಲ॥

ರೌದ್ರನಾಮ ಸಂವತ್ಸರದಲ್ಲಿ ಧೋಂಡೋಪಂತನಿಗೆ ಮತ್ತು ವಾಘನಿಗೆ ಯುದ್ಧವಾಯಿತೆಂದು ಜನಪದ ಕವಿ ಹೇಳುತ್ತಾನೆ. ಹೀಗೆ ಸಾಳುಬಾಯಿ ಅನುಗಮನದ ಮೂಲಕ ಮರಣ ಹೊಂದುತ್ತಾಳೆ.

'ಕೆಂಚವ್ವ ಮತ್ತು ಕಾಮವ್ವರ' ಸತಿ ಹೋದ ವಿವರಗಳು 'ಗಾದ್ರಿ ಪಾಲ್ನಾಯಕ' ಎಂಬ ಕಥನಗೀತೆಯಲ್ಲಿ ಬರುತ್ತವೆ.[೨೭] ಈ ಕಥನ ಗೀತೆಯ ನಾಯಕ ಗಾದ್ರಿ ಪಾಲ್ನಾಯಕನ ಉತ್ತರ ಭಾಗದಿಂದ ತನ್ನ ಜನರನ್ನು ಮತ್ತು ದನಕರಗಳೊಂದಿಗೆ ಚಿತ್ರದುರ್ಗದ ಪ್ರದೇಶಕ್ಕೆ ಬಂದು ಗಾದ್ರಿಗುಡ್ಡದ ಪ್ರದೇಶದಲ್ಲಿ ನೆಲೆಸುತ್ತಾನೆ. ಈಗ ಆ ಗಾದ್ರಿ ಗುಡ್ಡದ ಬಯಲಿನಲ್ಲಿ ಕುರುಚಲ ಕಾಡು ಇದೆ. ಆದರೆ ಕೇವಲ ಐವತ್ತು ಅಥವಾ ನೂರು ವರ್ಷಗಳ ಹಿಂದೆ ಅಲ್ಲೆಲ್ಲ ದಟ್ಟ ಅರಣ್ಯ ನೀರಿನ ತಾಣ ಇತ್ತೆಂದು ಊಹಿಸಬಹುದು. ಎಂದು ಸಂಪಾದಕರು ಹೇಳಿದ್ದಾರೆ.

ಕುರುಚಲ ಕಾಡಿಗೆ ಬಂದ ಪಾಲ್ನಾಯಕ ಅಲ್ಲಿಯೇ ಮರಿಗಳನ್ನು ಹಾಕಿ ಸಾಕುತ್ತ ವಾಸವಾಗಿದ್ದು ಹುಲಿಯೊಂದಿಗೆ ಒಪ್ಪಂದ ಮಾಡಿಕೊಳ್ಳುತ್ತಾನೆ. ಹುಲಿ ಆಹಾರಕ್ಕೆ ಗೋವುಗಳನ್ನು ಬೇಟೆಯಾಡಬಾರದೆಂದು, ಹುಲಿಮರಿಗಳ ರಕ್ಷಣೆ ಪಾಲ್ನಾಯಕದೆಂಬ ಒಪ್ಪಂದವಾಗಿರುತ್ತದೆ. ಹೀಗಾಗಿ ದನದ ದೊಡ್ಡಿಯಲ್ಲಿ ಹುಲಿಮರಿಗಳು, ಕರುಗಳು ಆಟವಾಡುತ್ತಿದ್ದವು. ಒಮ್ಮೆ ಅಣ್ಣ ಪಾಲ್ನಾಯಕನನ್ನು ನೋಡಲು ತಮ್ಮ ಚಿನ್ನಪಾಲ್ನಾಯಕ ಬರುತ್ತಾನೆ. ಇವನ ದೊಡ್ಡಿಯಲ್ಲಿ ಹುಲಿಮರಿಗಳು ಆಟವಾಡುತ್ತಿರುವುದನ್ನು ನೋಡಿ ಹುಲಿ ಸೇರಿಕೊಂಡಿದೆಯೆಂದು ಭಾವಿಸಿ ಹುಲಿಮರಿಗಳನ್ನು ಕೊಲ್ಲುತ್ತಾನೆ. ಸಾಯಂಕಾಲ ವಾಪಸ್ಸಾದ ಹುಲಿ ಪಾಲ್ನಾಯಕನ ಮೇಲೆ ಸಿಟ್ಟುಗೊಳ್ಳುತ್ತದೆ. ಗಾದ್ರಿ ಪಾಲ್ನಾಯಕನಿಗೆ ನಡೆದ ಅಚಾತುರ್ಯ ಗೊತ್ತಾಗಿ ತಮ್ಮ ಚಿನ್ನ ಪಾಲ್ನಾಯಕನೊಡನೆ ಆ ಸ್ಥಳ ಬಿಟ್ಟು ಮಿಂಚೇರಿ ಭಾಗಕ್ಕೆ ಓಡಿ ಹೋಗುತ್ತಾನೆ. ಅವರ ಬೆನ್ನು ಹತ್ತಿ ಬಂದ ಹುಲಿ ಇವರ ಮೇಲೆ ಬೀಳುತ್ತದೆ. ಹೋರಾಟದಲ್ಲಿ ಹುಲಿಯೂ ಮತ್ತು ಪಾಲ್ನಾಯಕ ಮತ್ತು ಅವನ ತಮ್ಮ ಸತ್ತು ಹೋಗುತ್ತಾರೆ. ಹೀಗೆ ಪಾಲ್ನಾಯಕ ವೀರಮರಣ ಹೊಂದಿದ ಸುದ್ದಿ ಕೇಳಿ ಅವನ ಸತಿಯರಾದ ಕೆಂಚವ್ವ ಕಾಮವ್ವ ಇಬ್ಬರೂ ಸತಿ ಹೋಗುತ್ತಾರೆ. ಇವರ ನೆನಪಿಗಾಗಿ ಮಾಸ್ತಿಕಲ್ಲು ನೆಡಲಾಗಿದೆ.

ಮಾಸ್ತಿಕಲ್ಲಿನ ಕೆಳಪಟ್ಟಿಗೆಯಲ್ಲಿ ಕೆಂಚವ್ವ ಮತ್ತು ಕಾಮವ್ವರು ತಮ್ಮ ಬಲಗೈ ಎತ್ತಿ ಹಿಡಿದಿದ್ದು ಎಡಗೈಯಲ್ಲಿ ತಿರುಗುಣಿ ಚರಿಗೆಯಾಕರದ(ನೀರನ್ನು ಒಯ್ಯಲು ಬಳಸುವ) ವಸ್ತುವೊಂದನ್ನು ಹಿಡಿದಿದ್ದಾರೆ. ಅದರ ಮೇಲಿನ ಪಟ್ಟಿಕೆಯಲ್ಲಿ ಎಡಗೈಯಲ್ಲಿ ಬಿಲ್ಲು, ಬಲಗೈಯನ್ನು ಸೋಂಟಕ್ಕೆ ಕಟ್ಟಿಕೊಂಡ ಖಡ್ಗದ ಮೇಲೆ ಇಟ್ಟಿರುವ ಪಾಲ್ನಾಯಕನ ಶಿಲ್ಪವಿದೆ. ಅದರ ಮೇಲೆ ಮಧ್ಯಕ್ಕೆ ಹುಲಿ ಅದರ ಹಿಂದೆ ಮುಂದೆ ಗಾದ್ರಿ ಪಾಲ್ನಾಯಕ ಮತ್ತು ಅವನ ತಮ್ಮ ಚಿನ್ನ ಪಾಲ್ನಾಯಕ ಹುಲಿಯೊಂದಿಗೆ ಹೊಡೆದಾಡುವ ಭಂಗಿಯಲ್ಲಿ ಉಬ್ಬು ಶಿಲ್ಪವನ್ನು ಕೆತ್ತಲಾಗಿದೆ. ಮಾಸ್ತಿಕಲ್ಲಿನ ಮೇಲೆ ಈ ವೀರರು ಸ್ವರ್ಗವಾಸಿಗಳಾಗಿರುವುದನ್ನು ಸೂರ್ಯ ಚಂದ್ರ ಲಿಂಗದ ಮೂಲಕ ತೋರಿಸಲಾಗಿದೆ.

ಈ ಕಥನಗೀತೆಗೆ ಸಂಬಂಧಿಸಿದಂತೆ ಸಂಪಾದಕರಾದ ಕೃಷ್ಣಮೂರ್ತಿ ಹನೂರ ಅವರ ಕ್ಷೇತ್ರ ಕಾರ್ಯ ಮಾಡಿ ಕೆಲವು ಅಂಶಗಳನ್ನು ಟಿಪ್ಪಣಿ ರೂಪದಲ್ಲಿ ಹೀಗೆ ಕೊಟ್ಟಿದ್ದಾರೆ.

೧. ಗಂಜಿಗಟ್ಟಿ ಗ್ರಾಮದ ಶುದ್ಧ ಪೂರ್ವಭಾಗಕ್ಕೆ ಸಾಕಷ್ಟು ಪ್ರಾಚೀನ ಕಾಲದ ಹೊಂಡವಿದೆ. ಅದರ ಬಲದಂಡೆಗೆ ಸಣ್ಣ ಗುಡಿಯೊಂದಿದ್ದು ಗುಡಿಯಲ್ಲಿ ನಾಲ್ಕು ಅಡಿ ಎತ್ತರದ ಇಬ್ಬರು ಸತಿಯರು ಅಕ್ಕಪಕ್ಕ ನಿಂತಿರುವ ಮಾಸ್ತಿಕಲ್ಲಿದೆ. ಈ ವಿಗ್ರಹದ ಮೇಲ್ತುದಿಯಲ್ಲಿ ಬಿಲ್ಲು ಹಿಡಿದು ಹುಲಿಯೊಡನೆ ಹೋರಾಡುತ್ತಿರುವ ಇಬ್ಬರು ವೀರರ ಕೆತ್ತನೆ ಇದೆ. ಈ ಮಾಸ್ತಿಕಲ್ಲಿನ ಪಕ್ಕಕ್ಕೆ ನಾಲ್ಕು ಶತಮಾನಗಳಿಗೂ ಹಳೆಯದಾದ ಬಿಲ್ಲೊಂದು ಇರಿಸಿದ್ದು ಗುಡಿಯ ಹೊರಕ್ಕೆ ಈ ಗಾದ್ರಿ ಪಾಲಾನಾಯಕ ದೇವರಿಗೆ ಗಂಜಿಗಟ್ಟಿ ಗ್ರಾಮ ದತ್ತಿ ಬಿಟ್ಟು ಕೊಟ್ಟಿದ್ದರ ಉಲ್ಲೇಖವಿರುವ ಶಾಸನವಿದೆ. ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾ. ಭರಮನಾಯ್ಕರ ದುರ್ಗದ ಹೋಬಳಿ ಗಂಜಿಗಟ್ಟಿ ಗ್ರಾಮ ಗಾದ್ರಿ ದೇವಸ್ಥಾನದ ಬಾಗಿಲಲ್ಲಿರುವ ಶಾಸನ ಪಾಠ " ಶ್ರೀಮುಖಸಂವತ್ಸರದ . . . . . ನಾಯಕ ಅಯ್ಯನವರಿಗೆ ಪುಣ್ಯವಾಗಲೆಂದು ತಾಳೆದ ಕರಿಯಪ್ಪ ನಾಯಕರು ಗಾದ್ರಿ ಪಾಲನಾಯಕ ಸ್ವಾಮಿಗೆ ಕೊಟ್ಟ ಗಂಜಿಗಟ್ಟಿ ಗ್ರಾಮ . . . ." ಎಂದು ಬರುತ್ತದೆ. ಸಂಪಾದಕರಿಗೆ ಈ ಶಾಸನ ಪಾಠವನ್ನು ಬಿ. ರಾಜಶೇಖರಪ್ಪನವರು ಒದಗಿಸಿದ್ದಾರೆ. ಅಂದರೆ ಈ ಶಾಸನ ಅಲ್ಲಿ ನಿಲ್ಲುವ ವೇಳೆಗಾಗಲೇ ಪಾಲ್ನಾಯಕ ವೀರ ಸುತ್ತಮುತ್ತಲಿನವರ ಕಣ್ಣಲ್ಲಿ ದೇವರಾಗಿ ಹೋಗಿದ್ದ.

೨. ಗಂಜಿಗಟ್ಟಿ ಗ್ರಾಮದಿಂದ ನಾಲ್ಕು ಮೈಲು ದೂರಕ್ಕೆ ಮಿಂಚೇರಿ ಎಂಬ ಹೆಸರಿನ ಕಾಡು ಪ್ರದೇಶವಿದೆ. ಅಲ್ಲಿ ಸಣ್ಣ ಹಳ್ಳವೊಂದು ಹರಿಯುತ್ತದೆ. ಆ ಹಳ್ಳದ ಬಳಿಯೇ ಗಾದ್ರಿ ಪಾಲ್ನಾಯಕ, ಚಿನ್ನ ಪಾಲ್ನಾಯಕ ಮತ್ತು ಹುಲಿಯ ನಡುವೆ ಹೋರಾಟವಾಗಿ ಮೂವರೂ ಮಡಿದರೆಂದು ಜನ ಗುರುತು ತೋರಿಸುತ್ತಾರೆ. ಆ ಗುರುತೆಂದರೆ ಮೂರು ಕಲ್ಲುಗುಡ್ಡೆಗಳು

ಹಳ್ಳದ ಬಲದಂಡೆಗೆ ಹುಲಿಯ ಸಮಾಧಿಯೂ ಎಡದಂಡೆಗೆ ಅಣ್ಣ ತಮ್ಮಂದಿರ ಸಮಾಧಿಯೂ ಇದೆ.

೩. ಇದೇ ಮಿಂಚೇರಿ ಅರಣ್ಯ ಪ್ರದೇಶದಲ್ಲಿ ವರ್ಷಕ್ಕೊಮ್ಮೆ ಮಾರ್ಚ ತಿಂಗಳ ಮೂರು ಬೆಳದಿಂಗಳ ರಾತ್ರಿಗಳಲ್ಲಿ ಚಿತ್ರದುರ್ಗದ ಬೇರೆ ಬೇರೆ ಹಳ್ಳಿಗಳಿಂದ ಬೇಡ ನಾಯಕರು ಗಾಡಿ ಕಟ್ಟಿಕೊಂಡು ಬಂದು ಜಾತ್ರೆ ನಡೆಸುವರು ಅದೇ ಸಮಯ ಗಂಜಿಗಟ್ಟಿ ಗ್ರಾಮದಲ್ಲಿ ಕೆಂಚವ್ವ ಕಾಮವ್ವ ಗುಡಿ ಪೂಜಾರಿಯೊಬ್ಬ ಹುಲಿಕೊಲ್ಲುವ ಸಂಪ್ರದಾಯ ಆಚರಿಸುವರು. ಇತಿಹಾಸದ ಘಟನೆಯನ್ನು ಈಗಲೂ ಹಳ್ಳಿಯ ಜನ ನೆನಪಿಸಿಕೊಳ್ಳುವರು ಮಿಂಚೇರಿ ಹಳ್ಳದ ಕಾಡಿನಲ್ಲಿ ನಡೆಯುವ ಜಾತ್ರೆಗೆ ಸಾಕಷ್ಟು ಜನ ನೆರೆಯುವರು. ಗಾದ್ರಿ ಪಾಲ್ನಾಯಕನ ಸಮಾಧಿಗೆ ಪೂಜೆ ಸಲ್ಲಿಸಿ ಆಡು, ಕುರಿ, ಕಡಿದು ಎಡೆಮಾಡಿ ಉಂಡು ಪಾಲ್ನಾಯಕ ಮತ್ತು ಕೆಂಚವ್ವ ಕಾಮವ್ವನ ಮೇಲಿನ ಗೀತೆಗಳನ್ನು ಹಾಡಿಕೊಂಡು ಮೂರು ದಿನ ಕಳೆಯುವರು

ಗಾದ್ರಿ ಪಾಲ್ನಾಯಕನ ವೀರಮರಣ, ಅವನ ಸತಿಯರಾದ ಕೆಂಚವ್ವ, ಕಾಮವ್ವರು ಮಾಸ್ತಿ ಹೋಗಿರುವುದು ಐತಿಹಾಸಿಕ ಸತ್ಯ. ಈ ಅಂಶವನ್ನು ಮಾಸ್ತಿಕಲ್ಲು, ಜನಪದ ಕಥನಗೀತೆ ಆಚರಣೆ, ಸಂಪ್ರದಾಯಗಳು ಖಚಿತಪಡಿಸುತ್ತವೆ. ಕಥನಗೀತೆಯಲ್ಲಿ ಪಾಲ್ನಾಯಕನ ತಾಯಿ ಮಲ್ಲಮ್ಮ ತಂದೆ ಗೌಡನೆಂದು ಹೇಳಲಾಗಿದೆ.

ಉತ್ತಮ ಗೌಡಾಗೆ ವುಟ್ಟಾನೆ ಪಾಲಯ್ಯ
ವುಟ್ಟೇಳು ದಿನಕ ಸಿವಪೂಜೆ ನಿನ್ನ ವಾಳ
ಸಡ್ಡರಂದಲವಾ ಕಳುವ್ಯಾರೇ

ಪಾಲ್ನಾಯಕ ಹುಲಿಯೊಂದಿಗೆ ಹೋರಾಡುತ್ತ ಮಡಿದಿದ್ದಾನೆಂಬುದನ್ನು ಜನಪದ ಕವಿ ಹೀಗೆ ಹೇಳುತ್ತಾನೆ.

ವುಲಿಗೇ ಬಾಸೆಯ ಕೊಟ್ಟು ವುಲಿ ಮಕ್ಕಳ ಕೊಂದಾರೆ
ವುಲಿಗಿನ್ನವೀರ ಕಲೀವೀರ ಪಾಲಯ್ಯ
ವುಲಿ ಗಾಯದಲೇ ಮಡಿದಾನೆ

ಹುಲಿಯೊಂದಿಗೆ ಹೋರಾಡಿ ಹುಲಿಯನ್ನು ಇರಿದು ಮೈತುಂಬ ಗಾಯದಿಂದ ರಕ್ತಸೋರಿ ಪಾಲ್ನಾಯಕನು ಸತ್ತು ಹೋಗುತ್ತಾನೆ. ಗಂಜಿಗಟ್ಟಿಯಲ್ಲಿದ್ದ ಕಾಮವ್ವ, ಕೆಂಚವ್ವರಿಗೆ ಈ ಸುದ್ದಿ ಗೊತ್ತಾಗುತ್ತದೆ. ಇವರಿಬ್ಬರಿಗೂ ಮಕ್ಕಳಿದ್ದುದು ಈ ಕಥನಗೀತೆಯಿಂದ ತಿಳಿದು ಬರುತ್ತದೆ. ಇಬ್ಬರೂ ಸತಿ ಹೋಗಲು ನಿರ್ಧರಿಸುತ್ತಾರೆ.

ಮಡಗಿದರೆ ಮಡಗಲಿ ಮುರಿಯೂತ ಗುಡಿದಲಿ
ನಿಲುವು ಗನ್ನಡಿ ಬಲಗೈಲಿ ಮಿಂಚೇರಿ
ಉಳಿಮಾವಿನಾಗೆ ಮರೆಯಾಲಿ
ಅಸಿಯಾ ತುಗ್ಗುಲಿ ಚಕ್ಕೆ ಬಿಸಿಬಿಸಿ ಬೇಯೋವಾಗ
ಅಸುಮಗಳು ಕಾಮವ್ವ ಮರೆವಾಗ ಅಗ್ಗಿ ದೇವಿ
ಕುಸುವಾರದ ನಗುವ ನಗುತಾವೆ॥
ಬೆಣ್ಣೆ ತುಗ್ಗುಲಿಚಕ್ಕೆ ಬಣ್ಣೀಸೆ ಬೇಯೋವಾಗ
ಸೆಣ್ಣೋಳು ಕೆಂಚವ್ವ ಮೆರಿವಾಗ ಅಗ್ಗಿದೇವಿ
ವೂವಾರದ ನಗುವ ನಗುತಾಳೆ ॥

ಎಂದು ಕಾಮವ್ವ ಕೆಂಚವ್ವ ಸತಿ ಹೋಗುವುದನ್ನು ಹೇಳಲಾಗಿದೆ.

ಕೆಲವು ಜನಪದ ಗೀತೆಗಳಲ್ಲಿ ಮೃತನ ಪತ್ನಿ ಅಗ್ನಿ ಪ್ರವೇಶ ಮಾಡುವ ಮೊದಲು ಚಿತೆಯನ್ನು ಪ್ರದಕ್ಷಿಣೆ ಹಾಕುವಳೆಂದು ವಿದೇಶಿ ಪ್ರವಾಸಿಗನಾದ 'ದು ಆರ್ತೇಬಾರ್ಬೊಸಾ' ತಿಳಿಸುತ್ತಾನೆ.[೨೮] ಈರೋಬಿ, ಜಗುನೆಯಜಕ್ಕಣ್ಣ ಮಗುನೆಯ ಬ್ಯಾಟಿಕಾರ, ಕೊಂಡದ ಚೆನ್ನಮ್ಮ ಈ ಮೊದಲಾದ ಜನಪದ ಹಾಡು ಮತ್ತು ಕಥೆಗಳಲ್ಲಿ ಸತಿಯಾಗುವವಳು ಚಿತೆಗೆ ಪ್ರದಕ್ಷಿಣೆ ಹಾಕುವುದನ್ನು ನಿರೂಪಿಸಲಾಗಿದೆ. "ಕೊಂಡ ಮೂರು ಸುತ್ತು ಸುತ್ತ್ಯಾಳು ಈರೋಬಿ ಕಳಸವ ಮಡಗಿ ಕೈಯೆತ್ತಿ ಮುಗಿದಾಳು, ಕೊಂಡಕ್ಕೆ ಮುಂದಾಗಿ ನಡೆದಾಳು"[೨೯] ಎಂದು ಈರೋಬಿ ಜನಪದ ಖಂಡಕಾವ್ಯದಲ್ಲಿ ಚಿತ್ರಿಸಿದರೆ ಜಗುನೆಯ ಜಕ್ಕಣ್ಣ ಮಗುನೆಯ ಬ್ಯಾಟಿಕಾರ ಹಾಡಿನಲ್ಲಿ ಈ ಪ್ರಸಂಗವನ್ನು ಚಿತ್ರಿಸುವ ಪದ್ಯ ಹೀಗೆ ಬರುತ್ತದೆ.

ಕಿಚ್ಚನ್ನ ಮೂರುಸುತ್ತು
ಬಂದಳು ನೋಡಿರಯ್ಯ
ಕಿಚ್ಚನ ಇಳಕಿನ್ನ
ನೆಗೆದಳು ನೋಡಿರಯ್ಯ
ದಗದಗ ಉರಿತಾಳೆ

ಇಲ್ಲಿ 'ನೆಗೆದಳು' ಎಂಬ ಪದ ಬಹುಮುಖ್ಯವಾದುದು. ಕೊಂಡದಗ್ನಿಯಲ್ಲಿ ಮೃತನ ಪತ್ನಿ ಜಿಗಿದು ಸತಿ ಹೋಗುವ ವಿಧಾನವನ್ನು ಇದು ಧ್ವನಿಸುತ್ತದೆ. ಅದಕ್ಕೂ ಪೂರ್ವದಲ್ಲಿ ಅವಳು ಚಿತೆಯ ಪ್ರದಕ್ಷಿಣೆ ಹಾಕುವ ಚಿತ್ರ ಇಲ್ಲಿದೆ. ಬಸವಣ್ಣನವರ ಟೀಕಿನ ವಚನದಲ್ಲಿ ಮೃತನ ಪತ್ನಿ 'ಕಡೆಯಲ್ಲಿ ಸತಿಕಲ್ಲು ಮೇಲೆ ನಿಂತುಕೊಂಡು ಕಿಚ್ಚಿನಲ್ಲಿ ಬೀಳುವ' ವಿವರಣೆ ದೊರಕುತ್ತದೆ.[೩೦]

'ಮಹಾಲಿಂಗಸ್ವಾಮಿ ಬಾಲರಾಮನ ಸಾಂಗತ್ಯ'ದಲ್ಲಿ ಕುಮಾರರಾಮನ ಪತ್ನಿಯರು ಸತಿಹೋಗುವಾಗ 'ಸ್ವಾತಿಕಲ್ಲ'(ಸತಿಕಲ್ಲು) ಹತ್ತಿದರು ಎಂದು ಉಲ್ಲೇಖಿಸಿದೆ.[೩೧] ನಾಗವ್ವ ಜನಪದ ಹಾಡಿನಲ್ಲಿ ಈ ವಿವರಣೆ ಬರುತ್ತದೆ.

ಈ ರೀತಿ ಮಾಸ್ತಿಗೀತೆಗಳಲ್ಲಿ ಬರುವ ಸತಿಗಲ್ಲು, ಮಾಸ್ತಿಕಲ್ಲು, ಮುಚ್ಚಲುಗಲ್ಲು, ಮದವಳಿಗೆ ಕಲ್ಲು ಎಂಬ ಪದಗಳು ಕೊಂಡವನ್ನು ಮುಚ್ಚಲಿಕ್ಕಾಗಿ ಮತ್ತು ಸತಿಯ ಸ್ಮಾರಕವಾಗಿ ಬಳಸುತ್ತಿದ್ದರೆನ್ನುವ ವಿಷಯ ಕೆಲವು ಜನಪದ ಗೀತೆಗಳಲ್ಲಿ ಕಂಡು ಬರುತ್ತದೆ. ಸತಿಕಲ್ಲು ಎಂದು ಬಳಸಲಾದ ಕಡೆಗಳಲ್ಲಿ ಜಾನಪದ ಗೀತೆಗಳು ನಿರ್ದಿಷ್ಟ ಸಂದರ್ಭವನ್ನು ಸೂಚಿಸುತ್ತವೆ. ಸತಿಕಲ್ಲು ಎನ್ನುವುದು ಹೆಸರೇ ಸೂಚಿಸುವಂತೆ 'ಹೆಂಡತಿಯ ಕಲ್ಲು' ಎನ್ನುವ ಅರ್ಥವನ್ನು ಕೊಡುತ್ತದೆ. ಮಾಸ್ತಿಯಾಗಲು ಹೊರಟ ಸ್ತ್ರೀ ತಾನು ಕೊಂಡಕ್ಕೆ ಏರುವ ಅಥವಾ ಕೊಂಡಕ್ಕೆ ಬೀಳುವ ಮುಂಚೆ ಸತಿಕಲ್ಲನ್ನು ಹತ್ತುತ್ತಿದ್ದ ಹಾಗೆ ವರ್ಣನೆಗಳಿವೆ.[೩೨] 'ನಾಗವ್ವ' ಜನಪದ ಪದ್ಯದಲ್ಲಿ ಈ ಕುರಿತು ವಿವರಗಳಿವೆ.

ಅತ್ತಿತ್ತ ನೋಡ್ಯಾಳ ಹತ್ಯಾಳ ಸತಿಕಲ್ಲ
ಹತ್ತೀರ ಬರುತಾರೆ ಅವರಪ್ಪ ತಾಯಮ್ಮ
ನೂರ ಕೊಟ್ಟೇನೂ ಇರುಮಗಳೆ

ಎಂದು ಹೇಳುವಲ್ಲಿ ತಂದೆ, ತಾಯಿ, ಅಣ್ಣ,ಬಂಧುಗಳು ದುಃಖಿಸುವ ಚಿತ್ರಣವನ್ನು ಜನಪದರು ಕಟ್ಟಿಕೊಡುತ್ತಾರೆ. ಇಲ್ಲಿ 'ಸತಿಕಲ್ಲ' ಮೇಲೆ ನಿಂತು ಸತಿಹೋಗುವ ಪ್ರಸಂಗ ಇದೆ. 'ಅಡಗನಹಳ್ಳಿ ಮಾಸ್ತಿ' ಹಾಡಿನಲ್ಲಿ ಮಾಸ್ತ್ಯಮ್ಮ ಸತಿಹೋಗುವ ಮೊದಲು 'ಸಾತಿಕಲ್ಲತ್ತಿ ಸ್ವಾಕಾವೆ ಮಾಡೊಳೆ' ಎಂಬ ಮಾತು ಬರುತ್ತದೆ.[೩೩] ಈ ವಿವರಣೆಗಳನ್ನು ನೋಡಿದರೆ ಚಿತಾಗ್ನಿಯ ಸಮೀಪದಲ್ಲಿ ಮಾಸ್ತಿಕಲ್ಲನ್ನು ಇಡುತ್ತಿದ್ದರೆಂದೂ, ಅದನ್ನು ಹತ್ತಿ ಮೃತನ ಪತ್ನಿ ಚಿತಾಪ್ರವೇಶ ಮಾಡುತ್ತಿದ್ದಳೆಂದೂ ಬಹುಶಃ ಅದನ್ನೇ ಮುಂದೆ ಸ್ಮಾರಕಕ್ಕಾಗಿ ಬಳಸುತ್ತಿದ್ದರೆಂದೂ ಅರ್ಥವಾಗುತ್ತದೆ. ಸತಿಯು ಚಿತಾ ಪ್ರವೇಶಕ್ಕೆ ಹೋಗುವಾಗ ಅನೂಕೂಲವಾಗಲೆಂಬ ಉದ್ದೇಶದಿಂದ ಈ ಕಲ್ಲನ್ನು ಕಿಚ್ಚಿನ ಸಮೀಪದಲ್ಲಿ ಇಡುತ್ತಿರಬೇಕು ಎಂದು ತಿಳಿದು ಬರುತ್ತದೆ. 'ಮಹಾಸತಿ ವೀರತಿಮ್ಮವ್ವ' ಗೀತೆಯಲ್ಲಿ 'ಕಟ್ಟಿಕಲ್ಲನೆತ್ತಿ' 'ಏರಿಕಲ್ಲನೆತ್ತಿ' ಎಂಬ ವಿವರಗಳು ಬರುವುದನ್ನು ಈ ಹಿನ್ನೆಲೆಯಲ್ಲಿ ನೋಡಲಾಗಿದೆ.[೩೪]

ಬೆಟ್ಟದಂತ ಕೊಂಡಾಕ ಬೆಟ್ಟನೋಟು
ಮುಚ್ಚಲುಗಲ್ಲು ಕೊಂಡಾಕ ಬೆಟ್ಟನೋಟು
ಮುಚ್ಚಲುಗಲ್ಲಿ ನ್ಯಾರನ್ನೋವು ಕಡಿಸ್ಯಾನೆ

ಕೊಂಡಾದ ತಿಮ್ಮವ್ವ ಮರೆದಾಳೆ

ಕೊಂಡಾದ ತಿಮ್ಮವ್ವ ಮರೆದಾಳೆ ಆಳುದ್ದ ಕೊಂಡಾಕ ಗೇಣುದ್ದ ಮುಚ್ಚಲುಗಲ್ಲು

ಎಂಬ ವಿವರ ಬರುತ್ತದೆ. ಹೆಮ್ಮನಹಳ್ಳಿ ಮಾಸ್ತಿ ಗೀತೆಯಲ್ಲೂ ಈ ಕುರಿತು ವಿವರವಿದೆ.[೨೫]

ಸಾತಿಕಲ್ಲೆತ್ತಿ

ಸಾತಿಕ್ಕಲ್ಲೆತ್ತಿ ಸ್ವಾ ಕಾವೆ ಮಾಡೊಳೆ

ಆಚೆ ನಿಮ್ಮಣ್ಣ ಬರಿತ್ತಿದ್ದ

ಆಚೆ ನಿಮ್ಮಣ್ಣ ಬರುತಿದ್ದೊನೆಂದಾನು

ಹಿಡಿಹೊನ್ನು ಕೊಟ್ಟಾರೆ ಇಳಿಯೆಂದ

ಇಲ್ಲಿ ಸಹಗಮನ ಮಾಡಿಸುವವರು ಬ್ರಾಹ್ಮಣರು ಹೀಗಾಗಿ ವೈದಿಕ ಪದ್ಧತಿಯ ವಿವಾಹದ ಆಚರಣೆಯ ಅಂಶಗಳು ಇಲ್ಲಿ ಅನುಕರಣೆಯಾಗಿವೆ ಎಂದರೆ ಆಶ್ಚರ್ಯವಿಲ್ಲ. ಸಹಗಮನ ಮಾಡುವವಳು ಸತಿಕಲ್ಲನ್ನು ಹತ್ತಲು ಕಾರಣವೆನೆಂದರೆ ವೈದಿಕರ ಮದುವೆಯ ಸಂದರ್ಭದಲ್ಲಿ 'ಸಪ್ತಪದಿ'ಎಂಬ ಆಚರಣೆಯೊಂದಿಗೆ ಹೆಂಡತಿಯಾದವಳು ಗಂಡನ ಸಂಗಡ ಏಳು ಹೆಜ್ಜೆಗಳನ್ನು ಮದುವೆಯ ಆಚರಣೆಯ ಸಮಯದಲ್ಲಿ ಇಡುವ ಪ್ರಸಂಗವಿರುತ್ತಿತ್ತು. ಇದಕ್ಕೆ 'ಸಪ್ತಪದಿ' ಎಂದು ಹೆಸರು. ಏಳನೆಯ ಹೆಜ್ಜೆಯನ್ನು ಕಲ್ಲ ಮೇಲಿರಿಸುವುದು ಸಂಪ್ರದಾಯ. ಗಂಡನೊಡನೆ ಹೆಂಡತಿಯಾದವಳು ದೃಢವಾಗಿ ನಿಲ್ಲುವೆನೆಂದು ಸೂಚಿಸುವುದು ಈ ಆಚರಣೆಯ ಸಂಕೇತ. ಗಂಡನನ್ನು ಹಿಂಬಾಲಿಸುವ ಮತ್ತು ಅವನೊಡನೆ ಸಹಭಾಗಿಯಾಗುವ ಆಚರಣೆಯ ಅನುಕರಣೆಯೇ ಸತಿಪದ್ಧತಿಯಲ್ಲಿ 'ಸತಿಕಲ್ಲ'ನ್ನು ಹತ್ತುವ ಸಾಂಪ್ರದಾಯಿಕ ನಂಬಿಕೆಯಾಗಿದೆ.

೫.೨. ಜನಪದ ಕಥೆಗಳು

ಸತಿಹೋದ ಮಾಹಾಸತಿಯರ ಕುರಿತಾಗಿ ಗ್ರಾಮೀಣ ಬದುಕಿನಲ್ಲಿ ಕಥೆ ಕಟ್ಟಿ ಸತಿಘಟನೆಗಳ ವಿವರಗಳನ್ನು ರಕ್ಷಿಸಿಕೊಂಡು ಬಂದಿರುವುದನ್ನು ಇಂದಿಗೂ ಕಾಣುತ್ತೇವೆ. ಕೊಂಡದ ಚೆನ್ನಮ್ಮ, ಕಳಗುಚ್ಚಮ್ಮ, ಮಾಣಿಕ್ಯಶೆಟ್ಟಿ, ಮಾಸ್ತ್ಯಮ್ಮ, ಅಡಗನಹಳ್ಳಿ ಮಾಸ್ತಿ, ಕಲ್ಲೂರುಮಾಸ್ತಿ, ಅರಕೆರೆ ಮಾಸ್ತಿ, ಮಾಚನಹಳ್ಳಿ ಮಾಸ್ತಿ, ಜಲಧಿಗೆರೆ ಮಾಸ್ತಿ, ಕಮ್ಮಾರಗಟ್ಟೆ ಮಾಸ್ತಿ, ಕೊಂಡದಹಳ್ಳ ಮಾಸ್ತಿ, ಚಿಕ್ಕುಡೇವಿನ ಮಾಸ್ತಿ, ಶ್ರೀಕುಮಾರ ರಾಮನ ಮಾಸ್ತಿಯರು, ಚಂದಾವರ ಮಾಸ್ತಿ ಈ ಮೊದಲಾದವು ಸತಿ ಘಟನೆಗಳನ್ನು ನಿರೂಪಿಸುವ ಜನಪದ ಕಥೆಗಳಾಗಿವೆ.[೨೬]

ಕೊಂಡದ ಚೆನ್ನಮ್ಮ, ಕಳಗುಚ್ಚಮ್ಮ, ಮಾಣಿಕ್ಯಶೆಟ್ಟಿ, ಅರಕೆರೆ ಮಾಸ್ತಿ, ಕಮ್ಮಾರಗಟ್ಟಿ ಮಾಸ್ತಿ, ಕೊಂಡದಹಳ್ಳಿ ಮಾಸ್ತಿ, ಚಿಕ್ಕುಡೇವಿನ ಮಾಸ್ತಿ, ಶ್ರೀ ಕುಮಾರ ರಾಮನ ಮಹಾಸತಿಯರು ನೇರವಾಗಿ ಸತಿ ಹೋದುದನ್ನು ತಿಳಿಸುತ್ತವೆ. 'ಕೊಂಡದ ಚೆನ್ನಮ್ಮ ಕತೆ'ಯಲ್ಲಿ ಗಂಡ ಯುದ್ಧದಲ್ಲಿ ಮಡಿದುದನ್ನು ತಿಳಿದು, ಚಿತೆ ಮಾಡಿಸಿಕೊಂಡ ಚೆನ್ನಮ್ಮ ಸತಿಹೋಗುತ್ತಾಳೆ. 'ಕಳಗುಚ್ಚಮ್ಮನ ಕತೆ'ಯಲ್ಲಿ ಈರಣ್ಣನೊಡನೆ ಕೆಂಪಮ್ಮ ಗಂಡನ ಮನೆಗೆ ಹೋಗುತ್ತಿರುವಾಗ ಜೊತೆಗೆ ಬಂದ ಆಳುಮಗ ಬೇಡರ ಹುಡುಗ ಮಾರ್ಗ ಮಧ್ಯದಲ್ಲಿ ಊಟಕ್ಕೆ ಕುಳಿತಾಗ ಗಂಡನನ್ನು ಮಚ್ಚಿನಿಂದ ಹೊಡೆದು ಕೊಲ್ಲುತ್ತಾನೆ. ಆಗ ಕೆಂಪಮ್ಮ ಗಾಬರಿಗೊಳ್ಳದೆ "ಇನ್ನೇನು ಯೋಚ್ನೆ ಮಾಡ್ಬೇಡ. ನಾನೆಂಗಿದ್ರೂ ನಿನ್ನವಳಾದೆ, ಇನ್ನಷ್ಟು ಬುತ್ತಿ ಉಣ್ಣು" ಎಂದು ಬೇಡರ ಹುಡುಗನಿಗೆ ಹೇಳಿ ಊಟಕ್ಕೆ ಬಡಿಸಿ, ಅದೇ ಮಚ್ಚಿನಿಂದ ಅವನನ್ನು ಕೊಲ್ಲುತ್ತಾಳೆ. ಕೆಂಪಮ್ಮನ ಅಣ್ಣಂದಿರು ಅವಳೊಡನೆ ಹೋದ ನಾಯಿ ಬಂದದ್ದನ್ನು ನೋಡಿ, ಕುದುರೆ ಹತ್ತಿ ಬರುತ್ತಾರೆ. ಕೆಂಪಮ್ಮನನ್ನು ತವರು ಮನೆಗೆ ಕರೆದುಕೊಂಡು ಹೋಗಲು ಪ್ರಯತ್ನಿಸಿದರೂ, ಅವಳು ಕೆಂಡಕೊಂಡವಾಗುವ ನಿರ್ಧಾರವನ್ನು ಬದಲಿಸುವುದಿಲ್ಲ. ಕೊನೆಗೆ ಶ್ರೀಗಂಧದ ಚಿತೆ ಮಾಡಿಸಿಕೊಂಡು ಸತಿಯಾಗುತ್ತಾಳೆ.

'ಮಾಣಿಕ್ಯಶೆಟ್ಟಿ ಕಥೆ'ಯಲ್ಲಿ ಮಾಣಿಕ್ಯ ಶೆಟ್ಟಿಯ ಆರು ಜನ ಸಹೋದರರು ತಮ್ಮ ತಮ್ಮನ ಮರಣವನ್ನು ಸಹಿಸಲಾರದೆ ಅಗ್ನಿ ಕುಂಡದಲ್ಲಿ ಹಾರಿ ಪ್ರಾಣ ಬಿಡುತ್ತಾರೆ. ಗಂಡಂದಿರು ಹೋದ ಮೇಲೆ ತಾವು ಬದುಕಿದ್ದೇನು ಫಲ ಎಂದು ಆಲೋಚಿಸಿ ಆರು ಜನ ಅವರ ಪತ್ನಿಯರು ಅಗ್ನಿ ಕುಂಡದಲ್ಲಿ ಹಾರುತ್ತಾರೆ. 'ಅರಿಕೆರೆ ಮಾಸ್ತಿಕತೆ'ಯಲ್ಲಿ ಬ್ಯಾಟಯ್ಯನ ಪತ್ನಿ ಗಂಡ ಸತ್ತ ಮೇಲೆ ಈಟಿಯಿಂದ ಇರಿದುಕೊಂಡು ಪ್ರಾಣಬಿಡುತ್ತಾಳೆ.

'ಕಮ್ಮಾರಗಟ್ಟಿ ಮಾಸ್ತಿಕಥೆ'ಯು 'ಕಳಗುಚ್ಚಮ್ಮನ ಕಥೆ'ಯನ್ನೇ ಹೆಚ್ಚು ಹೋಲುತ್ತದೆ. ಮಹಾಸತಿಯು ಗಂಡ ಕೆಂಚಪ್ಪನೊಡನೆ ಗಂಡನ ಮನಿಗೆ ಹೊರಟಾಗ ಅವರ ಆಳುಮಗ ಮಾದಿಗನು ಜೊತೆಗೆ ಹೊರಡುತ್ತಾನೆ. ಕೆಂಚಪ್ಪನು ದಾರಿ ಮಧ್ಯದಲ್ಲಿ ನೀರು ಕುಡಿಯುವ ಸಮಯದಲ್ಲಿ ಮಾದಿಗನು ಅವನನ್ನು ಕುಡುಗೋಲಿನಿಂದ ಕತ್ತರಿಸಿ ಹಾಕುತ್ತಾನೆ. ಇದನ್ನು ಕಂಡ ಮಾಸ್ತಿಯೂ ಗಂಡನನ್ನು ಕೊಂದ ಮಾದಿಗನು ದಾರಿಯಲ್ಲಿ ನೀರು ಕುಡಿಯುವಾಗ ಕತ್ತರಿಸಿ ಬಿಡುತ್ತಾಳೆ. ತದನಂತರ ಗಂಡನ ತಲೆಯನ್ನು ತನ್ನ ಮಡಿಲಲ್ಲಿ ಕಟ್ಟಿಕೊಂಡು, ಮಾದಿಗನ ತಲೆಯನ್ನು ಕಾಲಿಗೆ ಕಟ್ಟಿಕೊಂಡು ಕಮ್ಮಾರಗಟ್ಟಿಗೆ ಬಂದು ಕೆಂಡಕೊಂಡ ಮಾಡಿಸಿ ಸತಿಹೋಗುತ್ತಾಳೆ. ಕೆಂಚಪ್ಪನ ಸೂಳೆಯೊಬ್ಬಳು ಮಾಸ್ತಿಯೊಡನೆ ಇದೇ ಸಂದರ್ಭದಲ್ಲಿ ಅಗ್ನಿಪ್ರವೇಶ ಮಾಡುತ್ತಾಳೆ ಎಂದು ತಿಳಿದುಬರುತ್ತದೆ.

'ಕೊಂಡದಹಳ್ಳಿ ಮಾಸ್ತಿಕತೆ'ಯು ಇದೆ ಕತೆಯ ಮಾದರಿಯಲ್ಲಿದೆ. ಚಿಕ್ಕುಡೇವಿನ ಮಾಸ್ತಿ

ಕತೆಯಲ್ಲಿ ಮದುವೆಗೆ ನಿಶ್ಚಯವಾಗಿದ್ದ ಗಂಡ ಕರಿಯಪ್ಪ ಯುದ್ಧದಲ್ಲಿ ಮಡಿಯಲಾಗಿ, ಆತನ ಸ್ತ್ರೀ ಸತಿ ಹೋಗುತ್ತಾಳೆ. ಕುಮಾರರಾಮನ ಮಹಾಸತಿಯರು ಸತಿ ಹೋದ ಕತೆಯಲ್ಲಿ ಕುಮಾರರಾಮ ತೆಂಕಣ ದೇಶಗಳ ಮೇಲೆ ಯುದ್ಧಕ್ಕೆ ಹೋಗುವಾಗ ಕಾಳಿಕಾದೇವಿಯನ್ನು ಮರೆತನಂತೆ. ಇದೇ ಕಾರಣದಿಂದಾಗಿ ಕುಮಾರರಾಮ ಮಡಿದನೆಂಬ ನಂಬಿಕೆಯಿದೆ. ಇದೇ ಸಂದರ್ಭದಲ್ಲಿ ಅವನ ನಾಲ್ಕು ಜನ ಪತ್ನಿಯರಾದ ನಾಗಮ್ಮ, ಮಾಳಮ್ಮ, ಹೊನ್ನಮ್ಮ, ಕೆಂಡದಮ್ಮ ಇವರು ಸತಿಹೋಗುತ್ತಾರೆ. ಮಾಸ್ತ್ಯಮ್ಮ, ಅಡಗನಹಳ್ಳಿ ಮಾಸ್ತಿ, ಕಲ್ಲೂರು ಮಾಸ್ತಿ, ಮಾಚನಹಳ್ಳಿ ಮಾಸ್ತಿ, ಜಲಧಿಗೆರೆ ಮಾಸ್ತಿ, ಚಂದಾವರಮಾಸ್ತಿ ಕಥೆಗಳನ್ನು ಎರಡನೆಯ ಗುಂಪಿನಲ್ಲಿ ಸೇರಿಸಬಹುದಾಗಿದೆ. ಇವು ಸತಿ ಘಟನೆಗಳ ಗುರುತುಗಳನ್ನು ತೋರಿಸಿಕೊಟ್ಟರೂ ಮಹಾಸತಿ ಕಥೆಗಳಿಂದ ಭಿನ್ನವಾಗಿವೆ.

'ಮಾಸ್ತ್ಯಮ್ಮ ಕಥೆ'ಯಲ್ಲಿ ಒಕ್ಕಲಿಗರ ಹೆಣ್ಣು ಮಗಳನ್ನು ಅವಳ ಗಂಡ ಯುದ್ಧಕ್ಕೆ ಹೋದ ಸಮಯದಲ್ಲಿ ಮೈದುನನು ಮುಂಗೈ ಹಿಡಿದು ಮಾತನಾಡಿಸುತ್ತಾನೆ. ಇದನ್ನು ಸಹಿಸದ ಆ ಹೆಣ್ಣು ಸುತ್ತೂರು ಸ್ವಾಮಿಗಳ ಸಮ್ಮುಖದಲ್ಲಿ ಅಗ್ನಿ ಪ್ರವೇಶ ಮಾಡುತ್ತಾಳೆ. 'ಅಡಗನಹಳ್ಳಿ ಮಾಸ್ತಿಕಥೆ'ಯಲ್ಲಿ ಪತ್ನಿಯೊಬ್ಬಳು ಗಂಡ ಸೈನ್ಯಕ್ಕೆ ಹೊರಟು ಹೋದವನು ಬಹಳ ದಿನಗಳವರೆಗೆ ಬರದೇ ಇದ್ದುದ್ದಕ್ಕಾಗಿ ಮೈಸೂರ ಅರಸರ ಅಪ್ಪಣೆ ಪಡೆದು ಕೆಂಡಕೊಂಡವಾಗುತ್ತಾಳೆ.

ಸತಿಪದ್ಧತಿಯು ವಿವಿಧ ಜನಾಂಗಗಳಲ್ಲಿ ಆಚರಣೆಯಲ್ಲಿರುವುದಕ್ಕೆ ಸಾಕಷ್ಟು ಪುರಾವೆಗಳಿವೆ. ಸ್ತ್ರೀಯರು ಗಂಡನ ಜೊತೆ ಸಹಗಮನಗೊಳ್ಳುವುದಷ್ಟೇ ಅಲ್ಲದೇ ಅವನಿಗೆ ಸಂಬಂಧಿಸಿದ ವಸ್ತುಗಳ ಜೊತೆಗೂ ಸ್ತ್ರೀಯರು ಅನುಗಮನದ ಮೂಲಕ ಕೆಂಡಕೊಂಡವಾದರು.[೩೭] ಇದರಲ್ಲಿ ಬಂಜಾರ ಸಮುದಾಯದ ಸ್ತ್ರೀಯರು ಬಾಂಧವ್ಯ ಮತ್ತು ಸಾಂಪ್ರದಾಯಕ್ಕೆ ಕಟ್ಟು ಬಿದ್ದು ಜೀವಂತ ಚಿತೆಗೇರಿರುವುದು ಯಾವುದೇ ಒಂದು ಬಲಿದಾನಕ್ಕೂ ಕಡಿಮೆಯೆನಿಸಲಾರದು. ಈ ಸಮುದಾಯದಲ್ಲೂ ಅನೇಕ ಮಹಿಳೆಯರು ಅನುಗಮನ ಪದ್ಧತಿಗೆ ಒಳಗಾಗಿದ್ದಾರೆ. ಅಂತಹ ಪ್ರಮುಖ ಮಹಿಳೆಯರ ಕುರಿತು ಮಾಹಿತಿ ಈ ಕೆಳಗಿನಂತಿದೆ.[೩೮]

೧. ಹೂನಾಸತಿ – ರಾಮಜಿರಾಜನ ಪತ್ನಿ

೨. ಕೇಸಿರಾಣಿ – ಕಾನೂರಾಜನ ಪತ್ನಿ

೩. ಸೀತಾಸತಿ – ಢಾಕುರಾಜನ ಪತ್ನಿ (ಚತರುರಾಜ)

೪. ಪೋಮಾ ಪಾತಳಿ – ಈಶ್ವರ ಸಭಾವತ್ ಪತ್ನಿ (ಮಧುರಾಜ)

೫. ತೋಳಾಸತಿ – ಕೇಸಿರಾಜನ ಪತ್ನಿ

೬. ರೂಪಾಸತಿ – ರೇಕುರಾಜನ ಪತ್ನಿ

೭. ಭೀಮಾಸತಿ – ತೀಥಾರಾಜನ ಪತ್ನಿ

೮. ಶಕ್ತಿ (ಸೊಕ್ತ)

೯. ಬನ್ನಿ

೧೦. ಗುಜಾಸತಿ – ನರಸಿಂಗರಾಜ

೧೧. ಸುವಾಸತಿ – ನಾನುನಾಯಕ

೧೨. ಚಂಪಾಸತ – ಲಾಲೂರಾಜ

೧೩. ಹೀರಾಸತಿ – ವೇಣಾನಾಯಕ

೧೪. ಭಾಗಿಸತಿ – ಗಂಗಾನಾಯಕ

೧೫. ತೋಳಾಸತಿ – ಮಾಧುರಾಜ

೧೬. ತೋಳಜಾಸತಿ – ಸೇಕಾರಾಜ

೧೭. ದೇಸಾಸತಿ – ಧಾನುರಾಜ

೧೮. ಸೋಮಿಸತಿ – ಕಾನಾರಾಜ

೧೯. ರತಿಸತಿ – ಫಣಾರಾಜ

೨೦. ಬಾಣಾಸತಿ – ದೇವುರಾಜ

೨೧. ಸೋನಾಸತಿ – ಲಕ್ಕುರಾಜ

ಬಂಜಾರ ಬುಡಕಟ್ಟು ಜನಾಂಗದಲ್ಲಿ ಪ್ರಮುಖ ೨೧ ಜನ ಸ್ತ್ರೀಯರು ಸಹಗಮನ ಮತ್ತು ಅನುಗಮನದ ಪದ್ಧತಿ ಆಚರಿಸುವುದರ ಮೂಲಕ ಮಹಾಸತಿಯರಾದರು. ತಮ್ಮ-ತಮ್ಮ ಗಂಡನ ಸಾವಿನೊಂದಿಗೆ ಒಂದಾಗಿ ಚಿತೆ ಏರಿ ದೇವತೆಗಳಾಗಿದ್ದಾರೆಂದು ಅವರವರ ಪರಿವಾರ-ಗೋತ್ರದವರೆಲ್ಲರೂ ಸೇರಿ ಪ್ರತಿವರ್ಷ ಹರಕೆ ಹೊತ್ತು ಪೂಜೆ ಮಾಡುತ್ತಾ ಬರುತ್ತಿರುವುದನ್ನು ಕಾಣುತ್ತೇವೆ.[೩೯] ಈ ಪದ್ಧತಿಗೆ ಸಂಬಂಧಿಸಿದ ದೇವಸ್ಥಾನಗಳು ಕಲ್ಲಿನ ಮೂರ್ತಿಗಳು ದೇಶದುದ್ದಕ್ಕೂ ಕಾಣಸಿಗುತ್ತವೆ. ಉದಾಹರಣೆಗೆ ರಾಜಸ್ಥಾನದ 'ಝುಂಝುಂ' ದಲ್ಲಿಯ 'ಸತಿದೇವಿ' ಭಾರತದಲ್ಲಿಯೇ ತುಂಬ ಪ್ರಸಿದ್ಧಿ ಪಡೆದ ಐತಿಹಾಸಿಕ ಸ್ತ್ರೀ ದೇವತೆಯಾಗಿದ್ದಾಳೆ.[೪೦] ಬಂಜಾರ ಸಮುದಾಯದ

ಕೆಲವು ಮಹಾಸತಿಯರ ಕುರಿತು ಇರುವ ಕಥೆಗಳು ಅತ್ಯಂತ ರೋಮಾಂಚನಕಾರಿ ಹಾಗೂ ಚಾರಿತ್ರಿಕ ವಿಶೇಷತೆಯನ್ನು ಹೊಂದಿದ್ದು, ಅವುಗಳ ವಿವರ ಈ ಕೆಳಗಿನಂತಿದೆ.

ಹೂನಾಸತಿ

ಬಂಜಾರ ಸಮುದಾಯದಲ್ಲಿ ಹೂನಾಸತಿಯನ್ನು 'ಹುನ್ಕಿ' ಎಂದು ಕರೆಯುವ ವಾಡಿಕೆಯಿದೆ. ಇವಳನ್ನು ಈ ಜನಾಂಗದ ಪ್ರಮುಖ ಗೋತ್ರವಾದ ಗೋಲಾಣಿ ಗೋತ್ರಾದ ಭೀಮಾನಾಯಕನ ಮಗ ರಾಮಜಿ ಎಂಬಾತನಿಗೆ ಕೊಟ್ಟು ಮದುವೆ ಮಾಡಬೇಕೆಂಬ ನಿಶ್ಚಯವನ್ನು ಹಿರಿಯರು ಮಾಡಿರುತ್ತಾರೆ. ಇನ್ನು ಮದುವೆ ಆಗದ ಇವಳು ಹೇಗೆ ಸತಿಯಾಗುತ್ತಾಳೆ ಎಂಬ ಪ್ರಶ್ನೆಯಿದೆ. ಈ ಪ್ರಶ್ನೆಗೆ ಉತ್ತರ ಹೀಗಿದೆ. ಮೂರುನೂರು ಗುಡಿಸಲುಗಳ ತಾಂಡದ ನಾಯಕನಾಗಿದ್ದ ಭೀಮಾ ಎಂಬಾತನ ಮಗ 'ರಾಮಜಿರಾಜ' ಗೋವು ಕಾಯುವ ಕಾಯಕದಲ್ಲಿ ನಿರತನಾಗಿದ್ದನು. ಒಂದು ಸಾರೆ ತಂದೆ ಭೀಮಾನಾಯಕ ಮಗನನ್ನು ಹೊಡೆಯುತ್ತಾನೆ. ಕಾರಣ ರಾಮಜಿಯು (ಕಮಳ್ಯಾಸಾಂಡ) ಬೀಜದ ಹೋರಿಯನ್ನು ದನ ಮೇಯಿಸುವಾಗ ಕಳೆದುಕೊಳ್ಳುತ್ತಾನೆ. ಇದರಿಂದ ಸಿಟ್ಟಿಗೆದ್ದ ತಂದೆ ಹೊಡೆಯುತ್ತಾನೆ.[೪೧] ತಪ್ಪು ಮಾಡದಿರುವ ಈತನು ಅಪ್ಪ ಹೊಡೆದನೆಂದು ಮನಸ್ಸಿಗೆ ನೋವು ಮಾಡಿಕೊಂಡು ಊಟ ನೀರು ಬಿಟ್ಟು ಗೋದಾಯಿಯಲ್ಲಿ ಮಲಗಿದ. ಮಾರನೆಯ ದಿನ ರಾಮಜಿಯು ಬೆಳಗಿನ ಜಾವ ಕಾಡಿನೆಡೆಗೆ ಹೋಗುತ್ತಾನೆ. ಕೆಲವು ತಾಂಡದ ಜನರು ರಾಮಜಿ ಕಾಡಿನೆಡೆಗೆ ಹೋದ ವಿಚಾರ ತಂದೆ ತಾಯಿಗೆ ತಿಳಿಸುತ್ತಾರೆ. ಹೆತ್ತೊಡಲ ಬೇನೆ ಹೆತ್ತವರಿಗೆ ಗೊತ್ತೆಂಬಂತೆ ತಂದೆ ತಾಯಿ ಊರಿನ ಜನರೆಲ್ಲರೂ ಕಾಡಿಗೆ ಹೋಗದಂತೆ ತಡೆಯಲು ಪರಿಪರಿಯಿಂದ ವಿನಂತಿಸಿದರು. ಯಾರ ಮಾತನ್ನು ಕೇಳದ ರಾಮಜಿ ದುರ್ಗಮವಾದ ಕಾಡಿನಲ್ಲಿ ಹೊರಟುಹೋದ. ಇದೇ ಸಮಯಕ್ಕೆ ಒಂದು ಚೀತಾ(ಕೌಜಿಗ) ಒದರಿತು. ಇದು ಅಪಶಕುನವೆಂದು ನಾಲ್ಕು ಫರ್ಲಾಂಗ ದೂರ ನಡೆದು ತನ್ನ ಸೊಂಟದಲ್ಲಿರುವ 'ಹೋಕಾ'ದಲ್ಲಿ ತಂಬಾಕು ತುಂಬಿ ಚಿಲುಮೆ ಸೇದುತ್ತಾ ತನ್ನ ಪ್ರಯಾಣ ಬೆಳೆಸಿದ. ಸಿಂಹ, ಹುಲಿ, ತೋಳ, ಚಿರತೆ ಕರಡಿಗಳಿರುವುದನ್ನು ಗಮನಿಸಿದ. ಈತ ಧೈರ್ಯಗೆಡದೆ ವೇಗವಾಗಿ ಕಾಡನ್ನು ಭೇದಿಸುತ್ತ ಸಾಗಿದ. ಅಷ್ಟರಲ್ಲಿ ಘೋರ ಅರಣ್ಯದಲ್ಲಿದ್ದ ಸೋನಿ ಎಂಬ ಹೆಸರಿನ ಬಂಗಾರ ಬಣ್ಣದ ಚಿರತೆಯು ರಾಮಜಿಗೆ ಅಡ್ಡಗಟ್ಟಿ ಹೇಳಿತು.

ಬಂದ ದಾರಿಗೆ ಸುಂಕವಿಲ್ಲವೆಂದು ಹೊರಟು ಹೋಗು
ಈ ದಿಕ್ಕಿನಲ್ಲಿ ಬರಬಾರದಾಗಿತ್ತು.
ಈ ನಿನ್ನ ದೇಹದೊಂದಿಗೆ ಉಸಿರು ನಿಲ್ಲಬೇಕಾದರೆ
ಹೊರಟು ಹೋಗಲು ಸಿದ್ಧನಾಗು ಇಲ್ಲವಾದರೆ

ಮೂರು ಪೆಟ್ಟಿನ ಶರತ್ತನ್ನು ಒಪ್ಪಿಕೊ
ನಿನ್ನ ಪೆಟ್ಟಿನಿಂದ ನಾ ಸತ್ತರೆ ನೀನು ಬದುಕಿದೆ
ಇಲ್ಲವಾದರೆ ನಿನ್ನನ್ನು ನನ್ನ ಆಹಾರವಾಗಿಸುತ್ತೇನೆ ಎಂದಿತು.[42]

ಅರಣ್ಯ ಮಧ್ಯದಲ್ಲಿ ರಾಮಜಿ ಮತ್ತು ಸೋನಿ ಚಿರತೆಯ ಮಧ್ಯೆ ಸಂವಾದ ನಡೆದು, ರಾಮಜಿ ಚಿರತೆಗೆ ದಾರಿಬಿಡಲು ಹೇಳಿ ಅದರ ಮೇಲೆ ೩ ಬಾರಿ ಖಡ್ಗ ಬೀಸುತ್ತಾನೆ. ಪ್ರಹರಗಳಿಂದ ತಪ್ಪಿಸಿಕೊಳ್ಳುತ್ತದೆ. ನಿನ್ನ ಷರತ್ತು ಮುಗಿಯಿತು. ಈಗ ನನ್ನ ಸರದಿ ಎಂದು ಹೇಳುತ್ತ ಚಿರತೆಯು ರಾಮಜಿಯ ಮೇಲೆ ಚಂಗನೆ ಹಾರಿ ಕುತ್ತಿಗೆಯ ಮೇಲೆ ದಾಳಿ ಮಾಡಿತು. ೨ನೇ ಬಾರಿ ಎದೆ ಸೀಳಿತು. ೩ ಬಾರಿ ಪ್ರದಕ್ಷಿಣೆ ಹಾಕಿ ಮತ್ತೊಮ್ಮೆ ದಾಳಿ ಮಾಡಿತು. ಆಗ ರಾಮಜಿಯ ದೇಹದಿಂದ ಧಾರಾಕಾರವಾಗಿ ರಕ್ತ ಸುರಿಯುತ್ತಿತ್ತು. ವಿಲವಿಲನೆ ಒದ್ದಾಡಿ ರಾಮಜಿ ಪ್ರಾಣಬಿಟ್ಟನು. ನಿರ್ಜನ ಕಾಡಾಗಿದ್ದರಿಂದ ಯಾರು ಸಹಾಯಕ್ಕೆ ಬರಲಿಲ್ಲ. ಖರ್ಜೂರ ಗಿಡದ ಬಳಿ ರಕ್ತ ಸಿಕ್ತವಾದ ರುಮಾಲ ಮತ್ತು ಅಂಗಿಯನ್ನು ಒಗೆದಿತ್ತು. ಕಾಡಿನಲ್ಲಿ ನಡೆದ ಈ ಘಟನೆ ಅವನ ಜೊತೆ ಮದುವೆ ನಿಶ್ಚಯವಾಗಿದ್ದ ಕನ್ಯೆಯಾದ ಹೂನಾಳಿಗೆ ಕನಸಿನಲ್ಲಿ ಕಾಣುತ್ತದೆ. ಈ ಕೆಟ್ಟ ಕನಸಿನಿಂದ ವಿಚಲಿತಳಾದ ಹೂನಾಸತಿ ನಿದ್ರೆ ಬರದೆ ಬೆಳಗಾಗುವುದನ್ನು ಕಾಯುತ್ತಾಳೆ. ಮುಂಜಾನೆ ನೀರು ತರಲು ತನ್ನ ಗೆಳತಿ ಕೇಸಾಳನ್ನು ಕರೆದುಕೊಂಡು ಹಳ್ಳಕ್ಕೆ ಹೋಗುತ್ತಾಳೆ. ತನ್ನ ಗೆಳತಿಯ ಹತ್ತಿರ ರಾತ್ರಿಯ ಕೆಟ್ಟ ಕನಸಿನ ವಿವರ ಹೇಳುತ್ತಾಳೆ. ತನ್ನ ಗಂಡನೆಂದೇ ಭಾವಿಸಿದ್ದ ರಾಮಜಿಗೆ 'ಹನುಮಾನ' ವನದಲ್ಲಿ ಚಿರತೆ ಕಡಿದು ಸಾಯಿಸಿದೆ ಎಂದು ಹೇಳಿದಾಗ, "ನೀನೆಂಥ ಕೆಟ್ಟ ಮಾತು ಹೇಳ್ತಿದ್ದೀಯಾ ನಿನ್ನ ನಾಲಿಗೆಗೆ ಬಾರಿ ಮುಳ್ಳು ಚುಚ್ಚಲಿ" ಎನ್ನುತ್ತ ಹಳ್ಳಕ್ಕೆ ಇಳಿದು ವರತೆ ಹರಡುತ್ತಾರೆ. ಆಗ ೫ ಎಲೆ ಅಡಿಕೆ ಹೊರಬಂದವು. ಅದನ್ನು ಕಂಡ ಹೂನಾಸತಿ "ಕೇಸಿ ಹೆದರಬೇಡ ಅದನ್ನು ಎತ್ತಿ ನನ್ನ ಉಡಿಯೊಳಗೆ ಹಾಕು" ಎಂದಳು. ಅಷ್ಟರಲ್ಲಿ ಹೂನಾಳ ತಲೆ ಬಿಚ್ಚಿಕೊಳ್ಳುತ್ತದೆ. ಕೇಸಿಗೆ ತಲೆ ಕಟ್ಟಲು ತಿಳಿಸುತ್ತಾಳೆ. ಆದರೆ ಸಾಧ್ಯವಾಗಲಿಲ್ಲ. ಇದರಿಂದ ಕೇಸಿರಾಣಿ ಭಯಗೊಂಡು ಹೊರಟಳು. ಇತ್ತ ಭಾರವಾದ ಕೊಡ ತನ್ನಿಂದ ತಾನೇ ಹೂನಾಸತಿಯ ತಲೆಯ ಮೇಲೆ ಕೊಡ ಕೂಡುತ್ತದೆ.

ಹೂನಾಸತಿ ತನ್ನ ಮನೆಯ ಮುಂದೆ ಬಂದು ತನ್ನ ಅಣ್ಣನ ಹೆಂಡತಿಗೆ ಕರೆಯುತ್ತಾಳೆ. ರೊಟ್ಟಿ ಮಾಡುತ್ತಿರುವ ಅಣ್ಣನ ಹೆಂಡತಿ ಬಂದು 'ನೀರು ತರಲು ಹೋಗಿ ತಲೆ ಬಿಚ್ಚಿಕೊಂಡು ಬಂದಿಯಲ್ಲ ನಿನಗೇನು ಬುದ್ದಿ ಇದೆಯಿಲ್ಲ. ಯಾರಾದರೂ ಇದ್ದರೆ ಕೊಡ ಇಳಿಸಿಕೊ ಎಂದು ಹೋದಳು. ಆಗ ಹೂನಾಸತಿ "ರೊಟ್ಟಿ ಹರಿಯಲಿ" ಎಂದು ಶಾಪ ಹಾಕಿದಳು. ಕೌದಿ ಹೊಲಿಯುತ್ತಿರುವ ತಾಯಿಯನ್ನು ಕರೆದಳು. ತಾಯಿಯು ಹೀಗೆ ಹೇಳಿದಾಗ 'ಕೌದಿ ದಾರ ಎಳೆ

ಎಳೆಯಾಗಿ ಹರಿಯುತ್ತ ಹೋಗಲಿ' ಎಂದು ಶಾಪ ಹಾಕಿದಳು. ಹೀಗೆ ಅಪ್ಪ, ಅಣ್ಣ ಹೇಳಿದಾಗ ಕೂಡ ಹೊತ್ತ ಹೂನಾಳು ಆಯಾಸದಿಂದ ನಿಸ್ತೇಜಳಾಗಿದ್ದಳು. ಇದನ್ನು ಕಂಡು ಮನೆಯವರೆಲ್ಲರೂ ದೆವ್ವ ಹಿಡಿದಿದೆ ಎಂದು ಪಕ್ಕದ ತಾಂಡದಿಂದ ದೆವ್ವ ಬಿಡಿಸುವ ಭೋಪಾನಿಗೆ ಕರೆಯಿಸಿದರು. ಭೋಪಾ ಹೂನಾಳಿಗೆ ಹೊಡೆದ ಎರಡು ಏಟಿಗೆ ಭೋಪಾನ ಎರಡು ಹೋರಿಗಳು ಪ್ರೀತಿಯ ಮಗ ಸಾವನ್ನಪ್ಪಿದದು, ಮೂರನೆ ಏಟಿಗೆ ಗುಡಿಸಲು ಭಸ್ಮವಾಯಿತು. ಈ ದುರಂತ ತಿಳಿದ ಆತ ಆಕೆಯ ಪಾದಕ್ಕೆ ಬಿದ್ದು ಕ್ಷಮೆ ಕೇಳಿದ. ಕ್ಷಮೆ ಕೇಳಿದ್ದರಿಂದ ಹೂನಾಸತಿ ಅವನಿಗೆ ಕಳೆದುಕೊಂಡಿರುವುದೆಲ್ಲವನ್ನು ಮತ್ತೆ ದೊರಕಿಸಿ ಕೊಟ್ಟಳು. ಇದರಿಂದ ತಾಂಡಾದ ಜನ ಇವಳಲ್ಲಿ ದೈವಿ ಸ್ವರೂಪವಿದೆ ಎಂದು ಸುದ್ದಿ ಮಾಡಿದರು. ಗಬ್ಬಾದ ಆಕಳಿನಿಂದ ಹಾಲು ಹಿಂಡಿಸಿ ಖೀರ ತಯಾರಿಸಿ ಏಳು ತಾಂಡಾದ ಜನರಿಗೆ ಊಟ ಬಡಿಸಿದಳು. ಆದರೆ 'ಉಕಲಾ' ಗೋತ್ರದ ಒಬ್ಬ ಹೆಣ್ಣು ಮಗಳನ್ನು ಈ ಪಂಕ್ತಿ ಭೋಜನಕ್ಕೆ ಕರೆಯಲಿಲ್ಲ. ಕಾರಣ ಆಕೆ ಮಾಟಗಾತಿ ಆಗಿದ್ದುದಲ್ಲದೆ ಉಲ್ಬಾ(ಪಾಂಬಡಿ)ವಲ್ಲಿ ಹೊದ್ದಿಕೊಳ್ಳುತ್ತಿದ್ದಳಂತೆ. ಊಟಕ್ಕೆ ಕುಳಿತ ಎಲ್ಲರನ್ನು ಉದ್ದೇಶಿಸಿ, ಇವತ್ತು ಊಟಮಾಡದೇ ಇರುವವರು ಏಳು ಜನ್ಮದವರೆಗೆ ಉಪವಾಸ ಇರಬೇಕಾಗುತ್ತದೆ ಎಂದಳು. ಮತ್ತೆ ಮುಂದುವರಿದು ತನ್ನ ಜನ್ಮ ಸಂಗಾತಿಯಾಗಿರುವ 'ರಾಮಜಿ'ರಾಜ ಹನುಮಾನ ವನದಲ್ಲಿ ಸೋನಿ(ಚಿರತೆ)ವಾಗುಕ್ಕೆ ಬಲಿಯಾಗಿದ್ದಾನೆ.ಅದನ್ನು ಹಿಡಿದು ತನ್ನಿ ಎಂದಳು. ನಂತರ 'ಆಲಾ' ಮತ್ತು 'ನೀಲಾ' ಎಂಬ ವೀರರಿಂದ ಗಂಧದ ಕಟ್ಟಿಗೆ ತರಿಸಿ, ಹನ್ನೆರಡು ಮೊಳದ ಚಟ್ಟಾ ಕಟ್ಟಿಸಿ ಸ್ಮಶಾನಕ್ಕೆ ಒಯ್ದು ಬೆಂಕಿ ಹೊತ್ತಿಸಿದಳು. ಐದೆಲೆಗಳನ್ನು ಕೈಯಲ್ಲಿ ಹಿಡಿದು ೭ ಸಲ ಚಿತೆಯ ಸುತ್ತ ಪ್ರದಕ್ಷಿಣೆ ಹಾಕಿದಳು. ತನ್ನ ಗಂಡನ ಬಗ್ಗೆ ಕಟ್ಟಿಕೊಂಡ ನೂರಾರು ಭಾವನೆಗಳನ್ನು ಹೇಳುತ್ತ ಕಣ್ಣೀರು ಹರಿಸಿದಳು. ನೆರೆದ ಸಮೂಹಕ್ಕೆ ನೀವ್ಯಾರು ಅಳಬೇಡಿ ಎನ್ನುತ್ತ ಧಗ ಧಗನೆ ಉರಿಯುವ ಚಿತೆಯೇರಿ ನಿಂತಳು. ಮೂರು ದಿನಗಳ ಕಾಲ ನೀವು ಇಲ್ಲೆ ಇರಿ ಎಂದು ಉರಿಯುತ ಧಗೆಯಲ್ಲಿ ಮಂದಹಾಸ ಬೀರಿದಳು. ಇದನ್ನು ಕಂಡ 'ಕೊಡಾವತ' ಗೋತ್ರದ ಒಬ್ಬ ಮುದುಕ ನಾಟಕೀಯವಾಗಿ ಕೆಮ್ಮಿದನು. ಆಗ ಇಂದ್ರ ಲೋಕದಿಂದ ಬಂದ ಡೋಲಿ ಮರಳಿ ಹೋಯಿತು. ಆಗ ಕೊಡಾವತನಿಗೆ "ನಿನ್ನದೆ ಒಂದು ಕುಟುಂಬದ ತಾಂಡಾ ಆಗಿರಲಿ" ಎಂದು ಶಾಪವಿತ್ತಳು. ಮುಂದೆ ತಾಂಡದಲ್ಲಿ ಜಗಳವಾಗಿ ಹಾಗೇ ಆಯಿತು. ಹೀಗೆ ಹೂನಾಸತಿ ತನ್ನ ದೈವಿ ಸ್ವರೂಪವನ್ನು ಬಿಟ್ಟು ಹೋಗಿದ್ದಾಳೆ.

ಹೂನಾಸತಿ ಇವತ್ತಿಗೂ ಬಂಜಾರ ಸಮುದಾಯದ ಐತಿಹಾಸಿಕ ದೇವತೆಯಾಗಿ ಪಾರಂಪರಿಕ ಕುಲ-ಗೋತ್ರಗಳ ದೇವತೆಯಾಗಿ ಆದಿಶಕ್ತಿ ಸ್ವರೂಪಳಾಗಿ ಪೂಜ್ಯತೆಗೆ ಪಾತ್ರಳಾಗಿದ್ದಾಳೆಂಬ ನಂಬಿಕೆ ಇರುವುದನ್ನು ಕಾಣುತ್ತೇವೆ. ಹೂನಾಸತಿಯ ಕುರಿತು ಇರುವ ದೈವಿ ನಂಬಿಕೆ,

ಪವಾಡಗಳು ಅವಳಿಗಾಗಿ ನಡೆಯುವ ಜಾತ್ರೆ– ಉತ್ಸವಗಳು ರೋಮಾಂಚನಕಾರಿ ರೀತಿಯಲ್ಲಿ ನಡೆದು ಬರುತ್ತಿರುವುದನ್ನು ನೋಡಬಹುದು.

ಪ್ರಸ್ತುತ ತಿಮಲಾಪುರದಲ್ಲಿ ಪ್ರತಿವರ್ಷ ಹೂನಾಸತಿಯ ಜಾತ್ರೆ ನಡೆಯುತ್ತದೆ. ಬಂಜಾರ ಸಮುದಾಯದ ಜನ ಮಾತ್ರವಲ್ಲದೆ ಬಂಜಾರೇತರ ಸಮುದಾಯದ ಜನರು ಕೂಡ ಶ್ರದ್ಧೆ–ಬಕ್ತಿ, ಪ್ರೀತಿ–ಆದರಗಳಿಂದ ಹೂನಾಸತಿಯ ಜಾತ್ರಾ–ಉತ್ಸವಗಳಲ್ಲಿ ಭಾಗಿಯಾಗಿ ತಮ್ಮ ಭಕ್ತಿ ಬೇಡಿಕೆಗಳನ್ನು ಸಲ್ಲಿಸುವುದನ್ನು ಕಾಣುತ್ತೇವೆ. ಇಂದಿಗೂ ತಾಂಡಾಗಳ ರಕ್ಷಣೆಯನ್ನು ಹೂನಾಸತಿಯೇ ಮಾಡುತ್ತಾಳೆಂಬ ನಂಬಿಕೆ ಈ ಸಮುದಾಯದ ಜನರಲ್ಲಿ ಇರುವುದನ್ನು ಕಾಣುತ್ತೇವೆ.

ಸಿತಾಸತಿ

ಸಿತಾಸತಿಯು ಕೂಡ ಮದುವೆಯಾಗದೆ ಸಹಗಮನಗೊಂಡ ಬಂಜಾರ ಸಮುದಾಯದ ಸ್ತ್ರೀ. ಇವಳು ಒಂದು ದಿನ ನೀರು ತರಲು ಭಾವಿಗೆ ಹೋದಳು. ಭಾವಿಯಲ್ಲಿಯ ಹಾವು ಕೊಡದಲ್ಲಿ ಬಂದು ಆಕೆಯನ್ನು ಸುತ್ತುವರೆಯಿತು. ಹಾವು ಸುತ್ತಿಕೊಂಡು ದಾರಿಯಲ್ಲೇ ನಿಂತ ಸಿತಾಸತಿ ಕಂಡು ಆಕೆಯೊಂದಿಗೆ ಮದುವೆ ನಿಶ್ಚಯ ಮಾಡಿಕೊಂಡಿದ್ದ ಡಾಕುರಾಜನಿಗೆ ತಿಳಿಯುತ್ತಿದಂತೆ ಶರವೇಗದಲ್ಲಿ ಘಟನಾ ಸ್ಥಳಕ್ಕೆ ಬಂದು ನೋಡುತ್ತಾನೆ. ತನ್ನ ಭಾವಿ ಸತಿಗೆ ಸುತ್ತಿಕೊಂಡ ಹಾವನ್ನು ಕೊಲ್ಲಲು ಖಡ್ಗ ಹಿಡಿಯುತ್ತಾನೆ. ಹೆದರಿಕೆ ಹಾಗೂ ಕ್ರೋದದೊಂದಿಗೆ ನಿಂತ ಗಂಡನನ್ನು ನೋಡಿ ನೀವು ಈ ಹಾವನ್ನು ಏನು ಮಾಡಬೇಡಿ ಹಾವು ತನ್ನಿಂದ ತಾನೆ ಹೋಗಲಿ ಎಂದಳು. ಆದರೆ ಡಾಕುರಾಜ ತನ್ನ ಕೈಯಲ್ಲಿದ್ದ ಖಡ್ಗದಿಂದ ಹಾವಿನ ಹೆಡೆಗೆ ಹೊಡೆಯುತ್ತಾನೆ. ಒಂದೂವರೆ ಗೇಣಿನಷ್ಟು ತುಂಡಾದ ಹಾವಿನ ಹೆಡೆ ಡಾಕುರಾಜನ ಬೆನ್ನಮೇಲೆ ಅಪ್ಪಳಿಸಿ ಮೂರು ಬಾರಿ ಬೆನ್ನಿಗೆ ಕಚ್ಚಿ ವಿಷ ಬಿಡುತ್ತದೆ. ಕ್ಷಣಾರ್ಧದಲ್ಲಿ ಕುದುರೆ ಮೇಲಿಂದ ಡಾಕುರಾಜ ರೋಧಿಸುತ್ತ ಕೆಳಗುರುಳಿದ ಸುದ್ಧಿ ತಿಳಿದ ತಾಂಡಾ ಜನರು ಗಂಧದ ಮರ ಹಾಗೂ ವಿವಿಧ ಮರಗಳ ಕಟ್ಟಿಗೆ ತಂದು ಅಂತ್ಯ ಸಂಸ್ಕಾರಕ್ಕೆ ಅಣಿಮಾಡುವ ಹೊತ್ತಿನಲ್ಲಿ ಸಿತಾಸತಿ 'ನಾನು ನನ್ನ ಜೋಡಿದಾರನ ಜೊತೆ ಜೀವಂತ ಸಮಾಧಿಯಾಗುತ್ತೇನೆಂದು, ಐದು ವೀಳ್ಯದೆಲೆ ಮತ್ತು ಅಡಿಕೆ ಕೈಯಲ್ಲಿ ಹಿಡಿದು ಕೊಂಡು ಧಗ ಧಗನೆ ಉರಿಯುವ ಬೆಂಕಿಗೆ ೫ ಸುತ್ತು ಹಾಕಿ ಚಿತೆ ಏರಿ ನಿಂತಳು. ಅಂದಿನಿಂದ ಇಂದಿನವರೆಗೂ ಬಂಜಾರ ಸಮುದಾಯದಲ್ಲಿ ಸಿತಾಸತಿಯ ಹೆಸರಿನಲ್ಲಿ ಜಾತ್ರೆ ಹಬ್ಬಗಳು ನಡೆದುಕೊಂಡು ಬಂದಿವೆ. ಇದನ್ನು ಕಥೆ ಕವಿತೆಗಳಲ್ಲಿ ಹಾಡಿ ಹೊಗಳುತ್ತಾರೆ.

ಪೋಮಾಪಾತಳಿಸತಿ

ಬಂಜಾರ ಸಮುದಾಯದಲ್ಲಿ ಲದೇಣಿ ವ್ಯಾಪಾರ ಮಾಡುತ್ತ ದೇಶದಿಂದ ದೇಶಕ್ಕೆ ಹೋಗಿ ಬರುತ್ತಿದ್ದರು ಇದೇ ಸಮಯದಲ್ಲಿ ತೊಟ್ಟಿಲಲ್ಲೇ ಆಡುವ ಕನ್ಯೆಗೆ ಮದುವೆ ಮಾಡುವ ಸಂಪ್ರದಾಯ ಬಂಜರ ಸಮಾಜದಲ್ಲಿದೆ ಎಂಬುದು ತಿಳಿದು ಬರುತ್ತದೆ. ಈ ಸಂಪ್ರದಾಯದಂತೆ ಚವ್ಹಾಣ ಗೋತ್ರದ ಈಶ್ವರ ಸಭಾವತ್ ಮತ್ತು ಪೋಮಾಪಾತಳಿ ಇವರೀರ್ವರ ಕುಟುಂಬಗಳು ಒಂದೇ ತಾಂಡದಲ್ಲಿ ನೆಲೆಸಿದ್ದರಿಂದ ತೊಟ್ಟಿಲ ನಿಶ್ಚಿತಾರ್ಥದ ಮೂಲಕ ನಡೆಯುತ್ತದೆ. ಇದಕ್ಕೆ ಅವರು 'ಫಲೊತ್ಯಾರ ಸಗಾಯಿ' ಎನ್ನುತ್ತಾರೆ. ಅಂದರೆ ತೊಟ್ಟಿಲಲ್ಲಿ ಆಡುವ ಕನ್ಯೆಗೆ ವರನ ಮನೆಯವರು ಹೊಸಬಟ್ಟೆಗಳನ್ನು ಹಾಕಿ ಮದುವೆ ನಿಶ್ಚಯ ಮಾಡುವುದು ಎಂದರ್ಥ. ಅದೇ ದಿನದಂದು ಬೆಲ್ಲದ ಬದಲು 'ಲೋದ್ಯಾ' ಅಂದರೆ ಕೆಂಪಗೆ ಮತ್ತು ಸಿಹಿಯಾಗಿರುವ ಬಲಿಜಕಾಯಿ ಹಂಚಿ ನಿಶ್ಚಯಿಸುತ್ತಿದ್ದರು. ಇವರ ಮದುವೆ ಕಾಲುರುಳಿದಂತೆ ದೂರವಾಗಿ ಈ ಎರಡು ಕುಟುಂಬಗಳು ಬೇರೆ ಬೇರೆಯಾಗಿ ಗೊತ್ತಿಲ್ಲದ ಪ್ರದೇಶಗಳಿಗೆ ಹೋದವು. ತಾಂಡದಲ್ಲಿ ಈಶ್ವರ ತಂದೆ ತಾಯಿ ಮರಣ ಹೊಂದಿದರು. ಬೆಳೆದು ನಿಂತ ಈಶ್ವರ ಸಭಾವತನ ಮದುವೆಯಾಗುವ ಹಂಬಲ ತಿಳಿಸಿದರು. ಆಗ ಊರಿನ ಹಿರಿಯರೆಲ್ಲ ಸೇರಿ ನಿನ್ನೊಂದಿಗೆ ನಿಶ್ಚಯ ಮಾಡಿದ ಹುಡುಗಿಯೊಂದಿಗೆ ನಿನ್ನ ಮದುವೆ ಮಾಡಲಾಗುವುದು ಅವಳೆ ನಿನ್ನ ಹೆಂಡತಿ ನೀನು ಪೋಮಾಪಾತಳಿನ ಪರಿವಾರದವರನ್ನು ಹುಡುಕಿ ತಾ ಎಂದು ತಿಳಿಸುತ್ತಾರೆ. ಆಗ ಈಶ್ವರ ಸಭಾವತನು ತನ್ನ ಹುಡುಗಿಯನ್ನು ಹುಡುಕಿ ತರಲು ಒಂದು ಹೆಣ್ಣು ಕುದುರೆಯನ್ನು ಖರೀದಿಸಿ ಹೋಗುವ ಸಮಯದಲ್ಲಿ ತನ್ನ ಚಿಕ್ಕಮ್ಮನ ಕಾಲಿಗೆ ನಮಸ್ಕರಿಸಿ ಆಶೀರ್ವಾದ ಮಾಡು ಚಿಕ್ಕಮ್ಮ ನನ್ನ ಜೊತೆ ನಿಶ್ಚಯವಾಗಿದ್ದು ಆ ಹುಡುಗಿಯನ್ನು ಹುಡುಕಿ ತರಲು ಹೋಗುತ್ತಿದ್ದೇನೆ. ಎಂದಾಗ ಆಕೆ ಆಶೀರ್ವಾದ ಮಾಡದೆ "ಮೂರು ಯುದ್ಧದಲ್ಲಿ ಭಾಗಿಯಾಗಿ ಹೋರಾಡಿ ರಣರಂಗದಲ್ಲೇ ಮಡಿದು ಬಿದ್ದ ನಿನ್ನ ಶವವನ್ನು ನೋಡುತ್ತೇನೆ ವಿನಃ ನೀನು ನಿನ್ನ ಹೆಂಡತಿ ಯಾಗುವವಳನ್ನು ಮದುವೆಯಾಗಿ ಮರಳಿ ಬರುತ್ತೀಯೆಂದು ನನಗನಿಸುತ್ತಿಲ್ಲ" ಎಂದು ಶಾಪಹಾಕಿ ಕಳುಹಿಸುತ್ತಾಳೆ.

ಈಶ್ವರ ಸಭಾವತನು ಮೂರು ತಿಂಗಳ ಕಾಲ ಸತತ ಪ್ರಯತ್ನ ಮಾಡುತ್ತ ಸಾಗುತ್ತಾನೆ. ಆಗ ಅವನೇರಿದ್ದ ಕುದುರೆ ಹೇಳುತ್ತದೆ. ಈ ಮಾರ್ಗದಲ್ಲಿ ಘನ ಘೋರ ಯುದ್ಧಗಳು ನಡೆಯುತ್ತಿರುತ್ತವೆ. ದೈವೀ ಶಕ್ತಿಯಿರುವ ಕುದುರೆ ೬-೭ ತಿಂಗಳು ನಡೆದು ಆಗ ಈಶ್ವರ ಆ ಯುದ್ಧದಲ್ಲಿ ಗೆಲುವು ಸಾಧಿಸಿ ಮುಂದೆ ಹೋಗುವೆ ಎಂದು ಹೇಳುತ್ತಾನೆ ಸ್ವಲ್ಪ ಮುಂದೆ ಸಾಗಿದೊಡನೆ ಭಯಂಕರವಾದ ಮತ್ತೊಂದು ಯುದ್ಧ ನಡೆಯುತ್ತದೆ. ಮೊದಲೆರಡು ಯುದ್ಧಗಳಲ್ಲಿ

ಗೆಲವು ಸಾಧಿಸಿ ಇನ್ನು ಕೆಲವೇ ದಿನಗಳಲ್ಲಿ ತನ್ನ ಹೆಂಡತಿಯಾಗುವವಳ ಬಳಿಗೆ ಹೋಗಬೇಕೆನ್ನುವ ಹೊತ್ತಿಗೆ ಅದೇ ಮಾರ್ಗದಲ್ಲಿ ಭಯಂಕರವಾದ ಮತ್ತೊಂದು ಕಾಳಗ ನಡೆಯುತ್ತದೆ. ವೀರಾವೇಶದಿಂದ ಹೋರಾಡುತ್ತಿರುವಾಗ ಸಭಾವತನ ಬೆನ್ನ ಹಿಂದೆ ಬಂದ ಸೈನಿಕ ಆತನ ರುಂಡವನ್ನೇ ಛೇದಿಸಿ ಶರೀರದಿಂದ ಬೇರ್ಪಡಿಸುತ್ತಾನೆ. ಆಗ ಸಭಾವತನ ಚಿಕ್ಕಮ್ಮನ ಮಾತಿನಂತೆ ಆದ ಇತ್ತ ಆಗ ತನ್ನೊಂದಿಗೆ ಮದುವೆಯಾಗಬೇಕೆಂದು ಹುಡುಗಿ ಈಶ್ವರ ಸಭಾವತನ ಸಾವಿನ ಸುದ್ದಿ ತಿಳಿದ ಪೋಮಾಪಾತಳಿಗೆ ಸಿಡಿಲು ಸಿಡಿದಂತಾಯಿತು. ಅಂತ್ಯ ಸಂಸ್ಕಾರಕ್ಕೆ ತಯಾರಿ ಮಾಡಿ ಚಿತೆ ಹೊತ್ತಿಸಿದರು. ಆ ಚಿತೆಯಲ್ಲಿಯೇ ಬಿದ್ದು ಸಹಗಮನ ಹೊಂದಿದ್ದ ಪೋಮಾ ಪಾತಳಿಯ ಬಗ್ಗೆ ವಿವಿಧ ರೀತಿಯ ಕತೆಕಟ್ಟಿ ಹಾಡುಗಳಿದ್ದು ಅವುಗಳನ್ನು ಸಂದರ್ಭಕ್ಕೆ ಅನುಸಾರವಾಗಿ ಹಾಡಿ ಹೊಗಳುವುದನ್ನು ಕಾಣುತ್ತೇವೆ.

ಭೀಮಾಸತಿ

ಭೀಮಾಸತಿಯು ಬಂಜಾರ ಸಮುದಾಯದ ತುಮಕೂರು ಜಿಲ್ಲೆಯಲ್ಲಿರುವ ಎಣ್ಣೇಗೇರಾ ತಾಂಡಾದವರಾಗಿದ್ದು, ಅದೇ ಸಮುದಾಯದ ತಿತಾರಾಜನಿಗೆ ಕೊಟ್ಟು ಮದುವೆ ಮಾಡಲಾಗಿತ್ತು. ಈಕೆ ಗುಣದಿಂದ ಸೌಜನ್ಯವತಿ, ಅತ್ಯಂತ ಸುಂದರಿ, ಸ್ವಾಭಿಮಾನಿ, ಸಾತ್ವಿಕಕ್ಕೆ ಹೆಸರಾಗಿದ್ದಳು. ಇವಳ ದಾಂಪತ್ಯ ಸುಂದರವಾಗಿತ್ತು. ಇವರ ಕಸಬು ಮೀನು ಹಿಡಿಯುವ ಅಥವಾ ಬೇಟೆಗೆ ಹೋಗುವ ಪರಿಪಾಠ ಇಟ್ಟುಕೊಂಡಿದ್ದರು. ಒಂದು ದಿನ ತಿತಾರಾಜನು ಬೇಟೆಯಾಡಲೆಂದು ಕಾಡಿಗೆ ಹೊರಟನು ಆಗ ಭೀಮಾಬಾಯಿಯು ಇವತ್ತು ಕಾಡಿಗೆ ಬೇಟೆಗೆ ಹೋಗಬೇಡಿ" ಎಂದು ಬೇಡಿಕೊಂಡರೂ ಅವಳ ಮಾತು ಕೇಳದೆ ಏಳು ತಿಂಗಳ ಗರ್ಭಿಣಿಯನ್ನು ಭೀಮಾಳಿಗೆ ಅಪಶಕುನ ನುಡಿದಿರುವೆ ಎಂದು ಕೈ ಮಾಡುತ್ತಾನೆ. ಇದನ್ನು ಕಂಡ ಭೀಮಳ ತಾಯಿ ಖಂಡಿಸುತ್ತಾಳೆ. ಇದರಿಂದ ನೊಂದ ತಿತಾರಾಜ ಕಾಡಿಗೆ ಹೋಗುವುದಾಗಿ ಅಡ್ಡಗಟ್ಟಿದರೆಂದು ಕೈಯಲ್ಲಿರುವ ಖಡ್ಗವನ್ನು ಹೊಟ್ಟೆಗೆ ಚುಚ್ಚಿಕೊಂಡು ಪ್ರಜ್ಞಾ ಶೂನ್ಯನಾಗುತ್ತಾನೆ. ಅದನ್ನು ಅರಿತು ಭೀಮಾಸತಿಯು ಔಷದೋಪಚಾರದೊಂದಿಗೆ ಚಿನ್ನದ ಸೂಜಿಯಿಂದ ಹರಿದ ತಿತಾರಾಜನ ಹೊಟ್ಟೆಯನ್ನು ಹೊಲೆಯುತ್ತಾಳೆ. ಇದರಿಂದ ತಿತಾರಾಜನು ಗುಣಮುಖನಾಗುತ್ತಾನೆ. ಆದರೆ ಚಿಲುಮೆ ಸೇದುವ ದುಶ್ಚಟದಿಂದ ತಿತಾರಾಜನಿಗೆ ದಮ್ಮು ಕೆಮ್ಮಿನಿಂದ ಹೊಲಿದ ಆತನ ಹೊಟ್ಟೆ ಮತ್ತೆ ಹರಿದು ರಕ್ತಸ್ರಾವವಾಗಿ ಮರಣಹೊಂದುತ್ತಾನೆ. ನಡೆದ ಘಟನೆಯನ್ನು ಕುರಿತು ಹಳಿಯುತ್ತ ಗಂಡನ ಶವ ಸಂಸ್ಕಾರ ಮಾಡುವ ಹೊತ್ತಿಗೆ ತಾನು ಗಂಡನ ಚಿತೆಯಲ್ಲಿ ಹಾರಿ ಸಹಗಮನ ಹೊಂದುತ್ತಾಳೆ. ಈ ಕಥೆಯನ್ನು ಕುರಿತು ಇಂದಿಗ್‌ಢಾಡಿಯವರು ಮತ್ತು ಗಾಯಲರು ಹಾಡುತ್ತಾರೆ. ಅಲ್ಲದೇ ಸತಿ ಹೋದವರ ಮಾಟೆ ಸಾಂಪ್ರದಾಯಿಕ ಆಚರಣೆಗಳನ್ನು ಬಂಜಾರ ಸಮುದಾಯದ ಎಲ್ಲ ಗೋತ್ರದವರು ಮಾಡುತ್ತಾ ಬರುತ್ತಿದ್ದಾರೆ.[೪೩]

ತಗಚಗೆರೆ ಮಾಸ್ತಮ್ಮ

ತಗಚಗೆರೆ ಮಾಸ್ತಮ್ಮನ ವಿವರಗಳನ್ನು ಡಾ. ಕುರವ ಬಸವರಾಜ ಅವರ ಒಂದು ಮೌಖಿಕ ಚರಿತ್ರೆ ತಗಚಗೆರೆ ಮಾಸ್ತಮ್ಮ ಎಂಬ ಲೇಖನದಲ್ಲಿ ವಿವರಿಸಿದ್ದಾರೆ.[೪೪] ವಾಸ್ತವಾಗಿ ಇದು ಮಾಸ್ತಿಯಾಗಿರದೆ ಆತ್ಮಬಲಿದಾನವಾಗಿದೆ. ತಗಚಗೆರೆಯ ಬೆಂಗಳೂರು ಗ್ರಾಮಂತರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನಲ್ಲಿದೆ. ತಗಚಗೆರೆಯ ಹರಿಜನರು ಊರಿನಿಂದ ಅರ್ಧಮೈಲು ದೂರದ ತೊರೆಗೆ ಹೋಗಿ ನೀರು ತರುತ್ತಿದ್ದರಂತೆ. ಈ ತೊರೆಗೆ ಹೋಗಲು ಹೊಲದ ಮಧ್ಯದ ಕಾಲುದಾರಿ ಬಳಸುತ್ತಿದ್ದರು. ಒಮ್ಮೆ ನೀರು ತರಲು ಹೊಲೆಯರ ಏಳು ವರ್ಷದ ಕೆಂಪವ್ವ ಎಂಬ ಹುಡುಗಿ ತನ್ನ ಅಣ್ಣನ ಮಗಳಾದ ಚಿಕ್ಕ ಹುಡಗಿಯೊಂದಿಗೆ ಹೋಗುತ್ತಾಳೆ. ಸಣ್ಣ ಹುಡುಗಿ ಜೋಳದ ತೆನಿ ಕೇಳುತ್ತದೆ. ಗೌಡನ ಮಕ್ಕಳು ಅಟ್ಗೆ ಮೇಲೆ ಗುಡಿಸಲು ಹಾಕಿ ಕಾಯ್ತಾರೆ. ಬೇಡ ಎನ್ನತ್ತಾಳೆ ನೀರು ತುಂಬಿಕೊಂಡು ಹೋಗುವಾಗ ಆ ಮಗು ಮತ್ತೆ ಜೋಳದ ತೆನೆ ಕೇಳುತ್ತದೆ. ಆಗ ಒಂದು ಜೋಳದ ತೆನೆ ಮುರಿದು ಕೊಡುತ್ತಾಳೆ. ಇದನ್ನು ನೋಡಿದ ಗೌಡರ ಹುಡುಗ ಇವರನ್ನು ಹಿಡಿದುಕೊಂಡು ಊರಮುಂದೆ ಕಟ್ಟುತ್ತಾನೆ. ತಂದೆ ತಾಯಿಗಳು ಬಂದು ಕೇಳಿದಾಗ ನಡೆದದ್ದನ್ನು ಗೌಡರ ಹುಡುಗ ಹೇಳುತ್ತಾನೆ. ಆಗ ಕೆಂಪಮ್ಮ "ನೀವು ಯಾರ್ರು ಏನು ಕೇಳಾಕೆ ಹೋಗಬೇಡಿ ನಾನು ನನ್ನ ಸತ್ಯ ತೋರುಸ್ತೇನಿ" ಅಂದ್ಲು ಊರಿನವರೆಲ್ಲ ನಿಂತುಕೊಳ್ಳುತ್ತಾರೆ. ಆಗ ಆ ಹುಡಗಿ 'ಯೋಳ್‌ಗಾಡಿ ಸಿರಿಗಂಧದ ಸೌಥೆ ತಕ್ಕಂಬನ್ನಿ, ಹಸಿಕರಗ, ಹಸಿಹೊಂಬಾಳೆ ಹಸಿಮರೆ ಅರಿಷಿಣ, ಕುಂಕುಮ, ಬಳೆ, ಬಿಚ್ಚೋಲೆ, ಹೂವು ನಿಂಬೆ ಹಣ್ಣು ಕಳಸ ಕನ್ನಡಿ ತರ್ರಿ ಮಧ್ಯಾನ ಕೊಂಡಾಗ್ತೇನಿ' ಎಂದು ಹೇಳುತ್ತಾಳೆ. ಆ ಪ್ರಕಾರ ಕೊಂಡ ಸಿದ್ಧವಾಗುತ್ತದೆ. ಅದರಲ್ಲಿ ಬಿದ್ದು ಸಾಯುತ್ತಾಳೆ. ಅವಳನ್ನು ಮಾಸ್ತಮ್ಮಳೆಂದು ಪೂಜೆ ಮಾಡುತ್ತಾರೆ. ವಾಸ್ತವವಾಗಿ ಇದು ಮಾಸ್ತಿಯಲ್ಲ ಆದರೆ ಕೆಂಪಮ್ಮ ಮಾಸ್ತಿಯ ಹಾಗೆಯೇ ಚಿತಾಪ್ರವೇಶ ಮಾಡುತ್ತಾಳೆ. ಇದು ಅಪಮಾನ ಸಹಿಸದೆ ಚಿತಾಪ್ರವೇಶ ಮೂಲಕ ಆತ್ಮಬಲಿದಾನ ಮಾಡಿಕೊಂಡಿದ್ದಕ್ಕೆ ಉದಾಹರಣೆಯಾಗಿದೆ. ಈ ರೀತಿಯ ಆತ್ಮ ಬಲಿದಾನಗಳು ಮಾಸ್ತಿಯಂತೆ ಪ್ರಸಿದ್ಧಿ ಪಡೆದು ಜನರ ಧಾರ್ಮಿಕ ನಂಬಿಕೆಯಲ್ಲಿ ಪ್ರಧಾನ ಪಾತ್ರವಹಿಸುತ್ತಿವೆ.

ಪೆದ್ದಮ್ಮನ ಚಿತಾಪ್ರವೇಶ

ಕಾಟಮರಾಜನ ತಂದೆ ಪೆದ್ದಿರಾಜ, ತಾಯಿ ಪೆದ್ದಮ್ಮ ಯುದ್ಧವೊಂದರಲ್ಲಿ ಪೆದ್ದಿರಾಜ ಮರಣ ಹೊಂದುತ್ತಾನೆ. ಇವನೊಂದಿಗೆ ಇವನ ಪತ್ನಿ ಪೆದ್ದಮ್ಮ ಚಿತಾಪ್ರವೇಶ ಮಾಡಿದ ವಿವರಗಳು 'ಕಾಟಮರಾಜನ ಕಥೆ'ಯಲ್ಲಿ ಬರುತ್ತವೆ.[೪೫] ಯುದ್ಧ ಸಂಸ್ಕೃತಿಯ ಅಂದಿನ ಕಾಲದಲ್ಲಿ

ಗಂಡ ವೀರಮರಣ ಹೊಂದಿದರೆ ಅವನ ಹೆಂಡತಿ ಸತಿ ಹೋಗುತ್ತಿದ್ದಳು. ಆಕೆಗೆ ಇಚ್ಛೆ ಇಲ್ಲದಿದ್ದರೂ ಕಥೆ ಸಾಮಾಜಿಕ ಸಾಂಪ್ರದಾಯಿಕ ನಂಬಿಕೆ ಹಾಗೂ ದುರ್ಯೋಧರ ಪ್ರೇರಣೆಯಿಂದ ಪ್ರೇರಣೆಯಾಗಿ ಅವಳು ಸತ್ತಿ ಹೋಗುತ್ತಾರೆ. ಈ ತೆರೆನಾದ ಶೋಷಣೆಗಳೇ ಅನೇಕ ಮಹಿಳೆಯರನ್ನು ಬಲಿ ತೆಗೆದುಕೊಂಡಿವೆ.

ಯುದ್ಧದಲ್ಲಿ ಸತ್ತ ಪೆದ್ದಿರಾಜನ ಶವವನ್ನು ಪುತ್ರ ಕಾಟಮರಾಜನು ಕನಕೇರಿಹಳ್ಳಿಗೆ ತರುತ್ತಾನೆ. ನಂತರ ತಾಯಿ ಪೆದ್ದಮ್ಮನ ಹತ್ತಿರ ಬರುತ್ತಾನೆ. ಆಗ ಪೆದ್ದಮ್ಮನಿಗೆ ಕನಕ ವರ್ಣದ ಸೀರೆ ಉಡಿಸಿ, ಮಲ್ಲಿಗೆ ಹೂ ಮುಡಿಸಿ ಕಾಡಿಗೆಯನ್ನು ಹಚ್ಚಿ ಶ್ರೀಗಂಧವನ್ನು ಲೇಪಿಸುತ್ತಾರೆ. ಆಗ ಪೆದ್ದಮ್ಮ ಮಗನಾದ ಕಾಟಮರಾಜನಿಗೆ "ನಿಮ್ಮ ತಂದೆಯ ಜೊತೆ ನನ್ನನ್ನು ಕಳಿಸಿಬಿಡು" ಎಂದು ಕೇಳಿಕೊಳ್ಳುತ್ತಾಳೆ. ಪೆದ್ದಿರಾಜನ ಪಲ್ಲಕ್ಕಿಯನ್ನು ಹಿಂಬಾಲಿಸುತ್ತ ಪೆದ್ದಮ್ಮ ಅಗ್ನಿಕುಂಡದ ಸ್ಥಳಕ್ಕೆ ಬರುತ್ತಾಳೆ. ಅಗ್ನಿಕುಂಡಕ್ಕೆಂದು ಚಂದನ ಗುಗ್ಗಳ, ಮರಗಳನ್ನು ತಂದುಹಾಕಲಾಗುತ್ತದೆ. ಸಂಪಿಗೆ ಎಣ್ಣೆಯ ಬಿಂದಿಗೆಗಳನ್ನು ಸಾವಿನ ಕಟ್ಟೆ (ಅಗ್ನಿಕೊಂಡದ ಸುತ್ತ ಕಟ್ಟಿದ ಕಟ್ಟೆ)ಯ ಮೇಲಿಟ್ಟರು. ಕೊಂಡದ ಸುತ್ತ ಸೊಗದೆ ಬೇರಿನ ತಡಿಕೆಗಳನ್ನು ನಿಲ್ಲಿಸಿದರು. ಹೀಗೆ ಅಗ್ನಿಕೊಂಡವನ್ನು ಸಿದ್ಧಪಡಿಸಲಾಗುತ್ತದೆ.

ಕಾಟಮರಾಜನು ತಾಯಿಯಲ್ಲಿಗೆ ಬಂದು ಎಲ್ಲ ಸಿದ್ಧವಾಗಿದೆಯೆಂದು ಹೇಳುತ್ತಾನೆ. ಆಗ ಪೆದ್ದಮ್ಮ ತುಂಬ ಸಂತೋಷ ಎಂದಾಗ ಸ್ನೇಹಿತೆಯರು ಸಂಪಿಗೆ ಎಣ್ಣೆ ಹಚ್ಚಿ, ಸ್ನಾನಮಾಡಿಸಿ, ಕಸ್ತೂರಿಯನ್ನು ಮೈಮೇಲೆ ಚೆಲ್ಲುತ್ತಾರೆ. ಜಾಜಿ ಹೂವಿನ ಮಾಲೆ ಯಿಂದ ಅಲಂಕಾರ ಮಾಡುತ್ತಾರೆ. ರತ್ನಹಾರ, ಮುತ್ತಿನಹಾರಗಳನ್ನು ಹಾಕುತ್ತಾರೆ. ಕಣ್ಣಿಗೆ ಕಾಡಿಗೆ ಹಚ್ಚಿ, ರೇಷ್ಮೆ ಸೀರೆ ಉಡಿಸುತ್ತಾರೆ. 'ಮಹಾಲಕ್ಷ್ಮೀ' ಎಂಬ ಕುದರೆಯ ಮೇಲೆ ಪೆದ್ದಮ್ಮನನ್ನು ಕೂಡಿಸಿ ಕಲ್ಯಾಣ, ದೇವಗಿರಿ, ಕನಕಪುರದಂತಹ ಮೂವತ್ತೇಳು ಬೀದಿಗಳಲ್ಲಿ ಮೆರವಣಿಗೆ ಮಾಡಿಸುತ್ತಾರೆ. ಈ ವಿಧಿ ವಿಧಾನಗಳನ್ನು ಮಹಾಸತಿಯಾಗುವವರು ಅಂದು ಆಚರಿಸುತ್ತಿದ್ದರು ಎಂದು ತಿಳಿದುಬರುತ್ತದೆ. ವಾಸ್ತವವಾಗಿ ಪೆದ್ದಮ್ಮನಿಗೆ ಅಂತರಾತ್ಮದಲ್ಲಿ ಸತಿ ಹೋಗಲು ಇಚ್ಛೆ ಇರುವುದಿಲ್ಲ ಮಕ್ಕಳನ್ನು ಬಿಟ್ಟು ಹೋಗಬೇಕಲ್ಲ ಎಂದು ದುಃಖಿಸುತ್ತಾಳೆ. ಸಾಮಾಜಿಕ ಪರಿಸ್ಥಿತಿಯ ಒತ್ತಡಕ್ಕೆ ಒಳಗಾಗಿ ಮಗನಿಗೆ ಸಮಾಧಾನ ಹೇಳಿ, ತನ್ನ ಗೆಳತಿ ಯನ್ನು ಕರೆದು ನಿಮಗೆ ಸಕಲ ಸಂಪತ್ತುಗಳನ್ನು ಕೊಡುವೆ, ನನ್ನ ಮಕ್ಕಳನ್ನು ನೀವು ನೋಡಿ ಕೊಳ್ಳಬೇಕೆಂದು ಕೇಳಿಕೊಳ್ಳುತ್ತಾಳೆ. ಅವರೆಲ್ಲರೂ ಈಕೆಗೆ ಭರವಸೆ ಕೊಡುತ್ತಾರೆ. ನಂತರ ಪೆದ್ದಮ್ಮ ಚಿತಾಪ್ರವೇಶಕ್ಕೆ ಸಿದ್ಧವಾಗುತ್ತಾಳೆ. ಮೊದಲು ಅಗ್ನಿಕುಂಡಕ್ಕೆ ಪ್ರದಕ್ಷಿಣೆ ಮಾಡಿದಳು. ನಂತರ ಸಾವಿನಕಟ್ಟೆ ಹತ್ತಿ ಪ್ರಜೆಗಳನ್ನೆಲ್ಲ ನೋಡಿ ಅವರಿಗೆ ಕೈಯಿಂದ

ನಮಸ್ಕರಿಸಿದಳು. ನಿಂಬೆಹಣ್ಣುಗಳನ್ನು ಅಗ್ನಿಗೆ ಅರ್ಪಿಸಿ ಅನಂತರ ಅಗ್ನಿಕೊಂಡದಲ್ಲಿ ಎಣ್ಣೆಯ ಮಡಕೆಗಳನ್ನು ಹಾಕಿದಳು. ಕೂಡಲೆ ಬೆಂಕಿ ಭುಗ್ಗೆಂದು ಉರಿಯಿತು. ಆಗ ಅಗ್ನಿಯಲ್ಲಿ ಧುಮುಕಿ ಸಹಗಮನಗೊಳ್ಳುತ್ತಾಳೆ.

ಅಂಜಾಬಾಯಿಯ ಸಹಗಮನ

ಸತಿಪದ್ಧತಿಯು ಸಮಾಜದಲ್ಲಿ ಪವಿತ್ರತೆ ಹಾಗೂ ಮಿತ್ಯಾಕೀರ್ತಿಯ ನೆಪದಲ್ಲಿ ನಡೆಯುತ್ತಿತ್ತು.[೪೬] ಉದಯಪುರದ ಮಿತ್ಯಾಕೀರ್ತಿಯಲ್ಲಿ ಅಂಜಾಬಾಯಿಯು ಸಹಗಮನಗೊಂಡಿರುವುದು ಇಲ್ಲಿ ಉಲ್ಲೇಖವಾಗಿದೆ. ಉದಯಪುರದ ಹತ್ತಿರವಿರುವ ಗೋವರ್ಧನ ವಿಲಾಸ ಅರಮನೆಯ ವಾತಾವರಣದಲ್ಲಿ ಶೋಕ ಮಡುಗಟ್ಟಿತ್ತು!. ಅರಮನೆಯ ಕಾವಲು ಭಟರಿಂದ ಹಿಡಿದು ರಾಣಿವಾಸದವರು, ದಾಸ-ದಾಸಿಯರು ಶೋಕತಪ್ತರಾಗಿ ರೋಧಿಸುತ್ತಿದ್ದರು. ಇದಕ್ಕೆ ಕಾರಣ ಮೊಘಲರ ವಿರುದ್ಧ ನಡೆಯುತ್ತಿದ್ದ ಯುದ್ಧದಲ್ಲಿ ರಾಣಾ ಅಮರಸಿಂಗ್‌ರು ಸೋತು ವೀರಮರಣ ಹೊಂದಿದ್ದರು.

ಮೇವಾಡ ರಾಜ್ಯಕ್ಕೆ ಭಾರಿ ಹಿನ್ನಡೆಯಾಗಿತ್ತು. ಇದೇ ಸಮಯದಲ್ಲಿ ರಾಣಾಅಮರಸಿಂಗರ ಶವವನ್ನು ಅರಮನೆಯ ಸಭಾಮಂಟಪದಲ್ಲಿ ಶೃಂಗರಿಸಿ ಸಾರ್ವಜನಿಕ ದರ್ಶನಕ್ಕೆ ಇಡಲಾಯಿತು. ಸಾಮಂತ ರಾಜರು ಮತ್ತು ಮಂತ್ರಿ-ಮಹೋದಯರು ಗಂಭೀರ ಸಮಸ್ಯೆಯೊಂದನ್ನು ಎದುರಿಸಬೇಕಾಯಿತು. ಅದೇನೆಂದರೆ ಮೇವಾಡದ ರಜಪೂತ ಸಮುದಾಯದಲ್ಲಿರುವ ಸತಿಸಹಗಮನ ಪದ್ಧತಿಗೆ ಯಾವ ರಾಣಿಯೂ ಸತಿ ಹೋಗಲು ಒಪ್ಪದೆ ಇರುವುದು. ಇದರಿಂದ ಮಂತ್ರಿ-ಮಹೋದಯರಿಗೆ ದಿಕ್ಕು ತೋಚದಂತ್ತಾಗಿತ್ತು. ಆಗ ಇದ್ದಕ್ಕಿದಂತೆ ಪ್ರಧಾನ ಅಮಾತ್ಯ ಮೇಘರಾಜ ಕೊಠಾರಿ ಅವರಿಗೆ ರಾಣಾಅಮರಸಿಂಗರ ಕಿರಿಯ ರಾಣಿ ಅಂಜಾಬಾಯಿಯವರ ನೆನಪಾಯಿತು. ಅವರು ಮಂತ್ರಿ ಮೆಹತಾ ಗೋಪಾಲದಾಸರ ಉಪಪತ್ನಿಯಾದ ಚಂಪಾಬಾಯಿಯವರ ಮಗಳಾಗಿದ್ದು, ಅತ್ಯಂತ ಸುಂದರಿಯೂ ಮತ್ತು ಸಂಗೀತ ನೃತ್ಯದಲ್ಲಿ ಸಾಕಷ್ಟು ಪರಿಣಿತಿಯನ್ನು ಪಡೆದಿದ್ದಳು. ಅಲ್ಲದೇ ಅರಮನೆಯಲ್ಲಿ ರಾಣಿಯ ಸ್ಥಾನಮಾನ ಗೌರವಗಳನ್ನು ಹೊಂದಿದ್ದಳು. ಇವಳನ್ನು ಸಹಗಮನ ಕಾರ್ಯಕ್ಕೆ ಒಪ್ಪಿಸಲು ತಾಯಿ ಚಂಪಾಬಾಯಿ ಅತ್ಯಂತ ಉದ್ವಿಗ್ನ ಹಾಗೂ ಖಿನ್ನಮನಸ್ಕರಾಗಿ, 'ಮಗಳೆ ಅಂಜಾ! ಈಗ ನಮ್ಮ ಮುಂದೆ ದೊಡ್ಡ ಧರ್ಮ ಸಂಕಟವೊಂದು ಬಂದು ನಿಂತಿದೆ. ನಿನ್ನ ಪ್ರೀತಿಯ ರಾಣಾರ ದಹನ ಸಂಸ್ಕಾರ ಇನ್ನು ನಾಲ್ಕಾರು ಗಂಟೆಗಳೊಳಗೆ ನಡೆಯಬೇಕಂತೆ. ಆದರೆ ಯಾವ ರಾಣಿಯೂ ಸತಿ ಸಹಗಮನಕ್ಕೆ ಒಪ್ಪಿಲ್ಲವಂತೆ. ನಿನ್ನನ್ನು ರಾಣಾರು ತಮ್ಮ ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತಿದ್ದರು. ನೀನೂ ಸಹ ಅಷ್ಟೇ! ಈಗ ನಿನ್ನ ತಂದೆ

ಮತ್ತು ಪ್ರಧಾನ ಅಮಾತ್ಯ ಮೇಘರಾಜರು ಇಬ್ಬರೂ ನಿನ್ನನ್ನು ಸಹಗಮನಕ್ಕೆ ಒಪ್ಪಿಸಲು ಬರುತ್ತಿದ್ದಾರೆ. ದೊಡ್ಡ ಮನಸ್ಸು ಮಾಡಿ ನೀನು ಒಪ್ಪಿಕೊಂಡರೆ, ಎಲ್ಲರಿಗೂ ಸಮಾಧಾನವಾಗುತ್ತದೆ. ರಾಣಾ ವಂಶದ ಕೀರ್ತಿಯೂ ಮುಕ್ಕಾಗದೆ ಉಳಿದುಕೊಳ್ಳುತ್ತದೆ ಎಂದಳು. ಆಗ ಅಂಜಾಬಾಯಿ ಸೂಕ್ಷ್ಮ ಪರಿಸ್ಥಿತಿ ಕಂಡು ದುಃಖಿಸುತ್ತಾ ಸಾಕಷ್ಟು ಸುಖ ಸೌಲಭ್ಯಗಳನ್ನು ಅನುಭವಿಸಿದ ಹಿರಿಯ ರಾಣಿಯರ ಮೇಲೆ ಏಕೆ ಒತ್ತಡ ಹಾಕಬಾರದು? ನನಗೂ ಸತಿಯಾಗಲು ಇಷ್ಟವಿಲ್ಲ ಎಂದು ಬಿಕ್ಕಿ ಬಿಕ್ಕಿ ಅಳತೊಡಗಿದಳು. ಇದನ್ನರಿತ ಅಂಜಾಬಾಯಿ ಸೋದರನ ಮಗ, ಮೇಘರಾಜ ಕೊಠಾರಿ ಹಾಗೂ ತಂದೆ ಗೋಪಾಲದಾಸ ಮೂವರು ಅತ್ಯಂತ ಧೀನವದನರಾಗಿ ಅಂಜಾಬಾಯಿಯನ್ನು ಕುರಿತು ಅಂಜಾಬಾಯಿಯವರೆ! ನಿಮ್ಮ ಸ್ವಾಮಿ ಭಕ್ತಿ ಮತ್ತು ಪತಿಭಕ್ತಿ ಲೋಕ ವಿಖ್ಯಾತವಾಗುತ್ತದೆ. ಮೇಲಾಗಿ ನಿಮ್ಮ ತ್ಯಾಗ ಬಲಿದಾನಗಳಿಂದ ರಾಣಾರ ಸೂರ್ಯವಂಶದ ಕೀರ್ತಿ ಸೂರ್ಯ ಚಂದ್ರ ಇರುವವರೆಗೂ ಉಳಿಯುತ್ತದೆ. ಎಂದು ಹೇಳಿದಾಗ, ಅಂಜಾಬಾಯಿಯು ತನ್ನ ತ್ಯಾಗ ಬಲಿದಾನದಿಂದ ರಾಣಾರ ಆತ್ಮಕ್ಕೆ ಶಾಂತಿ ಸಿಗುವುದಾದರೆ ಮತ್ತು ಸಂಪ್ರದಾಯ ಉಳಿದು ವಂಶದ ಕೀರ್ತಿ ಶತ ಶತಮಾನಗಳವರೆಗೆ ಉಳಿಯುವುದಾದರೆ, ತಾನು ಸತಿ ಹೋಗುತ್ತೇನೆಂದು ಹೇಳಿ ಅವರೆಲ್ಲರಿಗೂ ಕೈಮುಗಿದಳು. ತಡಮಾಡದೆ ಅವರೆಲ್ಲರೂ ಹಿರಿಯ ಮಹಾರಾಣಿಯವರಿಗೆ ಹಾಗೂ ಅನುಭವಸ್ಥ ದಾಸಿಯರ ಬಳಿಗೆ ತೆರಳಿ ಅಂಜಾಬಾಯಿಯನ್ನು ಶೀಘ್ರವಾಗಿ ನವ ವಧುವಿನಂತೆ ಶೃಂಗರಿಸಲು ಸೂಚಿಸಿದರು.

ಅಂಜಾಬಾಯಿಗೆ ಸ್ನಾನ ಮಾಡಿಸಿ ಆಕೆಯ ದೇಹಕ್ಕೆ ಪನ್ನೀರು ಸಿಂಪಡಿಸಿ, ಅರಿಷಿಣ, ಕುಂಕುಮ, ಚಂದನಗಳ ಲೇಪವನ್ನು ದಾಸಿಯರು ಹಾಕಿದರು. ಬೆಲೆ ಬಾಳುವ ಹಸಿರು ರೇಷ್ಮೆ ಸೀರೆಯನ್ನು ಉಡಿಸಿದರು. ತದನಂತರ ಬಂಗಾರ, ವಜ್ರ-ವೈಢೂರ್ಯ, ಮುತ್ತು ರತ್ನಗಳ ಆಭರಣಗಳನ್ನು ಕೊರಳು, ನಾಸಿಕ, ತೋಳು, ಸೊಂಟ, ಕಾಲುಗಳಿಗೆ ಹಾಕಿದರು. ಬಗೆ ಬಗೆಯ ಹೂವುಗಳಿಂದ ಕಟ್ಟಿದ ಹೂಮಾಲೆಗಳನ್ನು ಮುಡಿಗೆ, ಕೊರಳಿಗೆ ಅಲಂಕರಿಸಿದರು. ಆಗ ನವ ವಧುವಿನಂತೆ ಕಂಗೊಳಿಸುತ್ತಿರುವ ಅಂಜಾಬಾಯಿಯನ್ನು ಕಂಡ ಅರಮನೆಯ ಪುರಾತನವಾದಿಗಳು ಮತ್ತು ಸಂಪ್ರದಾಯವಾದಿಗಳು ಯಾವುದೇ ಅಹಿತಕರ ಅವಘಡಗಳು ಆಗಬಾರದೆಂದೂ ರಾಜ ವೈದ್ಯರನ್ನು ಕರೆಯಿಸಿ ಅವಳ ದೈಹಿಕ ಮತ್ತು ಮಾನಸಿಕ ಸಾಮರ್ಥ್ಯಗಳನ್ನು ನಿಷ್ಕ್ರೀಯಗೊಳಿಸುವಂತೆ ಸೂಚಿಸಿದರು. ಅದರಂತೆ ರಾಜ ವೈದ್ಯರು ಅನೇಕ ಬಗೆಯ ಗಿಡಮೂಲಿಕೆ ಗಳು ಮತ್ತು ಆಫೀಮನ್ನು ಚೆನ್ನಾಗಿ ಅರೆದು ಮಾದಕ ಪೇಯವನ್ನು ತಯಾರಿಸಿ ಆಪ್ತ ದಾಸಿಯರ ಕೈಯಿಂದ ಕುಡಿಸಿದರು. ಅರಮನೆಯ ಇನ್ನೊಂದು ಭಾಗದಲ್ಲಿ ರಾಣಾ ಅಮರಸಿಂಗರ ಶವಕ್ಕೆ ಸ್ನಾನಮಾಡಿಸಿ ಮೈಗೆಲ್ಲಾ ಸುಗಂಧ ದ್ರವ್ಯಗಳನ್ನು ಹಚ್ಚಿದರು. ರಾಜಪೋಷಾಕುಗಳನ್ನು ಹಾಕಿ ಅವರು ಧರಿಸುತ್ತಿದ್ದ ಆಭರಣಗಳನ್ನು ತೊಡಿಸಿದರು. ಅವರ ಶವದ ಪಕ್ಕ ರತ್ನ ಖಚಿತವಾದ ಹಿಡಿಯನ್ನುಳ್ಳ ಪಟ್ಟದ

ಖಡ್ಗವನ್ನು ಇಡಲಾಯಿತು. ಅಲಂಕೃತ ಶವವನ್ನು ಅಲಂಕರಿಸಿದ ರಾಜರಥದಲ್ಲಿ ಇಡಲಾಯಿತು. ಸಂಪ್ರದಾಯದ ಪ್ರಕಾರ ಪೂಜಾದಿಗಳು ಮುಗಿದ ನಂತರ ರಾಜ ಬೀದಿಯಲ್ಲಿ ಶವಯಾತ್ರೆ ಆರಂಭವಾಯಿತು. ರಾಣಾರ ಶವವಿದ್ದ ರಥದ ಪಕ್ಕದಲ್ಲೇ ಅಲಂಕೃತ ಪಟ್ಟದ ಕುದರೆಯ ಮೇಲೆ ಸರ್ವಾಭರಣ ಭೂಷಿತೆಯಾದ ಅಂಜಾಬಾಯಿಯನ್ನು ಕೂರಿಸಲಾಗಿತ್ತು. ಆ ಕುದರೆಯ ಹಿಂದೆ ಮುಂದೆ ಮತ್ತು ಅಕ್ಕ ಪಕ್ಕದಲ್ಲಿ ಸುಸಜ್ಜಿತ ಸೈನಿಕರು ನಡೆದು ಬರುತ್ತಿದ್ದರು. ಅಂಜಾಬಾಯಿಯ ಮುಖದ ಮೇಲೆ ಉನ್ಮತ್ತ ಕಳೆಯೊಂದು ನರ್ತಿಸುತ್ತಿತ್ತು. ರಾಜಬೀದಿಯ ಅಕ್ಕಪಕ್ಕದಲ್ಲಿ ನಿಂತಿದ್ದ ಪ್ರಜೆಗಳು ಕಣ್ಣೀರು ಸುರಿಸುತ್ತಿದ್ದರು. ಶವಯಾತ್ರೆಯ ಹಿಂದೆ ಮಂತ್ರಿಮಂಡಲದ ಸದಸ್ಯರು, ಬಂಧು-ಬಾಂಧವರು, ಸೈನ್ಯದ ಮುಖಂಡರು, ಸಾಮಂತ ರಾಜರುಗಳು ಮತ್ತು ರಾಜಧಾನಿಯ ಪ್ರಮುಖರು ದುಃಖತಪ್ತರಾಗಿ ಮೌನವಾಗಿ ಹೆಜ್ಜೆ ಹಾಕುತ್ತಿದ್ದರು.

ಹತ್ತಾರು ಎಕ್ಕರೆಗಳಷ್ಟು ವಿಸ್ತೀರ್ಣವಾದ ರಾಜ ಕುಟುಂಬದವರ ಸ್ಮಶಾನ ಭೂಮಿಗೆ ಬಂದರು. ಅಲ್ಲಿ ಶ್ರೀಗಂಧ, ಆಲ ಮತ್ತು ಬಿಲ್ವ ವೃಕ್ಷಗಳ ಕಟ್ಟಿಗೆಗಳ ಸೀಳಿದ ತುಂಡುಗಳನ್ನು ಬಳಸಿಕೊಂಡು ವಿಶಾಲವಾದ ಚಿತೆಯನ್ನು ಸಿದ್ಧಪಡಿಸಲಾಗಿತ್ತು. ರಾಣಾ ಅಮರಸಿಂಗರ ಶವವನ್ನು ಚಿತೆಯ ಮೇಲೆ ಮಲಗಿಸಲಾಯಿತು. ಅವರ ಮೈಮೇಲಿದ್ದ ಆಭರಣಗಳನ್ನು ಮತ್ತು ಪಟ್ಟದ ಖಡ್ಗವನ್ನು ತೆಗೆದು ರಾಜಭಂಡಾರಿಯ ವಶಕ್ಕೆ ಒಪ್ಪಿಸಲಾಯಿತು. ಅನಂತರ ಅಂಜಾಬಾಯಿಯನ್ನು ಚಿತೆಯ ಮೇಲೆ ಕೂರಿಸಲಾಯಿತು. ಅಂಜಾಬಾಯಿಯವರಿಗೆ ತೊಡಿಸಿದ್ದ ಆಭರಣಗಳನ್ನು ತೆಗೆದು ರಾಜ ಭಂಡಾರಿಯ ವಶಕ್ಕೆ ಒಪ್ಪಿಸಲಾಯಿತು. ರಾಣಾರ ಶವದ ಶಿರೋಭಾಗವನ್ನು ಅಂಜಾಬಾಯಿಯ ಮಡಿಲಲ್ಲಿ ಇಡಲಾಯಿತು. ಆ ಮೇಲೆ ಮಣಗಟ್ಟಲೆ ಪಚ್ಚ ಕರ್ಪೂರ ಮತ್ತು ಸುಗಂಧ ದ್ರವ್ಯಗಳನ್ನು ಅವರ ಮೇಲೆ ಸುರಿಯಲಾಯಿತು. ಅಂಜಾಬಾಯಿ ಆಗ ತಲೆಕೂದಲನ್ನು ಕೆದರಿಕೊಂಡು ದೆವ್ವ ಮೆಟ್ಟಿಕೊಂಡವರಂತೆ ವರ್ತುಲಾಕಾರವಾಗಿ ತಲೆಯನ್ನು ತೂಗುತ್ತಿದ್ದಳು. ಆಕೆಯ ಕಣ್ಣುಗಳು ಕೆಂಡ ಉಂಡೆಗಳಂತಾಗಿದ್ದವು. ಆಕೆಗೆ ಕುಡಿಸಲ್ಪಟ್ಟಿದ್ದ ಮಾದಕಪೇಯ ತನ್ನ ಪ್ರಭಾವವನ್ನು ಬೀರಿತ್ತು!. ರಾಜ ಪುರೋಹಿತರು ಶಾಸ್ತ್ರೋಕ್ತವಾಗಿ ಅಗ್ನಿಸಂಸ್ಕಾರದ ವಿಧಿ-ವಿಧಾನಗಳನ್ನು ಪೂರೈಸಿದರು. ಆ ಮೇಲೆ ರಾಜ್ಯದ ಉತ್ತರಾಧಿಕಾರಿಯಿಂದ ಚಿತೆಗೆ ಅಗ್ನಿಸ್ಪರ್ಶ ಮಾಡಿಸಲಾಯಿತು. ಚಿತೆ ಉರಿಯ ತೊಡಗಿತು. ಅದರ ಕೆನ್ನಾಲಿಗೆ ಆಳೆತ್ತರಕ್ಕೆ ಚಾಚಿಕೊಂಡಿತು. ಚಿತೆಯ ಸುತ್ತ ನೆರೆದಿದ್ದ ಜನರೆಲ್ಲಾ 'ರಾಣಾ ಅಮರಸಿಂಗರು ಚಿರಾಯುವಾಗಲಿ', 'ರಾಣಿ ಅಂಜಾಬಾಯಿಯ ಕೀರ್ತಿ ದಶದಿಕ್ಕುಗಳಿಗೂ ಹರಡಲಿ!' ಎಂದು ಉಚ್ಚಸ್ವರದಲ್ಲಿ ಘೋಷಣೆ ಮಾಡತೊಡಗಿದರು. ಬೆಂಕಿಯ ಜ್ವಾಲೆಯಲ್ಲಿ ಸಜೀವವಾಗಿ ಬೆಂದು ಹೋಗುತ್ತಿದ್ದ ಅಂಜಾಬಾಯಿಯ ಚಿತ್ಕಾರಗಳು ನೆರೆದ ಪ್ರಜೆಗಳಿಗೆ ಕೇಳಿಸದಿರಲೆಂದು ಡೋಲಿನವರು, ರಣ ಹಲಗೆಯವರು ಮತ್ತು ನಗಾರಿಯವರು ಜೋರಾಗಿ ಬಾರಿಸ ತೊಡಗಿದರು. ಹದಿನೈದು ಇಪ್ಪತ್ತು ನಿಮಿಷಗಳೊಳಗೆ

ಸತಿಸಹಗಮನ ಮುಗಿದು ಹೋಗಿತ್ತು!. ಸಂಪ್ರದಾಯವಾದಿಗಳ ಅಜ್ಞಾನ, ಮೂಢನಂಬಿಕೆ ಮತ್ತು ಮಿಥ್ಯಾಕೀರ್ತಿಯ ದಸೆಯಿಂದ ಮುಗ್ಧಜೀವಿಯೊಂದರ ಅಮೂಲ್ಯ ಜೀವ ಬಲಿಯಾಗಿ ಹೋಗಿತ್ತು.

ಹೀಗೆ ಜನಪದ ಗೀತೆಗಳ ಕಥೆಗಳು ಸತಿ ಘಟನೆಗಳ ಕುರಿತು ಅಮೂಲ್ಯ ವಿಷಯ ವಸ್ತುವನ್ನು ತನ್ನಲ್ಲಿ ಹುದುಗಿಸಿಕೊಂಡಿದೆ. ಜನಪದರು ತಮ್ಮ ಕಣ್ಣೆದುರು ಜರುಗುತ್ತಿದ್ದ ಸತಿ ಘಟನೆಗಳ ಕುರಿತು ಅತ್ಯಂತ ಕಳಕಳಿಯಿಂದ ಕಥೆಕಟ್ಟಿ ಹಾಡು ಹೇಳಿ ಅದರ ವಿವರಗಳನ್ನು ರಕ್ಷಿಸಿಟ್ಟು ಹೋಗಿದ್ದಾರೆ. ಜನಪದ ಗೀತೆಗಳಲ್ಲಿ ಕಥೆಗಳಲ್ಲಿ ವರದಿಗಳಲ್ಲಿ ಸತಿ ಹೋದ ಅಮರ ಸ್ತ್ರೀಯರ ಚರಿತ್ರೆ ಹಲವು ಆಕರಗಳಲ್ಲಿ ಹಂಚಿ ಹೋಗಿದೆ. ಮಾನವ ಕುಲಕ್ಕೆ ಅವಹೇಳನಕರವೆಂದು ಆಧುನಿಕರಾದ ನಮಗೆ ತೋರುವ ಅದು ಮರೆಯಾಗಿ ಹೋದುದರ ಕುರಿತು ನೆಮ್ಮದಿಯಿದೆ. "ಯಾವುದೋ ಆದರ್ಶಕ್ಕಾಗಿ ತಮ್ಮನ್ನು ತಾವು ಬಲಿಕೊಟ್ಟು ಕೊಂಡವರ ಆದರ್ಶದ ಮುಂದೆ ಸಾವೂ ಕೂಡಾ ಕ್ಷುದ್ರವಾಗಿ ತೋರಿತು. ದೇಹಾಭಿಮಾನ, ಬಾಳಬೇಕೆಂಬ ಬಯಕೆ, ಮನುಷ್ಯನಿಗೆ ತೀರಾ ಸಹಜ. ಒಂದು ಆದರ್ಶ ಇವುಗಳನ್ನು ಹಿಂದಕ್ಕೆ ಹಾಕಬೇಕಾದರೆ ಆದರ್ಶಕ್ಕಿಂತ ಅದನ್ನು ವಾಸ್ತವವಾಗಿ ನಂಬಿ ನಡೆದ ವ್ಯಕ್ತಿಗಳು ಪೂಜ್ಯನೀಯರಾಗುತ್ತಾರೆ." ಅವರು ನಿಜವಾಗಿಯೂ ತ್ಯಾಗದ ಸಂಕೇತಗಳು ಎಂಬುದು ಶ್ಲಾಘನೀಯ.

ಅಡಿಟಿಪ್ಪಣಿಗಳು

೧. ಕೃಷ್ಣಮೂರ್ತಿ ಹನೂರ(ಸಂ), ಕತ್ತಾಲ ದಾರಿ ದೂರ, ಮಹಾಸತಿ ವೀರತಿಮ್ಮವ್ವ ಕಥನಗೀತೆ, ಪು.೦೭

೨. ವೈಜಯಂತಿಮಾಲ(ಸಂ), ವಡ್ಡಗೆರೆ ನಾಗಮ್ಮ, ಪು.೧

೩. ಜೀ.ಶಂ.ಪರಮಶಿವಯ್ಯ(ಸಂ), ಜನಪದ ಖಂಡಕಾವ್ಯಗಳು, ಈರೋಬಿ, ಪು.೧೮

೪. ಕೃಷ್ಣಮೂರ್ತಿ ಹನೂರ(ಸಂ), ಕತ್ತಾಲ ದಾರಿ ದೂರ, ಮಹಾಸತಿ ಕಾಟವ್ವ, ಪು.೧೧೩

೫. ಜೀ.ಶಂ.ಪರಮಶಿವಯ್ಯ, ಮಾಣಿಕ್ಯಶೆಟ್ಟಿ(ಸಂ), ಆಯ್ದ ಜನಪದ ಕಥೆಗಳು, ಪು.೧೦೭, ಕೊಂಡದ ಚೆನ್ನಮ್ಮ, ಪು.೧೩೮, ಕನ್ನಡ ಐತಿಹ್ಯಗಳು ಜಿ.ವಿ.ಡಿ. ಪು.೪೦

೬. ಜೀ.ಶಂ.ಪರಮಶಿವಯ್ಯ, ಜಾನಪದ ಖಂಡ ಕಾವ್ಯಗಳು, ೧೯೬೮ ಪು.೧೧-೨೩

೭. ಜೀ.ಶಂ.ಪರಮಶಿವಯ್ಯ, 'ಚಿಕ್ಕೋಳು ಹಿರಿದಿಮ್ಮವ್ವ' ಜಾನಪದ ಖಂಡ ಕಾವ್ಯಗಳು, ೧೯೬೮ ಪು.೬೭-೮೭

೮. ಹನೂರು ಕೃಷ್ಣಮೂರ್ತಿ(ಸಂ), ಕತ್ತಾಲ ದಾರಿ ದೂರ, ಮಹಾಸತಿ ತಾಡಿನಾಗಮ್ಮ, ೨೦೦೨, ಪು.೩೬-೭೯

೯. ಅದೇ, ಪು.೪೬

೧೦. ಅದೇ, ಪು.೪೮

೧೧. ಅದೇ, ಪು.೫೪

೧೨. ಅದೇ, ಪು.೫೯

೧೩. ಅದೇ, ಪು.೬೭

೧೪. ಅದೇ, ಪು.೬೮

೧೫. ಅದೇ, ಪು.೬೯

೧೬. ಹನೂರು ಕೃಷ್ಣಮೂರ್ತಿ, ಕೊಂಡದ ಕಾಟವ್ವ, ಸಾಧನೆ-೫, (೩)೧೯೭೬, ಪು.೩೪-೫೬

೧೭. ಹನೂರು ಕೃಷ್ಣಮೂರ್ತಿ(ಸಂ), ಕತ್ತಾಲ ದಾರಿ ದೂರ, ಮಹಾಸತಿ ಕಾಟವ್ವ ಪು.೧೧೩; ಬಿ.ರಂಗಸ್ವಾಮಿ, ಕೆಂಪಮ್ಮ, ಹುಟ್ಟಿದಹಳ್ಳಿ ಅರ್ಚಕ, ಪು.೯೩

೧೮. ಹನೂರು ಕೃಷ್ಣಮೂರ್ತಿಕೊಂಡದ ಕಾಟವ್ವ, ಕತ್ತಾಲದಾರಿ ದೂರ, ೧೯೭೬, ಪು.೮೬

೧೯. ಹನೂರು ಕೃಷ್ಣಮೂರ್ತಿ, ಕತ್ತಾಲದಾರಿ ದೂರ, ಮಹಾಸತಿ ಕಾಟವ್ವ, ಪು.೮೪

೨೦. ಕಾಳೇಗೌಡ ನಾಗವಾರ(ಸಂ), ಬಯಲು ಸೀಮೆ ಲಾವಣಿಗಳು, ಉದೃತ; ಬಸವರಾಜ ಕಲ್ಗುಡಿ, ಮಹಾಸತಿ ಆಚರಣೆ: ಒಂದು ಅಧ್ಯಯನ, ಪು.೩೬೪-೩೬೬

೨೧. ಹನೂರು ಕೃಷ್ಣಮೂರ್ತಿ, ಕತ್ತಲದಾರಿ ದೂರ, ಕೊಂಡದ ಕಾಟವ್ವ, ಪು.೮೮

೨೨. ಬಸವರಾಜ ಕಲ್ಗುಡಿ, ಮಹಾಸತಿ ಆಚರಣೆ ಒಂದು ಅಧ್ಯಯನ, ಪು.೮೭

೨೩. ಕ.ರಾ.ಕೃ(ಸಂ), ಜಾನಪದ ಕಥನ ಗೀತೆಗಳು, ೧೯೬೨, ಪು.೨೯೫-೩೦೩

೨೪. ಜೀ.ಶಂ.ಪರಮಶಿವಯ್ಯ(ಸಂ), ಜನಪದ ಖಂಡಕಾವ್ಯಗಳು, ಪು.೨೬೧

೨೫. ಸುಂಕಾಪೂರ ಎಂ.ಎಸ್.(ಸಂ), ಜೀವನ ಜೋಕಾಲಿ ಭಾಗ-೮, ೧೯೭೬, ಪು.೮೮-೧೦೮

೨೬. ಅದೇ, ಪು.೪೧೧

೨೭. ಹನೂರು ಕೃಷ್ಣಮೂರ್ತಿ(ಸಂ), ಜನಪದ ವೀರ ಗೀತೆಗಳು, ೧೯೮೭, ಪು.೧–೨೫

೨೮. ಎಚ್.ಎಲ್. ನಾಗೇಗೌಡ(ಸಂ), ಪ್ರವಾಸಿ ಕಂಡ ಇಂಡಿಯಾ, ಸಂ–೨, ಪು.೨೯೬

೨೯. ಜೀ.ಶಂ.ಪರಮಶಿವಯ್ಯ(ಸಂ), ಜನಪದ ಖಂಡಕಾವ್ಯಗಳು, ಪು.೧೯; ಜೀ.ಶಂ.ಪರಮಶಿವಯ್ಯ (ಸಂ), ಆಯ್ದ ಜನಪದ ಕಥೆಗಳು, ಪು.೧೫೯

೩೦. ಬಸವಣ್ಣನವರ ಟೀಕಿನ ವಚನಗಳು ವ–೬೮೦

೩೧. ಜೀ.ವರದರಾಜನ್, ಕುಮಾರ ರಾಮನ ಸಾಂಗತ್ಯ, ಪು.೧೫೨

೩೨. ಅದೇ, ಪು.೮೬–೮೭

೩೩. ಬಸವರಾಜ ಕಲ್ಗುಡಿ, ಮಹಾಸತಿ ಆಚರಣೆ: ಒಂದು ಅಧ್ಯಯನ, ಪು.೩೫೯

೩೪. ಕೃಷ್ಣಮೂರ್ತಿ ಹನೂರ(ಸಂ) ಕತ್ತಾಲ ದಾರಿ ದೂರ, ಪು.ಸಂ.೪೧

೩೫. ಬಸವರಾಜ ಕಲ್ಗುಡಿ, ಹೆಮ್ಮನಹಳ್ಳಿ ಮಾಸ್ತಿ, ಮಹಾಸತಿ ಆಚರಣೆ: ಒಂದು ಅಧ್ಯಯನ, ಪು.೮೬

೩೬. ಜೀ.ಶಂ.ಪರಮಶಿವಯ್ಯ(ಸಂ) ಆಯ್ದ ಜನಪದ ಕಥೆಗಳು, ಪು.೧೫೮–೧೬೩; ಡಿ.ಲಿಂಗಯ್ಯ (ಸಂ), ಜನಪದ ಕಥಾ ಸಂಗಮ, ಪು.೮೬

೩೭. ಪಂಡಿತ ಕೆ. ರಾಠೋಡ, ಬಂಜಾರ ಸಂಸ್ಕೃತಿ ಅಧ್ಯಯನ, ೨೦೧೬ ಪು.೨೬೪–೨೭೭

೩೮. ಪದ್ಮನಾಯಕ ಕುಂಬೂರು, ದಾವಣಗೆರೆ, ಪಾಂಡಪ್ಪ ನಾಯಕ, ವೆಂಕು ಭಗತ್ ನಾಗಾವಿ ಇವರಿಂದ ತಿಳಿದ ಸಂಗತಿ. ಉದೃತ: ಪಂಡಿತ ಕೆ. ರಾಠೋಡ, ಬಂಜಾರ ಸಂಸ್ಕೃತಿ ಅಧ್ಯಯನ, ೨೦೧೬ ಪು.೨೬೪–೨೭೭

೩೯. ಎ.ಸಿ.ಲಿಯಲ್, ಗೆಜೆಟಿಯರ್ ಫಾರ್ ದಿ ಹೈದ್ರಾಬಾದ, ಪು.೧೯

೪೦. ಎ.ಸಿ.ಲಯಾಲ್, ಗೆಜೆಟಿಯರ್ ಫಾರ್ ದಿ ಹೈದ್ರಾಬಾದ್, ಪು.೧೯

೪೧. ಮಿರರ್ ಪತ್ರಿಕೆ ಜನವರಿ ೧೯೮೧, ದಿ ರೆಜೆಂಡ ಆಪ್ ರಾಣಿಸತಿ, ಪು.೨೮–೨೯ ಉದೃತ: ಬಿ.ಎಸ್.ಶೇಠೆ, ಕನಾಟಕದಲ್ಲಿ ಸತಿಪದ್ಧತಿ, ಪು.೧೯೪

೪೨. ಪಾಂಡಪ್ಪ ಲಮಾಣಿ ಮತ್ತು ಪದ್ಮನಾಯಕ ಕುಂಬಳೂರು, ಇವರಿಂದ ತಿಳಿದ ಸಂಗತಿ.

೪೩. ಪಂಡಿತ ಕೆ.ರಾಠೋಡ, ಬಂಜಾರ ಸಂಸ್ಕೃತಿ ಅಧ್ಯಯನ, ೨೦೧೬ ಪು.೨೬೪-೨೭೭

೪೪. ಬಸವರಾಜ ಕುರವ, ಒಂದು ಮೌಖಿಕ ಚರಿತ್ರೆ ತಗಚಗೆರೆ ಮಾಸ್ತ್ಯಮ್ಮ, ಜಾನಪದ ಜಗತ್ತು ಸಂ.೩೦-(೪) ಅಕ್ಟೋಬರ್ ಮತ್ತು ಡಿಸೆಂಬರ್, ೨೦೦೯ ಪು.೧೪-೨೧

೪೫. ಸುಂದರಂ ಆರ್ವಿಯಸ್(ಅನು), ತೆಲಗು ಜನಪದ ಮಹಾಕಾವ್ಯ ಕಾಟಮರಾಜನ ಕಥೆ, ೨೦೦೦, ಪು.೨೫-೭೦.

೪೬. ಬುಳುಸಾಗರ ಪಾಂಡುರಂಗಯ್ಯ ಮೀಥ್ಯಾಕೀರ್ತಿ, ಸುಧಾಪತ್ರಿಕೆ, ೪-೧೦-೨೦೧೮ ಪು.೪೫-೪೬

ಅಧ್ಯಾಯ : ಆರು

ಸತಿಪದ್ಧತಿ: ಸಾಮಾಜಿಕ ಸಂದರ್ಭ ಹಾಗೂ ಕಾನೂನು ಪ್ರಕ್ರಿಯೆಗಳು

ಅಧ್ಯಾಯ: ಆರು

ಸತಿಪದ್ಧತಿ: ಸಾಮಾಜಿಕ ಹೋರಾಟಗಳು ಹಾಗೂ ಕಾನೂನು ಪ್ರಕ್ರಿಯೆಗಳು

೬.೧. ಸತಿಪದ್ಧತಿ: ಸಾಮಾಜಿಕ ಹೋರಾಟಗಳು

ಪ್ರಾಚೀನ ಕಾಲದಿಂದಲೂ ಅತ್ಯಂತ ಅನಿಷ್ಟ ಹಾಗೂ ಕ್ರೂರ ಪದ್ಧತಿಯಾಗಿ ಜಗತ್ತಿನ ವಿವಿಧ ಭಾಗಗಳಲ್ಲಿ ಕಂಡುಬಂದ ಈ ಪದ್ಧತಿಯ ವಿರುದ್ಧ ಆರನೆಯ ಶತಮಾನದಿಂದಲೂ ಒಂದಿಲ್ಲಾ ಒಂದು ರೂಪದಲ್ಲಿ ವಿರೋಧಗಳು ವ್ಯಕ್ತವಾಗಿದ್ದರೂ ತಡೆಗಟ್ಟುವ ಕ್ರಮ ಮಾತ್ರ ಅತ್ಯಂತ ಕಠಿಣವಾದ ಸವಾಲಿನಂತೆ ಪರಿಣಮಿಸಿತು. ಸ್ಮೃತಿ ಧರ್ಮಶಾಸ್ತ್ರಗಳು ವಿಧವೆ ಸತಿಯಾಗುವುದನ್ನು ತೀವ್ರವಾಗಿ ವಿರೋಧಿಸಿದವು. ಇವು ಬ್ರಹ್ಮನ ಆಜ್ಞೆಯಂತೆ ಬ್ರಾಹ್ಮಣ ಹೆಂಗಸು ಸತ್ತ ಗಂಡನನ್ನು ಹಿಂಬಾಲಿಸಬಾರದೆಂದು, ವಿಧವೆಯಾದವಳು ಸತ್ತ ಗಂಡನ ನೆನಪಿನಲ್ಲಿ ಪವಿತ್ರ ಜೀವನ ನಡೆಸಬೇಕು ಜಗತ್ತಿನ ಎಲ್ಲ ಸುಖಗಳನ್ನು ತೊರೆಯಬೇಕು ಎಂದು ಹೇಳಿವೆ.

ಆರನೆಯ ಶತಮಾನದಲ್ಲಿ ಅತ್ಯಂತ ಪ್ರಸಿದ್ಧರಾದ ಮೇಧಾತಿಥಿ, ವಿರಾಟ, ದೇವಣಭಟ್ಟ, ಬಾಣ ಮೊದಲಾದವರು ಸತಿ ಆಚರಣೆಯನ್ನು ವಿರೋಧಿಸಿದರು.[೧] ಕ್ರಿ.ಶ.೬೨೫ರಲ್ಲಿ ಬಾಣಕವಿಯು ತನ್ನ ಕೃತಿಯಾದ ಕಾದಂಬರಿಯಲ್ಲಿ ಸತಿಪದ್ಧತಿಯನ್ನು ಅತ್ಯಂತ ತೀವ್ರವಾಗಿ ವಿರೋಧಿಸಿ ಹೀಗೆ ಬರೆಯುತ್ತಾನೆ. "ಸತ್ತು ಹೋದ ತನ್ನ ಪ್ರಿಯತಮನ ಹಿಂದೆ ಸಾಯುವುದು ಯಾವ ರೀತಿಯಿಂದಲೂ ಫಲದಾಯಕವಲ್ಲ. ಈ ರೀತಿಯ ನಡುವಳಿಕೆ ಕೇವಲ ಮೂರ್ಖರಿಂದ ಅನುಸರಿಸಲ್ಪಡುತ್ತದೆ. ಇದು ಕೇವಲ ಭಾವೋದ್ವೇಗದಲ್ಲಿ ಮಾಡಲ್ಪಡುವ ಒಂದು ಕ್ರಿಯೆಯಷ್ಟೆ. ಅತ್ಯಂತ ಅವಸರದಲ್ಲಿ ಮಾಡಬಹುದಾದ ಮತ್ತು ಯೋಚನೆಗಳಿಲ್ಲದ ಒಂದು ದಾರಿ. ಈ ಕ್ರಿಯೆ ಸತ್ತವನಿಗೆ ಯಾವ ರೀತಿಯ ಒಳಿತನ್ನು ಮಾಡುವುದಿಲ್ಲ. ಸತ್ತವನು ಸ್ವರ್ಗಕ್ಕೆ ಹೋಗಲು ಈ ಕ್ರಿಯೆಯಿಂದ ಸಾಧ್ಯವಿಲ್ಲ. ನರಕಕ್ಕೆ ಹೋಗುವುದನ್ನು ಯಾರಿಂದಲೂ ತಡೆಯಲಾಗುವುದಿಲ್ಲ.

ಸತ್ತ ಮನುಷ್ಯನು ತನ್ನ ಕರ್ಮಕ್ಕನುಸಾರವಾಗಿ ತನ್ನ ಸ್ಥಾನವನ್ನು ಕಂಡುಕೊಳ್ಳುತ್ತಾನೆ. ಸಾವನ್ನಪ್ಪಿದ ಮನುಷ್ಯನ ಜೊತೆ ಬೆಂಕಿಯಲ್ಲಿ ಬಿದ್ದು ಸಾಯುವವಳು ನರಕಕ್ಕೆ ಹೋಗುತ್ತಾಳೆ. ಆತ್ಮಹತ್ಯೆ ಮಹಾಪಾಪ. ವಿಧವೆಯಾದವಳು ಗಂಡನ ಹಿಂದೆ ಸಾಯದೇ ಉಳಿದರೆ ತನ್ನ ಜೀವನದಲ್ಲಿಯೂ ಒಳಿತನ್ನು ಮಾಡಿಕೊಳ್ಳಬಹುದು. ಅಲ್ಲದೆ ಸತ್ತ ಗಂಡನಿಗೆ ಸಲ್ಲಿಸಬೇಕಾದ ಪ್ರೀತಿಯನ್ನು ಇತರೆ ಗೌರವ ಕ್ರಿಯೆಗಳನ್ನು ಮಾಡುವ ಮೂಲಕ ಸಲ್ಲಿಸಬಹುದು. ಸಾಯುವುದರಿಂದ ಇಬ್ಬರಿಗೂ ಯಾವ ಪ್ರಯೋಜನವೂ ಇಲ್ಲ”[೨] ಎಂದಿದ್ದಾನೆ. ಬಾಣಕವಿಯು ತನ್ನ ಇನ್ನೊಂದು ಕೃತಿ 'ಹರ್ಷಚರಿತೆ' ಯಲ್ಲಿ ರಾಜ ಪ್ರಭಾಕರ ವರ್ಧನನ ಮರಣದ ನಂತರ ಆತನ ಸತಿಯರು ಚಿತೆಯೇರಿ ಸಹಗಮನ ಪದ್ಧತಿಯನ್ನು ಆಚರಿಸಿರುವುದರ ಕುರಿತು ವಿವರಿಸಿದ್ದಾನೆ. ಇಲ್ಲಿ ಹರ್ಷನು ತನ್ನ ತಾಯಿ ಯಶೋಮತಿಯನ್ನು ಸಹಗಮನಗೊಳ್ಳದಂತೆ ಕೇಳಿಕೊಳ್ಳುವುದನ್ನು ವಿವರಿಸುತ್ತಾನೆ. ಹೀಗೆ ಅಂದಿನ ಸಾಮಾಜಿಕ ವ್ಯವಸ್ಥೆಯನ್ನು ಕಂಡ ಕವಿ ಈ ರೀತಿಯ ಸಹಗಮನ ಆಚರಣೆ ಮೂರ್ಖರಿಂದ ಅನುಸರಿಸಲ್ಪಡುವಂತದ್ದು, ಇದು ಕೇವಲ ಭಾವೋದ್ವೇಗದಲ್ಲಿ ಮಾಡುವಂತಹ ಕಾರ್ಯವಾಗಿದೆ ಎಂದು ಸ್ಪಷ್ಟವಾಗಿ ಹೇಳುವ ಮೂಲಕ ಅದರ ಅತಿತ್ವವನ್ನು ಅಲ್ಲಗಳೆಯಲು ಪ್ರಯತ್ನಪಟ್ಟಿದ್ದಾನೆ.[೩]

ಇದೇ ಅವಧಿಯಲ್ಲಿರುವ 'ವರಾಹಮಿಹಿರ'ನೂ ಸ್ತ್ರೀ ಸಮುದಾಯಕ್ಕೆ ಆದ ಅನ್ಯಾಯವನ್ನು ವಿರೋಧಿಸುತ್ತಾನೆ. ತನ್ನ 'ಬೃಹದ್‌ಸಂಹಿತೆ'ಯಲ್ಲಿ ಸ್ತ್ರೀಯರ ಪರವಾದ ವಿಚಾರಗಳನ್ನು ಮಂಡಿಸಿದ್ದಾನೆ. “ದೇವರು ಸೃಷ್ಟಿಸಿದ ಒಳ್ಳೆಯ ಆಭರಣವೆಂದರೆ ಹೆಣ್ಣು ಅವಳು ಮನುಷ್ಯನಿಗೆ ತನ್ನ ದೃಷ್ಟಿ, ಆಲೋಚನೆ ಮತ್ತು ಸೃಷ್ಟಿಗಳಿಂದಲೇ ಆನಂದ ಕೊಡಬಲ್ಲಳು. ಅವಳಿಂದಲೇ ಧರ್ಮ, ಅರ್ಥ, ಕಾಮ ಮತ್ತು ಸಂತಾನ. ಅವಳು ಸಮಾಜದ ಮುಖ್ಯ ಅಂಗ. ಅಭಿವೃದ್ಧಿ ಬೆಳವಣಿಗೆಯ ದೇವತೆ. ಸದ್ಗುಣಗಳಲ್ಲಿ ಗಂಡಸರಿಗಿಂತ ಸ್ತ್ರೀಯರೇ ಮೇಲು ಎಂದು ಸ್ತ್ರೀಯರನ್ನು ಗೌರವಿಸುವ ಮೂಲಕ ಸ್ತ್ರೀ ಸಮುದಾಯದ ಮೇಲೆ ಆದ ದಬ್ಬಾಳಿಕೆಯನ್ನು ಅಲ್ಲಗಳೆದಿದ್ದಾನೆ.”[೪]

ಸ್ಮೃತಿಕಾರ ಮೇಧಾತೀರ್ಥನು “ಅಂಗೀರಸ ಸ್ಮೃತಿಯಲ್ಲಿ ಸತಿಪದ್ಧತಿಯ ಬಗ್ಗೆ ಉಲ್ಲೇಖವಿದ್ದರೂ ಅದಕ್ಕೆ ಶಾಸ್ತ್ರದ ಮುದ್ರೆ ಇಲ್ಲ. ವೇದಗಳ ಪಾಠಗಳು ಆತ್ಮಹತ್ಯೆಯನ್ನು ವಿರೋಧಿಸುತ್ತೇವೆ”[೫] ಎಂದು ಹೇಳುತ್ತಾನೆ. ಇವನ ದೃಷ್ಟಿಯಲ್ಲಿ ಸತಿ ಆಚರಣೆ ಎನ್ನುವುದು ಆತ್ಮಹತ್ಯೆಯೇ ಆಗಿದೆ. ಅದಕ್ಕೆ ಮುಖ್ಯವಾಗಿ ವೇದ ಮನ್ನಣೆ ಇಲ್ಲವೆಂದೂ ಅಭಿಪ್ರಾಯಪಡುತ್ತಾನೆ. 'ವಿರಾಟ' ಎನ್ನುವ ಇನ್ನೊಬ್ಬ ಸ್ಮೃತಿಕಾರ “ವಿಧವೆಯು ಸಹಗಮನ ಮಾಡದೇ ಉಳಿದುಕೊಂಡು, ಸತ್ತ ಗಂಡನಿಗೆ ಶ್ರಾದ್ಧದ ಕಾಲಕ್ಕೆ ತಕ್ಕ ಆಚರಣೆ ಕ್ರಿಯೆಗಳನ್ನು ಮಾಡಿದರೆ ಅವನಿಗೆ ಒಳಿತನ್ನು ಮಾಡಿದಂತಾಗುತ್ತದೆ. ಒಂದು ವೇಳೆ ಅವಳು ಗಂಡನೊಡನೆ ಚಿತೆ ಏರಿದರೆ ಅವಳು ಆತ್ಮಹತ್ಯೆಯ ಮಹಾಪಾಪವನ್ನು

ಪಡೆದುಕೊಳ್ಳುತ್ತಾಳೆ."[೬] ಎಂದು ಸ್ಪಷ್ಟ ನಿಲುವನ್ನು ತಾಳುತ್ತಾನೆ. ಇಲ್ಲಿ ವಿಧವೆಯು ಸತಿಯಾಗದೇ ಬದುಕಿರಬೇಕೆಂಬುದೆ ಈತನ ಧೋರಣೆಯಾಗಿದೆ. ಜೊತೆಗೆ 'ಅಗ್ನಿಪುರಾಣ'ದಲ್ಲಿ ಬೃಹಸ್ಪತಿ, ಪರಾಶರ, ವಿಧವೆಗೆ 'ಸನ್ಯಾಸನವ್ರತ'ವೇ ಮುಖ್ಯ ಎಂದು ವಿಧವೆ ಸತಿಯಾಗುವುದನ್ನು ಉಗ್ರವಾಗಿ ವಿರೋಧಿಸಿರುವ ಉಲ್ಲೇಖಗಳಿವೆ.

ದಕ್ಷಿಣ ಭಾರತದ ೧೨ನೇ ಶತಮಾನದಲ್ಲಿ ದೇವಣಭಟ್ಟನು ಸತಿ ಆಚರಣೆ ಅತ್ಯಂತ ಕೀಳು ಧಾರ್ಮಿಕ ನಡತೆಗೆ ಸಂಬಂಧಿಸಿದುದಾಗಿದೆ ಎಂದೂ ಅದನ್ನು ಯಾರೂ ಉತ್ತೇಜಿಸ ಬಾರದೆಂದೂ ಪ್ರತಿಭಟನೆಯ ಮಾತನ್ನು ಹೇಳುತ್ತಾನೆ.[೭] ಸತಿಪದ್ಧತಿ ಉಗ್ರವಾಗಿ ಅಚರಣೆಯಲ್ಲಿದ್ದಾಗ ದೇವನಭಟ್ಟನು ಈ ಪ್ರತಿಭಟನೆಯನ್ನು ತೋರಿಸಿದ್ದು ತುಂಬ ಮಹತ್ವದ್ದಾಗಿದೆ. ದುರ್ದೈವದಿಂದ ಮುಂದಿನವರು ಈತನ ಧೋರಣೆಯನ್ನು ಅನುಸರಿಸಿಕೊಂಡು ಬರಲಿಲ್ಲ ಎಂಬ ಮಾಹಿತಿ ಐತಿಹಾಸಿಕ ಮೂಲಗಳಿಂದ ತಿಳಿದು ಬರುತ್ತದೆ.

ಸತಿಪದ್ಧತಿಯನ್ನು ನಿರಾಕರಿಸಿದ 'ಮಹಾನಿರ್ವಾಣ' ಎಂಬ ತಾಂತ್ರಿಕ ಗ್ರಂಥವೊಂದರಲ್ಲಿ ಹೆಣ್ಣಿನ ಹಿರಿಮೆಯನ್ನು ಕುರಿತ ಮಾತುಗಳಿವೆ. ಇಲ್ಲಿ ಸತಿ ಆಚರಣೆಯನ್ನು ವಿರೋಧಿಸಿದ ಉಲ್ಲೇಖಗಳು ಸಿಗುತ್ತವೆ. "ಪ್ರತಿಯೊಬ್ಬ ಹೆಣ್ಣು ದೇವತೆಯ ಪ್ರತಿರೂಪ. ಜಗತ್ತಿನ ಪ್ರತಿ ಹೆಣ್ಣಿನಲ್ಲೂ ದೇವತೆ ಅಡಗಿರುತ್ತಾಳೆ. ಆದ್ದರಿಂದ ಯಾವ ಸ್ತ್ರೀಯಾದರೂ ಭ್ರಮೆಯಿಂದ ಚಿತೆಯನ್ನೇರಿದರೆ, ಅವಳು ನರಕಕ್ಕೆ ಖಂಡಿತ ಹೋಗುತ್ತಾಳೆ."[೮] ಈ ಗ್ರಂಥ ಗಂಡು ಹೆಣ್ಣಿನ ಸಂಬಂಧದಲ್ಲಿ ಹೆಣ್ಣಿನ ಬಗೆಗೆ ಗಂಡು ತಾಳಬೇಕಾದ ಪ್ರೀತಿ, ಆರೈಕೆ, ಗೌರವಗಳನ್ನು ವಿವರವಾಗಿ ಹೇಳುತ್ತದೆ. ಅಲ್ಲದೇ ಸ್ತ್ರೀಯು ದೇವತೆಯ ರೂಪವೆಂದು ಅವಳನ್ನು ಯಾರಾದರೂ ಪತಿಯೊಡನೆ ಸುಟ್ಟರೆ ಅವರು ಶಾಶ್ವತ ನರಕದ ಶಿಕ್ಷೆಗೆ ಗುರಿಯಾಗುವರು ಎಂದು ತಿಳಿಸುತ್ತದೆ. ಜೊತೆಗೆ ಮರು ಮದುವೆಯನ್ನು ಕೂಡ ಇದು ಬೆಂಬಲಿಸಿರುವ ವಿವರಣೆಯಿದೆ.

ಈ ಪದ್ಧತಿಗೆ ಸಂಬಂಧಿಸಿದ ಉಲ್ಲೇಖಗಳನ್ನು ಗಮನಿಸಿದರೆ, ಉತ್ತರ ಭಾರತದಲ್ಲಿ ಸತಿಪದ್ಧತಿ ಉಗ್ರ ಸ್ವರೂಪದಲ್ಲಿದ್ದಾಗ ದಕ್ಷಿಣ ಭಾರತದಲ್ಲಿ ಅದು ಸೌಮ್ಯ ಸ್ವರೂಪದಲ್ಲಿದ್ದು, ಕ್ರಿ.ಶ. ೭ನೇ ಶತಮಾನದವರೆಗೂ ಅದಕ್ಕೆ ಶಾಸ್ತ್ರ ಸಮ್ಮತಿ ಸಿಕ್ಕಿರಲಿಲ್ಲವೆಂದು ಮುಂದೆ ಅದಕ್ಕೆ ಶಾಸ್ತ್ರಗಳ ಬೆಂಬಲ ದೊರಕಿತೆಂದು ಗುರುತಿಸಬಹುದಾಗಿದೆ. ಸಮಾಜದ ಹಲವು ನಂಬಿಕೆಗಳ ಹಿನ್ನಲೆಯಲ್ಲಿ ಮುಂದುವರೆದುಕೊಂಡು ಬರುತ್ತಿದ್ದ ಸತಿ ಆಚರಣೆಗೆ ಶಾಸ್ತ್ರಗಳ ಬೆಂಬಲ ದೊರೆತು ಅದು ತನ್ನ ಭದ್ರ ಅಸ್ತಿತ್ವವನ್ನು ರೂಪಿಸಿಕೊಂಡಿತು.[೯]

ಈ ಅವಧಿಯಲ್ಲಿ ಸ್ತ್ರೀಯು ತನ್ನ ಗಂಡನ ಚಿತೆಯನ್ನು ಹಂಚಿಕೊಳ್ಳುವ ಭಯಾನಕ ಕ್ರಿಯೆಗೆ ಸಹಜವಾಗಿ ಮನಸ್ಸಿಲ್ಲದಿದ್ದರೂ ಒಪ್ಪಿಕೊಳ್ಳಲೇಬೇಕಾಗುತ್ತಿತ್ತು. ಏಕೆಂದರೆ ತನ್ನನ್ನು ಸಂತೈಸಲು ರಕ್ಷಿಸಲು ಯಾರ ಸಹಾಯವಿಲ್ಲದೇ ಹಸಿದ ತೋಳಗಳಂತಹ ಬ್ರಾಹ್ಮಣರ ಹಾಗೂ ಕುಟುಂಬದ ಸದಸ್ಯರ ಮಧ್ಯೆ ಭಯಾನಕ ಗಲಿಬಿಲಿಯ ಕ್ಷಣಗಳನ್ನು ಕಳೆಯಬೇಕಿತ್ತು. ಒಂದು ವೇಳೆ ಇಂತಹ ಕ್ರೂರ ಮನಸ್ಥಿತಿಯ ಜನರನ್ನು ಎದುರಿಸಲು ಸಿದ್ಧವಾದಲ್ಲಿ ಯಾವುದೇ ಪ್ರಯೋಜನವಾಗದೆ, ಊರಿಗೆ ಊರೆ ನೆರೆದು ಅಸ್ಥಿಯನ್ನು ನದಿ ದಡಕ್ಕೆ ಅಂದರೆ ಸ್ಮಶಾನಕ್ಕೆ ಎಳೆದುಕೊಂಡು ಹೋಗಿ ಗಂಡನ ಚಿತೆಯಲ್ಲಿರಿಸಿ ದಹಿಸಲು ಹೇಸುತ್ತಿರಲಿಲ್ಲ.[೧೦] ಇದಕ್ಕೆ ಹಿಂದೂಗಳಲ್ಲಿರುವ ಧಾರ್ಮಿಕ ನಂಬಿಕೆಯೇ ಮೂಲ ಕಾರಣವಾಗಿತ್ತು ಎಂದು ತಿಳಿದುಬರುತ್ತದೆ.

ಈ ರೀತಿಯ ಮೂಢನಂಬಿಕೆಗಳು ಭಾರತದಲ್ಲಷ್ಟೆ ಅಲ್ಲದೇ ವಿಶ್ವದ ಎಲ್ಲ ಕಡೆಗಳಲ್ಲಿ ಇದ್ದುದರಿಂದಾಗಿ ಇದರ ವಿರುದ್ಧ ಹೋರಾಟವಾಗಲಿ, ತಡೆಗಟ್ಟುವ ಕ್ರಮವಾಗಲಿ, ಬಹಳ ಕಠಿಣವಾದ ಸವಾಲಿನಂತೆ ಪರಿಣಮಿಸಿದ್ದವು. ಆಗ ಧಾರ್ಮಿಕ ಸಾಂಪ್ರದಾಯಿಕ ಆಚರಣೆಗಳಿಂದ ಹಿಂಸೆಗೊಳಗಾದ ಸ್ತ್ರೀ ಸಮುದಾಯವನ್ನು ರಕ್ಷಿಸುವ ಹೊಣೆ ಹೊತ್ತ ಪ್ರಜ್ಞಾವಂತ ಜನ ಪ್ರತಿನಿಧಿಗಳು ಮೂಢಸಂಪ್ರದಾಯಗಳನ್ನು ಬುಡ ಸಮೇತ ಕಿತ್ತೊಗೆಯಬೇಕೆಂದು ಪಣತೊಟ್ಟರು.

ಇದೇ ಕಾರಣಗಳನ್ನು ಮುಂದಿಟ್ಟುಕೊಂಡು, ಸತಿಪದ್ಧತಿಯ ವಿರುದ್ಧದ ಹೋರಾಟಗಳು ಅದರ ನಿಷೇಧಕ್ಕೆ ಬೆಂಬಲವಾಗಿ ನಿಂತ ಕಾನೂನುಗಳು ಜಾರಿಗೆ ಬರಲಾರಂಭಿಸಿದವು. ಇದನ್ನು ಕೆಲವು ಸಂಪ್ರದಾಯಸ್ಥ ಹಿಂದುಗಳನ್ನು ಬಿಟ್ಟರೆ ಆಧುನಿಕ ಮನೋಭಾವದ ಎಲ್ಲಾ ವರ್ಗದ ಭಾರತೀಯರು ಸೇರಿದಂತೆ ವಿಶ್ವದ ಅನೇಕ ಚಿಂತಕರು ತುಂಬು ಹೃದಯದಿಂದ ಸ್ವಾಗತಿಸಿದರು. ಇದರಿಂದ ಸಮಕಾಲೀನ ಪರಿಸ್ಥಿತಿಯು ದಿನದಿಂದ ದಿನಕ್ಕೆ ಬದಲಾಗಿ ಸಮಾಜದ ಸಂಪ್ರದಾಯಿಕ ಚಿತ್ರಣವೇ ಬದಲಾಯಿತು.

೬.೨. ಕಾನೂನು ಪ್ರಕ್ರಿಯೆಗಳು

ಸತಿಸಹಗಮನ ಪದ್ಧತಿಯು ಯಾವಾಗ ಉದಯಿಸಿತು ಎಂಬ ವಿಚಾರ ಕಾಲದ ಪ್ರವಾಹದಲ್ಲಿ ಕಳೆದುಹೋದರೂ, ಅದಕ್ಕಿರುವ ದೀರ್ಘ ಪರಂಪರೆಯು ಆಂತರಿಕ ಧಾರ್ಮಿಕ ಕಾಯಕದ ನೆಲೆಗಟ್ಟನ್ನು ಕೊಟ್ಟಿತ್ತು. ಒರಿಸ್ಸಾದಲ್ಲಿರುವ ನಾರಿಬಲಿ, ಹೆಣ್ಣು ಮಕ್ಕಳ ಕೊಲೆ, ವಿಧವೆಯರನ್ನು ನಡೆಸಿಕೊಳ್ಳುವ ರೀತಿ, ಸತಿಸಹಗಮನ ಆಚರಣೆಯಂತಹ ಕ್ರೂರ ಪದ್ಧತಿಗಳು ಎಲ್ಲ ಜಾತಿಯ ವರ್ಗಗಳಲ್ಲಿ ಧಾರ್ಮಿಕತೆಯ ನೆಪದಲ್ಲಿ ಅನಿವಾರ್ಯವೆನಿಸಿದ್ದವು. ಇವುಗಳನ್ನು ಅರಿತು ಬ್ರಿಟಿಷ್ ಸರ್ಕಾರವು ತನ್ನ ಆಡಳಿತದ ಪ್ರಭಲತೆಗಾಗಿ ಭಾರತದ ನಾಗರಿಕ ಸಮಾಜದ ಕುಂದು ಕೊರತೆಗಳನ್ನು

ಮೂಢನಂಬಿಕೆಗಳನ್ನು ಅವಲೋಕಿಸುತ್ತಾ ಅದರ ಪರಿಹಾರ ಕಾರ್ಯದತ್ತ ದೃಷ್ಟಿಹರಿಸಿತು.

ಬ್ರಿಟಿಷರು ಭಾರತಕ್ಕೆ ಬಂದ ಮೇಲೆ ಈ ಪದ್ಧತಿಯು ಮಾನವೀಯತೆಯ ಆತ್ಮಸಾಕ್ಷಿಗೆ ವಿರುದ್ಧವಾದ ಪದ್ಧತಿಯೆಂದೇ ಪ್ರಚಾರವಾಯಿತು. ಇದೇ ಅವಧಿಯಲ್ಲಿ ಮೊಘಲ್ ಚಕ್ರವರ್ತಿ ಅಕ್ಬರ್, ತಂಜಾವೂರಿನ ಮರಾಠ ಪೇಶ್ವೆಗಳು, ಗೋವಾದ ಸಾವಂತವಾಡಿಯ ರಾಜರು ಈ ಪದ್ಧತಿಯನ್ನು ನಿಷೇಧಿಸಲು ಪ್ರಯತ್ನಿಸಿದರು.

ಮಧ್ಯಯುಗದಲ್ಲಿ ಮುಸ್ಲಿಂ ರಾಜರುಗಳು ಈ ಪದ್ಧತಿಯ ವಿರುದ್ಧ ಧ್ವನಿ ಎತ್ತಿದರು. ಅವರುಗಳಲ್ಲಿ ಸತಿಪದ್ಧತಿಯನ್ನು ನಿಷೇಧಿಸಿ ಆಜ್ಞೆ ಮಾಡಿದವರಲ್ಲಿ ಮಹಮ್ಮದ್‌ಬಿನ್‌ತುಘಲಕ್ (ಕ್ರಿ.ಶ೧೩೨೫-೫೧) ಮೊದಲನೆಯವನೆಂದು ತಿಳಿದು ಬರುತ್ತದೆ.[೧೧] ಇವನ ಆಡಳಿತದಲ್ಲಿ ಸತಿ ಹೋಗುವವರಿದ್ದರೆ, ಕಡ್ಡಾಯವಾಗಿ ರಾಜನ ಅಪ್ಪಣೆ ಪಡೆಯಬೇಕಾಗುತ್ತಿತ್ತು. ಈತನಂತೆ ಅಕ್ಬರನು ತನ್ನ ಆಡಳಿತದ ಅವಧಿಯಲ್ಲಿ ಸತಿಪದ್ಧತಿಯನ್ನು ವಿರೋಧಿಸಿದನು. ಜೋಧಪುರದ 'ಜಯಮಲ್ಲಿ' ಎಂಬುವವನು ಮರಣ ಹೊಂದಿದಾಗ, ಆತನ ಮಗ ತನ್ನ ತಾಯಿಯನ್ನು ಸತಿ ಹೋಗುವಂತೆ ಒತ್ತಾಯಿಸುತ್ತಿದ್ದ ಇದನ್ನು ವಿರೋಧಿಸಿ ಆತನನ್ನು ಸೆರೆಮನೆಯಲ್ಲಿರಿಸಿ ವಿಧವೆ ತಾಯಿಯು ಸಹಗಮನವಾಗದಂತೆ ನೋಡಿಕೊಂಡನು. ಅಲ್ಲದೇ ವಿಧವೆಯರನ್ನು ಅವರ ಇಚ್ಛೆಗೆ ವಿರುದ್ಧವಾಗಿ ಸುಡದಂತೆ ನೋಡಿಕೊಳ್ಳಬೇಕೆಂದು, ಅಧಿಕಾರಿಗಳಿಗೆ ಆಜ್ಞೆ ಮಾಡಿದನು. ಈತನ ಆಳ್ವಿಕೆಯ ೨೨ ವರ್ಷದ ಅವಧಿಯಲ್ಲಿ ಅನೇಕ ಇನ್ಸ್‌ಪೆಕ್ಟರಗಳನ್ನು ನೇಮಿಸಿ ಎಲ್ಲಿಯೂ ಒತ್ತಾಯ ಪೂರ್ವಕ ಸಹಗಮನ ನಡೆಯದಂತೆ ನೋಡಿಕೊಂಡನು. ಇದೇ ಅವಧಿಯಲ್ಲಿ 'ದಿನ್-ಇ-ಇಲಾಹಿ' ಧರ್ಮವೂ ಈ ಪದ್ಧತಿಯನ್ನು ವಿರೋಧಿಸಿತು.[೧೨] ಸಹಗಮನದ ವಿರುದ್ಧ ಸಾಕಷ್ಟು ವಿರೋಧಗಳಿದ್ದರೂ ಮುಸ್ಲಿಂ ರಾಜರ ಆಳ್ವಿಕೆಯ ಕಾಲದಲ್ಲಿ ಅತಿ ಹೆಚ್ಚು ಸತಿ ಘಟನೆಗಳು ನಡೆದವು. ಕಾರಣ ಈ ಅವಧಿಯಲ್ಲಿ ರಾಜಮನೆತನಗಳು, ಸಂಪ್ರದಾಯಸ್ಥ ಮನೆತನಗಳು ತಮ್ಮ ವಂಶದ ಶುದ್ಧತೆಯನ್ನು ಉಳಿಸಿಕೊಳ್ಳುವ ಉದ್ದೇಶದಿಂದ ಸತಿ ಘಟನೆಗಳಿಗೆ ಹೆಚ್ಚು ಪ್ರೋತ್ಸಾಹ ಕೊಟ್ಟವು. ಜೊತೆಗೆ ಯೂರೋಪಿಯನ್ನರ ಆಗಮನದಿಂದಾಗಿ ಭಾರತದಲ್ಲಿ ಕ್ಷತ್ರಿಯರ ಬಣಗಳಲ್ಲಷ್ಟೇ ಅಲ್ಲದೇ ಸಾಮಾನ್ಯ ಜನರಲ್ಲೂ ಸಹ ಮಹಾಸತಿ ಆಚರಣೆ ಬಲವಾಗಿ ಬೇರೂರಿತು.

ಸಿಖ್‌ರ ಗುರುವಾದ ಗುರುನಾನಕ್ ಕ್ರಿ.ಶ. ೧೪೬೯ರಿಂದ ಕ್ರಿ.ಶ.೧೫೩೮ ಅವಧಿಯಲ್ಲಿ ಹಿಂದುಗಳಲ್ಲಿದ್ದ ಈ ಕ್ರೂರ ಆಚರಣೆಯನ್ನು ಖಂಡಿಸಿದ್ದಾನೆ ಎಂದು ನಿಜ್ಜರ್ ಅನುವಾದಿಸಿದ್ದಾರೆ. ಮೂರನೆಯ ಗುರು ಅಮರದಾಸನು ಸುಟ್ಟುಕೊಳ್ಳುವ ವಿಧವೆಯರನ್ನು ಸತಿಯರಲ್ಲ ಎಂದು ಸಾರುತ್ತಾನೆ. ಮರಾಠ ರಾಜ್ಯದಲ್ಲಿ ಪೇಶ್ವೆ ಬಾಜಿರಾವನೂ ಕೂಡ ಸತಿಪದ್ಧತಿಯನ್ನು ತಡೆಗಟ್ಟಲು

ಬಲವಾದ ಕ್ರಮಗಳನ್ನು ಕೈಗೊಂಡನು.[೧೩] ಮುಂದೆ ಯುರೋಪಿಯನ್ನರು ಭಾರತಕ್ಕೆ ಬಂದಾಗ ಸತಿ ಆಚರಣೆಯು ರಾಜಮನೆತನಗಳಲ್ಲಿ ಬ್ರಾಹ್ಮಣ ಕುಂಟುಂಬಗಳಲ್ಲಿ ಹಾಗೂ ಸಂಪ್ರದಾಯಸ್ಥ ಕುಟುಂಬಗಳಲ್ಲಿ ಕಡ್ಡಾಯವಾಗಿ ಆಚರಿಸಬೇಕೆಂಬ ತೀವ್ರ ಸ್ಥಿತಿಯನ್ನು ತಲುಪಿತು. ಆದರೂ ಇದೇ ಅವಧಿಯಲ್ಲಿ ಅಲ್ಬುಕರ್ಕನು ಪೋರ್ಚಗೀಸರ ಆಡಳಿತಕ್ಕೊಳಪಟ್ಟ ಗೋವಾ ಗಡಿಗಳ ಪ್ರದೇಶಗಳಲ್ಲಿ ಸತಿಪದ್ಧತಿಯನ್ನು ಕ್ರಿ.ಶ.೧೫೧೦ ರಲ್ಲಿ ನಿಷೇಧಿಸಲು ಪ್ರಯತ್ನಿಸಿದನು.[೧೪]

ಆರ್ಚ್‌ಬಿಷಪ್ ಕ್ರಿ.ಶ.೧೫೫೩ ರಿಂದ ಕ್ರಿ.ಶ.೧೫೫೮ರವರೆಗೆ ಗೋವಾ ಪಟ್ಟಣದಲ್ಲಿ ಸತಿಪದ್ಧತಿ ವಿರುದ್ಧ ಹೋರಾಟ ಮಾಡಿ ಕಾನೂನಿನ ಮೂಲಕ ನಿಷೇಧಿಸಿದನು.[೧೫]ಇದೇ ರೀತಿ ಜಹಾಂಗೀರನು ಕ್ರಿ.ಶ.೧೬೦೫ ರಿಂದ ಕ್ರಿ.ಶ.೧೬೨೮ರ ಅವಧಿಯಲ್ಲಿ ಸತಿಪದ್ಧತಿಯನ್ನು 'ವಧಾರ್ಹ' ಅಪರಾಧವೆಂದು ಘೋಷಿಸಿದನು.[೧೬] ಷಹಜಾಹನನು ಕ್ರಿ.ಶ.೧೬೨೮ ರಿಂದ ಕ್ರಿ.ಶ.೧೬೫೮ರ ಅವಧಿಯಲ್ಲಿ ವಿಧವೆಯರನ್ನು ದಹಿಸುವ ಬಗೆಗೆ ಮಹಮ್ಮದೀಯರಿಗೆ ಅಸಮ್ಮತಿ ಇದ್ದುದರಿಂದ ಮುಸ್ಲಿಂ ಸ್ಮಶಾನಗಳ ಸಮೀಪದಲ್ಲಿ ಅದು ನಡೆಯಬಾರದೆಂದು ಅಪ್ಪಣೆ ಹೊರಡಿಸಿದನು. ಔರಂಗಜೇಬನು ಕ್ರಿ.ಶ.೧೬೫೮ ರಿಂದ ಕ್ರಿ.ಶ.೧೭೦೭ರ ಅವಧಿಯಲ್ಲಿ ಸ್ತ್ರೀಯರು ಅಗ್ನಿಗೆ ಬೀಳುವುದಕ್ಕೆ ಯಾವುದೇ ಕಾರಣವಿದ್ದರೂ ಅವರಿಗೆ ಅನುಮತಿ ಕೊಡ ಕೂಡದೆಂದು ಅಧಿಕಾರಿಗಳಿಗೆ ಕಟ್ಟಪ್ಪಣೆ ಮಾಡಿದನು.[೧೭]

ಇದೇ ಅವಧಿಯಲ್ಲಿ ಭಾರತಕ್ಕೆ ಬಂದ ಪ್ರೆಂಚ್ ಪ್ರವಾಸಿ ಫ್ರಾನ್‌ಸ್ವಾಸ್ ಬೆರ್ನ್ಯೇ ಹೀಗೆ ಉಲ್ಲೇಖಿಸಿದ್ದಾನೆ. "ಚಿತೆಯಲ್ಲಿ ಬೀಳಲು ಮುಂದಾದ ಹೆಂಗಸರನ್ನು ತಡೆಯುವುದಕ್ಕಾಗಲಿ ಅಥವಾ ಬ್ರಾಹ್ಮಣರು ಆಕೆಯನ್ನು ಬೀಳಿಸುವುದಕ್ಕಾಗಲಿ, ಯಾವ ಮೊಗಲ್ ಚಕ್ರವರ್ತಿಯು ತಡೆಯುವ ಧೈರ್ಯ ಮಾಡಲಾರ ಆದರೆ ಎಲ್ಲಿ ಸಾಧ್ಯವೋ ಅಲ್ಲಿ ಪೋರ್ಚಗೀಸರು ಅನೇಕ ವಿಧವೆಯರನ್ನು ಬದುಕಿಸಿದ್ದಾರೆ"[೧೮] ಎಂದಿದ್ದಾನೆ.

ಕ್ರಿ.ಶ. ೧೭ನೇ ಶತಮಾನದ ಅಂತ್ಯದಲ್ಲಿ ಮತ್ತು ೧೮ ನೇ ಶತಮಾನದ ಪ್ರಾರಂಭದಲ್ಲಿ ಬ್ರಿಟಿಷರು ಸತಿ ಆಚರಣೆಗಳನ್ನು ತಡೆಯುವ ಪ್ರಯತ್ನಗಳನ್ನು ಪ್ರಾರಂಭಿಸಿದರು. ಪ್ರತಿಯೊಂದು ಜಿಲ್ಲೆಯ ಕಲಾಕಾರರು ಸ್ವತಃ ತಾವೇ ಅಡ್ಡಾಡಿ ಜನರ ಮನವೊಲಿಸಿ ಸಹಗಮನವನ್ನು ತಪ್ಪಿಸಲು ಪ್ರಯತ್ನಿಸಿದರು.[೨೦] ಕ್ರಿ.ಶ.೧೭೮೭ರಲ್ಲಿ ಎಂ.ಎಚ್.ಬ್ರುಕ್ಸ್ ಎಂಬಾತ ಶಹಬಾದಿನ ಕಲೆಕ್ಟರಾಗಿದ್ದು, ಶಹಬಾದಿನಲ್ಲಿ ನಡೆಯುತ್ತಿದ್ದ ಸತಿ ಘಟನೆಯೊಂದನ್ನು ತಪ್ಪಿಸುತ್ತಾನೆ. ಕ್ರಿ. ಶ.೧೮೦೩ ರಲ್ಲಿ 'ವಿಲಿಯಂ ಕೆರಿ' ಎಂಬಾತ ಕಲ್ಕತ್ತಾದ ಸುತ್ತ ಇರುವ ಮೂವತ್ತು ಮೈಲಿ ಅಳತೆಯಲ್ಲಿ ನಡೆದ ಸತಿಸಹಗಮನದ ಘಟನೆಗಳ ಮಾಹಿತಿ ತೆಗೆದುಕೊಂಡು ಸರ್ಕಾರಕ್ಕೆ ಒಪ್ಪಿಸುತ್ತಾನೆ. ಕ್ರಿ. ಶ.೧೮೦೫ರಲ್ಲಿ 'ಎಲ್ಫಿನ್‌ಸ್ಟನ್' ಎಂಬ ಕಲೆಕ್ಟರ 'ಗಯಾ'ದಲ್ಲಿ ಹನ್ನೆರಡು ವರ್ಷದ ಹುಡಗಿಯೊಬ್ಬಳನ್ನು ಸತಿ ದುರಂತದಿಂದ ಪಾರು ಮಾಡುತ್ತಾನೆ.[೨೧]

ಹೀಗೆ ಒಂದಾದ ನಂತರ ಒಂದು ಘಟನೆಗಳು ನಡೆಯುತ್ತಿದ್ದರೂ ಬ್ರಿಟಿಷರು ಮೊದಮೊದಲು ಈ ವ್ಯವಹಾರದಲ್ಲಿ ಕೈಹಾಕಲು ಹಿಂದೇಟು ಹಾಕಿದರು. ಕ್ರಿ.ಶ.೧೭೮೯ರಲ್ಲಿ ಕ್ರಿಮಿನಲ್ ನ್ಯಾಯಾಧೀಶರಾಗಿದ್ದ ಬ್ರೂಕ್ ಎಂಬುವರು ಸ್ತ್ರೀಯೊಬ್ಬಳಿಗೆ ಸತಿಯಾಗದಂತೆ ತೀರ್ಪುಕೊಟ್ಟು ಆ ವಿಷಯವನ್ನು ಗೌರ್‍ನರ್ ಜನರಲ್ ಕಾರ್ನ್‌ವಾಲೀಸ್‌ರಿಗೆ ತಿಳಿಸಿದರು. ಆಗ ಅವರು ಇಂಥ ತೀರ್ಪಿನಿಂದಾಗಿ ಇನ್ನೂ ಸತಿ ಘಟನೆಗಳು ಹೆಚ್ಚಬಹುದು ಎಂಬ ಆತಂಕದಿಂದ ನ್ಯಾಯಧೀಶರಿಗೆ ಈ ಪ್ರಸಂಗದಲ್ಲಿ ಪ್ರವೇಶಿಸಲು ಅಧಿಕಾರ ಕೊಡಲಾಗುವುದಿಲ್ಲ ಎಂದು ವಾದಿಸಿದರು.[೨೨]

ಇದೇ ಕಾರಣವನ್ನಿಟ್ಟುಕೊಂಡು ಕ್ರಿ.ಶ.೧೮೦೫ರಲ್ಲಿ ಬಿಹಾರ ನ್ಯಾಯಧೀಶರಾದ 'ಎಲಿಫಿನ್‌ಸ್ಟನ್' ಅವರು ೧೨ ವರ್ಷದ ಬಾಲ ವಿಧವೆಯನ್ನು ಸತಿಯಾಗದಂತೆ ತಡೆಯಲು ಅಧಿಕಾರ ಕೊಡಬೇಕೆಂದು ಲಾರ್ಡವೆಲ್ಲಸ್ಲಿಗೆ ಮನವಿ ಮಾಡಿ, ಹಿಂದೂ ಶಾಸ್ತ್ರಗಳ ಅಭಿಪ್ರಾಯಗಳನ್ನು ತಿಳಿಸಬೇಕೆಂದು ತಿಳಿಸಿದರು.[೨೩] ಕ್ರಿ.ಶ.೧೮೧೨ರ ಡಿಸೆಂಬರ್ ೫ರಲ್ಲಿ ಬ್ರಿಟಿಷ್ ಸರ್ಕಾರವು ಸತಿಪದ್ಧತಿಯ ವಿಷಯದಲ್ಲಿ ತೀರ್ಮಾನವೊಂದನ್ನು ತೆಗೆದುಕೊಂಡಿತು. ಅದೇನೆಂದರೆ 'ಹಿಂದೂ ಧರ್ಮದ ತತ್ವಗಳು ಅನ್ವಯವಾಗದಿರುವ ಕಡೆ ಮಾತ್ರ ಸತಿ ಘಟನೆಗಳನ್ನು ತಡೆಯಬೇಕೆಂದು' ತಿಳಿಸಿತು. ಈ ತೀರ್ಮಾನದಿಂದಾಗಿ ದೇಶದ ವಿವಿಧ ಭಾಗಗಳಲ್ಲಿ ಸತಿ ಘಟನೆಗಳ ಸಂಖ್ಯೆಯು ಇನ್ನೂ ಹೆಚ್ಚಾಗಲಿಕ್ಕೆ ಕಾರಣವಾಯಿತೆಂದು ಥಾಂಮ್ಸನ್ ಹೇಳುತ್ತಾನೆ.[೨೪]

ಕ್ರಿ.ಶ.೧೮೨೧ರಲ್ಲಿ ಲಾರ್ಡ ಹೇಸ್ಟಿಂಗ್ಸನು ಕೂಡಾ ಸತಿಪದ್ಧತಿ ವಿಷಯದಲ್ಲಿ ಏನೂ ಮಾಡಲು ಸಾಧ್ಯವಿಲ್ಲವೆಂದು ಅಭಿಪ್ರಾಯಪಟ್ಟನು. ಈ ಪದ್ಧತಿಯ ವಿರುದ್ಧ ಸಾಕಷ್ಟು ವಿರೋಧಗಳು ಬಂದಿದ್ದರೂ, ಜನರ ಧಾರ್ಮಿಕ ನಂಬಿಕೆ ಹಾಗೂ ಆಚಾರ ವಿಚಾರಗಳ ದೃಷ್ಟಿಯಿಂದ ತಟಸ್ಥ್ಯ ಧೋರಣೆವಹಿಸಬೇಕೆಂಬ ನಿಟ್ಟಿನಲ್ಲಿ ಯಾವುದೇ ಕಾನೂನಾತ್ಮಕ ಕಾರ್ಯ ಕೈಗೊಳ್ಳಲು ಸಾಧ್ಯವಾಗಿರಲಿಲ್ಲ. ಆಗ ರಾಜಾರಾಮ ಮೋಹರಾಯರಂತಹ ಭಾರತೀಯ ಸಮಾಜ ಸುಧಾರಕರು ಸತಿಪದ್ಧತಿಯನ್ನು ನಿರ್ಮೂಲಗೊಳಿಸಲು ದೃಢನಿರ್ಧಾರ ಮಾಡಿದರು. ಇದೇ ಸಮಯದಲ್ಲಿ ಅಂದರೆ ಕ್ರಿ.ಶ.೧೮೨೩ರಲ್ಲಿ ಸರ್ಕಾರದ ನಿರ್ದೇಶನದ ಸಮಿತಿಯು ತಪಾಸಣೆಯೊಂದನ್ನು ಜಾರಿಗೊಳಿಸಿ ಸತಿಪದ್ಧತಿಯನ್ನು ಕಾನೂನು ಬದ್ಧವಾಗಿ ನಿಷೇಧಿಸುವ ಸೂಚನೆಯನ್ನು ನೀಡಿತು.

ಬ್ರಿಟಿಷ್ ಅಧಿಕಾರಿ ಲಾರ್ಡ ಆಮ್‌ಹಸ್ಟರ್ ಜನರ ಅಭಿಪ್ರಾಯಗಳನ್ನು ಕ್ರೂಢೀಕರಿಸಿದರು. ಇದರಿಂದ ಬ್ರಿಟಿಷ್ ಅಧಿಕಾರಿಗಳು ಗೊಂದಲಕ್ಕೀಡಾದರು. ಆದರೆ ಲಾರ್ಡ ವಿಲಿಯಂ ಬೆಂಟಿಂಕ್ ಪ್ರಾಂತ್ಯದ ಹಿರಿಯ ಅಧಿಕಾರಿಗಳನ್ನು ಸ್ಥಳೀಯ ನಾಗರಿಕರನ್ನು ಹಾಗೂ ಸಮಾಜ ಸುಧಾರಕರಾದ ಶ್ರೀ ರಾಜಾರಾಮ್ ಮೋಹನ್‌ರಾಯರನ್ನು ಬೇಟಿ ಮಾಡಿ ಅವರಿಂದ ಮಾಹಿತಿ ಪಡೆದು ಸತಿ ಪದ್ಧತಿಯನ್ನು ನಿಷೇಧಿಸಲೇಬೇಕೆಂಬ ಹಠಕ್ಕೆ ಬಿದ್ದರು.

ಕ್ರಿ.ಶ.೧೮೧೫ರಿಂದ ಕ್ರಿ.ಶ.೧೮೨೮ರ ಅವಧಿಯಲ್ಲಿ ಬೆಂಗಾಲ್ ಪ್ರೆಸಿಡೆನ್ಸಿಯಲ್ಲಿ ಸತಿ ಘಟನೆಗಳು ದಾಖಲೆಗಳನ್ನೇ ಸೃಷ್ಟಿಸಿದವು. ಈ ಪ್ರೆಸಿಡೆನ್ಸಿಯಲ್ಲಿ ಉತ್ತರಪ್ರದೇಶ, ಬಿಹಾರ, ಒರಿಸ್ಸಾ, ಆಸ್ಸಾಂ, ಪ್ರಾಂತ್ಯಗಳಿದ್ದವು. ಇಲ್ಲಿ ನಡೆದ ಸತಿ ಘಟನೆಗಳ ಪಟ್ಟಿಯೊಂದು ಹೀಗಿದೆ.[೨೫]

ಕಾಲ	ಸತಿಘಟನೆಗಳ ಸಂಖ್ಯೆ	ಕಾಲ	ಸತಿಘಟನೆಗಳ ಸಂಖ್ಯೆ
೧೮೧೫	೩೭೮	೧೮೨೨	೫೮೩
೧೮೧೬	೪೪೨	೧೮೨೩	೫೭೫
೧೮೧೭	೭೦೭	೧೮೨೪	೫೭೨
೧೮೧೮	೮೩೯	೧೮೨೫	೬೩೯
೧೮೧೯	೬೫೦	೧೮೨೬	೫೧೮
೧೮೨೦	೫೯೮	೧೮೨೭	೫೧೭
೧೮೨೧	೬೫೪	೧೮೨೮	೪೬೩

ಕ್ರಿ.ಶ.೧೮೧೫ರಿಂದ ಕ್ರಿ.ಶ.೧೮೨೮ ರ ಅವಧಿಯಲ್ಲಿ ಬೇರೆ ಬೇರೆ ಡಿವಿಜನ್‌ಗಳಲ್ಲಿ ನಡೆದ ಸತಿ ಘಟನೆಗಳ ಪಟ್ಟಿಯನ್ನು ಥಾಂಮ್ಸನ್ ಹೀಗೆ ತಿಳಿಸುತ್ತಾನೆ.[೨೬]

ಕಲ್ಕತ್ತಾ – ಹಿಂದು ಜನಸಂಖ್ಯೆ ಹೆಚ್ಚು ಇರುವ ಪ್ರದೇಶ – ೫೦೯೯

ಡಕ್ಕಾ – ವಲಸೆ ಹೆಚ್ಚು ಇರುವ ಪ್ರದೇಶ – ೬೧೦

ಮುರ್ಶಿದಾಬಾದ್ – ವಲಸೆ ಹೆಚ್ಚು ಇರುವ ಪ್ರದೇಶ – ೨೬೦

ಪಾಟ್ನಾ – ಹಿಂದು ಜನಸಂಖ್ಯೆ ಹೆಚ್ಚು ಇರುವ ಪ್ರದೇಶ – ೭೦೯

ಬರೇಲಿ – ಹಿಂದು ಜನಸಂಖ್ಯೆ ಹೆಚ್ಚು ಇರುವ ಪ್ರದೇಶ – ೧೯೩

ಬನಾರಸ್ – ಹಿಂದು ಜನಸಂಖ್ಯೆ ಹೆಚ್ಚು ಇರುವ ಪ್ರದೇಶ – ೧೧೬೫

ಹೀಗೆ ಹಿಂದೂ ಸಂಪ್ರದಾಯಸ್ಥ ಕುಟುಂಬಗಳಿರುವ ಬಂಗಾಳ ಹಾಗೂ ಬನಾರಸ್‌ಗಳಲ್ಲಿ ಅತಿ ಹೆಚ್ಚು ಸತಿ ಘಟನೆಗಳು ನಡೆದಿರುವುದು ವಿಪರ್ಯಾಸ. ಉತ್ತರ ಭಾರತದಲ್ಲಿ ಅತೀ ಹೆಚ್ಚು 'ಸತಿ' ಘಟನೆಗಳು ನಡೆಯುತ್ತಿದ್ದವು ಆದರೆ ದಕ್ಷಿಣ ಭಾರತದಲ್ಲಿ ಅಷ್ಟೊಂದು ತೀವ್ರಗತಿಯ ಸತಿ ಘಟನೆಗಳು ನಡೆದಿರುವುದಿಲ್ಲ ಎಂದು ವಿದ್ವಾಂಸರು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಕ್ರಿ.ಶ. ೧೮೦೦ ರಿಂದ ಕ್ರಿ.ಶ. ೧೮೧೨ರ ವರೆಗೆ ಪೂನಾದಲ್ಲಿ ೧೨ ಸತಿ ಘಟನೆ ನಡೆದ ದಾಖಲೆಗಳು ಕ್ರಿ.ಶ.೧೮೧೭ರಲ್ಲಿ ತಂಜಾವೂರನಲ್ಲಿ ೨೪ ಸತಿ ಘಟನೆಗಳು, ಬೆಂಗಾಲ, ಉತ್ತರಪ್ರದೇಶ,

ಬನಾರಸ್‌ಗಳಲ್ಲಿ, ಬ್ರಾಹ್ಮಣರ ಕುಟುಂಬಗಳಲ್ಲಿ ಅತಿ ಹೆಚ್ಚು ಸತಿ ಘಟನೆಗಳು ನಡೆದ ವಿವರಗಳಿವೆ.

ಕ್ರಿ.ಶ.೧೮೧೭ರಲ್ಲಿ ಬ್ರಾಹ್ಮಣ ಹೆಂಗಸರಿಗೆ ಸಹಗಮನವನ್ನು ಬ್ರಿಟಿಷ್ ಸರ್ಕಾರ ನಿಷೇಧಿಸುತ್ತದೆ. ಆಗ ಭಾರತೀಯ ಸಮಾಜ ಸುಧಾರಕರು ಅದರ ನಿರ್ಮೂಲನೆಗಾಗಿ ಕ್ರಿ.ಶ.೧೮೧೮ರಲ್ಲಿ ರಾಜಾರಾಮ ಮೋಹನರಾಯ ಅವರ ಮುಂದಾಳತ್ವದಲ್ಲಿ ಸತಿ ಆಚರಣೆಯ ವಿರುದ್ಧ ಕರ ಪತ್ರಗಳನ್ನು ಹಂಚಲು ಪ್ರಾರಂಭಿಸುತ್ತಾರೆ. ಇದೇ ವೇಳೆಗೆ ಪುಣೆಯ ಪೇಶ್ವೆ ಸರ್ಕಾರ, ಸಾವಂತ ವಾಡಿಯ ಮರಾಠ ಸರ್ಕಾರಗಳು ಈ ಆಚರಣೆಯನ್ನು ತಡೆ ಹಿಡಿಯಲು ಆಜ್ಞೆಗಳನ್ನು ಹೊರಡಿಸುತ್ತವೆ. ಕ್ರಿ.ಶ.೧೮೨೧ರಲ್ಲಿ ಲಾರ್ಡ್ ಹೆಸ್ಟಿಂಗ್ಸ್‌ನು ಸತಿಪದ್ಧತಿಯ ವಿಷಯದಲ್ಲಿ ಏನು ಮಾಡಲು ಸಾಧ್ಯವಿಲ್ಲವೆಂದು ಅಭಿಪ್ರಾಯಪಟ್ಟನು. ಆದರೆ ಲಾರ್ಡ್ ವಿಲಿಯಂ ಬೆಂಟಿಂಗ್ ಸತಿ ಪದ್ಧತಿಯನ್ನು ನಿರ್ಮೂಲನೆಗೊಳಿಸಲು ಧೃಡ ನಿರ್ಧಾರ ಮಾಡಿದನು. ಇದೇ ವೇಳೆಗೆ ಕ್ರಿ.ಶ. ೧೮೨೯ ಡಿಸೆಂಬರ ೪ ರಂದು ಬ್ರಿಟಿಷ್ ಸರ್ಕಾರವು ತನ್ನ ಅಧಿಪತ್ಯದಲ್ಲಿರುವ ಭಾರತದ ಎಲ್ಲ ಪ್ರದೇಶಗಳಲ್ಲಿ ಸತಿಪದ್ಧತಿಯನ್ನು ನಿಷೇಧಿಸುವುದಾಗಿಯೂ, ಅದು ಶಿಕ್ಷಾರ್ಹ ಅಪರಾಧವೆಂದು ಕಾನೂನು ಪಾಸುಮಾಡಿತು.[೨೭]

ವಿಲಿಯಂ ಬೆಂಟಿಂಗ್‌ನ ನಿಷೇದಾಜ್ಞೆ ಜಾರಿಗೊಂಡ ಮೇಲೆ ಭಾರತದ ಹಲವು ಪ್ರದೇಶದಲ್ಲಿ ಸಂಪ್ರದಾಯ ಶರಣರು ತಮ್ಮ ಹೋರಾಟವನ್ನು ಉಗ್ರಗೊಳಿಸಿದರು. ಜೊತೆಗೆ 'ಸತಿ ಆಚರಣೆಯೇ ಒಳಿತು' ಎಂದು ವಾದ ಮಾಡಿದರು. ಪ್ರತಿಭಟನಾ ರೂಪವಾಗಿ ಇಂಗ್ಲೆಂಡಿನ 'ಪ್ರವಿಕೌನ್ಸಿಲ್'ಗೆ ೮೦೦ ಜನರ ಸಹಿಯುಳ್ಳ ಮನವಿಯೊಂದನ್ನು ಸಲ್ಲಿಸಿದರು. ಇದರ ಮುಖವಾಣಿಯಾಗಿ ಕಲ್ಕತ್ತಾದಿಂದ ಹೊರಡುತ್ತಿದ್ದ 'ಚಂದ್ರಿಕಾ' ಎನ್ನುವ ಪತ್ರಿಕೆಯು ಲಾರ್ಡ್ ವಿಲಿಯಂ ಬೆಂಟಿಂಗ್‌ರ ವಾದವನ್ನು ತೀವ್ರವಾಗಿ ವಿರೋಧಿಸಿತು.[೨೮]

ದ್ವಾರಕ್‌ನಾಥ ಠಾಗೋರ್, ರಾಜಾರಾಮ್ ಮೋಹನ್‌ರಾಯ ಮೊದಲಾದ ಪ್ರಜ್ಞಾವಂತ ಬುದ್ಧಿಜೀವಿಗಳು ಕ್ರಿ.ಶ.೧೮೨೯ ಡಿಸೆಂಬರ ೧೬ರಂದು ಕಲ್ಕತ್ತ ನಗರದ ೮೦೦ ಜನ ಕ್ರೈಸ್ತ ಧರ್ಮದ ಅನುಯಾಯಿಗಳು ಸಹಿ ಮಾಡಿದ ಮನವಿವೊಂದನ್ನು, ಜೊತೆಗೆ ೩೦೦ ನಾಗರಿಕರು ಸಹಿಮಾಡಿದ ಮತ್ತೊಂದು ಮನವಿಯನ್ನು ತಾವೇ ಸ್ವತಃ ಇಂಗ್ಲೆಂಡಿಗೆ ಹೋಗಿ ಪಾರ್ಲಿಮೆಂಟ್ ಸದಸ್ಯರು ಹಾಗೂ ಪ್ರವಿಕೌನ್ಸಿಲ್ ಮುಂದೆ ನಿಂತು ಸರ್ಕಾರಕ್ಕೆ ಒಪ್ಪಿಸಿದರು. ಜೊತೆಗೆ 'ಸಹಗಮನ ನಿಷೇಧ ಶಾಸನ' ಪ್ರಶಂಸನೀಯವಾಗಿದೆ ಎಂದು ಹಿಂದೂ ಮತದವರ ಪರವಾಗಿ ತಮ್ಮ ಕೃತಜ್ಞತೆಗಳನ್ನು ಸರ್ಕಾರಕ್ಕೆ ಸಮರ್ಪಿಸಿದರು ಮತ್ತು ತಮ್ಮ 'ಕೌಮುದಿ' ಪತ್ರಿಕೆಯಲ್ಲಿ ಸರ್ಕಾರದ ಕ್ರಮವನ್ನು ಶ್ಲಾಘಿಸಿದರು.[೨೯]

ರಾಜಾರಾಮ್ ಮೋಹನ್‌ರಾಯರ 'ಬ್ರಹ್ಮಸಮಾಜ' ಎಂಬ ಸಂಘಕ್ಕೆ ಪ್ರತಿಯಾಗಿ ವಿರೋಧ ಪಕ್ಷದವರು 'ಧರ್ಮಸಭಾ' ಎಂಬ ಹೆಸರಿನ ಸಂಘ ಸ್ಥಾಪಿಸಿಕೊಂಡರು. ಆ ಮೂಲಕ ಬ್ರಿಟಿಷ್ ಪಾರ್ಲಿಮೆಂಟಿಗೆ ತಮ್ಮ ಮನವಿಯನ್ನು ಸಲ್ಲಿಸಿದರು. ಕ್ರಿ.ಶ. ೧೮೩೨ ಜುಲೈ ೧೧ ರಂದು ಈ ಮನವಿ ಇಂಗ್ಲೆಂಡಿನ ಪ್ರವಿಕೌನ್ಸಿಲ್ ಮುಂದೆ ಬಂದಿತು. ಇದನ್ನು ಪರಿಷ್ಕರಿಸಿದ ಸರ್ಕಾರ ಸತಿಪದ್ಧತಿ ನಿಷೇಧದ ಪರವಾಗಿಯೇ ತೀರ್ಮಾನ ಕೈಗೊಂಡಿತು.[೩೦]

ಕ್ರಿ.ಶ.೧೮೨೯ರ ನಂತರ ಭಾರತೀಯರಲ್ಲಿ 'ಸತಿಪದ್ಧತಿ'ಯು ಒಮ್ಮೆಲೆ ನಿಂತು ಹೋಗದೇ ಅದು ಅನೇಕ ವರ್ಷಗಳವರೆಗೆ ಮುನ್ನಡೆಯಿತು. ಕ್ರಿ.ಶ.೧೮೩೦ರಲ್ಲಿ ಪಾಟ್ನಾ ಹಾಗೂ ಗಯಾಗಳಲ್ಲಿ, ಕ್ರಿ.ಶ.೧೮೬೦ರಲ್ಲಿ ಗ್ವಾಲಿಯರ್‌ನಲ್ಲಿ, ಕ್ರಿ.ಶ.೧೮೬೨ರಲ್ಲಿ ಕೀವಾದಲ್ಲಿ, ಕ್ರಿ.ಶ.೧೮೬೪ ಮತ್ತು ಕ್ರಿ.ಶ.೧೮೮೩ರಲ್ಲಿ ಉದಯ್‌ಪುರದಲ್ಲಿ, ಕ್ರಿ.ಶ.೧೮೭೬ ದಕ್ಷಿಣ ಭಾರತದ ತಿನ್ನವೆಲ್ಲಿಯಲ್ಲಿ, ಕ್ರಿ.ಶ.೧೯೧೨ ಕಲ್ಕತ್ತಾದಲ್ಲಿ ಸತಿ ಘಟನೆಗಳು ಆಚರಿಸಲ್ಪಟ್ಟವು.[೩೧] ಇಲ್ಲಿ ನಡೆದ ಹೆಚ್ಚು ಸತಿಘಟನೆಗಳು ಠಾಗೂರ್ ಮನೆತನಗಳಿಗೆ ಸಂಬಂಧಿಸಿವೆ. ಇವು ರಹಸ್ಯವಾಗಿಯೂ ನಡೆದಿವೆ. ತಿನ್ನವೆಲ್ಲಿ ಮತ್ತು ಕಲ್ಕತ್ತಾದಲ್ಲಿ ಸತಿ ಘಟನೆಗಳಂತೂ ಮನೆಯಲ್ಲಿಯೇ ನಡೆದಿರುವುದು ಸ್ಮರಣಾರ್ಹ. ಕೀವಾದ ಠಾಗೂರ್ ಸಾವನ್ನಪ್ಪಿದಾಗ ಸತಿ ಆಚರಿಸಲಿಕ್ಕೆ ಕಾರಣರಾದ ವ್ಯಕ್ತಿಗಳಿಗೆ ಬ್ರಿಟಿಷ್ ಸರ್ಕಾರ ಶಿಕ್ಷೆ ನೀಡಿರುವುದನ್ನು ಸ್ಮರಿಸಬಹುದಾಗಿದೆ.

ಕ್ರಿ.ಶ.೧೮೩೮ರಲ್ಲಿ ಉದಯಪುರದ ಮಹಾರಾಜ ಜೀವನ್‌ಸಿಂಗ್ ಮೃತನಾದಾಗ ಮತ್ತು ಕ್ರಿ. ಶ.೧೮೪೩ರಲ್ಲಿ ಜೋದಪುರದ ಮಹಾರಾಜ ಮಾನಸಿಂಗ್ ಮರಣ ಹೊಂದಿದಾಗ ಅನೇಕ ಸ್ತ್ರೀಯರು ಅವರೊಂದಿಗೆ ಚಿತೆ ಏರಿದ ಮಾಹಿತಿ ದೊರೆಯುತ್ತದೆ.[೩೨] ಕ್ರಿ.ಶ. ೧೮೬೧ ರಲ್ಲಿ ರಜಪೂತರ ಸ್ವರೂಪಸಿಂಗ್ ಸಾವನ್ನಪ್ಪಿದಾಗ ಅವನ ಪತ್ನಿಯರು ಚಿತೆ ಏರಲು ಸಿದ್ಧರಾಗಲಿಲ್ಲ. ಕೊನೆಗೆ ಆತನ ದಾಸಿಯೊಬ್ಬಳನ್ನು ಅವನೊಡನೆ ಧರ್ಮಶಾಸ್ತ್ರಗಳ ಪ್ರಕಾರ ಚಿತೆ ಏರಿಸಲಾಯಿತು.[೩೩] ಹೀಗಾಗಿ ಕ್ರಿ.ಶ. ೧೮೬೧ರ ನಂತರದಲ್ಲಿ ರಜಪೂತ ಸಮುದಾಯದಲ್ಲಿಯೂ 'ಸತಿಪದ್ಧತಿ'ಯನ್ನು ತಮ್ಮಷ್ಟಕ್ಕೆ ತಾವೇ ತಿರಸ್ಕರಿಸಿರುವುದನ್ನು ಕಾಣುತ್ತೇವೆ.

ಬ್ರಿಟಿಷ್ ಸರ್ಕಾರವು ಸತಿಪದ್ಧತಿಯನ್ನು ಹತ್ತಿಕ್ಕಲು ದೇಸಿಯ ಸಂಸ್ಥಾನಗಳ ಮೇಲೆ ಒತ್ತಾಯಪೂರ್ವಕವಾಗಿ ಸತಿ ನಿಷೇಧ ಕಾನೂನುಗಳನ್ನ ರೂಪಿಸಿದರು. ಇದರ ಕುರಿತು ಥಾಂಮ್ಸನ್ ಅಧ್ಯಯನ ನಡೆಸಿ ವಿವಿಧ ಮೂಲಗಳಿಂದ ದಾಖಲೆ ಪಡೆದು ಹೀಗೆ ವಿವರಿಸಿ ದ್ದಾನೆ.[೩೪] ಬ್ರಿಟಿಷ್ ಸರ್ಕಾರವು ಕ್ರಿ.ಶ.೧೮೪೮ ರಿಂದ ಕ್ರಿ.ಶ.೧೮೫೬ ರಲ್ಲಿ ಡಾಲ್‌ಹೌಸಿಯ ಆಡಳಿತದ ಅವಧಿಯಲ್ಲಿ ದೇಶಿಯ ಸಂಸ್ಥಾನಗಳಲ್ಲಿ ಸತಿಪದ್ಧತಿಯನ್ನು ತಡೆಗಟ್ಟಲು ಅತಿ ಹೆಚ್ಚು ಪ್ರಯತ್ನಿಸಲಾಯಿತು.[೩೫] ಇದೇ

ಅವಧಿಯಲ್ಲಿ ಅಂದರೆ, ಕ್ರಿ.ಶ. ೧೮೩೫ರಲ್ಲಿ ಅಹಮ್ಮದ್‌ನಗರದ ರಾಜನು ಮೃತನಾದಾಗ ಅವನ ಪತ್ನಿಯರು ಸತಿ ಹೋಗದಂತೆ ತಡೆಯಲು ಬ್ರಿಟಿಷ್ ಸರ್ಕಾರದ ಅಧಿಕಾರಿ ಎರಸ್ಕಿನ್ ಎಂಬಾತ ೩೦೦ ಜನರ ಬಲದೊಂದಿಗೆ ಸತಿ ಸಹಗಮನ ಪದ್ಧತಿಯನ್ನು ನಿಲ್ಲಿಸಲು ಬರುತ್ತಾನೆ. ಆದರೆ ರಾಜನ ಮಕ್ಕಳು ಬಿಲ್ಲ ಸಮುದಾಯದೊಂದಿಗೆ ಸೇರಿ ರಾತ್ರಿ ೨ ಗಂಟೆಗೆ ರಾಣಿಯರನ್ನು ಎಳೆದು ಬೆಂಕಿಗೆ ನೂಕಿ ಸಹಗಮನ ಕಾರ್ಯ ಪೂರ್ಣಗೊಳಿಸಿದನು. ಇದರ ಕ್ರೂರತೆ ಎಷ್ಟಿತ್ತು ಎಂದರೆ ಹೆಣ್ಣು ಮಕ್ಕಳ ಚಿರಾಟ, ಅಳುವಿನ ಆಕ್ರಂಧನ, ಬೆಂಕಿಯ ಜ್ವಾಲೆಗಳ ಮಧ್ಯ ಕತ್ತಿಯಿಂದ ಕತ್ತರಿಸಲ್ಪಟ್ಟ ರಾಣಿಯೊಬ್ಬಳ ಕೈ ಇರುವದು ಇಲ್ಲಿ ತಿಳಿದುಬರುತ್ತದೆ. ಮರುದಿನ ಎರಾಸ್ಕಿನ್ ಇದೇ ಕಾರಣವನ್ನು ಮುಂದಿಟ್ಟುಕೊಂಡು ರಾಜಕುಮಾರರನ್ನು ಶರಣಾಗುವಂತೆ ಮಾಡಿ ಇನ್ನೂ ಮುಂದೆ ಅಹಮ್ಮದ್ ನಗರದವರು ಯಾರು 'ಸತಿಪದ್ಧತಿ'ಯನ್ನು ಆಚರಿಸಬಾರದೆಂಬ ಕಾನೂನನ್ನು ಹೊರಡಿಸಿದನು.

ಇದೇ ಕಾರಣವನ್ನಿಟ್ಟುಕೊಂಡು ಜುನಾಘಡ, ಉದಯಪುರ, ಕಾಠೇವಾಡ, ರಾಜವೆಪ್ಲ, ಡಿಯೋಗರ್ ಮೊದಲಾದ ಸಂಸ್ಥಾನಗಳು ಸತಿಪದ್ಧತಿಯನ್ನು ನಿಷೇಧಿಸುವಂತೆ ಬ್ರಿಟಿಷ್ ಸರ್ಕಾರ ಒತ್ತಾಯಿಸಿತು. ಇದರಿಂದ ಕ್ರಿ.ಶ.೧೮೪೭ ರಿಂದ ಕ್ರಿ.ಶ. ೧೮೪೮ ರ ಅವಧಿಯಲ್ಲಿ ಪಂಜಾಬಿನ ಸಿಖ್ ರಾಜವೆಪ್ಲ, ಪಾತಿಯಾಲ, ಭಿಲಾಸ್‌ಪೂರ ಫರೀಪ್‌ಕೋತಿ ಮೊದಲಾದವುಗಳ ರಾಜರು ಸತಿಪದ್ಧತಿಯ ನಿಷೇಧಕ್ಕೆ ತಮ್ಮ ಒಪ್ಪಿಗೆ ಸೂಚಿಸಿದರು. ಹೀಗೆ ಸತಿಪದ್ಧತಿಯನ್ನು ಹತ್ತಿಕ್ಕುವಲ್ಲಿ ಕಾರ್ಯಪ್ರವೃತ್ತರಾದ ಲಾರ್ಡವಿಲಿಯಂ ಬೆಂಟಿಂಕ್‌ನಿಗೆ ಭಾರತದ ವಿವಿಧ ಪ್ರದೇಶಗಳಲ್ಲಿ ಸತಿಪದ್ಧತಿಯನ್ನು ನಾಶಮಾಡಿದ ಶ್ರೇಯಸ್ಸು ದೊರೆತರೆ, ದೇಶಿಯ ಸಂಸ್ಥಾನಗಳಲ್ಲಿ ಈ ಪದ್ಧತಿಯನ್ನು ಹತ್ತಿಕ್ಕಿದ ಶ್ರೇಯಸ್ಸು ಲಾರ್ಡಡಾಲ್‌ಹೌಸಿಗೆ ಸೇರುತ್ತದೆ.

ಕಾನೂನು ಬಾಹಿರವಾದ ಸತಿಘಟನೆಗಳ ವಿವರ

ಭಾರತ ಸ್ವತಂತ್ರಗೊಂಡ ನಂತರವು ಸತಿಘಟನೆಗಳು ಆಗಾಗ ನಡೆದ ವರದಿಗಳು ಕ್ರಿ.ಶ. ೧೯೭೮ರ ಜನವರಿ ೧೨ರಂದು ರಾಜಸ್ಥಾನದ ಶಿರ್ಥಾ ಜಿಲ್ಲೆಯ ಹಾಥಿದೆಹ್ ಹಳ್ಳಿಯಲ್ಲಿ ೫೫ ವರ್ಷದ ಸರಸ್ವತಿ ದೇವಿ ತನ್ನ ಗಂಡ ಹೀರಾಲಾಲ ಮೃತನಾಗಲು ನವವಧುವಿನಂತೆ ಸಿಂಗರಿಸಿಕೊಂಡು ಗಂಡನ ತಲೆಯನ್ನು ತೊಡೆಯ ಮೇಲೆ ಇಟ್ಟುಕೊಂಡು ನೂರಾರು ಜನರ ಎದುರಿನಲ್ಲಿಯೇ ಚಿತೆಯಲ್ಲಿ ಜೀವಂತ ಭಸ್ಮವಾದಳು.[೩೬] ಕ್ರಿ.ಶ. ೧೯೮೦ ಫೆಬ್ರವರಿ ೨೯ರಂದು ರಾಜಸ್ಥಾನದ ನಾಗಪೂರ ಜಿಲ್ಲೆಯ ನಿಮ್ಡಿ ಹಳ್ಳಿಯಲ್ಲಿ ೬೨ವರ್ಷದ 'ಸುಗಾನ್‌ಕನ್ವರ್' ಗಂಡ 'ಸುಜನಸಿಂಗ' ಮೃತನಾಗಲು ಹಳ್ಳಿಗರ ಎದುರಿನಲ್ಲಿಯೇ ಸತಿ ಹೋದಳು.[೩೭]

ಮಧ್ಯಪ್ರದೇಶದ ರಾಯಪುರ ಜಿಲ್ಲೆಯ ಖೇಡ ಎಂಬ ಹಳ್ಳಿಯಲ್ಲಿ ಆಗಸ್ಟ ೨೯ರಂದು ೫೦ ವರ್ಷದ 'ಕಥರಿಬಾಯಿ ಬೈರಗಿ' ಗಂಡ ಸಾವನ್ನಪ್ಪಲು ಆಕೆ ಸತಿಹೋಗಲು ನಿರ್ಧರಿಸಿದಳು. ಆದರೆ ಮನೆಯವರು ಇದನ್ನು ಒಪ್ಪದೇ ಕೋಣೆಯಲ್ಲಿ ಕೂಡಿ ಹಾಕಿದರು. ಮುಂದೆ ಅವಳು ತಪ್ಪಿಸಿಕೊಂಡು ಬಂದು ೩೦೦ ಜನ ಹಳ್ಳಿಗರ ಎದುರಿನಲ್ಲಿಯೇ ಚಿತೆಯಲ್ಲಿ ಜಿಗಿದು ಸತಿ ಹೋದಳು.[೩೮] ರಾಜಸ್ಥಾನದ 'ಜದ್ಲಿ' ಎಂಬ ಹಳ್ಳಿಯಲ್ಲಿ ೧೬ ವರ್ಷದ ಓಂ ಕಾನ್ವರಳು ಕ್ರಿ.ಶ. ೧೯೮೦ ಆಗಸ್ಟ ೩೦ ರಂದು ಸತಿ ಹೋದಳು. ಇವಳು ಗಂಡನ ತಲೆಯನ್ನು ತನ್ನ ತೊಡೆಯ ಮೇಲೆ ಇಟ್ಟುಕೊಂಡು ಚಿತೆಯಲ್ಲಿ ಕುಳಿತು 'ಹರಿ ಓಂ' ಎಂದು ಹೇಳಲಾರಂಭಿಸಿದಳು. ಇದನ್ನು ಕಂಡ ಜನರು ಚಿತೆಗೆ ಬೆಂಕಿ ಹೊತ್ತಿಸಿ, 'ಸತಿ ಮಾತಾಕಿ ಜೈ' ಎಂದು ಜೈಕಾರ ಹಾಕಲಾರಂಭಿಸಿದರು. ಇಲ್ಲಿ 'ಓಂಕಾನ್ವರ್'ಳು ಸಹಗಮನಗೊಂಡು ಜನರ ನಂಬಿಕೆಯಲ್ಲಿ ಗ್ರಾಮದೇವತೆಯಾದಳು. ಇದನ್ನು ಕಂಡ ರಾಜಸ್ಥಾನ ಸರ್ಕಾರ ಸತಿ ಘಟನೆಗಳ ಕುರಿತಾಗಿ ಕಾನೂನಿನ ಕ್ರಮ ತೆಗೆದುಕೊಂಡಿರುವುದನ್ನು ಇಲ್ಲಿ ಸ್ಮರಿಸಬಹುದು.[೩೯] ಮಧ್ಯಪ್ರದೇಶ ರಾಯಗಡ ಜಿಲ್ಲೆಯ ಬಾಲಸಾಪುರದಲ್ಲಿ ಸತಿಹೋಗುತ್ತಿದ್ದ 'ಮಾಯಾದೇವಿ'ಯನ್ನು ಉತ್ತರ ಪ್ರದೇಶದ ಮೈನಪುರಿ ಜಿಲ್ಲೆಯ ಮುರಾನ್ ಹಳ್ಳಿಯಲ್ಲಿ ಸತಿ ಹೋಗುತ್ತಿದ್ದ ಇನ್ನೊಬ್ಬ ವಿಧವೆಯನ್ನು ಪೋಲಿಸರು ಸತಿಯಾಗದಂತೆ ತಡೆದರು ಎಂಬ ಮಾಹಿತಿ ದೊರೆಯುತ್ತದೆ.[೪೦]

ಕ್ರಿ.ಶ.೧೯೮೦ರಲ್ಲಿ ಉತ್ತರಪ್ರದೇಶದ 'ಸೀಹ್‌ಪೆಲ್ಲೊನ್'ದಲ್ಲಿ ಸತಿಹೋಗುತ್ತಿದ್ದ 'ಹಾರಿದೇವಿ' ಯನ್ನು ತಡೆದು ಬಂಧಿಸಿ ನಂತರ ಪೋಲಿಸರು ಜಾಮೀನು ಮೇಲೆ ಬಿಡುಗಡೆಗೊಳಿಸಿದರು. ಆದರೆ ಅವಳು ಸ್ವಲ್ಪ ದಿನಗಳಲ್ಲೇ ಸತಿಹೋಗಿರುವುದರ ಕುರಿತು ಮಾಹಿತಿ ತಿಳಿದು ಬರುತ್ತದೆ.[೪೧] ಹೊಸದಿಲ್ಲಿಯಲ್ಲಿ ಕ್ರಿ. ಶ. ೧೯೮೦ ಡಿಸೆಂಬರ್ ೧ರಂದು ನಾರಾಯನಬಾಯಿ (ಸತಿದೇವಿ)ಯ ಮೆರವಣಿಗೆಯೊಂದನ್ನು ಭಕ್ತರು ಹೊರಡಿಸಿದ್ದರು. ಸತಿದೇವಿಯು ಸುಮಾರು ೬೫೦ ವರ್ಷಗಳ ಹಿಂದೆ ಸತಿ ಹೋಗಿದ್ದಳು ಎಂಬ ಮಾಹಿತಿ ದೊರೆಯುತ್ತದೆ. 'ರಾಣಿಸತಿಸರ್ವಸಂಘವು' ಸತಿದೇವಿಗೆ ಗೌರವ ಸಲ್ಲಿಸುವ ಸಲುವಾಗಿ ರಾಜಸ್ಥಾನದ 'ಜುಂಜ್‌ಹುನು'ನಲ್ಲಿ ಗುಡಿಯನ್ನು ಕಟ್ಟಿಸುವುದಾಗಿ ಸಂಘದ ಪದಾಧಿಕಾರಿ ನಟವರಲಾಲ ಗೋಯಂಕಾ ಹೇಳಿದರು ಎಂಬ ಮಾಹಿತಿ ದೊರೆಯುತ್ತದೆ.[೪೨] ಈ ರೀತಿಯ ಜನರ ನಂಬಿಕೆಯನ್ನು ಅವಲೋಕಿಸಿ ಲೋಕ ಸಭೆಯು ದಿನಾಂಕ ೩ ಡಿಸೆಂಬರ್೧೯೮೦ ರಂದು ಸತಿಪದ್ಧತಿಯನ್ನು ಪುನರುಜ್ಜೀವಿಸುವ ಪ್ರಯತ್ನಗಳನ್ನು ಮಾಡಕೂಡದು ಎಂದು ಲೋಕಸಭೆಯ ಎಲ್ಲ ಸದಸ್ಯರು ಖಂಡಿಸಿದರು. ಅಂದಿನ ಭಾರತದ ಪ್ರಧಾನಿ ಶ್ರೀಮತಿ 'ಇಂದಿರಾಗಾಂಧಿ' ಅವರು ದೃಢನಿಶ್ಚಯದಿಂದ ಹೀಗೆ ಹೇಳಿದ್ದರು. "ಈ ಪದ್ಧತಿ ಅನುಸರಿಸುವುದರ

ವಿರುದ್ಧ ತಾವು ಕ್ರಮಕೈಗೊಳ್ಳಲು ಹಿಂದೆಮುಂದೆ ನೋಡುವದಿಲ್ಲ. ಒಂದು ದುರಂತ ಚಿತ್ರಣವನ್ನು ಸಾರುವ ಒಂದು ಕೆಟ್ಟ ದೇವಾಲಯ ಕಟ್ಟಕೊಳ್ಳುವುದಕ್ಕೆ ಅನುಮತಿ ನೀಡಲಾರೆ"[೮೨] ಎಂದು ಕಾನೂನು ರೂಪಿಸುವ ಸಂಗತಿ ವಿವಿಧ ಮೂಲಗಳಿಂದ ತಿಳಿದುಬರುತ್ತದೆ.

ಹೀಗೆ ಕಾನೂನು ಬಾಹಿರ ಸತಿಘಟನೆಗಳು ಅತ್ಯಂತ ರಹಸ್ಯವಾಗಿ ನಡೆದಿದ್ದು ಇವು ಕ್ರಮೇಣ ಬಹು ಅಪರೂಪವಾಗಿ ಕೊನೆಗೆ ಸತಿ ಘಟನೆಗಳು ಇಲ್ಲವೆನ್ನುವಷ್ಟರ ಮಟ್ಟಿಗೆ ನಿಂತು ಹೋದವು. ಆದರೆ ಆಚರಣೆಯ ಕರಿ ನೆರಳು ಹಾಗೆಯೇ ಉಳಿಯಿತು. ಇಪ್ಪತ್ತನೆಯ ಶತಮಾನದ ಈಗಲೂ ಸತಿಯ ಅಪರೂಪದ ಘಟನೆಗಳು ಅಲ್ಲಲ್ಲಿ ನಡೆದಿರುವ ಕುರಿತು ವರದಿಗಳಿವೆ. ಉತ್ತರ ಭಾರತದಲ್ಲಿ ಮಹಾಸತಿಯ ಗುಡಿಯ ಸ್ಥಾಪನೆಗೆ ಒತ್ತಾಯಿಸಿದ ಸಂಪ್ರದಾಯಸ್ಥ ಹೆಣ್ಣುಮಕ್ಕಳ ಕೂಗನ್ನು ಪಾರ್ಲಿಮೆಂಟ್‌ನಲ್ಲಿ ಅತ್ಯಂತ ತೀವ್ರವಾಗಿ ವಿರೋಧಿಸಿರುವುದನ್ನು ಇಲ್ಲಿ ನೆನೆಯಬಹುದು. ಹೀಗೆ ನಡೆದ ಸತಿ ಘಟನೆಗಳು ವೈಜ್ಞಾನಿಕ ಬದುಕನ್ನು ಮೈಗೂಡಿಸಿಕೊಳ್ಳುತ್ತಿರುವ ಆಧುನಿಕ ಸಂದರ್ಭದಲ್ಲಿ ಅತಿ ವಿರಳವಾಗಿ ಗತಿಸಿವೆಯಾದರೂ, ಸಂಪ್ರದಾಯಿಕ ನಂಬಿಕೆಯಿರುವ ಜನರು ಸಹಗಮನ ಪದ್ಧತಿಯ ಕೆಲವು ನಂಬಿಕೆಗಳನ್ನು, ಸೌಭಾಗ್ಯದ ಸಂಕೇತಗಳನ್ನು ಜೀವಂತವಾಗಿರಿಸಿ ಕೊಂಡಿದ್ದಾರೆ ಎಂದು ತಿಳಿದು ಬರುತ್ತದೆ.

ಅಡಿಟಿಪ್ಪಣಿಗಳು

೧. ಬಿ.ಎಸ್.ಶೇಠೆ, ಕರ್ನಾಟಕದಲ್ಲಿ ಸತಿಪದ್ಧತಿ, ಪು.೨೩(ಉಧೃತ), ಬಾಣನ ಕಾದಂಬರಿ, ಪೂರ್ವಾರ್ಧ, ಪು.೩೦೮

೨. ಎಸ್.ಆಯ್.ಆಯ್. ಕಾಲ, ೧೩-೧೪ನೇ ಶತಮಾನ

೩. ಎ. ಎಸ್.ಅಲ್ತೇಕರ್, ದಿ ಪೊಜಿಷನ್ ಆಫ್ ವುಮೆನ್ ಇನ್ ಹಿಂದೂ ಸಿವಲೇಜೇಶನ್, ಪು.೧೨೫

೪. ಸಾಲೆತೊರೆ, ಸೋಸಿಯಲ್ ಆ್ಯಂಡ್ ಪೋಲಿಟಿಕಲ್ ಲೈಫ್ ಇನ್ ದಿ ವಿಜಯನಗರ ಎಂಫಾಯರ್, ಪು.೧೨೪

೫, ಅದೇ, ಪು.೧೨೪

೬. ಎ.ಎಸ್.ಅಲ್ತೇಕರ್, ಪು.೧೨೪

೭. ಎ.ಎಸ್.ಅಲ್ತೇಕರ್, ಪು.೧೨೪ ಉಧೃತ: ಬಸವರಾಜ ಕಲ್ಗುಡಿ, ಮಹಾಸತಿ ಆಚರಣೆ ಒಂದು ಅಧ್ಯಯನ, ಪು.೩೦

೮. ಥಾಂಮಸ್ಸ್ ಪು.೨೭೮ ಉಧೃತ: ಬಸವರಾಜ ಕಲ್ಗುಡಿ, ಮಹಾಸತಿ ಆಚರಣೆ: ಒಂದು ಅಧ್ಯಯನ, ಪು.೩೧

೯. ಎ.ಎಸ್.ಅಲ್ತೇಕರ್, ದಿ ಪೊಜಿಶನ್ ಆಫ್ ವುಮೆನ್ ಇನ್ ಹಿಂದೂ ಸಿವಲೈಜೇಶನ್, ಪು.೧೨೮

೧೦. ಎಚ್.ಎಲ್.ನಾಗೇಗೌಡ(ಸಂ) ಪ್ರವಾಸಿ ಕಂಡ ಇಂಡಿಯಾ, ೧೯೬೪, ಪು.೨೩೫

೧೧. ಕೆ.ವಿ.ಪುಟ್ಟಪ್ಪ(ಸಂ) ಯುಗಯಾತ್ರಿ ಭಾರತೀಯ ಸಂಸ್ಕೃತಿ, ಪು.೪೮೧

೧೨. ಅದೇ, ಪು.೪೮೧

೧೩. ಮಿರರ್ ಜನವರಿ, ೧೯೮೧, 'ಹೌ ಸತಿ ವಾಜ್ ಬ್ಯಾನ್ಡ,' ವಾಯ್.ಎಸ್. ಪು.೩೦

೧೪. ಇಲು ಸ್ಟ್ರೇಟೆಡ್ ವೀಕ್ಲಿ ಆಫ್ ಇಂಡಿಯಾ, ೧೮–೨೪, ೧೯೮೧ 'ದಿ ಓರಿಜನ್ ಆಫ್ ಸತಿ: ಇಕ್ಬಾಲ್ ಕಾಲ್ ಪು.೨೯

೧೫. ಎಚ್.ಎಲ್.ನಾಗೇಗೌಡ(ಸಂ), ಪ್ರವಾಸಿ ಕಂಡ ಇಂಡಿಯಾ, ಸಂ–೨, ಪು.೪೯೨

೧೬. ಕೆ.ವಿ.ಪುಟ್ಟಪ್ಪ(ಸಂ), ಯುಗಯಾತ್ರಿ ಭಾರತೀಯ ಸಂಸ್ಕೃತಿ, ಪು.೪೮೧

೧೭. ಅದೇ, ಪು.೪೮೧

೧೮. ಅದೇ, ಪು.೪೮೧

೧೯. ಎಚ್.ಎಲ್.ನಾಗೇಗೌಡ(ಸಂ), ಪ್ರವಾಸಿ ಕಂಡ ಇಂಡಿಯಾ, ಸಂ–೫, ಪು.೨೨೪

೨೦. ಡಬ್ಲ್ಯೂ.ಹೆಚ್.ಹನಮಂತಪ್ಪ, ನವಭಾರತ ಪಿತ ರಾಜಾರಾಮ ಮೋಹನರಾಯ, ಪು.೧೬೯

೨೧. ಅದೇ, ಪು.೧೬೯

೨೨. ಅದೇ, ಪು.೧೬೯

೨೩. ಅದೇ ಪು.೧೬೯

೨೪. ಥಾಂಮ್ಸನ್ ಎಡ್ವರ್ಡ ಸುತ್ತೆ, ಲಂಡನ್, ೧೯೨೬ ಅಧ್ಯಾಯ–೬

೨೫. ಬಸವರಾಜ ಕಲ್ಗುಡಿ, ಮಹಾಸತಿ ಆಚರಣೆ: ಒಂದು ಅಧ್ಯಯನ, ಪು.೩೯ ಉಧೃತ: ಅಲ್ತೇಕರ ಎ.ಎಸ್., ಪು.೧೩೯

೨೬. ಅದೇ, ಪು.೩೯ ಉದ್ಧೃತ: ಥಾಂಮ್ಸನ್ ಎಡ್ವರ್ಡ್ ಸತಿ, ಲಂಡನ್, ೧೯೨೬ ಅಧ್ಯಾಯ–೬, ಪು.೨೯೪

೨೭. ಬಸವರಾಜ ಕಲ್ಗುಡಿ, ಮಹಾಸತಿ ಆಚರಣೆ: ಒಂದು ಅಧ್ಯಯನ, ಪು.೪೧;

೨೮. ಎ. ಎಸ್.ಅಲ್ತೇಕರ್, ದಿ ಪೊಜಿಷನ್ ಆಫ್ ವುಮೆನ್ ಇನ್ ಹಿಂದೂ ಸಿವಲೈಜೇಶನ್, ಪು.೧೪೧

೨೯. ಅದೇ, ಪು.೧೪೧

೩೦. ಅದೇ, ಪು.೧೭೫–೧೭೭

೩೧. ಸತಿ, ಎಡ್ವರ್ಡ್ ಥಾಮ್ಸನ್ ಅಧ್ಯಾಯ ೯

೩೨. ಎ. ಎಸ್.ಅಲ್ತೇಕರ್, ದಿ ಪೊಜಿಷನ್ ಆಫ್ ವುಮೆನ್ ಇನ್ ಹಿಂದೂ ಸಿವಲೈಜೇಶನ್, ಪು.೧೪೧

೩೩. ಅದೇ, ಪು.೧೪೧–೧೪೨

೩೪. ಥಾಮ್ಸನ್ ಎಡ್ವರ್ಡ್, ೧೯೨೬, ಅಧ್ಯಾಯ. ೦೮, 'ದಿ ಸಪ್ರೇಸಿಂಗ್ ಆಫ್ ಸತಿ ಇನ್‌ನೇಟಿವ್ ಸ್ಟೇಟ್ಸ್

೩೫. ಸತಿ: ಅಧ್ಯಾಯ 'ದಿ ಸಪ್ರೇಸಿಂಗ್ ಆಫ್ ಸತಿ ಇನ್‌ನೇಟಿವ್ ಸ್ಟೇಟ್ಸ್' ಉದ್ಧೃತ: ಬಿ.ಎಸ್.ಶೇರೆ ಕರ್ನಾಟಕದಲ್ಲಿ ಸತಿಪದ್ಧತಿ, ಪು.೩೫

೩೬. ಎಂ. ವಿ. ಕಾಮತ್, ದಿ ಇಲುಸ್ಟ್ರೇಟೆಡ್ ವೀಕ್ಲಿ ಆಫ್ ಇಂಡಿಯಾ, ೧೯೮೦, ಸತಿ ಶೇಮ್ ಆಫ್ ಎ ನೇಶನ್, ಪು.೨೦–೨೩

೩೭. ಯೋಗೇಶ ಶರ್ಮಾ, ಮಿರರ್, ೧೯೮೦ ಜನವರಿ ೧೦ 'ದಿ ರೀಟರ್ನ ಆಫ್ ಸತಿ' ಗೀತಾ ನಾರಾಯಣನ್, ಪು.೧೯

೩೮. ದಿ ಇಲುಸ್ಟ್ರೇಟೆಡ್ ವೀಕ್ಲಿ ಆಫ್ ಇಂಡಿಯಾ , ೧೯೮೧, ಜನವರಿ ೧೮, 'ದಿ ಓರಿಜಿನಲ್ ಆಫ್ ಸತಿ' ಇಕ್ಬಾಲ್ ಕೌಲ್, ಪು.೨೭

೩೯. ಮಿರರ್, ೧೯೮೧ ಜನವರಿ ೧೦ 'ದಿ ರೀಟರ್ನ ಆಫ್ ಸತಿ' ಗೀತಾ ನಾರಾಯಣನ್, ಯೋಗೇಶ ಶರ್ಮಾ, ಪು.೧೯.

೪೦. ದಿ ಇಲುಸ್ಟ್ರೇಟೆಡ್ ವೀಕ್ಲಿ ಆಫ್ ಇಂಡಿಯಾ,೧೯೮೧ ಜನೇವರಿ ೧೮–೨೪ 'ದಿ ಓರಿಜಿನಲ್ ಆಫ್ ಸತಿ' ಇಕ್ಬಾಲ್ ಕೌಲ್, ಪು.೨೭

೪೧. ಮಿರರ್, ೧೯೮೧, ಜನವರಿ 'ದಿ ರೀಟರ್ನ ಆಫ್ ಸತಿ' ಗೀತಾ ನಾರಾಯಣನ್, ಯೋಗೇಶ ಶರ್ಮಾ, ಪು.೧೯

೪೨. ಸಂಡೇ ಸ್ಟ್ಯಾಂಡರ್ಡ್ ಮ್ಯಾಗಝೀನ್, ಜನವರಿ ೧೧, ೧೯೮೧

೪೩. ಸಂಯುಕ್ತ ಕರ್ನಾಟಕ ಸಾಪ್ತಾಯಿಕ ಸೌರಭ, ಪು.ಸಂ.೧ ಡಿಸೆಂಬರ್ ೧೯೮೦, ಸತಿಪದ್ಧತಿಯ ಪುನರುಜ್ಜೀವನ ವಿವರಗಳಿಗಾಗಿ ಸಂಯುಕ್ತ ಕರ್ನಾಟಕ ೪ ಮತ್ತು ೫ ಡಿಸೆಂಬರ್ ೧೯೮೦

ಅಧ್ಯಾಯ : ಏಳು

ಸಮಾರೋಪ

೭.೧. ಅಧ್ಯಯನದ ಫಲಿತಗಳು

೭.೨. ಮುಂದಿನ ಅಧ್ಯಯನದ ಹೊಸ ಸಾಧ್ಯತೆಗಳು

ಅಧ್ಯಾಯ : ಏಳು

ಸಮಾರೋಪ

ಆಧುನಿಕ ಪೂರ್ವ ಸಮಾಜ ಕೆಲವು ಮೌಲ್ಯಗಳನ್ನು ಆದರ್ಶಗಳನ್ನು ತನ್ನಲ್ಲಿ ಅಳವಡಿಸಿ ಕೊಂಡು ಆಚರಿಸುತ್ತಿದ್ದಿತು. ಈ ವಿವರಗಳನ್ನು ಶಾಸನಗಳು, ಸ್ಮಾರಕಗಳು, ಸಾಹಿತ್ಯ ಕೃತಿಗಳು, ಕೈಫಿಯತ್ತುಗಳು, ವಿದೇಶಿ ಪ್ರವಾಸಿಗರ ವರದಿಗಳು ಉಲ್ಲೇಖಿಸುತ್ತವೆ. ಅಂತಹ ಆದರ್ಶಗಳಲ್ಲಿ 'ಸತಿಪದ್ಧತಿ' ಎಂಬ ಆಚರಣೆಯು ಒಂದು ಮೌಲ್ಯವಾಗಿ ಪ್ರಚಾರದಲ್ಲಿತ್ತು. ಆಯ್ದ ಆಕರಗಳ ಅಧ್ಯಯನ ಹಾಗೂ ಕ್ಷೇತ್ರ ಕಾರ್ಯದ ಮೂಲಕ 'ಸತಿಪದ್ಧತಿ'ಗೆ ಸಂಬಂಧಿಸಿದ ಮಹಾಪ್ರಬಂಧ ಮೂಡಿ ಬಂದಿದೆ. ಇದು ಮಹಾಸತಿಗೆ ಸಂಬಂಧಿಸಿದ ಸಮಗ್ರ ಮಾಹಿತಿಯನ್ನು ಒದಗಿಸುವುದರೊಂದಿಗೆ ಅನೇಕ ಹೊಸ ಶೋಧಗಳನ್ನು ಒಳಗೊಂಡಿದೆ.

ಮಹಾಪ್ರಬಂಧದ ಆರಂಭದ ಹಂತದಲ್ಲಿ ಮೌಲ್ಯಗಳನ್ನು ಆದರ್ಶಗಳನ್ನು ಕುರಿತು ಚರ್ಚಿಸುತ್ತಾ ಇವುಗಳ ನಡುವೆ ಇರುವ ವ್ಯತ್ಯಾಸವನ್ನು ಸ್ಪಷ್ಟಗೊಳಿಸುತ್ತಾ ಅವುಗಳ ಕಾರಣಗಳನ್ನು ಕುರಿತು ವಿವರಿಸಲಾಗಿದೆ. ಅಲ್ಲದೆ ಮಹಾಸತಿಗೆ ಸಂಬಂಧಿಸಿದ ಉದಾಹರಣೆಗಳೊಂದಿಗೆ ಶಾಸನಗಳು, ಪ್ರಾಚೀನ ಕನ್ನಡ ಕಾವ್ಯಗಳು, ಮಧ್ಯಕಾಲೀನ ಸಾಹಿತ್ಯ ಕೃತಿಗಳು, ಜನಪದ ಸಾಹಿತ್ಯ, ಸ್ಮಾರಕಗಳು ವಿದೇಶಿ ಪ್ರವಾಸಿಗರ ವರದಿಗಳು, ಕೈಫಿಯತ್ತುಗಳ ಆಧಾರದಿಂದ ಪರಿಚಯಿಸಲಾಗಿದೆ.

ಆಧುನಿಕ ಪೂರ್ವ ಕನ್ನಡ ಸಾಹಿತ್ಯದಲ್ಲಿ ಸಾಂಸ್ಕೃತಿಕ ಮೌಲ್ಯವಾಗಿ ಗುರುತಿಸಿಕೊಂಡ ಮಹಾಸತಿ ಆಚರಣೆಯ ಸ್ವರೂಪ, ಅದರ ಪ್ರಕಾರಗಳು, ಕಾರಣಗಳು, ಆಚರಣೆಯ ವಿಧಾನಗಳು, ಸಾಹಿತ್ಯದಲ್ಲಿ ಸತಿಪದ್ಧತಿಯ ನಿರ್ವಚನ, ಸಾಮಾಜಿಕ ಸಂದರ್ಭ ಹಾಗೂ ಕಾನೂನು ಪ್ರಕ್ರಿಯೆಗಳನ್ನು ಕುರಿತು ವಿವರವಾಗಿ ಚರ್ಚಿಸಲಾಗಿದೆ. ಈ ಆಚರಣೆಗೆ ಪುರೋಹಿತ ಶಕ್ತಿಗಳು, ಪ್ರಭುಶಕ್ತಿಗಳು ಮೂಲ ಪ್ರೇರಕವಾಗಿವೆ. ಜೊತೆಗೆ ಮಹಿಳೆಯರ ಸ್ವರ್ಗದ ಪರಿಕಲ್ಪನೆ, ಪಾತಿವ್ರತ್ಯ, ಗಂಡನ ಮೇಲಿನ ವ್ಯಾಮೋಹ, ಮನೆತನದ ಪ್ರತಿಷ್ಠೆಗಳು ಪ್ರಚೋದಕ ಶಕ್ತಿಗಳಾಗಿ ಕೆಲಸ ಮಾಡಿರುವುದು

ಸ್ಪಷ್ಟವಾಗಿ ಕಂಡು ಬರುತ್ತದೆ. ಈ ಎಲ್ಲ ವಿವರಗಳನ್ನು ಈ ಪ್ರಬಂಧ ದಾಖಲಿಸಿದೆ. ಸತಿಪದ್ಧತಿಯನ್ನು ಕನ್ನಡ ಕಾವ್ಯಗಳು, ದಾಖಲು ಸಾಹಿತ್ಯ, ಮೌಖಿಕ ಸಾಹಿತ್ಯ, ಹಾಗೂ ಸತಿಪದ್ಧತಿಯ ಸಾಮಾಜಿಕ ಹೋರಾಟ ಹಾಗೂ ಕಾನೂನು ಪ್ರಕ್ರಿಯೆಗಳೆಂದು ವಿಷಯವನ್ನು ವಿಂಗಡಿಸಿಕೊಂಡು ಅಧ್ಯಯನ ಕ್ಕೊಳಪಡಿಸಿ ವಿಶ್ಲೇಷಣಾತ್ಮಕ ಮತ್ತು ವ್ಯಾಖ್ಯಾನಾತ್ಮಕ ಸಂಶೋಧನೆಯ ತತ್ವಗಳಲ್ಲಿ ಮುಂದುವರೆದು ಕಂಡುಕೊಂಡಂತಹ ಫಲಿತಗಳನ್ನು ಇಲ್ಲಿ ದಾಖಲಿಸಲಾಗಿದೆ.

ಧಾರ್ಮಿಕ ಕಾರಣಕ್ಕಾಗಿ ನಡೆಯುವ ಇಂತಹ ಆಚರಣೆಗಳು ಸಾಮಾನ್ಯವಾಗಿ ಎಲ್ಲ ಮತ ಧರ್ಮಗಳಲ್ಲೂ ಇವೆ. ಭಾರತದಲ್ಲಿ ಕಂಡು ಬರುವ ಪ್ರಾಚೀನ ಮತ ಧರ್ಮಗಳಾದ ಶೈವ ವೀರಶೈವ, ಜೈನ ಧರ್ಮಗಳಲ್ಲಿ ಅಂದು ಅಸ್ತಿತ್ವದಲ್ಲಿದ್ದ ಸತಿಪದ್ಧತಿಯ ವಿವಿಧ ವಿಧಾನಗಳನ್ನು ಆಚರಣೆಯ ಸ್ವರೂಪವನ್ನು ಶಾಸನಗಳು, ಸಾಹಿತ್ಯ ಕೃತಿಗಳು, ಸ್ಮಾರಕಗಳು, ವಿದೇಶಿ ಪ್ರವಾಸಿಗರ ವರದಿಗಳ ಆಧಾರದಿಂದ ಸಮಗ್ರವಾಗಿ ಕಟ್ಟಿಕೊಡಲಾಗಿದೆ.

ಪ್ರಾಚೀನ ಕಾಲದಿಂದಲೂ ಹೆಣ್ಣಿನ ಬದುಕು ಮತ್ತು ಸ್ಥಾನಮಾನಗಳು ವಿರೋದಾಭಾಸಗಳಿಗೆ ಒಳಗಾಗಿಯೇ ಬೆಳೆದುಕೊಂಡು ಬಂದಿದೆ. ಬದುಕು ಹಸನಾಗಲು ಭೂಮಿ ಸಂತೃಪ್ತಿಯಿಂದಿರಲು ಹೆಣ್ಣು ಪೂಜಿಸಲ್ಪಡಬೇಕು ಎಂಬುದು ಒಂದು ಅಭಿಪ್ರಾಯವಾದರೆ, 'ಸ್ತ್ರೀ' ಸ್ವಾತಂತ್ರ್ಯಕ್ಕೆ ಅರ್ಹಳಲ್ಲ ಎಂಬ ಮಾತು ಮತ್ತೊಂದು ಕಡೆ ಕಾಣಿಸುತ್ತದೆ. ಪತಿವ್ರತೆಯರನ್ನು ಸೃಷ್ಟಿಮಾಡಿ ಅವರಿಗೊಂದು ದೊಡ್ಡ ಸ್ಥಾನವನ್ನು ಕಲ್ಪಿಸಿಕೊಟ್ಟು ವಿಶೇಷಣಗಳನ್ನು ಹಚ್ಚಿದ ಸಮಾಜದಲ್ಲಿಯೇ ಹೆಣ್ಣು ಅನಾದರಕ್ಕೊಳಗಾಗಿ ಹೇಗೆಂದರೆ ಹಾಗೆ ದುರುಪಯೋಗಗೊಂಡು, ಭೋಗದ ವಸ್ತುವಾಗಿ ಸಾರ್ವಜನಿಕ ಹಿತಕ್ಕಾಗಿ ಲೌಖಿಕ ಹಾಗೂ ಅಲೌಖಿಕ ಕಾರಣಗಳನ್ನು ಮುಂದಿಟ್ಟುಕೊಂಡು ಸಹಗಮನ, ಅನುಗಮನ, ಸಮಾಧಿಸತಿ, ಜೋಹರ್ ಪದ್ಧತಿಯಂತಹ ಆಚರಣೆಗಳ ಮೂಲಕ ಆತ್ಮಬಲಿದಾನ ಮಾಡಿಕೊಂಡಿದ್ದಾರೆ. ಈ ರೀತಿ ಸ್ತ್ರೀಯರ ಮೇಲೆ ಸಾಕಷ್ಟು ದಾಳಿ ಮಾಡಿರುವ ಸಂಗತಿಗಳು ಇತಿಹಾಸದುದ್ದಕ್ಕೂ ಚಾಲ್ತಿಯಲ್ಲಿದ್ದು, ಸುಮಾರು ಎರಡು ಸಾವಿರ ವರ್ಷಗಳ ಇತಿಹಾಸ ಹೊಂದಿದೆ.

ಈ ಪದ್ಧತಿಯ ಮೂಲಕ ಸ್ತ್ರೀಯರು ತಮ್ಮ ಉದಾತ್ತ ಮನೋಭಾವನೆಯಿಂದ ಸಮಾಜದ ಸಮುದಾಯದ ಹಿತಕ್ಕಾಗಿ ತಮ್ಮನ್ನು ತಾವು ಬಲಿಕೊಟ್ಟುಕೊಂಡಿದ್ದಾರೆ. ಕೆಲವು ಮುಗ್ಧ ಸ್ತ್ರೀಯರು ತಮ್ಮ ಮನೆತನ ಸಮಾಜದ ಘನತೆಗಾಗಿ ಬಲಿಯಾಗಲು ಸಿದ್ಧರಾಗಿ ಬಂದರೆ, ಇನ್ನೂ ಕೆಲವು ಸ್ತ್ರೀಯರು ಸಾಂಪ್ರದಾಯಿಕ ಚೌಕಟ್ಟಿನಲ್ಲಿ ಕಟ್ಟಿಹಾಕಿ ಕುಟುಂಬ ಹಾಗೂ ಸಮಾಜದ ಜನರ ನಂಬಿಕೆಯನ್ನು ಘನತೆಯನ್ನು ಉಳಿಸಿಕೊಳ್ಳುವುದಕ್ಕಾಗಿ ಒತ್ತಾಯ ಪೂರ್ವಕವಾಗಿ ಬಲಿಯಾಗಿದ್ದಾರೆ. ಇದಕ್ಕೆ ಅವರಲ್ಲಿರುವ ಮೂಢನಂಬಿಕೆಗಳು ಪ್ರಚೋಧನೆ ನೀಡಿರುವುದು ಕಂಡುಬರುತ್ತದೆ.

ವೈದಿಕಧರ್ಮ ವಿದ್ಯೆ ಮತ್ತು ಧರ್ಮ ಎರಡರಲ್ಲೂ ಹೆಣ್ಣನ್ನು ಹೊರಗಿಟ್ಟರೆ, ಜೈನಧರ್ಮ ಹೆಣ್ಣು ಮುಕ್ತಿ ಪಡೆಯಬೇಕಾದರೆ ಗಂಡಾಗಿ ಹುಟ್ಟಬೇಕೆಂದು ಹೇಳಿ ಗಂಡಿನ ಪ್ರಾಮುಖ್ಯತೆಯನ್ನು ಮತ್ತಷ್ಟು ಭದ್ರಗೊಳಿಸಿತು. ಈ ರೀತಿಯ ಧರ್ಮ ಮತ್ತು ಸಾಮಾಜಿಕ ಆಚರಣೆಗಳ ಜೊತೆ ಜನತೆಯ ಅಂಧಕಾರ, ಮೌಢ್ಯತೆ, ಅಜ್ಞಾನದಿಂದ ನರಬಲಿಯ ಮೂಲಕ ಸ್ತ್ರೀಯರ ಆತ್ಮಬಲಿದಾನವಾಯಿತು. ಶೈವ ವೀರಶೈವರಂತೆ ಜೈನಧರ್ಮದವರಲ್ಲೂ ಸಮಾಧಿ ಮರಣ ಅಥವಾ ಸಮಾಧಿಸತಿ ಪದ್ಧತಿಯು ಅಸ್ತಿತ್ವದಲ್ಲಿದ್ದು, ಇವರು ತಮ್ಮ ಆತ್ಮಕ್ಕೆ ಸಾವಿಲ್ಲವೆಂದು ಹೇಳುತ್ತಾರೆ. ಆದರೆ ದೇಹವನ್ನು ಜೀರ್ಣಗೊಳಿಸಿ ತ್ಯಜಿಸುತ್ತಾರೆ. ಜೈನರಲ್ಲಿ ಕೆಲವರು ಸಮಾಧಿ ಮರಣವನ್ನು ಪಡೆದುಕೊಂಡಿದ್ದಾರೆ. ಜೀವ ಜಂತುಗಳ ಮೇಲೆ ದಯೆಯಿರಬೇಕು ಎಂದು ಬೋಧಿಸುವ ಧರ್ಮಗಳು ಜೀವಂತವಾಗಿ ಹೆಂಗಸರನ್ನು ಸಮಾಧಿ ಮಾಡುವ, ಸುಡುವ ಪದ್ಧತಿಗಳನ್ನೊಳಗೊಂಡಿರುವ ವಿವರಗಳನ್ನು ಈ ಪ್ರಬಂಧದಲ್ಲಿ ವಿವರಿಸಲಾಗಿದೆ.

ಪ್ರಸ್ತುತ ಸಂದರ್ಭದಲ್ಲಿ ಮಾಸ್ತಿಯು ಫಲವತ್ತತೆಗೆ ಪ್ರತೀಕವಾಗಿ, ಮಾತೃ ದೈವತವಾಗಿ ಪೂಜೆಗೊಳ್ಳುತಿದ್ದಾಳೆ. ದೈವಸ್ವರೂಪಿಯಾದ ಇವಳ ಹಿಂದಿನ ಘಟನೆ ಕುರಿತ ವಿವರಗಳು ಪ್ರಾಮುಖ್ಯತೆಯನ್ನು ಕಳೆದುಕೊಂಡಿವೆ ಗಂಡನ ಹಿಂದೆ ದಹನವಾಗಿ ಆ ಕಾರಣದಿಂದ ಸ್ವರ್ಗ ಸೇರಿದವಳು ಎನ್ನುವ ಆಲೋಚನೆಗೆ ಇಲ್ಲಿ ಬೆಲೆ ಹಾಗೂ ಪ್ರಾಶಸ್ತ್ಯವಿಲ್ಲ. ಸಂಸ್ಕೃತಿಯ ಸತ್ವಹೀನತೆಯ ಪ್ರತೀಕವಾದ ಇಂಥ ಆಲೋಚನೆ ಆಚರಣೆಗಳು ಇಲ್ಲಿ ಬೇರೂರದೇ ನಶಿಸಿ ಹೋಗಿರುವುದು ಚರಿತ್ರೆಯಲ್ಲಿ ಮೌಲ್ಯಗಳ ಪುನರುತ್ಥಾನದ ಕಥೆಯನ್ನೇ ಹೇಳುತ್ತವೆ.

ಹೀಗೆ ಪ್ರಾಚೀನ ಕನ್ನಡ ಸಾಹಿತ್ಯದ ಕಾಲ ಹೆಣ್ಣನ್ನು ಭೋಗವಸ್ತು, ಅಪಹರಿಸುವ ವಸ್ತು, ಕಾಣಿಕೆ ಕೊಡುವ ವಸ್ತು ಎಂದು ಭಾವಿಸಿದ್ದರಿಂದ ಅವಳ ಮಾನಸಿಕ ಸ್ಥಿತಿಯ ಬಗ್ಗೆ ಹರಿದ ಗಮನ ತೀರ ಅತ್ಯಲ್ಪ. ಹೆಣ್ಣು ವಿನಯ ವಿಧೇಯತೆಗಳ ಮೂರ್ತಿಯಾಗಿ, ಗಂಡು ಮಕ್ಕಳನ್ನು ಹೆರುವ ತಾಯಿಯಾಗಿ, ಅವಳು ವಿಧಿ ನಿಷೇಧಗಳ ಸರ್ಪಗಾವಲಿನಲ್ಲಿಯೇ ಜೀವಿಸುವಂತಾಯಿತು. ಇಂತಹ ನಿಷೇಧಗಳನ್ನು ಮೀರಿದವರ ಬಗ್ಗೆ ಇರುವ ತೆಗಳಿಕೆಗಳು ಸರ್ಪಗಾವಲನ್ನು ಮೀರಿ ಬದುಕುವ ಮನುಷ್ಯನ ಮೂಲ ಪ್ರವೃತ್ತಿಯನ್ನು ತೋರಿಸುತ್ತದೆ. ಒಟ್ಟಾರೆ ಈ ರೀತಿಯ ಆತ್ಮ ಬಲಿದಾನಗಳ ಹಿಂದೆ ಉಗ್ರಭಕ್ತಿ, ಮೋಕ್ಷಾಪೇಕ್ಷೆ, ಸ್ವರ್ಗಲಾಭ, ಅಧಿಕಾರ, ಸಂಪತ್ತಿನ ಆಸೆ ಕೆಲಸ ಮಾಡಿದೆ. ಕೆಲವೊಮ್ಮೆ ಪ್ರೀತಿ, ನಿಷ್ಠೆ, ಬಕ್ತಿ, ಅಭಿಮಾನ, ಸತ್ಯ, ಧರ್ಮ, ತ್ಯಾಗದಂತಹ ಗುಣಗಳ ಕಾರಣದಿಂದ ಇಂಥ ಆಚರಣೆಗಳು ನಡೆದುಕೊಂಡು ಬಂದಿವೆ. ಇದಕ್ಕೆ ಪ್ರೇರಕ ಶಕ್ತಿಗಳಾಗಿ ಪುರೋಹಿತರು, ಪ್ರಭುವರ್ಗದವರು ಜೊತೆಗೆ ಮೂಢನಂಬಿಕೆಗಳು ಕೆಲಸ ಮಾಡಿವೆ. ಈ ರೀತಿ

ಆತ್ಮಬಲಿದಾನ ಮಾಡಿಕೊಂಡವರು ಎಲ್ಲ ವರ್ಗಗಳಿಗೂ ಸಂಬಂಧಿಸಿದ್ದಾರೆ ಎಂಬುವುದು ಅಧ್ಯಯನದಿಂದ ತಿಳಿದು ಬರುತ್ತದೆ.

ಪ್ರಾಚೀನ ಕಾಲದ ಈ ಮೌಲ್ಯಗಳು ಆಧುನಿಕ ಸಂದರ್ಭದಲ್ಲಿ ಪರಿಷ್ಕೃತಗೊಂಡಿದ್ದು, ಕಾನೂನಿನ ಮೂಲಕ ನಿರ್ಭಂಧಿಸಲ್ಪಟ್ಟಿವೆ. ಆದ್ದರಿಂದ ಆಧುನಿಕ ಜನತೆ ಇಂದು ಮೌಢ್ಯತೆಯಿಂದ ಕೂಡಿದ ಆತ್ಮಬಲಿದಾನಗಳನ್ನು ಅನುಸರಿಸುತ್ತಿಲ್ಲವಾದರೂ, ಅಲ್ಲೊಂದು ಇಲ್ಲೊಂದು ಆಚರಣೆಗಳು ಧರ್ಮ, ಪಾತಿವ್ರತ್ಯ, ಸಾಮಾಜಿಕ ಆದರ್ಶ, ಸಾಂಪ್ರದಾಯಿಕ ನಂಬಿಕೆಯಂತವುಗಳ ಪ್ರೇರಣೆ ಪಡೆದು ಆತ್ಮಬಲಿದಾನವಾಗುತ್ತಿರುವುದು ಒಂದು ವಿಪರ್ಯಾಸವೇ ಆದರೂ ಶಿಕ್ಷಣದ ಉನ್ನತೀಕರಣ ದಿಂದಾಗಿ ಇಂತಹ ಮೌಢ್ಯತೆಗಳು ಸಮಾಜದಿಂದ ಕಣ್ಮರೆಯಾಗುತ್ತಿರುವುದು ಸಂತೋಷದ ಸಂಗತಿಯಾಗಿದೆ.

ಸಂಶೋಧನ ಫಲಿತಗಳು

'ಆಧುನಿಕ ಪೂರ್ವ ಕನ್ನಡ ಸಾಹಿತ್ಯದಲ್ಲಿ ಸತಿಪದ್ಧತಿ' ಎಂಬ ಪ್ರಸ್ತುತ ಸಂಶೋಧನಾ ವಿಷಯಕ್ಕೆ ಸಂಬಂಧಿಸಿದಂತೆ ಸಂಶೋಧನಾ ಅಧ್ಯಯನದಲ್ಲಿ ಕಂಡುಕೊಂಡ ಸಂಶೋಧನ ಫಲಿತಗಳನ್ನು ಹೀಗೆ ಕ್ರೂಢೀಕರಿಸಿಕೊಡಬಹುದಾಗಿದೆ.

೧. ಈ ಸಂಶೋಧನೆಯಲ್ಲಿ ಮೊದಲು ಸತಿ ಪದ್ಧತಿಯ ಅರ್ಥವೇನು? ಎಂಬುವುದನ್ನು ಅದರ ಪರಿಕಲ್ಪನೆಯಲ್ಲಿ ತಿಳಿಸುತ್ತಾ 'ಸತಿ' ಪದ ವಿಶಾಲಾರ್ಥದಲ್ಲಿ 'ಸ್ತ್ರೀ' ಎಂಬುವುದನ್ನು ಸೂಚಿಸುವುದಾಗಿದ್ದರೂ, ಸಾಂಸ್ಕೃತಿಕ ಪರಿಭಾಷೆಯಲ್ಲಿ ಸತಿಯ ಅರ್ಥವನ್ನು ಸಾಂಪ್ರದಾಯಿಕ ವಿಧಿ ವಿಧಾನಗಳ ಪ್ರಕಾರ ಗಂಡನ ಮರಣದ ತಕ್ಷಣ ನಿಧನ ಹೊಂದುವ ಸತಿಯನ್ನು ಸೂಚಿಸುವುದಾಗಿದೆ.

೨. ಸತಿಪದ್ಧತಿ ಎಂಬ ಸಾಂಸ್ಕೃತಿಕ ಮೌಲ್ಯವನ್ನು ಅನುಸರಿಸಿದ ಸ್ತ್ರೀಯರು ಸಹಗಮನ, ಅನುಗಮನ, ಸಮಾಧಿಸತಿಯಂತಹ ಮೂರು ವಿಧಾನಗಳ ಮೂಲಕ ತಮ್ಮನ್ನು ತಾವು ಬಲಿಕೊಟ್ಟುಕೊಂಡಿದ್ದಾರೆ. ಈ ಪದ್ಧತಿಯನ್ನು ಆಚರಿಸುವ ಆಚರಣೆಯಲ್ಲಿಯೂ ವಿಭಿನ್ನತೆ ಯಿದ್ದು, ಅವುಗಳನ್ನು ಐತಿಹಾಸಿಕ ಆಧಾರಗಳಿಂದ ತಿಳಿಯಬಹುದು. ಜೊತೆಗೆ ಸತಿಪದ್ಧತಿಯ ಕುರಿತು ಇರುವ ಪರಿಕಲ್ಪನೆಗಳನ್ನು ಅವುಗಳ ನಡುವಿರುವ ಪರಸ್ಪರ ವ್ಯತ್ಯಾಸವನ್ನು ಅಧ್ಯಯನದಲ್ಲಿ ಗುರುತಿಸಿ ವಿವರಿಸಲಾಗಿದೆ.

೩. ಆಧುನಿಕ ಪೂರ್ವ ಸಾಹಿತ್ಯದಲ್ಲಿ ಸತಿಪದ್ಧತಿ ನಡೆದು ಬಂದ ಚಾರಿತ್ರಿಕ ಸ್ವರೂಪವನ್ನು ಹಾಗೂ ಈ ವ್ಯವಸ್ಥೆಯ ಹಿಂದಿರುವ ಪುರುಷ ಪ್ರಾಧಾನ್ಯತೆಯ ಅಂಶಗಳನ್ನು ಅನಾವರಣ

ಮಾಡಲಾಗಿದೆ. ಪ್ರಾಚೀನ ಕಾವ್ಯಗಳು ಮೌಖಿಕ ದೃಷ್ಟಿಕೋನದ ಭಾಗವಾಗಿ ಸತಿಪದ್ಧತಿಯ ಕಾರಣಗಳನ್ನು ಆಚರಣೆಗಳನ್ನು ದಾಖಲಿಸಿದ್ದನ್ನು ಗಮನಿಸಲಾಗಿದೆ. ಶಾಸನಗಳು, ಸ್ಮಾರಕಗಳು, ಸಾಹಿತ್ಯ ಕೃತಿಗಳು, ಪ್ರವಾಸಿಗರ ವರದಿಗಳು, ಕೈಫಿಯತ್ತುಗಳು ದಾಖಲು ಸಾಹಿತ್ಯದಲ್ಲಿ ಮೂಡಿಬಂದ ಸತಿಪದ್ಧತಿಯ ಚಿತ್ರಣವನ್ನು ವಿವರಿಸಿ ಸಾಮಾಜೀಕರಣದ ಭಾಗವಾಗಿ ಹೇಗೆಲ್ಲಾ ಈ ಪದ್ಧತಿ ಮುಂದುವರೆದಿದೆ ಎಂಬುವುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೪. ಈ ಸಂಶೋಧನೆಯಲ್ಲಿ ಪ್ರಾಚೀನ ಕನ್ನಡ ಕವಿಗಳು, ಲೇಖಕರು, ಅನುಭಾವಿಗಳು, ಸಂಸ್ಕೃತಿ ಚಿಂತಕರು, ವಿದೇಶಿ ಪ್ರವಾಸಿಗರು ಸತಿಪದ್ಧತಿಯ ಉಗಮ ಹಾಗೂ ವಿಕಾಸದ ಕುರಿತು ನೀಡಿದ ವಿವಿಧ ಅಭಿಪ್ರಾಯಗಳನ್ನು ಹಾಗೂ ಈ ಪದ್ಧತಿಗೆ ಸಂಬಂಧಿಸಿದ ಉಲ್ಲೇಖಗಳನ್ನು ಸಂದರ್ಭಗಳಿಗನುಗುಣವಾಗಿ ಚಿಂತನೆ ಮಾಡಲಾಗಿದೆ. ಇಂತಹ ಚಿಂತನೆಗಳಲ್ಲಿ ವಚನ ಸಾಹಿತ್ಯವು ಸತಿಪದ್ಧತಿಯನ್ನು ವಿಶಿಷ್ಟ ರೀತಿಯಲ್ಲಿ ಉಲ್ಲೇಖಿಸುವ ಮೂಲಕ ಅದನ್ನು ನೇರವಾಗಿ ಟೀಕಿಸಿರುವುದನ್ನು ಕುರಿತು ಚಿಂತನೆ ಮಾಡಲಾಗಿದೆ.

ಉದಾ. ಪುರುಷ ನಿರ್ವಾಣಕ್ಕೆ ಉರಿವ ಅಗ್ನಿಯ ಹೊಕ್ಕು ತೋರಲು ಬಾರದು. ಒಬ್ಬಾನೊಬ್ಬ ಪುರುಷನು ರಣಮಂಡಲಕ್ಕೆ ಹೋಗಿ ಕಡಿದಾಡಿ ಮಡಿದಲ್ಲಿ ಅವನ ಸ್ತ್ರೀಯಳು ಎಣ್ಣೆ ಅರಿಷಿಣ ಹಚ್ಚಿಕೊಂಡು ಹೂ ಮುಡಿದುಕೊಂಡು ಸತಿಹೋದಳೆಂದು ಉಲ್ಲೇಖಿಸುವ ಮೂಲಕ ಕೊಡುವ ದಾನಿಯಾದ ಇವಳು ಕೊನೆಗೆ ದಹನವಾಗಿ ಹೋಗುವ ಕಟು ಸತ್ಯವನ್ನು ಹೇಳುವ ಮೂಲಕ ಇದು ಅನ್ಯಾಯದ ಪರಮಾವಧಿ ಎಂದು ಟೀಕಿಸಿದ್ದಾರೆ.

೫. ಸತಿ ಸಹಗಮನಕ್ಕೆ ಕಾರಣವಾದ ಇಲ್ಲಿನ ಐತಿಹ್ಯಗಳನ್ನು ಗಮನಿಸಿದಾಗ ಒಂದು ಹಂತದಲ್ಲಿ ವೈದಿಕ ಸಂಪ್ರದಾಯದ ಪ್ರಕಾರ ಹೆಣ್ಣು ಗಂಡಿಗೆ ಅಧೀನವಾಗಿ ಅವನನ್ನು ಅನುಸರಿಸಿ ಮರಣ ಹೊಂದುತ್ತಾಳೆ. ಅವನೊಂದಿಗೆ ಅವಳು ಸ್ವರ್ಗಪರಿಕಲ್ಪನೆಯ ಪುರುಷ ಪ್ರಧಾನ ತಾತ್ವಿಕ ಸಾಮಾಜಿಕ ಕಟ್ಟುಪಾಡುಗಳು ಸಹಗಮದ ಆಚರಣೆಗೆ ಕಾರಣವಾದರೆ, ಇನ್ನೊಂದು ಹಂತದಲ್ಲಿ ಹೆಣ್ಣಿನ ಶೀಲದ ಬಗೆಗಿನ ಸಂಶಯ, ಅವಳ ಸೌಂದರ್ಯವೇ ಅವಳಿಗೆ ಮಾರಕವಾಗುವುದು. ಸತಿಯಾದ ನಂತರ ಹೆಣ್ಣು ಈ ಕಟ್ಟು ಪಾಡಿಗೆ ಒಳಗಾದ ಸಂಸ್ಕೃತಿಗಿಂತ ಭಿನ್ನವಾದ ಹೆಣ್ಣಾಗಿ ಪ್ರಬಲವಾದ ಮಾತೃಪ್ರಧಾನ ವೈಶಿಷ್ಟ್ಯವನ್ನು ತೋರುವ ಸಂಸ್ಕೃತಿಯ ವಾತಾವರಣಕ್ಕೆ ಸೇರುವುದನ್ನು ಗಮನಿಸಬಹುದು.

೬. ಸತಿಪದ್ಧತಿ ವಸ್ತುವಿನ ಬೆಳವಣಿಗೆಯ ರಚನಾ ಸ್ವರೂಪದಲ್ಲಿ ಎರಡು ವಿರುದ್ಧ ಭಾವಗಳ ಸೆಣಸಾಟಗಳು, ಸಂಘರ್ಷಗಳು ಬಹುಮುಖ್ಯವಾದ ಆಶಯವನ್ನು ಎತ್ತಿ ಹೇಳುತ್ತವೆ. ಸಹಗಮನದ ಕ್ರಿಯೆ ಮಾತ್ರ ಅನಿವಾರ್ಯವಾದ ಕಾರ್ಯಸ್ವರೂಪವಾಗಿ ಫಲಿತಗೊಳ್ಳುತ್ತದೆ.

ಸತಿಹೋದ ಸ್ತ್ರೀಯರು ಮಾಸ್ತ್ಯೆಮ್ಮನಾಗಿ ಮಾತೃದೇವತೆಯಾಗಿ, ಸಂತಾನ ಕೊಡುವ ಅಪೂರ್ವ ಶಕ್ತಿಯಿರುವ ದೈವವಾಗಿ, ಫಲವತ್ತತೆಗೆ ಸಂಕೇತವಾಗಿದ್ದಾಳೆ. ಜೊತೆಗೆ ಜಾತಿಯ ಮೇರೆಯಿಲ್ಲದೇ ಅವಳ ಪೂಜೆ ನಡಿಯುತ್ತದೆ. ಅಲ್ಲದೇ ಸಂಸಾರದ ಸಾಂಸ್ಥಿಕ ಚೌಕಟ್ಟಿನ ಅಧೀನತೆಯಿಂದ ಪ್ರಬಲವಾದ ಮಾತೃಶಕ್ತಿ ದೈವತದ ಆಯಾಮಕ್ಕೆ ಇವಳ ಜಿಗಿತವಿರುವದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೭. ಮಾಸ್ತಿ ಆಚರಣೆಯು ಮೊದಲು ಕ್ಷತ್ರಿಯ ವರ್ಣಕ್ಕೆ ಸೇರಿದ್ದಾಗಿದ್ದು ಕ್ರಮೇಣ ಶೂದ್ರವರ್ಣಕ್ಕೆ ಇಳಿದು ಬಂದಿತು. ಮಹಾಸತಿ ಬಗೆಗಿನ ಆಚರಣೆ, ಹಬ್ಬ, ಐತಿಹ್ಯ ಮುಂತಾದ ವಿವರಗಳನ್ನು ಗಮನಿಸಿದಾಗ ನಾಯಕ, ಗೊಲ್ಲ, ಗೌಡ, ಹರಿಜನ, ಸಮುದಾಯದಲ್ಲಿ ಈ ಪದ್ಧತಿ ಉಳಿದು ಬಂದಿರುವುದನ್ನು ಗುರುತಿಸಬಹುದು. ಪುರುಷ ಪಾರಮ್ಯವಿರುವ ಸಮಾಜದಲ್ಲಿ ಗಂಡು ಹೆಣ್ಣಿನ ನಡುವಿನ ಅಸಮಾನತೆಯು ಮೇಲು, ಕೀಳು ಎಂಬ ಭಾವನೆ ಕೇವಲ ಸಾಂಕೇತಿಕ ಮಾದರಿಗಳಲ್ಲಿ ಮಾತ್ರ ಉಳಿಯದೇ ಸಂಸ್ಕೃತಿಯ ಬೇರುಗಳಿಗೂ ಇಳಿದಿರುತ್ತದೆ. ಮಹಾಸತಿಯ ಪೂಜೆ ನಡೆಯುವಲ್ಲಿ, ಎಡೆ ಮಾಡುವಲ್ಲಿ ಅಥವಾ ಭಾಗವಹಿಸುವಲ್ಲಾಗಲಿ ಈ ವರ್ಗಗಳದ್ದೇ ಪ್ರಧಾನ ಪಾತ್ರ ಇರುವುದನ್ನು ಕಾಣಬಹುದು. ಇದನ್ನು ಬಹುಪಾಲು ಮಾಸ್ತಿ ಗೀತೆಗಳು, ಕಥೆಗಳು ಈ ಅಂಶಗಳನ್ನೇ ಪುಷ್ಟಿಗೊಳಿಸುತ್ತವೆ. ಇಲ್ಲಿಯ ದಹನದ ಕಥೆಯು ಹೋರಾಟದ ಬಣಗಳಿಗೆ ಸೇರಿದ ವ್ಯಕ್ತಿಗಳದ್ದೇ ಆಗಿದೆ ಎಂಬುವುದನ್ನು ಅಧ್ಯಯನ ದಿಂದ ಕಂಡುಕೊಳ್ಳಲಾಗಿದೆ.

೮. ಜನಪದ ಗೀತೆಗಳು, ಕಥೆಗಳು ಜೀವನದ ಅನೇಕ ನಂಬಿಕೆಗಳ ಆಚರಣೆಗಳ ಹಿನ್ನೆಲೆಯಲ್ಲಿ ವ್ಯಕ್ತಗೊಳ್ಳುತ್ತವೆ. ಇವು ಸಂಸ್ಕೃತಿಯ ಮೌಲ್ಯವಾಗಿ ಬೆಳೆದು ಬಂದ ಮಹಾಸತಿಯ ಘಟನಾವಳಿಗಳನ್ನು ನಿರೂಪಿಸುವ ಕೆಲವು ಜನಪದ ಗೀತೆಗಳು ಸತಿ ಘಟನೆಯನ್ನೇ ಮುಖ್ಯವಾಗಿಟ್ಟುಕೊಂಡು ರಚನೆಗೊಂಡಿದ್ದರೆ, ಕೆಲವು ಗೀತೆಗಳು ಆಚರಣೆಯ ವಿವರಗಳನ್ನು ಒಳಗೊಂಡಿವೆ. ಇನ್ನೂ ಕೆಲವು ಗೀತೆಗಳು ಸತಿಯನ್ನು ದೇವತೆಯನ್ನಾಗಿ ಕಂಡುಕೊಂಡು ಸ್ತುತಿಸುವಂತವುಗಳಾಗಿವೆ. ಈ ಎಲ್ಲ ಆಚರಣೆಯ ವಿವರಗಳು ವರ್ಣನೆಗಳು ಹೆಚ್ಚು ಕಡಿಮೆ ಒಂದೇ ರೀತಿಯಲ್ಲಿರುತ್ತವೆ ಎಂಬುವುದನ್ನು ಕಂಡುಕೊಳ್ಳಲಾಗಿದೆ.

೯. ಕಾಟವ್ವ, ತಿಮ್ಮವ್ವ, ಈರೋಬಿ, ನಾಗಮ್ಮ ಎಂಬ ಹೆಸರುಗಳೇ ಅಪ್ಪಟ ಶೂದ್ರತನದ ಮೆರುಗು ಹೊಂದಿರುವಂತವುಗಳು ಈ ಗೀತೆಗಳನ್ನು ಹಾಡುವವರು ಈ ವರ್ಗಕ್ಕೆ ಸೇರಿದವರೇ ಆಗಿದ್ದಾರೆ. ಕೆಳವರ್ಗದ ಬಡ ಹೋರಾಟದ ಬಣಗಳಿಗೆ ಸೇರಿದ ಇಂತಹ ವರ್ಗದ ಸ್ತ್ರೀಯರ ಸಹಗಮನದ ಸಂಖ್ಯೆಯೇ ಹೆಚ್ಚಾಗಿರುವದರಿಂದ ಬಹಳಷ್ಟು ಪ್ರಕರಣಗಳು ದಾಖಲೆಗೆ

ಸಿಗದೇ ಹೋದವು. ಈ ಕಾರಣದಿಂದಲೇ ಉತ್ತರ ಭಾರತದಲ್ಲಿ ಹೆಚ್ಚಾಗಿ ನಡೆದ ಸತಿ ಪ್ರಕರಣಗಳು ದಕ್ಷಿಣ ಭಾರತದಲ್ಲಿ ಅವುಗಳ ಸಂಖ್ಯೆ ಕಡಿಮೆ ಇರುವುದನ್ನು ಅಧ್ಯಯನದಿಂದ ಗುರುತಿಸಲಾಗಿದೆ.

೧೦. ಮಾಸ್ತಿ ಗೀತೆಗಳ ಮತ್ತು ಮಾಸ್ತಿ ಕಥೆಗಳ ಕಥಾ ವಸ್ತುವಿನ ಬೆಳವಣಿಗೆಯ ದೃಷ್ಟಿಯಿಂದ ನೋಡಿದರೆ ಒಂದು ಸ್ಪಷ್ಟ ರಚನೆಯಿದೆ. ಮಹಾಸತಿಯ ಮದುವೆ ಸಿದ್ಧತೆಯಿಂದ ಹಿಡಿದು ಮದುವೆಯ ವಿವರ, ನಂತರ ಗಂಡನು ಹೋರಾಟಕ್ಕೆ ಹೋಗುವುದು, ಸತಿಯಾದವಳು ಇಲ್ಲವೇ ಸತಿಯಾಗುವವಳು ಸ್ವಪ್ನ ಕಾಣುವುದು, ಅವನ ಸಾವು, ಮಾಸ್ತಿ ಕೊಂಡದ ಸಿದ್ಧತೆಗಳು, ಬಂಧು ಬಳಗವು ನೆರೆದು ಶೋಕಿಸುವುದು, ಮಾಸ್ತಿಯ ದಾನ, ಹರಕೆ, ಶಾಪ, ಮಾಸ್ತಿ ಕೊಂಡಕ್ಕೆ ಬೀಳುವುದು, ಬಂಧುಗಳು ಮಹಾಸತಿ ಕಲ್ಲುಗಳನ್ನು ಸತಿ ಹೋದವಳ ನೆನಪಿಗಾಗಿ ನೆಡುವುದು, ತದನಂತರದಲ್ಲಿ ಅವಳ ಕುರಿತಾಗಿ ಹಬ್ಬ, ಹರಿದಿನ, ಜಾತ್ರೆ, ಉತ್ಸವಗಳನ್ನು ನೆರವೇರಿಸುವುದು. ಹರಕೆ ಕಟ್ಟಿಕೊಳ್ಳುವುದು, ಮುಂದೆ ಗ್ರಾಮದೇವತೆಯಾಗಿ, ಮಾತೃದೈವವಾಗಿ ಅಪೂರ್ವ ಶಕ್ತಿಯಿರುವ ತಾಯಿಯಾಗಿ ಪೂಜೆಗೊಳ್ಳುವುದು. ಹೀಗೆ ಮಹಾಸತಿಯ ಗೀತೆಗಳಲ್ಲಿ, ಕಥೆಗಳಲ್ಲಿ ಸಾಮಾನ್ಯವಾಗಿ ಒಂದು ಬೆಳವಣಿಗೆಯ ಕ್ರಮವಿದೆ ಎಂಬುವುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೧೧. ಹಲವು ಜನಾಂಗಗಳಲ್ಲಿ ಸತಿ ಆಚರಣೆ ಆಚರಿಸಲ್ಪಟ್ಟಿದ್ದು ಕಂಡು ಬರುತ್ತದೆ. ಮುಖ್ಯವಾಗಿ ಇದು ಹೋರಾಟ ವರ್ಗದವರಲ್ಲಿ ಪ್ರಚಲಿತದಲ್ಲಿದ್ದುದನ್ನು ಶಾಸನಗಳು, ಶಿಲ್ಪಗಳು ತಿಳಿಸುತ್ತವೆ. ಕುಪ್ಪಟೂರು, ದುಗೂರು, ಕಿಪಡಿ, ಕೊಂಡಗಳಲೆ, ಸಿರೂರ, ಹುಣಸೂರು, ಕೋಗಳಿ ಹೀರೆಹಾರಕ, ಹರಿತಾಳು ಹೆಬ್ಬಲಗುಪ್ಪೆ, ಬಳ್ಳಿಗಾವೆ, ಕುಣಗನಹಳ್ಳಿ, ಚಿಕ್ಕ ಹಾಲಿವಾಣ, ಹರೂರು ಈ ಮೊದಲಾದ ಊರುಗಳಲ್ಲಿಯ ಶಾಸನಗಳು, ಸತಿ ಸ್ಮಾರಕ ಶಿಲ್ಪಗಳು ಹೋರಾಟ ಮಾಡಿ ಮಡಿದವರ ಪತ್ನಿಯರು ಸತಿ ಹೋದುದ್ದನ್ನು ತಿಳಿಸುತ್ತವೆ.

೧೨. ಮಾಸ್ತಿ ಗುಡಿಗಳು ಪುರಾತನ ಕಟ್ಟಡದ ಸ್ವರೂಪವನ್ನು ಹೊಂದಿವೆ. ಮೂರು ಚಪ್ಪಡಿಕಲ್ಲು ಗೋಡೆಗಳಾಗಿ ಇನ್ನೊಂದು ಮೇಲ್ಹಾವಣೆಗಳಾಗಿ ಕಟ್ಟಿದ ರಚನೆಗಳು ಸಾಮಾನ್ಯ ಪ್ರಾದೇಶಿಕತೆ ಹಾಗೂ ಶಕ್ತಿಯ ಆಶಯ ಹೊಂದಿದ ಮೇಲ್ವರ್ಗದ ದೈವತಗಳಿಗಿಂತ ಈ ದೈವತಗಳು ತುಂಬಾ ಭಿನ್ನವೆಂಬುದನ್ನು ಸೂಚಿಸುತ್ತವೆ. ಬಹುಪಾಲು ಕೆಳವರ್ಗದ ಜನರು ಮತ್ತು ಶೂದ್ರರು ಈ ದೈವವನ್ನು ಪೂಜಿಸುತ್ತಾರೆ. ಭಾರತದ ಬಹಳಷ್ಟು ಹಳ್ಳಿಗಳಲ್ಲಿ ಮಹಾಸತಿ ಕಲ್ಲುಗಳಿದ್ದು, ಕೆಲವು ಕಡೆ ಮಾತ್ರ ಹಬ್ಬ ಪೂಜೆ ನಡೆಯುತ್ತವೆ. ಇದಕ್ಕೆ ಸಂಬಂಧಿಸಿದ

ಹಾಡು ಕಥೆ ಐತಿಹ್ಯಗಳು ಸಿಗುತ್ತವೆ. ಇವುಗಳಿಂದ ಗ್ರಹಿಸಬಹುದಾದ ಸಾಂಸ್ಕೃತಿಕ ವೈಶಿಷ್ಟ್ಯಗಳನ್ನು ಇಲ್ಲಿ ಗುರುತಿಸಲಾಗಿದೆ.

೧೩. ಕೆಲವು ಶಾಸನಗಳಲ್ಲಿ ಸತಿಹೋದ ಸ್ತ್ರೀಯರ ಹೆಸರು ಕಂಡು ಬರುವುದಿಲ್ಲ. ಆದರೆ ಅವರು ಸತಿ ಹೋದ ವಿವರಗಳು ಮಾತ್ರ ಇರುವುದನ್ನು ಈ ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ. ಉದಾಹರಣೆಗೆ ಸೊರಟೂರು ಗ್ರಾಮದ ಮಾಸ್ತಿ ಹೊಲದಲ್ಲಿ ನೆಟ್ಟಿರುವ ಮಾಸ್ತಿಕಲ್ಲಿನಲ್ಲಿಯ ತೃಟಿತ ಶಾಸನದಲ್ಲಿ 'ಮುಸಂಕಗಉಡನ. . . ಸಂಕಂಮ. . . .ದೆಡೆ. . . ಹೋದನು. . . ಉಗ ಕಂ ಮಂಗಳ ಮಾಹಾಶ್ರೀ ಶ್ರೀ' ಎಂದು ಬರುತ್ತದೆ. ಇದೇ ರೀತಿ ಕರಿಗಾನಹಳ್ಳಿಯ ಮಾಸ್ತಿ ಶಾಸನದಲ್ಲಿ "ಗಂಗದೇವನ್ವಾಳಿಕೆಯಲು xxx ಬವರದೊಲು xxx ಪೋಗೆ ಅವನ ಸತಿ ಸಹಾನುಭೂತಿಯಂ ಪೊಂದಿ ಸುರಲೋಕಕೆ ಸಂದಳು" ಎಂದು ಬರುತ್ತದೆ. ಗಂಗದೇವನ ಆಳ್ವಿಕೆಯಲ್ಲಿ ಇವಳು ಸತಿಹೋಗಿದ್ದು ಇವಳ ಹೆಸರು ಮತ್ತು ಇವಳ ಗಂಡನ ಹೆಸರು ತಿಳಿದು ಬರುವುದಿಲ್ಲ.

೧೪. ವಸಾಹಾತು ಕಾಲಘಟ್ಟದಲ್ಲಿ ಪ್ರಭುಶಕ್ತಿ ಮತ್ತು ಪುರೋಹಿತ ಶಕ್ತಿಗಳ ಲಿಂಗರಾಜಕಾರಣದಿಂದಾಗಿ ಮೂಡಿಬಂದ ಈ ಪದ್ಧತಿಯನ್ನು ನಿಷೇಧಿಸಲು ನಡೆದ ಹೋರಾಟಗಳು ಪ್ರತಿರೋಧಗಳು, ಅದರ ಪರಿಣಾಮವಾಗಿ ಮೂಡಿ ಬಂದ ಸತಿ ನಿಷೇಧದ ಕಾನೂನುಗಳನ್ನು ಕುರಿತು ಈ ಮಹಾಪ್ರಬಂಧದಲ್ಲಿ ವಿವರಿಸಲಾಗಿದೆ.

೧೫. ಪ್ರಸ್ತುತ ಮಹಾಪ್ರಬಂಧವು ವೈವಿಧ್ಯಮಯ ಮಾಸ್ತಿ ಕುರಿತಾದ ವಿಷಯವನ್ನು ಸಂಗ್ರಹಿಸುವಲ್ಲಿ ಮತ್ತು ಅವುಗಳನ್ನು ವಿಶ್ಲೇಷಿಸುವಲ್ಲಿ ಆಧ್ಯತೆ ನೀಡಿದೆ. ಮಾಸ್ತಿಕಲ್ಲುಗಳಿಂದ, ಮಹಾಸತಿ ದೇವಾಲಯಗಳಿಂದ ವಿವರವಾದ ಮಾಹಿತಿ ದೊರಕದಿರುವುದು ದುರದೃಷ್ಟಕರ ಸಂಗತಿಯಾಗಿದೆ. ಆದರೂ ದೊರಕಿದ ಮಾಹಿತಿಗಳನ್ನು ಸಾಹಿತ್ಯದ ಆಧಾರದಿಂದ ಅರ್ಥೈಸಲು ಈ ಪ್ರಬಂಧದಲ್ಲಿ ಪ್ರಯತ್ನಿಸಲಾಗಿದೆ. ಜೊತೆಗೆ ಕೆಲವಡೆ ಸತಿಯರು ಕೊಂಡಕ್ಕೆ ಬಿದ್ದ ಪ್ರಸಂಗಗಳನ್ನು ಈಗಲೂ ಜಾತ್ರೆ ಉತ್ಸವಗಳಲ್ಲಿ ಆಡಿ ತೋರಿಸುತ್ತಾರೆ. ಹೀಗೆ ಆಡಿತೋರಿಸುವ ಪ್ರಸಂಗಗಳು ಜನಪದ ಜೀವನದಲ್ಲಿ ಇನ್ನು ಮುಂದಿನ ಕೆಲವು ದಿನಗಳಲ್ಲಿ ಮಾಯಾವಾಗುವ ಸೂಚನೆಗಳು ಈಗಾಗಲೇ ಕಂಡುಕೊಳ್ಳುತ್ತಿವೆ. ಹೀಗಾಗಿ ಅವುಗಳನ್ನು ವ್ಯವಸ್ಥಿತವಾಗಿ ಅಧ್ಯಯನ ಮಾಡುವುದರೊಂದಿಗೆ ಮಹಾಸತಿ ಗುಡಿಗಳನ್ನು ಸುತ್ತಿ ಮಹಾಸತಿಗೆ ಸಂಬಂಧಿಸಿದ ವಿಷಯವನ್ನು ಸಂಗ್ರಹಿಸಿ ಪ್ರಬಂಧದಲ್ಲಿ ವಿವರಿಸುವ ಮೂಲಕ ಗುಡಿಗಳ ಛಾಯಾಚಿತ್ರಗಳನ್ನು ಪಡೆದು ಇಲ್ಲಿ ದಾಖಲಿಸಲಾಗಿದೆ.

ಸಂಶೋಧನೆಯ ಮುಂದಿನ ಸಾಧ್ಯತೆಗಳು

ಕನ್ನಡ ಸಾಹಿತ್ಯದಲ್ಲಿ ಸತಿಪದ್ಧತಿಯನ್ನು ಕುರಿತು ಸಂಶೋಧನೆ ಮಾಡಿದ ಈ ಅಧ್ಯಯನ ಕೆಲವು ಸಂಶೋಧನಾ ಫಲಿತಗಳನ್ನು ಕಂಡುಕೊಂಡಂತೆ ಮುಂದಿನ ಸಂಶೋಧನೆಯ ಹೊಸ ಸಾಧ್ಯತೆಗಳನ್ನು ಕಂಡುಕೊಳ್ಳಲು ಪ್ರಯತ್ನಿಸಿದೆ. ಅವು ಈ ಕೆಳಗಿನಂತಿವೆ.

* ಮಹಾಸತಿಯ ಪ್ರಧಾನ ಸ್ಥಳ, ದೈವಗಳ ನಂಬಿಕೆಯಲ್ಲಿ ಜನತೆ ಇಂದಿಗೂ ಜಾತ್ರೆ ಉತ್ಸವಗಳನ್ನು ಆಚರಿಸುತ್ತಿದ್ದಾರೆ. ಅಲ್ಲಿ ಆಚರಿಸುವ ಕೆಲವು ಆಚರಣೆಗಳನ್ನು 'ದೈವ ಸಂಸ್ಕೃತಿ'ಗಳ ಹಿನ್ನೆಲೆಯಲ್ಲಿ ಪ್ರತ್ಯೇಕವಾಗಿ ಸಂಶೋಧನೆ ಮಾಡಲು ಸಾಧ್ಯವಿದೆ.

* ಕನ್ನಡ ಶಾಸನ ಕವಿಗಳು, ಸಾಹಿತ್ಯ ಕವಿಗಳು ತಮ್ಮ ಕಾವ್ಯಗಳಲ್ಲಿ ಚಿತ್ರಣ ಮಾಡಿದ ಸತಿ ಪದ್ಧತಿಯ ಪ್ರಸಂಗಗಳನ್ನು ಆಧಾರವಾಗಿಟ್ಟುಕೊಂಡು ಸ್ತ್ರೀಯರ ಮನೋವಿಶ್ಲೇಷಣಾತ್ಮಕ ಅಂಶಗಳನ್ನು ಗುರುತಿಸುವುದರ ಹಿನ್ನಲೆಯಲ್ಲಿ ಅಧ್ಯಯನ ಕೈಗೊಳ್ಳಬಹುದು.

* ಜನಪದರು, ಕವಿಗಳು, ಲೇಖಕರು, ವಿದೇಶಿ ಪ್ರವಾಸಿಗರು ಉಲ್ಲೇಖಿಸಿದ ಸಹಗಮನ, ಅನುಗಮನ, ಸಮಾಧಿ ಸತಿಯಂತಹ ವಿಧಾನಗಳ ಕುರಿತು ಆಧುನಿಕ ಕನ್ನಡ ಕವಿಗಳು, ಲೇಖಕರು ಕಂಡುಕೊಂಡಂತೆ ಅವರ ಆಯ್ಕೆಯ ವಿಷಯವನ್ನಾಧರಿಸಿ 'ಮಹಾಸತಿ ಮರಣ' ಎಂಬ ಶಿರ್ಷಿಕೆ ಅಡಿಯಲ್ಲಿ ಇನ್ನೂ ವಿಸ್ತೃತವಾಗಿ ಸಂಶೋಧನೆ ಮಾಡಲು ಸಾಧ್ಯವಿದೆ.

ಅನುಬಂಧಗಳು

೧. ಪರಾಮರ್ಶನ ಗ್ರಂಥಗಳು

೨. ಛಾಯಾಚಿತ್ರಗಳು

ಪರಾಮರ್ಶನ ಗ್ರಂಥಗಳು

೧. ಅನಂತರಂಗಾಚಾರ್ಯ ಎನ್.(ಸಂ) ಕುಮಾರರಾಮ ಸಾಂಗತ್ಯ ಸಂಗ್ರಹ, ಭಾರತಿ ಪ್ರಕಾಶನ, ಮೈಸೂರು, ೨೦೦೭

೨. ಅನಂತರಂಗಾಚಾರ್ಯ ಎನ್.(ಸಂ) ಪಂಪ ಭಾರತಂ,ಕ.ಸಾ.ಪ. ಬೆಂಗಳೂರು,೨೦೧೧

೩. ಅನಂತರಂಗಾಚಾರ್ಯ ಎನ್.(ಗದ್ಯಾನುವಾದ) ಪಂಪ: ಪಂಪಭಾರತಂ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೭೭

೪. ಇಕ್ಬಾಲ್ ಕೌಲ್, ದಿ ಸಂಡೇ ಸ್ಟ್ಯಾಂಡರ್ಡ್, ಸತಿ ವಾಸ್ ಪ್ರಿವಿಲೆಂಟ್ ಆಲ್ ವೋವರ್ ದಿ ವರ್ಲ್ಡ್, ೨೦-೮-೧೯೭೮

೫. ಇಕ್ಬಾಲ್ ಕಾಲ್,ದಿ ಇಲು ಸ್ಟ್ರೇಟೆಡ್ ವೀಕ್ಲಿ ಆಫ್ ಇಂಡಿಯಾ, ದಿ ಓರಿಜನ್ ಆಫ್ ಸತಿ, ಜನೇವರಿ ೨೪-೧೯೮೧

೬. ಇಕ್ಬಾಲ್ ಕೌಲ್, ದಿ ಇಲುಸ್ಟ್ರೇಟೆಡ್ ವೀಕ್ಲಿ ಆಫ್ ಇಂಡಿಯಾ, ದಿ ಓರಿಜಿನಲ್ ಆಫ್ ಸತಿ, ಜನೇವರಿ ೧೮-೧೯೮೧

೭. ಕ.ರಾ.ಕೃ.(ಸಂ), ಜಾನಪದ ಕಥನ ಗೀತೆಗಳು, ಜಾನಪದ ಸಾಹಿತ್ಯ ಅಕಾಡೆಮಿ, ಮೈಸೂರು, ೧೯೬೨

೮. ಕಲಬುರ್ಗಿ ಎಂ.ಎಂ., ಆತ್ಮಬಲಿದಾನ: ಬ್ರಹ್ಮಶಿವನ ವಿಚಾರಗಳು, ಪ್ರಬುದ್ಧ ಕರ್ನಾಟಕ, ಸಂ-೧, ೧೯೭೪

೯. ಕಲಬುರ್ಗಿ ಎಂ.ಎಂ.(ಸಂ), ಶಾಸನ ಸೂಕ್ತಿ ಸುಧಾರ್ಣವ, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು, ೨೦೦೭

೧೦. ಕಲಬುರ್ಗಿ ಎಂ.ಎಂ.(ಸಂ), ಸಮಾಧಿ-ಬಲಿದಾನ-ವೀರಮರಣಸ್ಮಾರಕಗಳು, ಐ.ಬಿ.ಎಚ್ ಪ್ರಕಾಶನ, ಬೆಂಗಳೂರು, ೧೯೮೦

೧೧. ಕಲಬುರ್ಗಿ ಎಂ.ಎಂ.(ಸಂ), ಶಾಸನಗಳಲ್ಲಿ ಶಿವಶರಣರು, ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ತೋಂಟದಾರ್ಯ ಸಂಸ್ಥಾನಮಠ, ಗದಗ, ೧೯೭೮

೧೨. ಕಲಬುರ್ಗಿ ಎಂ.ಎಂ.(ಸಂ), ಬಾಲರಾಮನ ಸಾಂಗತ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೮೨

೧೩. ಕಲಬುರ್ಗಿ ಎಂ.ಎಂ.(ಸಂ), ಮಹಾಲಿಂಗಸ್ವಾಮಿ ಬಾಲರಾಮನ ಸಾಂಗತ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ೨೦೦೭

೧೪. ಕಲಬುರ್ಗಿ ಎಂ.ಎಂ.(ಸಂ) ಸಂಕೀರ್ಣ ವಚನ ಸಂಪುಟ–೧, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೧

೧೫. ಕಲಬುರ್ಗಿ ಎಂ.ಎಂ., ಸಂಶೋಧನ, ಸ್ವಪ್ನ ಬುಕ್ ಹೌಸ್, ಬೆಂಗಳೂರು, ೨೦೧೧

೧೬. ಕನ್ನಡ ರತ್ನಕೋಶ ಬೆಂಗಳೂರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು, ೧೯೯೪

೧೭. ಕಲಬುರ್ಗಿಎಂ.ಎಂ.(ಸಂ), ಕರ್ನಾಟಕದ ಕೈಫಿಯತ್ತುಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೪

೧೮. ಕಲಬುರ್ಗಿ ಎಂ.ಎಂ., ಮಲ್ಲಕವಿ ಗೊಲ್ಲ ಶಿರುಮಣ ಚರಿತೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೪

೧೯. ಕಲಬುರ್ಗಿ ಎಂ. ಎಂ., ಕುಮಾರ ರಾಮಯ್ಯನ ಚರಿತೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೧

೨೦. ಕಲಬುರ್ಗಿ ಎಂ.ಎಂ.(ಸಂ), ಸಿದ್ಧಕವಿ: ಶಿರುಮಣ ನಾಯಕನ ಸಾಂಗತ್ಯ, ವೀರಶೈವ ಅಧ್ಯಯನ ಸಂಸ್ಥೆ, ಗದಗ, ೧೯೮೩

೨೧. ಕುಲಕರ್ಣಿ ಬಿ.ಎಸ್.(ಸಂ), ಬ್ರಹ್ಮಶಿವ: ಸಮಯ ಪರೀಕ್ಷೆ, ಕನ್ನಡ ಸಂಶೋಧನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೫೮.

೨೨. ಕುವೆಂಪು ಮತ್ತು ಮಾಸ್ತಿ ವೆಂಕಟೇಶ ಅಯ್ಯಂಗಾರ(ಸಂ), ಕರ್ನಾಟಕ ಭಾರತ ಕಥಾ ಮಂಜರಿ, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೮೮

೨೩. ಕಾಮತ್ ಎಂ.ವಿ., ದಿ ಸಪ್ರೇಸಿಂಗ್ ಆಫ್ ಸತಿ ಇನ್ ನೇಟಿವ್ ಸ್ಟೇಟ್ಸ್ ದಿ ಇಲುಸ್ಟ್ರೇಟೆಡ್ ವೀಕ್ಲಿ ಆಫ್ ಇಂಡಿಯಾ, ಸತಿ ಶೇಮ್ ಆಫ್ ಎ ನೇಶನ್, ೧೯೮೦,

೨೪. ಕೆಂಚಶೆಟ್ಟಿ ಸುತಾರಾಮ್, ಶಿರುಮನ ಚರಿತೆ, (ಸಂ) ಎಂ.ಎಂ.ಕಲಬುರ್ಗಿ, ಶ್ರೀ ಜಗದ್ಗುರು ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, ೧೯೯೧

೨೫. ಕೃಷ್ಣಮೂರ್ತಿ ಎಚ್., ಕೊಂಡದ ಕಾಟವ್ವ, ಸಾಧನೆ-೫, ೩-೧೯೭೬

೨೬. ಕೃಷ್ಣಸ್ವಾಮಿ ಕೆ.ಆರ್.(ಸಂ). ಜಾನಪದ ಕಥನ ಗೀತೆಗಳು, ಜನಪದ ಸಾಹಿತ್ಯ ಅಕಾಡೆಮಿ, ಮೈಸೂರು, ೧೯೬೨

೨೭. ಗಂಗಾಧರ್ ಟಿ.ಕೆ., ಉತ್ಥಾನ್, ಅವಶೇಷ, ಆಗಸ್ಟ್ ೧೯೮೦,

೨೮. ಚನ್ನಕ್ಕ ಎಲಿಗಾರ, ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೦

೨೯. ಚಿದಾನಂದಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೯

೩೦. ಚಿದಾನಂದಮೂರ್ತಿ ಎಂ. ಸಂಶೋಧನ ತರಂಗ, ಶಿರಸಿ ಸಾಹಿತ್ಯ ಪ್ರಕಾಶನ, ಮೈಸೂರು, ೧೯೬೬

೩೧. ಜನ್ನ, ಅನಂತನಾಥ ಪುರಾಣಂ, ಸಂ.ಎಚ್, ದೇವಿರಪ್ಪ, ಮತ್ತು ಎಂ.ಡಿ.ಪದ್ಮನಾಭಶರ್ಮಾ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೨

೩೨. ತಿಪ್ಪೇರುದ್ರಸ್ವಾಮಿ ಎಚ್., ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಿ.ವಿ.ಕೆ.ಮೂರ್ತಿ ಪ್ರಕಾಶನ ಮೈಸೂರು, ೨೦೧೦

೩೩. ದಿಬ್ಬದ ಶಾಂತಿನಾಥ(ಸಂ), ನಾಗಚಂದ್ರ ಸಂಪುಟ, ರಾಮಚಂದ್ರ ಚರಿತ ಪುರಾಣ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೮೮

೩೪. ದೇವರಕೊಂಡಾರೆಡ್ಡಿ, ಕರ್ನಾಟಕದಲ್ಲಿ ಮಾಸ್ತಿ, ಸಾಧನೆ ಸಂ-೪, ಭಾಗ-೨. ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೭೫

೩೫. ದೇವಿರಪ್ಪ ಎಚ್. ಪದ್ಮನಾಭ ಶರ್ಮ ಎಂ. ಸಿ.(ಸಂ), ಅನಂತನಾಥ ಪುರಾಣ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು, ೧೯೭೨

೩೬. ದೇವಿರಪ್ಪ ಎಚ್., ನರಸಿಂಹ ಶಾಸ್ತ್ರಿ ಕೆ.ಎಲ್.(ಸಂ) ಆದಿ ಪುರಾಣಂ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೧೧

೩೭. ದೇವಿರಪ್ಪ ಎಚ್.(ಸಂ) ಬಸವರಾಜ ಚಾರಿತ್ರ (ಸಿಂಗಿರಾಜಪುರಾಣ) ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೦

೩೮. ನರಸಿಂಹಚಾರ್ ಡಿ.ಎಲ್., ಪಂಪಭಾರತ ದೀಪಿಕೆ, ಪ್ರಕಾಶಕರು ಡಿ.ವಿ.ಕೆ.ಮೂರ್ತಿ ೨೦೦೭

೩೯. ನರಸಿಂಹಶಾಸ್ತ್ರೀ ಕೆ.ಎಲ್,(ಸಂ) ಆದಿಪುರಾಣ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೧೧

೪೦. ನಾರಾಯಣಶಾಸ್ತ್ರೀ, ಹ.ವೆ.(ಸಂ), ನಾಗವರ್ಮ ವಿರಚಿತ ಕರ್ಣಾಟಕ ಕಾದಂಬರಿ ಗದ್ಯಾನುವಾದ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೧೧

೪೧. ನಾಗೇಗೌಡ ಎಚ್.ಎಲ್.(ಸಂ), ಕನ್ನಡ ಜನಪದ ಕಥನ ಕಾವ್ಯಗಳು, ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು, ೨೦೦೭

೪೨. ನಾಗೇಗೌಡ ಎಚ್.ಎಲ್.(ಸಂ), ಪ್ರವಾಸಿ ಕಂಡ ಇಂಡಿಯಾ, ಸಂಪುಟ ೧, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, ೨೦೦೬

೪೩. ನಾಗೇಗೌಡ ಎಚ್.ಎಲ್.(ಸಂ), ಪ್ರವಾಸಿ ಕಂಡ ಇಂಡಿಯಾ ಸಂಪುಟ–೨. ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, ೨೦೦೬

೪೪. ನಾಗೇಗೌಡ ಎಚ್. ಎಲ್.(ಸಂ), ಪ್ರವಾಸಿ ಕಂಡ ಇಂಡಿಯಾ, ಸಂಪುಟ–೩. ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, ೨೦೦೭,

೪೫. ನಾಗೇಗೌಡ ಎಚ್. ಎಲ್.(ಸಂ), ಪ್ರವಾಸಿ ಕಂಡ ಇಂಡಿಯಾ, ಸಂಪುಟ–೪, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, ೨೦೦೭

೪೬. ನಾಗೇಗೌಡ ಎಚ್.ಎಲ್.(ಸಂ), ಪ್ರವಾಸಿ ಕಂಡ ಇಂಡಿಯಾ, ಸಂಪುಟ–೫, ಬೆಂಗಳೂರು ಐ.ಬಿ.ಎಚ್. ೨೦೦೭

೪೭. ನಾಗೇಗೌಡ ಎಚ್.ಎಲ್.(ಸಂ) ಪ್ರವಾಸಿ ಕಂಡ ಇಂಡಿಯಾ, ಸಂಪುಟ–೬, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, ೨೦೦೭

೪೮. ನಾಗೇಗೌಡ ಎಚ್.ಎಲ್.(ಸಂ), ಪ್ರವಾಸಿ ಕಂಡ ಇಂಡಿಯಾ, ಸಂಪುಟ–೭, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, ೨೦೦೬

೪೯. ನಾಗೇಗೌಡ ಎಚ್.ಎಲ್.(ಸಂ), ಪ್ರವಾಸಿ ಕಂಡ ಇಂಡಿಯಾ, ಸಂಪುಟ–೮, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, ೨೦೦೬

೫೦. ನಾಗೇಗೌಡ ಎಚ್.ಎಲ್.(ಸಂ) ಕನ್ನಡ ಜಾನಪದ ಕಥನ ಕಾವ್ಯಗಳು, ಕರ್ನಾಟಕ ಜಾನಪದ ಪರಿಷತ್ ಬೆಂಗಳೂರು, ೨೦೦೭

೫೧. ನಾಗಯ್ಯ, ಜೆ.ಎಂ.(ಸಂ) ಆರನೇ ವಿಕ್ರಮಾದಿತ್ಯನ ಶಾಸನಗಳು: ಒಂದು ಅಧ್ಯಯನ, ವೀರಶೈವ ಅಧ್ಯಯನ ಅಕಾಡೆಮಿ, ಬೆಳಗಾವಿ, ೧೯೯೨

೫೨. ನಾಗಯ್ಯ ಜೆ.ಎಂ. ಹಿರೇಮಠ ಕೆ,ಎಸ್.(ಸಂ) ಮಹಾಮರಣ, ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ, ಗುಲ್ಬರ್ಗ, ೨೦೧೧

೫೩. ನಾಗಯ್ಯ ಜೆ.ಎಂ.(ಸಂ), ಪ್ರಾಚೀನ ಕರ್ನಾಟಕದ ಜೀವನ ಮೌಲ್ಯಗಳು, ವಿಜಯ ವಿಕ್ರಮ ಪ್ರಕಾಶನ, ಹುಬ್ಬಳ್ಳಿ, ೨೦೧೪

೫೪. ನಾಗಯ್ಯ, ಜೆ.ಎಂ.(ಸಂ), ಆತ್ಮಬಲಿದಾನ, ವಿಜಯ ವಿಕ್ರಮ ಪ್ರಕಾಶನ, ಹುಬ್ಬಳ್ಳಿ, ೨೦೧೭

೫೫. ನಾರಾಯಣ ಪಿ.ವಿ.(ಸಂ), ವಚನ ಸಾಹಿತ್ಯ: ಒಂದು ಸಾಂಸ್ಕೃತಿಕ ಅಧ್ಯಯನ, ವೀರಶೈವ ಅಧ್ಯಯನ ಸಂಸ್ಥೆ, ಗದಗ, ೧೯೮೩

೫೬. ನಾಗಯ್ಯ ಜೆ.ಎಂ. ಮತ್ತು ಹಿರೇಮಠ ಕೆ.ಎಸ್.(ಸಂ), ಮಹಾಮರಣ ವೀರಮೌಲ್ಯ ಕುರಿತ ಎಂ.ಎಂ.ಕಲಬುರ್ಗಿ ಅವರ ಪ್ರಬಂಧಗಳ ಸಂಕಲನ, ಶ್ರೀ ಸಿದ್ಧಲಿಂಗೇಶ್ವರ ಬುಕ್ ಡಿಪೋ ಮತ್ತು ಪ್ರಕಾಶನ, ಕಲಬುರ್ಗಿ, ೨೦೧೧.

೫೭. ನಾಗರಾಜಯ್ಯ ಹಂ.ಪ.(ಸಂ), ರನ್ನ, ಅಜಿತತೀರ್ಥಂಕರ ಪುರಾಣ ತಿಲಕಂ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬

೫೮. ನಾರಾಯಣ ಶಾಸ್ತ್ರಿ ಎಚ್. ವ್ಹಿ.(ಸಂ), ನಾಗವರ್ಮ ವಿರಚಿತ ಕರ್ನಾಟಕ ಕಾದಂಬರಿ, ಗದ್ಯನುವಾದ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೧೧

೫೯. ನೀರ್ಪಾಜೆ ಭೀಮಭಟ್ಟ, ಕ.ಅ., ಕಲ್ಹಣನ ರಾಜತರಂಗಿಣಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೪

೬೦. ಪುಟ್ಟಪ್ಪ ಕೆ.ವಿ.(ಸಂ), ಪಂಪ, ಪಂಪಭಾರತಂ ಎಂಬ ವಿಕ್ರಮಾರ್ಜುನ ವಿಜಯಂ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೩

೬೧. ಪರಮಶಿವಯ್ಯ ಜೀ. ಶಂ.(ಸಂ), ಜಾನಪದ ಖಂಡಕಾವ್ಯಗಳು, ಶಾರದಾ ಮಂದಿರ, ಮೈಸೂರು ೧೯೬೮

೬೨. ಪಂಡಿತ ಕೆ. ರಾಠೋಡ(ಸಂ), ಬಂಜಾರ ಸಂಸ್ಕೃತಿ ಅಧ್ಯಯನ, ಶುಭಚಂದ್ರ ಪ್ರಕಾಶನ ಧಾರವಾಡ, ೨೦೧೬

೬೩. ಪಾಟೀಲ ಭೋಜರಾಜ, ನಾಗರಖಂಡ ೭೦: ಒಂದು ಅಧ್ಯಯನ, ಮಲೆನಾಡು ವೀರಶೈವ ಅಧ್ಯಯನ ಸಂಸ್ಥೆ, ಆನಂದಪುರಂ, ೧೯೯೫.

೬೪. ಬಸವರಾಜ ಕುರವ, ಒಂದು ಮೌಖಿಕ ಚರಿತ್ರೆ, ತಗಚಗೆರೆ ಮಾಸ್ತಮ್ಮ, ಜಾನಪದ ಜಗತ್ತು ಸಂಪುಟ–೨೦ ಅಕ್ಟೋಬರ–ಡಿಸೆಂಬರ್ ೨೦೦೯.

೬೫. ಬಸವರಾಜ ಕಲ್ಗುಡಿ, ಮಹಾಸತಿ ಆಚರಣೆ: ಒಂದು ಅಧ್ಯಯನ, ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೮೨

೬೬. ಮೈತ್ರಿ ಕೆ.ಎಂ.(ಸಂ), ಕುಮಾರರಾಮ ಮತ್ತು ಕೃಷ್ಣಗೊಲ್ಲರ ಮಹಾಕಾವ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ೧೯೯೭

೬೭. ಯೋಗೇಶ ಶರ್ಮಾ, ಗೀತಾ ನಾರಾಯಣನ್, 'ದಿ ರೀಟರ್ನ ಆಫ್ ಸತಿ' ಮಿರರ್, ಜನವರಿ ೧೦–೧೯೮೦

೭೮. ರವಿಂದ್ರನಾಥ ಕೆ., ಕನ್ನಡ ದಾಖಲು ಸಾಹಿತ್ಯ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦,

೬೯. ರಾಜೂರ ವೀರಣ್ಣ(ಸಂ), ಶಿವಶರಣೆಯರ ವಚನ, ಸಂಪುಟ–೫, ಬೆಂಗಳೂರು ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೧.

೭೦. ರಾಜೂರ ವೀರಣ್ಣ(ಸಂ), ಸಂಕೀರ್ಣ ವಚನ, ಸಂಪುಟ–೯, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೧.

೭೧. ರುಕ್ಮಿಣಿ ಎಂ.ಕೆ., ಜನಪದ ಕಥನ ಗೀತೆಗಳಲ್ಲಿ ಮಹಿಳೆ: ಸಾಂಸ್ಕೃತಿಕ ಅಧ್ಯಯನ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು – ೨೦೦೮

೭೨. ಲಿಂಗಯ್ಯ ಡಿ., ಮಾಸ್ತಿ ಪೂಜೆ: ಒಂದು ಜನಪದ ಸಂಪ್ರದಾಯ, ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ, ಸಂಪುಟ–೫, ೧೯೭೨.

೭೩. ಲಿಂಗಯ್ಯ ಡಿ.(ಸಂ), ಚಾರಿತ್ರಿಕ ಜನಪದ ಕಥನ ಕಾವ್ಯಗಳು, ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು, ೨೦೦೮

೭೪. ವೀರಣ್ಣ ಸಿ., ಕನ್ನಡ ಕಾವ್ಯ ಕಂಡ ಹೆಣ್ಣು, ಶಕ್ತಿ ಮುದ್ರಣ ಪ್ರಕಾಶನ, ಬೆಂಗಳೂರು, ೧೯೯೯

೭೫. ವೆಂಕಟಾಚಲಶಾಸ್ತ್ರಿ ಟಿ.ವಿ.(ಸಂ) ಪಂಪ: ವಿಕ್ರಮಾರ್ಜುನ ವಿಜಯಂ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬

೭೬. ಶರೀಫ್ಎ. ಆರ್, 'ದಿ ರಿಟರ್ನ ಆಫ್ ಸತಿ', ಮಿರರ್ ಜನವರಿ, ೧೯೮೧

೭೭. ಶ್ಯಾಮಶಾಸ್ತ್ರಿ ಆರ್.(ಸಂ) ಧರ್ಮಾಮೃತ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೩೪

೭೮. ಶಿವಮೂರ್ತಿಶಾಸ್ತ್ರಿ ಬಿ.(ಸಂ) ವಿರೇಶ ಚರಿತೆ, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, ೨೦೦೪

೭೯. ಶಿವಾನಂದ ಗುಬ್ಬಣ್ಣನವರ, ಶವಸಂಸ್ಕಾರ, ಆಚರಣೆ ಮತ್ತು ನಂಬಿಕೆ, ಸಾಧನೆ, ಬೆಂಗಳೂರು ವಿಶ್ವವಿದ್ಯಾಲಯ, ಸಂ.೩೦, ನಂ.೧-೪, ಜನವರಿ-ಡಿಸೆಂಬರ್, ೧೯೯೧

೮೦. ಶೆಟ್ಟರ್ ಷ., ಸಾವಿಗೆ ಆಹ್ವಾನ, ಸದಾನಂದ ಕನವಳ್ಳಿ(ಅನು), ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೪

೮೧. ಶೆಟ್ಟರ್ ಷ., ಸಾವನ್ನು ಅರಸಿ, ಓ.ಎಲ್.ನಾಗಭೂಷಣಸ್ವಾಮಿ(ಅನು), ಅಭಿನವ ಪ್ರಕಾಶನ ಬೆಂಗಳೂರು, ೨೦೧೫

೮೨. ಶೇರೆ ಬಿ.ಎಸ್., ಕರ್ನಾಟಕದಲ್ಲಿ ಸತಿಪದ್ಧತಿ, ವೀರಶೈವ ಅಧ್ಯಯನ, ಅಕಾಡೆಮಿ, ಬೆಳಗಾವಿ, ೧೯೯೧

೮೩. ಶೇಷಶಾಸ್ತ್ರಿ ಆರ್., ಕರ್ನಾಟಕದ ವೀರಗಲ್ಲುಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೨

೮೪. ಸಣ್ಣಯ್ಯ ಬಿ.ಎಸ್., ರಾಮೇಗೌಡ(ಸಂ), ಅಜೀತ ತಿರ್ಥಂಕರ ಪುರಾಣ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೪

೮೫. ಸಿದ್ಧರಾಮಯ್ಯ ಎಸ್.ಜಿ., ಸಂಧ್ಯಾರೆಡ್ಡಿ ಕೆ.ಆರ್(ಸಂ), ಸುವರ್ಣ ಜನಪದ ಕಾವ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬

೮೬. ಸಿಂಪಿ ಲಿಂಗಣ್ಣ, ಉತ್ತರ ಕರ್ನಾಟಕದ ಜನಪದ ಕಥೆಗಳು, ಸಾಹಿತ್ಯ ಅಕಾಡೆಮಿ, ನವದೆಹಲಿ, ೧೯೯೬

೮೭. ಸುಂಕಾಪೂರ ಎಂ. ಎಸ್.(ಸಂ), ಜೀವನ ಜೋಕಾಲಿ, ಭಾಗ–೮, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೬

೮೮. ಸುಂದರಂ ಅರ್ವಿಯಸ್(ಅನು), ತೆಲಗು ಜನಪದ ಮಹಾಕಾವ್ಯ, ಕಾಟಮರಾಜನ ಕಥೆ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೦.

೮೯. ಸುಂದರಾವ್ ಬಿ.ಎನ್., ಬೆಂಗಳೂರಿನ ಇತಿಹಾಸ, ವಸಂತ ಸಾಹಿತ್ಯ ಗ್ರಂಥಮಾಲೆ, ಬೆಂಗಳೂರು, ೧೯೮೫

೯೦. ಸುಬ್ರಾಯ್‌ಭಟ್ ಪಿ., ರನ್ನ, ಗದಾಯುದ್ಧ ದರ್ಪಣಂ, ವಾಖ್ಯಾನ, ಕಾಸರಗೋಡ, ಸರ್ಕಾರಿ ಕಲಾ ಶಾಲೆ, ೧೯೭೫

೯೧. ಸೈದಾಪುರ ವಾಯ್.ಎಫ್., ಉತ್ತರ ಕರ್ನಾಟಕದ ಜನಪದ ವೀರಗೀತೆಗಳು, ಸೃಜನಶೀಲ ಪ್ರಕಾಶನ, ಹಾಸನ, ೨೦೦೩

೯೨. ಹನೂರು ಕೃಷ್ಣಮೂರ್ತಿ, ಮಹಾಸತಿ ವೀರದಿಮ್ಮವ್ವ, ಕರ್ನಾಟಕ ಭಾರತಿ ಸಂಪುಟ, ೧೯೭೮

೯೩. ಹನೂರು ಕೃಷ್ಣಮೂರ್ತಿ, ಜನಪದ ವೀರಗೀತೆಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೮೨

೯೪. ಹನೂರ ಕೃಷ್ಣಮೂರ್ತಿ, ಐತಿಹಾಸಿಕ ಜನಪದ ಕಥನ ಗೀತೆಗಳು, ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬

೯೫. ಹನೂರ ಕೃಷ್ಣಮೂರ್ತಿ(ಸಂ), ಕತ್ತಾಲದಾರಿ ದೂರ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೨

೯೬. ಹಿರೇಮಠ ಬಿ.ಆರ್.(ಸಂ), ಸಕಲ ಸಂಕೀರ್ಣ ವಚನ ಸಂಪುಟ–೩, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೯೩

೯೭. ಹಿರೇಮಠ ಬಿ.ಆರ್.(ಸಂ), ಸಂಕೀರ್ಣ ವಚನ ಸಂಪುಟ ೨, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, ೨೦೦೧

೯೮. ಹಿರೇಮಠ ಬಿ.ಆರ್.(ಸಂ), ಸಂಕೀರ್ಣ ವಚನ ಸಂಪುಟ–೩, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, ೨೦೦೧

೯೯. ಹಿರೇಮಠ ಬಿ.ಆರ್.(ಸಂ) ಸಂಕೀರ್ಣ ವಚನ ಸಂಪುಟ–೪ ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, ೨೦೦೧

೨. ಛಾಯಾಚಿತ್ರಗಳು



ಮಹಾಸತಿ ಬೆಳತೂರ ಗ್ರಾಮ
ಹೆಗ್ಗಡದೇವನಕೋಟೆ, ಮೈಸೂರು.



ಕೇದಾರೇಶ್ವರ ದೇವಾಲಯ ಬಳ್ಳಿಗಾವಿ



ಮಹಾಸತಿ ಸೋಮೇಶ್ವರ ದೇವಾಲಯ
ಕನಕಗಿರಿ ಚಾಮರಾಜನಗರ



ಈಶ್ವರ ದೇವಾಲಯ ಶಿವದಹಳ್ಳಿ
ರಾಜಸ್ಥಾನ




ಮಹಾಸತಿ ಮತ್ತು ಯಕ್ಷಿ ದೇವಾಲಯ, ನಾಥಗೇರಿ, ಹೊನ್ನಾವರ



ವರ್ಧಂತಿ ಮಹೋತ್ಸವ, ನಾಥಗೇರಿ, ಹೊನ್ನಾವರ



ಹಡೀನಬಾಳ, ಹೊನ್ನಾವರ (ತಾ) ಉತ್ತರ ಕನ್ನಡ (ಜಿ)





ಯಕ್ಷಿ ಚೌಡೇಶ್ವರಿ ದೇವಾಲಯ, ಶ್ರೀ ಕ್ಷೇತ್ರ ನಿಲಗೋಡ,
ಹೊನ್ನವಾರ (ತಾ) ಕಾರವಾರ (ಜಿ)





ಮಹಾಸತಿ ದೇವಾಲಯ, ರಾಜಪೂರಿ, ಸಾತಾರ, ಕರಾಡ, ಮಾಹಾರಾಷ್ಟ್ರ





ನಾಗಯಕ್ಷಿ ಮಹಾಸತಿ ದೇವಾಲಯ, ಭಟ್ಕಳ, ಉತ್ತರ ಕನ್ನಡ



ಮಹಾಸತಿ ದೇವಾಲಯ ಕವಲಕ್ಕಿ, ಹೊನ್ನಾವರ (ತಾ)
ಉತ್ತರ ಕನ್ನಡ (ಜಿ)






ಯಕ್ಷಿ ಮಹಾಸತಿ ದೇವಾಲಯ, ಗೇರುಸೊಪ್ಪ



ಮಹಾಸತಿ





ಕನ್ನಡ ವಿಶ್ವವಿದ್ಯಾಲಯ

ಮಾತೆಂಬುದು ಜ್ಯೋತಿರ್ಲಿಂಗ

ಹಸ್ತಪ್ರತಿಶಾಸ್ತ್ರ ವಿಭಾಗ